UNIVERSAL
LIBRARY

OU_202097

UNIVERSAL
LIBRARY

॥ ಶ್ರೀ ಭಗವಾನ್ ಧನ್ವಂತರಯೇ ॥

ಶುದ್ಧಾಯುರ್ವೇದ ಪಾಠಕ್ರಮವುದಂತೆ ಸಂಗ್ರಹಿಸಿ
ರಚಿತವಾದ

ಶಾರೀರ ವಿಜ್ಞಾನ

ಧನತ್ರಯೋದಶಿ
೨೪—೧೦—೧೯೫೪

ಬೆಲೆ: ಆರು ರೂಪಾಯಿ

ಭಾಂಡಾರ್,
ಮುಬ್ಬಳ್ಳಿ.

— ಲೇಖಕರು —
ವೆ. ನಾ. ಜೋಶಿ
ಆಯುರ್ವೇದಾಚಾರ್ಯ ಸಿರಸಿ

— ಪ್ರಕಾಶಕ
ವೈದ್ಯಗುರು ದಾ. ಅ. ಹಲಸೀಕರ
ಮು. ಮು. ನಂ. ೧೮೫೦, ಆತ್ರೇಯಸದನ, ಹುಬ್ಬಳ್ಳಿ

— ಮುದ್ರಕರು —
ಎಸ್. ಎಸ್. ಕಾರಂತ
ಆಶಾ ಪ್ರೆಸ್
ರಾಧಾಕೃಷ್ಣಗಲ್ಲಿ, ಹುಬ್ಬಳ್ಳಿ

ನಿವೇದನಮ್

॥೧॥

ಮಹರ್ಷಿಭಿರ್ಲೋಕಹಿತೈಕತತ್ಪರೈಃ ॥
ಗೂಢಾತಿಸೂಕ್ಷ್ಮಂ ನರದೇಹತತ್ವಂ ॥
'ದಿವ್ಯೇನದೃಷ್ಟ್ಯಾ" ಪರಿಕರ್ತ್ಯನಿರ್ಜಿತಂ ॥
ಮಯಾತದುಕ್ತಂ ಪರಿಗೃಹ್ಯಭಾಷಯಾ ॥೧॥

॥೨॥

ಋಷಿವಾಣೀ ಪ್ರಭಾವಃ :-

ಸರಸಾಸತ್ಯಭೂಯಿಷ್ಠಾ ಸರ್ವಸಾರಸಮನ್ವಿತಾ ॥
ಸಂಕಲ್ಪೈನೈವಮನಸಾಸಿದ್ಧಾವಾಣೀತಪಸ್ವಿನಾಂ ॥೨॥

॥೩॥

ನಿರರ್ಗಲಗತಿರ್ವಾಚಾಂ ಸುಶ್ರುತಾದಿಮಹಾತ್ಮನಾಂ ॥
ಪ್ರತಿಭಾಭಾಸುರಾತತ್ರವಿವಿಧಾರ್ಥಪ್ರಕಾಶಿನೀ ॥
ವಾಗ್ಭಟೋಽಪಿಸುಧಾತುಲ್ಯಾಂ ಪೂರ್ವಸಿದ್ಧಾಂ ಸರಸ್ವತೀಂ ॥
ವಿಸ್ತಾರ್ಯತಂತ್ರಂಪ್ರೋವಾಚ ಮಂತ್ರವದ್ಯೋಜಯೇದಿತಿ॥೩॥

॥೪॥

ಸ್ವಕ್ರಮ :-

ಆಯುರ್ವೇದಮತಂತ್ಯಕ್ತ್ವಾನಕಿಂಚಿದಪಿವರ್ಣ್ಯತೇ ॥
ವಿಸ್ತಾರಿತಂ ಪಿಶೇಷೇಣಧ್ವನಿತಂ ಋಷಿಭಾಷಿತೈಃ ॥೪॥

॥೫॥

ಶಾರೀರೇಪ್ರಮಾಣಾಧಿಗಮಃ —

ಲಬ್ಧ್ವಾ ಸು. ವಾ. ಚಮ್. ಶಾರೀರೇಪ್ರಮಾಣಮುಧಿಗಮ್ಯತೇ ।
ಸುವಾಚವಂತೋಜಾನೀಯುಃ ಗುಣದೋಷವಿಪರ್ಯಯಂ॥೫॥

॥೬॥

ದೋಷದರ್ಶನೇಸುಜ್ಞೇಷು ಪ್ರಾರ್ಥನಾ ॥

ಸಂಪ್ರಾರ್ಥ್ಯಯೇವಿಬುಧವಿಶೇಷಬುದ್ಧೀನ್ ॥
ಸಂವಿಕ್ಷ್ಯದೋಷ ಸ್ಖಲಿತಂ ಮದೀಯಂ ॥
ಸಂದರ್ಶಯಂತುನಿತರಾಂ ನಹಿತತ್ರರೋಷಃ ॥
ಸಮ್ಮಾರ್ಜನಂ ಋಷಿವರ್ಯಃ ಪ್ರಥನೋಪದಿಷ್ಟಂ ॥೬॥

॥೧॥ ವಿಷಯನಿವೇದನಂ ಗದ್ಯಾತ್ಮಕಮೇವಾಸ್ತ್ವಿತಿವಿಚಾರ್ಯ ಮಾಣೇಸತಿ, ಅತರ್ಕಿತಾಗಮನಂ ಪದ್ಯಸ್ಯಾಸ್ಯ॥ ವಿಲಿಖ್ಯಾಪಶವಮ್, ಹಂತ: "ದಿವ್ಯೇನದೃಷ್ಟ್ಯಾ" ಇತಿಪದಂ ವ್ಯಾಕರಣವಿರುದ್ಧಂ ಸ್ಯಾತ್, ಕಂತುಪರಿವರ್ತನೇಽಸಮರ್ಥೋಽಪ್ಯಸಮ್; ಏತದಾಲೋಕ್ಯಅಚಿಂತಯಮ್॥ ಮಹರ್ಷಿಣಾವಲೌಕಿಕದೃಷ್ಟಿಂ ಧ್ವನಯಿತಮೇವಸ್ಯಾದಲೌಕಿಕಪದಾನೇಶನಮಿತಿ॥ "ಸುದಿವ್ಯದೃಷ್ಟ್ಯಾ"ಶೋಭನಯಾದಿವ್ಯದೃಷ್ಟ್ಯಾ (ಹಿತಕಾರಿಣ್ಯಾ) ಇತಿಪದಂ ನಿವೇಶನೇಽವಿರುದ್ಧಂ, ತಥಾಪಿಥ್ಥಂ ಕರ್ತುಂ ನಶಕ್ನೋಮಿ ॥ ಭಿನ್ನಋಚಿರ್ಹಿಲೋಕಃ, ಸಹೃದಯೈರ್ಭವದ್ಭಿಃ ಯಥಾಮತಿಯೇನೇಷ್ಟಂ ತೇನಯುಜ್ಯತಾಂ॥

॥೫॥ "ಸು. ವಾ. ಚಂ" ಇತಿಪದಂ ಸುಶ್ರುತವಾಗ್ಭಟಚರಕಾಣಾಮಾದ್ಯಕ್ಷರಗ್ರಹಣೇನಸಮುದಿತಂ॥ ಸುಶ್ರುತವಾಗ್ಭಟಚರಕಾಃ ಗೃಹ್ಯಂತೇ, ಆದ್ಯಕ್ಷರಶ್ಲೇಷವಿನ್ಯಾಸಪದೇನ; ಸಮ್ಯಕ್ವಿಚಾರಸರಣ್ಯಾನಿರ್ಣೀತಂ ವಾ ಸುಷ್ಠುವಾಕ್ಯಯಥಾಸ್ಯಾತ್ತಥಾಸುವಾಚಮ್॥

॥ ಇತಿಶಮ್ ॥

ವಾಚಕರಲ್ಲಿ ಅರಿಕೆ

ಆಯುರ್ವೇದ "**ಶಾರೀರವಿಜ್ಞಾನವು**" ವಿದ್ಯಾರ್ಥಿಗಳ ಅಭ್ಯಾಸಕ್ರಮಕ್ಕನು ಗುಣವಾಗಿ, ಶುದ್ಧಾಯುರ್ವೇದಮಂಡಲಿಯವರು ನಿರ್ಣಯಿಸಿದ ವಿಷಯಾನು ಸಾರವಾಗಿಯೇ ರಚಿಸಲ್ಪಟ್ಟಿರುತ್ತದೆ. ಸುಶ್ರುತ ಚರಕ ವಾಗ್ಭಟ ಗ್ರಂಥಗಳ ಅಭಿಪ್ರಾಯವನ್ನೇ ಮುಖ್ಯವಾಗಿಟ್ಟುಕೊಂಡು ತದಿತ್ರಾಂತರ ಮತಗಳನ್ನೂ ಅಲ್ಲಲ್ಲಿ ವಿವರಿಸಲಾಗಿದೆ. ವಿಷಯಗಳು ಸಂಶಯ ನಿರಾಸವಾಗುವಂತೆಯೂ ಸಂದಿಗ್ಧವಾಗದಂತೆಯೂ ವಿಶದವಾಗಿ ನಿರೂಪಿತವಾಗಿವೆ. ವಿಷಯ ಬಹಳೇ ಕ್ಲಿಷ್ಟವಾಗಿರುವದರಿಂದ ಎಷ್ಟೇ ಜಾಗ್ರತೆ ವಹಿಸಿದರೂ "**ಗಚ್ಛತಃ ಸ್ಖಲನಂ ಕ್ವಾಽಪಿ**" ಎನ್ನುವಂತೇ ಅಜ್ಞಾತ ದೋಷವುಂಟಾಗಿದ್ದರೆ ಸುಜ್ಞ ವೈದ್ಯರು ನಿವಾರಿಸಬೇಕಾಗಿ ಬೇಡಿಕೆ. ಬಹು ಪರಿಶ್ರಮದಿಂದ ಪ್ರಯತ್ನಪೂರ್ವಕವಾಗಿ ಭಾಷಾ ಶೈಲಿಯು ಸುಲಭವಾಗುವಂತೆ ವಿವರಿಸಲಾಗಿದೆ ಇದರ ಪ್ರಯೋಜನವನ್ನು ವಿದ್ಯಾರ್ಥಿಗಳೂ ವಾಚಕರೂ ಪಡೆದರೆ ಶ್ರಮವು ಸಫಲವಾದಂತಾಯಿತು. ಸರ್ವರಿಗೂ ವೇದ್ಯವಾಗಲೆಂದು ಸರಳತೆಯನ್ನನುಸರಿಸಿಯೇ ವಿವರಿಸಲಾಗಿದೆ.

ಗ್ರಂಥ ಪರಿಸಮಾಪ್ತಿ ವಿಷಯದಲ್ಲೆಂದರೆ:— ಆತ್ರೇಯಸದನ ವಿದ್ಯಾಲಯದ ಮುಖ್ಯಾಧ್ಯಾಪಕರೂ ನನ್ನ ವಿದ್ಯಾಭ್ಯಾಸದಿಂದಲೂ ಅನೇಕ ರೀತಿಯಿಂದ ಸಹಾಯ ನೂಡಿದ ಮತ್ತು ಮಾಡುತ್ತಲೂ ಇರುವ ಗುರುಗಳಾದ ಶ್ರೀಮಾನ್ ಹಲಸೀಕರರ ಗ್ರಂಥೋಚಿತ ಸೂಕ್ತ ಮುನ್ನುಡಿಯಿಂದ ಭೂಷಿತವಾಗಿ ಸರಿಪೂರ್ಣವಾಗಿರುತ್ತದೆ. ಇನ್ನೂ ನನ್ನ ಅನೇಕ ಮಿತ್ರರೂ ವಿದ್ಯಾಲಯ ಅಧ್ಯಾಪಕರಾದ ಶ್ರೀಮಾನ್ ಶ್ರೀಪಾದಭಟ್ಟ ಜಡೆ ವ ವಿದ್ಯಾರ್ಥಿಗಳೂ ತುಂಬಾ ಸಹಕರಿಸಿದ್ದಾರೆ.

ಆಶಾ ಪ್ರೆಸ್ಸಿನ ಶ್ರೀಮಾನ್ ಎಸ್. ಎಸ್. ಕಾರಂತರು ಅಂದವಾಗುವಂತೆ ಚನ್ನಾಗಿ ಸಶಾಲದಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಇವರೆಲ್ಲರ ಸಹಕಾರದಿಂದಾಗಿ ಈ ಕೃತಿಯು ಕಾರ್ಯತಃ ಬಂದು ಪ್ರಕಾಶಿತವಾಗಿರುತ್ತದೆ.

ಸಹಾಯಂಕರೆಲ್ಲರಿಗೂ ನನ್ನ ಕೃತಜ್ಞತಾರ್ಪಣೆಯು

ಆಯುರ್ವೇದಾಚಾರ್ಯ, **ವೆ. ನಾ. ಜೋಶಿ**

ಮುನ್ನುಡಿ

ಆಯುರ್ವೇದ "**ಶಾರೀರ ವಿಜ್ಞಾನ**" ವೆಂಬ ಈ ಗ್ರಂಥದಲ್ಲಿ ಸುಶ್ರುತಾಚಾರ್ಯರ ಶಾರೀರವು ವಿವರಿಸಲ್ಪಟ್ಟಿರುತ್ತದೆ. ಚರಕ, ವಾಗ್ಭಟ, ಶಾರ್ಙ್ಗಧರ, ಅನ್ಯ ತಂತ್ರಾಂತರ ಮತವೂಸಹ ಸಂದರ್ಭಾನುಸಾರ ಗ್ರಹೀತವಾಗಿವೆ.

ಸ್ಥೂಲಕ್ಕೆ ಕಾರಣವಾದ ಪ್ರಕೃತ್ಯಾದಿ ಸಿದ್ಧಾಂತಗಳಲ್ಲಿ ತಾರ್ಕಿಕ ನೈಯ್ಯಾಯಿಕರು ಸಾಂಖ್ಯರು ವೇದಾಂತಿಗಳು ಧಾರ್ಮಿಕದಾರ್ಶನಿಕರು, ಹೆಮ್ಮೆಯಿಂದ ಹೇಳುವ ತತ್ವ ಸಮನ್ವಯಗಳು ಇದರಲ್ಲಿ ಸಹೇತುಕವಾಗಿ ಸಮಾವೇಶವಾಗಿರುತ್ತವೆ ಭಾರತೀಯ ಸರ್ವದರ್ಶನ ಶಾಸ್ತ್ರಗಳಲ್ಲಿಯ ಶಾರೀರ ತತ್ವಗಳು ನಿರೂಪಿಸಲ್ಪಟ್ಟಿವೆ. ಚಿಕಿತ್ಸೆಗೆ ಯೋಗ್ಯವಾದ ದೇಹದ ಅಂಗವಿಭಾಗ ಕ್ರಿಯಾ ಸ್ವರೂಪಾದಿಗಳಂತೂ ಶಲ್ಯ ತಂತ್ರವಾಗಿರುವದರಿಂದ, ಬಹು ವಿಧ ವಿಸ್ತಾರ್ಯುತ ವಿವರಣೆ ಇರುತ್ತದೆಂದು ಹೇಳುವ ಕಾರಣವೇ ಇಲ್ಲ. ಹೀಗಿರುವದರಿಂದ ಶರೀರ ಜ್ಞಾನ ಪ್ರಯೋಜನವು ಸ್ಥೂಲ ಮತ್ತು ಸೂಕ್ಷ್ಮಾತ್ಮಕವಾಗಿರುವದೆಂದು ತಿಳಿದು ಬರುತ್ತದೆ. ಇದನ್ನೇ ಆಯುರ್ವೇದ ಮಹರ್ಷಿಗಳು ಹೀಗೆ ಹೇಳಿದ್ದಾರೆ "**ವಿಜ್ಞಾನಾರ್ಥಂ ಶರೀರಸ್ಯಭಿಷಜಾಂ ಯೋಗಿನಾಮಪಿ**".

ಇದರಿಂದ ರೋಗ ಚಿಕಿತ್ಸಕರಾದ ವೈದ್ಯರಿಗೂ ಯೋಗಿಗಳಿಗೂ ಸಮನ್ವಯವಾದ ಶಾರೀರತತ್ವಗಳು ಪ್ರೋಕ್ತವಾಗಿವೆಯೆಂದು ಹೇಳಿದಂತಾಯಿತು ಅದು ಸೂರ್ಯ ಚಂದ್ರರಷ್ಟೇ ಸತ್ಯಸಿದ್ಧಾಂತವಾದರೂ ಗಮನಿಸಲು ಬರುವಂತಿಲ್ಲ. ಅನುಮಾನಗ್ರಾಹ್ಯ ವಿಷಯವಾಗಿರುತ್ತದೆ. ಹೇಗಂದರೆ ಚೇತನೆಯು ಹೊರಟುಹೋದಮೇಲೆ ಕೇವಲ ಜಡವಾದ ಮಲಿನವಾಗಹತ್ತುವ ಸ್ಥೂಲವೊಂದೇ ಉಳಿಯುವದರಿಂದ, ದೇಹದಲ್ಲಿ ಮಹತ್ವವಾದ ಕಾರಣಶಕ್ತಿ ಅಥವಾ ಪ್ರೇರಕವು ಅದೆಯೆನ್ನುವದು ಅನುಮಾನಗೋಚರ ಸತ್ಯವಾಗಿದೆ. ಇದು ಜೈತನ್ಯ ಆತ್ಮನ ಅಸ್ತಿತ್ವದ ಬಗ್ಗೆ ನಿಶ್ಚಯ ಸಿದ್ಧಾಂತವಾದರೂ, ಅವನನ್ನು ಹೊಂದಲು ಅಥವಾ ತಿಳಿಯಲು ಮಾರ್ಗದರ್ಶನವು ಬೇರೆ ಇದ್ದೇ ಇದೆ ಅದೂ ಸಹ ಶಾಸ್ತ್ರಾಂಗತ್ವೇನ ಇಲ್ಲಿ ಮನೋಹರ ಸತ್ಯ ಸಿದ್ಧಾಂತವು ದರ್ಶಿತವಾಗಿದೆ.

ಆಯುರ್ವೇದದ ತಿಳಿಯಬೇಕಾದ ಮೂಲವು ಸಹೇತುಕ ಸಯುಕ್ತಿಕ ವಾಗಿ ಇಲ್ಲಿದೆ. ಅದು ವಿಶ್ವದಿಂದ ವ್ಯಕ್ತಿಗೂ, ಕಾರಣದಿಂದ ಕಾರ್ಯಕ್ಕೂ ಇಳಿದಿದೆ. ಅಥವಾ ಅಂತಃಕರಣದಿಂದಬಾಹ್ಯವಾದ ಸ್ಥೂಲಕ್ಕೂ, ಇಡಿಯಿಂದ ಬಿಡಿಗೂ ಹರಿದುಬಂದಿದೆ. ಇಲ್ಲವೇ ಪೂರ್ಣದಿಂದ ಅಂಶಕ್ಕೂ, ವ್ಯಾಪಾರದಿಂದ ರಚನೆಗೂ ಪಸರಿಸಿದೆ. ಈ ತತ್ವದಗುಂಟ ಹೋದಾಗಲೇ, ವ್ಯಕ್ತಿಯಿಂದ ವಿಶ್ವ ವನ್ನೂ ಕಾರ್ಯದಿಂದ ಕಾರಣವನ್ನೂ, ಬಾಹ್ಯದಿಂದ ಅಂತಃಕರಣವನ್ನೂ. ಒಡಿ ಯಿಂದ ಇಡಿಯನ್ನೂ,ರಚನೆಯಿಂದ ವ್ಯಾಪಾರವನ್ನೂ,ಅರಿಯಲಹುದಾಗಿದೆ. ಈ ಸಿದ್ಧಾಂತವು ಯಾವ ಶಾಸ್ತ್ರಕ್ಕೂ ವ್ಯವಹಾರಕ್ಕೂ ವಿರೋಧವನ್ನುಂಟು ಮಾಡುವದಿಲ್ಲವಷ್ಟೇ ಅಲ್ಲ ಎಲ್ಲವುಗಳ ಮೂಲವೂ ಏಳಿಗೆಯೂ ಇಲ್ಲೇ ಅಡಕ ವಾಗಿದೆ. ಇದೇ **"ಶಾರೀರ ವಿಜ್ಞಾನದ"** ಅಂತಿಮ ಅಥವಾ ಆರ್ಯರ ಪ್ರಯೋಜನವಾಗಿರುವದು. ಇದನ್ನೇ ಯೋಗಿಗಳು ಅರಿಯುವ ಶಾರೀರ ವೆಂದು ಸುಶ್ರುತಾಚಾರ್ಯರು ವಿವರಿಸಿದ್ದಾರೆ. ವೈದ್ಯರು ಮತ್ತು ಯೋಗಿ ಗಳು ಅನುಸರಿಸಲು ಯೋಗ್ಯವಾದ ಶಾರೀರ ವಿಷಯ ಹೇಗೆಂಬುವದು ಓದಿ ತಿಳಿದಾಗಲೇ ಅವರವರ ಇಷ್ಟದಂತೇ ಸ್ಪಷ್ಟವಾಗಿಯೇ ಇದೆ

ಸಕಲಶಾಸ್ತ್ರಗಳಲ್ಲಿ ಪಾರಂಗತೆಯನ್ನು ಹೊಂದಿ ವೈದ್ಯ (ಜ್ಞಾನಿ) ಯಾಗ ಬೇಕಾದರೆ, ೧೨ ವರ್ಷಗಳಾದರೂ ಬೇಕೆಂದು ಈ ಶಾರೀರ ವಿಷಯವನ್ನು ಓದಿ ಮನನಮಾಡಿದುದಾದರೆ ಇದರ ಪ್ರೌಢಿಮೆಯಿಂದ ತಿಳಿದುಬರುವಂತಿದೆ. ಸಾಂಪ್ರತ ಆಚಾರ್ಯರ ಪ್ರಸ್ಥಾನತ್ರಯೀ ವೇದೋಪ ವೇದಗಳ ತಿರುಳು ಈ ಶಾರೀರ ವಿಜ್ಞಾನದಲ್ಲಿದೆಯೆಂದು ಪುನಃ ಪುನಃ ಹೇಳಿದಿರಲಾರೆ. ತಾತ್ಪರ್ಯ ವೇನೆಂದರೆ ತ್ರಿಗುಣ ತ್ರಿದೋಷಗಳಂತೇ, ಕಾರಣ ಕಾರ್ಯ ವ್ಯಾಪಕವಾಗಿರುವ ಜ್ಞಾನವಾಗಬೇಕಾದರೆ ಇದರ ಅಧ್ಯಯನವು ಅವಶ್ಯವಾಗಿದೆ. ಮತ್ತು ಈ ಗ್ರಂಥವು ಅಧ್ಯಯನಕ್ಕೆ ಬೆಳಕನ್ನುಂಟುಮಾಡದಿರಲಾರದೆನ್ನುವದು ಸಹಜ ವಾಗಿದೆ.

ನನ್ನ ಶಿಷ್ಯ ಶ್ರೀ ವೆ. ನಾ. ಜೋಶಿ, ಆಯುರ್ವೇದಾಚಾರ್ಯ ಇವರು ನಿಷ್ಣಾತವಂತ ಶುದ್ಧಾಯುರ್ವೇದ ಸೇವಕರೂ ಸಂಸ್ಕೃತ ಭಾಷಾ ಪಂಡಿತರೂ ಶಾಸ್ತ್ರತತ್ವವೇತ್ತರೂ ಆಗಿರುವರು. ಇವರ ಸ್ವಾಧ್ಯಾಯ ಜ್ಞಾನಯಜ್ಞವಾದ

ಸಶಾಸ್ತ್ರೀಯತತ್ವಸಮನ್ವಯತೆಯನ್ನೊಳಗೊಂಡ "**ಶಾರೀರವಿಜ್ಞಾನ**"ವೆಂಬ ಕೃತಿಯು ಇದಾಗಿರುತ್ತದೆ. ಶಾರೀರ ವಿಜ್ಞಾನವು ಶಿಕ್ಷಣ ಕಾರ್ಯದಲ್ಲಿ ತುಂಬಾ ಸಹಾಯಕವಾಗಲೆಂದು ಹಾರೈಸಿ, ಇವರಿಂದ ಇತೋಽಧಿಕವಾಗಿ ಆಯುರ್ವೇದಪ್ರಸಾರಸೇವೆಮಾಡಿಸಲೆಂದು ಧನ್ವಂತರಿಯಲ್ಲಿ ಪ್ರಾರ್ಥಿಸುತ್ತೇವೆ.

ಸಾಂಪ್ರತಿಕ

ಕರ್ನಾಟಕದಲ್ಲಿ ಆಯುರ್ವೇದ ಆರ್ಷಗ್ರಂಥಗಳ ಮುದ್ರಣ ಈವರೆಗೂ ಆಗಿಲ್ಲ. ಸುಶ್ರುತ ವಾಗ್ಭಟ ಚರಕ ಗ್ರಂಥಗಳು ಸಶಾಸ್ತ್ರಸಟೀಕವಾಗಿ ಮುದ್ರಿಸಲ್ಪಟ್ಟಿಲ್ಲ ಈ ಗ್ರಂಥಗಳ ವಿಸ್ತಾರತೆಯಿಂದಾಗಿ ಗ್ರಂಥ ಪ್ರಕಟಣೆಯು ಬಹಳ ಖರ್ಚಿನದಾಗಿದೆ. ಸಂಕ್ಷಿಪ್ತವಾಗಿ ಮುದ್ರಿಸಿದರೆ ಅಧ್ಯಯನಕ್ಕೆ ಸುಗಮವಾಗಲಾರದು.

ಕರ್ನಾಟಕದಲ್ಲಿ ವೈದ್ಯರ ಸಂಖ್ಯೆಯೇನೂ ಕಡಿಮೆಯಿಲ್ಲ. ಕನ್ನಡ ಗ್ರಂಥಗಳನ್ನೇ ಅನುಸರಿಸುವ ಸಾಮಾನ್ಯತಃ ಎರಡುಸಾವಿರಕ್ಕೆ ವಿ.ಕ್ಕುವೈದ್ಯರಿದ್ದಾರೆ. ಇವರು ಚಿಕಿತ್ಸಕರಾಗಿಯೇ ಇದ್ದಾರೆ ಆರ್ಷ ಗ್ರಂಥಗಳ ಅಧ್ಯಯನ ಅಧ್ಯಾಪನದತ್ತ ಅವರು ಸಾಕಷ್ಟು ಲಕ್ಷ್ಯವಹಿಸಿಲ್ಲವೆಂದು ಸ್ಪಷ್ಟಪಡಿಸಲು ವ್ಯಸನವಾಗುತ್ತದೆ. ಗ್ರಂಥಗಳನ್ನಾಗಲೀ ಮಾಸಪತ್ರಿಕೆಗಳನ್ನಾಗಲಿ, ಓದಿ ತಿಳಿದು ಅಧ್ಯಯನ ಅಧ್ಯಾಪನ ಮಾಡುವ ಕಾರ್ಯವಂತೂ ನಿಂತೇ ಹೋಗಿದೆ. ಇದನ್ನುಕಂಡು ಕರ್ನಾಟಕ ಆಯುರ್ವೇದ ಮಂಡಲವು ವಾಗ್ಭಟ, ಮಾಧವನಿದಾನ, ಶಾರ್ಙ್ಗಧರಸಂಹಿತೆ, ವ್ಯವಹಾರಾಯುರ್ವೇದ, ಮದನಪಾಲ ನಿಘಂಟು, ರಸಚಂಡಾಂಶು, ಸ್ತ್ರೀಶಿಶುಸಂಗೋಪನ, ಅಮೃತಾನುಭವವೈದ್ಯಕ, ವೈದ್ಯಜೀವನ, ಮಾನಸಿಕಚಿಕಿತ್ಸೆ, ತರ್ಕಸಂಗ್ರಹ, ಸಾಂಖ್ಯಸಾರ, ಮೊದಲಾದವುಗಳನ್ನು ಪ್ರಕಟಿಸಿ ಜನತೆಗೂ ವೈದ್ಯರಿಗೂ ವಾಚನಾಭಿರುಚಿಯನ್ನುಂಟುಮಾಡಿತು. ಆಯುರ್ವೇದ ಪ್ರಚಾರವಾಗಬೇಕೆಂದು ಬಹುಮುಖವಾಗಿ ಕಾರ್ಯಸಾಗಿಸಿತು. ಆಯುರ್ವೇದಕ್ಕೆ ಸರಕಾರ ಮಾನ್ಯತೆಯಿದ್ದಿಲ್ಲವೆಂದು ಜನತೆಯಲ್ಲಿ ತಿರಸ್ಕಾರವುಂಟಾಗಿದ್ದಿತು.

ಪಾಶ್ಚಾತ್ಯಚಿಕಿತ್ಸಾನುಸರಣೆನಡೆದಿರಲು ಇದ್ದ ಬಿದ್ದ ಆಯುರ್ವೇದವನ್ನು ಪೂರ್ತಿ ನಾಶಮಾಡಲೋ ಎನ್ನುವಂತೇ ಮಿಶ್ರ ಶಿಕ್ಷಣವೊಂದು ಪ್ರಾದುರ್ಭವಿಸಿತು. ಇದರಿಂದಲೂ ಪರಂಪರಾಗತ ಆಯುರ್ವೇದ ಶಿಕ್ಷಣ ಪದ್ಧತಿಯು ಪೂರ್ಣ ನಿಂತುಹೋಯಿತು. ಅರ್ಥಾತ್ ಹೊಸ ಹೊಸ ಗ್ರಂಥಗಳ ನಿರ್ಮಿತಿಯಾಗದೇ ನಿಂತುಹೋದದ್ದರಲ್ಲಿ ಆಶ್ಚರ್ಯವೇನು ? ಇಂಥ ಸಮಯದಲ್ಲಿ ಧ್ಯೇಯಾನುಸಾರಿಯಾದ ಆಯುರ್ವೇದ ಮಂಡಲವು ತನ್ನ ಶಕ್ತಿಮೀರಿ ಶ್ರಮ ದ್ರವ್ಯ ಕಾಲ (ತನು ಮನ ಧನ) ಪರಿವೆಯಿಲ್ಲದೇ ಸಾವಿರಾರು ರೂಪಾಯಿಗಳನ್ನು ಸೂರೆಮಾಡಿ ಗ್ರಂಥ ಪ್ರಕಾಶನ ಮಾಡಿತು ಸಾಂಪ್ರತ ಸರಕಾರದವರು ಮನ್ನಣೇ ಕೊಟ್ಟ "ಶುದ್ಧಾಯುರ್ವೇದ ಶಿಕ್ಷಣವು" ಸಾಗಬೇಕಾದರೆ ಸಂಪೂರ್ಣ ಸುಶ್ರುತಾದಿ ಗ್ರಂಥಗಳ ಅವಶ್ಯಕತೆಯನ್ನು ಪುನಃ ಒತ್ತಿ ಹೇಳಬೇಕಾಗಿಲ್ಲ. ಅವುಗಳು ಸಂಪೂರ್ಣವಾಗಲೀ ಖಂಡಶಃ ಅಥವಾ ಅಂಶ ಮಾತ್ರದಲ್ಲಿಯೂ ಕನ್ನಡದಲ್ಲಿ ದೊರೆಯುವದಿಲ್ಲ.

ಆಯುರ್ವೇದದಲ್ಲಿ ಶಾರೀರಕ್ಕೆ ಪ್ರಾಶಸ್ತ್ಯವಿರುತ್ತದೆ ಶಿಕ್ಷಣ ಕ್ರಮದಲ್ಲಿ ಸುಶ್ರುತ ಚರಕ ವಾಗ್ಭಟಗಳ ಅಭ್ಯಾಸ ಕ್ರಮಗಳನ್ನೊಳಗೊಂಡು ನಿಯತಗೊಳಿಸಿದ್ದಾರೆ. ಶರೀರ ಶಾಸ್ತ್ರದ ಅಧ್ಯಾಪನ ಅಧ್ಯಯನವಾಗಬೇಕಾದರೆ ಇವುಗಳ ಪ್ರಾಮುಖ್ಯತೆಯಿರುತ್ತದೆ. ಅಥವಾ ಇವುಗಳಲ್ಲಿಯ ಶಾರೀರ ವಿಭಾಗಗಳನ್ನೊಳಗೊಂಡು ಸಂಗ್ರಹಿಸಿ ಅಧ್ಯಯನ ಮಾಡಿಸಬೇಕು. ಇವುಗಳಲ್ಲಿ ಎರಡನೇ ಮಾರ್ಗವೇ ಯೋಗ್ಯವು ಆರ್ಥಿಕ ದೃಷ್ಟಿಯಿಂದಲೂ ಕಡಿಮೆ ಖರ್ಚಿನದಾಗಿದೆ. ಇವೆಲ್ಲ ದೃಷ್ಟಿಯಿಂದ "ಶಾರೀರ ವಿಜ್ಞಾನವು" ಪ್ರಕಾಶಿತವಾಗಿರುತ್ತದೆ.

ಆಯುರ್ವೇದ ಪ್ರಸಾರಕಮಂಡಲಿಯ ಆತ್ರೇಯಸದನದಲ್ಲಿ ಅಧ್ಯಯನ ಅಧ್ಯಾಪನಗಳು ಅನೇಕ ವರ್ಷಗಳಿಂದ ನಡೆಯುತ್ತಾಬಂದಿರುತ್ತವೆ ಇಲ್ಲಿಯ ಹಳೇ ಹೊಸ ಪ್ರೌಢ ವಿದ್ಯಾರ್ಥಿಗಳು ಸ್ವಾಧ್ಯಾಯ ಯಜ್ಞವೆಂದು ಗ್ರಂಥಗಳನ್ನು ಅನುವಾದಿಸಿದವರೂ ಇದ್ದಾರೆ. ಇಲ್ಲಿ ಕಲಿತ, ಕಲಿಯುತ್ತಲಿರುವ, ಮುಂದೆ ಕಲಿಯಬಹುದಾದ ವಿದ್ಯಾರ್ಥಿಗಳಿಗೂ ಮತ್ತು ವಾಚಕರಿಗೂ ಈ "ಶಾರೀರ ವಿಜ್ಞಾನವು" ಮಾರ್ಗದರ್ಶಕವಾಗಲೆಂದು ಹಾರೈಕೆಯು

ಧನತ್ರಯೋದಶಿ
ತಾ. ೨೪-೧೦-೧೯೫೪

ವೈದ್ಯಗುರು ದಾ. ಅ. ಹಲಸೀಕರ
ಪ್ರಿನ್ಸಿಪಾಲ ಶುದ್ಧಾಯುರ್ವೇದ ವಿದ್ಯಾಲಯ, ಹುಬ್ಬಳ್ಳಿ

ವಿಷಯಗಳು

	ವಿಷಯ	ಪಾನಿನಿಂದ	ಪಾನಿನವರೆಗೆ
	ಶಾರೀರ ನಿರೂಪಣೆ	೧	೧೦
೧	ಪ್ರಕೃತಿವಿಜ್ಞಾನ	೧೧	೪೨
೨	ಸೂಕ್ಷ್ಮಪಂಚಭೂತ ವಿಜ್ಞಾನ	೪೨	೪೫
೩	ಸ್ಥೂಲ ಪಂಚಮಹಾಭೂತ ವಿಜ್ಞಾನ	೪೬	೫೦
೪	ಪಂಚಭೂತ ಪರಸ್ಪರ ಗುಣಯುಕ್ತ ಪರಮಾಣು	೫೦	೬೦
೫	ಪಂಚಭೂತಗಳಿಂದ ಶುಕ್ರಾರ್ತವೋತ್ಪತ್ತಿ	೬೦	೮೨
೬	ಶುದ್ಧಾಽಶುದ್ಧ ಶುಕ್ರಾರ್ತವ ಲಕ್ಷಣ	೮೨	೮೮
೭	ಗರ್ಭೋತ್ಪತ್ತಿ ವಿಜ್ಞಾನ	೮೮	೧೦೩
೮	ಗರ್ಭೋತ್ಪತ್ತಿ ವಿಷಯದಲ್ಲಿ ಮತಾಂತರ	೧೦೩	೧೦೮
೯	ಪ್ರಥಮಾದಿ ತಿಂಗಳಲ್ಲಿಯ ಗರ್ಭ ಶರೀರವಿಜ್ಞಾನ	೧೦೮	೧೧೨
೧೦	ಅಪರಾಉತ್ಪತ್ತಿ ಸ್ವರೂಪ	೧೧೨	೧೧೫
೧೧	ಗರ್ಭ ಪೋಷಣ ಕ್ರಮ	೧೧೫	೧೨೬
೧೨	ಗರ್ಭದಲ್ಲಿಯ ಪಿತೃಜಾದಿ ಲಕ್ಷಣ	೧೨೬	೧೩೯
೧೩	ಬಯಕೆಯ ಲಕ್ಷಣ	೧೩೯	೧೪೮
೧೪-೧೫)	ಬಯಕೆಯ ಮಹತ್ವವು	೧೪೮	೧೫೭
೧೫	ಪ್ರತಿ ತಿಂಗಳ ಗರ್ಭದ ಅಂಗೋಪಾಂಗ	೧೫೭	೧೭೬
೧೬	ಗರ್ಭಾಶಯದಲ್ಲಿ ಗರ್ಭ ಸ್ಥಿತಿಯು	೧೭೬	೨೦೦
೧೭	ಗರ್ಭೋದಕ ಉಲ್ಬಗಳ ಸ್ವರೂಪ	೨೦೦	೨೦೧
೧೮	ಶರೀರ ವರ್ಣನೆಯು	೨೦೨	೨೨೩
೧೯	ಸಪ್ತತ್ವಗ್ವಿ ಜ್ಞಾನವು	೨೨೩	೨೩೦

೨೦	ಕಲಾವಿಜ್ಞಾನವು	೨೩೧	೨೪೦
೨೧	ಧಾತ್ವಾದಿ ವಿಜ್ಞಾನವು	೨೪೦	೨೪೩
೨೨	ಮಲಗಳು	೨೪೩	೨೪೪
೨೩	ದೋಷಗಳು	೨೪೫	೨೪೬
೨೪	ಯಕೃತ್	೨೪೬	೨೪೭
೨೫	ಪ್ಲೀಹಾ	೨೪೭	,,
೨೬	ಕ್ಲೋಮಗಳು	೨೪೭	೨೪೮
೨೭	ವೃಕ್ಕಗಳು	೨೪೮	,,
೨೮	ವೃಷಣ	೨೪೮	೨೪೯
೨೯	ಲಿಂಗವು	೨೪೯	,,
೩೦	ಉಂಡುಕ	೨೫೦	೨೫೧
೩೧	ಹೃದಯವಿಜ್ಞಾನವು	೨೫೧	೨೬೬
೩೨	ಮನೋವಿಜ್ಞಾನವು	೨೬೬	೨೯೮
೩೩	ನಿದ್ರಾಸ್ಥಿತಿಯು	೨೯೮	೩೧೬
೩೪	ಆಶಯ ವಿವರಣೆ	೩೧೬	೩೨೦
೩೫	ಕರಳುಗಳು	೩೨೧	೩೨೨
೩೬	ದೇಹದ ಬಾಹ್ಯೆದ್ವಾರಗಳು	೩೨೨	೩೨೩
೩೭	ಕಂಡರಗಳು	೩೨೩	೩೨೫
೩೮	ಜಾಲಗಳು	೩೨೫	೩೨೬
೩೯	ಕುಂಚ (ಕೂರ್ಚಾ) ಗಳು	೩೨೬	೩೨೭
೪೦	ದೊಡ್ಡಮಾಂಸ ರಜ್ಜುಗಳು	೩೨೭	೩೨೮
೪೧	ಸೇವನೀಗಳು	೩೨೮	,,
೪೨	ಅಸ್ಥಿಸಂಘಾತಗಳು	೩೨೯	೩೩೦
೪೩	ಸೀಮಂತಗಳು	೩೩೦	೩೩೧
೪೪	ದಶಪ್ರಾಣಾಯತನವು	೩೩೨	೩೩೨
೪೫	ಕೋಷ್ಠಾಂಗಗಳು	೩೩೩	೩೩೩
೪೬	ಸಿರಾಧಮನೀ ಸೂಕ್ಷ್ಮವಿಭಾಗ	೩೩೩	೩೩೪

೪೭	ದೇಹದಲ್ಲಿಯ ರೋಮಗಳು	೩೩೪	೩೩೪
೪೮	ಶರೀರದಲ್ಲಿಯ ದ್ರವದ್ರವ್ಯ ಪ್ರಮಾಣ	೩೩೫	೩೩೭
೪೯	ದೇಹದ ಪಂಚಭೂತ ವಿಭಾಗ	೩೩೭	೩೪೦
೫೦	ಪ್ರಧಾನ ವಿವರಣೆಯು	೩೪೦	೩೪೨
೫೧	ಮಸ್ತಿಷ್ಕ ವಿವರಣೆ	೩೪೨	೩೪೫
೫೨	ಮಜ್ಜಾತಂತುಗಳು	೩೪೫	೩೪೮
೫೩	ಆಹಾರ ಕ್ರಮಣ ಪರಿಪಾಕಗಳು	೩೪೮	೩೭೨
೫೪	ಅಸ್ಥಿ ವಿವರಣೆಯು	೩೭೨	೩೮೧
೫೫	ಸಂಧಿ ವಿವರಣೆಯು	೩೮೧	೩೯೧
೫೬	ಸ್ನಾಯು ವಿವರಣೆಯು	೩೯೧	೩೯೬
೫೭	ಪೇಶೀ ವಿವರಣೆಯು	೩೯೭	೪೦೩
೫೮	ಮರ್ಮ ವಿವರಣೆಯು	೪೦೪	೪೬೦
೫೯	ಸಿರಾ ವಿವರಣೆಯು	೪೬೦	೪೮೦
೬೦	ಧಮನೀ ವಿವರಣೆಯು	೪೮೦	೪೯೩
೬೧	ಸ್ರೋತೋ ವಿವರಣೆಯು	೪೯೪	೫೦೨

ನಿರೂಪಣಂ

ಗ್ರಂಥ ಸಮಾಪ್ತಿ

ಅನುಕ್ರಮಣಿಕೆ

	ಪುಟ
ಶಾರೀರ ನಿರೂಪಣೆಯು	೧
ಶಾರೀರ ಪ್ರಯೋಜನ	೩
ಶಾರೀರ ವಿಷಯಃ	೪
ಪ್ರತ್ಯಕ್ಷ ಶಾರೀರ ಜ್ಞಾನಕ್ರಮ	೮

ಗ್ರಂಥಾರಂಭ

	ವಿಷಯ	ಪುಟ
೧	ಪ್ರಕೃತಿ ವಿಜ್ಞಾನ	೧೧
,,	ಅವ್ಯಕ್ತಾದಿ ಪ್ರಕೃತಿಗಳು	,,
,,	ಸತ್ವರಜಸ್ತಮೋ ಗುಣಗಳು	೧೩
,,	ಸುಶ್ರುತಾದಿ ಆಚಾರ್ಯರ ಮತಗಳು	,,
,,	ಸ್ವಭಾವಾದಿ ಪ್ರಕೃತಿಗಳು	೧೫
,,	ಅವ್ಯಕ್ತದಿಂದ ಮಹಾದಾದಿಕ್ರಮ	೨೦
,,	ಪ್ರಕೃತಿ ಮತ್ತು ವಿಕಾರಗಳು	೨೨
,,	ಪುರುಷ ವಿವರಣೆಯು	೨೫
,,	ಪ್ರಕೃತಿ ಪುರುಷರಲ್ಲಿಯ ಸಮವೈಷಮ್ಯ ಧರ್ಮ	೨೮
,,	ದೇಹ ನಾಶದ ನಂತರ ಜೀವದ ಸ್ಥಿತಿಯು	೩೦
,,	ದೇಹದಲ್ಲಿಯ ಪಾಂಚಭೌತಿಕ ವಿಭಾಗ	೩೨
,,	ಸಾತ್ವಿಕಾದಿಗುಣ ವಿವರಣೆಯು	೩೪
,,	ಸಾತ್ವಿಕಾದಿಗುಣಯುಕ್ತ ಪಂಚಭೂತಗಳು	೩೫

೧	ಕ್ಷೇತ್ರಜ್ಞನ ಗುಣಗಳು	೩೮
,,	ಮೋಕ್ಷ ವಿಷಯದಲ್ಲಿ ಮತಭೇದಗಳು	೪೦
೨	ಸೂಕ್ಷ್ಮಪಂಚಭೂತವಿಜ್ಞಾನ	೪೨
,,	ಅಣುವಿನ ಪರಿಮಾಣ	೪೩
,,	ಪರಮಾಣು ವಿಜ್ಞಾನ	೪೪
೩	ಸ್ಥೂಲಪಂಚಮಹಾಭೂತ ವಿಜ್ಞಾನ	೪೬
,,	ಪೃಥಿವೀ ೧	,,
,,	ಆಪಃ ೨	,,
,,	ತೇಜಃ ೩	೪೭
,,	ವಾಯು ೪	೪೮
,,	ಆಕಾಶ ೫	೪೯
೪	ಪಂಚಭೂತ ಪರಸ್ಪರ ಗುಣವುಳ್ಳ ಪರಮಾಣು	೫೦
,,	ದ್ರವ್ಯಗುಣಾದಿ ವಿವರಣೆಯು	೫೩
,,	ಪದಾರ್ಥ ದ್ರವ್ಯಾದಿ ಭೇದಗಳು	೫೯
೫	ಪಂಚಭೂತಗಳಿಂದ ಶುಕ್ರಾರ್ತವೋತ್ಪತ್ತಿ	೬೦
,,	ರಸಾದಿ ವಿವರಣೆಯು	೬೨
,,	ರಸದಿಂದ ಸ್ತ್ರೀಯರ ರಜೋತ್ಪತ್ತಿ	೬೬
,,	ರಕ್ತವು ಪಂಚಭೂತಾತ್ಮಕವಾದದ್ದು	೬೭
,,	ಶರೀರ ಧಾರಣೆಯಿಂದ ಧಾತುಗಳು	೬೮
,,	ರಸಪರಿವರ್ತನಕಾಲ ನಿರ್ಣಯ	೬೯
,,	ರಸಾದಿ ಧಾತುಗಳ ಕ್ರಿಯೆಯು	೭೧
,,	ಶುಕ್ರಾರ್ತವಗಳು ಪಾಂಚಭೌತಿಕವು	೭೪
,,	ಓಜಸ್ಸಿನ ವಿವರಣೆಯು	೭೬
೬	ಶುದ್ಧಾಶುದ್ಧ ಶುಕ್ರಾರ್ತವ ಲಕ್ಷಣ	೮೨
,,	ಶುದ್ಧ ಶುಕ್ರಲಕ್ಷಣ	,,
,,	ಶುದ್ಧಾರ್ತವ ಲಕ್ಷಣ	೮೩

೬	ಅಶುದ್ಧ ಶುಕ್ರ ದೋಷಗಳು	೮೪
,,	ಅಶುದ್ಧ ಶುಕ್ರ ಲಕ್ಷಣ	,,
,,	ಅಶುದ್ಧಾರ್ತವ ಲಕ್ಷಣ	೮೬
,,	ಸ್ತ್ರೀ ಪುರುಷರಲ್ಲಿಯ ನಪುಂಸಕತ್ವ	೮೭
,,	ಶುಕ್ರವುಳ್ಳ ವಿಪ್ರಕೃತಿ ಷಂಢರು	,,
೭	**ಗರ್ಭೋತ್ಪತ್ತಿ ವಿಜ್ಞಾನ**	೮೮
,,	ಯೋಗ್ಯ ಗರ್ಭೋತ್ಪತ್ತಿ ನಿಯಮ	೯೦
,,	ವೃದ್ಧರಲ್ಲಿ ಗರ್ಭೋತ್ಪತ್ತಿಯಾದರೆ ಹಾನಿ	೯೧
,,	ಅಲ್ಪ ವಯಸ್ಸಿನವರಲ್ಲಿ ಗರ್ಭೋತ್ಪತ್ತಿ ದೋಷ	,,
,,	ಋತುಮತಿ ಸ್ತ್ರೀಯಲ್ಲಿ ಗರ್ಭಾಧಾನ ದೋಷ	೯೨
,,	ಯೋಗ್ಯ ಗರ್ಭ ಸಂನ್ನಿವೇಶ	೯೩
,,	ಗರ್ಭಕ್ಕೆ ಹಿತವಲ್ಲದನಡತೆಯು	೯೪
,,	ಗರ್ಭಾರಂಭ ಕ್ರಮವು	೯೫
,,	ಶುಕ್ರಾರ್ತವಗಳ ಸಂಮ್ಮಿಲನ	೯೭
,,	ಗರ್ಭಾಶಯದಲ್ಲಿ ಗರ್ಭಪರಿಪಾಕ	,,
,,	ಗರ್ಭದಲ್ಲಿಯ ಧಾತ್ವಾದಿ ಪಾಕವು	೯೮
,,	ಗರ್ಭಾಭಿವೃದ್ಧಿ ಕ್ರಮ	೧೦೨
೮	**ಗರ್ಭೋತ್ಪತ್ತಿ ವಿಷಯದಲ್ಲಿ ಮತಾಂತರ**	೧೦೩
,,	ಗರ್ಭಿಣೀ ಲಕ್ಷಣ	೧೦೭
೯	**ಪೃಥವಾದಿ ತಿಂಗಳ ಗರ್ಭ ಶರೀರ ವಿಜ್ಞಾನ**	೧೦೮
,,	ಭೋಜದರ್ಶನ ಮತ	೧೦೯
೧೦	**ಅಪರಾ ಉತ್ಪತ್ತಿ ಸ್ವರೂಪ**	೧೧೨
,,	ಅಪರಾ ಪರಿಚಯ	೧೧೪
,,	ಅಪರಾ ವಿಷಯದಲ್ಲಿ ಭೋಜ ಮತ	,,
೧೧	**ಗರ್ಭ ಪೋಷಣ ಕ್ರಮ**	೧೧೫
,,	ಗರ್ಭ ಪೋಷಕ ಆಹಾರ ವಿಧಿ	೧೧೬

೧೧	ಪ್ರಥಮಾದಿ ಮಾಸಕ್ರಮದಿಂದ ಆಹಾರಾದಿಗಳು	೧೧೮
೧೨	**ಗರ್ಭದಲ್ಲಿಯ ಪಿತೃಜಾದಿ ಲಕ್ಷಣ**	೧೨೬
,,	ಪಿತೃಜ	,,
,,	ಮಾತೃಜ	೧೨೭
,,	ರಸದಿಂದ ಗರ್ಭದಲ್ಲುಂಟಾದವುಗಳು	,,
,,	ಆತ್ಮಾನುಬಂಧವಾಗಿ ಉಂಟಾದವು	,,
,,	ಸತ್ವದಿಂದುಂಟಾದವು	೧೨೮
,,	ಸಾತ್ಮ್ಯಜವಾದವುಗಳು	,,
,,	**ಸತ್ವಾದಿ ದೇಹ ಲಕ್ಷಣ**	,,
,,	ಬ್ರಹ್ಮಕಾಯ	೧೨೯
,,	ಮಾಹೇಂದ್ರಕಾಯ	,,
,,	ವರುಣಕಾಯ	,,
,,	ಕೌಬೇರಕಾಯ	೧೩೦
,,	ಗಂಧರ್ವಕಾಯ	,,
,,	ಯಮಸತ್ವಕಾಯ	,,
,,	ಋಷಿಸತ್ವ ದೇಹಲಕ್ಷಣ	,,
,,	**ರಾಜಸ ದೇಹ ಲಕ್ಷಣ**	೧೩೧
,,	ಆಸುರಕಾಯ	,,
,,	ಸರ್ಪಸತ್ವಕಾಯ	,,
,,	ಪಕ್ಷಿಕಾಯ	,,
,,	ರಾಕ್ಷಸಕಾಯ	,,
,,	ಪಿಶಾಚಕಾಯ	೧೩೨
,,	ಪ್ರೇತಸತ್ವಕಾಯ	,,
,,	**ತಾಮಸ ಪ್ರಕೃತಿ ದೇಹ**	,,
,,	ಪಾಶವ ಶರೀರ	,,
,,	ಮತ್ಸ್ಯಸತ್ವದೇಹ ಲಕ್ಷಣ	೧೩೩

೧೨	ವಾನಸ್ಪತ್ಯದೇಹ	೧೩೩
,,	**ವಾತಾದಿ ಪ್ರಕೃತಿ ದೇಹ ಲಕ್ಷಣ**	,,
,,	ವಾತಪ್ರಕೃತಿ ದೇಹಲಕ್ಷಣ	,,
,,	ಪಿತ್ತಪ್ರಕೃತಿ ಶರೀರ ಲಕ್ಷಣ	೧೩೫
,,	ಕಫಪ್ರಕೃತಿ ಲಕ್ಷಣ	೧೩೬
,,	ದ್ವಿದೋಷ ತ್ರಿದೋಷ ಪ್ರಕೃತಿ	೧೩೮
,,	ಭೂತ ಪ್ರಕೃತಿ ಲಕ್ಷಣ	,,
,,	ಪಾರ್ಥಿವ ಪ್ರಕೃತಿ	೧೩೯
,,	ಆಕಾಶ ತತ್ವ ಪ್ರಕೃತಿ	,,
೧೩	**ಬಯಕೆಯ ಲಕ್ಷಣ**	೧೩೯
,,	ಬಯಕೇ ಲಕ್ಷಣದಿಂದ ಪ್ರಯೋಜನ	೧೪೧
,,	ನಾಗೋದರ ಲಕ್ಷಣ	೧೪೨
,,	ಗರ್ಭದಂತೇ ಇರುವ ರಕ್ತ ಗುಲ್ಮ	೧೪೩
,,	ಬಹಳ ದಿನಕ್ಕೆ ಪ್ರಸೂತವಾಗುವ ಗರ್ಭ	೧೪೭
,,	ಉಪವಿಷ್ಟಕ ಗರ್ಭ	೧೪೮
೧೪	**ಬಯಕೆಯ ಮಹತ್ವ**	೧೪೮
,,	ಬಯಕೆಯಿಂದ ಗರ್ಭ ಲಕ್ಷಣ	೧೫೪
೧೫	**ಪ್ರತಿ ತಿಂಗಳಲ್ಲಿಯ ಗರ್ಭದ ಅಂಗೋಪಾಂಗ**	೧೫೭
,,	ಋತುಕಾಲ ನಿಯಮ	೧೫೯
,,	ಅದೃಷ್ಟಾವರ್ತಸ್ತ್ರೀ ಲಕ್ಷಣ	೧೬೫
,,	ಗರ್ಭಾಶಯ ಸಂಕೋಚವು	೧೬೬
,,	ಸ್ತ್ರೀಪುಂನಪುಂಸಕ ಗರ್ಭೋತ್ಪತ್ತಿ	,,

,,	ಪುರುಷ ಸ್ತ್ರೀ ನಪುಂಸಕ ಗರ್ಭ ಲಕ್ಷಣ	೧೬೭
,,	ಗರ್ಭದಲ್ಲಿ ವರ್ಣ ಸಂಭವ	೧೬೯
,,	ಸರ್ಪ ಮೊದಲಾದ ವಿಕೃತ ಗರ್ಭ	೧೭೨
,,	ಶರೀರ ಪರಮಾಣುಗಳು	೧೭೩
೧೬	**ಗರ್ಭಾಶಯದಲ್ಲಿ ಗರ್ಭ ಸ್ಥಿತಿ**	೧೭೬
,,	ಸುಶ್ರುತ ಮತದಂತೆ ಗರ್ಭ ಸ್ಥಿತಿ	೧೭೭
,,	ಗರ್ಭನಿರ್ಗಮನ (ಪ್ರಸೂತಿ)	,,
,,	ಗರ್ಭಾಶಯ ಸ್ಥಾನ	೧೮೦
,,	ಗರ್ಭಾಶಯದಲ್ಲಿ ಗರ್ಭ ಸ್ವರೂಪ	೧೮೧
,,	ಶರೀರಾವಯವ ರಚನೆ	೧೮೩
,,	ಆತ್ಮನ ಭಾವನಾಧಿಕ್ಯವುಳ್ಳ ಬುದ್ಧಿ ವಿಶೇಷ	೧೮೫
,,	ಪ್ರಸವಾವಸ್ಥೆಯಲ್ಲಿ ಗರ್ಭಬಂಧ ವಿಮೋಚನೆ	೧೮೭
,,	ಗರ್ಭಪತನ ಕಾರಣ	೧೮೮
,,	ಗರ್ಭಸ್ರಾವ ವಿಷಯದಲ್ಲಿ ಭೋಜಮತ	೧೮೯
,,	ಕಾಶ್ಯಪಸಂಹಿತಾ ಮತ	,,
,,	ಸ್ವಾಭಾವಿಕ ಪ್ರಸವಾರಂಭ ಲಕ್ಷಣ	೧೯೦
,,	ಮೂಢಗರ್ಭವು ತಡೆದುನಿಲ್ಲುವ ಸ್ಥಿತಿ	,,
,,	ಮೂಢಗರ್ಭ ಪ್ರಕಾರಗಳು	೧೯೨
,,	ಸಂಕೀಲ ಮೂಢಗರ್ಭ	೧೯೩
,,	ಪ್ರತಿಖುರ ಮೂಢಗರ್ಭ	,,
,,	ಬೀಜಕ ಮೂಢಗರ್ಭ	೧೯೪
,,	ಪರಿಘ ಮೂಢಗರ್ಭ	,,
,,	ಮೂಢಗರ್ಭದಲ್ಲಿ ವಿಶೇಷ	೧೯೫
,,	ಎಂಟು ವಿಧ ಮೂಢಗರ್ಭ ಗತಿ	೧೯೬
,,	ಮೂಢಗರ್ಭಗಳ ಸಾಧ್ಯಾಸಾಧ್ಯ ವಿಚಾರ	೧೯೭
,,	ಮೃತಗರ್ಭ ಲಕ್ಷಣ	೧೯೮

,,	ಗರ್ಭಿಣೀ ಮೃತಳಾಗಿ ಗರ್ಭ ಜೀವಂತವಿರುವ ಲಕ್ಷಣ	೧೯೯
೧೭	**ಗರ್ಭೋದಕ ಉಲ್ಬ ಸ್ವರೂಪ**	೨೦೦
,,	ಗರ್ಭೋದಕ	೨೦೧
೧೮	**ಶರೀರ ವರ್ಣನೆಯು**	೨೦೩
,,	ಅವಯವಗಳು	೨೦೪
,,	ಶರೀರವೆಂದರೇನು ?	೨೦೫
,,	ಶರೀರ ಸ್ವರೂಪ ವರ್ಣನೆ	೨೦೬
,,	ಅಸ್ಥಿಪಂಜರ ವರ್ಣನೆ	೨೦೭
,,	ಶರೀರದಲ್ಲಿಯ ಪದಾರ್ಥ	೨೦೮
,,	ಇಂದ್ರಿಯ ವಿಭಾಗ	೨೦೯
,,	ಶರೀರದಲ್ಲಿ ವಿಶೇಷ	೨೧೦
,,	ಶರೀರಾವಯವ ಸಂಖ್ಯಾ ವಿಭಾಗ	೨೧೩
,,	ಅಂಗಗಳು	೨೧೪
,,	ಉಪಾಂಗಗಳು	,,
,,	ಶರೀರವಿಭಾಗ ನಿರ್ದೇಶವು	೨೧೯
೧೯	**ಸಪ್ತತ್ವಗ್ಜ್ಞಾನವು**	೨೨೩
,,	ತ್ವಚಾವಿಷಯ ತಂತ್ರಾಂತರದಲ್ಲಿ	೨೨೪
,,	ಅವಭಾಸಿನೀ ತ್ವಚೆಯು	೨೨೬
,,	ಛಾಯಾವರ್ಣ ಪ್ರಭಾದಿಗಳು	,,
,,	ಲೋಹಿತಾ	೨೨೮
,,	ಶ್ವೇತಾ	,,
,,	ತಾಮ್ರಾ	೨೨೯
,,	ವೇದಿನೀ	,,

೧೯	ರೋಹಿಣೀ	೨೨೯
,,	ಮಾಂಸಧರಾ	,,
೨೦	**ಕಲಾ ವಿಜ್ಞಾನವು**	೨೩೧
,,	ಕಲಾ ಸ್ವರೂಪ	,,
,,	ಮಾಂಸಧರಾ ಕಲಾ	೨೩೩
,,	ರಕ್ತಧರಾ	೨೩೪
,,	ಮೇದೋಧರಾ	೨೩೫
,,	ಶ್ಲೇಷ್ಮಧರಾ	೨೩೬
,,	ಪುರೀಷಧರಾ	,,
,,	ಪಿತ್ತಧರಾ	೨೩೮
,,	ಶುಕ್ರಧರಾ	೨೩೯
೨೧	**ಧಾತ್ವಾದಿ ವಿಜ್ಞಾನ**	೨೪೦
,,	ಸಪ್ತಧಾತುಗಳು	೨೪೧
,,	ಉಪಧಾತುಗಳು	,,
೨೨	**ಮಲಗಳು**	೨೪೩
,,	ಸಪ್ತಧಾತುಗಳ ಮಲ	೨೪೪
೨೩	**ದೋಷಗಳು**	೨೪೫
,,	ಪುಪ್ಪುಸಗಳು	೨೪೬
೨೪	**ಯಕೃತ್**	,,
೨೫	**ಪ್ಲೀಹಾ**	೨೪೭
೨೬	**ಕ್ಲೋಮಗಳು**	,,

೨೭	ವೃಕ್ಕಗಳು	೨೪೯
೨೮	ವೃಷಣ	,,
೨೯	ಲಿಂಗವು	೨೪೯
೩೦	ಉಂಡುಕ	೨೫೦
೩೧	ಹೃದಯ ವಿಜ್ಞಾನ	೨೫೧
,,	ಹೃದಯ ಸ್ಥಾನ	೨೫೨
,,	ಹೃದಯವೆಂದರೆ ರಕ್ತಾಶಯವೋ ?	೨೫೭
,,	ಧಾರಿ ಓಜಸ್ಸು ಮನೋಹೃದಯಗಳ ಮಹತ್ವ	೨೬೫
೩೨	ಮನೋವಿಜ್ಞಾನ	೨೬೬
,,	ಮನಸ್ಸಿನ ಲಕ್ಷಣ	೨೬೭
,,	ಪಂಚೇಂದ್ರಿಯಗಳು	೨೬೮
,,	ಅತೀಂದ್ರಿಯ ಲಕ್ಷಣದಿಂದ ಮನೋ ವಿವರಣೆ	೨೬೯
,,	ಮನಸ್ಸಿನ ಗುಣವು	೨೭೨
,,	ಮನೋ ವಿಷಯಗಳು	,,
,,	ಮನಸ್ಸಿನ ಕರ್ಮ	೨೭೪
,,	ವಿಷಯ ಸ್ವೀಕಾರ ಕ್ರಮ	೨೭೬
,,	ಬಾಹ್ಯೇಂದ್ರಿಯಗಳು	೨೭೭
,,	ಕರ್ಮೇಂದ್ರಿಯಗಳು	,,
,,	ಜ್ಞಾನೇಂದ್ರಿಯಗಳು	೨೭೮
,,	ಪಂಚೇಂದ್ರಿಯ ದ್ರವ್ಯಗಳು	೨೮೦
,,	ಪಂಚೇಂದ್ರಿಯಾಶ್ರಯಗಳು	,,
,,	ಶ್ರೊತ್ರೇಂದ್ರಿಯ ವಿಶೇಷ ನಿರೂಪಣೆ	೨೮೧

,, ಪಂಚೇಂದ್ರಿಯ ವಿಷಯಗಳು ೨೮೩
,, ಇಂದ್ರಿಯಗಳ ಭೌತಿಕ ವಿಶೇಷ ,,
,, ಪಂಚೇಂದ್ರಿಯ ಬುದ್ಧಿಗಳು ೨೮೪
,, ಅಸಾಧಾರಣ ಕಾರಣಾದಿ ಲಕ್ಷಣ ೨೮೫
,, ಚಕ್ಷುರ್ಬುಧ್ಯಾದಿಗಳ ಸನ್ನಿಕರ್ಷ ೨೮೬
,, ಮನೋಬುದ್ಧಿಯ ವಿವರಣೆ ೨೮೮
,, ಇಂದ್ರಿಯ ಬುದ್ಧಿಗಳ ವಿವರಣೆ ೨೯೦
,, ಮನಸ್ಸಿನ ಸ್ಥಿತಿಯು ೨೯೩
,, ಜೀವದ ವಿಷಯದಲ್ಲಿ ವಿಶೇಷ ೨೯೪
,, ಆತ್ಮನ ಲಕ್ಷಣ ೨೯೬
,, ಇಂದ್ರಿಯಗಳಿಂದ ಜೀವಾತ್ಮನಿಗೆ ಜ್ಞಾನ ೨೯೭
,, ಆತ್ಮನಜ್ಞಾನ ಕರ್ಮಗಳು ೨೯೮

೩೩ ನಿದ್ರಾ ಸ್ಥಿತಿಯು ವರ್ಣನೆಯು ,,

,, ನಿದ್ರೆಯ ವಿಷಯದಲ್ಲಿ ವಿಶೇಷ ೩೦೦
,, ನಿದ್ರೆಯ ಪ್ರಭಾವ ೩೦೪
,, ಸ್ವಪ್ನದರ್ಶನ ೩೦೫
,, ನಿದ್ರಾನಾಶವಾದರೆ ಉಪಚಾರ ೩೦೯
,, ಅತಿ ನಿದ್ರೆಯ ನಿವಾರಣೋಪಾಯ ೩೧೦
,, ರಾತ್ರಿ ಜಾಗರಣೆಗೆ ಯೋಗ್ಯರು ೩೧೧
,, ಹಗಲು ನಿದ್ರೆಗೆ ಯೋಗ್ಯರು ,,
,, ತಂದ್ರಾ ಲಕ್ಷಣ ೩೧೨
,, ಜೃಂಭಾ ಲಕ್ಷಣ ೩೧೩
,, ಶೀನಿನ ಲಕ್ಷಣ ,,
,, ಕ್ಲಮ ಲಕ್ಷಣ ೩೧೪
,, ಉತ್ಕ್ಲೇಶ ಲಕ್ಷಣ ,,

,,	ಗ್ಲಾನಿಯ ಲಕ್ಷಣ	೩೧೫
,,	ಜಡತೆಯ ಲಕ್ಷಣ	,,
,,	ಮೂರ್ಚ್ಛಾದಿ ದೋಷ ಪ್ರಕೋಪ	೩೧೬
೩೪	**ಆಶಯಗಳೆ ವಿವರಣೆಯು**	೩೧೬
,,	ಆಶಯಗಳು	೩೧೭
,,	ಆಶಯ ಸ್ಥಾನಗಳು	,,
,,	ಸ್ತ್ರೀಯರ ಅಧಿಕಾಶಯ	೩೧೮
,,	ಶ್ಲೇಷ್ಮಾಶಯ	,,
,,	ಆಮಾಶಯ	,,
,,	ಪಿತ್ತಾಶಯ	,,
,,	ವಾತಾಶಯ	೩೧೯
,,	ಮಲಾಶಯ	,,
,,	ಮೂತ್ರಾಶಯ	,,
,,	ರಕ್ತಾಶಯ	,,
,,	ಗರ್ಭಾಶಯ	೩೨೦
,,	ಸ್ತನ್ಯಾಶಯ	,,
೩೫	**ಕರುಳುಗಳು**	೩೨೧
೩೬	**ದೇಹದಲ್ಲಿಯ ಬಾಹ್ಯದ್ವಾರಗಳು**	೩೨೨
೩೭	**ಕಂಡರಗಳು**	೩೨೩
೩೮	**ಜಾಲಗಳು**	೩೨೫
೩೯	**ಕೂರ್ಚಾಗಳು**	೩೨೬
೪೦	**ದೊಡ್ಡ ಮಾಂಸರಜ್ಜುಗಳು**	೩೨೭

೪೧	ಏಳು ಸೇವನೀಗಳು	೩೨೮
೪೨	ಅಸ್ಥಿ ಸಂಘಾತಗಳು	೩೨೯
೪೩	ಸೀಮಂತಗಳು	೩೩೦
,,	ಸೀಮಂತಗಳ ಗಣನೆ	೩೩೧
,,	ಅಷ್ಟಾದಶ ಸಂಘಾತಗಳು	,,
೪೪	ದಶ ಪ್ರಾಣಾಯತನಗಳು	೩೩೨
೪೫	ಕೋಷ್ಠಾಂಗಗಳು	೩೩೩
೪೬	ಸಿರಾ ಧಮನೀಗಳ ಸೂಕ್ಷ್ಮ ವಿಭಾಗ	,,
೪೭	ದೇಹದಲ್ಲಿಯ ರೋಮಗಳು	೩೩೪
೪೮	ಶರೀರದಲ್ಲಿಯ ದ್ರವದ್ರವ್ಯ ಪ್ರಮಾಣ	೩೩೫
೪೯	ದೇಹದಲ್ಲಿಯ ಪಂಚಭೂತ ವಿಭಾಗ	೩೩೭
,,	ಪಾರ್ಥಿವ ದ್ರವ್ಯಗಳು	,,
,,	ಜಲೀಯ ವಿಭಾಗಗಳು	೩೩೮
,,	ಆಗ್ನೇಯ ವಿಭಾಗ	,,
,,	ವಾಯವೀಯ ವಿಭಾಗ	೩೩೯
,,	ಆಕಾಶೀಯ ವಿಭಾಗ	,,
೫೦	ಪ್ರಧಾನ ವಿವರಣೆಯು	೩೪೦
೫೧	ಮುಸ್ತಿಷ್ಕ ವಿವರಣೆಯು	೩೪೨
,,	ಮುಸ್ತಿಷ್ಕ ಸ್ಥಾನ ಸಿರಸ್ಸು	೩೪೩

೫೧	ಮುಷ್ಟಿಪ್ರಯೋಗ ಕಾರ್ಯಗಳು	೩೪೪
೫೨	**ದೇಹದಲ್ಲಿಯ ಮುಜ್ಜಾತಂತುಗಳು**	೩೪೫
೫೩	**ಆಹಾರಕ್ರಮಣಪರಿಪಾಕಗಳು**	೩೪೮
.,	ಅನುಪಾನಗಳು	೩೫೦
,,	ಅನಿಯಮಿತಾಹಾರ ದೋಷಗಳು	೩೫೩
,,	ತ್ಯಾಜ್ಯಾಹಾರ	೩೫೪
,,	ಅನ್ನರಸದ ಕ್ರಮಣ	೩೬೦
,,	ಆಹಾರಪಾಕ ವಿಷಯದಲ್ಲಿ ವಿಶೇಷ	೩೬೧
,,	ಭೌತಿಕಾಗ್ನಿ ಭೇದಗಳು	೩೬೮
,,	ಧಾತ್ವಗ್ನಿಗಳು	೩೬೯
,,	ಪಾಚಕಾಗ್ನಿ ಪಾಕಕ್ಕೇ ಮುಖ್ಯ	,,
,,	ಗುದವು	೩೭೦
೫೪	**ಅಸ್ಥಿ ವಿವರಣೆ**	೩೭೨
,,	ಅಸ್ಥಿಸ್ವರೂಪ	೩೭೩
,,	ಅಸ್ಥಿ ಸಂಖ್ಯೆಯು	೩೭೫
,,	ಪ್ರತ್ಯೇಕ ವಿಭಾಗಶಃ ಗಣನೆಯು	೩೭೭
,,	ಶಾಖಾದಲ್ಲಿ ಅಸ್ಥಿಗಳು	,,
,,	ಶ್ರೋಣ್ಯಾದಿ ಅಸ್ಥಿಗಣನೆಯು	೩೭೮
,,	ಗ್ರೀವಾರಭ್ಯ ಮೇಲ್ಭಾಗದ ಅಸ್ಥಿಗಳು	೩೮೦
೫೫	**ಸಂಧಿ ವಿವರಣೆ**	೩೮೧
,,	ಅಸ್ಥಿಸಂಧಿ ಪ್ರಕಾರಗಳು	೩೮೨
,,	ಸಂಧಿಗಳಲ್ಲಿಯ ಭೇದಗಳು	೩೮೩

,, ಕೋರಾದಿಸಂಧಿ ಸ್ಥಾನಗಳು ೩೮೫
,, ಸಂಧಿಸಂಖ್ಯಾ ವಿವರಣೆ ೩೮೮
,, ಅಸ್ಥಿಸಂಧಿಗಳ ಪ್ರತ್ಯೇಕ ವಿವರಣೆ ೩೮೯
,, ಶಾಖಾಗಳಲ್ಲಿ ಸಂಧಿಗಳು ೩೯೦
,, ಕೋಷ್ಠದಲ್ಲಿಯ ಸಂಧಿಗಳು ,,
,, ಗ್ರೀವಾಸ್ಥಾನದಲ್ಲಿ ಅಸ್ಥಿ ಸಂಧಿಗಳು ,,

೫೬ ಸ್ನಾಯುಗಳ ವಿವರಣೆಯು ೩೯೧

,, ಸ್ನಾಯು ಬಂಧನ ದೃಷ್ಟಾಂತ ೩೯೩
,, ಸ್ನಾಯು ಮಹತ್ವವು ೩೯೪
,, ಶಾಖಾದಲ್ಲಿಯ ಸ್ನಾಯುಗಳು ೩೯೫
,, ಕೋಷ್ಠದಲ್ಲಿಯ ಸ್ನಾಯುಗಳು ೩೯೬
,, ಗ್ರೀವೋರ್ಧ್ವಸ್ನಾಯುಗಳು ,,

೫೭ ಪೇಶೀ ವಿವರಣೆಯು ೩೯೭

,, ಪೇಶೀ ಆಕೃತಿ ಸ್ವರೂಪಗಳು ,,
,, ಪೇಶೀಗಳ ಸ್ಥೂಲ ಸಂಖ್ಯಾ ೩೯೮
,, ಶಾಖಾಗಳಲ್ಲಿಯ ಪೇಶೀಗಳು ೩೯೯
,, ಕೋಷ್ಠಪ್ರದೇಶ ಪೇಶೀಗಳು ೪೦೦
,, ಕುತ್ತಿಗೆಯ ಮೇಲ್ಗಡೇ ಪೇಶೀಗಳು ೪೦೧

೫೮ ಮರ್ಮ ವಿವರಣೆಯು ೪೦೪

,, ವಿಶೇಷ ಸೂಚನೆ ೪೦೫
,, ಮರ್ಮಗಳಲ್ಲಿಯ ಭೇದಗಳು ೪೦೬
,, ಮಾಂಸಾದಿ ಮರ್ಮ ಸಂಖ್ಯೆಯು ,,
,, ದೇಹ ವಿಭಾಗದಲ್ಲಿಯ ಮರ್ಮಗಳು ೪೦೭

,,	ಸಕ್ಥಿ ಮರ್ಮಗಳು	೪೦೫
,,	ಹೊಟ್ಟೇ ಎದೇ ಪ್ರದೇಶ ಮರ್ಮಗಳು	೪೦೯
,,	ಬೆನ್ನಿನಲ್ಲಿಯ ಮರ್ಮಗಳು	೪೧೧
,,	ಬಾಹು ಮರ್ಮಗಳು	೪೧೨
,,	ಜತ್ರೂರ್ಧ್ವ ಮರ್ಮಗಳು	೪೧೩
,,	ಮಾಂಸ ಮರ್ಮಗಳು	೪೧೫
,,	ಸಿರಾ ಮರ್ಮಗಳು	,,
,,	ಸ್ನಾಯು ಮರ್ಮಗಳು	೪೧೬
,,	ಅಸ್ಥಿ ಮರ್ಮಗಳು	,,
,,	ಸಂಧಿ ಮರ್ಮಗಳು	೪೧೭
,,	ಸದ್ಯಃ ಪ್ರಾಣಹರ ಮರ್ಮ ವಿಭಾಗ	,,
,,	ಮರ್ಮಾದಿಗಳಲ್ಲಿ ಪ್ರಾಣಪರ ಕಾರಣವು	,,
,,	ಮರ್ಮ ವಿಷಯದಲ್ಲಿ ಮತಾಂತರ	೪೨೦
,,	ಸಿರಾದಿಗಳ ವ್ಯಾಪಕತ್ವ	೪೨೧
,,	ಸದ್ಯಃ ಪ್ರಾಣಹರ ಮರ್ಮಗಳು	೪೨೩
,,	ಕಾಲಾಂತರ ಪ್ರಾಣಹರ ಮರ್ಮಗಳು	೪೨೪
,,	ವಿಶಲ್ಯಘ್ನ ಮರ್ಮಗಳು	,,
,,	ವೈಕಲ್ಯಕರ ಮರ್ಮಗಳು	೪೨೫
,,	ರುಜಾಕರ ಮರ್ಮಗಳು	,,
,,	ಆಘಾತ ವಿಶೇಷಗಳು	೪೨೬
,,	ಅಂಗುಲ ಪರಿಮಾಣ ಮರ್ಮಗಳು	೪೩೦
,,	ಎರಡಂಗುಲಾವಧಿ ಮರ್ಮಗಳು	,,
,,	ಮೂರಂಗಲಾವಧಿ ಮರ್ಮಗಳು	,,
,,	ನಾಲ್ಕಂಗುಲ ಪ್ರಮಾಣ ಮರ್ಮಗಳು	೪೩೧
,,	ಅರ್ಧಾಂಗುಲ ಪ್ರಮಾಣ ಮರ್ಮಗಳು	,,
,,	ಮರ್ಮಪ್ರಮಾಣ ಪ್ರಯೋಜನ	೪೩೨

ಸಾಲ	ವಿವರಣೆ	ಪುಟ
"	ಮರ್ಮಾಘಾತ ಲಕ್ಷಣ	೪೩೭
"	ಮರ್ಮ ವಿಷಯದಲ್ಲಿ ವಿಶೇಷ	೪೪೦
"	**ಮರ್ಮಗಳ ವಿಸ್ತಾರ ವರ್ಣನೆ**	೪೪೨
"	ಸಕ್ಥಿ ಮರ್ಮಗಳು	೪೪೨
"	ಕ್ಷಿಪ್ರಮರ್ಮ	"
"	ತಲಹೃದಯಮರ್ಮ	"
"	ಕೂರ್ಚವರ್ಮ	೪೪೩
"	ಕೂರ್ಚಶಿರೋಮರ್ಮ	"
"	ಗುಲ್ಫಮರ್ಮ	"
"	ಇಂದ್ರಬಸ್ತಿ	೪೪೪
"	ಜಾನು ಮರ್ಮ	"
"	ಆಣೀಮರ್ಮ	"
"	ಉರ್ವೀಮರ್ಮ	೪೪೫
"	ಲೋಹಿತಾಕ್ಷಮರ್ಮ	"
"	ವಿಟಪಮರ್ಮ	೪೪೬
"	ಸಕ್ಥಿ ಬಾಹು ಮರ್ಮಗಳಲ್ಲಿಯ ವಿಶೇಷ	"
"	ಬಾಹು ಮರ್ಮಾಘಾತ ಪರಿಣಾಮ	"
"	**ಉದರ ಮತ್ತು ವಕ್ಷೋಮರ್ಮಗಳು**	೪೪೭
"	ಗುದಮರ್ಮ	"
"	ಬಸ್ತಿಮರ್ಮ	೪೪೮
"	ನಾಭಿಮರ್ಮ	"
"	ಹೃದಯಮರ್ಮ	೪೪೯
"	ಸ್ತನಮೂಲಮರ್ಮ	"

ಚಲ	ಸ್ತನರೋಹಿತ ಮರ್ಮ	೪೪೯
,,	ಅಪಲಾಪಮರ್ಮ	೪೫೦
,,	ಅಪಸ್ತಂಭ	,,
,,	ಪೃಷ್ಠಮರ್ಮ	೪೫೧
,,	ತಕಟೀಕರುಣ ಮರ್ಮಗಳು	,,
,,	ಕ ಕುಂದರಮರ್ಮ	,,
,,	ನಿತಂಬಮರ್ಮ	೪೫೨
,,	ಪಾರ್ಶ್ವಸಂಧಿಮರ್ಮ	,,
,,	ಬೃಹತೀಮರ್ಮ	೪೫೩
,,	ಅಂಸಫಲಕಮರ್ಮ	,,
,,	ಅಂಸಮರ್ಮ	೪೫೪
,,	ಜತ್ರೂರ್ಧ್ವಮರ್ಮಗಳು	,,
,,	ಧಮನೀ ಮರ್ಮಗಳು	,,
,,	ಮಾತೃಕಾಮರ್ಮಗಳು	೪೫೫
,,	ಕೃಕಾಟಿಕಾಮರ್ಮಗಳು	,,
,,	ವಿಧುರಮರ್ಮ	,,
	ಫಣೇಮರ್ಮ	೪೫೬
,,	ಅಪಾಂಗಮರ್ಮ	,,
,,	ಆವರ್ತಮರ್ಮ	,,
,,	ಶಂಖಮರ್ಮ	೪೫೭
,,	ಉತ್ಕ್ಷೇಪಮರ್ಮ	,,

"	ಸ್ಥಪನೀಮರ್ಮ	೪೫೮
"	ಸೀಮಂತಮರ್ಮ	"
"	ಶೃಂಗಾಟಕಮರ್ಮ	೪೫೯
"	ಅಧಿಪತಿಮರ್ಮ	"
೫೯	**ಸಿರಾ ವಿವರಣೆಯು**	೪೬೦
"	ಸಿರಾ ವಿಭಾಗ ವರ್ಣನೆಯು	೪೬೨
"	ಸಕ್ಥಿಗತ ಸಿರಗಳು	೪೬೪
"	ಕೋಷ್ಮದಲ್ಲಿಯ ಸಿರಗಳು	"
"	ಜತ್ರೂರ್ಧ್ವ ಸಿರಗಳು	೪೬೫
"	ವಿಶೇಷ	೪೬೬
"	ವಾತವಹಾಸಿರಗಳ ಕಾರ್ಯವು	"
"	ಪಿತ್ತವಹಸಿರಗಳ ಕಾರ್ಯವು	೪೬೭
"	ಕಫವಾಹೀಸಿರಗಳ ಕಾರ್ಯವು	೪೬೮
"	ರಕ್ತವಾಹೀ ಸಿರಗಳ ಕಾರ್ಯವು	"
"	ಸರ್ವವಹಾ ಸಿರಗಳು	೪೬೯
"	ವಾತವಹಾದಿ ಸಿರಗಳವರ್ಣವು	೪೭೦
"	**ಅವ್ಯಧ್ಯ ಸಿರಗಳು**	೪೭೧
"	ವಿಭಾಗಶಃ ಅವ್ಯಧ್ಯಸಿರಗಳು	೪೭೨
"	ಶಾಖಾಗತ ಅವ್ಯಧ್ಯ ಸಿರಗಳು	೪೭೩
"	ಶ್ರೋಣಿಯಲ್ಲಿಯ ಅವ್ಯಧ್ಯ ಸಿರಗಳು	"
"	ಪಾರ್ಶ್ವಗತ ಅವ್ಯಧ್ಯಗಳು	೪೭೪

„	ಪೃಷ್ಠದಲ್ಲಿಯ ಅವ್ಯಧ್ಯ ಸಿರಗಳು	೪೭೪
„	ಹೊಟ್ಟೀ ಪ್ರದೇಶದಲ್ಲಿ ಅವ್ಯಧ್ಯಗಳು	೪೭೫
„	ಎದೆಯ ಸ್ಥಾನದಲ್ಲಿಯ ಅವ್ಯಧ್ಯ ಸಿರಗಳು	„
„	ಜತ್ರೂರ್ಧ್ವ ಅವ್ಯಧ್ಯ ಸಿರಗಳು	೪೭೬
„	ಹೆನುಸ್ಥಾನದ ಅವ್ಯಧ್ಯ ಸಿರಗಳು	„
„	ನಾಲಿಗೇ ಸ್ಥಾನದಲ್ಲಿ ಅವ್ಯಧ್ಯ ಸಿರಗಳು	೪೭೭
„	ನಾಸಿಕಾಸ್ಥಾನದಲ್ಲಿಯ ಅವ್ಯಧ್ಯ ಸಿರಗಳು	„
„	ನೇತ್ರಗಳಲ್ಲಿಯ ಅವ್ಯಧ್ಯ ಸಿರಗಳು	„
„	ಕಿವಿಗಳಲ್ಲಿಯ ಅವ್ಯಧ್ಯ ಸಿರಗಳು	೪೭೮
„	ಹಣೇ ಸ್ಥಾನದಲ್ಲಿಯ ಅವ್ಯಧ್ಯ ಸಿರಗಳು	„
„	ಶಂಖಮರ್ಮಗಳಲ್ಲಿಯ ಅವ್ಯಧ್ಯ ಸಿರಗಳು	„
„	ತಲೆಯಲ್ಲಿಯ ಅವ್ಯಧ್ಯ ಸಿರಗಳು	೪೭೯
„	ಸಿರಗಳ ಉಗಮಸ್ಥಾನವು	„
„	ಅವ್ಯಧ್ಯ ಸಿರಾವ್ಯಧನದಿಂದಾಗುವ ಹಾನಿಯು	೪೮೦
೬೦	**ಧಮನೀ ವಿವರಣೆಯು**	„
„	ಧಮನೀ ಪ್ರಸರಣ	೪೮೨
„	ಊರ್ಧ್ವಗಧಮನೀ ವಿವರಣೆ	೪೮೩
„	ಅಧೋಗಾಮೀ ಧಮನಿಗಳು	೪೮೬
„	ತಿರ್ಯಗ್ಗತ ಧಮನಿಗಳು	೪೮೯
„	ಧಮನೀ ಮಹತ್ವವು	೪೯೧
„	ಅಭಿಪ್ರಾಯವು	೪೯೩

೬೧	ಸ್ರೋತೋ ವಿವರಣೆಯು	೪೯೪
,,	ಪ್ರಾಣವಾಹೀ ಸ್ರೋತಸ್ಸುಗಳು	೪೯೫
,,	ಅನ್ನವಾಹೀ ಸ್ರೋತಸ್ಸುಗಳು	೪೯೬
,,	ಉದಕವಾಹೀ ಸ್ರೋತಸ್ಸುಗಳು	,,
,,	ರಸವಾಹೀ ಸ್ರೋತಸ್ಸುಗಳು	೪೯೭
,,	ರಕ್ತವಾಹೀ ಸ್ರೋತಸ್ಸುಗಳು	,,
,,	ಮಾಂಸವಾಹೀ ಸ್ರೋತಸ್ಸುಗಳು	,,
,,	ಮೇದೋವಹ ಸ್ರೋತಸ್ಸುಗಳು	೪೯೮
,,	ಮೂತ್ರವಹ ಸ್ರೋತಸ್ಸುಗಳು	,,
,,	ಪುರೀಷವಹ ಸ್ರೋತಸ್ಸುಗಳು	೪೯೯
,,	ಶುಕ್ರವಾಹೀ ಸ್ರೋತಸ್ಸುಗಳು	,,
,,	ಆರ್ತವವಾಹೀ ಸ್ರೋತಸ್ಸುಗಳು	೫೦೦
,,	ಸೇವನೀಭೇದಲಕ್ಷಣ	,,
,,	ಸ್ರೋತೋವಿದ್ಧಕ್ರಮ	,,
,,	ಸ್ರೋತೋ ವಿಷಯದಲ್ಲಿ ವಿಶೇಷ	೫೦೧
	ಗ್ರಂಥ ಸಮಾಪ್ತಿ ನಿರೂಪಣಂ	೫೦೩

॥ ಭಗವಾನ್ ಧನ್ವಂತರಿಃ ॥

ಶಾರೀರ ವಿಜ್ಞಾನ

ಶಾರೀರ ನಿರೂಪಣೆಯು

ಶರೀರವಿಷಯಕವಾದ ಕಿಳವಳಕಗೆ "ಶಾರೀರವಿಜ್ಞಾನ" ವೆಂಬಹೆಸರು

॥ ಶರೀರೇಭವಾಃ (ಶಾರೀರಾಃ):– ಅನೇಕವ್ಯಾಧ್ಯಾದಯೂ ಭಾವವಿಶೇಷಾಃ ಅಥವಾ ಶರೀರೇವರ್ತಮಾನಾಃ ತತ್ತತ್ಪ ದಾರ್ಥಕ್ರಿಯಾ ಸ್ವರೂಪ ಪ್ರಯೋಜನಾದಯೊsಸಂಖ್ಯವಿ ಕಲ್ಪಾಃ ಏತೇಸರ್ವೇಶಾರೀರಾಃ ತಾನ್ ಅಧಿಕೃತ್ಯಕೃತೋsಯಂ ಗ್ರಂಥಃ "ಶಾರೀರಮ್"

ಮನುಷ್ಯನು ಈ ಜಗತ್ತಿನಲ್ಲಿ ಬಾಳಬೇಕಾದರೆ ಅವನಿಗೆ ಅನೇಕ ಸಾಧನಗಳ ಅವಶ್ಯಕತೆಯಿರುತ್ತದೆ. ಆದರೆ ಸಾವಿರಾರು ಸಾಧನ ಸೌಕರ್ಯಗಳಿದ್ದರೂ ಅವನ್ನು ಉಪಯೋಗಿಸಲು ಮುಖ್ಯ ಸಾಧನವೆಂದರೆ ಶರೀರವು. ಇದನ್ನೇ ಸುಶ್ರುತಾಚಾರ್ಯರು ಶಸ್ತ್ರ ಚಿಕಿತ್ಸೆಯಲ್ಲಿ ಹೀಗೆ ಹೇಳಿದ್ದಾರೆ.

"ಯಂತ್ರಶತಮೇಕೋತ್ತರಂ" ಅತ್ರಹಸ್ತಮೇವ ಪ್ರಧಾನತಮಂ॥ ಕಂಕಾರಣಂ? ಯಸ್ಮಾದ್ಧಸ್ತಾದೃತೆ ಯಂತ್ರಾಣಾಮು ಪ್ರವೃತ್ತಿರೇವ ॥

ನೂರಾಒಂದು ಯಂತ್ರಗಳಿವೆ, ಅವು ಶರೀರದಲ್ಲಿ ನಟ್ಟ ಬಾಣಾದಿ ಗಳನ್ನು ಕಿತ್ತು ತೆಗೆಯುವ ಸಾಧನಗಳು ಈ ಯಂತ್ರಗಳೆಲ್ಲವುಗಳಿಗೂ ಅತ್ಯಂತ ಮುಖ್ಯ ಸಾಧನವೆಂದರೆ ಹಸ್ತವು(ಕೈ). ಯಾಕಂದರೆ ಹಸ್ತದ ವಿನಾ ಇವು ಕೆಲಸ ಮಾಡಲಾರವು. ಚನ್ನಾಗಿ ಧರಿಸಿ ಯಥಾಯೋಗ್ಯ ಕೆಲಸವನ್ನು ಯಂತ್ರದಿಂದ, ಕೈಯ್ಯೇ ಮಾಡಿಸುವದು. ಆದ್ದರಿಂದ ಸಾಧನ ಭೂತ ಯಂತ್ರಗಳಿಗೆ ಪ್ರೇರಕವಾಗಿ, ಪ್ರಧಾನ ಸಾಧಕವು ಹಸ್ತವು. ಹೀಗೆಂದು ವಿವರಿಸಿದ್ದಾರೆ ದೇಹ ಪೋಷಣೆಗೆ ನಾವು ಎಷ್ಟೇ ಪದಾರ್ಥಗಳನ್ನು ಅನೇಕ ರೀತಿ ಸಂಸ್ಕಾರ ಮಾಡಿ ಉಪಯೋಗಿಸಿದರೂ, ಆ ಪದಾರ್ಥಗಳಿಂದ ಶರೀರ ರಕ್ಷಣೆಯಾಗಬೇಕಾದರೆ, ಶರೀರವು ಅನೇಕ ಕ್ರಿಯಾತ್ಮಕ ಅಂಗಗಳಿಂದ ಅವಿ ರತ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಇದರಿಂದ ಉಪಯೋಗಿಸಿದ ವಸ್ತುಗಳು ದೇಹ ರಕ್ಷಣೆಗೆ ಅರ್ಹವಾಗುತ್ತವೆ.

ಇಂಥ ಮುಖ್ಯ ಸಾಧನವಾದ ಶರೀರವು ಹೇಗೆ ಉತ್ಪನ್ನವಾಗುತ್ತದೆ? ಅದರಲ್ಲಿರುವ ದ್ರವ್ಯಗಳು ಯಾವವು? ಅವುಗಳು ಯಾವ ಕ್ರಿಯೆಗಳನ್ನುಂಟು ಮಾಡುತ್ತವೆ. ಶರೀರವು ಆರೋಗ್ಯದಿಂದಿರಬೇಕಾದರೆ ಅವುಗಳನ್ನು ಯಾವ ರೀತಿಯಲ್ಲಿಡಬೇಕು, ಸರಿಯಾದ ಸ್ಥಿತಿಯಲ್ಲಿರುವ ಆರೋಗ್ಯವುಳ್ಳ ದೇಹದ ಲಕ್ಷಣವೇನು? ಅದು ಯಾವ ಯಾವ ದೋಷ ಧಾತು ಮಲಾದಿ ವಿಕೃತಿ ಗಳಿಂದ, ಯಾವ ಯಾವ ಸ್ಥಾನಗಳಲ್ಲಿ ವೇದನೆಯುಳ್ಳದ್ದಾಗುತ್ತದೆ? ಯಾವ ಯಾವ ಸ್ಥಾನಗಳಲ್ಲಿ ಯಾವ ಯಾವ ರೋಗಗಳ ಆಶ್ರಯವು ಇರುತ್ತದೆ? ಅಂಥ ರೋಗಗಳ ಸಾಧ್ಯಾಸಾಧ್ಯ ಸ್ಥಿತಿ ದೇಹದಲ್ಲಿಯ ಯಾವ ಲಕ್ಷಣ ಸ್ಥಾನ ಕ್ರಿಯಾದಿಗಳಿಂದ ತಿಳಿಯಬೇಕು? ಇತ್ಯಾದಿ ಆ ಮೂಲಾಗ್ರ ವಿಚಾರಗಳು ಶರೀರ ಜ್ಞಾನವಿಲ್ಲದೆ ತಿಳಿಯಲಾರವು. ಆದ್ದರಿಂದ ಶರೀರ ರಕ್ಷಣೆಗೆ, ಅಲ್ಲಲ್ಲಿ ಉತ್ಪನ್ನವಾಗುವ ರೋಗ ಚಿಕಿತ್ಸೆಗೆ, ಶರೀರ ಜ್ಞಾನವು ಅತ್ಯವಶ್ಯವಿರುವದರಿಂದಲೂ, ಅದನ್ನೇ (ಶರೀರ) ಆಶ್ರಯಿಸಿ ಎಲ್ಲ ರೋಗ ಗಳುಂಟಾಗುವದರಿಂದಲೂ, ಆಯುರ್ವೇದಕಾರರು ಸಮಸ್ತ ರೋಗ ನಿದಾನ ವನ್ನು (ಲಕ್ಷಣ) ಹೇಳಿ, ರೋಗಗಳ ಆಶ್ರಯ, ಉತ್ಪತ್ತಿ ಸ್ಥಾನವಾದ ಶರೀರ ವನ್ನು (ಶರೀರ ವಿಷಯ) ವಿಶದವಾಗಿ ಹೇಳಿರುತ್ತಾರೆ. **ಅದಕ್ಕೆ "ಶಾರೀರ ವೆಂಬ ಹೆಸರು".**

ಶಾರೀರ ಪ್ರಯೋಜನ

ವೈದ್ಯರು ಶರೀರ ಜ್ಞಾನದಿಂದ ಆಲ್ಲಿ ಸಂಭವಿಸುವ ರೋಗಗಳ ಚಿಕಿತ್ಸೆಯನ್ನು ಮಾಡಲೂ, ಇದರಂತೆ ಯೋಗಿಗಳು ಈ ಸ್ಥೂಲ ದೇಹ ಜ್ಞಾನದಿಂದ ಸ್ಥೂಲಕ್ಕೆ ಮೂಲ ಕಾರಣವಾದ ಅವ್ಯಕ್ತ (ಆತ್ಮ) ಸ್ಥಿತಿ ಹೊಂದಲಿಕ್ಕೂ; ಈ ಶಾರೀರವು ರಚಿಸಲ್ಪಟ್ಟಿದೆಯೆಂದು ಸುಶ್ರುತಾಚಾರ್ಯರು ಹೇಳಿದ್ದಾರೆ.

ನಮಗೆ ಇಲ್ಲಿ ಚಿಕಿತ್ಸೆಯೇ ಪ್ರಾಧಾನ್ಯವಾಗಿರುವದರಿಂದ, ಚಿಕಿತ್ಸಾನು ಸಾರ ದೇಹವದಂಚಭೌತಿಕ ಸ್ಥಿತಿ ಸ್ವರೂಪಾದಿಗಳನ್ನು ಹೇಳಿರುತ್ತಾರೆ. ಅದಕ್ಕೆ ಹೊರತಾದ ವಿಚಾರವು ಚಿಕಿತ್ಸೆಯಲ್ಲಿ ಪ್ರಯೋಜನವಿಲ್ಲ. (ಸು। ಶಾ। ಅ ೧ ಶ್ಲೊ ೨೩) "**ಭೂತೇಭ್ಯೋಹಿ ಪರಂಯುಸ್ಮಾನ್ನಾಸ್ತಿ ಚಿಂತಾ ಚಿಕಿತ್ಸಿತೆ**" ಅಂದರೆ:- ಪಂಚಮಹಾ ಭೂತಾದಿಗಳ ಸಮುದಿತ ಸ್ವರೂಪವಾದ ದೇಹವು ಚಿಕಿತ್ಸಾ ಸ್ಥಾನವಾಗಿದೆ. ಯಾಕಂದರೆ ಅದರಲ್ಲಿಯೇ ರೋಗ ಸ್ಥಾನಗಳು, ಆರೋಗಗಳ ನಿವಾರಣೆಗಾಗಿ ಪಂಚಮಹಾ ಭೂತಗಳ (ಸ್ಥೂಲ) ಸ್ವರೂಪವುಳ್ಳ ಶರೀರಕ್ಕೆ ಚಿಕಿತ್ಸೆ ಮಾಡಬೇಕಾಗುವದು. ಆದ್ದರಿಂದ ಚಿಕಿತ್ಸಾ ವಿಷಯದಲ್ಲಿ ಭೂತಾದಿಗಳಿಂದ ಹೊರತಾದ ಅವ್ಯಕ್ತವೇ ಮೊದಲಾದವುಗಳ ಅವಶ್ಯಕತೆಯಿರುವದಿಲ್ಲ. ಚಿಕಿತ್ಸೆಯಿಂದ ದೇಹದ ವ್ಯಾಧಿ ರೂಪ ದುಃಖವನ್ನು ನಿವಾರಿಸಲು ಚಿಕಿತ್ಸೆಗೆ ಅನ-ಗುಣವಾದ ಶಾರೀರ ಜ್ಞಾನಗಳಲ್ಲಿ ಭೂತಾದಿಗಳ ಹೊರತಾದ ವಿಷಯವಿಚಾರವಿಲ್ಲೆಂಬರ್ಥವು. ಇನ್ನು ಯೋಗಾದಿಗಳಿಂದ ಆತ್ಮ ಜ್ಞಾನ ಹೊಂದಿ, ಜನ್ಮ ರೂಪ ದುಃಖವನ್ನು ನಿವಾರಿಸಿಕೊಳ್ಳಬೇಕೆನ್ನುವವರಿಗೆ, ಮೂಲಪ್ರಕೃತಿಯ, (ಅವ್ಯಕ್ತ) ಪರಮಾತ್ಮ ಜ್ಞಾನವು, ಅದನ್ನು ಹೊಂದಲಿಕ್ಕೆ ಅವಶ್ಯವಿರುವದರಿಂದ ಹೇಳಿರುವರು. "**ಪುರುಷಕೈವಲ್ಯಾರ್ಥಂ ಪ್ರವೃತ್ತಿಮುಪದಿಶಂತಿ**" (ಸುಶ್ರುತ॥ ಶಾ। ಅ ೧ ಸೂ ೮)ಪ್ರಕೃತ ವೈದ್ಯಕ ಚಿಕಿತ್ಸಾ ಶಾರೀರವನ್ನೇ ಮಾತ್ರ ರೋಗ ನಿವಾರಣೋದ್ದೇಶವಾಗಿ ಹೇಳುವೆವು ಆದ್ದರಿಂದ, ನಿವೃತ್ತಿಪರವಾದ ಯೋಗ ವಿಷಯ ಕ್ರಮಗಳ ಜ್ಞಾನ ಬೇಕಾದವರು, ಚರಕ ಶಾರೀರವನ್ನು ನೋಡ ಬೇಕು. (ಚರಕ। ಶಾ। ೧ ಶ್ಲೋ ೧೫೭ ರಿಂದ ಪೂರ್ಣ ಅಧ್ಯಾಯವು.)

ಶಾರೀರ ವಿಷಯ

ಶರೀರದ ಉತ್ಪತ್ತಿ ಹೇಗೆ? ದೇಹದಲ್ಲಿ ಯಾವ ಯಾವ ಪದಾರ್ಥಗಳಿರುತ್ತವೆ? ಅವುಗಳಿಂದ ಪ್ರಯೋಜನವೇನು? ಅವು ಯಾವ ಸ್ಥಿತಿಯಲ್ಲಿದ್ದರೆ ದೇಹವು ಸದೃಢವಾಗಿರುತ್ತದೆ? ಇತ್ಯಾದಿ ದೇಹದ ಉತ್ಪತ್ತಿ ಮೊದಲುಗೊಂಡು ಆಮೂಲಾಗ್ರ ಶರೀರ ವಿಚಯಗಳ ಜ್ಞಾನ ಮಾಡಿಕೊಡುವದೇ "ಶಾರೀರದ ವಿಷಯ" ವಾಗಿದೆ. ಸರ್ವವೇದನಾ ಸ್ವರೂಪವಾದ ರೋಗಗಳಿಗೆ ಈ ಶರೀರವೇ ಆಶ್ರಯ ಸ್ಥಾನವು. ರೋಗಗಳು ದೇಹದಲ್ಲಿಯೇ ಉತ್ಪನ್ನವಾಗಿ ತಮ್ಮ ಪ್ರಭಾವದಿಂದ ವ್ಯಾಪಿಸಿ ದೇಹವನ್ನೇ ನಾಶಪಡಿಸಲೂಬಹುದು ಅಥವಾ ದೇಹದಲ್ಲಿಯ ಸಾಮರ್ಥ್ಯವನ್ನು ಹರಣ ಮಾಡಿ, ಕರ್ತವ್ಯ ಶಕ್ತಿಯಿಲ್ಲದೆ ವೇದನೆಗಳನ್ನನುಭವಿಸುವ, ಪರಾಧೀನವಯನೀಯ ಸ್ಥಿತಿಯನ್ನುಂಟು ಮಾಡಲೂ ಬಹುದು ಮಾನವನ ಎಲ್ಲ ಪ್ರವೃತ್ತಿಗಳು ದೇಹ ರಕ್ಷಣೆಯ ಸಲುವಾಗಿಯೇ ಇರುತ್ತವೆ ಇಂಥ ಅತ್ಯಂತ ಪ್ರಧಾನವಾದ ದೇಹದ, ಜ್ಞಾನ ವಿಷಯವು, ಅವಶ್ಯವೂ ಪವಿತ್ರವಾದದ್ದೂ ಇರುತ್ತದೆ. ಇಷ್ಟೇ ಅಲ್ಲ ಯಾವಾಗಲೂ ಎಚ್ಚರದಿಂದ ಅಲಕ್ಷ್ಯ ಮಾಡದೆ, ಶರೀರಕ್ಕೆ ಬರುವ ರೋಗಾದಿ ಅಪಾಯಗಳಿಂದ ರಕ್ಷಣೆ ಮಾಡಿದ ದೇಹವು ಸದೃಢವೂ, ಶಕ್ತಿಯುಳ್ಳದ್ದೂ, ಬಹುಕಾಲ ಬಾಳುವಂಥದೂ, ಆಗುವದಲ್ಲದೆ ಬುದ್ಧಿ, ಶಾಂತಿ, ತುಷ್ಟಿ, ಧೈರ್ಯ ಉತ್ಸಾಹ ಯುಕ್ತವಾದದ್ದಾಗುತ್ತದೆ. ಈ ಪ್ರಕಾರ ದೇಹವುಳ್ಳವನು, ತನ್ನ ಕರ್ತವ್ಯಗಳನ್ನು ದಕ್ಷತೆಯಿಂದ ಮಾಡುವನಲ್ಲದೆ, ಕರ್ತವ್ಯ ಜೀವನವಾದ ಜಗತ್ತಿನಲ್ಲಿ ಬಾಳಲು ಅರ್ಹನಾಗುತ್ತಾನೆ. ಸೂಕ್ಷ್ಮವಾಗಿ ಅವಲೋಕಿಸಿದರೆ ಮಾನವನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ವ್ಯವಸ್ಥೆಗಳನ್ನು ನಿರ್ಮಿಸಿಕೊಂಡುರಾಷ್ಟ್ರವಾಳುವ ಹಿನ್ನೆಲೆಯು "ದೇಹ ರಕ್ಷಣೆ"ಯೇ ಇರುತ್ತದೆಂಬದನ್ನು ಬೇರೆ ಹೇಳಬೇಕಾಗಿಲ್ಲ ಆದ್ದರಿಂದ ಜಗತ್ತಿನಲ್ಲಿ ಸತತ ನಡೆಯುವ ಕರ್ತವ್ಯಗಳು ಈ ದೇಹಕ್ಕಾಗಿಯೇ ಇರುತ್ತವೆಂಬುದನ್ನು ವಾಗ್ಭಟಾಚಾರ್ಯರು ಹೀಗೆ ಹೇಳಿದ್ದಾರೆ.

ಧರ್ಮಾರ್ಥಕಾಮಮೋಕ್ಷಾಣಾಂ ಶರೀರಂ ಸಾಧನಂಯತಃ ॥
(ಶಾರ್ಙ್ಗಧರ। ಪ್ರ. ಖಂಡ। ೮ ಅ ಶ್ಲೋ ೫೩.)

ಆಯುಃಕಾಮಯಮಾನೇನ ಧರ್ಮಾರ್ಥ ಸುಖಸಾಧನಂ॥
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

ಧರ್ಮ, ಅರ್ಥ, (ಧನ) ಕಾಮ, (ಸ್ತ್ರೀ ಸುಖ) ಮೋಕ್ಷ (ನಿತ್ಯ ಸುಖ) ಇವುಗಳನ್ನು ಪಡೆಯಲಿಕ್ಕೆ ಮುಖ್ಯ ಸಾಧನವೆಂದರೆ, ನಿರೋಗಿಯಾದ ಶರೀರವು. ಮತ್ತು ಅದು ದೀರ್ಘಾಯುಷ್ಯವುಳ್ಳದ್ದು ಇರಬೇಕಾಗಿರುತ್ತದೆ. ಹೀಗೆ ಸುಖಸಾಧನೆಗೆ ಈ ಶರೀರವಾಗಬೇಕಾದರೆ ಆಯುರ್ವೇದದಲ್ಲಿಯ ಉಪದೇಶದಂತೆ ಆದರವುಳ್ಳವನಾಗಿ ನಡೆಯಬೇಕು. ಧರ್ಮವೇ ಮೊದಲಾದ ಇಷ್ಟಾರ್ಥ ಸುಖಗಳನ್ನು ಪಡೆಯಲಿಕ್ಕೆ ದೇಹವು ಹುಟ್ಟಿದೆಯೇ ವಿನಾ ದುಃಖ ಪಡೆಯಲಿಕ್ಕೆ ಅಲ್ಲ "ಸುಖಸಾಧನಂ" ಎಂಬ ಪದದಿಂದ ಇದು ಸ್ಪಷ್ಟವಾಗುತ್ತದೆ. ಹೀಗೆ ಸುಖಕ್ಕೆ ಸಾಧನವಾದ, ಸುಖವನ್ನೇ ಇಚ್ಛಿಸುವ, ದೇಹವನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳದಿದ್ದರೆ ದುಃಖವನ್ನು ಹೊಂದುತ್ತಾನೆ ಪರಮಾತ್ಮನು ಬುದ್ಧಿ ಅವಯವಾದಿಗಳನ್ನು ಕರ್ತವ್ಯಕ್ಕಾಗಿಯೇ, ಇತರ ಪ್ರಾಣಿಗಳಿಗಿಂತ ಮಾನವನಿಗೆ ಹೆಚ್ಚಿಗೆ ಕೊಟ್ಟಿರುತ್ತಾನೆ. ಅದರ ಸದುಪಯೋಗದಿಂದ ಸುಖ, ದುರುಪಯೋಗದಿಂದ ದುಃಖವೂ ಆಗುತ್ತದೆ. ಅರ್ಥಾತ್, ಮನುಷ್ಯನು ತನಗೆ ದಯಪಾಲಿಸಿದ ಶುದ್ಧ ಬುದ್ಧ್ಯಾಧಿಕಗಳಿಂದ ಇಹಪರ ಸುಖಗಳನ್ನು ಪಡೆಯಲು ಸಮರ್ಥನಾಗುತ್ತಾನೆ.

(॥ ಸುಶ್ರುತ॥ ಶಾರೀರ॥ ಅಧ್ಯಾಯ ೧ ಸೂತ್ರ ೧–೨ ॥)

ಅಥಾತಃ ಸರ್ವಭೂತಚಿಂತಾಶಾರೀರಂ ವ್ಯಾಖ್ಯಾಸ್ಯಾಮಃ॥
ಸೂ॥ ೧॥ ಹೇತುಲಕ್ಷಣಪ್ರತಿಪಾದಕಾತ್ ನಿದಾನಸ್ಥಾನಾತ್
ಅಧಿಗತವ್ಯಾಧಿಹೇತುಲಕ್ಷಣಸ್ಯ ವೈದ್ಯಸ್ಯ ಚಿಕಿತ್ಸಾಯಾ ಅವ
ಸರೋವರ್ತತೆ" ಚಿಕಿತ್ಸಾಚ ಅಧಿಷ್ಠಾನವಿಶೇಷಜ್ಞಾನಮಂತ
ರೇಣನಸಂಭವತೀತ್ಯಧಿಷ್ಠಾನಜ್ಞಾನಾಯ ಶಾರೀರಸ್ಥಾನಂ
ಆರಭ್ಯತೆ॥

ಅಂದರೆ:– ರೋಗದ ಕಾರಣ ಲಕ್ಷಣಗಳಿಂದ ಯುಕ್ತವಾದ ನಿದಾನ ಸ್ಥಾನಾಭ್ಯಾಸದಿಂದ ನಿದಾನ ಜ್ಞಾನವಾದ ಮೇಲೆ, ವ್ಯಾಧಿ ಲಕ್ಷಣದಿಂದ

ರೋಗ ತಿಳಿದ ವೈದ್ಯನು, ಚಿಕಿತ್ಸೆ (ರೋಗ ನಿವಾರಣೆ)ಯನ್ನು ಮಾಡಬೇಕಾಗುತ್ತದೆ. ಆ ಚಿಕಿತ್ಸೆಯಾದರೂ ದೇಹದಲ್ಲಿಯ ಸ್ಥಾನ ಸ್ಥಿತಿ ಇವುಗಳನ್ನು ತಿಳಿಯದೆ, ಯೋಜಿಸಲು ಬರಲಾರದು ಆದ್ದರಿಂದ ರೋಗಕ್ಕೆ ಸ್ಥಾನವಾದ ಶರೀರವನ್ನು ಕುರಿತು"ಶಾರೀರ ಸ್ಥಾನನೆಂಬ" ವಿಷಯವು ಹೇಳಲ್ಪಡುತ್ತದೆ

ಶರೀರಂ ಸರ್ವಥಾಸರ್ವಂ ಸರ್ವದಾವೇದಯೋಭಿಷಿಕ್ ॥
ಆಯುರ್ವೇದಂ ಸಕಾತ್ಸ್ನ್ರ್ಯೇನವೇದ ಲೋಕಸುಖಪ್ರದಂ ॥

(ಚರಕ-ಶಾ-ಅ. ೬ ಶ್ಲೋ. ೧೯)

ದೇಹದ ಸಂಪೂರ್ಣ ಸ್ಥಾನ ವಿಶೇಷಾದಿಗಳನ್ನು ಆಯಾಯ ರೋಗೋತ್ಪತ್ತಿ ಮತ್ತು ಆಶ್ರಯ ಸ್ಥಾನಗಳನ್ನು, ಯಾವನು ತಿಳಿಯುತ್ತಾನೆಯೋ ಮತ್ತು ಸದಾ ಆ ವಿಷಯಗಳಲ್ಲಿ ಅಭ್ಯಾಸ ಕರ್ಮ ನಿಪುಣನಿರುತ್ತಾನೆಯೋ, ಅಂಥ ವೈದ್ಯನು ಲೋಕಕ್ಕೆ ಸುಖನನ್ನು ಕೊಡತಕ್ಕ (ವ್ಯಾಧಿರೂಪ ದುಃಖ ನಿವಾರಣೆಯಿಂದ) ಆಯುರ್ವೇದವನ್ನು, ಪೂರ್ಣ ತಿಳಿಯುತ್ತಾನೆ. ಅಂದರೆ ಶರೀರ ಜ್ಞಾನವಿಲ್ಲವಾದರೆ ಆಯುರ್ವೇದ ಜ್ಞಾನವು ಪೂರ್ಣವಾಗುವದಿಲ್ಲವೆಂಬದೇ ಈ ಶ್ಲೋಕಾಭಿಪ್ರಾಯವು.

ಹೀಗೆ ಶರೀರವೆಂದರೇನು ಅದನ್ನು ಯಾಕೆ ತಿಳಿಯಬೇಕೆನ್ನುವದನ್ನು ಹೇಳಿದ ನಂತರ, ದೇಹದಲ್ಲಿರುವ ವಿವಿಧ ಸ್ಥಾನಾದಿಗಳ ಪ್ರತ್ಯಕ್ಷ ಜ್ಞಾನ ಮಾಡಿಕೊಳ್ಳುವ ಕ್ರಮವನ್ನು ಹೇಳುತ್ತಾರೆ. ಇಷ್ಟೇ ಅಲ್ಲದೆ ಶಾಸ್ತ್ರೀಯವಾಗಿ ತಾವು ಕಂಡು ಹಿಡಿದ ಶರೀರ ವಿಭಾಗಾದಿಗಳನ್ನೂ, ಉತ್ಪತ್ತಿ ಕ್ರಮಾದಿಗಳನ್ನೂ, ಅದರಲ್ಲಿಯ (ದೇಹದಲ್ಲಿ ಸಂಭವಿಸುವ ಕ್ರಿಯೆಗಳನ್ನು) ವಿಶೇಷ ವಿಚಾರಗಳನ್ನೂ, "ಶಾರೀರ" ವೆಂಬ ಹೆಸರಿನಿಂದ ಅಭ್ಯಾಸದ ಸಲುವಾಗಿ ರಚಿಸಿರುತ್ತಾರೆ. ಶಾಸ್ತ್ರಾಭ್ಯಾಸದಿಂದಲೂ, ಪ್ರತ್ಯಕ್ಷ (ಶವಚ್ಛೇದ) ದರ್ಶನದಿಂದಲೂ, ಶರೀರ ಜ್ಞಾನವಾಗುವದೇ ಯೋಗ್ಯ ಜ್ಞಾನವೆಂದು ಶಸ್ತ್ರ ಚಿಕಿತ್ಸಕರಾದ ಸುಶ್ರುತಾದಿ ಆಚಾರ್ಯರ ಮತವು. ಪ್ರತ್ಯಕ್ಷ ಶರೀರ ಜ್ಞಾನ ಮಾಡಿಕೊಳ್ಳುವ ಕ್ರಮವು. (ಸುಶ್ರುತ॥ ಶಾ॥ ಅ ೬ ಶ್ಲೋ ೪೬.)

ತ್ವಕ್‌ಪರ್ಯಂತಸ್ಯ ದೇಹಸ್ಯಯೋಽಯಮುಂಗವಿನಿಶ್ಚಯಃ॥
ಶಲ್ಯಜ್ಞಾನಾದೃತೇನೈಷವರ್ಣ್ಯತೇಽಂಗೇಷುಕೇಷುಚಿತ್ ॥೪೬॥

ದೇಹದ ಮೇಲೆ ಕಾಣುತ್ತಿರುವ ಚರ್ಮದ ಒಳಗಡೆಯಿರುವ (ಒಳ ಭಾಗದ) ಯಾವ ಯಾವ ಅಂಗಗಳ ಸ್ವರೂಪ ಜ್ಞಾನಾದಿ ಸ್ಥಿತಿಗಳ ನಿರ್ಣಯಗಳನ್ನು ಹೇಳುತ್ತೇವೆಯೋ, ಆಯಾ ಅಂಗಗಳಲ್ಲಿ ಶಸ್ತ್ರ ಛೇದನದಿಂದ ತಿಳಕೊಂಡ ಜ್ಞಾನದ ಹೊರತಾಗಿ ಹೇಳುವದಿಲ್ಲ. ಅರ್ಥಾತ್ ಬೇರೆ ಬೇರೆ ಅನೇಕ ಅಂಗ ಸ್ಥಾನಗಳುಳ್ಳ ಸಂಪೂರ್ಣ ದೇಹವನ್ನು ಚರ್ಮ ಪರ್ಯಂತರವಿರುವ ಒಳಭಾಗಗಳನ್ನು ಶಸ್ತ್ರಾದಿಗಳಿಂದ ಛೇದಿಸಿ ನೋಡಿಯೇ ಹೇಳಿದ್ದೇವಲ್ಲದೆ, ಶಸ್ತ್ರದಿಂದ ಜ್ಞಾನ ಮಾಡಿಕೊಳ್ಳದೆ ಪ್ರತ್ಯಕ್ಷ ಜ್ಞಾನವಿಲ್ಲದೆ, ಹೇಳಿದ್ದಲ್ಲವೆಂಬರ್ಥ.

ಇದೇ ಶ್ಲೋಕದಿಂದ ಇನ್ನೊಂದು ಅರ್ಥವಾಗುತ್ತದೆ. ಅದೇನಂದರೆ:— ಶಾಸ್ತ್ರದಲ್ಲಿಯ ವಿಷಯಗಳು (ಶಾರೀರ) ಪ್ರತ್ಯಕ್ಷ ಜ್ಞಾನಮಾಡಿಕೊಂಡು ಹೇಳಿರುವದಾದರೂ ಬರೇ ಶಾಸ್ತ್ರಾಭ್ಯಾಸಗಳಿಂದ ಪ್ರತ್ಯಕ್ಷ ಅಂಗ ನಿಶ್ಚಿಯವಾಗಲಾರದು. ಅದು ಶಸ್ತ್ರ ಜ್ಞಾನವ ವಿನಾ (ಶಸ್ತ್ರವಿಲ್ಲದೆ) ವರ್ಣಿಸುವ ವಿಷಯವಲ್ಲವೆಂದೂ, ಅತ್ಯಂತ ನಿಶ್ಚಯಾತ್ಮಕ ಜ್ಞಾನವು ಶಸ್ತ್ರದಿಂದಲೇ ಆಗಬೇಕಾಗುತ್ತದೆಂಬ ಅಭಿಪ್ರಾಯವು.

ತಸ್ಮಾನ್ನಿಃಸಂಶಯಂ ಜ್ಞಾನಂ ಹರ್ತ್ರಾಶಲ್ಯಸ್ಯವಾಂಛತಾ ॥
ಶೋಧಯಿತ್ವಾವೃತಂ ಸಮ್ಯಕ್ ದೃಷ್ಟ್ವೋಽಂಗವಿನಿಶ್ಚಯಃ
(ಸುಶ್ರುತ। ಶಾರೀರ। ಅ ೬-೪೭.)

ಪ್ರತ್ಯಕ್ಷತೋಹಿಯದ್ದೃಷ್ಟಂಶಾಸ್ತ್ರದ್ದೃಷ್ಟಂಚಯದ್ಭವೇತ್॥
ಸವಾಸತಸ್ತದುಭಯಂಭೂಯೋಜ್ಞಾನವಿವರ್ಧನಂ ॥೪೮॥

ನಿಶ್ಚಯವಾದ, ಸಂಶಯವಿಲ್ಲದ, ಪ್ರತ್ಯಕ್ಷಜ್ಞಾನವನ್ನು ಶರೀರ ವಿಷಯದಲ್ಲಿ ಮಾಡಿಕೊಳ್ಳಬೇಕಾದರೆ, ಶಾಸ್ತ್ರೋಕ್ತವಾದ (ಸುಶ್ರುತ) ಶಸ್ತ್ರಜ್ಞಾನ, ಶಸ್ತ್ರ ಕರ್ಮಗಳನ್ನು (ಛೇದನಾದಿಗಳನ್ನು)ಅಭ್ಯಾಸ ಮಾಡಿಕೊಂಡು, ನಂತರ

ಯೋಗ್ಯವಾದ (ಶಾಸ್ತ್ರಾಭ್ಯಾಸಕ್ಕೆ) ಮೃತ ದೇಹವನ್ನು, ಕ್ರಮವಾಗಿ ಶೋಧಿಸುತ್ತಾ (ಶಸ್ತ್ರಗಳಿಂದ) ಚನ್ನಾಗಿ ಶಾಸ್ತ್ರದಲ್ಲಿ ಹೇಳಿದ ಅಂಗಾಂಗಗಳನ್ನು, ಅದರ ಸ್ವರೂಪಗಳನ್ನು, ಛೇದಿಸಿ ತಿಳಿದುಕೊಳ್ಳಬೇಕು ಮತ್ತು ಶಾಸ್ತ್ರೋಕ್ತಿಯಂತೆ ಅವುಗಳ ಪರಿಚಯ (ನಿಶ್ಚಯ) ಮಾಡಿಕೊಳ್ಳಬೇಕು

ಪ್ರತ್ಯಕ್ಷವಾಗಿ (ಶಸ್ತ್ರ ಕರ್ಮದಿಂದ) ನೋಡುವದರಿಂದಲೂ, ಶಾಸ್ತ್ರದಲ್ಲಿಯ ಶಾರೀರ ವಿಷಯಕವಾದ ಅಭ್ಯಾಸದಿಂದ ಬರುವ ಜ್ಞಾನದಿಂದಲೂ, ಶಾಸ್ತ್ರಜ್ಞಾನ ಪ್ರತ್ಯಕ್ಷ ಜ್ಞಾನ ಇವರೆಡರಿಂದಲೂ ವಿಶೇಷವಾಗಿ "ಶಾರೀರ" ವಿಷಯದಲ್ಲಿ ಅಮೂಲಾಗ್ರ ತಿಳುವಳಿಕೆಯಾಗುತ್ತದಲ್ಲದೆ, ಇನ್ನೂ ಜ್ಞಾನ ಹೆಚ್ಚುತ್ತದೆ. ಪ್ರತ್ಯಕ್ಷ ಶರೀರ ಜ್ಞಾನ ಮಾಡಿಕೊಳ್ಳುವ ಶಸ್ತ್ರಾದಿ ಕ್ರಮಗಳು.

ಪ್ರತ್ಯಕ್ಷ ಶರೀರ ಜ್ಞಾನ ಕ್ರಮವು

"ತಸ್ಮಾತ್ ಸಮಸ್ತಗಾತ್ರಮವಿಷೋಪಹತಮದೀರ್ಘ ವ್ಯಾಧಿಪೀಡಿತಮವರ್ಷಶತಿಕಂನಿಃಸೃಷ್ಟಾಂತ್ರಪುರೀಷಂ ಪುರುಷಮಾವಹಂತ್ಯಾಮಾಪಗಾಯಾಂನಿಬದ್ಧಂ ಪಂಜರಸ್ಥಂ ಮುಂಜವಲ್ಮಲಕುಶಶಣಾದೀನಾಮನ್ಯತಮೇನಾವೇಷ್ಟಿತಾಂಗಮು ಪ್ರಕಾಶದೇಶೇಕೋಥಯೇತ್, ಸಮ್ಯಕ್ ಪ್ರಕುತಿಥಂಚೋಧ್ಧೃತ್ಯತತೊದೇಹಂ ಸಪ್ತರಾತ್ರಾದುಶೀರ ಬಾಲವೇಣುಬಲ್ವಜ ಕೂರ್ಚಾನಾಮನ್ಯತಮೇನಶನೈಃ ಶನೈರವಘರ್ಷಯನ್ ತ್ವಗಾದೀನ್ ಸರ್ವಾನೇವಬಾಹ್ಯಾಭ್ಯಂತರಾನ್ ಅಂಗಪ್ರತ್ಯಂಗವಿಶೇಷಾನ್ ಯಥೋಕ್ತಾನ್ ಲಕ್ಷ್ಯಯೇಚ್ಚಕ್ಷುಷಾ" (ಸುಶ್ರುತ ಶಾರೀರ ಅ. ೬ ಸೂತ್ರ ೪೯).

ವಿಷದಿಂದ ಮೃತವಾಗದ, ಎಲ್ಲಾ ಅವಯವಗಳು ಪರಿಪೂರ್ಣವಾಗಿರುವ, ದೀರ್ಘ ವ್ಯಾಧಿಯಿಲ್ಲದಿರುವ, ಬಹಳ ವಯಸ್ಸಾಗದ(ಅತಿಮುಪ್ಪಿನದಲ್ಲದಿರುವ)ಹೊರಗೆ ಬಿದ್ದಿರುವ ದೇಹದಲ್ಲಿಯ ಮಲವುಳ್ಳ, ಇಂಥಾ ಮೃತ ಶರೀರ

ವನ್ನು, ಪ್ರವಹಿಸುತ್ತಿರುವ ನದಿಯಲ್ಲಿ, ಮೆದಿ ಹುಲ್ಲು, ನಾರು, ದರ್ಭೆ, ಸಣಬು ಇವುಗಳಲ್ಲಿ ಯಾವದಾದರೊಂದರಿಂದ ತೆಳ್ಳಗೆ ಅವಯವಾದಿಗಳಿಗೆ ಸುತ್ತಿ ಕಟ್ಟಿ, ಒಂದು ಪಂಜರದಲ್ಲಿ ಭದ್ರವಾಗಿಟ್ಟು, ಬಯಲಿಲ್ಲದಲ್ಲಿ ನೀರಲ್ಲಿ ಮುಚ್ಚಿಡ ಬೇಕು. ಹೀಗೆ ನದಿಯ ನೀರಲ್ಲಿಟ್ಟ ದೇಹವು ಚನ್ನಾಗಿ ಕೊಳೆತ ನಂತರ ಏಳು ದಿನಗಳ ಮೇಲೆ ನೀರಿನಿಂದ ತೆಗೆದು, ಬಿದರಿನ ಶಿಬರು, ಮೆದೆ ಹುಲ್ಲಿನ ಬುಡ, (ಕುಂಚದಂತರುವ) ಇವುಗಳ ಕುಂಚ, ಅಥವಾ ಬಾಳದ ಬೇರಿನ ಕುಂಚ ಇವುಗಳಲ್ಲಿ ಯಾವದಾದರೊಂದರಿಂದ ಸಾವಕಾಶವಾಗಿ ತಿಕ್ಕಿ ತಿಕ್ಕಿ ಮೇಲಿನ ಚರ್ಮವನ್ನು ತೆಗೆಯುತ್ತಾ, ಅಲ್ಲಲ್ಲಿರುವ ಅಂಗ ಪ್ರತ್ಯಂಗಗಳನ್ನು ತಿಳಕೊಳ್ಳಬೇಕು. ಹೀಗೆ ಪ್ರತ್ಯಕ್ಷವಾಗಿ, ಅವಯವಗಳ ಭಾಗಗಳನ್ನೂ, ಒಳ ಭಾಗ ಸ್ಥಾನಾದಿಗಳನ್ನೂ ವಿಂಗಡಿಸುತ್ತಿರುವಾಗ ಶಾಸ್ತ್ರದಲ್ಲಿ ಹೇಳಿದ, ಅವು ಗಳ ಲಕ್ಷಣ ಸ್ಥಾನಾದಿಗಳನ್ನು ನೆನಪಿಗೆ ತಂದುಕೊಂಡು ಪ್ರತ್ಯಕ್ಷ ನೋಡಿ ದ್ದನ್ನೂ, ಶಾಸ್ತ್ರದಲ್ಲಿ ಹೇಳಿದ್ದನ್ನೂ, ಹೋಲಿಸಿ ನೋಡಬೇಕು. ಇದರಂತೆ ಒಳಭಾಗದಲ್ಲಿಯ ಕರಳು ಆಶಯ ಧಮನೀ ಇತ್ಯಾದಿಗಳೆಲ್ಲವನ್ನೂ ನೋಡಿದ ನಂತರ, ಅಸ್ಥಿಸಂಧಿ ಮೊದಲಾದ ಎಲಬಿನ ಭಾಗವನ್ನು ನೋಡಬೇಕು. ಈ ರೀತಿಯಿಂದ ಶರೀರದ ಪ್ರತ್ಯಕ್ಷ ಜ್ಞಾನ ಮಾಡಿಕೊಳ್ಳಬೇಕೆಂದು ಶಸ್ತ್ರ ಶಾಸ್ತ್ರಜ್ಞರಾದ ಸುಶ್ರುತಾದಿ ಮಹರ್ಷಿಗಳ ಅಭಿಪ್ರಾಯವು ಈ ಮೇಲಿನ ಸೂತ್ರದಿಂದ ಹೇಳಿದ್ದಾಗಿದೆ.

ಸ್ಥೂಲವಾದ ಸ್ಥಾನಾದಿಗಳು, ಆಶಯ, ಸ್ನಾಯು, ಧಮನೀ, ಸ್ರೋತಸ್ಸು, ಎಲ್ಲವುಗಳೂ ಗೋಚರವಾಗುತ್ತವೆ. ಆದರೆ ಅವುಗಳಲ್ಲಿಯ ಕ್ರಿಯಾ ಪ್ರಭಾವಾದಿಗಳು ಗೋಚರವಾಗುವದಿಲ್ಲ. ಯಾಕಂದರೆ ಮೃತ ದೇಹದಲ್ಲಿ ಚೈತನ್ಯವಿಲ್ಲದಿರುವದೇ ಅದಕ್ಕೆ ಕಾರಣವು. ಶಸ್ತ್ರಕ್ರಿಯೆಯಿಂದ ಆಶಯಾದಿಗಳನ್ನು ಛೇದಿಸಿದಾಗ ಆಯಾ ಆಶಯಗಳ ಪ್ರತ್ಯಕ್ಷ ಜ್ಞಾನವಾಗು ವದು. ಆದರೆ ಅದರ ಕ್ರಿಯೆ, ಅಲ್ಲಿರುವ ಪದಾರ್ಥಗಳ ಗತಿ, ಇವು ತಿಳಿಯ ಲಾರವು. ರಕ್ತಾಶಯವನ್ನು ಛೇದಿಸಿದಾಗ ಅದು ಹೇಗಿರುವದೆಂದು ಗೊತ್ತಾ ಗುತ್ತದೆ. ಮೃತ ಶರೀರದಲ್ಲಿ ಕ್ರಿಯೆ ನಡೆಯುವದಿಲ್ಲವಾದ್ದರಿಂದ ರಕ್ತ ಸಂಚಾರ ಕ್ರಮವು ಹೇಗೆ ಸಾಗುತ್ತದೆ ಎಂಬದು ಗೊತ್ತಾಗುವದಿಲ್ಲ. ಇವೆಲ್ಲ

ಗಳನ್ನು ಅನುಮಾನದಿಂದ ತಿಳಿದುಕೊಳ್ಳಬೇಕು. ಇದರಂತೆ ದೇಹದಲ್ಲಿರುವ ೀತನಾಯುಕ್ತ ಆತ್ಮವು (ಕ್ಷೇತ್ರಜ್ಞನು) ದೃಷ್ಟಿಗೋಚರವಲ್ಲ. ಇದಕ್ಕೆ ದರ್ಶನವು:—

ನಶಕ್ಯಃ ಚಕ್ಷುಷಾದ್ರಷ್ಟುಂದೇಹೇಸೂಕ್ಷ್ಮ ತನೋವಿಭುಃ |
ದೃಶ್ಯತೇಜ್ಞಾನಚಕ್ಷುರ್ಭಿಃ ತಪಶ್ಚಕ್ಷುರ್ಭಿರೇವಚ ॥ ಸುಶ್ರುತ ೨. ಅ- ೬ ಶ್ಲೋಕ ೫೦ ॥

ಆಯುರ್ವೇದ ಶಾರೀರವು ಪ್ರತ್ಯಕ್ಷ ಜ್ಞಾನದಿಂದ ಬರೆದದ್ದಲ್ಲವೆಂಬುದು ಸ್ತ್ರಕ್ರಿಯಾ ಪದ್ಧತಿಯು ಪ್ರಚರಿತವಿರದ ಈಗಿನ ಆಯುರ್ವೇದಾಭ್ಯಾಸದಲೂ, ಶಸ್ತ್ರ ಕ್ರಿಯಾರಹಿತ ಪದ್ಧತಿಯಿಂದಲೂ, ಜನರಿಗೆ ತಪ್ಪು ತಿಳಿವಳಿಕೆಯಾಗಿದೆ. ಶರೀರ ಜ್ಞಾನವಾಗುವ ಕ್ರಮವನ್ನು ಸುಶ್ರುತ ವಾಕ್ಯವನ್ನೇ ಆಧಾರವಾಗಿಟ್ಟು ವಿವರಿಸಿರುತ್ತೇವೆ. ಇದರಿಂದ ಪ್ರತ್ಯಕ್ಷ ಜ್ಞಾನದಿಂದಲೇ ಹೇಳಿರುವರೆಂದು ವಿವರಿಸುವ ಅಗತ್ಯವಿಲ್ಲ. ಇದಕ್ಕಾಗಿಯೇ, ಶಾಸ್ತ್ರಜ್ಞಾನವೂ ಪ್ರತ್ಯಕ್ಷಜ್ಞಾನವೂ ಇವೆರಡೂ ಅವಶ್ಯವೆಂದು ಸುಶ್ರುತಾಚಾರ್ಯರ ಅಭಿಪ್ರಾಯ ಶ್ಲೋಕವನ್ನು ಹೇಳಿರುತ್ತದೆ. (ಸುಶ್ರುತ॥ ಶಾರೀರ॥ ೬ ಶ್ಲೋಕ೬)

ಸೂಚನೆಯು:— ಈ ರೀತಿ ವೈದ್ಯನು ಪ್ರತ್ಯಕ್ಷ ಕ್ರಿಯಾನ್ವಿತನಾಗಿ, ಶರೀರ' ವಿಜ್ಞೇದನ ಮಾಡಿ, ಸಂಪೂರ್ಣ ಮಾಹಿತಿಯುಳ್ಳ, ಶಸ್ತ್ರ ಕ್ರಿಯಾದಿ ಕರ್ಮ' ನಿಪುಣನೇ, ದೇಹದಲ್ಲಿಯ ಶಸ್ತ್ರ ಚಿಕಿತ್ಸೆಗೆ ಯೋಗ್ಯ ರೋಗಗಳಲ್ಲಿ, ಕ್ರಿಯಾ ನಡೆಸಲು ಯೋಗ್ಯನಾಗುವನು ಶಸ್ತ್ರ ಕರ್ಮಗಳು ಕೈಕೂಡು ಫಲವಾಗಲು ಮಾಡಬೇಕಾದ ಕಾರ್ಯಕ್ರಮವನ್ನು ಸುಶ್ರುತದಲ್ಲಿ ಹೇಳಿದ್ದಾರೆ. (ಸೂತ್ರಸ್ಥಾನ, ಅ ೯)

(೧) ಪ್ರಕೃತಿ ವಿಜ್ಞಾನವು

" ಅವ್ಯಕ್ತಾದಿ ಆಷ್ಟೌಪ್ರಕೃತಯಃ ॥ "

(ಪ್ರಕೃತಿಯ ಸ್ವರೂಪ, ಅವ್ಯಕ್ತ ಮೊದಲಾದ ಎಂಟು ಪ್ರಕೃತಿಗಳು) ಪ್ರಕೃತಿಯೆಂದರೆ:– ವಿಕಾರಹೊಂದದೆ ತನ್ನ ಸ್ಥಿತಿಯಲ್ಲಿಯೇ ಇರುವದು ಯಾವದೋ ಅದು ಪ್ರಕೃತಿ. ಪ್ರಕೃತಿಯು, (ತನ್ಮಾತ್ರ) ಇರುವದರಿಂದಲೇ ಎಲ್ಲ ಇಂದ್ರಿಯಗಳು (ನೇತ್ರಾದಿಗಳು) ವಿಷಯಗಳನ್ನು ಗ್ರಹಿಸಿಯೂ ಆ ವಿಷಯಗಳಂತೆ ಆಗದೆ, ತಮ್ಮ ಸ್ಥಿತಿಯಲ್ಲಿಯೇ ಇರುತ್ತವೆ. ಉದಾ:— ವಾಯುವು ಗಂಧಯುಕ್ತ ವಸ್ತುವಿನ ಸ್ಪರ್ಶದಿಂದ ಗಂಧವುಳ್ಳದ್ದಾಗುತ್ತದೆ. ಇದರಂತೆ ವಾಸನೆಯನ್ನು ಗ್ರಹಿಸಿದ ನಂತರ ನಾಸಿಕವು (ಮೂಗು) ಗಂಧ ಸ್ಥಿತಿಯಲ್ಲಿಯೇ ಏಕೆ ಇರಬಾರದು? ಅಲ್ಲದೆ ಪೂರ್ವ ಸ್ಥಿತಿಗೆ ಬಾರದೇ ಇದ್ದರೆ ಗಂಧವುಳ್ಳದ್ದಾಗಿ ಎರಡನೇಯದನ್ನ ಗ್ರಹಿಸುವ ಶಕ್ತಿಯಿಲ್ಲದಂತೆ ಆಗಬಹುದಲ್ಲವೆ? ಆದರೆ ಹಾಗಾಗುವದಿಲ್ಲ. ಇದಕ್ಕೆ ಕಾರಣವೇನು? ಗಂಧವನ್ನು ಸ್ವೀಕರಿಸಿ ಅದರಂತೆಯೇ ತಾನು ಆಗದೆ ಪ್ರಕೃತಿಯು ತನ್ನ ಸ್ಥಿತಿಯಲ್ಲಿಯೇ ಇರುತ್ತದಾದ್ದರಿಂದ ಅದಕ್ಕೆ ಪ್ರಕೃತಿಯೆಂಬ ಹೆಸರು ಬಂದಿರುತ್ತದೆ.

ಪ್ರಕೃತಿಯು.— ಪ್ರಕೃತಿಯು, ಸ್ಥಾವರಜಂಗಮಾತ್ಮಕವಾದ ಎಲ್ಲ ಜಗತ್ತಿನ ಉತ್ಪತ್ತಿಗೆ ಕಾರಣವಾಗಿಯೂ ತನಗೆ ಕಾರಣವಿಲ್ಲದೆಯೂ, ಸತ್ವ, ರಜ, ತಮೋ, ಲಕ್ಷಣವುಳ್ಳದ್ದಾಗಿಯೂ, ಎಂಟು ವಿಧವಾಗಿಯೂ ಇರುತ್ತದೆ. ಈ ಪ್ರಕೃತಿಯೇ ಎಲ್ಲ ವಿಶ್ವದ ಉತ್ಪತ್ತಿಗೆ ಕಾರಣವಾದ "ಅವ್ಯಕ್ತ"ವೆಂಬುದಾಗಿ ಹೇಳಲ್ಪಡುತ್ತದೆ. ಅವ್ಯಕ್ತವೆಂದರೆ ದೃಷ್ಟಿಗೆ ಗೋಚರವಾಗದೆ ಅನುಮಾನ ಗ್ರಾಹ್ಯವಾದದ್ದು. ಅದು ಒಂದೇ ಒಂದು ಇದ್ದು ಎಲ್ಲ ಕರ್ಮ ಪುರಷ ಜೀವಗಳ ಅಧಿಷ್ಠಾನವಾಗಿರುತ್ತದೆ ಹೇಗೆ ತಡಾಗ, ನದಿ, ಸರೋವರಗಳ ನೀರು, ಸಮುದ್ರವನ್ನು ಹೊಂದುತ್ತವೆಯೋ ಅವುಗಳಿಗೆ, ಸಮುದ್ರವು ಅಧಿಷ್ಠಾನವೋ; ಅದರಂತೆ ಸರ್ವ ಚರಾಚರಾತ್ಮಕ ವಿಶ್ವೋತ್ಪತ್ತಿಗೆ ಅವ್ಯಕ್ತ ಪ್ರಕೃತಿಯೇ ಅಧಿಷ್ಠಾನವಾಗಿದೆ ಅನಂತ ರೂಪಹೊಂದಿದ ವಿಶ್ವದಲ್ಲಿ ಲೀನವಾಗಿ ಅವ್ಯಕ್ತ ಪ್ರಕೃತಿಯು ತನ್ನ ಸ್ಥಿತಿಯಲ್ಲಿಯೇ ಇರುತ್ತದೆ.

(॥ಸುಶ್ರುತ॥ ಶಾರೀರ॥ ಅ ೧ ಸೂ ೩ ।) **"ಸರ್ವಭೂತಾನಾಂ ಕಾರಣಮಕಾರಣಂ ಸತ್ವರಜಸ್ತಮೋಲಕ್ಷಣ ಮಷ್ಟರೂಪ ಮಖಿಲಸ್ಯಜಗತಃ ಸಂಭವಹೇತುರವ್ಯಕ್ತಂನಾಮ। ತದೇಕಂ ಬಹೂನಾಂಕ್ಷೇತ್ರಜ್ಞಾನಾಮಧಿಷ್ಠಾನಂ ಸಮುದ್ರಇವೌದಕಾನಾಂಭಾವಾನಾಂ ॥**

ಯಾವತ್ತೂ ಸ್ಥಾವರ ಮತ್ತು ಜಂಗಮ ಜಗತ್ತನ್ನು ಪ್ರಕಟ ಮಾಡುವಂಥದು, ಮತ್ತೂ ಪ್ರಕಟನಾಡದೆಯೂ ಇರುವಂಥದು ಯಾವದೋ ಅದು ಅವ್ಯಕ್ತವು. ಇದೇ ಅವ್ಯಕ್ತಕ್ಕೆ ಅಣುವಾದಿಗಳು ಅಣುವೆಂತಲೂ ಅನ್ನುತ್ತಾರೆ ಆ ಶಾಸ್ತ್ರಜ್ಞರು ಅಕಾರಣ ಅವ್ಯಕ್ತಕ್ಕೆ, ಪರಮಾಣುವೆಂತಲೂ ಅನ್ನುವರು.

"ಆತ್ಮಾಜ್ಯೋತಿಶ್ಚಿದಾನಂದರೂಪೋನಿತ್ಯಶ್ಚನಿಸ್ಪೃಹಃ ॥
ನಿರ್ಗುಣಃ ಪ್ರಕೃತೇರ್ಯೋಗಾತ್ಸಗುಣಃ ಕುರುತೇಜಗತ್ ॥

ಅರ್ಥ:— ಆತ್ಮನು ಸ್ವಯಂ ಪ್ರಕಾಶಿಯೂ, ಚಿದಾನಂದ ಸ್ವರೂಪನೂ, ನಿರಿಚ್ಛನೂ, ನಿರ್ಗುಣಿಯೂ ಇರುವನು. ಅವನು ತನ್ನ ಮಾಯೆಯ (ಜಗತ್ತಿಗೆ ಕಾರಣವಾದ ಪ್ರಕೃತಿ) ಯೋಗದಿಂದ ಇಚ್ಛಾಯುಕ್ತನಾಗಿ ಈ ಕಾರ್ಯರೂಪ (ದೃಶ್ಯ) ಜಗತ್ತನ್ನು ಹುಟ್ಟಿಸುತ್ತಾನೆ. ಆತ್ಮಾ ಪರಮಾತ್ಮಾ ಇವು ಈಶ್ವರನ ವಾಚಕ ಶಬ್ದಗಳು. ನಿರ್ಗುಣವೆಂದರೆ ಮೂಲ ಪ್ರಕೃತಿ (ಪರಮಾತ್ಮ) ಸಗುಣವೆಂದರೆ ಇಚ್ಛಾಯುಕ್ತನಾಗಿ ಜಗತ್ತನ್ನು ನಿರ್ಮಾಣ ಮಾಡುವವನು. ಈ ವಿಶ್ವದಲ್ಲಿ ಪರಮಾತ್ಮನೂ, ಪ್ರಾಣಿಗಳ ಶರೀರಗಳಲ್ಲಿ ಜೀವಾತ್ಮನೂ ತಾದಾತ್ಮ್ಯವಾಗಿ ಇರುತ್ತಾರೆ.

"ಸತ್ವಂರಜಸ್ತಮಶ್ಚೇತಿಗುಣಾಸ್ತೇಪ್ರಕೃತೇಃ ಸಮಾಃ ॥
ಸಾಜಡಾsಪಿಜಗತ್ಕರ್ತ್ರೀಪರಮಾತ್ಮಚಿದನ್ವಯಾತ್ ॥
(ಬೃಹನ್ನಿಘಂಟು ಶಾ. ಅ ೫)

ಅರ್ಥ:— ಸತ್ವಗುಣ ರಜೋಗುಣ, ತಮೋಗುಣ, ಈ ಮೂರು ಗುಣಗಳು ಸೃಷ್ಟಿಯ ಉತ್ಪತ್ತಿಗೆ ಕಾರಣವಾದ ಪ್ರಕೃತಿಗೆ (ಕಾರಣ ಪ್ರಕೃತಿ)

ಹೊಂದಿಕೊಂಡಿರುತ್ತವೆ. ಈ ತ್ರಿಗುಣಾತ್ಮಕ ಅವ್ಯಕ್ತ ಪ್ರಕೃತಿಯು (ಮಾಯೆಯು) ಜಡವಾಗಿದ್ದರೂ ಪರಮಾತ್ಮ ರೂಪ ಚೈತನ್ಯದ (ಕ್ಷೇತ್ರಜ್ಞ) ಸಂಬಂಧದಿಂದ ಜಗತ್ತನ್ನು ಉತ್ಪನ್ನ ಮಾಡುತ್ತದೆ. ಮಾಯೆಯಲ್ಲಿಯ (ಕಾರಣ ಪ್ರಕೃತಿ) ಸತ್ವಗುಣಲಕ್ಷಣ, ಜ್ಞಾನ, ಸ್ವರೂಪವಾಗಿಯೂ, ಪ್ರಕಾಶಕವಾಗಿಯೂ, ಸುಖಕ್ಕೆ (ಆತ್ಮ ಸುಖಕ್ಕೆ) ಕಾರಣೀ ಭೂತವಾಗಿಯೂ ಇರುತ್ತದೆ.

ರಜೋಗುಣದ ಲಕ್ಷಣ :—

ರಜೋಗುಣವು ರಾಗಾತ್ಮಕವಾಗಿರುತ್ತದೆ ರಾಗವೆಂದರೆ "ಆಸಕ್ತಿಯಿಂದ ಕೂಡಿದ ಸ್ನೇಹವು" ರಾಗವು ದುಃಖಕ್ಕೆ ಕಾರಣವಾಗಿರುತ್ತದೆ.

ತಮೋಗುಣ ಲಕ್ಷಣ:—

ಯಾವದರಿಂದ ಮನುಷ್ಯನು ಗ್ಲಾನಿಯನ್ನೂ, ಅಜ್ಞಾನವನ್ನೂ, ಹೊಂದುತ್ತಾನೆಯೋ ಯಾವದು ಬುದ್ದಿಯನ್ನು ವ್ಯಾಪಿಸಿ ಭ್ರಮೆಯನ್ನುಂಟು ಮಾಡುತ್ತದೆಯೋ, ಅದಕ್ಕೆ ತಮೋಗುಣವೆಂಬ ಹೆಸರು.

ಸುಶ್ರುತಾಚಾರ್ಯರ ಮತದಂತೆ ಎಂಟು ವಿಧ ಪ್ರಕೃತಿಗಳು:—

೧. ಅವ್ಯಕ್ತ ೨ ಮಹಾನ್ ೩ ಅಹಂಕಾರ ೪. ಶಬ್ದತನ್ಮಾತ್ರ ೫. ಸ್ಪರ್ಶತನ್ಮಾತ್ರ ೬. ರೂಪತನ್ಮಾತ್ರ ೭. ರಸತನ್ಮಾತ್ರ ೮. ಗಂಧತನ್ಮಾತ್ರ ಹೀಗೆ (೮) ಪ್ರಕೃತಿಗಳು.

ಇನ್ನು ಬೇರೆ ಬೇರೆ ಆಚಾರ್ಯರು ಧರ್ಮಜ್ಞಾನಾದಿ ಪ್ರಕೃತಿಯನ್ನು ಹೇಳುತ್ತಾರೆ. ೧. ಧರ್ಮ ೨. ಜ್ಞಾನ ೩ ವೈರಾಗ್ಯ ೪. ಐಶ್ವರ್ಯ ೫. ಅಧರ್ಮ ೬. ಅಜ್ಞಾನ ೭. ಅವೈರಾಗ್ಯ ೮. ಅನೈಶ್ವರ್ಯ ಹೀಗೆ ಎಂಟು ಪ್ರಕೃತಿಗಳೆಂದು ಹೇಳಿರುವರು

"ಚರಕಾಚಾರ್ಯರ ಮತ":— ೧. ಅವ್ಯಕ್ತ ೨. ಬುದ್ಧಿ ೩. ಅಹಂಕಾರ ೪. ಪೃಥಿವಿ ೫. ಜಲ ೬ ಅಗ್ನಿ ೭ ವಾಯು ೮. ಆಕಾಶ ಹೀಗೆ ಎಂಟು ಪ್ರಕೃತಿಗಳು ಇರುತ್ತವೆ

"ಅವ್ಯಕ್ತಂ ಮಹಾನ್ ಅಹಂಕಾರಃ ಪಂಚತನ್ಮಾತ್ರಾಣಿ.ಚೇತ್ಯ ಷ್ಟೌಪ್ರಕೃತಯಃ॥" (ಸುಶ್ರುತ ಶಾರೀರ ಅ. ೧ ಸೂತ್ರ ೬ ॥.)

ಅವ್ಯಕ್ತ ಮಹಾನ್sಹಂಕಾರ ಪೃಥಿವ್ಯಾದಿತನ್ಮಾತ್ರಗಳು, ಹೀಗೆ ೮ ಪ್ರಕೃತಿಗಳು. "ಸರ್ವಭೂತಾನಾಂ ಕಾರಣಂ" ಎಂದು ಹೇಳಿರುವದರಿಂದ ಕಾರ್ಯರೂಪವಾದ ಭೂತಾತ್ಮಕ ಸರ್ವ ಜಗತ್ತಿಗೂ, ಕಾರಣರೂಪ (ಅವ್ಯಕ್ತ) ವಾದ ಪ್ರಕೃತಿಗೂ, ತಾದಾತ್ಮ್ಯ ಸಂಬಂಧ ಉಂಟೆಂದು ತಿಳಿಯಬೇಕು. ತಾದಾತ್ಮ್ಯವೆಂದರೆ ವಿಭಾಗ ಮಾಡಲಿಕ್ಕಿಬಾರದ್ದು, ಅತ್ಯಂತ ವಿಶೇಷ ಸಂಬಂಧವೆಂದೂ, ಒಂದನ್ನೊಂದು ಅಂಟಿಕೊಂಡಿರುವಂತಹದೆಂದೂ, ತಿಳಿಯ ಬೇಕು. ಉದಾಹರಣೆ ಕಲ್ಲಿನಿಂದ ಕೆತ್ತಿದ ಹಗೆಯು ಹಲಿಗೆ ರೂಪಹೊಂದಿ ದರೂ ಕಲ್ಲೇ ಇರುತ್ತದೆ. ಮತ್ತು ಹಲಿಗೆಗೆ ಕಾರಣವಾದ ಕಲ್ಲಿಗೂ, ಹಲಿಗೆ ಸ್ವರೂಪ ಕಾರ್ಯಕ್ಕೂ, ಇರುವ ಅತ್ಯಂತ ಅವ್ಯವಚ್ಛೇದಕ ಸಂಬಂಧಕ್ಕೆ, ತಾದಾತ್ಮ್ಯ ಸಂಬಂಧವೆಂಬ ಹೆಸರು ಈ ಉದಾಹರಣೆಯಿಂದ ಕಾರಣ ರೂಪ ಅವ್ಯಕ್ತಕ್ಕೂ, ಕಾರ್ಯ ರೂಪ ಜಗತ್ತಿಗೂ, ಇರುವ ಸಂಬಂಧವನ್ನು ತಿಳಿಯಬೇಕು (॥ಸುಶ್ರುತ॥ ಶಾ| ಅ ೧ ಸೂ ೩).

"ತದೇಕಂಬಹೂನಾಂ ಕ್ಷೇತ್ರಜ್ಞಾನಾಮಧಿಷ್ಠಾನಂ ಸಮುದ್ರ ಇವೌದಕಾನಾಂಭಾವಾನಾಂ॥"

ಅವ್ಯಕ್ತವು (ಪ್ರಕೃತಿಯು) ಅವಿವೇಚ್ಯಾವಯವವುಳ್ಳದ್ದಾಗಿ ಯಾವತ್ತೂ ಕರ್ಮ ಜೀವಗಳಿಗೆ, ಆಶ್ರಯವಾದದ್ದಿರುತ್ತದೆ ಸಮುದ್ರವು ನದಿ ಸರೋವರಾದಿ ಯಾವತ್ತೂ ನೀರಿಗೆ ಹೇಗೆ ಆಶ್ರಯ ಸ್ಥಾನವೋ, ಅಥವಾ, ಸಕಲ ಜಲಚರ ಪ್ರಾಣಿಗಳಿಗೆ ಹೇಗೆ ಆಶ್ರಯ ಸ್ಥಾನವೋ, ಅದರಂತೆಯೇ ಸಕಲ ಚರಾಚರ ವಿಶ್ವಕ್ಕೆ (ಶರೀರ ಭಾವದಿಂದ) ಶರೀರ ರೂಪವಾದ ಸ್ಥಾನವನ್ನು ಹೊಂದಿಸಲು, ಕಾರಣವಾಗಿರುವದು. ಈ ಅವ್ಯಕ್ತ

ಯೋಗದಿಂದ ದೇಹವನ್ನು ಹೊಂದುವ ಜೀವಾತ್ಮಕ್ಕೇ (ಜೀವಕ್ಕೆ) ಪುರುಷ ಕ್ಷೇತ್ರಜ್ಞ,ಎಂದು ಅನ್ನುತ್ತಾರೆ.

ಇನ್ನೂ ಕೆಲವು ವೈದ್ಯಾಚಾರ್ಯರು ಸ್ವಭಾವಾದಿಗಳನ್ನು ಪ್ರಕೃತಿ ಯೆಂದು ಅನ್ನುತ್ತಾರೆ:—

"ಸ್ವಭಾವಮೀಶ್ವರಂಕಾಲಂಯದೃಚ್ಛಾಂ ನಿಯತಿಂತಥಾ ॥
ಪರಿಣಾಮಂಚಮನ್ಯಂತೀಪ್ರಕೃತಿಂ ಪೃಥುದರ್ಶಿನಃ ॥"
(ಸುಶ್ರುತ ಶಾರೀರ ಅ. ೧ ಶ್ಲೋ. ೧೧.)

ಎಲ್ಲದಕ್ಕೂ ಸ್ವಭಾವವೇ ಮೂಲ ಕಾರಣವೆಂದು ಹೇಳುತ್ತಾರೆ. ಸ್ವಭಾವವೆಂದರೆ ನಿಸರ್ಗವು; ಯಾವದೇ ಒಂದು ಕಾರಣದಿಂದ ಬಂದಿರುವ ಸ್ಥಿತಿಯಲ್ಲ. ಎಲ್ಲವುಗಳನಿರ್ಮಾಣವು ಸ್ವಾಭಾವಿಕವಾಗಿಯೇ ಉಂಟಾಗುತ್ತವೆ ಆದ್ದರಿಂದ ಸ್ವಭಾವವನ್ನು ಪ್ರಕೃತಿಯೆಂದು ಹೇಳಿದ್ದಾರೆ. ಮುಳ್ಳಿನಲ್ಲಿ ತೀಕ್ಷ್ಣತೆಯೂ. ಮೃಗಗಳಲ್ಲಿ ಚಿತ್ರವಿಚಿತ್ರ ಬಣ್ಣವುಳ್ಳ ಚರ್ಮ, ಮತ್ತು ಪಕ್ಷಿ ಗಳಲ್ಲಿ ಗರಿ, ವೆಣಸಿನಲ್ಲಿ ಖಾರ, ಕಬ್ಬಿನಲ್ಲಿ ಸಿಹಿ ಇವು ಸ್ವಭಾವತಃ ಇರುವವು ಗಳಾದ್ದರಿಂದಲೂ, ಯಾವದೇ ಅನ್ಯ ಕಾರಣಗಳಿಂದುಂಟಾದ್ದಲ್ಲವಾದ್ದ ರಿಂದಲೂ, ಇವುಗಳಿಗೆ ಸ್ವಭಾವವೇ (ನಿಸರ್ಗ ಸ್ಥಿತಿಯೇ)ಕಾರಣವೆಂದು ಸಿದ್ಧ ವಾಗುತ್ತದೆ. ಹೀಗಿರುವದರಿಂದ ಸ್ವಭಾವವೂ ಪ್ರಕೃತಿಯು.

ಸ್ವಭಾವಾದಿ ಪ್ರಕೃತಿಗಳು:— ೧. ಸ್ವಭಾವ ೨ ಈಶ್ವರ ೩ ಕಾಲ ೪.ಯದೃಚ್ಛಾ ೫. ನಿಯತಿ ೬.ಪರಿಣಾಮ ಎಂದು ಹೇಳಿದ್ದಾರೆ ಈಗ ಹೇಳಿದ ಸ್ವಭಾವಾದಿ ಪ್ರಕೃತಿಗಳನ್ನು ಹಿಂದೆ ಹೇಳಿದ ಅವ್ಯಕ್ತಾದಿಗಳಲ್ಲಿಯೂ, ಮತ್ತು ತ್ರಿಗುಣಗಳಲ್ಲಿಯೂ, ಅಂತರ್ಭಾವ ಮಾಡದೇ ಪ್ರಕೃತಿಗಳು ಬಹಳ ಇರುವ ವೆಂದು ಹೇಳುವರು. ಪೃಥುದರ್ಶಿಗಳು ಸ್ವಭಾವಾದಿಗಳನ್ನು ಪ್ರಕೃತಿಯೆಂದು ಹೇಳುವರು. ಇದನ್ನು ಸುಶ್ರುತಾಚಾರ್ಯರೂ ಕೂಡಾ ಅನ್ಯ ಮತವಾದಿಗಳ ಹೇಳಿಕೆಯೆಂದು ಉದಾಹರಿಸಿ ಸ್ವೀಕರಿಸಿದ್ದಾರೆ.

(೧) ಸ್ವಭಾವ ಉದಾ:— (ಸ್ವಭಾವ ಪ್ರಕೃತಿ ಎನ್ನುವವರ ಮತ)

ಕಃಕಂಟಕಾನಾಂಪ್ರಕರೋತಿತೈಕ್ಷ್ಣ್ಯಂ ಚಿತ್ರಂವಿಚಿತ್ರಂ
ವ್ಯಗಪಕ್ಷಿಣಾಂಚ ॥

ವಾಧುರ್ಯಮಿಕ್ಷೌಕಟುತಾಂಮರೀಚೇಸ್ವಭಾವತಃ
ಸರ್ವಮಿದಂಪ್ರವೃತ್ತಂ ॥

ಇವುಗಳೆಲ್ಲದರ ವೈವಿಧ್ಯಪೂರ್ಣವಾದ ಉತ್ಪತ್ತಿಯು ಸ್ವಭಾವತಃ ಇರುವದರಿಂದ ಸ್ವಭಾವವೂ ಪ್ರಕೃತಿಯೆಂದು "ಸ್ವಾಭಾವಿಕ ಪ್ರಕೃತಿ" ವಾದಿಗಳು ಅನ್ನುತ್ತಾರೆ.

(೨) ಈಶ್ವರನು ಪ್ರಕೃತಿಯೆನ್ನುವವರ ಮತ.

"ಅಜ್ಞೋ ಜಂತುರನೀಶೋಯಮಾತ್ಮನಃಸುಖದುಃಖಯೋಃ॥
ಈಶ್ವರಪ್ರೇರಿತೋಗಚ್ಛೇತ್ಸ್ವರ್ಗಂ ನರಕಮೇವಚ॥

ಈ ಭೂಮಿ ಪರ್ವತ ಕಂದರಗಳನ್ನು ಹುಟ್ಟಿಸಲಕ್ಕೂ, ಜಂತುಗಳಿಗೆ ಸುಖದುಃಖ ಸ್ವರ್ಗ ನರಕಗಳನ್ನು ಕೊಡತಕ್ಕವನು ಈಶ್ವರನು. ಆದ್ದರಿಂದ ಈಶ್ವರ ಪ್ರಕೃತಿವಾದಿಗಳು, ಈಶ್ವರನೇ ಇವೆಲ್ಲಕ್ಕೂ ಕಾರಣ (ಪ್ರಕೃತಿ)ವೆಂದು ಹೇಳುತ್ತಾರೆ.

ಶ್ಲೋಕಾರ್ಥ:— ಅಜ್ಞಾನಿ ಜನರು ತಮ್ಮ ಸುಖ ದುಃಖಗಳಲ್ಲಿ ಸ್ವತಂತ್ರರಿರುವದಿಲ್ಲ. ಯಾಕಂದರೆ, ಸುಖವನ್ನು ಬೇಕೆಂದು ಪಡೆಯಲಿಕ್ಕೂ ದುಃಖವನ್ನು ಬೇಡವೆಂದು ಹೋಗಲಾಡಿಸಲಿಕ್ಕೂ ಸಮರ್ಥರಲ್ಲ. ಆದ್ದರಿಂದ ಈಶ್ವರ ಪ್ರೇರಣೆಯಂತೆ ಸ್ವರ್ಗಕ್ಕಾಗಲೀ ನರಕಕ್ಕಾಗಲೀ ಹೋಗುತ್ತಾರೆ ಹೀಗಿರುವದರಿಂದ "ಈಶ್ವರನೇ ಪ್ರಕೃತಿಯು" ಎಂದು ಈಶ್ವರ ಪ್ರಕೃತಿವಾದಿಗಳು ಅನ್ನುತ್ತಾರೆ. ಈಶ್ವರ ಜ್ಞಾನದಿಂದ ಸುಖ ಮತ್ತು ಸ್ವರ್ಗ ಲಭಿಸುತ್ತವೆ. ಈಶ್ವರ ಜ್ಞಾನವಿಲ್ಲದಿರುವದರಿಂದ ಅಥವಾ ನಿರೀಶ್ವರವಾದದಿಂದ (ನಾಸ್ತಿಕ) ನರಕ ಮತ್ತು ದುಃಖಗಳನ್ನು ಹೊಂದುವದರಿಂದ ಈಶ್ವರನೇ ಪ್ರಕೃತಿಯು.

(೩) ಕಾಲವು ಪ್ರಕೃತಿಯೆಂಬ ಜ್ಯೋತಿಃ ಶಾಸ್ತ್ರ ಮತವು.

ಜಗತ್ತಿನ ಉತ್ಪತ್ತಿ ಸ್ಥಿತಿ ನಾಶಕ್ಕೆ ಕಾಲವೇ ಕಾರಣವೆಂದು 'ಕಾಲಕಾರಣಿಕರ' (ಜ್ಯೋತಿಷ್ಕರ) ಮತವು. ಆದ್ದರಿಂದ ಕಾಲವೂ ಪ್ರಕೃತಿಯೆಂದು ಅನ್ನುವರು.

ಶ್ಲೋ॥ ಪ್ರಭವವಿರತಿ ಮಧ್ಯಜ್ಞಾನವಂಧ್ಯಾನಿತಾಂತಂ ವಿದಿತ ಪರಮತತ್ವಾ ಯತ್ರತೇ ಯೋಗಿನ್ಯೋಪಿ ॥ ತಮುಹಮಿಹ ನಿಮಿತ್ತಂ ವಿಶ್ವಜನ್ಮಾತ್ಯಯಾನಾಂಅನುಮಿತಮುಭವಂದೇಭ ಗ್ರಹೈಃ ಕಾಲಮೀಶಂ ॥

ಕಾಲರೂಪಿ ಪ್ರಕೃತಿಯಲ್ಲಿ ಪರಮಾರ್ಥ ಜ್ಞಾನಿಗಳಾದ ಯೋಗಿಗಳೂ ಸಹ, ಉತ್ಪತ್ತಿ ಸ್ಥಿತಿ ಲಯಗಳಿಂದ ಕಾಲನುಸ್ವತಂತ್ರನೆಂದು ಹೇಳುತ್ತಾರೆ. ಅದರಂತೆ ವಿಶ್ವದ ಉತ್ಪತ್ತಿ-ರಕ್ಷಣ ನಾಶ ಇವು ಕಾಲವನ್ನನುಸರಿಸಿ ಇರುತ್ತವೆ. ಸರ್ವಕ್ಕೂ ಅಶ್ವಿನ್ಯಾದಿ ನಕ್ಷತ್ರಗಳು ಸೂರ್ಯಾದಿ ಗ್ರಹಗಳಿಂದ ಕೂಡಿದ ಈ ಕಾಲವೇ, ಕಾರಣವೆಂದು ತಿಳಿಯಲಾಗುತ್ತದೆ. ಆದ್ದರಿಂದ ಕಾಲವು "ಪ್ರಕೃತಿ" ಇರುತ್ತದೆ.

(೪) ಯದೃಚ್ಛಾ ಪ್ರಕೃತಿವಾದಿಗಳ ಮತವು

"ಯೋಯತೊಭವತಿ ತತ್ರನಿಮಿತ್ತಮಿತಿ" ಯಾದೃಚ್ಛಿಕಾಃ ॥

ಯಾವದು ಯಾವದರಿಂದ ಉತ್ಪನ್ನವಾಗುತ್ತದೆಯೋ ಅದು, ಅದಕ್ಕೆ ಉತ್ಪನ್ನವಾದ ವಸ್ತುವಿಗೆ ಕಾರಣವಾಗುತ್ತದೆ.

ಉದಾ:— "ತೃಣಾರಣಿನಿಮಿತ್ತೋವಹ್ನಿರಿತಿ" ಹುಲ್ಲು-ಅರಣಿ (ಅಗ್ನಿಯನ್ನುತ್ಪನ್ನ ಮಾಡುವ ಮಂಥನಕೊರಡು) ಘರ್ಷಣದಿಂದ ಉತ್ಪನ್ನವಾದ ಅಗ್ನಿಯು ತೃಣವನ್ನಾಶ್ರಯಿಸಿ ಸ್ಥಿರವಾಗಿ ನಿಲ್ಲುತ್ತದೆ. ಆದ್ದರಿಂದ ಹುಲ್ಲು ಅರಣಿಗಳೆರಡೂ ಅಗ್ನಿಗೆ ಕಾರಣಗಳಾದವು. ಯಾಕಂದರೆ ಕಟ್ಟಿಗೆಯಲ್ಲಿ ಯಾವಾಗಲೂ ಅಗ್ನಿಯಿರುತ್ತದೆ. ಆದರೆ ಕಟ್ಟಿಗೆಯನ್ನು ದಹಿಸುವದಿಲ್ಲ. ಮತ್ತೂ ಗೋಚರವಾಗುವದೂ ಇಲ್ಲ. ಆದರೆ ಘರ್ಷಣ ನಿಮಿತ್ತವಾಗಿ

ಯದೃಚ್ಛೆಯಿಂದ ಉತ್ಪನ್ನವಾಗಿ ಹುಲ್ಲನ್ನು ಆಶ್ರಯಿಸುವದು. ಅಡವಿಯಲ್ಲಿ ಮರಗಳ ಟೊಂಗೆಗಳ ಘರ್ಷಣದಿಂದ ಬೆಂಕಿಯುತ್ಪನ್ನವಾಗುವದು ಸಹ ಯದೃಚ್ಛೆಯು.

(೫) **ನಿಯತಿ ಪ್ರಕೃತಿವಾದಿಗಳ ಮತವು:—**

ಪೂರ್ವಜನ್ಮಾರ್ಜಿತ ಧರ್ಮಾಧರ್ಮೌನಿಯತಿಃ ॥

ಪೂರ್ವ ಜನ್ಮದಲ್ಲಿಯ, ಧರ್ಮ ಮತ್ತು ಅಧರ್ಮ ಇವು "ನಿಯತಿ" ಯೆಂದು ಹೇಳಲ್ಪಡುತ್ತವೆ. ಯಾಕಂದರೆ ಪೂರ್ವ ಜನ್ಮದಲ್ಲಿಯ ಕರ್ಮ ಸಂಸ್ಕಾರವುಳ್ಳ ಜೀವವು, ಈಗಿನ ಜನ್ಮದಲ್ಲಿ ತನ್ನ ಕರ್ಮಕ್ಕನುಗುಣವಾಗಿ ದೇಹವನ್ನು ಪಡೆಯುತ್ತದಾದ್ದರಿಂದ "ನಿಯತಿ"ಯೆಂದು ಹೇಳುತ್ತಾರೆ.

(೬) **ಪರಿಣಾಮ ಪ್ರಕೃತಿವಾದಿಗಳ ಮತವು:—** ಅವ್ಯಕ್ತದಿಂದ ಪರಿಣತಿ ಹೊಂದಿದ (ಉತ್ಪನ್ನವಾದ) ಮಹಾನ್ ಮತ್ತೂ ಅಹಂಕಾರಗಳು ಪ್ರಧಾನವಾಗಿ ದೃಶ್ಯ ಜಗತ್ತಿಗೆ (ಉತ್ಪತ್ತಿಗೆ) ಕಾರಣವಾದ್ದರಿಂದ ಮಹದಾದಿ ಪರಿಣತಗಳು ಪ್ರಕೃತಿ ಇರುತ್ತವೆ.

"ಪ್ರಧಾನಮೇವಮಹದಂಹಕಾರಾದಿರೂಪತಯಾಪರಿಣತಂ ಸರ್ವಸ್ಯನಿಮಿತ್ತಮಿತಿ ಪರಿಣಾಮವಾದಿನಃ"

ಮುಖ್ಯವಾಗಿ ಮಹದಹಂಕಾರ ರೂಪಹೊಂದಿದವುಗಳಿಂದಲೇ ಜಗತ್ತು ಹುಟ್ಟುವದರಿಂದಲೂ, ಆ ಮಹತ್ ಅಹಂಕಾರಗಳು ಪರಿಣತ ಹೊಂದಿದವುಗಳಾದ್ದರಿಂದ, ಎಲ್ಲ ವಿಶ್ವೋತ್ಪತ್ತಿಗೆ ಪರಿಣಾಮವೇ ಕಾರಣವೆಂದು "ಪರಿಣಾಮ ಪ್ರಕೃತಿ" ವಾದಿಗಳ ಮತವು. ಸುಶ್ರುತಾಚಾರ್ಯರು ಸ್ವಭಾವಾದಿ ಪ್ರಕೃತಿವಾದಿಗಳ ಮತವನ್ನೂ ಸಂಗ್ರಹಿಸಿ ಹೇಳಿದ್ದಾರೆ. ಮತ್ತು ಸುಶ್ರುತ ಗ್ರಂಥದಲ್ಲಿ ಅಲ್ಲಲ್ಲಿ ಉದಹರಿಸಿದ್ದಾರೆ. (॥ಸುಶ್ರುತ॥ ಶಾರೀರ॥ ಅ ೩ ॥) "ಅಂಗಪ್ರತ್ಯಂಗ ನಿರ್ವೃತ್ತಿಃ ಸ್ವಭಾವಾದೇವಜಾಯತೇ"॥ ಶರೀರದ ಅಂಗ ಪ್ರತ್ಯಂಗಗಳ ಉತ್ಪತ್ತಿಯು ಸ್ವಾಭಾವಿಕವಾಗಿಯೇ ಆಗುತ್ತದೆಂದು ಹೇಳಿದ್ದಾರೆ ಇದರಿಂದ ಅನ್ಯ ಮತವನ್ನೂ ಸಹ ಗ್ರಹಿಸಿದ್ದಾರೆಂದು ಸಿದ್ಧವಾಗುತ್ತದೆ.

ಚರಕಾಚಾರ್ಯರ ಮತದಂತೆ ಪ್ರಕೃತಿಗಳು:— (ಚರಕ॥ ಶಾರೀರ॥ ಅ ೧ ಶ್ಲೋ ೬೩ ॥).

ಖಾದೀನಿಬುದ್ಧಿರವ್ಯಕ್ತಮಹಂಕಾರಸ್ತಥಾಷ್ಟವಃ ॥
ಭೂತಪ್ರಕೃತಿರುದ್ದಿಷ್ಟಾವಿಕಾರಾಶ್ಚೈವಷೋಡಶ” ॥

ಆಕಾಶಾದಿ ಪಂಚಮಹಾಭೂತಗಳು, ಬುದ್ಧಿ, ಅವ್ಯಕ್ತ, ಅಹಂಕಾರ ಇವು ಎಂಟು ಪ್ರಕೃತಿಗಳು. ಷೋಡಶ (೧೬) ವಿಕಾರ (ವಿಕೃತಿ) ಗಳೆಂದು ಚರಕಾಚಾರ್ಯರ ಮತವು. ಪ್ರಕೃತಿಗಳು:— ೧ ಆಕಾಶ ೨ ವಾಯು ೩ ತೇಜಸ್ಸು ೪ ಜಲ ೫ ಪೃಥಿವೀ ೬ ಅವ್ಯಕ್ತ ೭ ಬುದ್ಧಿ ೮ ಅಹಂಕಾರ ಹೀಗೆ ಚರಕಾಚಾರ್ಯರು ಹೇಳಿದ ಪ್ರಕೃತಿಗಳು.

ಪ್ರಕೃತಿ ವಿಷಯದಲ್ಲಿ ಚರಕ-ಸುಶ್ರುತರ ಮತ ಭೇದಗಳು:— ಸುಶ್ರುತ-ಚರಕಾಚಾರ್ಯರಲ್ಲಿ, ಅವ್ಯಕ್ತ, ಅಹಂಕಾರ ಇವೆರಡು ವಿಷಯ ಗಳಲ್ಲಿ ಮತಭೇದವಿಲ್ಲ ಸುಶ್ರುತಾಚಾರ್ಯರು:— ॥ಪಂಚತನ್ಮಾತ್ರಗಳನ್ನೂ, ಚರಕಾಚಾರ್ಯರು॥ ಪಂಚಭೂತಗಳನ್ನೂ ಹೇಳಿರುವರು. ಸುಶ್ರುತ:— ೧. ಅವ್ಯಕ್ತ ೨ ಮಹಾನ್, ಚರಕ:— ಅವ್ಯಕ್ತ ಬುದ್ಧಿ ಎಂದು ಹೇಳಿದ್ದಾರೆ

ಭೂತಾದಿಗಳ (ಪೃಥಿವ್ಯಾದಿ) ಉತ್ಪತ್ತಿ ಕ್ರಮವು:— (ಚ। ಶಾ। ಅ ೧ ಶ್ಲೋ ೬೬ ॥.)

ಜಾಯತೇಬುದ್ಧಿರವ್ಯಕ್ತಾತ್ ಬುಧ್ಯಾಹಮಿತಿಮನ್ಯತೇ ॥
ಪರಂಖಾದೀನ್ಯಹಂಕಾರಾದುತ್ಪದ್ಯಂತೇಯಥಾಕ್ರಮಂ ॥೬೬॥

ಅವ್ಯಕ್ತದಿಂದ ಬುದ್ಧಿಯುತ್ಪನ್ನವಾಗುತ್ತದೆ. ಆ ಬುದ್ಧಿಯಿಂದ ನಾನು ಎಂಬುದನ್ನು ತಿಳಿಯುತ್ತಾನೆ. (ಅರ್ಥಾತ್ ಉಳಿದವುಗಳಿಂದ ಭಿನ್ನವಾಗುವದು) ಇದಕ್ಕೇ ಅಹಂಕಾರವೆಂಬ ಹೆಸರು. ನಂತರ ಅಹಂಕಾರದಿಂದ ಆಕಾಶಾದಿ ಪಂಚಮಹಾಭೂತಗಳು ಕ್ರಮವಾಗಿ ಉತ್ಪನ್ನವಾಗುತ್ತವೆ. “ಯಥಾಕ್ರಮಂ” ಎನ್ನುವದರಿಂದ ಪೂರ್ಣ ಉತ್ಪತ್ತಿ ಕ್ರಮವು ಧ್ವನಿತ ವಾಗುವದು.

ಅವ್ಯಕ್ತದಿಂದ ಮಹದಾದಿ ಕ್ರಮ

ತಸ್ಮಾದವ್ಯಕ್ತಾತ್ಮಹಾನುತ್ಪದ್ಯತೇತಲ್ಲಿಂಗವಿವ। ತಲ್ಲಿಂಗಾಚ್ಚ ಮಹತಃ ತಲ್ಲಕ್ಷಣವಿವ ಅಹಂಕಾರಉತ್ಪದ್ಯತೆ। ಸತ್ವಿವಿಭೋವೈಕಾರಿಕಃ ತೈಜಸೋಭೂತಾದಿರಿತಿ। ತತ್ರವೈಕಾರಿಕಾದಹಂಕಾರಾತ್ತೈಜಸಸಹಾಯಾತ್ತಲ್ಲಕ್ಷಣಾನ್ಯೇವೈಕಾದಶೇಂದ್ರಿಯಾಣ್ಯುತ್ಪದ್ಯಂತೆ। ತದ್ಯಥಾ:- ಶ್ರೋತ ತ್ವಕ್ ಚಕ್ಷುರ್ಜಿಹ್ವಾ ಘ್ರಾಣ ವಾಗ್ ಹೆಸ್ತೊಪಸ್ಥ ಪಾಯು ಪಾದ ಮನಾಂಸೀತಿ, ತತ್ರಪೂರ್ವಾಣಿ ಪಂಚಬುದ್ಧೀಂದ್ರಿಯಾಣಿ, ಇತರಾಣಿ ಪಂಚಕರ್ಮೇಂದ್ರಿಯಾಣಿ, ಉಭಯಾತ್ಮಕಂ ಮನಃ, ಭೂತಾದೇರಪಿತೈಜಸಸಹಾಯತ್ತಲ್ಲಕ್ಷಣಾನ್ಯೇವಪಂಚತನ್ಮಾತ್ರಾಣ್ಯುತ್ಪದ್ಯಂತೆ ಶಬ್ದತನ್ಮಾತ್ರಂ, ಸ್ಪರ್ಶತನ್ಮಾತ್ರಂ, ರೂಪತನ್ಮಾತ್ರಂ, ರಸತನ್ಮಾತ್ರಂ, ಗಂಧತನ್ಮಾತ್ರವಿಮಿತಿ, ತೇಷಾಂ ವಿಶೇಷಾ:- ಶಬ್ದ, ಸ್ಪರ್ಶ, ರೂಪ, ರಸ, ಗಂಧಾಃ, ತೇಭ್ಯೋ ಭೂತಾನಿ ವ್ಯೋಮವಾನಿಲಾನಲ ಜಲೋರ್ವ್ಯಃ, ಏವಮೇಷಾ ತತ್ತ್ವಚತುರ್ವಿಂಶತಿರ್ವ್ಯಾಖ್ಯಾತಾ ॥ (ಸು॥ ಶಾ॥ ಅ ೧ ಸೂ ೪)

ಈ ಪೂರ್ವೋಕ್ತ ಲಕ್ಷಣಗಳಿಂದ ಕೂಡಿದ "ಅವ್ಯಕ್ತದಿಂದ" ಆ ಅವ್ಯಕ್ತದ ಲಕ್ಷಣವುಳ್ಳ "ಮಹಾನ್" ಉತ್ಪನ್ನವಾಗುತ್ತದೆ. ಉತ್ಪನ್ನವಾದ ಮಹತ್‌ದಿಂದ ಅದೇ ಲಕ್ಷಣಯುಕ್ತವಾದ "ಅಹಂಕಾರವು" ಉತ್ಪನ್ನವಾಗುವದು. ಆ ಅಹಂಕಾರವು ಮೂರು ವಿಧವಾದದ್ದಿರುತ್ತದೆ. **೧. ವೈಕಾರಿಕಃ** (ಸಾತ್ವಿಕಃ) **೨ ತೈಜಸಃ** (ರಾಜಸಃ) **೩. ಭೂತಾದಿಃ** (ತಾಮಸಃ) ಇದಕ್ಕೆ ಸಾತ್ವಿಕ, ರಾಜಸ, ತಾಮಸಗಳೆಂದು ಮೂರು ಬೇರೆ ಹೆಸರುಗಳು ಇರುತ್ತವೆ. ಸತ್ವಗುಣವುಳ್ಳ ಅಹಂಕಾರದಿಂದ ರಾಜಸಗುಣ ಸಹಾಯವಾಗಿ, ಅಹಂಕಾರ ಲಕ್ಷಣಗಳುಳ್ಳ ಹನ್ನೊಂದು (೧೧) ಇಂದ್ರಿಯಗಳು ಉತ್ಪನ್ನವಾಗುತ್ತವೆ. **ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು, ವಾಕ್, ಕೈ, ಜನನೇಂದ್ರಿಯ, ಗುದ, ಕಾಲು, ಮನಸ್ಸು** ಹೀಗೆ ಹನ್ನೊಂದು ಇಂದ್ರಿ

ಯುಗಳು ಅಹಂಕಾರದಿಂದ ಹುಟ್ಟುತ್ತವೆ ಈ ಹನ್ನೊಂದು ಇಂದ್ರಿಯಗಳಲ್ಲಿ ಮೊದಲಿನದು, ಐದು **ಜ್ಞಾನೇಂದ್ರಿಯಗಳು.** ಉಳಿದ ಐದು, **ಕರ್ಮೇಂದ್ರಿಯಗಳು.** ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆರಡರಲ್ಲಿಯೂ ಇರತಕ್ಕ 'ಮನಸ್ಸು"ಒಂದು ಹೀಗೆ ವಿಭಾಗಶಃ ಹನ್ನೊಂದು ಇಂದ್ರಿಯಗಳು ಇರುತ್ತವೆ.

ಸತ್ವರಜತಮೋ ಗುಣಗಳಿಂದ ಯಥಾ ಯೋಗ್ಯ ಹೊಂದಿಕೊಂಡು ಉತ್ಪನ್ನವಾದ ವಸ್ತುವಿಗೆ ಕಾರಣವಾದ, ಅಹಂಕಾರದಿಂದ ಪಂಚತನ್ಮಾತ್ರ ಗಳು ಹುಟ್ಟುತ್ತವೆ. **ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ, ರೂಪತನ್ಮಾತ್ರ ರಸತನ್ಮಾತ್ರ, ಗಂಧತನ್ಮಾತ್ರಗಳೆಂಬ** ಐದು ತನ್ಮಾತ್ರಗಳು. ತನ್ಮಾತ್ರ ವೆಂದರೆ "ಅಷ್ಟೇ" ಎಂಬರ್ಥ. ಶಬ್ದತನ್ಮಾತ್ರವೆಂದರೆ ಶಬ್ದವನ್ನು ಮಾತ್ರ ಗ್ರಹಣ ಮಾಡುವದು ಹೀಗೆಂಬರ್ಥ. ಈ ತನ್ಮಾತ್ರಗಳು ಇರುವದರಿಂದಲೇ ಆಯಾ ಇಂದ್ರಿಯಗಳು ತಮ್ಮ ನಿಯತವಾದ ವಿಷಯಗಳನ್ನಷ್ಟೇ ಗ್ರಹಿಸುತ್ತ ವೆಯಲ್ಲದೆ ಬೇರೆಯವನ್ನು ಗ್ರಹಿಸುವದಿಲ್ಲ. ಉದಾ:- ಗಂಧತನ್ಮಾತ್ರವುಳ್ಳ ಮೂಗು ವಾಸನೆಯನ್ನು ಮಾತ್ರ ತೆಗೆದುಕೊಳ್ಳುತ್ತದೆಯೇ ಹೊರತು, ರೂಪ ವನ್ನೂ ರಸವನ್ನೂ ಗ್ರಹಿಸಲಾರದು. ಹೀಗಿರುವದರಿಂದಲೇ ಅನಿಯತ ಗ್ರಹಣ ದಿಂದ ತನ್ಮಾತ್ರಗಳು ಇವೆಯೆಂದು ಸಿದ್ಧವಾಗುತ್ತದೆ

ತನ್ಮಾತ್ರಗಳಿಗೆ ಗ್ರಹಣ ವಿಷಯಗಳು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಇರುತ್ತವೆ ತನ್ಮಾತ್ರಗಳು ಶಬ್ದಾದಿ ವಿಷಯಗಳನ್ನು ಗ್ರಹಿಸುತ್ತವೆ ಆದ್ದರಿಂದ, ಶಬ್ದಾದಿಗಳು **ವಿಷಯಗಳು.**

ಈ ಶಬ್ದಾದಿ ತನ್ಮಾತ್ರಗಳಿಂದ, ಅಥವಾ ಶಬ್ದಾದಿಗಳಿಂದ ಆಕಾಶಾದಿ ಪಂಚಭೂತಗಳು ಹುಟ್ಟಿದವು ಹೀಗೆ ಚತುರ್ವಿಂಶತಿ ತತ್ವಗಳು ಇರುತ್ತವೆ. ಇಲ್ಲಿ ಪತಂಜಲಿ ಮಹರ್ಷಿಯ ಮತದಂತೆ ಶಬ್ದಾದಿಗಳಿಂದ ಪಂಚಮಹಾ ಭೂತಗಳ ಉತ್ಪತ್ತಿಯನ್ನೂ, ಸುಶ್ರುತಾಚಾರ್ಯರ ಮತದಂತೆ ಶಬ್ದತನ್ಮಾ ತ್ರಾದಿಗಳಿಂದ ಭೂತಾದಿಗಳ ಉತ್ಪತ್ತಿಯನ್ನೂ ಗ್ರಹಿಸಲಾಗಿದೆ. ಇದರಿಂದ ಬಾಧಕವೇನೂ ಇಲ್ಲ ಅಹಂಕಾರದಿಂದುತ್ಪನ್ನವಾದ, ಹನ್ನೊಂದು ಇಂದ್ರಿ ಯಗಳು ಅಹಂಕಾರ ಗುಣವುಳ್ಳದ್ದರಿಂದ, (ತಾನು ಎಂಬ ಅಭಿಮಾನ)

ಅಹಂಕಾರ ಹುಟ್ಟಿಗಲಿಕ್ಕೆ ಕಾರಣವೆಂದು "ಸಾಂಖ್ಯ ಶಾಸ್ತ್ರದ" ಮತವು. ಆದರೆ ವೈದ್ಯಕೆಯಲ್ಲಿ ಇಂದ್ರಿಯಗಳೆಲ್ಲವೂ ಭೌತಿಕದಿಂದ ಉತ್ಪನ್ನವಾದವುಗಳೆಂದು ಸುಶ್ರುತರ ಅಭಿಪ್ರಾಯವು. ಯಾಕಂದರೆ "**ಸರ್ವಭೂತ ಚಿಂತಾ ಶಾರೀರಂ**" ಎಂದು ಹೇಳಿರುವದರಿಂದ ಶರೀರಾವಯವಗಳು, ದೇಹವು ಭೌತಿಕವಾದ್ದರಿಂದ ಇಂದ್ರಿಯಗಳೂ ಭೌತಿಕವೆಂದು ಪುನಃ ಹೇಳುವ ಕಾರಣವಿಲ್ಲ

ಪ್ರಕೃತಿ ಮತ್ತು ವಿಕಾರಗಳು

ಅವ್ಯಕ್ತಂ ಮಹಾನಹಂಕಾರಃ ಪಂಚತನ್ಮಾತ್ರಾಣಿ ಚೇತ್ಯಷ್ಟೌ ಪ್ರಕೃತಯಃ॥ ಶೇಷಾಃ ಷೋಡಶ ವಿಕಾರಾಃ ॥

(ಸುಶ್ರುತ॥ ಶಾರೀರ॥ ಅ ೧ ಸೂ ೬॥)

ಪ್ರಕೃತಿಗಳು ೮.

ಪ್ರಕೃತಿ:— ೧ ಅವ್ಯಕ್ತ ೨ ಮಹಾನ್ ೩ ಅಹಂಕಾರ ೪ ಶಬ್ದತನ್ಮಾತ್ರ ೫ ಸ್ಪರ್ಶತನ್ಮಾತ್ರ ೬ ರೂಪತನ್ಮಾತ್ರ ೭ ರಸತನ್ಮಾತ್ರ ೮ ಗಂಧತನ್ಮಾತ್ರ ಇವು ಎಂಟು ಪ್ರಕೃತಿಗಳು.

ವಿಕಾರಗಳು ೧೬.

ವಿಕಾರ:— ೧ ಪೃಥ್ವಿ ೨ ಜಲ ೩ ತೇಜ ೪ ವಾಯು ೫ ಆಕಾಶ ಇವು ಪಂಚಭೂತಗಳು.

ಜ್ಞಾನೇಂದ್ರಿಯಗಳು:— ೧ ಕಿವಿ ೨ ಸ್ಪರ್ಶೇಂದ್ರಿಯಗಳು(ಚರ್ಮ) ೩ ಕಣ್ಣು ೪ ನಾಲಿಗೆ ೫ ಮೂಗು ಇವು ಜ್ಞಾನೇಂದ್ರಿಯಗಳು.

ಕರ್ಮೇಂದ್ರಿಯಗಳು:— ೧ ವಾಣೀ (ವಾಗಿಂದ್ರಿಯ) ೨ ಹಸ್ತ ೩ ಉಪಸ್ಥ ೪ ಗುದ ೫ ಪಾದ ಇವು ಕರ್ಮೇಂದ್ರಿಯಗಳು.

ಮನಸ್ಸು:— ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆರಡರಲ್ಲಿಯೂ ಇರುವದು. ಮನಸ್ಸು,(೧), ಶ್ರವಣೇಂದ್ರಿಯಾದಿ, (೧೦) ಇಂದ್ರಿಯಗಳು, ಪೃಥ್ವಿವ್ಯಾದಿ ಪಂಚಭೂತಗಳ (೫), ಒಟ್ಟು, ವಿಕಾರಗಳು ೧೬

ಪ್ರಕೃತಿಗಳು (೮), ವಿಕಾರ (೧೬) ಹೀಗೆ ಇವುಗಳ ಗುಂಪಿಗೆ ಚತು ರ್ವಿಂಶತಿ ತತ್ವಗಳೆಂದು ಹೇಳುತ್ತಾರೆ.

ತತ್ರಬುದ್ಧೀಂದ್ರಿಯಾಣಾಂ ಶಬ್ದಾದಯೋ ವಿಷಯಾಃ ॥
ಕರ್ಮೇಂದ್ರಿಯಾಣಾಂ ಯಥಾ ಸಂಖ್ಯಂ ವಚನಾದಾನಾನಂದ
ವಿಸರ್ಗ ವಿಹರಣಾನಿ ॥

ಬುದ್ಧೀಂದ್ರಿಯಗಳಿಗೆ:— ಶಬ್ದ ಸ್ಪರ್ಶ ರೂಪ ರಸ ಗಂಧ ಇವು ಗಳು ವಿಷಯಗಳು. ಅಂದರೆ ಇವುಗಳನ್ನು ಗ್ರಹಿಸಿ ಜ್ಞಾನವಮಾಡಿಕೊಡುತ್ತವೆ.

ಕರ್ಮೇಂದ್ರಿಯಗಳಿಗೆ:— ಮಾತಾಡುವದು, ತೆಗೆದುಕೊಳ್ಳುವದು, ಆನಂದ, ಮಲವನ್ನು ಬಿಡುವದು, ಅಡ್ಡಾಡುವದು ಇವು ಕರ್ಮೇಂದ್ರಿಯ ಗಳ ಕೆಲಸಗಳು. (॥ಸುಶ್ರುತ॥ ಶಾರೀರ॥ ಅ ೧ ಶ್ಲೋ ೧೫)

ಇಂದ್ರಿಯೇಣೇಂದ್ರಿಯಾರ್ಥಂತುಸ್ವಂ ಸ್ವಂಗೃಹ್ಣಾತಿ
ಮಾನವಃ ॥
ನಿಯತಂ ತುಲ್ಯಯೋನಿತ್ವಾನ್ನಾನ್ಯೇ ನಾನ್ಯಮಿತಿಸ್ಥಿತಿಃ ॥೧೫॥

ಇಂದ್ರಿಯಗಳೂ ಇಂದ್ರಿಯ ವಿಷಯಗಳೂ ಪಂಚಭೌತಿಕವೇ ಇರುವ ದರಿಂದ, ಯಾವ ಇಂದ್ರಿಯದಲ್ಲಿ ಯಾವ ಭೂತದ ವಿಶೇಷವಾದ ಆಧಿಕ್ಯ ವಿರುತ್ತದೆಯೋ, ಆ ಇಂದ್ರಿಯ ಅದನ್ನೇ ಗ್ರಹಿಸುತ್ತದೆ. **ಉದಾ:—** ತೇಜ ಸ್ಸಿನ ಭಾಗ ಅಧಿಕವುಳ್ಳ ಚಕ್ಷುರಿಂದ್ರಿಯವು, ರೂಪವನ್ನು ಮಾತ್ರ ಗ್ರಹಿಸು ತ್ತದೆ. ಇದರಂತೆಯೇ ಎಲ್ಲ ಇಂದ್ರಿಯಗಳನ್ನು ತಿಳಿಯಬೇಕು.

ಭೌತಿಕವಾದ ವಿಷಯಗಳನ್ನು ಭೌತಿಕ ಇಂದ್ರಿಯಗಳು, ತಮ್ಮ ಗ್ರಹಣ ಕ್ರಿಯೆಯಿಂದ ಗ್ರಹಿಸಿ; ಮನುಷ್ಯನಿಗೆ ಅವುಗಳ ಜ್ಞಾನ ಮಾಡಿ ಕೊಡುತ್ತವೆ. ಇಂದ್ರಿಯ, ಮತ್ತು ಇಂದ್ರಿಯ ವಿಷಯಗಳೆರಡೂ, ಸದೃಶ ಭೂತಾದಿಗಳುಳ್ಳವುಗಳಾದ್ದರಿಂದ ನಿಯತವಾದದ್ದಿರುತ್ತವೆ. ಆದ್ದರಿಂದ ವಿರುದ್ಧವಾಗಿ ಯಾವದಾದರೊಂದು ಇಂದ್ರಿಯವು ತಾನು ಗ್ರಹಿಸತಕ್ಕದ್ದಲ್ಲದ ವಿಷಯವನ್ನು ಗ್ರಹಿಸಲಾರದು.

ತತ್ರಸರ್ವ ಏವಅಚೇತನವಿಷವರ್ಗಃ ಪುರುಷಃ ಪಂಚವಿಂಶತಿ ತಮಃ ಕಾರ್ಯಕಾರಣ ಸಂಯುಕ್ತಶ್ಚೇತಯಿತಾಭವತಿ ॥ ಸತ್ಯಪ್ಯಚೈತನ್ಯೇಪ್ರಧಾನಸ್ಯ ಪುರುಷ ಕೈವಲ್ಯಾರ್ಥಂ ಪ್ರವೃತ್ತಿ ಮುಪದಿಶಂತಿ" ಕ್ಷೀರಾದೀಂಶ್ಚಾತ್ರ ದೇತೂನುದಾಹರಂತಿ॥"
(ಸುಶ್ರುತ॥ ಶಾರೀರ॥ ಅ ೧ ಸೂ ೮)

ಇವು ಈಗ ಉದಹರಿಸಿ ಹೇಳಿದ ಚತುರ್ವಿಂಶತಿ(೨೪) ತತ್ವಗಳು ಅಚೇತನವಾದವುಗಳು. ಇಪ್ಪತ್ತೈದನೆಯದಾದ ಪುರುಷನು. ಕಾರಣ (ಅವ್ಯಕ್ತಾದಿ ಪ್ರಕೃತಿಗಳು) ಕಾರ್ಯ (ಭೂತಾದಿ, ಇಂದ್ರಿಯಗಳು) ಇವುಗಳಿಂದ ಯುಕ್ತನಾಗಿ; ಚೈತನ್ಯವನ್ನುಂಟು ಮಾಡುತ್ತಾನೆ. ಹೀಗೆ ಸಾಂಖ್ಯರು ಪಂಚವಿಂಶತಿ ತತ್ವಾತ್ಮಕ ಪುರುಷನೆಂದ. ಹೇಳುತ್ತಾರೆ. ಪುರುಷ ಭಿನ್ನವಾದವುಗಳು ಅಚೇತನವರ್ಗವಾದರೂ, ಪ್ರಧಾನ (ಪ್ರಕೃತಿ) ಮೊದಲಾದದ್ದನ್ನು ಪುರುಷನ (ದೇಹಧಾರಿಯಾದ ಜೀವನ) ಮೋಕ್ಷಕ್ಕಾಗಿ, ವಿವೇಚಿಸಿ ಹೇಳಿದ್ದಾರೆ. ಈ ಅಚೇತನ ವಸ್ತುಗಳು ಮೋಕ್ಷಕ್ಕೆ ಹೇಗೆ ಕಾರಣವಾಗುತ್ತವೆಂಬುವದನ್ನು ಹೇಳಲು ಕ್ಷೀರಾದಿ ಉದಾಹರಣೆಗಳನ್ನು ಕೊಡುತ್ತಾರೆ.

ಹಾಲು ಜಡವಾಗಿದ್ದರೂ ಚೈತನ್ಯಯುಕ್ತ ಶಿಶುವಿನ ಜೀವನಕ್ಕೆ (ಪ್ರಾಣಧಾರಣ ಪೋಷಣೆ) ಹೇಗೆ ಅವಶ್ಯವೋ ಅದರಂತೆ, ಜಡವಾದ ಅಚೇತನ ವರ್ಗಗಳ. ಚೇತನವುಳ್ಳ 'ಪುರುಷನ ಮೋಕ್ಷಕ್ಕಾಗಿ ಅವಶ್ಯವಾದವುಗಳು. ಈ ಜಡವಾದವುಗಳೆಲ್ಲದರಲ್ಲಿರುವ ಆತ್ಮವನ್ನು ವಿವೇಕದಿಂದ ನಿಗ್ರಹಿಸಿ, ನಿತ್ಯ ಸ್ವರೂಪ ಚೇತನೆಯುಳ್ಳ, ಪುರುಷ ಸ್ಥಿತಿ ಹೊಂದಲು, ಅವುಗಳ ಜ್ಞಾನ ಅವಶ್ಯವಾಗಿರುತ್ತದೆಂದು ಅಭಿಪ್ರಾಯವು.

ತತ್ರಕಾರಣಾನುರೂಪಂ ಕಾರ್ಯವಿತಿಕೃತ್ವಾ ಸರ್ವಏವತೇ ವಿಶೇಷಾಃ 'ಸತ್ವರಜಸ್ತಮೋಮಯಾಭವಂತಿ, ತದಂಜನ ತ್ವಾತ್ತನ್ಮಯತ್ವಾಚ್ಚ ತದ್ಗುಣಾಏವವುರುಷಾಭವಂತಿ ಇತ್ಯೇ ಕೇಭಾಷಂತೇ॥ (ಸುಶ್ರುತ॥ ಶಾರೀರ॥ ಅ ೧ ಸೂ ೧೦)

ಕಾರಣದಲ್ಲಿರತಕ್ಕ ಗುಣಗಳು, ಕಾರ್ಯದಲ್ಲಿ ಬರುತ್ತವೆ ಎನ್ನುವ ನಿಯಮದಿಂದಲೂ, ಜಗದಾದಿ, ಎಲ್ಲ ಕಾರ್ಯ ಸ್ವರೂಪಗಳಲ್ಲಿ ಸತ್ವರಜ ತಮಸ್ಸುಗಳು ಗೋಚರಿಸುವದರಿಂದಲೂ, ಸತ್ವಾದಿಗಳಿಂದ ತನ್ಮಯವಾಗಿರುವದರಿಂದಲೂ, ಕಾರ್ಯರೂಪ ಜಗದಾದಿಗಳಲ್ಲಿರುವ ಗುಣಗಳು, ಕಾರಣದಲ್ಲಿರಲೇಬೇಕೆಂಬ ನಿಶ್ಚಯದಿಂದ, ಚತುರ್ವಿಂಶತಿ ತತ್ವಯುಕ್ತನೂ ಪ್ರೇರಕನೂ, ಇದ್ದದರಿಂದ ಎಲ್ಲ ಜಡಕ್ಕೆ ಚೈತನ್ಯ ಕೊಡಲು ಕಾರಣನಾದ ಪುರುಷನು, ಸತ್ವಾದಿಗುಣವುಳ್ಳವನೆಂದು ಕೆಲವರು ಹೇಳುತ್ತಾರೆ. ಸತ್ವ ಮೊದಲಾದ ಗುಣಗಳ ಸ್ವರೂಪವನ್ನು ಹಿಂದೆ ವಿವರಿಸಿದ್ದೇವೆ.

ಪುರುಷ ವಿವರಣೆಯು

ಖಾದಯಶ್ಚೇತನಾಷಷ್ಠಾ ಧಾತವಃ ಪುರುಷಃ ಸ್ಮೃತಃ ॥
ಚೇತನಾ ಧಾತುರಪ್ಯೇಕಃ ಸ್ಮೃತಃ ಪುರುಷ ಸಂಜ್ಞಕಃ ॥೧೬॥
(॥ ಚರಕ॥ ಶಾರೀರ॥ ಅ ೧ ಶ್ಲೋ ೧೬ ॥)

ಪಂಚ ಭೂತಗಳು, (ಆಕಾಶಾದಿಗಳು) ಆರನೇದು "ಚೇತನಾಧಾತು" ಪುರುಷ ಸಂಜ್ಞೆಯುಳ್ಳದ್ದು. ಅಥವಾ ಭೂತಾದಿಗಳೆಲ್ಲವೂ ಜಡವಾಗಿರುವದರಿಂದ " ಚೇತನಾಧಾತು " ಒಂದೇ ಎಲ್ಲದಕ್ಕೂ ಪ್ರೇರಕವಾದ್ದರಿಂದ ಪುರುಷ ಸಂಜ್ಞೆಯುಳ್ಳದ್ದು. ಚೇತನ ಧಾತುವೇ ಪುರುಷನೆಂದು ಅಭಿಪ್ರಾಯ ಪಡುತ್ತಾರೆ.

ಈ ಚೇತಕ (ಪ್ರೇರಕ) ಪುರುಷನಿಗೆ ಬೇರೆ ಬೇರೆ ಹೆಸರುಗಳು ಇವೆ

ಪುರುಷ, ಚೇತನಾ ಧಾತು, ಪ್ರಧಾನಂ, ಆತ್ಮಾ, ಕ್ಷೇತ್ರಜ್ಞ, ವಿಭು, ಇತ್ಯಾದಿಗಳು.

ಪುನಶ್ಚ ಧಾತು ಭೇದೇನ ಚತುರ್ವಿಂಶತಿಕಃ ಸ್ಮೃತಃ ॥
ಮನೋದಶೇಂದ್ರಿಯಾಣ್ಯರ್ಥಾಃ ಪ್ರಕೃತಿಶ್ಚಾಷ್ಟಧಾತುಕೀ॥
(ಚರಕ॥ ಶಾರೀರ॥ ಅ ೧ ಶ್ಲೋ ೧೭)

ಷಡ್ಧಾತುಕ ಪುರುಷನನ್ನು ಸಾಂಖ್ಯ ಮತದಂತೆ ಚತುರ್ವಿಂಶತಿತತ್ವಾತ್ಮಕವಾಗಿ, ಅನುಸರಿಸಿ ಹೇಳುತ್ತಾರೆ.

ಖಾದಿ ಪಂಚಭೂತಗಳನ್ನು ವಿಭಾಗಿಸಿ, ಮನಸ್ಸು, ಹತ್ತು ಇಂದ್ರಿಯಗಳು, ಇಂದ್ರಿಯ ವಿಷಯಗಳು, (ಶಬ್ದಾದಿಗಳು) ಅವ್ಯಕ್ತಾದಿ ಪ್ರಕೃತಿಗಳು, ಹೀಗೆ ಚತುರ್ವಿಂಶತಿ ತತ್ವಗಳನ್ನು ವಿವರಿಸಿದ್ದಾರೆ. ಅವುಗಳಿಗೆ ಪ್ರೇರಕ (ಕ್ಷೇತ್ರಜ್ಞ) ನನ್ನು ಸಮಾವೇಶ ಮಾಡಿ, ಚತುರ್ವಿಂಶತಿ ತತ್ವಾತ್ಮಕ ಪುರುಷನನ್ನು ಉದಹರಿಸಿದ್ದಾರೆ.

ಬುದ್ಧೀಂದ್ರಿಯ ಮನೋಽರ್ಥಾನಾಂ ವಿದ್ಯಾದ್ಯೋಗಧರಂ ಪರಂ॥ ಚತುರ್ವಿಂಶತಿಕೋಹ್ಯೇಷ ರಾಶಿಃ ಪುರುಷಸಂಜ್ಞಕಃ॥

(॥ ಚರಕ॥ ಶಾರೀರ॥ ಅ ೧ ಶ್ಲೋ. ೬೫ ॥)

ಬುದ್ಧೀಂದ್ರಿಯ ಮನಸ್ಸು ಇವುಗಳಿಗೂ ಮತ್ತು (ಇವುಗಳಿಂದ ಗ್ರಹಿಸಲ್ಪಡಕ್ಕೆ) ವಿಷಯಕ್ಕೂ ಧಾರಕವು. ಜಗತ್ತಿನ ಉತ್ಪತ್ತಿಕಾರಕ ಅವ್ಯಕ್ತದಿಂದ ಭಿನ್ನವೆಂದು ತಿಳಿಯಬೇಕು. ಹೀಗೆ ೨೪ ತತ್ವಗಳ ಸಮುದಾಯ ಯುಕ್ತವಾದದ್ದು ಪುರುಷನೆಂದು ಸಂಜ್ಞೆಯುಳ್ಳದ್ದಿರುವದು.

ವಿಶ್ವೋತ್ಪತ್ತಿಗೆ, ದೇಹಕ್ಕೆ, ಪ್ರೇರಕ ಆತ್ಮನು (ಪುರುಷ) ರಕ್ಷಕನು ಎನ್ನುವ ಸಿದ್ಧಾಂತವು ಸಾಂಖ್ಯವು. ಆತ್ಮನಿಂದಲೇ ದೇಹೋತ್ಪತ್ತಿ, ಅವನೇ ಕರ್ತೃವೆನ್ನುವದು ವೇದಾಂತ ಶಾಸ್ತ್ರದ ವಿವರಣೆಯು.

ಕೃತಂ ಮೃದ್ದಂಡಚಕ್ರೈಶ್ಚ ಕುಂಭಕಾರಾದ್ಯಪೇಕ್ಷಯಾ ॥
ಕೃತಂಮೃತ್ತೃಣಕಾಷ್ಠೈಶ್ಚ ಗೃಹಕಾರಾದ್ಯಪೇಕ್ಷಯಾ॥೪೩॥

ಯೋವದೇತ್ಸವದೇದ್ದೇಹಂ ಸಂಭೂಯೈಕರಣೈಃ ಕೃತಂ ॥
ವಿನಾಕರ್ತಾರ ಮಜ್ಞಾನಾದ್ಯುಕ್ತ್ಯಾಗಮ ಬಹಿಷ್ಕೃತಃ ॥೪೪॥

(॥ಚರಕ॥ ಶಾರೀರ ಅ ೧ ಶ್ಲೋ ೪೩॥)

ಮಣ್ಣು ತಿಗರಿ ಇವುಗಳಿಂದ ಕುಂಬಾರನಿಲ್ಲದೆ, ಗಡಿಗೆಯು ಮಾಡಲ್ಪಟ್ಟಿರುತ್ತದೆ. ಇದರಂತೆ ಮಣ್ಣು ಹುಲ್ಲು ಕಟ್ಟಿಗೆಗಳಿಂದ ಮನೆಕಟ್ಟುವವನಿಲ್ಲದೆ, ಮನೆಯು ನಿರ್ಮಿತವಾಗಿದೆಯೆಂದು ಯಾವನು ಹೇಳುವನೋ, ಅವನು ಯುಕ್ತಿ ಆಗಮಾದಿಗಳನ್ನು ಅರಿಯದೆ ಅಜ್ಞಾನದಿಂದ, ಕರ್ತೃವಿಲ್ಲದೆ ಎಲ್ಲ ಸಾಧನಗಳು ಹೊಂದಿಕೊಂಡು ಜಗತ್ತು ರಚಿಸಲ್ಪಟ್ಟಿತೆಂದು ಹೇಳಬಹುದು.

ಸಾರಾಂಶವೇನೆಂದರೆ:-ಎಲ್ಲಸಾಧನಗಳಿದ್ದರೂಕುಂಬಾರನಿಲ್ಲದೆ,ಮನೆಯನ್ನು ಕಟ್ಟುವವನಿಲ್ಲದೆ, ಗಡಿಗೆ ಮನೆಗಳು ಆಗಲಾರವೋ? ಅದರಂತೆ ಎಲ್ಲ ಸಾಧನಗಳಿದ್ದರೂಕರ್ತೃ(ಪುರುಷ)ಇಲ್ಲದೆ,ಜಗತ್ತುವ ತ್ತುದೇಹವುಆಗಲಾರದು. ಮೇಲಿನ ಯುಕ್ತಿ ಅಥವಾ ಆಗಮ ಇವುಗಳಿಂದ, ನಿಶ್ಚಯವಾಗಿ ಕರ್ತೃವು ಇರಲೇಬೇಕೆಂದು ಸಿದ್ಧವಾಗುತ್ತದೆ. ಆದರೆ ಯುಕ್ತಿ ಆಗಮಗಳನ್ನು ಬಿಟ್ಟು ಆಗೋಚರವಾದ ಆತ್ಮನನ್ನು(ಕರ್ತೃವನ್ನು)ನಿರ್ಧರಿಸಲುಸಾಧ್ಯವಾಗಲಾರದು.

ಕಾರಣಂ ಪುರುಷಃ ಸರ್ವೈಃ ಪ್ರಮಾಣೈರುಪಲಭ್ಯತೇ ॥
ಯೇಭ್ಯಃ ಪ್ರಮೇಯಂ ಸರ್ವೇಭ್ಯಃ ಆಗಮೇಭ್ಯಃ
ಪ್ರಮೀಯತೇ ॥೪೫॥
(॥ಚರಕ॥ ಶಾರೀರ॥ ಅ ೧ ಶ್ಲೋ. ೪೫॥)

ಈ ಹಿಂದೆ ಹೇಳಿದಂತೆ (೪೪ನೆಯ ಶ್ಲೋಕದಲ್ಲಿ) ಎಲ್ಲ ಪ್ರಮಾಣಗಳಿಂದಲೂ, ರಚಿಸಲ್ಪಟ್ಟಿರುವ ದೇಹಾದಿಗಳಿಗೆ ಕಾರಣಾತ್ಮಕ ಆತ್ಮನು ಇರುವನೆಂದು ಸಿದ್ಧವಾಗುತ್ತದೆ ಈ ದೇಹಾದಿಗಳಿಗೆ ಕಾರಣ ಪುರುಷನನ್ನು ಯುಕ್ತ್ಯಾದಿಗಳ ಸಹಾಯದಿಂದ ಪ್ರಮಾಣಿಸಲು, ಬೋಧವಾಗುತ್ತದೆ. ಅಥವಾ ಇಂಥ ಯುಕ್ತ್ಯಾದಿಗಳಿಂದ ವಿಶದವಾಗಿ ವಿವೇಚಿಸಿರುವ ಆಗಮಾದಿಗಳಿಂದಲೂ, ವಿಮರ್ಶಿಸಿ ಕಾರಣಪುರುಷನನ್ನು ತಿಳಿಕೊಳ್ಳಬೇಕು. ಇದರ ಹೊರತಾಗಿ ಅನ್ಯಮಾರ್ಗವಿಲ್ಲ. ಯಾಕಂದರೆ ಆತ್ಮವು, ಚಾಕ್ಷುಷ ಪ್ರತ್ಯಕ್ಷ ವಿಷಯವಲ್ಲ.

ಅನಾದಿಃ ಪುರುಷೋನಿತ್ಯೋ ವಿಪರೀತಸ್ತು ಹೇತುಜಃ ॥
ಸದಕಾರಣವನ್ನಿತ್ಯಂ ದೃಷ್ಟಂ ಹೇತುಜಮನ್ಯಥಾ ॥
(॥ ಚರಕ ॥ ಶಾರೀರ ॥ ಅ ೧ ಶ್ಲೋ. ೫೯ ॥)

ಅನಾದಿಯಾದ ಪೃಥಿವ್ಯಾದಿಗಳ ಉತ್ಪತ್ತಿಗೆ ಕಾರಣವಲ್ಲದ, ಯಾವಾಗಲೂ ಒಂದೇ ಸ್ಥಿತಿಯಲ್ಲಿರತಕ್ಕ (ಸತ್) ನಿಷ್ಕ್ರಿಯವಾದದ್ದಕ್ಕೆ, ಪರಮಾತ್ಮನೆಂದು ಹೇಳುತ್ತಾರೆ ವಿಪರೀತವಾದ ಚತುರ್ವಿಂಶತಿತತ್ವಯುಕ್ತವಾಗಿ ಪುರುಷನು, ಕಾರಣರೂಪನು ಕಾರಣಯುಕ್ತವಾದವನಿರುತ್ತಾನೆ ಆದ್ದರಿಂದಲೇ ಹೇತುಜನೆಂದುಅನ್ನುವರು ಅಕಾರಣವು ನಿಷ್ಕ್ರಿಯವಾದದ್ದು ಹೇತುಜವು ಕಾರ್ಯರೂಪ ದೇಹಾದಿಯುಕ್ತವಿರುವದರಿಂದ, ವ್ಯಕ್ತವಾಗಿ ವಂಧದು ಇರುತ್ತದೆ. ಆದ್ದರಿಂದ ಕಾರಣವುಳ್ಳದ್ದು, ಅಕಾರಣವೆಂಬ, ಎರಡು ರೀತಿ ಭೇದ ಮಾಡಿದ್ದಾರೆ

ಅನಾದಿಶ್ಚ ಪುರುಷೋಽವ್ಯಕ್ತರೂಪ ಆತ್ಮಶಬ್ದಾಭಿಧೇಯಃ
(ಸುಶ್ರುತ ಟೀಕಾ)

ಅನಾದಿ ನಿಷ್ಕ್ರಿಯ (ಅಕಾರಣ) ಪುರುಷ ಸಂಜ್ಞಕವು, ಅವ್ಯಕ್ತ ಸ್ವರೂಪವುಳ್ಳದ್ದು ಅದಕ್ಕೆ ಆತ್ಮನೆಂಬ ಹೆಸರು.

ಪ್ರಕೃತಿ ಪುರುಷರಲ್ಲಿಯ ಸಮವೈಷಮ್ಯ ಧರ್ಮ

ಅತಊರ್ಧ್ವಂ ಪ್ರಕೃತಿಪುರುಷಯೋಃ ಸಾಧರ್ಮ್ಯ ವೈಧರ್ಮ್ಯ ವ್ಯಾಖ್ಯಾಸ್ಯಾಮಃ ॥
ತದ್ಯಥಾ— ಉಭಾವಪ್ಯನಾದೀ, ಉಭಾವಪ್ಯನಂತೌ, ಉಭಾವಪ್ಯಲಿಂಗೌ, ಉಭಾವಪಿವಿತ್ಯೌ, ಉಭಾವಪ್ಯನಪರೌ, ಉಭೌಚ ಸರ್ವಗತಾವಿತಿ,॥ (ಸುಶ್ರುತ । ಶಾರೀರ ॥ ಅ. ೧. ಸೂ. ೯)

ಪ್ರಕೃತಿಯಂದರೆ:- ಅವ್ಯಕ್ತವು **ಪುರುಷನೆಂದರೆ:-** ಆತ್ಮನು. **ಸಾಧರ್ಮ್ಯಂ:-** ಪ್ರಕೃತಿ ಪುರುಷರಲ್ಲಿಯ ಸಮಾನವಾದ ಧರ್ಮ (ಹೋಲಿಕೆಯಾಗುವದು) ಇದಕ್ಕೆ ಸಾಧರ್ಮ್ಯವೆಂಬ ಹೆಸರು. **ವೈಧರ್ಮ್ಯ:-** ಹೋಲಿಕೆಯಾಗದ ವಿಷಮಧರ್ಮಕ್ಕೆ (ವಿಸದೃಶಧರ್ಮ) ವೈಧರ್ಮ್ಯವೆಂದು ಹೇಳುತ್ತಾರೆ.

ಪ್ರಕೃತಿ ಪುರುಷ ಇವರಲ್ಲಿಯ ಸದೃಶ ವಿಸದೃಶ ಧರ್ಮಗಳು:- ಪ್ರಕೃತಿ ಪುರುಷ ಇಬ್ಬರೂ ಅವಿಯಿಲ್ಲದವರು. ಅಂದರೆ ಹುಟ್ಟದವರಲ್ಲ; ನಿತ್ಯವಾಗಿಯೂ ಇದ್ದವರು. ನಾಶವಿಲ್ಲದವರು. ಯಾವದೇ ಲಕ್ಷಣದಿಂದ (ಗುರುತು) ತಿಳಿಯಲಿಕ್ಕೆ ಬಾರದವರು.(ಅಲಿಂಗ) ಅಂದರೆ ಅಗೋಚರವಾದವರು ನಿತ್ಯವಾಗಿರುವವರು, ಎಂದೆಂದಿಗೂ ನಾಶವಾಗದವರು. ಇವರ ಹೊರತಾಗಿ ಬೇರೆ ಯಾವದೂ ಇಲ್ಲದಿರುವದರಿಂದ ಇವರೇ ಮುಖ್ಯರು. (ಅನಪರೌ); ಯಾಕಂದರೆ:- ಉತ್ಪನ್ನವಾದ ಮಹದಾದಿಗಳಿಗೆ ಇವರೇ ಮುಖ್ಯರು. ಮತ್ತು ಮಹದಾದಿಗಳಿಂದ ಭಿನ್ನವಾಗಿ, ಹೆಚ್ಚಿನವರಿದ್ದು, ಮಹದಾದಿ ಉತ್ಪನ್ನಕ್ಕೆ ಕಾರಣವಾದ್ದರಿಂದ ಶ್ರೇಷ್ಠವಾಗಿದ್ದಾರೆ. ಸರ್ವವನ್ನೂ ವ್ಯಾಪಿಸಿಕೊಂಡಿರುವರಿಂದ (ಸರ್ವಗತೌ) ಎಲ್ಲದರಲ್ಲಿಯೂ, ಎಲ್ಲೆಲ್ಲಿಯೂ ಬಿಡದೆ ವ್ಯಾಪಕವಾಗಿರುವವರು ಇವು ಪ್ರಕೃತಿ ಪುರುಷರಲ್ಲಿಯ ಸಮಾನ (ಸದೃಶ) ಧರ್ಮಗಳು.

ಅಸಮಾನ (ವಿಷಮ) ಧರ್ಮಗಳು

"ಏಕಾತು ಪ್ರಕೃತಿರಚೇತನಾ ತ್ರಿಗುಣಾ ಬೀಜ ಧರ್ಮಿಣೀ ಪ್ರಸವಧರ್ಮಿಣ್ಯ ಮಧ್ಯಸ್ಥ ಧರ್ಮಿಣೀಚೇತಿ"

(ಸುಶ್ರುತ ॥ ಶಾರೀರ ॥ ಅ. ೧ ಸೂ. ೪)

ಒಂದೇ ಒಂದಾದ **ಅವ್ಯಕ್ತ ಪ್ರಕೃತಿಯು,** ಚೇತನಾರಹಿತ (ಅಚೇತನಾ) ವಾದದ್ದು. ಸತ್ವರಜಸ್ತಮೋಗುಣವುಳ್ಳದ್ದು. ಮಹದಾದಿ ವಿಕಾರಗಳಿಗೆ ಬೀಜರೂಪ ಸ್ಥಿತಿಯುಳ್ಳದ್ದು, ಅಥವಾ ಜಗತ್ ಪ್ರಲಯ ಕಾಲದಲ್ಲಿ, ಪಂಚಮಹಾಭೂತ ಇಂದ್ರಿಯ ತನ್ಮಾತ್ರ, ಅಹಂಕಾರಮಹದಾದಿಗಳಿಗೆ ಆಧಾರಭೂತವಾಗಿ, ಮುಂದೆ ಅವುಗಳ ಉತ್ಪತ್ತಿಗಾಗಿ ಬೀಜರೂಪದಲ್ಲಿ ಅವುಗಳನ್ನು, ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಜಗತ್ತನ್ನು ಹುಟ್ಟಿಸಬೇಕೆಂಬ ಇಚ್ಛೆಯುಳ್ಳ ಪುರುಷನಿಂದ ಕೂಡಿ ಕ್ಷೋಭೆಯೊಂದಿ, ಮಹದಹಂಕಾರಾದಿ ಸ್ವರೂಪವುಳ್ಳ ಚರಾಚರಾತ್ಮಕ ಜಗತ್ತನ್ನು ಹುಟ್ಟಿಸುತ್ತದೆ. ಆದ್ದರಿಂದ "ಪ್ರಸವಧರ್ಮಿಣೀ" ಎಂದು ಅನ್ನುತ್ತಾರೆ. ಸತ್ವಾದಿಗುಣರಾಶಿಯುಳ್ಳದ್ದರಿಂದ,

ಸುಖಾದಿರೂಪದಿಂದ, ಅಂದರೆ:— "ಸುಖೀ" ಸುಖವನ್ನು ಇಚ್ಛಿಸುತ್ತಲೂ, "ದುಃಖಿಯು" ದುಃಖವನ್ನು ದ್ವೇಷಿಸುತ್ತಲೂ, ಸಾಮ್ಯ ಸ್ಥಿತಿಯಲ್ಲಿದೇ ಇರುವಂತಾಗುವದು, ಆದಕ್ಕೇ "ಅಮಧ್ಯಸ್ಥಧರ್ಮಿಣೀ" ಎಂಬ ಹೆಸರು.

ಮಧ್ಯಸ್ಥವೆಂದರೆ:— ಸತ್ವರಜಸ್ತಮೋಗುಣಗಳು ಪ್ರಕೃತಿಯಲ್ಲಿ ಸಮಾನ ಸ್ಥಿತಿಯಲ್ಲಿ ಏನೂ ವ್ಯತ್ಯಾಸ ಹೆಚ್ಚುಕಡಿಮೆಯಾಗದಿರುವದು, ಪುರುಷನ ಯೋಗದಿಂದ ಕ್ಷೋಭಹೊಂದಲು ವೈಷಮ್ಯವಾಗಿ, ಅಮಧ್ಯಸ್ಥಧರ್ಮವುಳ್ಳದ್ದು ಪ್ರಕೃತಿಯು ಆಗುತ್ತದೆ.

"ಬಹುನಸ್ತು ಪುರುಷಾಶ್ಚೇತನಾವಂತೋಽಗುಣಾಬೀಜ
ಧರ್ಮಾಣೋಽಪ್ರಸವಧರ್ಮಾಣೊ ಮಧ್ಯಸ್ಥಧರ್ಮಾಣಶ್ಚೇತಿ"
(ಸುಶ್ರುತ ॥ ಶಾರೀರ ಅ ೧ ಸೂ ೯)

ಅನೇಕ ಪುರುಷ (ಜೀವ) ಗಳು, ಚೇತನಾವುಳ್ಳವುಗಳಾದ್ದು, ಸತ್ವಾದಿಗುಣಗಳಿಲ್ಲದಿರುವವುಗಳು, ಯಾಕಂದರೆ ಸತ್ವಾದಿಗುಣಗಳು ಪ್ರಕೃತಿಯಲ್ಲಿಯೇ ಇರುವದರಿಂದ ಪುರುಷನು ಅಗುಣನು. ಮಹದಾದಿಗಳು ಪ್ರಕೃತಿಯಲ್ಲಿಯೇ ಇರುವದರಿಂದ ಪುರುಷನು ಬೀಜಧರ್ಮವಿಲ್ಲದವನು, ಪ್ರಸವಧರ್ಮವಿಲ್ಲದವನು. ಸತ್ವಾದಿಗುಣಗಳಯೋಗವಿಲ್ಲದ್ದರಿಂದ, ಪ್ರೀತಿ ಅಪ್ರೀತಿ ವಿಷಾದ ಇವುಗಳಿಲ್ಲದೆ, ಇಚ್ಛಾದ್ವೇಷಶೂನ್ಯನಾಗಿರುವನು. ಆದ್ದರಿಂದ ಮಧ್ಯಸ್ಥಧರ್ಮವುಳ್ಳವನೆಂದು ಹೇಳುತ್ತಾರೆ.

ದೇಹನಾಶದ ನಂತರ ಜೀವದ ಸ್ಥಿತಿಯು

ಪುರುಷಃ ಪ್ರಲಯೇಚೇಷ್ಟೈಃ ಪುನರ್ಭಾವೈರ್ವಿಯುಜ್ಯತೆ
ಅವ್ಯಕ್ತಾದ್ವ್ಯಕ್ತತಾಂಯಾತಿವ್ಯಕ್ತಾದವ್ಯಕ್ತತಾಂ ಪುನಃ ॥
ರಜಸ್ತಮೋಭ್ಯಾಂ ಆವಿಷ್ಟಃ ಚಕ್ರವತ್ ಪರಿವರ್ತತೇ ॥
(ಚ ಶಾ. ಅ. ೧ ಶ್ಲೋ ೬೭॥)

ಪುರುಷನು (ಜೀವವು) ದೇಹನಾಶ ಕಾಲದಲ್ಲಿ, ಕರ್ಮಗಳಿಂದ ಸಂಸ್ಕಾರ ರೂಪವಾದ ಕ್ರಿಯಾಭಾವ ಇವುಗಳಿಂದ ಕೂಡಿದವನಾಗುತ್ತಾನೆ.

ಇದಕ್ಕೆ ಸೂಕ್ಷ್ಮ (ಲಿಂಗ) ಶರೀರವೆಂತಲೂ ಅನ್ನುತ್ತಾರೆ. ಪುನಃ ಹುಟ್ಟ ಬೇಕಾದರೆ ಇಲ್ಲಿವುಗಳಿಗೆ ಯೋಗ್ಯವಾದ ದೇಹವನ್ನು ಪಡೆಯುತ್ತಾನೆ. ನಂತರ ಸೂಕ್ಷ್ಮ ಶರೀರವು ಆವಾವ ಸಂಸ್ಕಾರ ಕ್ರಿಯಾಭಾವಾದಿಗಳಿಂದ ಕೂಡಿ ವ್ಯಕ್ತವಾದದ್ದಾಗುತ್ತದೆ. ಅರ್ಥಾತ್ ಸೂಕ್ಷ್ಮ ಶರೀರಾನುಗುಣ ದೇಹ ಪಡೆದವನಾಗಿ ಅವಕ್ಕನುಗುಣವಾದ ದುಷ್ಕರ್ಮ ಸತ್ಕರ್ಮ ಇವುಗಳಲ್ಲಿ ನಿರತನಾಗುವನು. ಇದರಂತೆ ಪುನಃ ಪುನಃ ವ್ಯಕ್ತದಿಂದ ಅವ್ಯಕ್ತನೂ, ಅವ್ಯಕ್ತದಿಂದ ವ್ಯಕ್ತನೂ, ಆಗುತ್ತಾಗುತ್ತ ರಜೋಗುಣ ತಮೋಗುಣಗಳಿಂದ ಕೂಡಿದವನಾಗಿ, ಚಕ್ರದಂತೆ ತಿರುಗುತ್ತಿರುತ್ತಾನೆ ಇದರಂತೆ ಪ್ರಲಯವಾದಾಗ ಎಲ್ಲ ಜೀವಗಳು, ತಮ್ಮ ತಮ್ಮ ಕ್ರಿಯಾಭಾವಗಳಿಂದ ಯುಕ್ತವಾದವುಗಳಾಗಿ, ಪುನಃ ಸೃಷ್ಟಿಯಾದಾಗ ತಮಗನುಗುಣವಾದ ದೇಹವನ್ನು ಪಡೆಯುತ್ತವೆ

ನಹಿಕರ್ಮ ಮಹತ್‌ಕಿಂಚಿತ್ ಫಲಂಯಸ್ಯ ನಭುಜ್ಯತೇ ॥
ಕ್ರಿಯಾಘ್ನಾಃ ಕರ್ಮಜಾರೋಗಾಃ ಪ್ರಶಮಂಯಾಂತಿ
ತತ್‌ಕ್ಷಯಾತ್ ॥

(॥ ಚರಕ॥ ಶಾರೀರ॥ ಅ ೧ ಶ್ಲೋ. ೧೧೭ ॥)

ತಾನು ಮಾಡಿದ ಕರ್ಮಕ್ಕನುಸಾರವಾಗಿ ಮಹತ್ತರವಾದ, ಅಥವಾ ಸ್ವಲ್ಪ ಕರ್ಮಾನುಗುಣ ಫಲವನ್ನು ಭೋಗಿಸದೆ ಇದ್ದವನಿಗೆ, ಚಿಕಿತ್ಸಾದಿ ಕರ್ಮವಿಲ್ಲ. ಚಿಕಿತ್ಸೆಯು ಫಲಕೊಡಲಾರದೆಂಬರ್ಥ. ಯಾಕಂದರೆ ದುಷ್ಕರ್ಮದಿಂದುಂಟಾದ ರೋಗಗಳು, ರೋಗ ಪ್ರತೀಕಾರ ಚಿಕಿತ್ಸಾ ಕ್ರಿಯೆಗಳನ್ನು ನಾಶಪಡಿಸತಕ್ಕವುಗಳು. ಕರ್ಮಫಲವಾದ ದುಃಖ ವೇದನೆಗಳನ್ನು ಅನುಭವಿಸಿ ಕರ್ಮಕ್ಷಯವಾದ ನಂತರ ಕರ್ಮಜ ರೋಗಗಳು ಶಾಂತವಾಗುತ್ತವೆ. **"ಕರ್ಮಕ್ಷಯಶ್ಚ ಕರ್ಮಫಲಭೋಗಾದೇವ ಪರಂಭವತಿ"** ಕರ್ಮ ಫಲವನ್ನು ಭೋಗಿಸಿದ ನಂತರವೇ ಕರ್ಮ ಕ್ಷಯವಾಗುತ್ತದೆಂದು ಹೇಳಿದ್ದರಿಂದ, ಕರ್ಮಜವ್ಯಾಧಿಗಳಲ್ಲಿ ಚಿಕಿತ್ಸಾ ಕರ್ಮಗಳು ಫಲದಾಯಕವಲ್ಲವು. ಆದ್ದರಿಂದ ಅದನ್ನು ತಿಳಿಯಲಿಕ್ಕಾಗಿಯೇ ಜೀವವು, ದೇಹಾವಸಾನ ಕಾಲದಲ್ಲಿ, ಕರ್ಮಗಳ ಸಂಸ್ಕಾರ ರೂಪ ಕ್ರಿಯಾ ಭಾವನೆಗಳಿಂದ ಯುಕ್ತವಾಗುವದನ್ನು ವಿಮರ್ಶಿಸಿ ಹೇಳಿದ್ದಾರೆ.

ನಿರ್ದಿಷ್ಟಂ ದೈವಶಬ್ದೇನಕರ್ಮಯತ್ಪೌರ್ವದೇಹಿಕಂ ॥
ಹೇತುಸ್ತದಪಿಕಾಲೇನರೋಗಾಣಾಮುಪಲಭ್ಯತೇ ॥
(॥ ಚರಕ॥ ಶಾರೀರ॥ ಅ ೧ ಶ್ಲೋ. ೧೯ ।)

ಪೂರ್ವ ಜನ್ಮದಲ್ಲಿ ಮಾಡಿದ ಕರ್ಮವು "ದೈವವೆಂದು" ಹೇಳಲ್ಪಟ್ಟಿರುತ್ತದೆ. ದೈವವೆಂದು ಹೇಳಲ್ಪಟ್ಟ ಪೂರ್ವಜನ್ಮ ಕೃತ ಕರ್ಮವು, ಕಾಲಾನುಸಾರವಾಗಿ ಪಕ್ವ ಹೊಂದಿ ರೋಗಗಳಿಗೆ ಕಾರಣವಾಗುತ್ತದೆ. ಹೀಗೆ ರೋಗಕ್ಕೆ ಕಾರಣವಾದಾಗ ಕರ್ಮಜ ವ್ಯಾಧಿಯೆಂದು ಗೊತ್ತಾಗುತ್ತದೆ.

ಪುರುಷ ವಿಷಯದಲ್ಲಿ:– ಸುಶ್ರುತಾಚಾರ್ಯರು ಹೇಳಿದ ಅಭಿಪ್ರಾಯವು ವಿವರಿಸಲ್ಪಡುತ್ತದೆ (ಸುಶ್ರುತ॥ ಸೂ॥ ಅ ೧).

"ಪಂಚಮಹಾಭೂತ ಶರೀರಿ ಸಮುದಾಯಃ ಪುರುಷಃ" ಪಂಚ ಮಹಾಭೂತಗಳ ಸ್ವರೂಪವಾದ ದೇಹ ಹೊಂದಿದವನು, ದೇಹಕ್ಕೆ ಚೈತನ್ಯಾತ್ಮಕನಾಗಿರುವವನು ಪುರುಷನು

ಹೀಗೆಂದು ಹೇಳಿರುವದರಿಂದ ದೇಹದಲ್ಲಿ ಯಾವ ಯಾವ ಭಾಗವು ಯಾವ ಯಾವ ಭೂತಾದಿಗಳ ಸ್ವರೂಪವುಳ್ಳದ್ದೆಂದು ಉದಹರಿಸುತ್ತಾರೆ ಆಕಾಶಾದಿ ಪಂಚಮಹಾಭೂತಗಳ ವಿಶೇಷದಿಂದುಂಟಾದ ಆವಾವ ಶರೀರ ಭಾಗಗಳನ್ನೂ ಗುಣಗಳನ್ನೂ ಆ ಭೂತಾದಿಗಳ ಹೆಸರಿನಿಂದಲೇ ಹೇಳುತ್ತಾರೆ.

ದೇಹದಲ್ಲಿಯ ಪಾಂಚಭೌತಿಕ ವಿಭಾಗ

(೧) ಆಂತರಿಕ್ಷಾ:— "ಶಬ್ದಃ ಶಬ್ದೇಂದ್ರಿಯಂ ಸರ್ವಛಿದ್ರ ಸಮೂಹೋ ವಿವಿಕ್ತತಾಚ ॥ (ಸುಶ್ರುತ॥ ಶಾರೀರ ಅ ೧ ಸೂ. ೧೯)

ಶಬ್ದವು, ಶಬ್ದೇಂದ್ರಿಯಗಳು(ಕಿವಿ) ದೇಹದಲ್ಲಿರತಕ್ಕ ಎಲ್ಲಾ ಛಿದ್ರಗಳು, ಮತ್ತೂ ಪೊಳ್ಳು ಭಾಗಗಳೆಲ್ಲವೂ, ಆಕಾಶ ಸಂಬಂಧಿಯಾದವುಗಳು.

(೨) ವಾಯವ್ಯಾಸ್ತು:— "ಸ್ಪರ್ಶಃ ಸ್ಪರ್ಶೇಂದ್ರಿಯಂ ಸರ್ವ ಚೇಷ್ಟಾಸಮೂಹಃ ಸರ್ವಶರೀರ ಸ್ಪಂದನಂ ಲಘುತಾಚ"

ಸ್ಪರ್ಶಗುಣವು, ಸ್ಪರ್ಶೇಂದ್ರಿಯವು (ಚರ್ಮ). ದೇಹದಲ್ಲಿಯ ಸರ್ವ ಚೇಷ್ಟಾಗಳು (ಕ್ರಿಯಾ) ಶರೀರದ ಚಲನವಲನಾದಿ ಕರ್ಮಗಳು, ಹಗುರು ಇರುವಂತಹವುಗಳು, ವಾಯುವಿನ ಸಂಬಂಧಿಯಾದಂಧವುಗಳು.

(೩) ತೈಜಸಾಸ್ತು:— "ರೂಪಂ ರೂಪೇಂದ್ರಿಯಂ ವರ್ಣಃ ಸಂತಾಪೋಭ್ರಾಜಿಷ್ಣುತಾಪಕ್ತಿರಮರ್ಷಃ ತೈಕ್ಷ್ಣ್ಯಂ ಶೌರ್ಯಂಚ॥"

ರೂಪವು, ರೂಪವನ್ನು ಗ್ರಹಿಸತಕ್ಕ ಇಂದ್ರಿಯಗಳು (ಕಣ್ಣುಗಳು). ಕೆಂಪು ಬಿಳಿ ಮೊದಲಾದ ಬಣ್ಣಗಳು, ಉಷ್ಣತೆಯು, ಬೆಳಕು, (ಪ್ರಕಾಶ) ದೇಹದಲ್ಲಿಯ ಆಹಾರ ರಸಾದಿಗಳನ್ನು ಅವಾವ ಸ್ಥಾನದಲ್ಲಿದ್ದು ಕೊಂಡು ಪಚನ ಮಾಡುವದು, ಸಿಟ್ಟು, ತೀಕ್ಷ್ಣತೆಯು, ಶೌರ್ಯ ಇವುಗಳು ತೇಜಸ್ಸಿನ ಗುಣಗಳು.

(೪) ಆಪ್ಯಾಸ್ತು:— "ರಸೋರಸನೇಂದ್ರಿಯಂ, ಸರ್ವದ್ರವಸಮೂಹೋಗುರುತಾಶೈತ್ಯಂ ಸ್ನೆಹೋರೇತಶ್ಚ"

ರಸವು (ದ್ರವ ರೂಪವು) ರಸನೇಂದ್ರಿಯವು (ನಾಲಿಗೆ) ಎಲ್ಲಾ ದ್ರವ ರೂಪ ಸಮೂಹಗಳು, ಅಂದರೆ:— ದೋಷ ಧಾತು ಮಲಗಳಲ್ಲಿಯ ಸ್ರವಿಸತಕ್ಕ ದ್ರವ ರೂಪವು, ಜಡತ್ವವು, ಶೀತ, ಜಿಗುಟಾಗುವಿಕೆಯು, ರೇತಸ್ಸು, ಇವುಗಳು ಜಲೀಯ (ಜಲಸಂಬಂಧ) ವಾದವುಗಳು.

(೫) ಪಾರ್ಥಿವಾಸ್ತು:— "ಗಂಧೋಗಂಧೇಂದ್ರಿಯಂ ಸರ್ವ ಮೂರ್ತ ಸಮೂಹೋಗುರುತಾಚ ॥

ಗಂಧವು, (ಸುವಾಸನೆ ದುರ್ವಾಸನೆ) ಗಂಧವನ್ನು ಗ್ರಹಿಸುವ ಇಂದ್ರಿಯ (ಮೂಗು) ಎಲ್ಲಾ ವಸ್ತುತಃ ಕಣ್ಣಿಗೆ ಕಾಣುವ ಇಂದ್ರಿಯಗಳು, ಶಿರಾ, ಸ್ನಾಯು, ಧಮನೀ, ಎಲಬು, ಮಾಂಸಾದಿ ದೃಶ್ಯ ಸ್ಥಿರ ದ್ರವ್ಯಗಳು, ಮತ್ತು ದೋಷ ಧಾತು ಮಲಗಳಲ್ಲಿಯ ಕಠಿಣ ಭಾಗಗಳು; ಪೃಥಿವಿಯ ಸಂಬಂಧವಾದವುಗಳು.

ಹೀಗೆ ದೇಹದಲ್ಲಿಯ ಪಾಂಚಭೌತಿಕ ಭಾಗಗಳನ್ನು ವಿವರಿಸಿರುವರು

ಸಾತ್ವಿಕಾದಿ ಗುಣಗಳ ಸ್ವರೂಪಗಳು

೧. ಸಾತ್ವಿಕಾಃ— ಆನೃಶಂಸ್ಯಂ ಸಂವಿಭಾಗರುಚಿತಾತಿತಿಕ್ಷಾ ಸತ್ಯಂ ಧರ್ಮಆಸ್ತಿಕ್ಯಂ ಜ್ಞಾನಂ ಬುದ್ಧಿಃ ಮೇಧಾಸ್ಮೃತಿಧೃತಿರನಭಿಷಂಗಶ್ಚ” (ಸುಶ್ರುತ॥ ಶಾರೀರ॥ ಅ ೧ ಸೂ. ೧೮)

೧. ಸಾತ್ವಿಕ ಗುಣವು

ಮನೆ ಹಾಳು ಮಾಡುವ ಗುಣವಿಲ್ಲದಿರುವದು; (ಕ್ರೂರ ಕರ್ಮವಿಲ್ಲದಿರುವದು) ಸಾತ್ವಿಕ ಆಹಾರ ನಡತೆಗಳಲ್ಲಿ ಪ್ರೀತಿಯಿರುವದು. ಸಹನತೆಯು. (ಕ್ಷಮೆಯು) ಮನೋಹರವಾದ ಹಿತವುಳ್ಳ ವಸ್ತು ಸ್ಥಿತಿಯನ್ನೇ ಮಾತಾಡುವದು. ಕಾಯವಾಕ್‌ಮನಸ್ಸಿನಿಂದ ಒಳ್ಳೇ ನಡತೆ ಇರೂಣ, ಧರ್ಮಪಾರಲೌಕಿಕ ನಂಬುವದು; ಆತ್ಮಜ್ಞಾನ, ಆಗಿಂದಾಗ ವಿಷಯವನ್ನು ಗ್ರಹಿಸತಕ್ಕ ಬುದ್ಧಿ, ಗ್ರಂಥಾದಿ ವಿಷಯಗಳನ್ನು ನಿರ್ಣಯ ಮಾಡುವ ಶಕ್ತಿಯು, ಮನೋನಿಗ್ರಹಮಾಡುವದು, ಮೊದಲು ಅನುಭವಿಸಿದ ಅಥವಾ ಒಮ್ಮೆ ಗ್ರಹಿಸಿದ್ದನ್ನೂ ಕೂಡಾ ನೆನಪಿಡುವದು, ಫಲಾಪೇಯ ಲೋಭವಿಲ್ಲದೆ ಕರ್ಮ ಮಾಡುವ ಗುಣವು, ಇವು ಸಾತ್ವಿಕ ಶರೀರದ ಭಾವಗಳು.

೨. ರಾಜಸ ಗುಣ

ರಾ ಜ ಸಾ ಸ್ತು :— ದುಃಖಬಹುಲತಾಽನಶಿಲತಾಽಧೃತಿರಹಂಕಾರ ಆನೃತಿಕತ್ವಮಕಾರುಣ್ಯಂ ದಂಭೋಮಾನೋ ಹರ್ಷಃ ಕಾಮುಃ ಕ್ರೋಧಶ್ಚ”

ಬಹು ವಿಧವಾದ ದುಃಖ ಕಾರಣಗಳಿಂದ ಕೂಡಿರುವದು, ಸಂಚಾರ ಸ್ವಭಾವ. ಮನೋನಿಗ್ರಹವಿಲ್ಲದಿರುವದು, (ಮನಸ್ಸಿಗೆ ಹೆದರಿಕೆಯಾಗೋಣ) ಅಹಂಕಾರ, ಸುಳ್ಳು ಮಾತಾಡುವ ಗುಣವು, ಕರುಣೆಯಿಲ್ಲದಿರುವದು(ನಿರ್ದಯತ್ವ) ಕುಹಕ ವೃತ್ತಿ, ತಾನು ಹೆಚ್ಚಿನವನೆಂಬ ಬುದ್ಧಿ, ಸುಖಾಭಿಲಾಷೆಯು, ಕಾಮುಕತೆ, ಸಿಟ್ಟು, ಇವು ರಾಜಸ ಗುಣಗಳು.

೩. ತಾಮಸ ಗುಣ

ತಾಮಸಾಸ್ತು:— ವಿಷಾದಿತ್ವಂ ನಾಸ್ತಿಕ್ಯಮಧರ್ಮಶೀಲತಾ ಬುದ್ಧೇರ್ನಿರೋಧೋಽಜ್ಞಾನಂ ದುರ್ಮೇಧಸ್ತ್ವಂ ಅಕರ್ಮಶೀಲತಾ ನಿದ್ರಾಲುತ್ವಂಚೇತಿ”

ವಿಷಣ್ಣವಾಗಿರುವದು, ಅಥವಾ ಮೂಢತ್ವ, ಧರ್ಮ ಪಾರಲೌಕಿಕ ಬುದ್ಧಿಯಿಲ್ಲದಿರುವದು, ಕೆಟ್ಟ ಕೆಲಸ ಅಧರ್ಮದಲ್ಲಿ ರುಚಿಯಿರುವಿಕೆ, ಜಡ ಬುದ್ಧಿಯು, ಆತ್ಮಜ್ಞಾನ ಮತ್ತೂ ವಿಜ್ಞಾನ ಇವೆರಡೂಯಿಲ್ಲದಿರುವದು, ದುಷ್ಟಬುದ್ಧಿಯು, ಕರ್ತವ್ಯವಾಡದೇ ಇರುವದು, ಅಧವಾ, ದುಷ್ಕೃತಿಯನ್ನು ಮಾಡುವದು. ಯಾವಾಗಲೂ ನಿದ್ರೆ ಮಾಡುವ ಸ್ವಭಾವವು, ಇವು ತಾಮಸ ಭಾವದ ಶರೀರ ಲಕ್ಷಣಗಳು.

ಸಾತ್ವಿಕಾದಿ ಗುಣಯುಕ್ತವಾದ ಪಂಚ ಭೂತಗಳು

ಯಾವ ಯಾವ ಭೂತಗಳಲ್ಲಿ ಸಾತ್ವಿಕಾದಿ ಯಾವ ಯಾವ ಗುಣಗಳಿರುತ್ತವೆಯೆಂಬುವದನ್ನು ಹೇಳುತ್ತಾರೆ.

ತತ್ರಸತ್ವಬಹುಲಮಾಕಾಶಂ, ರಜೋಬಹುಲೋವಾಯುಃ ಸತ್ವರಜೋಬಹುಲೋಽಗ್ನಿಃ, ಸತ್ವತಮೋಬಹುಲಾಆಪಃ ತಮೊಬಹುಲಾ ಪೃಥಿವೀತಿ” (ಸುಶ್ರುತ॥ ಶಾರೀರ॥ ಅ ೧ ಸೂ ೨೦)

ಆಕಾಶ ॥೧॥ ಪ್ರಕಾಶಕ (ಹೆಚ್ಚಿನದಾಗಿ ಪ್ರಕಟವಾಗುವ) ವಾದ್ದರಿಂದ, ಸತ್ವಗುಣ ಬಹಳವಂದದ್ದು ಇರುತ್ತದೆ.

ವಾಯು ॥೨॥ ಚಂಚಲಗುಣವಿರುವದರಿಂದ, ರಜೋಗುಣಾಧಿಕ್ಯವುಳ್ಳದ್ದು.

ಅಗ್ನಿ ॥೩॥ ಪ್ರಕಾಶಕ ಚಂಚಲ ಗುಣವಿರುವದರಿಂದ, ಸತ್ವರಜೋ ಗುಣಗಳ ಬಾಹುಲ್ಯವುಳ್ಳದ್ದು.

ಜಲ ॥೪॥ ಸ್ವಚ್ಛವಿರುವದರಿಂದ ಪ್ರಕಾಶಕ, ಆವರಣೆಯುಳ್ಳದ್ದರಿಂದ ಜಡ, ಹೀಗೆ ಸತ್ವ ತಮೋ ಗುಣಾಧಿಕ್ಯವುಳ್ಳದ್ದು ಜಲವು.

ಪೃಥಿವೀ ॥೫॥ ಕೇವಲ ಜಡ ಆವರಣವೂ, ಮಂದವಾದದ್ದಿರುವದರಿಂದಲೂ, ತಮೋಗುಣ ಬಹುಲವಾದದ್ದು ಪೃಥಿವಿಯು. ಕೇವಲ ತಮಸ್ಸಿನ ಬಹುಲತೆಯಿರುವದರಿಂದ ಇದು ಕನಿಷ್ಠವಾದದ್ದು ಇರುವದು.

ಸಾತ್ವಿಕಾದಿ ಗುಣಗಳ ಸ್ವರೂಪವನ್ನು ಹಿಂದೆ ಹೇಳಿರುತ್ತದೆ. ಅವುಗಳನ್ನು ಆವಾವ ಸತ್ವ ಮೊದಲಾದ ಗುಣಗಳಿಗೆ ಹೋಲಿಸಿ ತಿಳಿಯಬೇಕು.

ಆಯುರ್ವೇದ ಶಾಸ್ತ್ರದಲ್ಲಿಯ ಪುರುಷ ಸಂಜ್ಞೆಯು

ನಚಆಯುರ್ವೇದಶಾಸ್ತ್ರೇಷೂಪದಿಶ್ಯಂತಿ ಸರ್ವಗತಾಃ ಕ್ಷೇತ್ರ ಜ್ಞಾನಿತ್ಯಾಶ್ಚ; ಅಸರ್ವಗತೇಷುಚಕ್ಷೇತ್ರಜ್ಞೇಷುನಿತ್ಯಪುರುಷ ಖ್ಯಾಪಕಾನ್ ಹೇತೂನುದಾಹರಂತಿ, ಆಯುರ್ವೇದ ಶಾಸ್ತ್ರೇ ಷ್ವಸರ್ವಗತಾಃ ಕ್ಷೇತ್ರಜ್ಞಾನಿತ್ಯಾಶ್ಚತಿರ್ಯಗ್ಯೋನಿಮಾನುಷ ದೇವೇಷುಸಂಚರಂತಿಧರ್ಮಾಧರ್ಮನಿಮಿತ್ತಂ; ತಏತೇಅನು ಮಾನಗ್ರಾಹ್ಯಾಃ ಪರಮಸೂಕ್ಷ್ಮಾಶ್ಚೇತನಾವಂತಃ ಶಾಶ್ವತಾ ಲೋಹಿತರೇತಸೋಃ ಸನ್ನಿಪಾತೆಷ್ವಭಿವ್ಯಜ್ಯಂತೆ ॥

(ಸುಶ್ರುತ॥ ಶಾರೀರ॥ ಅ ೧ ಸೂ. ೧೬)

ಸಾಂಖ್ಯಾದಿ ದರ್ಶನಗಳಲ್ಲಿ ಹೇಳಿದ ಪುರುಷ ಲಕ್ಷಣವನ್ನು ಹಿಂದೆ ಹೇಳಿದೆ ಆಯುರ್ವೇದ ಶಾಸ್ತ್ರದಲ್ಲಿ ಗ್ರಹೀತವಾದ ಆತ್ಮನ (ಪುರುಷನ) ಲಕ್ಷಣ ಭೇದವನ್ನು ವಿವರಿಸುತ್ತಾರೆ:— ಆಯುರ್ವೇದದಲ್ಲಿ ಸರ್ವ ವ್ಯಾಪಿ ನಿತ್ಯವಾದ ಕ್ಷೇತ್ರಜ್ಞರನ್ನು ಉಪದೇಶ ಮಾಡುವದಿಲ್ಲ. ಪ್ರತಿ ದೇಹ ಭಿನ್ನ ವಾದ ಕ್ಷೇತ್ರಜ್ಞರಲ್ಲಿ (ಅಸರ್ವಗತ) ನಿತ್ಯ ಸರ್ವಗತ ಪುರುಷ ಗುಣಾದಿಗಳನ್ನು ಹೋಲಿಸಿ, ಕಾರಣ ಮೊದಲಾದವುಗಳನ್ನು ಹೇಳುತ್ತಾರೆ. ಆಯುರ್ವೇದ ಶಾಸ್ತ್ರಗಳಲ್ಲಿ ಉಕ್ತವಾದ ಕ್ಷೇತ್ರಜ್ಞರು (ಜೀವಗಳು) ಭಿನ್ನ ಭಿನ್ನ ದೇಹಗಳಲ್ಲಿರುವದರಿಂದ ಪರಿಮಿತಿ (ಅಸರ್ವಗತ) ವಾದವುಗಳು. ನಿತ್ಯವಾದವುಗಳೂ ಇರುತ್ತವೆ. ಅವುಗಳು ಧರ್ಮಾಧರ್ಮಗಳಿಂದ, ಪಶುಪಕ್ಷ್ಯಾದಿತಿರ್ಯಕ್ ದೇಹವನ್ನೂ, ಮನುಷ್ಯ, ದೇವಯೋನಿಗಳನ್ನೂ ಹೊಂದುತ್ತವೆ. ಅಧರ್ಮ ದಿಂದ ಪಶ್ವಾದಿಯೋನಿಯನ್ನೂ, ಧರ್ಮಾಧರ್ಮದಿಂದ ಮನುಷ್ಯ ದೇಹ ವನ್ನೂ, ಕೇವಲ ಧರ್ಮದಿಂದ ದೇವತ್ವವನ್ನು ಅಥವಾ ದೇವಯೋನಿ ವಿಶೇಷ ವನ್ನು, ಪಡೆದು, ವಿವಿಧ ಯೋನಿಗಳಲ್ಲಿ ಸಂಚರಿಸುತ್ತವೆ. ಆದ್ದರಿಂದಲೇ ಒಂದು ಪರಿಮಿತಿ ಇರುವದರಿಂದ, "ಅಸರ್ವಗತಾಃ" ಎಂದು ಹೇಳಿದ್ದಾರೆ. ಅರ್ಥಾತ್ ಎಲ್ಲ ಕಡೆಗೆ ವ್ಯಾಪಕವಾಗಿರುವದಿಲ್ಲವೆಂಬರ್ಥವು. ಈ ಎಲ್ಲ ತನು

ಮಾನಗಳಿಂದ ಅಸರ್ವಗತವೆಂದು ತಿಳಿಯುತ್ತದೆ. ಒಂದು ದೇಹದಲ್ಲಿಯ ರೋಗದ ದುಃಖವು, ಮತ್ತೊಂದು ದೇಹದಲ್ಲಿರುವ ಜೀವಕ್ಕೆ (ಪುರುಷನಿಗೆ) ಬಾಧಕ ದುಃಖವಾಗುವದಿಲ್ಲವಾದ್ದರಿಂದ, ಪ್ರತಿ ಶರೀರ ಭಿನ್ನ ಪರಿಮಿತ (ಅಸರ್ವಗತತ್ವ)ದಿಂದ ವ್ಯಾಪಕನು ಅಲ್ಲವೆಂಬುವದು ಸಿದ್ಧವಾಗುತ್ತದೆ. ಇನ ರಂತೆ ಅನುಮಾನದಿಂದ ಪುರುಷನಲ್ಲಿಯ ವಿಶೇಷವನ್ನು ತಿಳಿಯಬೇಕು. ಪರಮ ಸೂಕ್ಷ್ಮವಾಗ, ಚೇತನಾ ಸ್ವರೂಪ, ನಿತ್ಯವಾದ, ಪುರುಷನು (ಆತ್ಮ) ಹೇಗೆ ಗೋಚರವಾಗುತ್ತಾನೆ? ಹೀಗೆಂಬ ಆಕ್ಷೇಪ ಬಂದೇ ಬರುತ್ತದೆ. ಇದಕ್ಕೆ ಆಯುರ್ವೇದದ ಸಿದ್ಧಾಂತವೇನೆಂದರೆ.— ಪರಮ ಸೂಕ್ಷ್ಮ ಆತ್ಮಗಳು (ಪುರುಷಾಃ) ಶುಕ್ರಶೋಣಿತಗಳ (ಲೋಹಿತರೇತಸೋಃ) ಸಂಮಿಲನಗಳಲ್ಲಿ ಯದಾಯೋಗ್ಯ ಪ್ರಕಟವಾಗುತ್ತವೆ. ಹೀಗೆ ಪ್ರಕಟವಾದವುಗಳಿಂದ ಸೂಕ್ಷ್ಮ ವಾದ "ಜೀವಗಳು" ಅನುಮಾನ ಗ್ರಾಹ್ಯವಾಗುತ್ತವೆ. ಆದ್ದರಿಂದ ಸಿದ್ಧಾಂತ ನಿರ್ಣಯದಲ್ಲಿ ಹೀಗೆ ಹೇಳಲ್ಪಟ್ಟಿದೆ:-

ಯತೋಽಭಿಹಿತಂ- **"ಪಂಚಮಹಾಭೂತಶರೀರಿ ಸಮವಾಯಃ ಪುರುಷಃ"** (ಸೂ ೫. ೧) ಇತಿ; **ಸಏಷಕರ್ಮಪುರುಷಶ್ಚಿಕಿತ್ಸಾ ಧಿಕೃತಃ ॥** (ಸುಶ್ರುತ॥ ಶಾರೀರ॥ ಅ ೧ ಸೂ ೧೬)

ಪಂಚಮಹಾಭೂತಗಳ ಸ್ವರೂಪವಾದ ಶರೀರವನ್ನು ಅತ್ಯಂತವಾಗಿ ವಿಶೇಷ ಸಮವಾಯ ಸಂಬಂಧಾತ್ಮನಾಗಿ ಹೊಂದಿಕೊಂಡಿರುವದೇ; ಪುರುಷ ಎಂದು ಹೇಳುತ್ತಾರೆ. ಕರ್ಮ ಫಲವನ್ನು ಭೋಗಿಸುವ ಈ ಪುರುಷನೇ ಆಯುರ್ವೇದದಲ್ಲಿ ಹೇಳಿದ ಚಿಕಿತ್ಸಾಧಿ ಕೃತ ಕರ್ಮ ಪುರುಷನು. ಅರ್ಥಾತ್, ಚಿಕಿತ್ಸಾ ಕರ್ಮ ಫಲವನ್ನು (ರೋಗ ನಿವಾರಕ ರೂಪವಾದ) ಹೊಂದತಕ್ಕ ವನು ಇರುತ್ತಾನೆ. ಇವನಲ್ಲಿಯೇ ಚಿಕಿತ್ಸೆ ನೂಡುವದರಿಂದ "ಚಿಕಿತ್ಸಾಧಿ ಕೃತಃ" ಎಂದು ಹೇಳಿದ್ದಾರೆ.

"ಇದಾನೀಂ ತಸ್ಯೈವ ಕರ್ಮ ಪುರುಷಸ್ಯ ಶರೀರಾತ್ಮನೋಃ ಸಂಯೋಗಕಾರಕೇಣಮನಸಾಸಂಯೋಗೇ ಯೇ ಗುಣಾಉತ್ಪದ್ಯಂತೇತಾನಾಹುಃ" (ಸುಶ್ರುತ ಟೀಕಾ)

ಈಗ ಹೇಳಿದ ಕರ್ಮ ಪುರುಷನಿಗೆ (ಚಿಕಿತ್ಸಾಧಿಕೃತ) ಶರೀರ ಆತ್ಮಗಳ ಸಂಯೋಗ ಮಾಡುವ ಮನಸ್ಸಿನ ಯೋಗದಿಂದ, ಉತ್ಪನ್ನವಾಗುವ ಗುಣ ಗಳನ್ನು ಹೇಳುತ್ತಾರೆ.

ಕ್ಷೇತ್ರಜ್ಞನ ಗುಣಗಳು

ತಸ್ಯಸುಖದುಃಖೇಇಚ್ಛಾದ್ವೇಷೌಪ್ರಯತ್ನಃ ಪ್ರಾಣಾಪಾನಾವು ನ್ಮೇಷನಿಮೇಷೌ ಬುದ್ಧಿರ್ಮನಸ್ಸಂಕಲ್ಪೋ ವಿಚಾರಣಾ ಸ್ಮೃತಿ ರ್ವಿಜ್ಞಾನಮಧ್ಯವಸಾಯೋವಿಷಯೋಪಲಬ್ಧಿಶ್ಚ ಗುಣಾಃ ॥

(ಸುಶ್ರುತ॥ ಶಾರೀರ॥ ಅ ೧ ಸೂ. ೧೭)

(೧) **ಸುಖ:**— ಇಷ್ಟವಾಗಿದ್ದು, ಸಂತೋಷವನ್ನುಂಟು ಮಾಡುತ್ತಿರುವದು. (೨) **ದುಃಖ:**— ಬೇಕೆಂದು ಅನಿಸದೆ, ವೇದನೆ (ನೋವು) ಉಂಟುಮಾಡತಕ್ಕದ್ದು, ಆದ್ದರಿಂದ ಬೇಡವೆಂದೆನಿಸುವದು (೩) **ಇಚ್ಛಾ** – ಅಭಿಲಾಷೆಯು. (೪) **ದ್ವೇಷ:**– ಅಪ್ರೀತಿಯ ಲಕ್ಷಣವು. (೫) **ಪ್ರಯತ್ನ:**– ಕರ್ಮಾರಂಭ ಮಾಡುವ ಉತ್ಸಾಹವು. (೬) **ಪ್ರಾಣ:**— ಹೃದಯದಲ್ಲಿದ್ದು ಮುಖದಿಂದ ಆಗಮನ ನಿರ್ಗಮವುಳ್ಳವಾಯುವು. (೭) **ಅಪಾನ:**– ಮಲಾಶಯದಲ್ಲಿನ್ದು, ಅಧೋಗಾಮಿಯಾದ ವಾಯುವು. (೮) **ಉನ್ಮೇಷ:**- ಕಣ್ಣಿನ ರೆಪ್ಪೆಗಳನ್ನು ತೆರೆಯುವದು (೯) **ನಿಮೇಷ:**— ಕಣ್ಣು ಮುಚ್ಚುವಿಕೆಯು. (೧೦) **ಬುದ್ಧಿ**:— ನಿಶ್ಚಯಾತ್ಮಕ ವಿಚಾರವುಳ್ಳದ್ದು. (೧೧) **ಮನ ಸ್ಸಂಕಲ್ಪ:**— ಸಂಶಯಾತ್ಮಕವಾದ ಮನಸ್ಸಿನ ಕರ್ಮವು. (೧೨) **ವಿಚಾ ರಣಾ:**— ಊಹಾಪೋಹ (ತರ್ಕವಿತರ್ಕ) ಗಳಿಂದ, ವಿಷಯ ವಿಮರ್ಶೆಯು. (೧೩) **ಸ್ಮೃತಿ:**– ಪೂರ್ವದಲ್ಲಿ ಗ್ರಹಿಸಿದವುಗಳ ನೆನಪು. (೧೪) **ವಿಜ್ಞಾನ:**– ಶಿಲ್ಪ ಮತ್ತು ಶಾಸ್ತ್ರಾದಿಗಳ ಜ್ಞಾನವು. (೧೫) **ಅಧ್ಯವಸಾಯ:**– ಬುದ್ಧಿಯ ವ್ಯಾಪಾರವು. (೧೬) **ವಿಷಯೋಪಲಬ್ಧಿ:**— ಶಬ್ದಾದಿ ವಿಷಯುಗಳನ್ನು ಗ್ರಹಿಸಿ, ಉಪಭೋಗಿಸುವದು.

ಈ ಸುಖಾದಿಗುಣಗಳು (೧೬) ಕರ್ಮ ಪುರುಷನಲ್ಲಿ (ಚಿಕಿತ್ಸಾಧಿಕೃತ) ಇರತಕ್ಕವುಗಳಾಗಿರುತ್ತವೆ. ಕೆಲವರು ಕರ್ಮ ಪುರುಷನ ಷೋಡಶ ಗುಣ ಗಳಿಗೆ, "ಷೋಡಶಕಲಾ" ಎಂತಲೂ ಅನ್ನುತ್ತಾರೆ.

ಪ್ರಕೃತಿ, ವಿಕಾರ, ಕ್ಷೇತ್ರಜ್ಞ, ವಿಷಯ ಸಮೂಹೋಪದೇಶಃ-
ಅಷ್ಟೌಪ್ರಕೃತಯಃ ಪ್ರೋಕ್ತಾವಿಕಾರಾಃ ಷೋಡಶೈವತು ॥
ಕ್ಷೇತ್ರಜ್ಞಶ್ಚಸಮಾಸೇನ ಸ್ವತಂತ್ರಪರತಂತ್ರಯೋಃ ॥
(ಸುಶ್ರುತ॥ ಶಾರೀರ॥ ಅ ೧ ಶ್ಲೋ. ೨೨)

(ಆ) ಎಂಟುವಿಧವಾದ ಪ್ರಕೃತಿಗಳು. (೧೬) ವಿಕಾರಗಳು ಹದಿನಾರು. ಮತ್ತು ಕ್ಷೇತ್ರಜ್ಞ (ಪುರುಷ) ಇವೆಲ್ಲವುಗಳು; ಸಮುದಾಯವಾಗಿ (ಸಮಾಸೇನ) ಸುಶ್ರುತ, ಶಲ್ಯ, ಶಾಲಾಕ್ಯ ತಂತ್ರಗಳಲ್ಲಿಯೂ, ಸಾಂಖ್ಯ ದರ್ಶನದಲ್ಲಿಯೂ, ವಿವರಿಸಲ್ಪಟ್ಟಿರುತ್ತವೆ. "ಪುರ್" ಎಂಬ ಶಬ್ದದಿಂದ ಮಹದಾದಿಕೃತವಾದ ಲಿಂಗಶರೀರ (ಸೂಕ್ಷ್ಮ) ಸೂಚಿಸಲ್ಪಡುತ್ತದೆ. ಆ ಲಿಂಗ ಶರೀರವು ಯೋಗಿಗಳಿಗೆ ಮಾತ್ರ ಗಮ್ಯವು. "ಪುರಿ" ಲಿಂಗ ಶರೀರದಲ್ಲಿ "ಶೇತೆ" ಇರುತ್ತಾನೆ, ಆದ್ದರಿಂದ "ಪುರುಷ" ನೆಂದು ಅನ್ನುತ್ತಾರೆ

"ಪುರ್" ಶಬ್ದೇನಮಹದಾದಿಕೃತಂ ಸೂಕ್ಷ್ಮಂ ಲಿಂಗಶರೀರ
ಮುಚ್ಯತೆ॥ ತಚ್ಚಯೋಗಿನಾಮೇವದೃಶ್ಯಂತತ್ರ "ಪುರಿ" ಶೇತೆ
ಇತಿ ಪುರುಷಃ (ಸುಶ್ರುತ ಟೀಕಾ)

ಉತ್ಪನ್ನವಾದ ಜಗತ್ತು ಮತ್ತು ದೇಹ ಇವುಗಳ ಮೂಲ ಕಾರಣವನ್ನು ವಿವರಿಸುವ ಉದ್ದೇಶದಿಂದ ಪ್ರಕೃತಿ, ವಿಕಾರ, ಕ್ಷೇತ್ರಜ್ಞ ಮೊದಲಾದವುಗಳನ್ನು ಹೇಳಿದ್ದಾರೆ. ಯೋಗ ಮೋಕ್ಷಾದಿಗಳಿಗೂ ಪ್ರಕೃತ್ಯಾದಿ ವಿಮರ್ಶೆಯು ಅವಶ್ಯವಿದೆ. ಚಿಕಿತ್ಸೆಯಲ್ಲಿಯೂ, ಚಿಂತೆ, ಮನೋರೋಗಾದಿಗಳಲ್ಲಿ, ಆತ್ಮಾದಿ ವಿಜ್ಞಾನಗಳು, ಮನೋ ದೋಷ ನಿವಾರಣೋಪಾಯವೆಂದು ಹೇಳಿದ್ದಾರೆ. ಆದ್ದರಿಂದ ಪ್ರಕೃತ್ಯಾದಿ ವಿವರಣೆಯು ವಿಶೇಷಪ್ರಾಸಂಗಿಕವಾದದ್ದೇ ಇರುತ್ತದೆ.

ಮನೋ ದೋಷಕ್ಕೆ ಔಷಧ

ಧೀರ್ಧೈರ್ಯಾತ್ಮಾದಿವಿಜ್ಞಾನಂ ಮನೋದೋಷೌಷಧಂಪರಂ॥
(ವಾಗ್ಭಟ॥ ಸೂ॥ ಅ ೧ ಶ್ಲೋ. ೩೬)

ಧೀಃ ಬುದ್ಧಿಯು. ವ್ಯವಹಾರಿಕ, ಆಧ್ಯಾತ್ಮಿಕ, ಹಿತಾಹಿತಗಳನ್ನು ವಿಭಾಗಿಸಿ ತಿಳಿಸುವಂಥಾದ್ದ ಅಥವಾ ಹಿತಾಹಿತ ವಿವೇಕವನ್ನುಂಟು ಮಾಡುತ್ತಿರುವದು.

ಧೈರ್ಯಂ ಮನಸ್ಸನ್ನು ಧೃಡಪಡಿಸುವಂಥದು, ಅಥವಾ ಮನಸ್ಸಿನ ಲ್ಲಿಯ ಚಂಚಲತೆ ಇಲ್ಲದೆ, ಅಹಿತವಾದದ್ದನ್ನು ಬಿಡುತ್ತಲೂ, ಹಿತವನ್ನು ಅನು ಸರಿಸುತ್ತಲೂ ಇರುವದು.

ಆತ್ಮಾದಿವಿಜ್ಞಾನಂ ಶಾಸ್ತ್ರ ವಿಚಾರ, ಯೋಗಾಭ್ಯಾಸ ಸಮಾಧಿ ಗಳಿಂದ, ಆತ್ಮಾನಾತ್ಮ ವಿಚಾರಗಳಿಂದ ಆತ್ಮ ಸ್ಥಿತಿಯನ್ನು ಹೊಂದುವದು. "ವಿಜ್ಞಾನಶಬ್ದದಿಂದ" ಕಲಾಕೌಶಲ್ಯ ಶಾಸ್ತ್ರಾದಿ ಜ್ಞಾನ, ಅಥವಾ ದೇಶ ಕಾಲಾದಿಗಳ ಜ್ಞಾನ ವಿಜ್ಞಾನ ಸ್ಮೃತಿಗಳು ಉಕ್ತವಾಗುತ್ತವೆ ಇವೆಲ್ಲವು ಗಳು ಮನಸ್ಸಿನ ದೋಷವಾದ, ರಜಸ್ತಮ ಕಾಮಕ್ರೊಧಾದಿಗಳಿಂದ ಉಂಟಾದ, ಚಿಂತೆ ಭಯ ರೂಪವಾದ ರೋಗಗಳಿಗೆ ಶ್ರೇಷ್ಠ ಔಷಧಗಳು ಮನಸ್ಸಿನ ರೋಗವನ್ನು ನಿವಾರಿಸುವ "ಧೀರ್ಧೈರ್ಯಾತ್ಮಾದಿವಿಜ್ಞಾನ" ನೊದಲಾದವುಗಳು, ಮನೋರೋಗದಲ್ಲಿ ದೋಷನಿವಾರಣೆಯ ಸಾಧನಗಳು; ಮುಖ್ಯವಾಗಿ ಇವುಗಳೆಂದು ಹೇಳಿದ್ದಾರೆ.

ಮೋಕ್ಷ ವಿಷಯದಲ್ಲಿಯ ಮತ ಭೇದ

(೧) ವೇದಾಂತ ಮತ

ಸ್ವಸ್ವರೂಪಜ್ಞಾನಾತ್ ಮಾಯಾಮೂಲಾಜ್ಞಾನ ನಿವೃತ್ತೌ ಸ್ವರೂಪಾಧಿಗಮೋಮೋಕ್ಷಃ ॥

ತನ್ನ (ಆತ್ಮ) ಸ್ವರೂಪ ಜ್ಞಾನದಿಂದ, ಮಾಯೆಯೇ ಕಾರಣವಾಗಿ ರುವ ಅಜ್ಞಾನವು ಹೋಗಿ, ತನ್ನ ನಿಜಸ್ಥಿತಿ (ಆತ್ಮ ಸ್ಥಿತಿ) ಯನ್ನು ಹೊಂದು ವದೇ ಮೋಕ್ಷವು.

(೧) ಸಾಂಖ್ಯ ಮತ

ಪ್ರಕೃತಿಪುರುಷವಿವೇಕಜ್ಞಾನಾತ್ ಮೋಕ್ಷಃ॥ ಅಥವಾ ಪ್ರಕೃತ್ಯುಪರಮೆಪುರುಷಸ್ಯಸ್ವಸ್ವರೂಪಾವಸ್ಥಾನಂ ಮೋಕ್ಷಃ; ಪ್ರಕೃತ್ಯುಪರಮಸ್ತು ಪ್ರಕೃತಿಪುರುಷಯೋರ್ಭೇದಜ್ಞಾನಾತ್ ॥

ಪ್ರಕೃತಿ (ಅವ್ಯಕ್ತಾದಿ) ಪುರುಷ (ಕ್ಷೇತ್ರಜ್ಞ) ಇವುಗಳು ಬೇರೆ ಬೇರೆ ಯೆಂದು ಅನುಭವ ಜ್ಞಾನವಾಗುವದೇ ಮೋಕ್ಷವು. ಇಲ್ಲಿ ವಿವೇಕವೆಂದರೆ ಕೇವಲ ಜ್ಞಾನವೆಂದು ಅರ್ಥ ಮಾಡಬಾರದು. ಯಾಕಂದರೆ ಪ್ರಕೃತಿ ಪುರುಷ ಇವು ಭಿನ್ನವೆಂಬ ಅನುಭವ (ಅನುಭೂತ) ಯುಕ್ತವಾದ ಜ್ಞಾನ ವಾದರೇನೇ ಮೋಕ್ಷವು. ಪುಸ್ತಕವನ್ನು ಓದಿ ಶಬ್ದ ಮಾತ್ರ ಜ್ಞಾನವು ಮೋಕ್ಷ ದಾಯಕವಲ್ಲವು. ಪ್ರಕೃತಿ ಪುರುಷ ಭೇದವು ಅತ್ಯಂತ ಸ್ಥಿರವಾಗಿ ಭಾವ ನೆಯ ಸ್ವರೂಪವಾಗಬೇಕು.

ಹೀಗೆ ವಿವೇಕ (ಭೇದ) ವುಂಟಾಗಲು, ಪ್ರಕೃತಿಯಿಂದ ಭಿನ್ನವಾದ ಪುರುಷನು, ತನ್ನ ಸ್ಥಿತಿಯಲ್ಲಿಯೇ ಇರುತ್ತಾನೆ. ಪ್ರಕೃತಿರಹಿತನಾದ್ದರಿಂದ ದೇಹಾದಿಗಳ ಉತ್ಪತ್ತಿಯೇ ಇಲ್ಲದ್ದರಿಂದ, ದೇಹಾದಿಗಳಿಂದ ಭಿನ್ನವಾದವ ನಾಗಿ ತನ್ನ ಸ್ವರೂಪದಲ್ಲಿಯೇ ಇರುತ್ತಾನೆ. ಪ್ರಕೃತಿಯು ಭಿನ್ನವಾಗುವಂತೆ ಮಾಡಲು ಅಥವಾ ಪ್ರಕೃತಿಯು ಪುರುಷನನ್ನು ಕೂಡಿಕೊಂಡು, ಉತ್ಪತ್ತಿ ಯನ್ನು ಮಾಡವಂತೆ ಮಾಡಲು, ಪ್ರಕೃತಿ ಪುರಷರಲ್ಲಿ ಭೇದವಾ (ಭೇದ ಜ್ಞಾನ) ಗಬೇಕು. ಇದರಿಂದಲೇ ಪ್ರಕೃತ್ಯುಪರಮವಾಗುತ್ತದೆ. ಇದು ಸಾಂಖ್ಯ ಮತದಂತೆ ಮೋಕ್ಷ ಸಿದ್ಧಾಂತವು ಸುಶ್ರುತಾಚಾರ್ಯರು ಇದನ್ನೇ ಗ್ರಹಿಸಿದ್ದಾರೆ

(೩) ಯೋಗಮತ

[ಜೀವಸ್ಯ] ನಿರುಪಾಧಿಕಸ್ವರೂಪೇಣಅವಸ್ಥಾನಂ ಮೋಕ್ಷಃ ॥ ತಚ್ಚ ಯೆಮನಿಯೆಮಾದಿ ಅಷ್ಟಾಂಗಯೋಗಜನ್ಯಂ ॥

ಜೀವಕ್ಕಿರುವ ಉಪಾಧಿ (ದೇಹ, ಕರ್ಮರೂಪವಾದ ಆವರಣ) ಸ್ಥಿತಿಯನ್ನು ಹೋಗಲಾಡಿಸಿ ಸ್ವಸ್ವರೂಪ (ಪರಮಾತ್ಮ) ಸ್ಥಿತಿಯಲ್ಲಿರುವದೇ ಮೋಕ್ಷವು. ಅದು "ಸ್ವರೂಪಾವಸ್ಥಾನ" ಯಮನಿಯಮಾದಿ ಅಷ್ಟಾಂಗ ಯೋಗದಿಂದ ಸಂಭವಿಸುತ್ತದೆ.

ಮೋಕ್ಷ ವಿಷಯದಲ್ಲಿ ವಿಶೇಷ:— ಚರಕ ಸಂಹಿತೆಯಲ್ಲಿ ಯೋಗದಿಂದ ಮೋಕ್ಷವೆನ್ನುವ ಯೋಗ ಮತವನ್ನೂ, ವೇದಾಂತ ಮತ, ಸಾಂಖ್ಯ, ಎಲ್ಲವುಗಳನ್ನೂ ಗ್ರಹಿಸಿರುವದರಿಂದ ಇಲ್ಲಿ ಅವುಗಳನ್ನು ಪ್ರತ್ಯೇಕವಾಗಿ ಹೇಳಿದ್ದೇನೆ. ವಿಮರ್ಶೆಯು ವಿಸ್ತಾರವಾಗುವದರಿಂದ ತ್ಯಜಿಸಿ, ಸಿದ್ಧಾಂತವನ್ನೇ ವಿವರಿಸಿರುವೆನು. ಆತ್ಮ ವಿಷಯದಲ್ಲಿಯ ಪ್ರಕೃತ್ಯಾದಿ ವಿವರಣೆಯುಳ್ಳ ಶಾರೀರವು, ಯೋಗಿಗಳಿಗೆ ದೇಹ ರೂಪವಾದ (ಜನನ-ಮರಣ) ದುಃಖವನ್ನು ನಿವಾರಿಸಿಕೊಳ್ಳಲಿಕ್ಕೆಂದು ಸುಶ್ರುತಾಚಾರ್ಯರು ಹೇಳಿದ್ದಾರೆ. ಸ್ಥೂಲ ಶರೀರ ವಿಷಯವನ್ನು ಚಿಕಿತ್ಸಕರಿಗೆ, ರೋಗ ನಿವಾರಣೆಗಾಗಿ ವಿವರಿಸಿರುತ್ತಾರೆ. **ವಿಜ್ಞಾನಾರ್ಥಂ ಶರೀರಸ್ಯಭಿಷಜಾಂ ಯೋಗಿನಾಮಪಿ ॥**

(ಸುಶ್ರುತ॥ ಸೂ. ಸ್ಥಾ ಅ ೩ ಶ್ಲೋ. ೧೭)

ಇಲ್ಲಿಗೆ ಪ್ರಕೃತಿ, ವಿಕಾರ, ಪುರುಷಾದಿ, ವಿಮರ್ಶೆಯು ಮುಗಿಯಿತು.

(೨) ಸೂಕ್ಷ್ಮ ಪಂಚಭೂತಗಳ ವಿಜ್ಞಾನ

ಅಥಾತಃ ಸರ್ವಭೂತಚಿಂತಾಶಾರೀರಂ ವ್ಯಾಖ್ಯಾಸ್ಯಾಮಃ ॥

(ಸುಶ್ರುತ॥ ಶಾರೀರ॥ ಅ ೧ ಸೂ. ೧)

ದೇಹವು ಪೃಥಿವ್ಯಾದಿ ಪಂಚಭೂತ ಅಂಶಗಳಿಂದ ನಿರ್ಮಿತವಾದದ್ದರಿಂದ, ಅವುಗಳ (ಭೂತಾದಿ) ವಿಚಾರವನ್ನು ಮಾಡುತ್ತೇವೆ. ಅರ್ಥಾತ್, ಆ ಭೂತಾದಿಗಳ ವಿವರಣೆಯುಳ್ಳ "ಶಾರೀರ ಅಧ್ಯಾಯವನ್ನು" ಹೇಳುತ್ತೇವೆಂದು ಹೇಳಿದ್ದಾರೆ. "ಸರ್ವಭೂತ ಚಿಂತಾ" ಎನ್ನುವದರಿಂದ ದೇಹೋತ್ಪತ್ತಿಗೆ ಕಾರಣವಾದ ಪಂಚಭೂತಗಳ ವಿವರಣೆಯು ಅವಶ್ಯವೆಂದು ಸಿದ್ಧವಾಗುತ್ತದೆ

ಚಿಂತಾನಾಮ:— ಹೇತುಸ್ವಲಕ್ಷಣಕಾರ್ಯೈಃ ಚಿಂತನಂ; ಕುತಉತ್ಪನ್ನಾನಿ? ಕಾವಿಚೈಷಾಂ ಸ್ವಲಕ್ಷಣಾನಿ? ಕಾನಿಕಾರ್ಯಾ ಣೇತಿಚಿಂತನಂ ॥ (ಸುಶ್ರುತ ಟೀಕಾ)

ಪಂಚಭೂತಗಳು ಯಾವದರಿಂದ ಉತ್ಪನ್ನವಾದವು? ಅವುಗಳ ಲಕ್ಷಣ ವೇನು? ಅವುಗಳ ಕಾರ್ಯವೇನು? ಇತ್ಯಾದಿ ಹೇತು, ಸ್ವಲಕ್ಷಣ, ಕಾರ್ಯ ಗಳು, ವಿವರಿಸಲ್ಪಡುತ್ತವೆ. ಇವರಿಂದ ದೇಹಕ್ಕೆ ಕಾರಣವಾದ ಪಂಚಭೂತ ಗಳ ಜ್ಞಾನವಾಗುತ್ತದೆ. ಸೂಕ್ಷ್ಮ ಪಂಚಭೂತಗಳೆಂದರೆ ಪೃಥಿವ್ಯಾದಿಗಳ ಅಣುಗಳು. ಈ ಅಣುಗಳ ಸಂಯೋಗದಿಂದ ಪೃಥಿವ್ಯಾದಿಗಳು ಸ್ಥೂಲ ರೂಪ ಹೊಂದಿ, ಗೋಚರವಾಗುತ್ತವೆ. "ಸೂಕ್ಷ್ಮ" ಅಂದರೆ ಅಣು:— **ಸೂಕ್ಷ್ಮಂ ಸ್ಯಾತ್ ಕತಕೇಧ್ಯಾತ್ಮೆ ಪುಂಸ್ಯಣೌತ್ರಿಷುಚಾಲ್ಪಕೆ ॥** (ವಿಶ್ವಕೋಶ) ಅರ್ಥಾತ್ ಪಂಚಮಹಾ ಭೂತಗಳ ಅಣುಗಳು, ಸೂಕ್ಷ್ಮ ಪಂಚಮಹಾ ಭೂತಗಳೆಂದು ಹೇಳಲ್ಪಡುತ್ತವೆ. ಇದು ಶರೀರ ಶಾಸ್ತ್ರವಾಪ್ಪರಿಂದ ದೇಹ ದಲ್ಲಿಯ ಸೂಕ್ಷ್ಮ ಪಂಚಭೂತಗಳನ್ನು, ಗರ್ಭೋತ್ಪತ್ತಿ ಕ್ರಮದ ವಿಚಾರಣಾ ವಿಷಯದಲ್ಲಿ ವಿವರಿಸುತ್ತೇವೆ. ಅಣುವೆಂದರೆ ಪಂಚಮಹಾಭೂತಗಳ ಮೂಲ ಸ್ವರೂಪವು ಕಣ್ಣಿಗೆ ಕಾಣಿಸುವದಿಲ್ಲ. ಆ ಅಣುಗಳಲ್ಲಿ ಪಂಚಮಹಾ ಭೂತ ಗಳಲ್ಲಿರುವ ಗುಣಗಳು, ಅವ್ಯಕ್ತವಾಗಿರುತ್ತವೆ. ಅಣುಗಳಲ್ಲಿ ಕಾರ್ಯರೂಪ (ಸ್ಥೂಲ) ಪಂಚಮಹಾಭೂತಗಳ ಉತ್ಪತ್ತಿಯ ಇಚ್ಛಾ ಆದೊಡನೆಯೇ, ಒಂದಕ್ಕೊಂದು ಸಂಯೋಗವಾಗಿ; ಸ್ಥೂಲ ಸ್ವರೂಪದ ಭೌತಿಕ ದ್ರವ್ಯಗಳಾ ಗುತ್ತವೆ. ಸ್ಥೂಲ ರೂಪ ಹೊಂದಿದ ನಂತರ ಅವುಗಳ ಗುಣಗಳು ಗೋಚರ ವಾಗುತ್ತವೆ.

ಅಣುವಿನ ಪರಿಮಾಣ

ಬೆಳಕಿಂಡಿಯಿಂದ ಮನೆಯೊಳಗೆ ಬರುವ ಸೂರ್ಯನ ಕಿರಣದಲ್ಲಿ ಯಾವ ಸೂಕ್ಷ್ಮ ಪದಾರ್ಥವು ಹಾರಾಡುವದು ಕಾಣುತ್ತದೆಯೋ? ಅದಕ್ಕೆ "ತ್ರ್ಯಣುಕ" ವೆಂಬ ಹೆಸರು. ಅದರ ಆರನೆ ಭಾಗಕ್ಕೆ "ಅಣು" ವೆಂದು ಅನ್ನು ತ್ತಾರೆ. ಅದು (ಅಣುವು) ದೃಷ್ಟಿ ಗೋಚರವಾದದ್ದಲ್ಲ. ಎರಡು ಪರಮಾಣು

ಗಳ ಸಂಯೋಗದಿಂದ "**ದ್ವ್ಯಣುಕವು**" ಮೂರು ದ್ವ್ಯಣುಕಗಳಿಂದ "**ತ್ರ್ಯಣುಕವು**" ನಾಲ್ಕು ತ್ರ್ಯಣುಕಗಳಿಂದ "**ಚತುರಣಕವು**" ಸಂಯೋಗ ಧರ್ಮದಿಂದ ಆಗುತ್ತವೆ. ಆ ಅಣುವಿಗೆ ಲವ, ಲೇಶ, ಕಣ, ಸೂಕ್ಷ್ಮ, ಅಣು, ಪರಮಾಣು, ಪುದ್ಗಲ, ಪೀಲು ಎಂಬ ನಾಮತಃ ಹೆಸರುಗಳು. ಎಲ್ಲಾ ಸ್ಥೂಲ ವಿಶ್ವದ ಉತ್ಪತ್ತಿಗೆ ಕಾರಣವಾದ್ದರಿಂದ, ಕಾರಣ ಇತ್ಯಾದಿ ಅನ್ವರ್ಥ ನಾಮಗಳು ಸಂದರ್ಭಾನುಸಾರ ಅನ್ವಯಿಸುತ್ತದೆ

ಪರಮಾಣು ವಿಜ್ಞಾನ

ಪರಮಾಣವಃ ಭೇದೇನ, ಅಪರಿಸಂಖ್ಯೇಯಾಭವಂತಿ ಅತಿ ಬಹುತ್ವಾತ್ ಅತಿಸೂಕ್ಷ್ಮತ್ವಾತ್ ಅತೀಂದ್ರಿಯತ್ವಾಚ್ಚ ಅನುಮೇಯಾಃ ಕಾರ್ಯತಃ ಕಾರ್ಯಕಾರಣಭಾವೇನ, ತೇಷಾಂ ಪರಮಾಣೂನಾಂ ಸಂಯೋಗೆ ವಿಭಾಗೇಪರಮಾಣುಕಾರ್ಯ ನಿರ್ಮಿತೌವಾಯುಃ ಕರ್ಮಕಾರಣಂಭವತಿ ॥

ಅಥಚೇತ್, ಕೇ ನಾಮು ಪರಮಾಣವಃ ?

ಪರಮಾಣುಗಳು ಅವಾವ ಭೂತಗಳು, ಬೇರೆ ಬೇರೆ ಇರುವದರಿಂದಲೂ ಪ್ರತಿಯೊಂದು ಭೂತ (ಪಂಚಮಹಾ ಭೂತ) ದ ಪರಮಾಣುಗಳು, ಭಿನ್ನವಾಪವುಗಳು ಇರುತ್ತವೆ. ಅವು ಸಂಖ್ಯಾತೀತವಾದವುಗಳು, ಅತಿ ಬಹಳವೂ ಅತಿ ಸೂಕ್ಷ್ಮವೂ, ಇಂದ್ರಿಯ ಗೋಚರವಾಗದವುಗಳೂ ಇರುತ್ತವೆ. ಸ್ಥೂಲವಾದ ಕಾರ್ಯ ರೂಪದಿಂದ, (ಪಂಚಮಹಾ ಭೂತ) ಕಾರ್ಯ ಕಾರಣ ಭಾವದಿಂದಲೂ ಊಹಿಸಿ ತಿಳಕೊಳ್ಳಬೇಕು. ಅದು ಹೇಗಂದರೆ:— ಒಂದು ಮಣ್ಣಿನ ಹೆಂಟೆ (ತುಣುಕು) ಯನ್ನು ತೆಗೆದುಕೊಂಡು ವಿಭಾಗಿಸಲು ಅನೇಕ ಅಸಂಖ್ಯೆಯ ವಿಭಾಗವಾಗಿ, ಕೊನೆಗೆ ದೃಷ್ಟಿಗೆ ಗೋಚರವಾಗದ ಸೂಕ್ಷ್ಮ ವಿಭಾಗವೇ 'ಅಣುವು' ಅದಕ್ಕೆ ಮುಂದೆ ವಿಭಾಗವಿಲ್ಲ ಹೇಗೆ ಈ ಸ್ಥೂಲದ ವಿಭಾಗದಿಂದ ವಿಭಾಗದ ಆದಿ (ಅಣು) ಸ್ಪಷ್ಟವಾಗುತ್ತದೆಯೋ, ಅದರಂತೆ ಅಣುಗಳ ಸಂಯೋಗದಿಂದ ದೃಷ್ಟಿಗೋಚರ ಈ ಸ್ಥೂಲ ಸ್ಥಿತಿಯು ಆಗಿದೆ.

ಯೆಂದು ಸಹ ಸಿದ್ಧವಾಗುತ್ತದೆ. ಈ ಸ್ಥೂಲ ಸ್ಥಿತಿಗೆ ಕಾರ್ಯವೆಂದೂ, ಇದು ಹುಟ್ಟಲು ಕಾರಣವಾದ ಪರಮಾಣುಗಳಿಗೆ ಕಾರಣವೆಂದೂ, ಅನ್ನುತ್ತಾರೆ. ಈ ಕಾರ್ಯ ಕಾರಣ ಭಾವಗಳಿಂದ ಪರಮಾಣುಗಳು ಊಹಿಸಲ್ಪಟ್ಟು ಆ ವಿಷಯದ ಜ್ಞಾನವಾಗುತ್ತದೆ. ಮೂಲಕಾರಣವಾದ ಅಣುವು ದೃಷ್ಟಿ ಗೋಚರವಲ್ಲದ್ದರಿಂದ ಅದರ ಸಂಯೋಗದಿಂದಾದ ಕಾರ್ಯದಲ್ಲಿಯೂ ಆ ಗುಣವು ಬೇಕಲ್ಲವೆ? ಅತೀಂದ್ರಿಯವಾದ ಪರಮಾಣುವಿನಿಂದ ಹುಟ್ಟಿರುವದ ರಿಂದ ಪಂಚಮಹಾ ಭೂತಗಳೂ ಕೂಡ ದೃಷ್ಟಿಗೋಚರವಾಗದೇ ಇರಬೇಕು. ಹೀಗಂದು ಆಕ್ಷೇಪ ಬರುತ್ತದೆ. ಪರಮಾಣುಗಳ ಅಸಂಖ್ಯೇಯ ಗುಂಪುಗಳು ಆಕಾಶದಲ್ಲಿ ಇದ್ದೇ ಇರುತ್ತವೆ. ಅವು ಪ್ರತ್ಯಕ್ಷವಲ್ಲವೇ ಅಲ್ಲ. ಅದರಂತೆ ಪಂಚಮಹಾ ಭೂತಗಳಲ್ಲಿಯು ಪರಮಾಣುಗಳು ಗುಂಪಾದವುಗಳಲ್ಲ. ಒಂದ ಕ್ಕೊಂದು ಸಂಯೋಗವಾಗಿ ಅವಯವ ರೂಪದಿಂದ ಕೂಡಿದವುಗಳು. ಆದ್ದರಿಂದ ಸ್ಥೂಲವಾದ ಅವಯವಿಯು ಗೋಚರವಾಗುತ್ತದೆ ಆಗ ಪರಮಾಣುಗಳ ಸಂಯೋಜಿತ ಅವಯವ ಉಳ್ಳ ಒಂದು ವಸ್ತುವಾಗಿರುತ್ತದೆ. ಪೃಥಿವ್ಯಾದಿ ಪಂಚಭೂತಗಳ ಪರಮಾಣುಗಳು, ಸೂಕ್ಷ್ಮ ಪಂಚಭೂತಗಳೆಂದು ಹೇಳಲ್ಪಟ್ಟಿರುತ್ತವೆ.

ಸ್ಥೂಲ ಪಂಚ ಮಹಾಭೂತಗಳ ವಿವರಣೆ

ಅಣುಗಳ ಸಂಯೋಗದಿಂದ ಅವಯವಗಳಾಗಿ, ಆ ಅವಯವಗಳ ಸಂಯೋಗ (ಕೂಡುವಿಕೆ) ದಿಂದ ಪದಾರ್ಥಗಳು ಹುಟ್ಟುತ್ತವೆ. ಹುಟ್ಟಿದ ದ್ರವ್ಯವು ದೃಷ್ಟಿಗೋಚರವಾಗಿಯೂ, ಉದ್ಭೂತ ಗುಣವುಳ್ಳದ್ದಾಗಿಯೂ ಇರುತ್ತದೆ. ಆದ್ದರಿಂದ ಅದಕ್ಕೆ ಸ್ಥೂಲ (ಗೋಚರ) ವೆಂಬ ಹೆಸರು.

ಸ್ಥೂಲ ಪಂಚ ಭೂತಗಳು:— (ಆಕಾಶ ಮಾತ್ರ ಸ್ಥೂಲವಲ್ಲ) **(೧) ಪೃಥ್ವಿ (೨) ಆಪಃ (೩) ತೇಜಃ (೪) ವಾಯು (೫) ಆಕಾಶ** ಇವುಗಳು ಸ್ಥೂಲ ಪಂಚ ಭೂತಗಳು.

ಸ್ಥೂಲ ಪಂಚ ಮಹಾಭೂತಗಳ ವಿಜ್ಞಾನ

ಪೃಥಿವೀ ॥೧॥

ತತ್ರಗಂಧವತೀ ಪೃಥಿವೀ।ಸಾದ್ವಿವಿಧಾ। ನಿತ್ಯಾನಿತ್ಯಾಚ। ನಿತ್ಯಾ ಪರಮಾಣು ರೂಪಾನಿತ್ಯಾ ಕಾರ್ಯ ರೂಪಾ। ಸಾಪುನಃ ತ್ರಿವಿಧಾ। ಶರೀರ, ಇಂದ್ರಿಯ, ವಿಷಯ ಭೇದಾತ್ ॥ ಶರೀರಂ ಅಸ್ಮದಾದೀನಾಂ। ಇಂದ್ರಿಯಂ ಗಂಧಗ್ರಾಹಕಂ ಘ್ರಾಣಂ ನಾಸಾಗ್ರವರ್ತಿ। ವಿಷಯೋ ಮೃತ್ಪಾಷಾಣಾದಿಃ ॥

(ತರ್ಕ ಸಂಗ್ರಹ)

ಗಂಧ ಗುಣವುಳ್ಳದ್ದು ಪೃಥಿವಿಯು. ಅದು ಎರಡು ವಿಧವಾಗಿರುವದು. ನಾಶವುಳ್ಳದ್ದು, ನಿತ್ಯವಾದದ್ದೆಂದು.। ಪರಮಾಣು ರೂಪವು ನಿತ್ಯವಾದದ್ದು. ಸ್ಥೂಲವಾದದ್ದು, ಕಾರ್ಯರೂಪವು, ನಾಶವುಳ್ಳದ್ದು. ಸ್ಥೂಲರೂಪ ಪೃಥಿವಿಯು ಮೂರು ವಿಧವಾದದ್ದು. ಶರೀರ, ಇಂದ್ರಿಯ, ವಿಷಯಗಳೆಂಬ ಭೇದವುಳ್ಳದ್ದು. ನಮ್ಮೆಲ್ಲರ ಶರೀರವು ಸ್ಥೂಲರೂಪದ ಪೃಥ್ವಿಯದು. ಪಾರ್ಥಿವ (ಪೃಥಿವಿಯ ಸಂಬಂಧ) ಅವಯವವು, ಗಂಧ ಗ್ರಹಣಮಾಡತಕ್ಕ ನಾಸಿಕವು. ಅದಕ್ಕೆ ಘ್ರಾಣೇಂದ್ರಿಯವೆಂಬ ಹೆಸರು. ಅದು ನಾಸಿಕದ ಅಗ್ರ ಭಾಗದಲ್ಲಿರುತ್ತವೆ. ವಿಷಯಗಳು ಮಣ್ಣು, ಕಲ್ಲು ಮೊದಲಾದವುಗಳು.

ಆಪಃ ॥ ೨ ॥

ಶೀತಸ್ಪರ್ಶವತ್ಯಃ ಆಪಃ॥ ತಾಶ್ಚದ್ವಿವಿಧಾಃ॥ ನಿತ್ಯಾಅನಿತ್ಯಾಶ್ಚ॥ ನಿತ್ಯಾಃ ಪರಮಾಣುರೂಪಾಃ। ಅನಿತ್ಯಾಃ ಕಾರ್ಯರೂಪಾಃ॥ ಪುನಃ ತ್ರಿವಿಧಾಃ॥ ಶರೀರೇಂದ್ರಿಯ, ವಿಷಯ ಭೇದಾತ್। ಶರೀರಂವರುಣ ಲೋಕೇ।ಇಂದ್ರಿಯಂರಸನಂ ಜಿಹ್ವಾಗ್ರವರ್ತಿ। ವಿಷಯಃ ಸರಿತ್ ಸಮುದ್ರಾದಿಃ॥

ಜಲ(ನೀರು,)ಶೀತ,ಸ್ಪರ್ಶಗುಣವುಳ್ಳದ್ದು. ಇದು ಎರಡು ವಿಧವಾದದ್ದು. ನಿತ್ಯ ಮತ್ತು ಅನಿತ್ಯವೆಂದು; ನಿತ್ಯವಾದಜಲವು ಪರಮಾಣು ರೂಪವುಳ್ಳದ್ದು. ಅನಿತ್ಯವಾದದ್ದು ಕಾರ್ಯರೂಪ (ಸ್ಥೂಲ) ಜಲವು. ಇಂಧ ನಮಗೆ ಗೋಚರ ವಾದ ಜಲವು ಮೂರು ವಿಧವಾದದ್ದು. ಶರೀರ, ಇಂದ್ರಿಯ, ವಿಷಯ ಗಳೆಂಬ ಭೇದದಿಂದ. ಶರೀರವು ವರುಣ ಲೋಕದಲ್ಲಿ. ಜಲದ ಇಂದ್ರಿಯವು ರಸಗ್ರಾಹಕವಾದ ರಸನೆಯು, ಜಿಹ್ವೆಯ ಅಗ್ರ ಭಾಗದಲ್ಲಿರುವದು. ವಿಷಯವು ಹೊಳೆ, ಸಮುದ್ರ ಮೊದಲಾದವುಗಳು.

ತೇಜಃ ॥೩॥

ಉಷ್ಣಸ್ಪರ್ಶವತ್ತೇಜಃ॥ ತದಪಿದ್ವಿವಿಧಂ ನಿತ್ಯಮನಿತ್ಯಂ ಚ ॥
ನಿತ್ಯಂ ಪರಮಾಣುರೂಪಂ।
ಅನಿತ್ಯಂ ಕಾರ್ಯರೂಪಂ। ಪುನಃ ತ್ರಿವಿಧಂಶರೀರೇಂದ್ರಿಯ,
ವಿಷಯಭೇದಾತ್ ॥

ತೇಜಸ್ಸು ಉಷ್ಣಸ್ಪರ್ಶಗುಣವುಳ್ಳದ್ದು, ಅದು ಎರಡು ವಿಧವಾದದ್ದು ಇರುತ್ತದೆ ನಿತ್ಯವಾದದ್ದು ಅನಿತ್ಯವಾದದ್ದೆಂದು. ನಿತ್ಯವಾದ ತೇಜಸ್ಸು ಪರಮಾಣು ರೂಪವುಳ್ಳದ್ದು, ಅನಿತ್ಯವಾದ ತೇಜಸ್ಸು ಕಾರ್ಯರೂಪವಾದದ್ದು. (ಸ್ಥೂಲ) ನಮ್ಮೆಲ್ಲರಿಗೂ ಕಾಣಿಸುವಂಥಾದ್ದು. ಪುನಃತೇಜಸ್ಸು ಶರೀರ, ಇಂದ್ರಿಯ, ವಿಷಯ, ಭೇದಗಳಿಂದ ಮೂರು ವಿಧವಾದದ್ದು ಇರುತ್ತದೆ.

ಶರೀರವು ಆದಿತ್ಯಲೋಕದಲ್ಲಿದೆ. ಇಂದ್ರಿಯವು ರೂಪವನ್ನು ನೋಡತಕ್ಕ ಚಕ್ಷುಸ್ಸು. ಕಣ್ಣಗುಡ್ಡಿಯ ಕಪ್ಪಿನ (ಕೃಷ್ಣತಾರಾ) ಅಗ್ರಭಾಗದಲ್ಲಿರುತ್ತದೆ. ವಿಷಯವು ನಾಲ್ಕು ವಿಧವಾದವುಗಳು- ಭೂಮಿ ಮೊದಲಾದವುಗಳಲ್ಲಿರತಕ್ಕ ತೇಜಸ್ಸು ಅಗ್ನಿ ಮೊದಲಾದವುಗಳು. (೧) ಆಕಾಶದಲ್ಲಿರತಕ್ಕ ಯಾವ ತಡೆಯಿ ಲ್ಲದ ತೇಜಸ್ಸು, ಸಿಡಿಲು ಮುಂತಾದವುಗಳು. (೨)ಹೊಟ್ಟೆಯಲ್ಲಿ(ಉದರ)ಇದ್ದು ಆಹಾರಾದಿಗಳನ್ನು ಪಚನಮಾಡತಕ್ಕ ಪಾಚಕಾಗ್ನಿಯು. (೩) ಖನಿಜದಲ್ಲಿ ದೊರೆಯುವ ತೇಜಸ್ಸು ಸುವರ್ಣ ಮೊದಲಾದವುಗಳು (೪) ಹೀಗೆ ತೇಜಸ್ಸು (ಅಗ್ನಿ)ನಾಲ್ಕು ವಿಧವಾದದ್ದು ಇರುತ್ತದೆ. ಖನಿಜವೂಭೂಭಾಗವೇ ಆದ್ದರಿಂದ ಭೂಮಿಯಲ್ಲಿರತಕ್ಕ ಅಗ್ನಿಗೆ ಹೋಲಿಸಿ, ಸುವರ್ಣವನ್ನು ಹೇಳಿದರೆ ವಿಭಾಗ

ಗೌರವವು ಕಡಿಮೆಯಾಗುವದೆಂದು ಅನಿಸಬಹುದು ಸುವರ್ಣವು ತೇಜಸ್ಸಾದರೂ ಅಗ್ನಿಯಲ್ಲಿರುವ ಉಷ್ಣಸ್ಪರ್ಶಗುಣವಿಲ್ಲದ್ದರಿಂದಲೂ, ಪೃಥ್ವಿಯಲ್ಲಿ ಎಲ್ಲಾ ಕಡೆಯಲ್ಲಿಯೂ, ಅದರ ಉತ್ಪತ್ತಿಯಾಗದ್ದರಿಂದಲೂ; ಅದಕ್ಕೆ ವಿಭಾಗ ಮಾಡಿ ಖನಿಜದಲ್ಲಿರತಕ್ಕದ್ದೆಂದು ಹೇಳಿದ್ದಾರೆ. ಇದರಿಂದ ವಿಭಾಗಗೌರವ ವಾದಂತಾಗಲಿಲ್ಲ.

ವಾಯುಃ ॥೪॥

ರೂಪರಹಿತ ಸ್ಪರ್ಶವಾನ್ ವಾಯುಃ ॥ ಸದ್ವಿವಿಧಃ ॥ ನಿತ್ಯೋಽನಿತ್ಯಶ್ಚ ॥ ನಿತ್ಯಃ ಪರಮಾಣುರೂಪಃ ॥ ಅನಿತ್ಯಃ ಕಾರ್ಯರೂಪಃ॥ ಪುನಃ ತ್ರಿವಿಧಃ ಶರೀರೇಂದ್ರಿಯ, ವಿಷಯ, ಭೇದಾತ್

ರೂಪ ಇಲ್ಲದೆ ಸ್ಪರ್ಶಗುಣವುಳ್ಳದ್ದು ವಾಯುವು. ಅದು ಎರಡು ವಿಧ ವಾದದ್ದು ಇರುತ್ತದೆ. ನಿತ್ಯ ಮತ್ತು ಅನಿತ್ಯವೆಂದು. ಪರಮಾಣುರೂಪವಾದ ವಾಯುವು ನಿತ್ಯವು. ಕಾರ್ಯರೂಪವಾದ ನಮ್ಮೆಲ್ಲರಿಗೂ ಸ್ಪರ್ಶದಿಂದ ಗೊತ್ತಾಗುವ, ಮತ್ತೂ ಗಿಡಗಳಲ್ಲಿ ಬೀಸುವಾಗ ಎಲೆಗಳು ಅಲುಗಾಡುವದ ರಿಂದ ತಿಳಿಯುವ, ವಾಯುವು ಅನಿತ್ಯವು. ವಾಯುವು ಪುನಃ ಶರೀರ, ಇಂದ್ರಿಯ, ವಿಷಯಭೇದದಿಂದ ಮೂರು ವಿಧವಾದದ್ದು. ಶರೀರವು ವಾಯು ಲೋಕದಲ್ಲಿರುತ್ತದೆ. ಇಂದ್ರಿಯವು ಸ್ಪರ್ಶವನ್ನು ತಿಳಿಯುವ ತ್ವಕ್ (ಚರ್ಮ) ಎಂಬ, ಸ್ಪರ್ಶೇಂದ್ರಿಯವು. ಪೂರ್ಣ ಶರೀರವನ್ನು ವ್ಯಾಪಿಸಿದ್ದು ಇರುತ್ತದೆ. ವಿಷಯವು ವೃಕ್ಷಾದಿಗಳನ್ನು ಅಲುಗಾಡಿಸಲು ಕಾರಣವಾದದ್ದು ಇನ್ನು ಶರೀರದಲ್ಲಿರತಕ್ಕ ವಾಯುವು "ಪ್ರಾಣಾದಿ" ಸಂಜ್ಞೆಯುಳ್ಳದ್ದು. ಅದು ಒಂದೇ ಇದ್ದರೂ ಬೇರೆಬೇರೆ ಸ್ಥಾನದಲ್ಲಿರುವದರಿಂದ ಬೇರೆಬೇರೆ ಹೆಸರನ್ನು ಪಡೆಯುತ್ತದೆ ಅವುಗಳ ಹೆಸರುಗಳು— ಪ್ರಾಣ-ಅಪಾನ-ವ್ಯಾನ-ಉದಾನ. ಸಮಾನ, ಎಂದು ಇರುತ್ತವೆ. ಹೃದಯದಲ್ಲಿ ಪ್ರಾಣವು, ಪಕ್ವಾಶಯಾದಿಗುದ ಪರ್ಯಂತ ಭಾಗಗಳಲ್ಲಿ ಅಪಾನವು, ವ್ಯಾನವು ಸಂಪೂರ್ಣ ಶರೀರದಲ್ಲಿ ಸಂಚರಿಸುತ್ತದೆ. ಉದಾನವು ಕಂಠಪ್ರದೇಶದಲ್ಲಿ ಇರುತ್ತದೆ. ಸಮಾನವು ನಾಭಿ ಮಂಡಲದಲ್ಲಿ ಇರುತ್ತದೆ. ಈ ಪ್ರಕಾರವಾಗಿ ಪಂಚ, ಪ್ರಾಣಾದಿ ವಾಯುಗಳ ಆಶ್ರಯ ಸ್ಥಳಗಳು ಇರುತ್ತವೆ.

ಪಂಚ ವಾಯುಗಳ ಸ್ಥಾನ ಕರ್ಮಗಳು

೧. **ಪ್ರಾಣವಾಯುವು,** ಹೃದಯದಲ್ಲಿದ್ದುಕೊಂಡು ಊಟ ಮಾಡಿದ ಅನ್ನವನ್ನು ಗ್ರಹಿಸುತ್ತದೆ. ದೇಹದ ಒಳಗೆ (ಅನ್ನಾಶಯಕ್ಕೆ) ಆಹಾರವು ಹೋಗುವಂತೆ ಮಾಡುತ್ತದೆ.

೨. **ಅಪಾನವಾಯುವು,** ಪಕ್ವಾಶಯದಿಂದ ಗುದಪರ್ಯಂತರ ಸ್ಥಳದಲ್ಲಿ ಇದ್ದು ಪಕ್ವಾಹಾರದ ಕೆಟ್ಟ ಭಾಗವಾದ ಮಲ ಮೂತ್ರಗಳನ್ನು ಹೊರಗೆ ಹಾಕುತ್ತದೆ. ರೇತಸ್ಸನ್ನೂ ಪತನ ಮಾಡುತ್ತದೆ. ಇದರಂತೆ ರಜಸ್ಸು ಆರ್ತವಗಳನ್ನು ಕೂಡಾ ಹೊರಗೆ ಹಾಕುತ್ತದೆಂದು ಹೇಳಬಹುದು.

೩. **ವ್ಯಾನ ವಾಯುವು,** ಪೂರ್ಣ ದೇಹ ಸಂಚಾರಿ ಇದ್ದು, ಕಣ್ಣು ರೆಪ್ಪೆಗಳ ಉನ್ಮೇಷ ನಿಮೇಷಾದಿಗಳನ್ನೂ ಸರ್ವ ದೇಹಗಳಲ್ಲಿ ಸಂಚರಿಸುವ ರಸಾದಿ ಧಾತುಗಳನ್ನೂ ಒಯ್ಯುವ (ತಿರುಗಿಸುವ) ಕೆಲಸವನ್ನು ಮಾಡುತ್ತದೆ.

೪. **ಉದಾನವು,** ಕಂಠ ಪ್ರದೇಶದಲ್ಲಿದ್ದುಕೊಂಡು ಭಾಷಣ (ಮಾತಾಡುವದು) ಧ್ವನಿ ಹೊರಡಿಸುವ ಮೊದಲಾದ ಕರ್ಮಗಳನ್ನು ಮಾಡುತ್ತದೆ. ಇದರಿಂದ ಅನ್ನ ಪಾನಾದಿಗಳನ್ನು ಗ್ರಹಿಸುವ ಮಾತಾಡುವ ಕೆಲಸಗಳು ಭಿನ್ನ ಭಿನ್ನವಾಗಿ ನಡೆಯುತ್ತವೆನ್ನುವದು ಸಿದ್ಧವಾಗುತ್ತದೆ.

೫. **ಸಮಾನವು,** ನಾಭಿ ಪ್ರದೇಶದಲ್ಲಿದ್ದುಕೊಂಡು, ಆಹಾರವನ್ನು ಪಚನವಾಗುವಂತೆ ಕರಳಿನಲ್ಲಿ ತಿರುಗಿಸುವ ಕೆಲಸವನ್ನು ಮಾಡುತ್ತದೆ. ಜಠರಾಗ್ನಿಯನ್ನು ಪುಟ ಮಾಡುತ್ತದೆ.

ಇಲ್ಲಿಗೆ ಪಂಚವಾಯುಗಳ ಸ್ಥಾನ ಕರ್ಮಗಳು ಮುಗಿದವು

ಆಕಾಶ ॥೫॥

ಶಬ್ದಗುಣಕಮಾಕಾಶಂ ॥ ತಚ್ಛ್ರೋತ್ರಕಂವಿಭುನಿತ್ಯಂಚ ॥

ಆಕಾಶವು ಶಬ್ದ ಗುಣವುಳ್ಳದ್ದು, ಅದು ಒಂದೇ ಇದ್ದು ಭೇದ ಮಾಡಲಿಕ್ಕೆ ಬಾರದ್ದಾಗಿಯೂ, ಎಲ್ಲ ಕಡೆಯಲ್ಲಿ ವ್ಯಾಪಕವಾಗಿ ಇರುತ್ತದೆ. ಅದು

ವಿನಾಶಿಯೂ, ಎಲ್ಲದರಲ್ಲಿಯೂ ಇರುವದು. ಆತ್ಮನಂತೆ ಸ್ವತಂತ್ರವಾಗಿರುತ್ತ ೆಂದು ಹೇಳುತ್ತಾರೆ. ಮಠಾಕಾಶ, ಘಟಾಕಾಶ, ಭೇರ್ಯಾಕಾಶ ದಿ. ನಿನ್ನ ಭಿನ್ನ ಅನೇಕ ಆಕಾಶಗಳು, ಇರುತ್ತಿರಲು ಆಕಾಶವು ಒಂದೇ ಹೇಗೆಂಬ ುಚಾರವು ಬರುತ್ತದೆ. ಆದರೆ ಅವು ಆಕಾಶದ ಭೇದವಲ್ಲ. ಉಪಾಧಿ (ಆವ ರಣ) ಭೇದಗಳ ವಿಶೇಷವು. ಉದಾ:- ಹೇಗೆ ಒಬ್ಬನು ರಾಜನ ವೇಷ, ಪುಸ್ತ್ರೀ ವೇಷ, ಸ್ತ್ರೀ ವೇಷಾದಿಗಳನ್ನು ಧರಿಸಿದಾಗ ಆವರಣ ಭೇದವೇ ೊರತು, ವ್ಯಕ್ತಿಯು ಒಬ್ಬನೇ ಇರುವನೋ, ಅದರಂತೆ ಉಪಾಧಿಭೇದ ುದ್ದರೂ ಆಕಾಶವು ಒಂದೇ ಇರುವದು

ಇನ್ನೊಂದೆಂದರೆ:— ಆಕಾಶ ಸಂಬಂಧಿಯಾಗಿರುವುದನ್ನು ಶರೀರ, ೀಂದ್ರಿಯ, ವಿಷಯಗಳೆಂಬ ಭೇದ ರೂಪಗಳಿಂದ ನಿಂಗಡಿಸಲು ಬರುವದಿಲ್ಲ. ುಾಕೆಂದರೆ, ಆಕಾಶದ ಪರಮಾಣುಗಳಿಲ್ಲದ್ದರಿಂದ ಅದರಿಂದ (ಆಕಾಶ ೀಂದ) ಅನಿತ್ಯ ಕಾರ್ಯ ರೂಪಗಳು ಆಗಲಾರವು ಆದ್ದರಿಂದಲೇ ಆಕಾಶವು ಿತ್ಯವು. ಆದರೆ ಇವೆಲ್ಲಕ್ಕೂ ವಿರುದ್ಧವೆನಿಸುವ ಶಬ್ದಗ್ರಹಣ ಮಾಡುವ, ಶ್ರೋತ್ರೇಂದ್ರಿಯಗಳು" ಆಕಾಶೀಯವಾದವುಗಳು. ಆಕಾಶದ ಸಂಬಂಧ ಾದ "ಶ್ರವಣೇಂದ್ರಿಯಗಳು" ಶಬ್ದಗ್ರಹಣ ಮಾಡುತ್ತವೆಂಬುವದಷ್ಟೇ ೃತವಾದ್ದರಿಂದ, ಅಣು ಶಾಸ್ತ್ರಜ್ಞರಿಗೆ ಅದರ ವಿಶೇಷ ವಿಚಾರವನ್ನು ಿಟ್ಟಿದ್ದೇವೆ.

(೪) ಪಂಚಭೂತಗಳಲ್ಲಿಯ ಪರಸ್ಪರ ಗಣವುಳ್ಳ ಪರಮಾಣು

ಪಂಚಮಹಾಭೂತೇಭ್ಯಃ ಸಮುದಿತಾನಾಂ
ಪರಮಾಣೂನಾಂ ವಿಜ್ಞಾನಂ ॥

ಪಂಚಮಹಾಭೂತಾದಿಗಳು ಒಂದರಿಂದ ಒಂದು ಕ್ರಮವಾಗಿ ಹುಟ್ಟು ುವದರಿಂದ ಅವುಗಳ ಪರಮಾಣು ದ್ರವ್ಯ ಗುಣಗಳ ವಿಚಾರಗಳು ೃಾಗಂದರೆ. ಆಕಾಶದಿಂದ ಹುಟ್ಟಿದ ವಾಯುವಿನಲ್ಲಿ ಆಕಾಶದ ಗುಣ, ವಾಯು ನ ಸ್ವಗುಣಗಳೂ ಇರುತ್ತವೆ. ಅವುಗಳ ವಿವರಣೆಯು.

ಆಕಾಶ ॥ ಆಕಾಶಕ್ಕೆ ಪರಮಾಣುವಿಲ್ಲ, ಶಬ್ದ ಗುಣವು ಮಾತ್ರ ಇರುತ್ತದೆ.

ವಾಯು ॥ ವಾಯು ಪರಮಾಣುವುಳ್ಳದ್ದು, ಆಕಾಶದಿಂದ ಹುಟ್ಟಿರುವದರಿಂದ ವಾಯುವಿನ ಪರಮಾಣುಗಳಲ್ಲಿ ಅವ್ಯಕ್ತವಾದ ಶಬ್ದ, ಸ್ವಗುಣವಾದ ಸ್ಪರ್ಶಗುಣಗಳು ಇರುತ್ತವೆ ಅದು ಕಾರ್ಯ ರೂಪವಾದಾಗ ಗುಣಗಳು ವ್ಯಕ್ತವಾಗುತ್ತವೆ. ಆಕಾಶವು ವಾಯುವಿನಲ್ಲಿ ಕೂಡಿರುತ್ತದೆ.

ಅಗ್ನಿ ॥ ತೇಜಸ್ಸು ಪರಮಾಣುವುಳ್ಳದ್ದು. ವಾಯುವಿನಿಂದ ಹುಟ್ಟಿರುವದರಿಂದ ಅಗ್ನಿಯ ಪರಮಾಣುವಿನಲ್ಲಿ ಅವ್ಯಕ್ತವಾದ ಶಬ್ದ, ಸ್ಪರ್ಶ, ಸ್ವಗುಣವಾದ ರೂಪ ಗುಣಗಳು ಇರುತ್ತವೆ ಕಾರ್ಯ ರೂಪವಾದಾಗ ಗುಣಗೋಚರವಾಗುತ್ತವೆ. ಆಕಾಶ, ವಾಯು ಇವುಗಳು ತೇಜಸ್ಸಿನಲ್ಲಿ ಕೂಡಿಕೊಂಡಿರುತ್ತವೆ

ಜಲ ॥ ಜಲವು ಪರಮಾಣುವುಳ್ಳದ್ದು. ತೇಜಸ್ಸಿನಿಂದ ಹುಟ್ಟಿರುವದರಿಂದ ಜಲದಲ್ಲಿ ಶಬ್ದ, ಸ್ಪರ್ಶ, ರೂಪ, ಸ್ವಗುಣವಾದ ರಸ, ಗುಣಗಳು ಪರಮಾಣುವಿನಲ್ಲಿ ಇರುತ್ತವೆ. ಕಾರ್ಯ ರೂಪವಾದಾಗ ಆ ಗುಣಗಳು ಗೋಚರವಾಗುತ್ತವೆ. ಆಕಾಶ, ಗಾಳಿ, ತೇಜಸ್ಸು ಜಲದಲ್ಲಿ ಕೂಡಿಕೊಂಡಿರುತ್ತವೆ.

ಇಲ್ಲಿ ಇನ್ನೊಂದು ವಿಶೇಷವೆಂದರೆ, ವಾಯುವಿನಿಂದ ಹುಟ್ಟಿದ ಅಗ್ನಿಯು, ವಾಯುವನ್ನು ನಾಶ ಪಡಿಸುವದಿಲ್ಲ. ವಾಯುವಿನಿಂದ ಅಭಿವೃದ್ಧಿ ಹೊಂದುತ್ತದೆ ಆದರೆ ಅಗ್ನಿಯಿಂದ ಹುಟ್ಟಿದ ಜಲವು, ಅಗ್ನಿಯನ್ನು ನಾಶ ಪಡಿಸುತ್ತದೆ. ಅಗ್ನಿಯಿಂದ ಕ್ಷೀಣವಾಗುತ್ತದೆ ಹೀಗೆ ವಿರುದ್ಧವಾದ ಜಲ, ಅಗ್ನಿಯ ಗುಣಗಳು ಕೂಡಿ ಒಂದರಲ್ಲಿ ಹೇಗಿರುತ್ತವೆಂಬುವದೇ ವಿಚಾರ ಮಾಡತಕ್ಕ ಸಂಗತಿಯಾಗಿದೆ. ಇದೇ ತಾರ್ಕಿಕರು, **"ಏಕಾಧಿಕರಣೇವಿರುದ್ಧಗುಣಸಮಾವೇಶೋನಭವತಿ"** ಒಂದೇ ಸ್ಥಾನದಲ್ಲಿ ವಿರುದ್ಧ ಗುಣಗಳ ಆಶ್ರಯವು ಆಗಲಾರದು. ಉದಾ:- ನೀರು ಶೀತವೆಂದರೆ ಇದರಲ್ಲಿ ಉಷ್ಣ ಗುಣವಿರುವದಿಲ್ಲ. ಹೀಗಿರುವಾಗ ಪರಸ್ಪರ ವಿರುದ್ಧವಾದ ಗುಣಗಳು ಒಂದೇ

ಪದಾರ್ಥದಲ್ಲಿ ಹೇಗಿರುವವೋ ಎಂಬ ವಿಚಾರವು ಆಶ್ಚರ್ಯಕಾರವು. ಇದಕ್ಕೆ ತಕ್ಕ ಸಮಾಧಾನವೆನಂದರೆ:- ಅಗ್ನಿಯಲ್ಲಿರುವ ಉಷ್ಣತಾ ಗುಣವು ಜಲಕ್ಕೆ ಬರುವದಿಲ್ಲ. ರೂಪವೆಂಬ ಗುಣವು ಮಾತ್ರ ಬರುತ್ತದೆ. ಆ ರೂಪವೆಂಬ ಗುಣವು ಜಲದ ಮುಖ್ಯ ಗುಣವಾದ ರಸಕ್ಕಾಗಲೀ ಇನ್ನಿತರ ಯಾವ ಗುಣಕ್ಕಾಗಲೀ ವಿರುದ್ಧವಾದದ್ದಲ್ಲ. ಜಲದಲ್ಲಿ ಅಗ್ನಿಯ ಉಷ್ಣತೆಯು ಬಂದಿದ್ದರೆ ಶೀತ ಗುಣ ಮತ್ತು ಉಷ್ಣ ಗುಣ ಇವೆರಡೂ ಪರಸ್ಪರ ವಿರುದ್ಧವಾದವುಗಳಾದ್ದರಿಂದ ಆ ಶಂಕೆಯು ಯುಕ್ತವಾಗಬಹುದಾಗಿತ್ತು ಪ್ರಕೃತಹಾಗಿಲ್ಲ ಇದಕ್ಕೆ ವಿಚಿತ್ರ ಪ್ರತ್ಯಯಾರಬ್ಧ ಎಂದು ಜನ್ನಿತ್ತಾರೆ.

ಪೃಥಿವೀ ೧॥ ಪೃಥಿವಿಯು ಪರಮಾಣುವುಳ್ಳದ್ದು, ಜಲದಿಂದ ಹುಟ್ಟಿರುವದರಿಂದ ಪೃಥಿವಿಯ ಪರಮಾಣುವಿನಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಸ್ವಗುಣವಾದ ಗಂಧ ಗುಣಗಳು ಅವ್ಯಕ್ತವಾಗಿರುತ್ತವೆ. ಅದು ಕಾರ್ಯರೂಪ (ಸ್ಥೂಲ) ವಾದಾಗ ಗುಣಗಳು ಗೋಚರವಾಗುತ್ತವೆ ಆಕಾಶ, ಗಾಳಿ, ತೇಜಸ್ಸು, ಜಲ ಇವುಗಳು ಪೃಥಿವಿಯಲ್ಲಿ ಕೂಡಿಕೊಂಡಿರುತ್ತವೆ

ಅನ್ಯೋಽನ್ಯಾನು ಪ್ರವಿಷ್ಟಾನಿ ಸರ್ವಾಣ್ಯೇತಾನಿ ನಿರ್ದಿಶೇತ್॥
ಸ್ವೇ ಸ್ವೇ ದ್ರವ್ಯೇತು ಸರ್ವೇಷಾಂ ವ್ಯಕ್ತಂ ಲಕ್ಷಣಮಿಷ್ಯತೆ॥
(ಸುಶ್ರುತ॥ ಶಾರೀರ॥ ಅ ೧ ಶ್ಲೋ. ೩೧)

ಆಕಾಶದಿಂದ ಹುಟ್ಟಿದ ವಾಯುವಿನಲ್ಲಿ, ಆಕಾಶ ಗುಣವಾದ ಶಬ್ದವೂ ಸ್ವಗುಣವಾದ ಸ್ಪರ್ಶವೂ ಕೂಡಿಕೊಂಡಿರುತ್ತವೆ. ಇದರಂತೆ ಆಕಾಶವೂ ಕೂಡಾ ವಾಯುವಿನಲ್ಲಿ ಕೂಡಿರುತ್ತದೆ. ಆದ್ದರಿಂದ ಪಂಚಭೂತಗಳು ಕ್ರಮವಾಗಿ ಆಕಾಶದಿಂದಾರಂಭಿಸಿ ಒಂದರಲ್ಲೊಂದು ಕೂಡಿರುತ್ತವೆ ಹೀಗಿರುವದರಿಂದ "**ಅನ್ಯೋಽನ್ಯಾನು ಪ್ರವಿಷ್ಟಾನಿ**" ಎಂದು ಹೇಳಿದ್ದಾರೆ. ಒಂದರಲ್ಲಿ ಒಂದು ಕೂಡಿದ್ದರ ಲಕ್ಷಣವು, ವ್ಯಕ್ತವಾದ ಆವಾವ ಲಕ್ಷಣಗಳಿಂದ ತಿಳಿಯುತ್ತದೆ. ಉದಾಃ— ವಾಯುವಿನಲ್ಲಿ ಶಬ್ದ ಗುಣವು, ಇರುವದರಿಂದ ಆಕಾಶವು ಪ್ರವಿಷ್ಟವಾಗಿದೆ ಎಂದು ಲಕ್ಷಣದಿಂದ ತಿಳಿಯುತ್ತದೆ. ಇದರಂತೆ ಎಲ್ಲವನ್ನೂ ತಿಳಿಯಬೇಕು.

"ತತ್ರ ಶಬ್ದ ಗುಣಮಾಕಾಶಂ ಮಾರುತೇ ಪ್ರವಿಷ್ಟಂ" ಶಬ್ದ ಸ್ಪರ್ಶ ಗುಣತ್ವಾತ್ ಮಾರುತಸ್ಯ; ಆಕಾಶ ಮಾರುತೌ ತೇಜಸಿ ಪ್ರವಿಷ್ಟೌ, ಶಬ್ದ ಸ್ಪರ್ಶ ರೂಪ ಗುಣತ್ವಾತ್ ತೇಜಸಃ; ಆಕಾಶ ಮರುತ್ತೇಜಾಂಸಿ ತೋಯ ದ್ರವ್ಯೇ ಪ್ರವಿಷ್ಟಾನಿ, ಶಬ್ದ ಸ್ಪರ್ಶ ರೂಪ ರಸ ಗುಣತ್ವಾತ್ತೋಯಸ್ಯ; ಆಕಾಶ ಮರುತ್ತೇಜಸ್ತೋಯಾನಿ ಪೃಥಿವ್ಯಾಮನು ಪ್ರವಿಷ್ಟಾನಿ, ಶಬ್ದ ಸ್ಪರ್ಶ ರೂಪ ರಸ ಗಂಧ ಗುಣತ್ವಾತ್ ಪೃಥಿವ್ಯಾಃ ॥ (ಸುಶ್ರುತ ಟೀಕಾ)

ಇದರ ಅರ್ಥವನ್ನು ಇಲ್ಲಿಯೇ ಮೇಲೆ ವಿವರಿಸಿದೆ. ಮತ್ತೆ ಅರ್ಥದ ವಿವರಣೆಯು ಅವಶ್ಯವಿಲ್ಲ ಪಾರ ಮಾಡಲು ವಾಕ್ಯರೂಪದಿಂದ ಅನುಕೂಲ ವಾಗಲೆಂದು ವಾಕ್ಯವನ್ನು ನಿರೂಪಿಸಿದ್ದೇನೆ.

ಆಕಾಶಾದಿ ಪಂಚಭೂತಗಳು ಒಂದರಿಂದೊಂದು ಹುಟ್ಟುರುತ್ತವೆ

"ಆತ್ಮನ ಆಕಾಶಃ ಸಂಭೂತಃ, ಆಕಾಶಾದ್ವಾಯುಃ; ವಾಯೋರಗ್ನಿಃ; ಅಗ್ನೇರಾಪಃ; ಅದ್ಭ್ಯಃ ಪೃಥಿವೀ" (ಇತಿ ಶ್ರುತಿಃ)

ಆತ್ಮನಿಂದ ಆಕಾಶವು ಪ್ರಕಟವಾಯಿತು. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿಯು; ಅಗ್ನಿಯಿಂದ ಜಲವು; ಜಲದಿಂದ ಪೃಥಿವಿಯು, ಹೀಗೆ ಕ್ರಮವಾಗಿ ಒಂದರಿಂದೊಂದು ಹುಟ್ಟುರುತ್ತವೆಂದು ವೇದವು ಹೇಳುತ್ತದೆ. ಹೀಗೆ ಒಂದರಿಂದೊಂದು ಹುಟ್ಟಿದ್ದರಿಂದ. ಒಂದರ ಗುಣವು, ತನ್ನಿಂದ ಹುಟ್ಟಿದ ಮತ್ತೊಂದು ದ್ರವ್ಯದಲ್ಲಿ ಬರುತ್ತದೆ

ದ್ರವ್ಯ ಗುಣಾದಿ ವಿವರಣೆಯು

ಪದಾರ್ಥಗಳು

ದ್ರವ್ಯ ಗುಣಕರ್ಮ ಸಾಮಾನ್ಯ ವಿಶೇಷ ಸಮವಾಯಾಭಾವಾಃ ಸಪ್ತ ಪದಾರ್ಥಾಃ ॥ (ತರ್ಕ ಸಂಗ್ರಹ)

ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ ಇವು ಏಳು ಪದಾರ್ಥಗಳು. ಇವುಗಳಲ್ಲಿಯೇ ಭಿನ್ನ ಭಿನ್ನ ಮತವಾದಿಗಳ ಅನೇಕ ಪದಾರ್ಥಗಳು ಅಂತರ್ಭಾವವಾಗುತ್ತವೆ. "**ಪದಾರ್ಥ**" ವೆಂದರೆ ಶಬ್ದದಿಂದ ಹೇಳಲ್ಪಡುತ್ತಿರುವದು, ಯಾವದೋ ಅದು ಸರ್ವವೂ ಶಬ್ದದಿಂದ ವಾಚ್ಯವಾಗಿರುವದರಿಂದ, ಹೇಳಲ್ಪಡುತ್ತಿರುವದೆಲ್ಲವುಗಳೂ ಪದಾರ್ಥವಾದವುಗಳೇ ಇರುತ್ತವೆ. ಅರ್ಥಾತ್ ಶಾಸ್ತ್ರೀಯವಾದ ವಿವರಣೆ ಎಂದರೆ:- ಪದಾರ್ಥಗಳಿಂದ ಹೇಳಲ್ಪಡುವಂಥ (ಶಬ್ದ ರೂಪ ಹೆಸರಿನಿಂದ ಸೂಚಿತವಾಗುವ) ಧರ್ಮವುಳ್ಳದ್ದೇ ಪದಾರ್ಥವು. "**ಅಭಿಧೇಯತ್ವಂ ಪದಾರ್ಥ ಸಾಮಾನ್ಯ ಲಕ್ಷಣಂ**" (ತರ್ಕ ಸಂಗ್ರಹ)

ಅಭಿಧೇಯತ್ವ ಧರ್ಮವುಳ್ಳದ್ದೆಲ್ಲವೂ ಪದಾರ್ಥಗಳು
ಇದು ಪದಾರ್ಥದ ಲಕ್ಷಣವು

೧ ದ್ರವ್ಯ

ದ್ರವ್ಯತ್ವ ಜಾತಿಮತ್ವಂ ಗುಣವತ್ವಂ ಸಮವಾಯಿ ಕಾರಣತ್ವಂ ವಾ ದ್ರವ್ಯ ಸಾಮಾನ್ಯ ಲಕ್ಷಣಂ (ತರ್ಕ ಸಂಗ್ರಹ)

ದ್ರವ್ಯದಲ್ಲಿಯ (ದ್ರವ್ಯತ್ವ) ಧರ್ಮವೇನಿದೆ, ಆ ಜಾತಿಯುಳ್ಳದ್ದ, ಗುಣವುಳ್ಳ ಧರ್ಮವಿರೋಣ, ಸಮವಾಯಿ ಕಾರಣತ್ವವಿರುವದೇ ದ್ರವ್ಯದ ಲಕ್ಷಣವು. "**ಗುಣ ಗುಣೇನೋಃ ಸಮವಾಯಃ**" ಎಂದು ಹೇಳಿರುವದರಿಂದ "**ದ್ರವ್ಯವು**" ಅದರಲ್ಲಿರುವ ಗುಣಕ್ಕೆ ಸಮವಾಯಿಕಾರಣವಾಗಿರುತ್ತದೆ.

ಚರಕ ಮತದಂತೆ ದ್ರವ್ಯ ಲಕ್ಷಣವು

ಯತ್ರಾಶ್ರಿತಾಃ ಕರ್ಮಗುಣಾಃ ಕಾರಣಂ ಸಮವಾಯಿಯತ್ ತದ್ದ್ರವ್ಯಂ ॥ (ಚರಕ॥ ಸೂತ್ರ, ಸ್ಥಾ. ಅ ೧. ಸೂ. ೫೧)

ಆಯುರ್ವೇದ ಮತದಂತೆ ದ್ರವ್ಯ ಲಕ್ಷಣವು:— ಯಾವದರಲ್ಲಿ ಕರ್ಮ ಮತ್ತು ಗುಣಗಳು ಆಶ್ರಯಿಸಿಕೊಂಡಿರುತ್ತವೆಯೋ; ಯಾವದು ಕರ್ಮ

ಗುಣಗಳಿಗೆ ಸಮವಾಯಿ ಕಾರಣವಾದದ್ದಿರುತ್ತದೆಯೋ, ಅದು ದ್ರವ್ಯವು. ವೈಶೇಷಿಕ ಮತವೂ ಆಯುರ್ವೇದ ಮತದಂತೆಯೇ ಇದೆ. "ಕ್ರಿಯಾವದ್ಗುಣ ವತ್ಸಮವಾಯಿ ಕಾರಣಂ ದ್ರವ್ಯಂ" (ವೈಶೇಷಿಕ)

ದ್ರವ್ಯ ಲಕ್ಷಣದಲ್ಲಿ ಆಯುರ್ವೇದ ಮತದಂತೆ ವಿಶೇಷವು

ಏಕೇಂದ್ರಿಯಗ್ರೋಚರತ್ವೇಸತಿ, ಏಕೇನವಾಬಹುಲೇನವಾಪಂ ಚ ಭಿರಿಂದ್ರಿಯೈರ್ಯಗ್ಗ್ರಹ್ಯತೆತದ್ದ್ರವ್ಯಂ॥ಅಥವಾಯದ್ಯದಸ್ತಿತದ್ದ್ರವ್ಯಂ॥ ಇತಿಸಾಧಾರಣ ನಿಯಮಾತ್॥ ಯದಾಯೋಗ್ಯಂ ತತ್ತದ್ದ್ರವ್ಯೈಲಕ್ಷೈ ಲಕ್ಷಣಸಮನ್ವಯಃ ॥ ತಸ್ಯ ವಿವರಣಂ:— ಏಕೇಂದ್ರಿಯ ಬಹುಲೇನ ಮೂರ್ತ ದ್ರವ್ಯಂ ॥ ಯದ್ಯಸ್ತೀತ್ಯನೇನ ಅಮೂರ್ತ ದ್ರವ್ಯ ॥

೨ ಗುಣ

ದ್ರವ್ಯಾಶ್ರಯಿತ್ವೇಸತಿ ಇಂದ್ರಿಯ ಗ್ರಾಹ್ಯತ್ವಂ ಕರ್ಮಾದಿ ಭಿನ್ನತ್ವಂ ಚ। ಗುಣ ಸಾಮಾನ್ಯ ಲಕ್ಷಣಂ॥ (ತರ್ಕಸಂಗ್ರಹ)

ಕರ್ಮಾದಿಗಳಿಂದ ಭಿನ್ನವಾಗಿಯೂ, ದ್ರವ್ಯವನ್ನಾಶ್ರಯಿಸಿಯೇ ಇರುತ್ತಿದ್ದು, ಇಂದ್ರಿಯ ಗ್ರಾಹ್ಯವಾಗಿರುವದೇ ಗುಣವು.

ಚಂದ್ರಿಕೆಯಲ್ಲಿಯ ಗುಣ ಲಕ್ಷಣವು

ಗುಣತ್ವಜಾತಿಮತ್ವಂ ದ್ರವ್ಯಕರ್ಮ ಭಿನ್ನತ್ವೇಸತಿ ಸಾಮಾನ್ಯ ವತ್ವಂ ಗುಣಸಾಮಾನ್ಯಲಕ್ಷಣಂ ॥ (ಚಂದ್ರಿಕಾ ಟೀಕಾ)

೩. ಕರ್ಮ

ಕರ್ಮತ್ವ ಜಾತಿಮತ್ವಂ ಸಂಯೋಗಭಿನ್ನತ್ವೇಸತಿ ಸಂಯೋಗ ಸಮವಾಯಿಕಾರಣತ್ವಂವಾ ಕರ್ಮಸಾಮಾನ್ಯ ಲಕ್ಷಣಂ ॥
(ಚಂದ್ರಿಕಾ ಟೀಕಾ)

ಕರ್ಮತ್ವ ಜಾತಿಯುಳ್ಳದ್ದು, ಸಂಯೋಗದಿಂದ ಹೊರತಾದದ್ದು, ಸಂಯೋಗಕ್ಕೆ ಸಮವಾಯಿ ಕಾರಣವಾಗಿರುವದೇ ಕರ್ಮ ಲಕ್ಷಣವು.

೪. ಸಾಮಾನ್ಯ

ಸಾಮಾನ್ಯಲಕ್ಷಣಂತು:-ನಿತ್ಯತ್ವೇಸತಿ ಅನೇಕ ಸಮವೇತತ್ವಂ॥

(ಚಂದ್ರಿಕಾ ಟೀಕಾ)

ನಿತ್ಯಧರ್ಮವುಳ್ಳದ್ದಿರ್ದ್ದು, ಅನೇಕವಾದವುಗಳಲ್ಲಿ ಏಕತ್ವವನ್ನುಂಟು ಮಾಡುವ ಧರ್ಮವುಳ್ಳದ್ದೇ ಸಾಮಾನ್ಯವು.

ಉದಾ:- ಆಕಳನ್ನು ಗುರುತಿಸುವ ಧರ್ಮದಿಂದ, ಬೇರೆ ಬೇರೆ ದೇಶದಲ್ಲಿರುವ ಯಾವದೇ ಆಕಳಿದ್ದರೂ, ಇದು ಆಕಳು, "ಅಯಂ ಗೌಃ" ಎಂಬ ಒಂದೇ ಸಾಮಾನ್ಯ ಜ್ಞಾನವಾಗುತ್ತದೆಯೋ? ಅದೇ ಸಾಮಾನ್ಯವು. ಅರ್ಥಾತ್ ಸಮಾನವಾದವುಗಳಲ್ಲಿ (ಸದೃಶವಾದವುಗಳಲ್ಲಿ) ಒಂದೇ ಎಂಬ ಭಾವದಿಂದ, ಯಾವ ಧರ್ಮವಿದೆಯೋ ಅದೇ ಸಾಮಾನ್ಯವು.

"ಪರಮುಪರಂಚೇತಿ ದ್ವಿವಿಧಂ ಸಾಮಾನ್ಯಂ" (ತರ್ಕಸಂಗ್ರಹ)

(೧) ಪರಂ (೨) ಅಪರಂ ಎಂದು ಸಾಮಾನ್ಯವು ಎರಡು ವಿಧವು.

೧. ಪರತ್ವಂ:— ಅಧಿಕದೇಶವೃತ್ತಿತ್ವಂ ॥

ಅಧಿಕ ದೇಶದಲ್ಲಿರುವ ಧರ್ಮವುಳ್ಳದ್ದೇ, ಪರವೆಂಬ ಸಾಮಾನ್ಯವು. ಉದಾ:- ಪದಾರ್ಥವು, ದ್ರವ್ಯಕ್ಕಿಂತಲೂ ಅಧಿಕ ದೇಶದಲ್ಲಿರುತ್ತದೆ. ಹೀಗಿರುವದರಿಂದ, ದ್ರವ್ಯದಲ್ಲಿರುವ ಸಾಮಾನ್ಯಕ್ಕಿಂತಲೂ, ಪದಾರ್ಥದಲ್ಲಿರುವ ಸಾಮಾನ್ಯವು ಅಧಿಕದೇಶದಲ್ಲಿರುವದು. ಹೀಗಿರುವದರಿಂದ ಅದು **"ಪರ"** ಸಾಮಾನ್ಯವೆಂದು ತಿಳಿಯಬೇಕು

೨. ಅಪರತ್ವಂ:— ನ್ಯೂನದೇಶವೃತ್ತಿತ್ವಂ ॥

ನ್ಯೂನ ದೇಶ (ಅಧಿಕ ದೇಶವಲ್ಲದ್ದರಲ್ಲಿ) ದಲ್ಲಿರುವ ಧರ್ಮವುಳ್ಳದ್ದು **"ಅಪರ"** ವೆಂಬ ಸಾಮಾನ್ಯವು.

೫. ವಿಶೇಷ

ನಿತ್ಯದ್ರವ್ಯವೃತ್ತಯೋ ವಿಶೇಷಾಸ್ತ್ವನಂತಾ ಏವ ॥

(ತರ್ಕಸಂಗ್ರಹ)

ನಿತ್ಯದ ದ್ರವ್ಯದಲ್ಲಿರತಕ್ಕ **"ವಿಶೇಷವು"** ಅಸಂಖ್ಯವಾದದ್ದಿರುತ್ತವೆ. ನಿತ್ಯ ದ್ರವ್ಯವೆಂದರೆ ಪೃಥಿವ್ಯಾದಿ ಪರಮಾಣುಗಳು, ಮತ್ತು ಆಕಾಶಾದಿ ಎಲ್ಲಾ ದ್ರವ್ಯಗಳು. ವಿಶೇಷದಿಂದ ಎಲ್ಲ ದ್ರವ್ಯಗಳು ಭಿನ್ನವಾಗಿರುವದರಿಂದ

ಪ್ರತ್ಯೇಕವಾಗಿ ತಿಳಿಯುತ್ತವೆ. ಆರ್ಥಾತ್ ಈ ಭೇದಕ್ಕನೇ ವಿಶೇಷವೆಂದು ಹೇಳುತ್ತಾರೆ ಪರಮಾಣುಗಳಲ್ಲಿ ಸ್ವಾಭಾವಿಕವಾಗಿಯೇ "ಅಯಂ ಪೃಥ್ವೀಯಃ" "ಅಯಂ ಜಲೀಯಃ" ಎಂಬ ಭೇದವು ಇರುವದರಿಂದ ಅದು ವಿಶೇಷದ್ದಲ್ಲವೆಂದು ಹೇಳುತ್ತಾರೆ. ಸ್ವಾಭಾವಿಕ ಭೇದ ಸಿದ್ಧವಿರಲು ಭೇದವು ವಿಶೇಷದ್ದೆಂದು ಹೇಳಲು ಬರುವದಿಲ್ಲೆಂದು ಕೆಲವರ ಮತವು. "ದ್ವ್ಯಣುಕ ಪರ್ಯಂತವಾದ ಅವಯವವುಳ್ಳವುಗಳಲ್ಲಿ, ಭೇದವು ಪ್ರತ್ಯಕ್ಷವಾಗಿರುವದರಿಂದ (ಭೇದ ತೋರುವದರಿಂದ) ಇದು ಅಸಂಭವನವೆಂದು ಅನಿಸಬಹುದು."

ಆದರೆ:— ಭೇದವು ಕಪಾಲದಿಂದ ದ್ವ್ಯಣುಕಪರ್ಯಂತವಾಗಿ, ಅವಯವಿಯಲ್ಲಿ (ದ್ರವ್ಯದಲ್ಲಿ) ಸ್ಪಷ್ಟವಾಗಿ ಪ್ರತ್ಯಕ್ಷವಾಗಿಯೇ ಇದೆ. ಪರಮಾಣುವಿನಲ್ಲಿಯೇ ಆರಂಭವಾಗಿ, ಭೇದವು ಸಂಭವವಾದ್ದರಿಂದ "ನಿತ್ಯದ್ರವ್ಯವೃತ್ತಯಃ" ಎನ್ನುವದೇ ಯೋಗ್ಯವು. ನಿತ್ಯದ್ರವ್ಯನೆಂದು ಹೇಳುವದರಿಂದ ಆಕಾಶಾದಿಗಳಲ್ಲಿ ಭೇದಜ್ಞಾನವಾಗಬೇಕೆಂದು ಹೇಳಿರುವರು.

ಆಯುರ್ವೇದದಲ್ಲಿಯ ಸಾಮಾನ್ಯ ವಿಶೇಷ ಲಕ್ಷಣ

ಸಾಮಾನ್ಯಮೇಕತ್ವಕರಂ ವಿಶೇಷಸ್ತು ಪೃಥಕ್ತ್ವಕೃತ್ ॥
ತುಲ್ಯಾರ್ಥತಾಹಿಸಾಮಾನ್ಯಂ ವಿಶೇಷಸ್ತು ವಿಪರ್ಯಯಃ ॥
(ಚರಕ॥ ಸೂ. ಸ್ಥಾ ಅ ೧ ಶ್ಲೋ ೪೫)

ಸದೃಶವಾದದ್ದನ್ನು ಏಕತ್ವ ಧರ್ಮದಿಂದ ಒಂದನ್ನಾಗಿ ಮಾಡುವದು, ಸಾಮಾನ್ಯವು. ಪೃಥಕ್ತ್ವ ಧರ್ಮವುಳ್ಳ ವಿಶೇಷವ, ಅಸದೃಶವಾಗಿರುವದನ್ನು ತೋರಿಸುತ್ತದೆ. ಆದ್ದರಿಂದ "**ವಿಪರ್ಯಯಃ**" ಎಂದು ಹೇಳಿದ್ದಾರೆ. ಅಥವಾ "**ಅತುಲ್ಯಾರ್ಥ ಧರ್ಮ, ಪೃಥಕ್ತ್ವ ಧರ್ಮವುಳ್ಳದ್ದು**" ವಿಶೇಷವೆಂದು ಲಕ್ಷಣ ಮಾಡಬಹುದು.

೬. ಸಮವಾಯ

ಸಮವಾಯಸ್ತ್ವೇಕವಿವ ॥ (ತರ್ಕಸಂಗ್ರಹ)

ಭಿನ್ನಮಾಡಲು ಬರದೇ ಇರುವ "ಅತ್ಯಂತ ಸಂಬಂಧವೇ" ಸಮವಾಯವು. ಅದು ಒಂದೇ ಇರುತ್ತದೆ.

ಸಮವಾಯ ವೃತ್ತಿತ್ವವು

ಅವಯವಾವಯವಿನೋರ್ಜಾತಿವ್ಯಕ್ತ್ಯೋರ್ಗುಣಗುಣಿನೋಃ ಕ್ರಿಯಾ ಕ್ರಿಯಾವತೋರ್ನಿತ್ಯದ್ರವ್ಯ ವಿಶೇಷಯೋಶ್ಚ ಯಃ ಸಂಬಂಧಃ ಸ ಸಮವಾಯಃ (ಚಂದ್ರಿಕಾ ಟೀಕಾ)

ಅವಯವ ಮತ್ತು ಅವಯವವುಳ್ಳ ವಸ್ತುಗಳಲ್ಲಿ, ಯಾವ ಅತ್ಯಂತ ಸಂಬಂಧವಿದೆಯೋ ಅದು ಸಮವಾಯವು ಇದರಂತೆ ಜಾತಿ, ವ್ಯಕ್ತಿಗಳಲ್ಲಿಯೂ; ಗುಣ, ಗುಣವುಳ್ಳದರಲ್ಲಿಯೂ, ಕ್ರಿಯೆ ಮತ್ತು ಕ್ರಿಯೆಯುಳ್ಳದ್ದರಲ್ಲಿಯೂ; ನಿತ್ಯ ದ್ರವ್ಯ, ವಿಶೇಷಗಳಲ್ಲಿಯೂ, ಇರುವ ಸಂಬಂಧವು "ಸಮವಾಯ" ವೆಂದು ತಿಳಿಯಬೇಕು

೭ ಅಭಾವ

ದ್ರವ್ಯಾದಿ ಭಾವ ಷಟ್ಕ ಭಿನ್ನತ್ವಂ ಅಭಾವತ್ವಂ (ಚಂದ್ರಿಕಾ ಟೀಕಾ) ಇರತಕ್ಕ ದ್ರವ್ಯಾದಿಗಳಲ್ಲಿಯಂತೆ ಧರ್ಮವಿಲ್ಲದಿರುವದು, ಅಥವಾ ಇರತಕ್ಕವುಗಳಾದ ಪೃಥಿವ್ಯಾದಿಗಳಿಂದ ಭಿನ್ನವಾದ ಧರ್ಮವುಳ್ಳದ್ದು. ಅರ್ಥಾತ್ ಅಭಾವತ್ವಧರ್ಮವುಳ್ಳದ್ದೇ ಅಭಾವವು ಅಭಾವವೆಂದರೆ ಇಲ್ಲದ್ದು, ಇರದೇ ಇರುವದು ಎಂಬರ್ಥ

ಅಭಾವ ಗ್ರಹಣವು

ಯೇನೇಂದ್ರಿಯೇಣ ಯಾ ವ್ಯಕ್ತಿರ್ಗೃಹ್ಯತೆ, ತೇನೈವೇಂದ್ರಿಯೇಣ, ತದ್ಗತಾ ಜಾತಿ ಸ್ತದಭಾವಶ್ಚ ಗೃಹ್ಯತೆ॥ ಇತಿ ನಿಯಮಾತ್॥ (ಚಂದ್ರಿಕಾ ಟೀಕಾ)

ಯಾವ ಇಂದ್ರಿಯದಿಂದ, ಯಾವದು ಗ್ರಹಿಸಲ್ಪಡುತ್ತದೆಯೋ? ಅದೇ ಇಂದ್ರಿಯದಿಂದ, ಅದರಲ್ಲಿಯ ಜಾತಿ,(ಧರ್ಮತ್ವ) ಅದರ ಅಭಾವವೂ, ಗ್ರಹಿಸಲ್ಪಡುತ್ತದೆ.

ಉದಾ:— ಘಟವನ್ನು ನೋಡುವ ಕಣ್ಣಿನಿಂದ, ಘಟ ಇಲ್ಲದಿದ್ದರೆ; ಅದರ ಅಭಾವವು ತಿಳಿಯುತ್ತದೆ. "ತದಭಾವಶ್ಚ ಗೃಹ್ಯತೆ" ಎಂದು ಅನ್ನು ವದರಿಂದ, ಅಭಾವವು ಗ್ರಹಿಸಲ್ಪಡುತ್ತದೆಯೋ ಹೇಗೆ ? ಇಲ್ಲದೆ ಇರುವದೇ ಅಭಾವವು, ಇಲ್ಲದೇ ಇರುವದನ್ನು ಹೇಗೆ ಗ್ರಹಿಸಬೇಕೆಂಬ ಆಕ್ಷೇಪ ಬರುತ್ತದೆ. ಯಾವದಾದರೂ ವಸ್ತುವಿದ್ದರೆ ಅದನ್ನು ಗ್ರಹಿಸುತ್ತೇವೆ. ಅದರಂತೆ, ಇಲ್ಲದೇ ಇರುವದರಿಂದ "ಇಲ್ಲ"ಎನ್ನುವ ಜ್ಞಾನವಾಗುತ್ತದೆ ಅದೇ ಅಭಾವ ಗ್ರಹಣವು.

ಅಭಾವದಲ್ಲಿಯು ವಿಶೇಷ:— ಆಯುರ್ವೇದದಲ್ಲಿ ಅಭಾವ ಶಬ್ದವು ಎಂದರೂ, ಅದನ್ನು ಪದಾರ್ಥವೆಂದು ಗ್ರಹಿಸಿರುವದಿಲ್ಲ. ಚರಕ ಸಂಹಿತೆಯಲ್ಲಿ ಅಭಾವವನ್ನು ಬಿಟ್ಟೇ ಪದಾರ್ಥಗಳನ್ನು ಹೇಳಿದ್ದಾರೆ. ಇದರಿಂದ ಅಭಾವ ವಾದಿಗಳಾದ "ಬೌದ್ಧಕಾಲಕ್ಕಿಂತ" ಪೂರ್ವದಲ್ಲಿಯೇ ಚರಕಸಂಹಿತೆ ರಚಿತವಾಗಿದೆ ಎಂದು ಹೇಳಬಹುದು

ಪದಾರ್ಥ ದ್ರವ್ಯಾದಿಗಳ ಭೇದಗಳು

೧. ದ್ರವ್ಯ

ತತ್ರದ್ರವ್ಯಾಣಿ:— ಪೃಥಿವ್ಯಪ್ತೇಜೋವಾಯ್ವಾಕಾಶ ಕಾಲದಿಗಾತ್ಮಮನಾಂಸಿನವೈವ ॥ (ತರ್ಕ ಸಂಗ್ರಹ)

೨ ಗುಣ

ರೂಪರಸಗಂಧಸ್ಪರ್ಶ ಸಂಖ್ಯಾಪರಿಮಾಣಪೃಥಕ್ತ್ವಸಂಯೋಗ ವಿಭಾಗ ಪರತ್ವಾಽಪರತ್ವ ಗುರುತ್ವ ದ್ರವತ್ವ ಸ್ನೇಹ ಶಬ್ದ ಬುದ್ಧಿ ಸುಖದುಃಖೇಚ್ಛಾ ದ್ವೇಷಪ್ರಯತ್ನಧರ್ಮಾಧರ್ಮ ಸಂಸ್ಕಾರಾಶ್ಚತುರ್ವಿಂಶತಿರ್ಗುಣಾಃ ॥ (ತರ್ಕ ಸಂಗ್ರಹ)

೩. ಕರ್ಮ

ಉತ್ಕ್ಷೇಪಣಾಽಪಕ್ಷೇಪಣಾಽಕುಂಚನ ಪ್ರಸಾರಣ ಗಮನಾನಿ ಪಂಚಕರ್ಮಾಣಿ ॥ (ತರ್ಕ ಸಂಗಹ)

೪. ಸಾಮಾನ್ಯ

ಪರಮುಪರಂಚೇತಿ ದ್ವಿವಿಧಂ ಸಾಮಾನ್ಯಂ ॥ (ತರ್ಕ ಸಂಗ್ರಹ)

೫. ವಿಶೇಷ

ನಿತ್ಯದ್ರವ್ಯವೃತ್ತಯೋವಿಶೇಷಾಸ್ತ್ವನಂತಾಏವ॥(ತರ್ಕಸಂಗ್ರಹ)

೬ ಸಮವಾಯ

ಸಮವಾಯಸ್ತ್ವೇಕಏವ ॥ (ತರ್ಕ ಸಂಗ್ರಹ)

೭. ಅಭಾವ

ಅಭಾವಶ್ಚತುರ್ವಿಧಃ, ಪ್ರಾಗಭಾವಃ ಪ್ರಧ್ವಂಸಾಭಾವೋಽತ್ಯಂ
ತಾಭಾವೋಽನ್ಯೋನ್ಯಾಭಾವಶ್ಚೇತಿ ॥ (ತರ್ಕ ಸಂಗ್ರಹ)
॥ ಪೂರ್ವೋಕ್ತಾನಾಂ ದ್ರವ್ಯಾದೀನಾಂ ವಿಸ್ತಾರಃ ॥

(೫) ಪಂಚಮಹಾ ಭೂತಗಳಿಂದ ಶುಕ್ರಾರ್ತವ ಉತ್ಪತ್ತಿ

"ಪಂಚಮಹಾಭೂತೇಭ್ಯಃ ಶುಕ್ರಾರ್ತವಯೋಃ ಉತ್ಪತ್ತಿಃ"

ಪ್ರಾಣಿಗಳ ಶರೀರವು ಪಂಚಮಹಾ ಭೂತಗಳಿಂದ ಆಗಿರುತ್ತದೆ. ಪ್ರಾಣಿಗಳ ಆಹಾರವೂಕೂಡಾ ಪಂಚಭೂತಾತ್ಮಕವಾದದ್ದಿರುತ್ತದೆ. ಪ್ರಾಣಿಗಳಿಂದ ಭುಂಜಿಸಲ್ಪಟ್ಟ ಆಹಾರವು ಶರೀರದಲ್ಲಿ ಪಚನವಾಗಿ ದ್ರವ ರೂಪವಾದ "ರಸ" ವೆಂಬ ಪದಾರ್ಥವಾಗುತ್ತದೆ. ರಸಕ್ಕೆ ಹೃದಯವು ಆಶ್ರಯಸ್ಥಾನವಾಗಿರುತ್ತದೆ. ಇದಕ್ಕೆ ಪ್ರಮಾಣ (ಸುಶ್ರುತ॥ ಸೂ. ೫೧೪)

"ತತ್ರಪಾಂಚಭೌತಿಕಸ್ಯ, ಚತುರ್ವಿಧಸ್ಯ, ಷಡ್ರಸಸ್ಯ, ದ್ವಿವಿಧ
ವೀರ್ಯಸ್ಯಾಷ್ಟವಿಧವೀರ್ಯಸ್ಯವಾನೇಕ ಗುಣಸ್ಯೋಪಯು

ಕೃತ್ಸ್ನಾಹಾರಸ್ಯಸಮ್ಯಕ್ ಪರಿಣತಸ್ಯಯಸ್ತೇಜೋಭೂತಃ ಸಾರಃ ಪರಮಸೂಕ್ಷ್ಮಃ ಸ "ರಸ" ಇತ್ಯುಚ್ಯತೇತಸ್ಯಚ ಹೃದಯಂ ಸ್ಥಾನಂ ಸಹೃದಯಾತ್ ಚತುರ್ವಿಂಶತಿಧಮನೀರನುಪ್ರವಿಶ್ಯ, ಊರ್ಧ್ವ ಗಾದಶ, ದಶಾಧೋಗಾಮಿನ್ಯಃ, ಚತಸ್ರಶ್ಚತಿರ್ಯಗ್ಗಾಃಕೃತ್ಸ್ನಂ ಶರೀರಮುಹರಹಸ್ತರ್ಪಯತಿ, ವರ್ಧಯತಿ, ಧಾರಯತಿ, ಯಾಪಯತಿ, ಚಾಽದೃಷ್ಟಕೇನಹೇತುನಾಕರ್ಮಣಾ"

ಪಂಚಮಹಾಭೂತಾತ್ಮ (ಪೃಥಿವ್ಯಾದಿ) ಕವಾದ, ಭಕ್ಷ್ಯ, ಭೋಜ್ಯ ಲೇಹ್ಯ ಪೇಯಗಳೆಂದು ನಾಲ್ಕು ವಿಧವಾದ, ಮಧುರ, ಆಮ್ಲ, ಲವಣ ಕಟು, ತಿಕ್ತ, ಕಷಾಯಗಳೆಂಬ ಆರು ರಸಯುಕ್ತವಾದ, ಉಷ್ಣ, ಶೀತ ಗಳೆಂಬ ದ್ವಿವಿಧವೀರ್ಯಾತ್ಮಕವಾದ, ಅಥವಾ ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ವಿಶದ, ಪಿಚ್ಛಿಲ, ಮೃದು, ತೀಕ್ಷ್ಣಗಳೆಂಬ ಎಂಟು ವಿಧವೀ ರ್ಯವುಳ್ಳ, ಗುರುಮಂದಾದಿ ಇಪ್ಪತ್ತು ಗುಣವುಳ್ಳದ್ದು ಆಹಾರವು. (ವಾಗ್ಭಟ। ಸೂತ್ರ। ಅ ೧ ಶ್ಲೋ. ೧೪)

ಗುಣಗಳು

ಗುರು ಮಂದ ಹಿಮ ಸ್ನಿಗ್ಧ ಶ್ಲಕ್ಷ್ಣ ಸಾಂದ್ರ ಮೃದು ಸ್ಥಿರಾಃ॥
ಗುಣಾಃ ಸಸೂಕ್ಷ್ಮ ವಿಶದಾ ವಿಂಶತಿಃ ಸವಿಪರ್ಯಯಾಃ ॥೧೪॥

ಮೇಲಿನ ಶ್ಲೋಕದಲ್ಲಿ ಹೇಳಿದ ಹತ್ತು (೧೦) ಗುಣಗಳು, ಅವುಗಳ ವಿರುದ್ಧವಾದವುಗಳು (೧೦), ಹೀಗೆ ಇಪ್ಪತ್ತು ಒಟ್ಟು (೨೦), ಗುಣಗಳು.

ಇವುಗಳಿಂದ ಕೂಡಿದ ಉಪಯೋಗಿಸಿದ "ಆಹಾರದ" ಸತ್ವರೂಪವಾದ ಪರಮಸೂಕ್ಷ್ಮ ಸಾರವು, "ರಸ"ವೆಂದು ಹೇಳಲ್ಪಡುತ್ತದೆ.

ರಸಕ್ಕೆ ಹೃದಯವು ಆಶ್ರಯಸ್ಥಾನವು. ಅದು ಹೃದಯದಿಂದ ಹೊರ ಟರುವ (೨೪) ಧಮನಿಗಳನ್ನು ಪ್ರವೇಶಿಸುತ್ತದೆ ಪ್ರವೇಶಿಸಿದ ನಂತರ ಧಮನಿಗಳ ಮುಖಾಂತರವಾಗಿ, ಸಂಚರಿಸುತ್ತದೆ.

ಧಮನಿಗಳ ಪ್ರಕಾರಗಳು

ಧಮನಿಗಳೆಂದರೆ ಕೊಳವೆಯಂತಿರುವ ಮಾಂಸದ ನಲಿಕೆಗಳು. ಹೃದಯದಿಂದ ವೇಲ್ಚಾಗಕ್ಕೆ ಹೋದವುಗಳು (೧೦). ಹೃದಯದಿಂದ ಕೆಳ ಭಾಗಕ್ಕಿಳಿದವುಗಳು(೧೦). ಎಡ, ಬಲ, ಪಾರ್ಶ್ವಗಳಲ್ಲಿ, ಮೇಲೆ ಕೆಳಗೆ ಒಂದೊಂದರಂತೆ, ಎಡ ಪಾರ್ಶ್ವದಲ್ಲಿ (೨). ಬಲದಲ್ಲಿ (೨). ಒಟ್ಟು ಇಪ್ಪತ್ತುನಾಲ್ಕು (೨೪) ಧಮನಿಗಳು ಇರುತ್ತವೆ.

ರಸವು ಹೃದಯದಿಂದ ಹೊರಟ ಈ ಧಮನಿಗಳಲ್ಲಿಯೇ ಸಂಚರಿಸುತ್ತದೆ. ಸಂಪೂರ್ಣ ಶರೀರವನ್ನು ಸದಾತೃಪ್ತಿ ಪಡಿಸುತ್ತದೆ. ಬೆಳೆಸುತ್ತದೆ. ಧಾರಣಾಮಾಡುತ್ತದೆ. ಜೀವಂತವಿಡುತ್ತದೆ ಬಾಲಕನನ್ನು,ಮಧ್ಯ ವಯಸ್ಸಿನವನನ್ನು, ವೃದ್ಧರನ್ನು ಎಲ್ಲರನ್ನೂ, ತೃಪ್ತಿಪಡಿಸುತ್ತದೆ. ಆದರೆ ಬಾಲಕನನ್ನು ಬೆಳೆಸುತ್ತದೆ. ಮಧ್ಯ ವಯಸ್ಸಿನವರನ್ನು ಇದ್ದಂತೆಯಿಡುತ್ತದೆ. ಮುದುಕರನ್ನು ಜೀವಂತ ಮಾತ್ರ ಇಡುತ್ತದೆ. ಅರ್ಥಾತ್, ಮುದುಕರಿಗೆ ಆಹಾರ ರಸದಿಂದ ದೇಹಾಭಿವೃದ್ಧಿ, ಅಥವಾ ಇದ್ದಂತೆ ಇಡುವದು ಸಹ ಸಾಧ್ಯವಾಗುವದಿಲ್ಲ. ಆಹಾರ ರಸ ಒಂದೇ ಇದ್ದರೂ, ಹೀಗೆ ಪರಿಣಾಮ ಫಲದಲ್ಲಿ ವ್ಯತ್ಯಾಸವಾಗಲು ಕಾರಣವೇನು? ಇತ್ಯಾದಿ ತರ್ಕ ವಿತರ್ಕಗಳು ಬರುತ್ತವೆ ಇದಕ್ಕೆ ಉತ್ತರವಿಷ್ಟೇ; ಅನಿರ್ವಚನೀಯವಾದ ಕಾರಣ, ಕರ್ಮಗಳೆಂದೇ ಹೇಳಬೇಕಾಗುತ್ತದೆ ಸೃಷ್ಟಿಯ ಸ್ವಾಭಾವಿಕ ಸ್ಥಿತಿಯೇ ಹೀಗಿರುತ್ತದೆ ಆದ್ದರಿಂದ ಆಹಾರ ರಸದಲ್ಲಿಯ ವ್ಯತ್ಯಾಸವೇನಿರದೆ, ಶರೀರದಲ್ಲಿ ಸ್ವಾಭಾವಿಕವಾದ ದೋಷರವಲ್ಲದ, ಸೂಕ್ಷ್ಮವಾದ ಸ್ಥಿತಿ ಕ್ರಿಯಾ ಇವುಗಳೇ ಫಲ ಭಿನ್ನವಾಗಲಿಕ್ಕೆ ಕಾರಣವೆಂದು ನಿರ್ಧರಿಸಬಹುದು.

ಅನ್ನರಸದಲ್ಲಿ ವರ್ಧನೆಯ ಗುಣವಿರುವದಾದ್ದರಿಂದ, ಮುದುಕನೂ ಸಹ ಆಹಾರವನ್ನು ತೆಗೆದುಕೊಳ್ಳುತ್ತಾನೆ, ಆದರಿಂದ (ಆಹಾರ ರಸದಿಂದ) ಅವನ ಶರೀರಾಭಿವೃದ್ಧಿಯಾಕಾಗಬಾರದು? ಎನ್ನುವದಕ್ಕೆ ಹೀಗೆ ಅಭಿಪ್ರಾಯ ಪಟ್ಟಿರುತ್ತಾರೆ

"ಸಏವಅನ್ನರಸೋವೃದ್ಧಾನಾಂ (ಜರಾ) ಪರಿಪಕ್ವಶರೀರತ್ವಾತ್ ಅಪ್ರೀಣನೊಭವತಿ" (ಸುಶ್ರುತ ॥ಸೂತ್ರಸ್ಥಾನ॥ ಅ ೧೪ ಸೂ. ೧೯)

ರಸರಕ್ತಾದಿ ಎಲ್ಲ ಧಾತುಗಳನ್ನೂ, ಪೂರ್ಣ ಶರೀರವನ್ನೂ, ಪೋಷಿಸಿ ಬೆಳೆಸುವ ಅನ್ನರಸವು. ಮುದುಕರ ಶರೀರವು ಮುಪ್ಪಿನಿಂದ ಪರಿಪಕ್ವ (ಪಣ್ಣಾಗಿರುವ) ವಾಗಿರುವದರಿಂದ, ಅಭಿವೃದ್ಧಿಯನ್ನು ಮಾಡುವದಿಲ್ಲ. ಹೀಗೆಂದು ಹೇಳಿದ್ದಾರೆ ಇನ್ನೆಲ್ಲವಕ್ಕೂ ಆವಾವ ಅವಸ್ಥೆಯಲ್ಲಿರುವ, ದೇಹದಲ್ಲಿಯ ಅನಿರ್ವಚನೀಯವಾದ ಕ್ರಿಯೆಗಳೇ ಕಾರಣವು. ಇದರ ಹೊರತು ಇನ್ನಾವ ನಿಶ್ಚಯಾತ್ಮಕ ಕಾರಣವು ದೊರೆಯಲಾರದು.

ರಸಶಬ್ದದ ರೂಪ ನಿಷ್ಪತ್ತಿಯು

ತತ್ರ "ರಸ" ಗತೌ ಧಾತುಃ, ಅಹರಹರ್ಗಚ್ಛತೀತ್ಯತೋರಸಃ
(॥ಸುಶ್ರುತ॥ ಸೂತ್ರಸ್ಥಾನ। ಅ. ೧೪ ಸೂ. ೧೩)

ಗತ್ಯರ್ಥವುಳ್ಳ "ರಸ" ಎಂಬ ಧಾತುವು. ಯಾವಾಗಲೂ, ಗಮನ ಶೀಲವಾದದ್ದು, ಸದಾಹೋಗುತ್ತಿರುತ್ತದೆ, ಎಂಬ ಅರ್ಥದಲ್ಲಿ ರೂಪಸಿದ್ಧಿಮಾಡಲು "ರಸ" ಎಂಬ ಹೆಸರು ಶಾಸ್ತ್ರತಃ ಅನ್ವರ್ಥಕವಾದದ್ದಿರುತ್ತದೆ

"ಸಶಬ್ದಾರ್ಚಿರ್ಜಲ ಸಂತಾನವದಣುನಾವಿಶೇಷೇಣಾऽನುಧಾವತ್ಯೇವಂ ಶರೀರಂ ಕೇವಲಂ" (ಸು॥ಸೂತ್ರ॥ ಅ. ೧೪ ಸೂ. ೧೬)

ಸದಾ ಸಂಚರಿಸುತ್ತಿರುವ ಗುಣವುಳ್ಳ ರಸವು, ಶಬ್ದ, ಅಗ್ನಿಯ ಜ್ವಾಲೆ, ನೀರಿನ ಧಾರೆ, ಇವುಗಳಂತೆ ಅತಿ ಸೂಕ್ಷ್ಮವಾಗಿ ಸಮಗ್ರ ಶರೀರವನ್ನು ಸಂಚಾರ ಮಾಡುತ್ತಿರುತ್ತದೆ.

ಶಬ್ದ ಉದಾಹರಣೆಯಿಂದ ಶಬ್ದದಂತೆ, ಅಡ್ಡ ಸಂಚಾರ ಅಥವಾ ವಿಶ್ವತೋಗಮನ; ಜ್ವಾಲೆಯ ಉದಾಹರಣೆಯಿಂದ ಮೇಲ್ಭಾಗ (ಊರ್ಧ್ವ) ಗಮನವು, ನೀರಿನ ಧಾರೆ ಅಥವಾ ಪ್ರವಾಹ ಇದರ ಉದಾಹರಣೆಯಿಂದ ಕೆಳಗಡೆ (ಅಧೋಭಾಗ) ಸಂಚಾರವು, ರಸಕ್ಕೆ ಈ ಪ್ರಕಾರ ಎಲ್ಲ ಭಾಗಗಳ ಸಂಚಾರವಿದೆಯೆಂದು ಹೇಳಿದಂತಾಗುತ್ತದೆ.

ಶಬ್ದಾದಿ ದೃಷ್ಟಾಂತಗಳಿಂದ, ತೀಕ್ಷ್ಣವಾದ ಜಠರಾಗ್ನಿ, ಮಧ್ಯ, ಮಂದಾಗ್ನಿ, ಇವುಗಳೂ ಸಹ ಧ್ವನಿತವಾಗುತ್ತವೆ.

ತೀಕ್ಷ್ಣಾಗ್ನಿಯಿದ್ದವನಲ್ಲಿ ರಸದ ಸಂಚಾರವು 'ಶಬ್ದ'ಗತಿಯಂತೆಯೂ, ವ:ಧ್ಯತರವಾದ ಜಠರಾಗ್ನಿಯಿದ್ದವನಲ್ಲಿ ರಸದ ಗತಿಯು ಜ್ವಾಲೆಯಂತೆಯೂ, ಮಂದಾಗ್ನಿಯಿದ್ದವನಲ್ಲಿ ಜಲದ ಪ್ರವಾಹ ಗತಿಯಂತೆಯೂ, ರಸದ ಸಂಚಾರವು ಇರುತ್ತದೆ. ಇದರಿಂದ ಅತಿವೇಗ, ಮಧ್ಯಮ ವೇಗ, ಕನಿಷ್ಠ ವೇಗಗಳು ಸೂಚಿತವಾಗುತ್ತವೆ.

ತಸ್ಯ ಶರೀರಮನುಸರತ್ಕೋನುಮಾನಾದ್ಗ ತಿರುಪಲಕ್ಷ್ಯಿತ ವ್ಯಾಕ್ಷ್ಯಯು ವೃದ್ಧಿವೈಕೃತೈಃ । (ಸು। ಸೂ। ಅ ೧೪)

ಶರೀರದಲ್ಲಿ ಸಂಚರಿಸುವ ರಸದ ಗತಿಯನ್ನು, ರಸದ ಕ್ಷೀಣತೆ, ವೃದ್ಧಿ, ವಿಕೃತಿ, ಇವುಗಳಿಂದ ಊಹಿಸಿ ತಿಳಕೊಳ್ಳಬೇಕು. ರಸದ ಕ್ಷೀಣತೆಯಿಂದ ಹೃದಯಕಂಪ ಪೀಡಾಇತ್ಯಾದಿಗಳು ಆಗುತ್ತವೆ. ಆದ್ದರಿಂದ ರಸಕ್ಕೆ ಹ್ಸದಯವು ಆಶ್ರಯ ಸ್ಥಾನವು ಎಂದು ಹೇಳಿದಂತಾಯಿತು. ಮತ್ತು ಜ್ವರಾದಿಗಳು ರಸವನ್ನೇ ಅನುಸರಿಸಿ ಉತ್ಪನ್ನವಾಗುತ್ತಿರುವವು. ಜ್ವರಾದಿಗಳು ಸಂಪೂರ್ಣ ದೇಹವನ್ನೇ ಆಶ್ರಯಿಸಿರುವದರಿಂದ ರಸವು ಸಂಪೂರ್ಣ ದೇಹದಲ್ಲಿ ಸಂಚರಿಸುತ್ತದೆಂದೂ, ರಸದ ಗತಿಯು ಪೂರ್ಣ ದೇಹದಲ್ಲಿರುತ್ತದೆಂದೂ, ಸಿದ್ಧವಾದಂತಾಯಿತು. ಸಮಸ್ಥಿತಿಯಲ್ಲಿರುವ ದೇಹ ಪೋಷಕ ರಸವು ದೇಹದಲ್ಲಿ ಸಂಚಾರ ಮಾಡುವದರಿಂದ ಸಂಪೂರ್ಣ ಶರೀರವು ತೃಪ್ತಿಹೊಂದುತ್ತದೆ. ಆದ್ದರಿಂದಲೂ ರಸಗತಿಯು ತಿಳಿಯುವದು.

ತಸ್ಮಿನ್ಸರ್ವಶರೀರಾವಯವ ದೋಷಧಾತುಮಲಾಶಯಾನು ಸಾರಿಣಿ,ರಸೆ–ಜಿಜ್ಞಾಸಾ:–ಕಿಮಯಂ ಸೌಮ್ಯಸ್ತ್ವಜಸ? ಇತಿ । ಅತ್ರೋಚ್ಯತೆ:-ಸಖಲುದ್ರವಾನುಸಾರೀಸ್ನೇಹನಜೀವನತರ್ಪಣ ಧಾರಣಾದಿಭಿರ್ವಿಶೇಷೈಃ ಸೌಮ್ಯಇತ್ಯವಗಮ್ಯತೆ"

(ಸುಶ್ರುತ॥ ಸೂತ್ರಸ್ಥಾ॥ ಅ ೧೪)

ಸಂಪೂರ್ಣ ಶರೀರದಲ್ಲಿರುವ, ದೋಷಾಶಯ ಧಾತ್ವಾಶಯ ಮಲಾಶಯಗಳಲ್ಲಿ ಸಂಚರಿಸುವ, ಸಂಚರಿಸುತ್ತಿರುವಾಗ ಆ ಆ ಸ್ಥಾನದಲ್ಲಿಯ ಭಿನ್ನ ಭಿನ್ನ ಗುಣವುಳ್ಳ ಪದಾರ್ಥ ಸಂಸರ್ಗವಾಗುವದರಿಂದ ರಸವು ಸೌಮ್ಯವೋ?

(ಶೀತ ಗುಣವುಳ್ಳದ್ದೋ), ಅಥವಾ ತೈಜಸವೋ? (ಉಷ್ಣಗುಣವುಳ್ಳದ್ದೋ), ಎಂದು ಸಂಶಯ ಉತ್ಪನ್ನವಾಗುತ್ತದೆ. ಅದು ಹೇಗೆಂದರೆ:–

ಆಮಾಶಯಕಫಾಶಯಗಳಲ್ಲಿ ಸಂಚರಿಸುವದರಿಂದ ಶೀತಗುಣವುಳ್ಳದ್ದು. ಪಿತ್ತಾಶಯದಲ್ಲಿ ಸಂಚರಿಸುವದರಿಂದ ಉಷ್ಣಗುಣವುಳ್ಳದ್ದು. ಹೀಗೆಂದು ವಿತರ್ಕ ಉಂಟಾಗುವದು.

ದೇಹದಲ್ಲಿಯ ದ್ರವಗಳನ್ನನುಸರಿಸುವದರಿಂದಲೂ (ದ್ರವರೂಪವಾದ್ದರಿಂದ) ದೇಹಕ್ಕೆ ಮೃದುತ್ವವನ್ನುಂಟು ಮಾಡುವದರಿಂದ, ತೃಪ್ತಿ ಪಡಿಸುವದು, ಪೋಷಣೆ, ಧಾರಣೆ, ಜೀವನ, ಇತ್ಯಾದಿಗಳಿಂದ ಸೌಮ್ಯ(ಶೀತವೀರ್ಯ)ವೆಂದು ತಿಳಿಯಲ್ಪಡುತ್ತದೆ.

ರಸ ಪರಿವರ್ತನೆಯು

"ಸಖಲ್ವಾಪ್ಯೋರಸೋಯಕೃತ್‌ಪ್ಲೀಹಾನೌಸ್ಥಾಪ್ಯರಾಗ ಮುಪೈತಿ" (ಸುಶ್ರುತ। ಸೂತ್ರ। ಅ ೧೪ ಸೂ ೪)

ಪೂರ್ವೋಕ್ತವಾದ ಸೌಮ್ಯಗುಣವುಳ್ಳ ಜಲೀಯರಸವು, ಯಕೃತ್ ಪ್ಲೀಹಗಳಲ್ಲಿ ಸಂಚರಿಸಿ ಕೆಂಪು ಬಣ್ಣವುಳ್ಳದ್ದಾಗುತ್ತದೆ.

ಇಲ್ಲಿಯ ವರೆಗೆ ರಸವನ್ನು ಹೇಳಿ, ರಸದಿಂದ ಉತ್ಪನ್ನವಾಗುವ ರಕ್ತ ಧಾತುವನ್ನು ಹೇಳುತ್ತಾರೆ.

ರಕ್ತ ಸ್ವರೂಪವು

ರಂಜಿತಾಸ್ತೇಜಸಾತ್ವಾಪಃ ಶರೀರಸ್ಥೇನದೇಹಿನಾಂ ॥
ಅವ್ಯಾಪನ್ನಾಃ ಪ್ರಸನ್ನೇನ ರಕ್ತಮಿತ್ಯಭಿಧೀಯತೆ ॥
(ಸು। ಸೂ।ಅ ೧೪ ಶ್ಲೋ. ೫)

ಶರೀರದಲ್ಲಿಯ ಜಠರಾಗ್ನಿಯಿಂದ, (ಯಕೃತ್ ಪ್ಲೀಹೆಗಳಿಂದ) ವಿಕೃತವಾಗದಿರುವ ಪ್ರಸನ್ನವಾದ ರಂಜಕವೆಂಬ ಹೆಸರುಳ್ಳ ತೇಜಸ್ಸಿನಿಂದ, (ಅಗ್ನಿ

ಯಿಂದ) ಪರಿಪಕ್ವವಾಗಿ, ರಸವು ಕೆಂಪು ಬಣ್ಣವುಳ್ಳದ್ದಾಗುವದು. ರಸಕ್ಕೆ ಕೆಂಪು ಬಣ್ಣ ಬರುವದರಿಂದಲೇ "ರಕ್ತ" ವೆಂಬ ಹೆಸರು ಬಂದಿರುತ್ತದೆ. ಹೀಗೆ ರಸವು ಪಾಚಕಾಗ್ನಿಯಿಂದ ಪಕ್ವವಾಗಿ ಕೆಂಪು ಬಣ್ಣ ಬಂದು ರಕ್ತವಾಗಿ ಪರಿವರ್ತನೆಯನ್ನು ಹೊಂದುತ್ತದೆ.

ರಸದಿಂದಲೇ ಸ್ತ್ರೀಯರ ರಜೋತ್ಪತ್ತಿಯು

ರಸಾದೇವಸ್ತ್ರೀಯಾರಕ್ತಂ ರಜಃ ಸಂಜ್ಞಂ ಪ್ರವರ್ತತೆ ॥
ತದ್ವರ್ಷಾತ್ದ್ವಾದಶಾದೂರ್ಧ್ವಂ ಯಾತಿಪಂಚಾಶತಃ
ಕ್ಷಯಂ ॥ (ಸು। ಸೂ। ಅ ೧೪ ಶ್ಲೋ. ೬)

ರಸದಿಂದಲೇ ಸ್ತ್ರೀಯರ ರಜಸ್ಸೆಂಬ ಹೆಸರುಳ್ಳ ರಕ್ತವು (ಮುಟ್ಟು) ಆರಂಭವಾಗುತ್ತದೆ. ಆದು ೧೨ ವರ್ಷಗಳ ನಂತರ ಆರಂಭವಾಗಿ ೫೦ ವರ್ಷಗಳ ನಂತರ ನಿಲ್ಲುತ್ತದೆ. ರಜಸ್ಸು ಕ್ಷೀಣವಾದಾಗ ಪ್ರಶಸ್ತವಾದ ಮಧುರ ಪೌಷ್ಟಿಕ ರಸದ ಉಪಯೋಗದಿಂದ, ಕ್ಷೀಣತೆಯು ಹೋಗಿ ಬಲಗೊಳ್ಳವದು. ಆದ್ದರಿಂದ, ರಸವು ರಜಸ್ಸಿಗೆ ಕಾರಣವೆಂದು ಸಿದ್ಧವಾಗುತ್ತದೆ. **"ರಸಾದೇವ"** ರಸದಿಂದಲೇ ರಜಸ್ಸು (ಮುಟ್ಟು)ಉತ್ಪನ್ನವಾಗುತ್ತದೆಂದು ಸುಶ್ರುತರ ಮತವು.

ಆರ್ತವಶೋಣಿತವು (ರಜಸ್ಸಿನ ರಕ್ತ) ಆಗ್ನೇಯವೋ?
ಸೌಮ್ಯವೋ?
ಆರ್ತವಂಶೋಣಿತಂ ಆಗ್ನೇಯಂ ಅಗ್ನೀಷೋಮೀಯತ್ವಾ
ದ್ಗರ್ಭಸ್ಯ, ॥ (ಸು। ಸೂ। ಅ ೧೪ ಸೂ ೭)

ಗರ್ಭವು ಆಗ್ನೇಯ ಸೌಮ್ಯ ಗುಣವುಳ್ಳದ್ದಾದ್ದರಿಂದ, ಆರ್ತವ ರಕ್ತವು ಆಗ್ನೇಯ (ತೈಜಸ) ಗುಣವುಳ್ಳದ್ದೆಂದುಸಿದ್ಧವಾಗುತ್ತದೆ. ಆರ್ತವವು ಆಗ್ನೇಯ ಗುಣವುಳ್ಳದ್ದು. ಶುಕ್ರವು ಸೌಮ್ಯಗುಣವುಳ್ಳದ್ದು. ಆದ್ದರಿಂದಲೇ ಗರ್ಭವು, **"ಅಗ್ನೀಷೋಮೀಯ"** ವೆಂದು ಹೇಳಲ್ಪಟ್ಟಿರುತ್ತದೆ.

ಆರ್ತವ ಶುಕ್ರಗಳ ಸಂಯೋಗವಾದ ಗರ್ಭವು, ಆಗ್ನೇಯ ಸೌಮ್ಯ ಗುಣವುಳ್ಳದ್ದಿರುವದರಿಂದ, ಆರ್ತವವು ಆಗ್ನೇಯ ಗುಣವುಳ್ಳದ್ದೂ, ಶುಕ್ರವು ಸೌಮ್ಯ ಗುಣವುಳ್ಳದ್ದೂ, ಇರುತ್ತವೆಂಬದು ಸ್ಪಷ್ಟವಾಯಿತು.

ರಕ್ತವು ಪಂಚಭೂತಾತ್ಮಕವಾದದ್ದು

ಪಾಂಚಭೌತಿಕಂ ತ್ವಪರೇ ಜೀವರಕ್ತಮಾಹುರಾಚಾರ್ಯಾಃ ॥
(ಸು। ಸೂ। ಅ ೧೪ ಸೂ ೪)

"ರಕ್ತವು" ಪಾಂಚಭೌತಿಕವೆಂದೂ, ಕೆಲವರು ಜೀವರಕ್ತವೆಂದೂ, ಹೇಳುತ್ತಾರೆ ಜೀವನಿದ್ದ ಶರೀರದಲ್ಲಿಯೇ ರಕ್ತವಿರುತ್ತಿದ್ದು, ಮೃತ ದೇಹದಲ್ಲಿ ಇರುವದಿಲ್ಲವಾದ್ದರಿಂದ ಜೀವಿಸಲಿಕ್ಕೆ ರಕ್ತವೇ ಪ್ರಧಾನವಾದದ್ದು ಎಂದು ಸ್ಪಷ್ಟವಾಗುತ್ತದೆ ಆ ಕಾರಣದಿಂದ, **'ಜೀವರಕ್ತವೆಂದು"** ಆಚಾರ್ಯರು ಸಿದ್ಧಾಂತಮಾಡುತ್ತಾರೆ ಪಂಚಭೂತಗಳ ಗುಣವು ರಕ್ತದಲ್ಲಿರುವದರಿಂದ, ರಕ್ತವು ಪಂಚಭೂತಾತ್ಮಕವಾದದ್ದು—

ವಿಸ್ರತಾದ್ರವತಾರಾಗಃ ಸ್ಪಂದನಂ ಲಘುತಾತಥಾ ॥
ಭೂಮ್ಯಾದೀನಾಂ ಗುಣಾಹ್ಯೇತೇದೃಶ್ಯಂತೇಚಾತ್ರಶೋಣಿತೆ॥
(ಸು। ಸೂ। ಅ ೧೪ ಶ್ಲೋ ೯)

"ವಿಸ್ರತಾ" **ಅನುಗಂಧ** ಭೂಮಿಯ ಗುಣವು. **ದ್ರವರೂಪ** ನೀರಿನ ಗುಣವು. **ಕೆಂಪುಬಣ್ಣ** ತೇಜೋಗುಣವು. **ಸ್ಪಂದನ** ವಾಯು ಗುಣವು **ಹಗುರವಾದದ್ದು** ಆಕಾಶ ಗುಣವು. ಈ ಗುಣಗಳು ರಕ್ತದಲ್ಲಿ ಇರುತ್ತವೆ. ಭೂಮಿ ಮೊದಲಾದ ಪಂಚಭೂತಗಳಲ್ಲಿರುವ ಗುಣಗಳು, ರಕ್ತದಲ್ಲಿರುವದರಿಂದ ರಕ್ತವೂ ಕೂಡಾ ಪಾಂಚಭೌತಿಕವಿರುತ್ತದೆಂದು ಸಿದ್ಧವಾಗುವದು.

ರಸದಿಂದ ರಕ್ತಾದಿ ಧಾತುಗಳ ಉತ್ಪತ್ತಿ ಕ್ರಮ

ರಸಾದ್ರಕ್ತಂ ತತೋಮಾಂಸಂ ಮಾಂಸಾನ್ಮೇದಃಪ್ರಜಾಯತೆ॥
ಮೇದಸೋಽಸ್ಥಿ ತತೋಮಜ್ಜಾಮಜ್ಜ್ಞಃ ಶುಕ್ರಂತುಜಾಯತೆ॥
(ಸು॥ ಸೂ॥ ಅ ೧೪ ಸೂ ೧೦)

ರಸದಿಂದ ರಕ್ತವೂ, ರಕ್ತದಿಂದ ಮಾಂಸವೂ, ಮಾಂಸದಿಂದ ಮೇದಸ್ಸೂ, ಮೇದಸ್ಸಿನಿಂದ ಅಸ್ಥಿಯೂ, ಅಸ್ಥಿಯಿಂದ ಮಜ್ಜೆಯೂ, ಮಜ್ಜೆ

ಯಿಂದ ಶುಕ್ರವೂ, ಕ್ರಮವಃಗಿ ಉತ್ಪನ್ನವಾಗುತ್ತವೆ ೧ ರಸ, ೨. ರಕ್ತ. ೩. ಮಾಂಸ, ೪. ಮೇದಸ್ಸು, ೫. ಅಸ್ಥಿ, ೬. ಮಜ್ಜಾ, ೭. ಶುಕ್ರ ಇವುಗಳಿಗೆ ಸಪ್ತಧಾತುಗಳೆಂಬ ಹೆಸರು. ಇವು ಕೂಡ ಪಂಚಭೂತಾತ್ಮಕವಾಗಿರುತ್ತವೆ

ಶರೀರ ಧಾರಣೆಯಿಂದ ಧಾತುವೆಂಬ ಹೆಸರು

ತಪಿತೇಶರೀರಧಾರಣಾತ್ ಧಾತವಇತ್ಯುಚ್ಯಂತೆ ॥
(ಸು॥ ಸೂ॥ ೆ ೧೪ ಸೂ ೩೦)

ರಸ ರಕ್ತಾದಿಗಳು, ದೇಹವನ್ನು ಧಾರಣ ಮಾಡುವದರಿಂದ, ಇವುಗಳಿಗೆ "ಧಾತು" ಎಂಬ ಹೆಸರು. ಈ ಉತ್ಪನ್ನವಾದ ಧಾತುಗಳಿಗೆ ಪುನಃ ಪೋಷಣೆಯು ಬೇಕಾಗುತ್ತದೆ ಆ ಪೋಷಣೆಯನ್ನು ಆಹಾರ ರಸವು ಮಾಡುತ್ತದೆ.

ಆಹಾರ ರಸದಿಂದ ಧಾತುಗಳ ಪೋಷಣೆಯು

ತತ್ರೈತೇಷಾಂಧಾತೂನಾಮನ್ನಪಾನರಸಃ ಪ್ರೀಣಯಿತಾ ॥೧೧॥
ರಸಜಂ ಪುರುಷಂ ವಿದ್ಯಾತ್ ರಸಂ ರಕ್ಷೇತ್ ಪ್ರಯತ್ನತಃ
ಅನ್ನಾತ್ ಪಾನಾಚ್ಚ ಮತಿಮಾನ್ ಆಚಾರಾಚ್ಚಾಪ್ಯತಂದ್ರಿತಃ ॥

ಪೂರ್ವೋಕ್ತ ಧಾತುಗಳಿಗೆ, ಅನ್ನದ ರಸ ಮತ್ತು ಪಾನ ಮಾಡಿದ (ಕುಡಿದ) ರಸ ಇವು, ಪೋಷಕವಾಗಿಯೂ, ಕೃಪ್ತಿ ಪಡಿಸತಕ್ಕವುಗಳಾಗಿಯೂ ಇರುತ್ತವೆ. ಅನ್ನಪಾನ ರಸದಿಂದ, ದೇಹ ಧಾರಣೆಯನ್ನು ಮಾಡುವ, ರಕ್ತಾದಿ ಧಾತುಗಳು ಪೋಷಿತವಾಗುತ್ತವೆ. ಸಪ್ತಧಾತುಗಳು ದೇಹದಲ್ಲಿದ್ದರೂ ದೇಹಕ್ಕೆ ಪುನಃ ಆಹಾರ ಪಾನೀಯಗಳು ಅವಶ್ಯಬೇಕಾಗುವದರಿಂದ, ಧಾತುಗಳಿಗೂ ಸಹ ಪೋಷಣೆಯು ಅವಶ್ಯವೆಂದು ಗೋಚರವಾಗುತ್ತದೆ ದೇಹ ಮತ್ತು ಧಾತುಗಳ ಪೋಷಣೆಯನ್ನು ಅನ್ನಪಾನ ರಸವು, ಮಾಡುತ್ತದೆಂದು ಹೇಳುತ್ತಾರೆ. ರಸದಿಂದ ಧಾತುಗಳು ಹುಟ್ಟುವದರಿಂದಲೂ, ಆ ಧಾತುಗಳನ್ನು ಸಹ ರಸವು ಪೋಷಿಸುವದರಿಂದಲೂ, ರಸವು ದೇಹ ಧಾರಣೆಗೆ

ಅತ್ಯವಶ್ಯವಾದದ್ದು ಇರುತ್ತದೆ. ಆದ್ದರಿಂದ ಮನುಷ್ಯನು ರಸದಿಂದ ಹುಟ್ಟಿರುವನೆಂದು ತಿಳಿಯಬೇಕು. "ಏಷಪುರುಷೋನ್ನ ರಸಮಯಃ" (ಶ್ರುತಿಃ) ಅನ್ನರಸಮಯನಾದ್ದರಿಂದ ಪುರುಷನು ರಸದಿಂದ ಹುಟ್ಟಿರುವನೆಂದು, ರಸ ಪ್ರಶಂಸಾಪರವಾಗಿ ಹೀಗೆ ಹೇಳಿದ್ದಾರೆ. ಶುಕ್ರದಿಂದ ಮನುಷ್ಯನ ಉತ್ಪತ್ತಿಯೇ ಹೊರತು ರಸದಿಂದಅಲ್ಲ ಶುಕ್ರವು ರಸದಿಂದ ಉತ್ಪನ್ನವಾಗುವದರಿಂದ ರಸ ಶ್ರೇಷ್ಠತೆಯನ್ನು ತೋರಿಸಲು ಹೀಗೆ ಹೇಳಿದ್ದಾರೆ. ಜೀವ ಧಾರಣೆಗೆ ಅತ್ಯವಶ್ಯವಾದ ರಸವನ್ನು, ಯೋಗ್ಯವಾಗಿ ಆಹಾರ, ಪಾನ, ಆಚಾರ, ಇವುಗಳಿಂದ ಉತ್ತಮ ತರಗತಿಯದಾಗುವಂತೆ ಯೋಜಿಸಬೇಕು. ರಸದಿಂದಾರಂಭಿಸಿಯೇ ದೇಹಧಾತ್ವಾದಿಗಳು ಉಂಟಾಗುತ್ತವೆ. ರಸವು ಉತ್ತಮವಿದ್ದರೆ ಅವೆಲ್ಲವುಗಳೂ ದೋಷ ರಹಿತವಾದವುಗಳಾಗುತ್ತವೆ. ಆದ್ದರಿಂದ ಮನುಷ್ಯನು ಎಚ್ಚರಿಕೆಯಿಂದ ಸೇವಿಸುವ ರಸ ವಿಷಯದಲ್ಲಿ ಜಾಗರೂಕತೆಯನ್ನು ವಹಿಸಬೇಕು

ರಸ ಪರಿವರ್ತನ ಕಾಲವು

"ಸಖಲುತ್ರೀಣಿತ್ರೀಣಿಕಲಾಸಹಸ್ರಾಣಿ ಪಂಚದಶಚಕಲಾ ಏಕೈಕಸ್ಮಿನ್ ಧಾತಾವವತಿಷ್ಠತೆ ಏವಂಮಾಸೇನರಸಃ ಶುಕ್ರಂ ಸ್ತ್ರೀಣಾಮಾರ್ತವಂಚಭವತಿ॥" (ಸುಶ್ರುತ॥ಸೂ.ಸ್ಥಾ. ೧೧ನೆ ಸೂಗಳು)

ರಸವು (೩೦೧೫) ಮೂರು ಸಾವಿರದ ಹದಿನೈದು ಕಲಾದಷ್ಟು ಹೊತ್ತು ಅಂದರೆ ೫ ದಿನಗಳು ಒಂದೊಂದು, ಧಾತುವಿನಲ್ಲಿ ಇರುತ್ತದೆ. ಇದರಂತೆ ಆರು ಧಾತುಗಳಲ್ಲಿ ಅಂದರೆ (೩೦) ದಿನಗಳು ಕಳೆಯಲಾಗಿ ಶುಕ್ರವಾಗಿಯೂ ಸ್ತ್ರೀಯರಿಗೆ ಆರ್ತವವಾಗಿಯೂ, ಪರಿಣಮಿಸುತ್ತದೆ. ಐದು ದಿನಗಳಂತೆ (೬) ಧಾತುಗಳಲ್ಲಿ (೩೦) ದಿನಗಳು ಇರುತ್ತದೆಂದು ಹೇಳಿರುವದರಿಂದ, ಊಟ ಮಾಡಿದ ಆಹಾರವು ಒಂದು ದಿವಸದಲ್ಲಿ ರಸವಾಗುತ್ತದೆಂದು ಹೇಳಿದಂತಾಯಿತು. (ಸುಶ್ರುತ ಶಾಸ್ತ್ರ ಸಿದ್ಧಾಂತದಲ್ಲಿ, ಒಂದು ದಿವಸಕ್ಕೆ ೬೦೩ ಕಲೆಗಳು ಇರುತ್ತವೆ. ೫ ದಿನಗಳಿಗೆ ೩೦೧೫ ಕಲೆಗಳು ಆಗುತ್ತವೆ.)

ಅಷ್ಟಾದಶಸಹಸ್ರಾಣಿಸಂಖ್ಯಾಹ್ಯಸ್ಮಿನ್ ಸಮುಚ್ಚಯೇ ॥
ಕಲಾನಾಂನವತಿಪ್ರೋಕ್ತಾಸ್ವತಂತ್ರ ಪರತಂತ್ರಯೋಃ ॥
(ಸುಶ್ರುತ॥ ಸೂತ್ರಸ್ಥಾ. ಅ ೧೪ ಶ್ಲೋ. ೧೫)

ರಕ್ತಾದಿ ಏಳು ಧಾತುಗಳ ಸ್ಥಾನಗಳಲ್ಲಿ, ಒಂದೊಂದು ಧಾತುವಿನಲ್ಲಿ ೫ ದಿನಗಳಂತೆ, ಒಟ್ಟು (೧೮೦೯) ಕಲಾಗಳಷ್ಟು ಕಾಲ, ಧಾತುಗಳ ಸಮ್ಯಚ್ಚಯಗಳಲ್ಲಿ ವಾಸ ಮಾಡುವ ಅವಧಿಯು ಅಂದರೆ ಒಂಬತಿಂಗಳು. ಈ ಸಿದ್ಧಾಂತವು ಸುಶ್ರುತ ಮತ್ತು ಇನ್ನಿತರ ತಂತ್ರದವರಿಗೂ ಮಾನ್ಯವಾದದ್ದಾಗಿದೆ.

ಸುಶ್ರುತ ಮತದಂತೆ ಕಾಲ ಮಾಪನೆಯು

ತತ್ರ ಲಘ್ವಕ್ಷರೋಚ್ಚಾರಣಮಾತ್ರೋಽಕ್ಷಿನಿಮೇಷಃ, ಪಂಚದಶಾಕ್ಷಿನಿಮೇಷಾಃ ಕಾಷ್ಠಾ, ತ್ರಿಂಶತ್ಕಾಷ್ಠಾಃ ಕಲಾ, ವಿಂಶತಿಕಲೋ ಮುಹೂರ್ತಃ ಕಲಾದಶಭಾಗಶ್ಚ, ತ್ರಿಂಶನ್ಮುಹೂರ್ತಮಹೋರಾತ್ರಂ ॥ (ಸುಶ್ರುತ॥ ಸೂತ್ರ ಸ್ಥಾ ೫೬ ಸೂ. ೫)

ಲಘುವರ್ಣ(ಅಕ್ಷರ) ಉಚ್ಚಾರ ಮಾಡುವಷ್ಟು ವೇಳೆಗೆ "ಅಕ್ಷಿನಿಮೇಷ"ವೆಂಬ ಹೆಸರು. ಲಘು ಅಕ್ಷರವು "ಅ" ಎಂದು ತಿಳಿದರೆ ಅದನ್ನು ಉಚ್ಚರಿಸುವಷ್ಟು ಹೊತ್ತು ಎಂಬರ್ಥ

೧೫ ಅಕ್ಷಿನಿಮೇಷಕ್ಕೆ	=	೧ ಕಾಷ್ಠ
೩೦ ಕಾಷ್ಠಕ್ಕೆ	=	೧ ಕಲಾ
೨೦ ಕಲಾ ಮತ್ತು ೩ ಕಾಷ್ಠಕ್ಕೆ	=	೧ ಮುಹೂರ್ತವು
೩೦ ಮುಹೂರ್ತಕ್ಕೆ	=	೧ ದಿವಸವು

ಈ ಪ್ರಮಾಣದಂತೆ ಒಂದು ದಿವಸಕ್ಕೆ (೬೦೩) ಕಲೆಗಳು. ಐದು ದಿವಸಗಳಿಗೆ (೩೦೧೫) ಕಲೆಗಳು. ತಿಂಗಳಿಗೆ (೧೮೦೯) ಕಲೆಗಳಾಗುತ್ತವೆ.

ರಸಾದಿಪರಿಪಾಕ ಕಾಲ ವಿಷಯದಲ್ಲಿ ಚರಕ ಮತವು

ಷಡ್ಭಿಃ ಕೇಚಿದಹೋರಾತ್ರೈರಿಚ್ಛಂತಿಪರಿವರ್ತನಂ ॥
ಸಂತತ್ಯಾಭೋಜ್ಯಧಾತೂನಾಂ ಪರಿವೃತ್ತಿಸ್ತು ಚಕ್ರವತ್ ॥
(ಚರಕ॥ ಚಿಕಿತ್ಸಾಸ್ಥಾನ॥ ೮ ೧೫ ಶ್ಲೋ. ೨೧)

ಸದಾ ಆಹಾರದಿಂದುಂಟಾದ ರಸಾದಿಧಾತುಗಳ ಸಂಚಾರವು, ಚಕ್ರ ತಿರುಗಿದಂತೆ ನಡೆಯುತ್ತಿರುತ್ತದೆ. ಹೀಗೆ ತಿರುಗುತ್ತಿರುವ ಧಾತುವು ರಸ ದಿಂದಾರಂಭಿಸಿ (೬) ದಿನಗಳಲ್ಲಿ "ಶುಕ್ರ"ವಾಗಿ ಪರಿಣಮಿಸುವದೆಂದು ಚರಕಾ ಚಾರ್ಯರ ಮತವು.

ಪರಾಶರ ಮತವು

ಆಹಾರೋಽದ್ಯತನಃ ಶ್ವೋಽಹಿರಸತ್ವಂಗಚ್ಛತಿನೃಣಾಂ॥ ಶೋಣಿ ತ್ವಂತುತೃತೀಯೇಽಹ್ನಿಚತುರ್ಥೇಮಾಂಸತಾಮುಪಿ॥ಮೇದಸ್ತ್ವಂ ಪಂಚಮೆ, ಷಷ್ಠೆತ್ವಸ್ಥಿತ್ವಂ,ಸಪ್ತಮೇತ್ವಿಮಾತ್ರ್॥ ಮಜ್ಜತಾಂ, ಶುಕ್ರತಾಂ ಯಾತಿನಿಯಮಾತ್ ಅಷ್ಟಮೇನೃಣಾಂ ॥

(ಪರಾಶರ ಸಂಹಿತಾ)

ಇಂದು ಊಟ ಮಾಡಿದ ಆಹಾರವು, ನಾಳೆ ದೇಹದಲ್ಲಿ ರಸವಾಗುತ್ತದೆ. ಮೂರನೇದಿನ ರಕ್ತವೂ, ನಾಲ್ಕನೇದಿನದಲ್ಲಿ ಮಾಂಸವೂ, ಐದನೇದಿನ ಮೇದಸ್ಸೂ, ಆರನೇದಿನ ಅಸ್ಥಿಯೂ, ಏಳನೇದಿನ ಮಜ್ಜೆಯೂ, ಎಂಟನೇ ದಿನ ಶುಕ್ರವೂ, ಆಗುತ್ತದೆ. ಹೀಗೆ ನಿಯಮದಿಂದ ಆಹಾರರಸವು ಎಂಟು ದಿನಗಳಲ್ಲಿ ಶುಕ್ರವಾಗುತ್ತದೆಂದು ಪರಾಶರ ಮತವು. ಬೇರೆ ಬೇರೆ ಮತದಂತೆ ರಸಾದಿ ಧಾತುಗಳ ಪರಿಣಾಮ ಕಾಲವು ಭಿನ್ನ ಭಿನ್ನವಾದರೂ, ಆ ಮತಗಳೆಲ್ಲ ಪನ್ನೂ, ಯೋಗ್ಯವೆಂದು ಗ್ರಹಿಸಿದ್ದಾರೆ. ಯಾಕಂದರೆ ಕೆಲವು ಆಹಾರ ಗುಣ ದಿಂದಲೂ, ಜಠರಾಗ್ನಿಯ ಪಾಟವದಿಂದಲೂ, ಶೀಘ್ರವಾಗಿ ಕಡಿಮೆ ಅವಧಿ ಯಲ್ಲಿಯೇ ಪಾಕವಾಗುತ್ತದೆ ಆದ್ದರಿಂದ ಸುಶ್ರುತಾಚಾರ್ಯರು"**ಶಬ್ದಾರ್ಚಿ ರ್ಜಲಸಂತಾನವತ್**" ಎಂದು ಉದಹರಿಸಿದ್ದಾರೆ ಇನ್ನು ಆಹಾರವೆಂದರೆ ಹಾಲು ಶೀಘ್ರವಾಗಿ ಶುಕ್ರವಾಗುತ್ತದೆ. **"ಸದ್ಯಃ ಶುಕ್ರಕರಂಪಯಃ"** ಎಂದು ಹೇಳಿರುವದರಿಂದ ಇವೆಲ್ಲ ಮತಗಳು, ರಸಾದಿ ಧಾತು ಪಾಕ ವಿಷಯ ದಲ್ಲಿ ಯೋಗ್ಯವಾದವುಗಳೇ ಇರುತ್ತವೆ

ರಸಾದಿ ಧಾತುಗಳ ಕ್ರಿಯೆಗಳು

॥೧॥ ರಸಸ್ತುಷ್ಟಿಂ ಪ್ರೀಣನಂ ರಕ್ತಪುಷ್ಟಿಂಚಕರೋತಿ ॥

(ಸು॥ ಸೂತ್ರ॥ ಅ ೧೫ ಸೂತ್ರ ೧)

"ರಸವು" ತೃಪ್ತಿಯನ್ನೂ ಪೋಷಣೆಯನ್ನೂ ಮಾಡುತ್ತದೆ. ಪ್ರೀತಿ (ರುಚಿ) ಯುಳ್ಳದ್ದಿರುತ್ತದೆ. ರಕ್ತವನ್ನು ಹೆಚ್ಚಿಸಿ ಪೋಷಿಸುತ್ತದೆ.

॥೨॥ ರಕ್ತಂ ವರ್ಣಪ್ರಸಾದಂ ಮಾಂಸಪುಷ್ಟಿಂಜೀವಯತಿಚ॥
(ಸುಶ್ರುತ॥ ಸೂತ್ರಸ್ಥಾನ॥ ಅ ೧೫ ಶ್ಲೋ ೧)

"ರಕ್ತವು" ದೇಹಕ್ಕೆ ಬಣ್ಣವನ್ನುಂಟು ಮಾಡುತ್ತದೆ ಮಾಂಸ ಪುಷ್ಟಿಯನ್ನುಮಾಡಿ ಮನುಷ್ಯನನ್ನು ಬದುಕಿಸುತ್ತದೆ. "ಜೀವಯತಿ" ಎಂದು ಹೇಳಿದ್ದರಿಂದ ಜೀವನಕ್ಕೆ ರಕ್ತವು ಅತ್ಯವಶ್ಯವಾದದ್ದೆಂದು ಬೋಧಕವಾಗುತ್ತದೆ. ಬದುಕಲಿಕ್ಕೆ ಮುಖ್ಯವಾದದ್ದು ರಕ್ತವು.

ದೇಹಸ್ಯರುಧಿರಂ ಮೂಲಂ ರುಧಿರೇಣೈವಧಾರ್ಯತೆ ॥
ತಸ್ಮಾದ್ಯತ್ನೇನಸಂರಕ್ಷ್ಯಂ ರಕ್ತಂ ಜೀವಇವಸ್ಥಿತಿಃ ॥
(ಸುಶ್ರುತ॥ ಸೂ. ಸ್ಥಾ. ಅ. ೧೪ ಶ್ಲೋ. ೪೪)

ದೇಹಕ್ಕೆ ರಕ್ತವೇ ಮೂಲವು (ಮುಖ್ಯ). ಅದರಿಂದಲೇ ದೇಹ ಧಾರಣೆಯಾಗುತ್ತದೆ. ಆದ್ದರಿಂದ ಜೀವದಂತೆ ಇರುವ ರಕ್ತವನ್ನು ಪ್ರಯತ್ನದಿಂದ ರಕ್ಷಿಸಬೇಕು.

॥೩॥ ಮಾಂಸಂ ಶರೀರಪುಷ್ಟಿಂ ಮೇದಸಶ್ಚ ॥
(ಸುಶ್ರುತ॥ ಸೂ. ಸ್ಥಾ. ಅ ೧೫ ಸೂ ೧)

"ಮಾಂಸವು" ಶರೀರ ಪುಷ್ಟಿಯನ್ನು ಮೇದೋಭಿವೃದ್ಧಿ ಪುಷ್ಟಿಯನ್ನುಂಟು ಮಾಡುತ್ತದೆ. ಮಾಂಸವು ಪುಷ್ಟಿಯಾಗಿರಲು ಶರೀರವು ತುಂಬಿಕೊಂಡಿರುತ್ತದೆ.

॥೪॥ ಮೇದಃ ಸ್ನೇಹಸ್ವೇದೌದೃಢತ್ವಂ ಪುಷ್ಟಿವುಸ್ಥ್ನಾಂಚ ॥
(ಸುಶ್ರುತ॥ ಸೂ. ಸ್ಥಾ. ಅ ೧೫ ಸೂ ೧)

"ಮೇದಸ್ಸು" ನಯ (ನೆಣ) ವನ್ನೂ ಬೆವರನ್ನೂ ಉಂಟು ಮಾಡುತ್ತದೆ. ಅಸ್ಥಿಗಳನ್ನು ಪೋಷಿಸುತ್ತದೆ. ಅಸ್ಥಿಗಳನ್ನು ಬಲವುಳ್ಳದ್ದನ್ನಾಗಿಯೂ, ಬಿರುಸಾಗಿಯೂ, ಮಾಡುತ್ತದೆ.

॥೫॥ ಅಸ್ಥೀನಿದೇಹಧಾರಣಂ ಮಜ್ಜಾಃ ಪುಷ್ಟಿಂಚ ॥
(ಸುಶ್ರುತ॥ ಸೂ. ಸ್ಥಾ. ಅ ೧೫ ಸೂ ೧)

"ಅಸ್ಥಿಗಳು" ದೇಹವನ್ನು ಧರಿಸುತ್ತವೆ. ಹ್ಯಾಗೆ ಮರಕ್ಕೆ ಹಬ್ಬಿದ ಬಳ್ಳಿಗಳು ಮರವನ್ನವಲಂಬಿಸಿ ಇರುತ್ತವೆಯೋ, ಅದರಂತೆ ಮಾಂಸ ಶಿರಾದಿ ಗಳೆಲ್ಲವೂ, ಅಸ್ಥಿಯನ್ನವಲಂಬಿಸಿ ದೃಢವಾಗಿ ನಿಲ್ಲುತ್ತವೆ. ಅಸ್ಥಿಗಳಿಲ್ಲದಿದ್ದರೆ ದೇಹವೆಂದರೆ ಮಾಂಸ ಮುದ್ದೆಯಂತೇ ಆಗುತ್ತಿತ್ತು. ಆದ್ದರಿಂದ ಮುಖ್ಯವಾಗಿ ದೇಹಕ್ಕೆ ಧಾರಣೆಯಆಧಾರವೇ ಅಸ್ಥಿಗಳು. ದೇಹ ಧಾರಣೆಯನ್ನೂ, ಮಜ್ಜೆಯ ಪುಷ್ಟಿಯನ್ನೂ, ಅಸ್ಥಿಗಳು ಮಾಡುತ್ತವೆ.

॥೬॥ ಮಜ್ಜಾಸ್ನೇಹಂಬಲಂ ಶುಕ್ರಪುಷ್ಟಿಂ ಪೂರಣಮಸ್ಥ್ನಾಂ ಚಕರೋತಿ ॥ (ಸುಶ್ರುತ॥ ಸೂತ್ರಸ್ಥಾನ॥ ಅ ೧೫ ಸೂ ೧)

"ಮಜ್ಜೆಯು" ಸ್ನೇಹವನ್ನೂ(ಜಿಗುಟು) ಬಲವನ್ನೂ ಶುಕ್ರಾಭಿವೃದ್ಧಿ ಪೋಷಣೆಯನ್ನೂ, ಅಸ್ಥಿಗಳ ಒಳಗೆ ಪೊಳ್ಳು ಭಾಗಗಳನ್ನೂ, ತುಂಬಿಕೊಳ್ಳುವದನ್ನೂ ಮಾಡುತ್ತದೆ. ಅಸ್ಥಿಗಳ ಒಳಗೆ ಪೊಳ್ಳು ಭಾಗದಲ್ಲಿ ಮಜ್ಜೆಯಿದ್ದು, ಅಸ್ಥಿಗಳನ್ನು ಜಿಗುಟು ಆಗುವಂತೆಯೂ, ಒಳಗಡೆ ಪೂರ್ಣವಾಗುವಂತೆಯೂ, ತುಂಬಿಕೊಳ್ಳುತ್ತದೆ.

॥೭॥ ಶುಕ್ರಂ ಧೈರ್ಯಂ ಚ್ಯವನಂಪ್ರೀತಿಂ ದೇಹಬಲಂಹರ್ಷಂ ಬೀಜಾರ್ಥಂಚ ॥ (ಸುಶ್ರುತ॥ ಸೂ. ಸ್ಥಾ. ಅ ೧೫ ಸೂ ೧೧)

ಶುಕ್ರವು ಧೈರ್ಯವನ್ನೂ, ರತಿಪ್ರಸಂಗದಲ್ಲಿ ಸ್ಖಲನವನ್ನೂ, ಸ್ತ್ರೀಯರ ವಿಷಯದಲ್ಲಿ ಪ್ರೀತಿಯನ್ನೂ, ಶರೀರ ಸಾಮರ್ಥ್ಯವನ್ನೂ, ಆನಂದವನ್ನೂ, ಉಂಟು ಮಾಡುತ್ತದೆ. ಮತ್ತು ಬೀಜದ ಸಲುವಾಗಿ ಅಂದರೆ ಗರ್ಭೋತ್ಪತ್ತಿಗಾಗಿ ಇರುತ್ತದೆ.

ರಕ್ತಲಕ್ಷಣಮಾರ್ತವಂ ಗರ್ಭಕೃಚ್ಚ ॥
(ಸುಶ್ರುತ॥ ಸೂತ್ರಸ್ಥಾನ॥ ಅ ೧೫ ಸೂ ೫)

ರಕ್ತ ಲಕ್ಷಣವುಳ್ಳ ಆರ್ತವವು ಗರ್ಭಕಾರಕವಾದದ್ದು. ಶುಕ್ರದಂತೆಯೆ. ಆರ್ತವಕ್ಕಾದರೂ ಧೈರ್ಯವನ್ನುಂಟುಮಾಡುವ ಗುಣ, ರತಿ ಪ್ರಸಂಗದ್ರವಿಸುವಿಕೆ (ಸೋರುವದು) ಪುರುಷರ ವಿಷಯದಲ್ಲಿ ಪ್ರೀತಿ, ದೇಹಬವನ್ನುಂಟು ಮಾಡುವ ಗುಣ, ಆನಂದ, ಬೀಜರಕ್ಷಣೆಯೂ (ಗರ್ಭವನ್ನುಂಟುಮಾಡುವದು, ಪೋಷಣೆ) ಇತ್ಯಾದಿ ಗುಣಗಳು ಇರುತ್ತವೆ. ಶುಕ್ರ ಗುಣಗಳು ಆರ್ತವದ ಕೆಲವು ಗುಣಗಳು ಅನ್ವಯಿಸುತ್ತವೆ ಆದರೆ ಶುಕ್ರವು ಗರ್ಭೋತ್ಪತ್ತಿಯನ್ನು ಮಾಡುತ್ತದೆ. ಆರ್ತವವು ಪೋಷಣೆಯನ್ನು ಮಾಡುತ್ತದೆ ಇದೊಂದೇ ವಿಶೇಷ ಭೇದವುಳ್ಳದ್ದಿರುವದು.

"ಆರ್ತವವು" ರಕ್ತ ಲಕ್ಷಣವುಳ್ಳದ್ದು ಎಂದು ಹೇಳಿದ್ದರಿಂದ, ಪಂಚಭೂತಾತ್ಮಕವಾದದ್ದು ರಕ್ತವು. ಆ ಗುಣ (ರಕ್ತಗುಣ) ವುಳ್ಳ ಆರ್ತವವದರೂ ಪಂಚಭೂತಾತ್ಮಕವೆಂದು ಸಿದ್ಧವಾಗುವದು.

ಶುಕ್ರವಾದರೂ ಪಾಂಚಭೌತಿಕವಾದ ರಸಾದಿಗಳಿಂದ ಪರಿಣಾ(ತಯಾರು) ವಾಗಿರುವದರಿಂದ ಪಂಚಭೂತಾತ್ಮಕವಾದದ್ದು ಇರುತ್ತದೆ.

ಶುಕ್ರವು ಪಂಚಭೂತಾತ್ಮಕವೆಂದು ಚರಕ ಮತವು

ಶುಕ್ರಂ ತದಸ್ಯಪ್ರವದಂತಿಧೀರಾಃ ॥
ಯದ್ಧೀಯತೇಗರ್ಭ ಸಮುದ್ಭವಾಯು ॥
ವಾಯ್ವಗ್ನಿಭೂಮ್ಯಪ್‌ಗುಣಪಾದವತ್‌ತತ್ ॥
ಷಡ್ಭ್ಯೋರಸೇಭ್ಯಃ ಪ್ರಭವಶ್ಚತಸ್ಯ ॥
(ಚರಕ॥ ಶಾರೀರ॥ ಅ ೨ ಶ್ಲೋ. ೪)

ಯಾವದು ಗರ್ಭೋತ್ಪತ್ತಿಯ ಸಲುವಾಗಿ ಬಿಡಲ್ಪಡುತ್ತದೆಯೋ ಆದಕ್ಕೆ ಶುಕ್ರವೆಂಬ ಹೆಸರು. ಆ ಶುಕ್ರವು, ವಾಯು, ಅಗ್ನಿ, ಜಲ, ಭೂಮಿ ಇವುಗಳ ಗುಣವುಳ್ಳದ್ದು ಇರುತ್ತದೆ ವಾಯ್ವಾದಿಗಳು ಸಮವಾದ ವಿಭಾಗಳುಳ್ಳವುಗಳಾಗಿ ಶುಕ್ರದಲ್ಲಿ ಇರುತ್ತವೆ. ಹೀಗೆಂದು ಹೇಳಿದ್ದರಿಂದ ಶುಕ್ರ ನಿರ್ಮಾಣ ಕ್ರಿಯೆಯಲ್ಲಿ ಇವೆಲ್ಲವುಗಳೂ ಸಮಾನವಾದವುಗಳೆಂದು ತಿಳಿಯ

ಬೇಕು. ಆರು ರಸಗಳು ಶುಕ್ರದಲ್ಲಿರುತ್ತವೆ. ಯಾಕಂದರೆ ಶುಕ್ರೋತ್ಪತ್ತಿಗೆ ಕಾರಣವಾದ ರಸ ರಕ್ತಾದಿಗಳು ಸಮಸ್ತ ದೇಹ ಆಶಯಾದಿಗಳನ್ನು ಸಂಚರಿಸುವದರಿಂದ ಅಲ್ಲಿರುವ ಬೇರೆಬೇರೆ ರಸಗಳ ಸಂಸರ್ಗದಿಂದ ಆವಾವ ಗುಣಗಳುಳ್ಳವುಗಳಾಗುತ್ತವೆ. "ಶುಕ್ರವು ಮಧುರ ಗುಣವುಳ್ಳದ್ದೆಂದು ಹೇಳುವದರಿಂದ" ಅನ್ಯ ರಸಗಳ ಸಮಾವೇಶವು ಹೇಗೆಂದರೆ:- ಅನ್ಯ ರಸಗಳು ಅವ್ಯಕ್ತವಾಗಿರುತ್ತವೆಂದು ತಿಳಿಯಬೇಕು. ಮಧುರ ರಸವು ಶುಕ್ರವನ್ನು ಹುಟ್ಟಿಸುತ್ತದೆಂತಲೂ, ಕಟು, ತಿಕ್ತ, ಲವಣ, ರಸಗಳು ಶುಕ್ರನಾಶಕವಾದದ್ದೆಂದು ಹೇಳಿರುವದರಿಂದ, ಶುಕ್ರನಾಶಕ ಗುಣವುಳ್ಳ ರಸಗಳು ಶುಕ್ರದಲ್ಲಿ ಹೇಗಿರುತ್ತವೆಂದು; ಸಂಶಯ ಬರಬಹುದು ಇದಕ್ಕೆ ಹೀಗೆ ಹೇಳಿದ್ದಾರೆ:- ಅತಿ ಸೇವಿಸಿದ ಕಟು, ತಿಕ್ತ, ಲವಣ ರಸಗಳು, ಶುಕ್ರವನ್ನು ನಾಶ ಮಾಡುತ್ತವೆ. ಸಮುಯೋಗ್ಯ ಪ್ರಮಾಣದಲ್ಲಿ ಯುಕ್ತವಾಗಿರುವ ರಸಗಳು, ಶುಕ್ರವನ್ನು ನಾಶ ಮಾಡುವದಿಲ್ಲ. ಆದ್ದರಿಂದ ಶುಕ್ರದಲ್ಲಿ ಆರೂ ರಸಗಳು ಇರುತ್ತವೆಂದು ಹೇಳಿದ್ದಾರೆ.

ಪಂಚಭೂತಗಳಲ್ಲಿಯ ಪೃಥಿವಿ, ಜಲ, ತೇಜಸ್ಸು, ವಾಯು, ಇವುಗಳನ್ನಷ್ಟೇ ಹೇಳಿ; ಆಕಾಶವನ್ನು ಬಿಟ್ಟಿದ್ದಾರೆ. ಆದ್ದರಿಂದ ಶುಕ್ರವು ಪಂಚಭೂತಾತ್ಮಕವೆಂದು ಆಗಬಹುದೋ?ಆದರೆ.- ಆಕಾಶವು ಎಲ್ಲ ಕಡೆಯಲ್ಲಿ ನಿತ್ಯವಾಗಿ ಇರುವದರಿಂದಲೂ, ಗಮನ ಆಗಮಾದಿಕ್ರಿಯೆಯ ಸಂಭವವಿಲ್ಲದ್ದರಿಂದಲೂ, ಪ್ರಧಾನವಾಗಿರುವದರಿಂದ, ಆಕಾಶದ ವಿಷಯ ಹೇಳುವ ಕಾರಣವೇ ಇಲ್ಲವೆಂದು ಬಿಟ್ಟಿದ್ದಾರೆ. ಶುಕ್ರದಲ್ಲಿ ಪೃಥಿವ್ಯಾದಿ ಪಂಚಭೂತಗಳೂ ಇರುತ್ತವೆಂದು, ಇದರಿಂದ ಮನವರಿಕೆಯಾಗುವದು.

ಆರ್ತವವೂ ಪಂಚಭೂತಾತ್ಮಕವು

ಭೂತಾನಿವಾತಾಪಿತೃಸಂಭವಾನಿ ।
ರಜಶ್ಚ ಶುಕ್ರಂಚವದಂತಿಗರ್ಭೆ ॥
ಆಪ್ಯಾಯ್ಯತೆ ಶುಕ್ರಮಸೃಕ್‌ಚಭೂತೈಃ ।
ಯೈಸ್ತಾನಿಭೂತಾನಿರಸೋದ್ಭವಾನಿ ॥
(ಚರಕ॥ ಶಾರೀರ॥ ಅ ೨ ಶ್ಲೋ. ೩೪)

ಗರ್ಭದಲ್ಲಿರುವ ರಜಸ್ಸು, ಶುಕ್ರ, ಇವುಗಳು ಪಾಂಚಭೌತಿಕವಾದ
ಗಳು. ಮಾತಾಪಿತೃಗಳಿಂದುತ್ಪನ್ನವಾದವುಗಳು. ರಸ ರೂಪವಾದ ಪಂ
ಭೂತಗಳಿಂದ ಶುಕ್ರ ಮತ್ತು ಆರ್ತವಗಳು, ಪೋಷಣೆ ಹೊಂದುತ್ತ
ಹೀಗೆ ಚರಕಾಚಾರ್ಯರು ಹೇಳುತ್ತಾರೆ. ಅರ್ಥಾತ್, ಪಂಚಭೂತಾತ್ಮ
ವಾದ ಆರ್ತವ,ಶುಕ್ರಗಳನ್ನು ಪಾಂಚಭೌತಿಕ ಆಹಾರರಸವು ಪೋಷಿಸುತ್ತ

"ಶುಕ್ರಮಸೃಕ್ಚ" ಎಂಬ ಪದದಲ್ಲಿ ಸಮುಚ್ಚಯ ಮಾಡಿ ಹೇ
ದ್ದರಿಂದ ತಂದೆಯ ಶುಕ್ರ ಮತ್ತೂ ರಕ್ತಗಳನ್ನೂ, ತಾಯಿಯ ಆರ್ತ
ಮತ್ತೂ ರಕ್ತಗಳನ್ನೂ, ಆಹಾರ ರಸವು ಪೋಷಿಸುತ್ತದೆಯೆಂದು ಅಥ
ಮಾಡುತ್ತಾರೆ. ಇದು ಗೌಣವಾದದ್ದು. ಯಾಕಂದರೆ ಆಹಾರ ರಸ
ಎಲ್ಲಾ ಧಾತುಗಳನ್ನೂದೇಹವನ್ನೂಪೋಷಿಸುತ್ತದೆಯೆಂದು ಹಿಂದೆ ಸಿದ್ಧಾಂ
ವಾದ್ದರಿಂದ ಪುನಃ ಗ್ರಹಣ ಮಾಡುವದು, ಕ್ರಿಯಾ ಗೌರವವು.

ಓಜಸ್ಸಿನ ವಿವರಣೆಯು

ದೇಹದಲ್ಲಿ ರಸದಿಂದಾರಂಭಿಸಿ ಶುಕ್ರಪರ್ಯಂತವಾದ ಸಪ್ತಧಾತುಗಳ
ಇರುತ್ತವೆಂದು ಹೇಳುತ್ತಾರೆ. ನಂತರ "ಓಜಸ್ಸನ್ನು" ವಿವರಿಸುತ್ತಾರೆ
ಶುಕ್ರಾಂತವಾದ ಧಾತುಗಳಲ್ಲಿಯೇ ಅದರ ಅಂತರ್ಭಾವವೋ? ಅಥವ
ಪ್ರತ್ಯೇಕವಾಗಿರುವದೋ? ಎಂದು ವಿವಾದ ಉತ್ಪನ್ನವಾಗುವದು. ರಸದಿಂ
ಶುಕ್ರಪರ್ಯಂತವಾದ ಯಥಾಯೋಗ್ಯಸ್ವಸಮ ಸ್ಥಿತಿಯಲ್ಲಿರುವ, ಧಾತುಗ
ಸತ್ವ ಸ್ವರೂಪಕ್ಕೆ ಓಜಸ್ಸೆಂಬ ಹೆಸರು. ಭಿನ್ನ ಭಿನ್ನ ಮತವಾದಿಗಳು "ಓಜಃ
ಶಬ್ದದಿಂದರಸವನ್ನು ಗ್ರಹಣ ಮಾಡುತ್ತಾರೆ. ಇದರಂತೆ "ಜೀವರಕ್ತ"ದ
ಓಜಸ್ಸನ್ನು ಸಮಾವೇಶಮಾಡುತ್ತಾರೆ. ಇತರರು ದೇಹದಲ್ಲಿಯ "ಉಷ್ಣತೆ
ಯೆಂಬದನ್ನು ತೇಜಸ್ಸೆಂದು (ಓಜಸ್ಸೆಂದು) ಅನ್ನುತ್ತಾರೆ. ಸುಶ್ರುತಾಚಾರ್ಯರು
ರಾದರೂ "ಬಲಕ್ಕೆ" ಓಜಸ್ಸೆಂದು ಹೇಳಿದರೂ, ಸೂಕ್ಷ್ಮವಾದ ಅವಲೋಕನ
ಯಿಂದ ವಿಮರ್ಶಿಸಿ ನೋಡಿದಲ್ಲಿ, ಭಿನ್ನವಾಗಿ ಹೇಳಿದ್ದಾರೆನ್ನುವದು ಸ್ಪಷ್ಟ
ವಾಗುತ್ತದೆ. ಇವೆಲ್ಲ ಮತತತ್ವಗಳನ್ನು ಸುಶ್ರುತಾಚಾರ್ಯರು ಸ್ವೀಕರಿಸಿ
ಶುಕ್ರಾಂತವಾದ ಸರ್ವ ಧಾತುಗಳ ತೇಜೋಭೂತವಾದ ಸತ್ವಕ್ಕೇ ಓಜಸ್ಸೆಂದ
ಹೇಳಿದ್ದಾರೆ.

ತತ್ರರಸಾದೀನಾಂ ಶುಕ್ರಾಂತಾನಾಂ ಧಾತೂನಾಂ ಯೆತ್ಪರಂ ತೇಜಸ್ತತ್ ಬಲೌಜಸ್ತದೇವಬಲಮಿತ್ಯುಚ್ಯತೆ, ಸ್ವಶಾಸ್ತ್ರ ಸಿದ್ಧಾಂತಾತ್ ॥(ಸುಶ್ರುತ॥ ಸೂ. ಸ್ಥಾ. ಅ. ೧೫ ಸೂ. ೧೯)

ರಸ ಮೊದಲುಗೊಂಡು ಶುಕ್ರಪರ್ಯಂತರವಿರುವ ಧಾತುಗಳ, ಶರೀರದಲ್ಲಿಯ ಸಮುಷ್ಠಿಬಲ ಮೊದಲಾದವುಗಳಿಂದ ಯುಕ್ತವಾದ "ಶ್ರೇಷ್ಠ ತೇಜೋಭೂತ ಸತ್ವವೇ"ಓಜಸ್ಸು" ಅದಕ್ಕೇ ಬಲವೆಂದು ಅನ್ನುತ್ತಾರೆ. ಇದು ಸುಶ್ರುತ ಶಾಸ್ತ್ರ ಸಿದ್ಧಾಂತವು. ವಸ್ತುತಃ ತಾತ್ವಿಕ ವಿಮರ್ಶೆಯಿಂದ ಓಜಸ್ಸು ಬಲವು ಭಿನ್ನವಾದವುಗಳೆಂದು ಗೋಚರವಾಗುತ್ತವೆ ಆದರೆ:— ವಿಶೇಷವಾದ ಬಲ, ವರ್ಣ, ದೇಹದಲ್ಲಿಯ ತೇಜಸ್ಸು, ಉತ್ಸಾಹ, ಅಪ್ರತಿಹತಬುದ್ಧಿ ಮೊದಲಾದವುಗಳಿಂದ "ಓಜಸ್ಸು" ಸ್ಪಷ್ಟವಾಗಿ ಧ್ವನಿತವಾಗುತ್ತದೆ. ಬಲವೇ ಓಜಸ್ಸಲ್ಲದಿದ್ದರೂ ಓಜಸ್ಸು ಬಲದಿಂದ ಕೂಡಿದ್ದಿರುತ್ತದೆ.

ಬಲ ಓಜಸ್ಸುಗಳಲ್ಲಿಯ ಭೇದವು

ಭೇದಸ್ತು ಸರ್ವಧಾತು ಸ್ನೇಹಭೂತಸ್ಯೋಪಚಯಲಕ್ಷಣ ಸ್ಯೌಜಸೋರೂಪರಸೌ ವೀರ್ಯಾದಿ ಚ ವಿದ್ಯತೆ॥ ಬಲಸ್ಯತುಭಾರ ಹರಣಾದಿಶಕ್ತಿಗವ್ಯಸ್ಯ ರಸವೀರ್ಯ ವರ್ಣಾದಿ ಗುಣಾನ ವಿದ್ಯಂತೆ॥ ಅತೋsನಯೋರ್ಭೇ ದೋsಸ್ತ್ಯೇವೇತಿ॥ ಇಯಂ ಚಾsಭೇದೋಕ್ತಿಶ್ಚಿಕಿತ್ಸೈಕ್ಯಾರ್ಥಾ, ಪರಮಾರ್ಥಸ್ತು ಬಲೌಜ ಸೋರ್ಭೇದಎವ॥(ಸುಶ್ರುತ ಟೀಕಾ)

"ಓಜಸ್ಸು" ಎಲ್ಲ ಧಾತುಗಳ ಸಾರಭೂತವಾದ ಸತ್ವರೂಪವೂ, ಎಲ್ಲ ಧಾತುಗಳು ಪರಿಪೂರ್ಣತುಂಬಿಕೊಂಡು ಯಥಾಯೋಗ್ಯವಾಗಿರುವವುಗಳಿಂದ, ಉತ್ಪನ್ನವಾಗುವದರಿಂದಲೂ, ಅದಕ್ಕೆ ರೂಪ, ರಸ, ವೀರ್ಯಾದಿಗಳು ಇರುತ್ತವೆ.

"ಬಲವು" ಭಾರ ಮೊದಲಾದವುಗಳನ್ನು ಹೊರುವ ಶಕ್ತಿಯಿಂದಲೂ, ಕರ್ಮಸಾಮರ್ಥ್ಯದಿಂದಲೂ, ಗವ್ಯವಾಗುವದರಿಂದ ಬಲಕ್ಕೆ ರಸ, ವೀರ್ಯ, ಗುಣಾದಿಗಳು ಇರುವದಿಲ್ಲ. ಇದರಿಂದ ಓಜಸ್ಸು ಮತ್ತು ಬಲವು ಭಿನ್ನವೆಂದು

ಸಿದ್ಧವಾಯಿತು. ಆದರೆ ದೇಹದಲ್ಲಿ ಪರಿಪೂರ್ಣ ಓಜಸ್ಸು ತುಂಬಿಕೊಂಡಿದ್ದರೆ, ಬಲ ವರ್ಣಾದಿಗಳು ಹೆಚ್ಚಿಗೆ ಇರುತ್ತವೆ. ಬಲವು ಕ್ರಿಯಾಶಕ್ತಿ ಗಮ್ಯವು. ಓಜಸ್ಸು ರಸ, ವರ್ಣ, ಗುಣ, ವೀರ್ಯಾದಿಗಳಿಂದ ಗಮ್ಯವಾದದ್ದೂ ಇರುತ್ತದೆ. ಬಲದ ಹೆಚ್ಚುವಿಕೆಯಿದ್ದಲ್ಲಿ ಬಲಕ್ಕೆ ಕಾರಣವಾದ ಓಜಸ್ಸು ಇದ್ದೇ ಇರುತ್ತದೆಂಬ ನಿಯಮದಿಂದ, ಚಿಕಿತ್ಸಾ ವಿಷಯದಲ್ಲಿ ಸುಲಭವಾಗಿ ರೋಗಿಯ ಬಲದಿಂದ; ಓಜಸ್ಸನ್ನು (ಸತ್ವವನ್ನು) ತಿಳಿಯಲು ಅನುಕೂಲವಾಗುವದರಿಂದ ಚಿಕಿತ್ಸಾ ಸೌಕರ್ಯಕ್ಕಾಗಿ ಹೀಗೆ ಹೇಳಿದ್ದಾರೆ. ಯಥಾರ್ಥವೆಂದರೆ ಭೇದವು ಬಲ ಓಜಸ್ಸುಗಳಲ್ಲಿ ಇದ್ದೇ ಇರುತ್ತದೆ.

ಭೇದದರ್ಶನಂತು:- ಪ್ರಾಣಿನಾಂ ಪುನರ್ಮೂಲಮಾಹಾರೋ ಬಲವರ್ಣಓಜಸಾಂಚ ॥ (ಸುಶ್ರುತ॥ ಸೂ. ಸ್ಥಾ. ಅ ೧)

ಪ್ರಾಣಿಗಳಿಗೆ ಜೀವಿಸಲು ಆಹಾರವು ಮುಖ್ಯ(ಮೂಲ) ವಾದದ್ದಿರುತ್ತದೆ. ಆದರಂತೆ ಬಲ, ವರ್ಣ, ಓಜಸ್ಸುಗಳಿಗೆ ಆಹಾರವೇ ಕಾರಣವೆಂದು ಹೇಳಿದ್ದಾರೆ. ಇದರಿಂದ ಬಲ, ವರ್ಣ, ಓಜಸ್ಸುಗಳು ಭಿನ್ನವಾಗಿರುತ್ತವೆಂದು ಸಿದ್ಧವಾಗುತ್ತದೆ.

ಬಲ ಓಜಸ್ಸುಗಳ ಶಕ್ತಿ ಪ್ರಭಾವಗಳು

ತತ್ರಬಲೇನ ಚಿರೋಪಚಿತಮಾಂಸತಾ ಸರ್ವಚೇಷ್ಟಾಸ್ವಪ್ರಘಾತಃ ಸ್ಥಿರವರ್ಣಪ್ರಸಾದೋಬಾಹ್ಯಾನಾಮಾಭ್ಯಂತರಾಣಾಂ ಚ ಕರಣಾನಾಮಾತ್ಮಕಾರ್ಯ ಪ್ರತಿಪತ್ತಿರ್ಭವತಿ ॥
(ಸುಶ್ರುತ॥ ಸೂ. ಸ್ಥಾ. ಅ ೧೫ ಸೂ ೨೦)

"ಬಲ" ದೇಹದಲ್ಲಿ ಬಲವು ಶ್ರೇಷ್ಠವಾಗಿ ಹೆಚ್ಚಿರಲು, ದೇಹಾವಯವಗಳಲ್ಲಿ ಯಥೋಚಿತ ಮತ್ತು ಚಿರಕಾಲ ಕ್ಷೀಣವಾಗದೇ ಒಂದೇ ಸ್ಥಿತಿಯಲ್ಲಿ ಸ್ಥಿರವಾಗಿ ಮಾಂಸವು ಇರುತ್ತದೆ. ಸರ್ವ ಧಾತುಗಳ ಹೆಚ್ಚುವಿಕೆಯ ಯೋಗ್ಯ ಶಕ್ತಿಯಾದ ಬಲದಲ್ಲಿ, ಸ್ವರವರ್ಣ, ತೃಪ್ತಿ, ಆನಂದ, ಸರ್ವಕ್ರಿಯಾಪಾಟವ, ಯಾವ ಕರ್ತವ್ಯವೂ ಅಸಾಧ್ಯವಿಲ್ಲದಿರುವಿಕೆ, ಮೊದಲಾದವುಗಳು ಇರುತ್ತವೆ.

ಅಂತರಿಂದ್ರಿಯ, ಬಾಹ್ಯೇಂದ್ರಿಯಗಳು, ತಮ್ಮ ತಮ್ಮ ಕ್ರಿಯೆಗಳಲ್ಲಿ ಸಮರ್ಥವಾದವುಗಳಾಗಿರುತ್ತವೆ. ಇತ್ಯಾದಿಗಳು ಬಲದ ಶಕ್ತಿ ಸ್ವರೂಪವಾದವುಗಳು. ಇವುಗಳಿಂದ ರಸಾದಿ ಶುಕ್ರ ಪರ್ಯಂತವಾಗಿರುವ ಧಾತುಗಳ ಸತ್ವರೂಪವಾದ ಓಜಸ್ಸು ಸಹ ಧ್ವನಿತವಾದಂತಾಯಿತು. ಹೀಗಿರುವದರಿಂದ ಓಜಸ್ಸಿನ ಕ್ರಿಯಾ ರೂಪ ಶಕ್ತಿಯೇ ಬಲವು. ಓಜಸ್ಸು ಮತ್ತು ಅದರ ಕ್ರಿಯಾ ಶಕ್ತಿ ಬೇರೆಯೆಂದು, ಸ್ಪಷ್ಟವಿರುವದರಿಂದ ಓಜಸ್ಸು ಬಲಗಳಲ್ಲಿಯ ಭೇದವನ್ನು ಪುನಃ ಹೇಳಬೇಕಾದ್ದೇನಿಲ್ಲ.

ಬಾಹ್ಯಾನಾಮಾಭ್ಯಂತರಾಣಾಂ ಮನೋಬುದ್ಧಿಪ್ರಭೃತೀನಾಂ
ಬಲಕಾರಣಭೂತಮೋಜಃ ॥ (ಸುಶ್ರುತ ಟೀಕಾ)

"ಓಜಸ್ಸು" ಬಾಹ್ಯವಾದ ಕಣ್ಣು ಮೊದಲಾದ ಇಂದ್ರಿಯಗಳಿಗೆ ಮತ್ತು ಒಳಗಿರುವ ಮನೋಬುದ್ಧಿ ಮೊದಲಾದವುಗಳಿಗೆ ಬಲವುಂಟಾಗಲಿಕ್ಕೆ ಕಾರಣೀಭೂತವಾಗಿರುತ್ತದೆ. "ಪ್ರಭೃತಿ" ಎಂದು ಹೇಳಿದ್ದರಿಂದ ಧೈರ್ಯ, ಉತ್ಸಾಹ, ಸ್ಮೃತಿ, ಮೇಧಾ ಮೊದಲಾದ ಪ್ರತಿಭಾ ವಿಶಿಷ್ಟವಾದ ಗುಣಗಳು ಗ್ರಹೀತವಾಗುತ್ತವೆ.

ಓಜಸ್ಸಿನ ಸ್ವರೂಪ

ಓಜಃ ಸೋಮಾತ್ಮಕಂ ಸ್ನಿಗ್ಧಂಶುಕ್ಲಂ ಶೀತಂಸ್ಥಿರಂ ಸರಮ್ ॥
ವಿವಿಕ್ತಂ ಮೃದುಮೃತ್ಸ್ನಂಚ ಪ್ರಾಣಾಯತನಮುತ್ತಮಂ॥
ದೇಹಃ ಸಾವಯವಸ್ತೇನವ್ಯಾಪ್ತೋಭವತಿ ದೇಹಿನಃ॥
ತದಭಾವಾಚ್ಚ ಶೀರ್ಯತಿ ಶರೀರಾಣಿಶರೀರಿಣಾಂ ॥
(ಸುಶ್ರುತ॥ ಸೂ. ಸ್ಥಾ. ಅ ೧೫ ಶ್ಲೋ. ೩೨)

"ಓಜಸ್ಸು" ಸೋಮಾತ್ಮಕವಾಗಿರುತ್ತದೆ. ಸ್ನೇಹ ಗುಣವುಳ್ಳದ್ದು, ಶ್ವೇತ ವರ್ಣಯುಕ್ತವಾದದ್ದು, ಶೀತವೀರ್ಯವು, ಶರೀರಾವಯವಗಳಲ್ಲಿ ಸ್ಥೈರ್ಯವನ್ನುಂಟು ಮಾಡುವದೂ, ಆಗಿರುತ್ತದೆ. ಪ್ರಸರಣ ಶೀಲವಾಗಿಯೂ, ಶ್ರೇಷ್ಠ ಗುಣಗಳಿಂದ ಎಲ್ಲ ಧಾತುಗಳಲ್ಲಿ ಭಿನ್ನವಾಗಿ ಹೆಚ್ಚಿನ

ದಾದದ್ದೂ, ಮಾರ್ದವ ಜಿಗಟುಗುಣಯುಕ್ತವಾದದ್ದೂ, ಪ್ರಾಣಕ
(ಜೀವಕ್ಕೆ) ಮುಖ್ಯ ಆಧಾರವಾಗಿಯೂ, ಇರುತ್ತದೆ. ಸರ್ವ ಅಂಗೋಪಾಂ
ಗಳಿಂದ ಕೂಡಿದ ಸಮಗ್ರ ದೇಹವನ್ನು ವ್ಯಾಪಿಸಿಕೊಂಡಿರುತ್ತದೆ. ಓಜಸ್ಸಿ
ಕೊರತೆಯಾದರೆ ಮನುಷ್ಯನ ಪ್ರಾಣವು ಇರಲಾರದು. ಅಥವಾ ಓಜಸ್ಸಿ
ಅಭಾವ (ನಾಶ) ವಾದರೆ ಮನುಷ್ಯನು ಸಾಯುತ್ತಾನೆ.

ಓಜಸ್ಸಿನ ವಿಷಯದಲ್ಲಿ ಚರಕ ಮತ

ಹೃದಿತಿಷ್ಠತಿಯಚ್ಛುದ್ಧಂ ರಕ್ತಮೀಷತ್ಪೀತಕಂ ॥
ಓಜಃ ಶರೀರೇ ಸಂಖ್ಯಾತಂ ತನ್ನಾಶಾನ್ನಾವಿನಶ್ಯತಿ ॥೭೪॥
ಪ್ರಥಮಂ ಜಾಯತೇಹ್ಯೋಜಃ ಶರೀರೇಽಸ್ಮಿನ್ ಶರೀರಿಣಾಂ ॥
ಸರ್ಪಿರ್ವರ್ಣಂ ಮಧುರಸಂ ಲಾಜಗಂಧಿ ಪ್ರಜಾಯತೆ ॥
(ಚರಕ ॥ ಸೂ. ಸ್ಥಾ. ಅ. ೧೭ ಶ್ಲೋ. ೭೫)

ಹೃದಯದಲ್ಲಿ ಸ್ವಲ್ಪ ಹಳದೀ ಬಣ್ಣವುಳ್ಳ ಶುಕ್ಲ ರಕ್ತವ
ಇರುತ್ತದೆ. ಇದಕ್ಕೆ ಓಜಸ್ಸೆಂಬ ಹೆಸರು. "ರಕ್ತಮೀಷತ್‌ಸಪೀತಕಂ
ಎನ್ನುವದರಿಂದ ಅತಿ ಸ್ವಲ್ಪವೂ, ಸ್ವಲ್ಪ ರಕ್ತವರ್ಣದ್ದೂ, ಸ್ವಲ್ಪ ಹಳದಿ
ಬಣ್ಣವಿರುವದೂ, ರಕ್ತದ ಸತ್ವಮಯ ಭಾಗವೆಂದೂ ಧ್ವನಿತವಾಗುತ್ತದೆ
ಸರ್ವಶರೀರ ವ್ಯಾಪಿಯಾದ್ದರಿಂದ, ಓಜೋ ನಾಶವಾಗಲು ಮನುಷ್ಯನ
ಮೃತನಾಗುತ್ತಾನೆ. ಓಜಸ್ಸು ಮೂರು ವರ್ಣವುಳ್ಳದ್ದಿರುತ್ತದೆ. ೧. ಶುಕ್ಲ
ವರ್ಣ, ೨. ಸ್ವಲ್ಪ ಕೆಂಪು, ೩. ಸ್ವಲ್ಪ ಹಳದಿ ಬಣ್ಣಗಳು, ಓಜಸ್ಸಿನಲ್ಲಿ
ಇರುತ್ತವೆ. ಇವು ಮೂರು ವಿಧ ಪ್ರತ್ಯೇಕವಾದ ಓಜಸ್ಸಿರದೆ ಒಂದರಲ್ಲಿಯೆ
ಇವೆಲ್ಲ ವರ್ಣಗಳಿರುತ್ತವೆಯಾದ್ದರಿಂದ, ಓಜಸ್ಸು ಒಂದೇ ಎಂದು ತಿಳಿಯ
ಬೇಕು. ಶುಕ್ಲಾದಿ ವರ್ಣಗಳಿರುವದರಿಂದ, ರಸದಿಂದ ಶುಕ್ರಪರ್ಯಂತವಾದ
ಧಾತುಗಳ ಸತ್ವವೇ ಓಜಸ್ಸೆನ್ನುವದು ಸ್ಪಷ್ಟವಾಯಿತು. ಶರೀರ ಧಾರಣೆಗೆ
ಮುಖ್ಯವಾದ್ದರಿಂದ "ಪ್ರಥಮಂ" ಎಂದು ಹೇಳಿದ್ದಾರೆ. ಅಥವಾ ಶರೀರೋ
ತ್ಪತ್ತಿಯಲ್ಲಿ "ಓಜಸ್ಸಿನಿಂದ ಪ್ರೇರಿತವಾದ ಶುಕ್ರದಿಂದಲೇ" ಗರ್ಭಾರಂಭ
ವಾಗುವದರಿಂದ ಶರೀರದಲ್ಲಿ ಮೊದಲನೇಯದು ಓಜಸ್ಸೆಂದು ಅನ್ನಬಹುದು.

ಓಜಸ್ಸಿನ ಗುಣ, ಪ್ರಭಾವ, ದೇಹಧಾರಣೆಗೆ ಅದರ ಆತ್ಯವಶ್ಯಕತೆ ಮೊದ ಲಾದವುಗಳನ್ನು ಅವಲೋಕಿಸಿ; ಅದು ಪ್ರಧಾನವೆಂದು ಸೂಚಿಸಲು ಹೀಗೆ ವರ್ಣಿಸಿದ್ದಾರೆ. ಅದು ತುಪ್ಪದ ವರ್ಣವುಳ್ಳದ್ದೂ, ಸ್ವಾದುರಸಯುಕ್ತವೂ, ಅಳ್ಳಿನ (ಲಾಜ) ವಾಸನೆಯುಳ್ಳದ್ದೂ ಇರುತ್ತದೆ.

ತಂತ್ರಾಂತರ ಮತವು:— ಪ್ರಾಣಾಶ್ರಯಸ್ಯೌಜಸೋಽಷ್ಟೌ ಬಿಂದವೋಹೃದಯಾಶ್ರಯಾಃ ॥ (ತಂತ್ರಾಂತರೆ)

ಪ್ರಾಣಕ್ಕೆ (ಬದುಕಲಿಕ್ಕೆ) ಆಶ್ರಯವಾದ ಓಜಸ್ಸು ಎಂಟು ಹನಿ (ಎಂಟು ಬಿಂದು) ಪ್ರಮಾಣವಿದ್ದು, ಹೃದಯವನ್ನಾಶ್ರಯಿಸಿಕೊಂಡಿರುತ್ತದೆ. ಅರ್ಧಾಂಜಲಿ (ಅರ್ಧಬೊಗಸೆ) ಯಷ್ಟು ಓಜಸ್ಸೆಂದು ಚರಕಶಾರೀರದಲ್ಲಿ ಹೇಳಿದ್ದಾರೆ. ಆದ್ದರಿಂದ ಸ್ಥೂಲ ಭೂತ ಓಜಸ್ಸು, ಪ್ರಧಾನವಾದ ಅತಿ ಸೂಕ್ಷ್ಮ ಸತ್ವರೂಪ ಓಜಸ್ಸು, ಭಿನ್ನವೆಂದು ತಿಳಿಯಬೇಕು. ಸ್ಥೂಲವಾದದ್ದು ಶ್ಲೇಷ್ಮೌಜಸ್ಸೆಂದು ಗ್ರಹಿಸಿದ್ದಾರೆ. ಮುಖ್ಯವಾದ ಓಜಸ್ಸು ಎಂಟು ಬಿಂದುವಿ ನಷ್ಟು ಇದ್ದು ಹೃದಯದಲ್ಲಿರುತ್ತದೆ. ಇಷ್ಟೇ ಅಲ್ಲ ಈ ಸೂಕ್ಷ್ಮ ಓಜಸ್ಸಿನ ಅಷ್ಟ ಬಿಂದು ಇರುವ ಅವಯವದಲ್ಲಿ, ಭೇದವಾಗಿ ನಾಶ ಸಂಭವಿಸಿದರೂ ಸಹ ಮನುಷ್ಯನಿಗೆ ಮೃತ್ಯು ಬರುತ್ತದೆಂದು ಹೇಳಿದ್ದಾರೆ. ಆಯುರ್ವೇದದಲ್ಲಿ ಮೇಲಿಂದ ಮೇಲೆ ಅಲ್ಲಲ್ಲಿ ಓಜಸ್ಸಿನ ಪ್ರಭಾವವನ್ನು ಮನಮುಟ್ಟುವಂತೆ ಪ್ರದರ್ಶಿಸಿ ದ್ದಾರೆ. **ಅಲೌಕಿಕ ಪ್ರತಿಭಾ, ಧಾರಣಾ, ಸ್ಮೃತಿ, ಶಕ್ತಿ, ಶಾಂತಿ, ತುಷ್ಟಿ, ಧೈರ್ಯ, ಉತ್ಸಾಹ, ಸ್ವರ, ವರ್ಣ, ದೀರ್ಘಾಯುಃ, ಸಾತ್ವಿಕಭಾವ, ಆತ್ಮದರ್ಶನ ಮೊದಲಾದವುಗಳುಳ್ಳ, ಅತಿಮಾನುಷ** ರಲ್ಲಿ, ಸತ್ವಮಯ ಓಜೋಽಧಿಕ್ಯವೇ ಕಾರಣವೆಂದು ಹೇಳಿದ್ದಾರೆ ಚರಕ ಸಂಹಿತೆಯ ರಸಾಯನ ಪಾದದಲ್ಲಿ ಇದರ ವಿವರಣೆ ಇರುತ್ತದೆ. ಆದ್ದರಿಂದ **"ಯತ್ಪರಂತೇಜಃ ಖಲ್ವೋಜಃ"** ಯಾವದು ಅಲೌಕಿಕವಾದ ತೇಜಸ್ಸೋ ಅದೇ ಓಜಸ್ಸೆಂದು ಸ್ಪಷ್ಟಪಡಿಸಿದ್ದಾರೆ. ಓಜಸ್ಸು ಬೇರೆ ಒಂದು ಧಾತು ವೆಂದು ತಿಳಿಯಬಾರದು. ಹಾಗೆ ತಿಳೆದರೆ ಅಷ್ಟ (೮) ಧಾತುಗಳಾಗುತ್ತವೆ. ಎಲ್ಲಾ ಧಾತ್ವಾದಿಗಳ ಸತ್ವವಾದ್ದರಿಂದ ಓಜಸ್ಸನ್ನು ಬೇರೆ ಒಂದು ಧಾತು ವೆಂದು ಗಣಿಸುವ ಕಾರಣವಿಲ್ಲ.

ಬಾಲಕನಲ್ಲಿಯ ಶುಕ್ರ ಸ್ಥಿತಿ

ರಸದಿಂದಾರಂಭಿಸಿ ಶುಕ್ರಪರ್ಯಂತವಾದ ಧಾತುಗಳು ಬಾಲಕರಲ್ಲಿಯೂ ಇರುತ್ತವೆ. ಶುಕ್ರವು ಸೂಕ್ಷ್ಮವಾಗಿರುವದರಿಂದ ಗೋಚರವಾಗುವದಿಲ್ಲ. ವಯಸ್ಸಿಗೆ ಬಂದನಂತರ ಸ್ಥೂಲವೂ ವಿಪುಲವೂ ಆಗುವದರಿಂದ ಗೋಚರಿಸುತ್ತದೆ.

ಯಥಾಹಿಪುಷ್ಪವುಕುಲಸ್ಥೋ ಗಂಧೋ ನಶಕ್ಯಮಿಹಾಸ್ತೀತಿ ವಕ್ತುಂ, ನೈವನಾಸ್ತೀತಿ; ಅಥಚಾಸ್ತಿ, ಸತಾಂಭಾವಾನಾಮುಭಿವ್ಯಕ್ತೆರಿತಿಜ್ಞಾತ್ವಾ, ಕೇವಲಂ ಸೌಕ್ಷ್ಮ್ಯಾನ್ನಾಭಿವ್ಯಜ್ಯತೆ; ಸಏವ ವಿವೃತಪತ್ರಕೇಶರೇಪುಷ್ಪೇಕಾಲಾಂತರೇಣಾಭಿವ್ಯಕ್ತಂ ಗಚ್ಛತಿ ಏವಂಬಾಲಾನಾಮಪಿವಯಃ ಪರಿಣಾಮಾತ್ ಶುಕ್ರಪಾದುರ್ಭಾವೋ ಭವತಿ, ರೋಮರಾಜ್ಯಾದಯಶ್ಚ ವಿಶೇಷಾನಾರೀಣಾಂ ॥ (ಸುಶ್ರುತ॥ ಸೂ. ಸ್ಥಾ. ಅ ೧೪ ಸೂ. ೧೪)

ಹೇಗೆ ಹೂವು ಮಗ್ಗೆಯಿದ್ದಾಗ ಮಗ್ಗೆಯಲ್ಲಿ ಪರಿಮಳವು ಅದೆಯೆಂದು ಅಥವಾ ಇಲ್ಲವೆಂದು ಹೇಳಲು ಸಾಧ್ಯವಿಲ್ಲವೋ? ಆದರೂ ಯಾವದು ಇರುವಂಥಾದ್ದದೆಯೋ, ಸ್ಪಷ್ಟವಾಗಿ ಕಾಲಾಂತರದಲ್ಲಿ ಅಭಿವ್ಯಕ್ತಿಯನ್ನು ಹೊಂದಿ ದೃಷ್ಟಿಗೋಚರವಾಗುವದೋ, ಅದು ಇರಲಿಕ್ಕೇಬೇಕು. ಇದ್ದೇ ಇರುತ್ತದೆ. ಎನ್ನುವ ನಿಯಮವಿರುವದರಿಂದ, ಗಂಧವಿದ್ದರೂ ಸೂಕ್ಷ್ಮ ಸ್ವರೂಪವುಳ್ಳದ್ದರಿಂದ ಗೋಚರವಾಗುವದಿಲ್ಲ. ಅದೇ ಮಗ್ಗೆಯು ಕ್ರಮಶಃ ಅರಳಿ ಪ್ರಫುಲ್ಲಿತವಾದಾಗ ಪರಿಮಳವು ಗೋಚರಿಸುತ್ತದೆ. ಹಾಗೆಯೇ ಬಾಲಕನಲ್ಲಿ ಶುಕ್ರವು ಸೂಕ್ಷ್ಮ ಸ್ಥಿತಿಯಲ್ಲಿರುವದರಿಂದ ಸ್ಪಷ್ಟವಾಗುವದಿಲ್ಲ. ವಯಸ್ಸು ಬಂದು ತಾರುಣ್ಯ ಸ್ಥಿತಿ ಉಂಟಾಗಲು, ಶುಕ್ರವು ಸ್ಥೂಲ ರೀತಿಯಿಂದ ಗೋಚರವಾಗುತ್ತದೆ. ಗಡ್ಡ ಮೀಶೇ ಮೊದಲಾದವುಗಳು ಉತ್ಪನ್ನವಾಗುತ್ತವೆ. ಇದರಂತೆ ಬಾಲಕಿಯರಿಗೆ ಯೌವ್ವನ ಬರಲು, ರೋಮರಾಜ್ಯಾದಿಗಳೂ, ಸ್ತನಾಭಿವೃದ್ಧಿಯೂ, ಗರ್ಭಾಶಯ ಬೆಳವಣಿಗೆಯೂ, ಆರ್ತವ (ಮಾಸಿಕ ಮುಟ್ಟು) ದರ್ಶನವೂ, ಮೊದಲಾದವುಗಳಾಗುತ್ತವೆ.

(೬) ಶುದ್ಧಾಶುದ್ಧ ಶುಕ್ರಾರ್ತವ ಲಕ್ಷಣ

ಶುದ್ಧ ಶುಕ್ರ ಲಕ್ಷಣವು

ಸ್ಫಟಿಕಾಭಂ ದ್ರವಂ ಸ್ನಿಗ್ಧಂ ಮಧುರಂ ಮಧುಗಂಧಿಚ ॥

ಶುಕ್ರಮಿಚ್ಛಂತಿಕೇಚಿತ್ತು ತೈಲಕ್ಷೌದ್ರನಿಭಂತಥಾ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋ. ೧೧)

"ಶುಕ್ರವು" ಸ್ಫಟಿಕದಂತೆ ಶುಭ್ರವಾದ ವರ್ಣವುಳ್ಳದ್ದು, ದ್ರವರೂಪವಾದದ್ದು, ಜಿಗುಟಾದದ್ದು, ಮಧುರ ರಸವುಳ್ಳದ್ದು, ಜೇನುತುಪ್ಪದ ವಾಸನೆಯುಳ್ಳದ್ದು, ಶುದ್ಧ (ಸ್ವಾಭಾವಿಕ) ಶುಕ್ರವೆಂದು ಹೇಳುತ್ತಾರೆ. ಕೆಲವರು ಜೇನುತುಪ್ಪದ ಬಣ್ಣ, ಅಥವಾ ತೈಲ (ಎಳೆಣ್ಣೆ) ವರ್ಣವುಳ್ಳ ಶುಕ್ರವು, ಶುದ್ಧ ಶುಕ್ರವೆಂದು ಹೇಳುತ್ತಾರೆ.

ಶುಕ್ರಂ ಶುಕ್ಲಂ ಗುರುಸ್ನಿಗ್ಧಂ ಮಧುರಂ ಬಹುಲಂಬಹು॥
ಘೃತಮಾಕ್ಷಿಕತೈಲಾಭಂ॥ (ವಾಗ್ಭಟ॥ ಶಾರೀರ॥ ಅ ೧ ಶ್ಲೋ ೧೮)

"ಶುಕ್ರವು" ಶ್ವೇತವರ್ಣವುಳ್ಳದ್ದಾಗಿಯೂ, ಜಡವಾಗಿಯೂ, ಜಿಗುಟಾಗಿಯೂ, ಮಧುರ ರಸವುಳ್ಳದ್ದಾಗಿಯೂ, ಬಹಳವಾಗಿ ಬಿಡುವಂಥಾದ್ದು (ರತಿ ಸಮಯದಲ್ಲಿ), ಮತ್ತು ವಿಪುಲವಾಗಿ (ಹೆಚ್ಚಾಗಿ) ರುವದು, ಉತ್ತಮ ಶುಕ್ರವು. ತುಪ್ಪದ ವರ್ಣ, ಜೇನುತುಪ್ಪದ ವರ್ಣ, ತೈಲವರ್ಣ, ಇವುಗಳ ವರ್ಣವಿದ್ದರೂ ಸಹ ಉತ್ತಮ ಶುದ್ಧ ಶುಕ್ರವೆಂದು ಹೇಳುವರು.

ಶುದ್ಧಾರ್ತವ ಲಕ್ಷಣವು

ಶಶಾಸೃಕ್ಪ್ರತಿಮಂಯತ್ತು ಯದ್ವಾಲಾಕ್ಷಾರಸೋಪಮಂ ॥
ತದಾರ್ತವಂಪ್ರಶಂಸಂತಿ ಯದ್ವಾಸೋನವಿರಂಜಯೇತ್ ॥
(ಸು। ಶಾ। ಅ ೨ ಶ್ಲೋ ೧೭)

ಯಾವ ಸ್ತ್ರೀಯ ಆರ್ತವವು (ಮುಟ್ಟು), ಮೊಲದ ರಕ್ತದಂತೆ ಇರುವದೋ, ಅಥವಾ ಅರಗಿನ ರಸದಂತೆಯಿದ್ದು, ವಸ್ತ್ರದ ಮೇಲೆ ಹಾಕಿ ನಂತರ ತೊಳೆಯಲಾಗಿ, ಆ ವಸ್ತ್ರಕ್ಕೆ ಯಾವ ಕಲೆಯೂ ಅಂಟಿಕೊಳ್ಳದಿದ್ದರೆ; ಇವೆಲ್ಲ ಲಕ್ಷಣಗಳಿಂದ ಯುಕ್ತವಾದ ಆರ್ತವವನ್ನು, ಶುದ್ಧಾರ್ತವವೆಂದು ಹೇಳುತ್ತಾರೆ. ಈಗ ಹೇಳಿದ ಆರ್ತವವು ಋತುಕಾಲದಲ್ಲಿ ಸ್ರಾವವಾಗುವ ಆರ್ತವವು, ಇದರಿಂದ ಗರ್ಭಕಾರಕವಾದ, ರತಿಕಾಲದಲ್ಲಿ ದ್ರವಿಸುವ ಆರ್ತವಲಕ್ಷಣವನ್ನು ಹೇಳಿದಂತಾಗಲಿಲ್ಲವೆಂದೆನಿಸಬಹುದು. ರತಿಕಾಲದಲ್ಲಿ ದ್ರವಿಸುವ ಆರ್ತವವು ಕೇವಲ ಜಲದಂತೇ ಇರುವದರಿಂದ, ಅದರಿಂದ ಲಕ್ಷಣವು ಗೋಚರವಾಗುವ

ದಿಲ್ಲ. ಅದು ಶುದ್ಧವಿದ್ದರೆ ಮಾತ್ರ ರಜಸ್ಸಿನ (ಮುಟ್ಟಿನಲ್ಲಿ) ಹೇಳಿದ ಲಕ್ಷಣವು ಇರುತ್ತದೆ. ಮಾಸಿಕ ರಜಸ್ಸು ಮೇಲೆ ಹೇಳಿದ ಲಕ್ಷಣವುಳ್ಳದ್ದಾದರೆ ಶುದ್ಧಾರ್ತವವೆಂದೂ; ಬೇರೆಯಾಗಿದ್ದರೆ ವಿಕೃತ(ದೂಷಿತ) ವಾಗಿದೆಯೆಂದೂ, ತಿಳಿಯಬೇಕು.

ಅಶುದ್ಧ ಶುಕ್ರದಲ್ಲಿಯ ದೋಷಗಳು

ಸಾಧಾರಣವಾಗಿ ಮೇಲೆ ಹೇಳಿದ ಶುದ್ಧ ಶುಕ್ರ ಲಕ್ಷಣದ ವಿರುದ್ಧ ಲಕ್ಷಣವುಳ್ಳ ಶುಕ್ರವನ್ನು, ಅಶುದ್ಧ ಶುಕ್ರವೆಂದು ತಿಳಿಯಬೇಕು. ಹುತ್ತು ಅಶುದ್ಧ ಶುಕ್ರದ ಲಕ್ಷಣಗಳನ್ನೂ ಹೋಲಿಸಿ ಅಶುದ್ಧವಿರುವದನ್ನು ನಿರ್ಧರಿಸಬೇಕು. ಕಾರಣ ಸಹಿತವಾದ, ಅಶುದ್ಧ ಶುಕ್ರ ಲಕ್ಷಣವು:-

ವಾತ ಪಿತ್ತ ಶ್ಲೇಷ್ಮ ಕುಣಪ ಗ್ರಂಥಿ ಪೂತಿ ಪೂಯ ಕ್ಷೀಣ ಮೂತ್ರ ಪುರೀಷರೇತಸಃ ಪ್ರಜೋತ್ಪಾದನೇ ನ ಸಮರ್ಥಾ ಭವಂತಿ ॥ (ಸುಶ್ರುತ| ಶಾರೀರ| ಅ ೨ ಸೂ ೩)

ಯಾವನ ಶುಕ್ರವು ವಾತ, ಪಿತ್ತ, ಕಫಯಿವುಗಳಿಂದ ದೋಷಯುಕ್ತವಾಗಿದೆಯೋ, ಮತ್ತು ಹೆಣದಂತೆ ವಾಸನೆಯುಳ್ಳ, ಗಂಟು ಗಂಟಾಗಿರುವ ಹೊಲಸು ಕೀವಿನಂತೆಯೂ, ಮತ್ತು ಅದರಂತೆ ದುರ್ಗಂಧವುಳ್ಳದ್ದೂ, ಕ್ಷೀಣ ಶುಕ್ರವೂ, ಮೂತ್ರ ವಾಸನೆಯುಳ್ಳದ್ದೂ, ಮಲದ ವಾಸನೆಯುಳ್ಳದ್ದೂ, ಇಂಥ ಶುಕ್ರವುಳ್ಳವರು ಪ್ರಜೋತ್ಪಾದನೆಗೆ ಯೋಗ್ಯರಲ್ಲ. ಅಥವಾ ಇಂಥ ದೂಷಿತ ಶುಕ್ರದಿಂದ ಪ್ರಜೋತ್ಪಾದನೆಯಾದರೆ, ಯೋಗ್ಯ ನಿರೋಗಿ ಸಂತತಿಯಾಗಲಾರದು. ಒಂದು ವೇಳೆ ಇಂಥ ದೂಷಿತ ಶುಕ್ರದಿಂದ ಪ್ರಜೋತ್ಪಾದನೆಯು ಸಹ ಆಗಲಿಕ್ಕಿಲ್ಲ ಕ್ವಚಿತ್ತಾಗಿ ಆದರೂ ದುರ್ಬಲ ಸಂತತಿಯಾಗಬಹುದು. ಇಂಥ ಶುಕ್ರಕ್ಕೆ ಅಶುದ್ಧ ಶುಕ್ರವೆಂಬ ಹೆಸರು.

ಅಶುದ್ಧ ಶುಕ್ರ ಲಕ್ಷಣ

ತೇಷು ವಾತವರ್ಣ ವೇದನಂ ವಾತೇನ; ಪಿತ್ತವರ್ಣ ವೇದನಂ ಪಿತ್ತೇನ, ಶ್ಲೇಷ್ಮ ವರ್ಣ ವೇದನಂ ಶ್ಲೇಷ್ಮಣಾ, ಶೋಣಿತವರ್ಣ

ವೇದನಂ ಕುಣಪ ಗಂಧಿ ಅನಲ್ಪಂಚ ರಕ್ತೇನ, ಗ್ರಂಥಿಭೂತಂ ಶ್ಲೇಷ್ಮ ವಾತಾಭ್ಯಾಂ, ಪೂತಿಪೂಯನಿಭಂ ಪಿತ್ತ ಶ್ಲೇಷ್ಮಭ್ಯಾಂ ಕ್ಷೀಣಂ ಪ್ರಾಗುಕ್ತಂ ಪಿತ್ತವಾರುತಾಭ್ಯಾಂ ಮೂತ್ರ ಪುರೀಷ ಗಂಧಿ ಸನ್ನಿಪಾತೇನೇತಿ

(ಸುಶ್ರುತ॥ ಶಾರೀರ॥ ೞ ೨ ಸೂ ೪)

(೧) " **ವಾತದೂಷಿತ ಶುಕ್ರವು** " ಕೆಂಪು, ಕಪ್ಪು ವರ್ಣಯುಕ್ತ ವಾದದ್ದೂ, ಸ್ಖಲನ ಸಮಯದಲ್ಲಿ ಚುಚ್ಚಿದಂತೆ, ಒಡೆದಂತೆ ಜನನೇಂದ್ರಿಯ ದಲ್ಲಿ ನೋವಾಗುವನು.

(೨) "**ಪಿತ್ತದೂಷಿತ ಶುಕ್ರವು**" ಹಳದೀ, ನೀಲಿ ವರ್ಣವುಳ್ಳದ್ದಾಗಿ ಸ್ಖಲನದಲ್ಲಿ, ದಾಹ, ಉರಿ, ಚೋಷ (ನೇದನಾ ವಿಶೇಷವು) ಮೊದಲಾದವು ಗಳುಂಟಾಗುವವು.

(೩) "**ಕಫ ದೂಷಿತ ಶುಕ್ರವು**" ಬಿಳೀ ವರ್ಣವಿದ್ದು, ದುರ್ಗಂಧ ವಿರುವದು. ಮತ್ತು ಸ್ಖಲನ ಸಮಯದಲ್ಲಿ, ಆ ಸ್ಥಳದಲ್ಲಿ ತುರಿಕೆಯುಂಟಾ ಗುವದು.

(೪) "**ಕುಣಪ ಗಂಧಿ**" ಹೆಣದಂತೆ ವಾಸನೆಯುಳ್ಳ ಶುಕ್ರವು, ರಕ್ತ ದೂಷಿತವಾದದ್ದಿರುತ್ತದೆ. ಮತ್ತು ಬಹಳವಾದದ್ದು, ಹಳದೀ, ನೀಲೀ ಬಣ್ಣಗಳಿಂದ ಯುಕ್ತವಾಗಿ, ದಾಹ, ಉರಿ, ಚೋಷಾದಿ, ವೇದನಾಯುಕ್ತ ವಾಗಿರುತ್ತದೆ.

(೫) "**ಗ್ರಂಥಿ**" ಗಂಟು ಗಂಟಾಗಿರುವ ರೀತಸ್ಸು, ತುರಿಕೆ, ಸ್ಖಲನದಲ್ಲಿ ನೋವು ಇತ್ಯಾದಿಗಳಿರುವವು.

(೬) "**ಪೂತಿ ಪೂಯ**" ರಸಿಗೆ (ಕೀವು) ಯಂತೆ ಇರುವ, ಅಥವಾ ರಸಿಕೆಯಂತೆ ಹೊಲಸು ವಾಸನೆಯುಳ್ಳ ಶುಕ್ರವು, ಪೂತಿಪೂಯವೆಂಬ ಹೆಸ ರುಳ್ಳದ್ದು.

(೭) "**ಕ್ಷೀಣ**" ಕ್ಷೀಣ ಶುಕ್ರವು ಮೈಥುನದಲ್ಲಿ (ರತಿಕಾಲದಲ್ಲಿ) ಸ್ಖಲಿ ಸುವದಿಲ್ಲ. ಸ್ಖಲಿಸಿದರೂ, ಸ್ವಲ್ಪ ರಕ್ತ ವರ್ಣವಾಗಿಯೂ ರಕ್ತದಿಂದ ಕೂಡಿಯೂ ಸ್ರವಿಸುತ್ತದೆ. ನೋವು, ದಾಹಾದಿಗಳು ಇದ್ದು, ಸ್ವಲ್ಪ ಸ್ವಲ್ಪ ವಾಗಿ ಸ್ಖಲಿತವಾಗುವದು.

(೮) "ಮೂತ್ರ ಪುರೀಷ ಗಂಧಿ" ಮೂತ್ರ ಅಥವಾ ಮಲದಂತೆ ವಾಸನೆಯುಳ್ಳ, ಮಲಮೂತ್ರಗಳೆರಡರಂತೆಯೂ ವಾಸನೆಯುಳ್ಳ, ಯಾವ ಶುಕ್ರವಿರುತ್ತದೆಯೋ; ಅದಕ್ಕೆ ಮೂತ್ರಪುರೀಷ ಗಂಧಿಯೆಂಬ ಹೆಸರು. ಅದು ತ್ರಿದೋಷದೂಷಿತವಾದದ್ದಿರುತ್ತದೆ. ಈ ಪೂರ್ವೋಕ್ತ ದೋಷಗಳಿಂದ ಯುಕ್ತವಾದ ಶುಕ್ರವು, ಅಶುದ್ಧ ಶುಕ್ರವು.

ಆಶುದ್ಧಾರ್ತವ ಲಕ್ಷಣವು

ಆರ್ತವಮಪಿತ್ರಿಭಿರ್ದೋಷೈಃ ಶೋಣಿತ ಚತುರ್ಥೈಃ ಪೃಥಕ್ ದ್ವಂದ್ವೈತ್ರಿಃ ಸಮುಸ್ತೈಃ ಕ್ಷೀಣೇಷು ಸೃಷ್ಟಂ ಅಬೀಜಂಭವತಿ ತದಪಿ ದೋಷ ವರ್ಣವೇದನಾದಿಭಿಃ ವಿಜ್ಞೇಯಂ ॥ ತೇಷುಕುಣಪ, ಗ್ರಂಥಿ, ಪೂತಿಪೂಯ, ಕ್ಷೀಣ, ಮೂತ್ರಪುರೀಷಪ್ರಕಾಶಂ ಅಪಿ ಪ್ರಜೋತ್ಪಾದನೆ ಅಯೋಗ್ಯಂಭವತಿ ॥

(ಸುಶ್ರುತ॥ ಶಾರೀರ॥ ಅ ೨ ಸೂ ೫)

"ಆರ್ತವವೂ" ವಾತ, ಪಿತ್ತ, ಕಫದೂಷಿತವಾದದ್ದನ್ನು ಅವಾವ ಲಕ್ಷಣ ವರ್ಣ ವೇದನೆ ಇತ್ಯಾದಿಗಳಿಂದ, ಶುಕ್ರಕ್ಕೆ ಹೇಳಿದ ಲಕ್ಷಣದಂತೆಯೇ ತಿಳಿಯಬೇಕು. ಹೆಣದ ವಾಸನೆಯು (ಕುಣಪ ಗಂಧಿ) ರಕ್ತ ದೋಷದಿಂದ ಉತ್ಪನ್ನವಾಗುತ್ತದೆ. ವಾತ ಕಫ ದೂಷಿತವು (ಗ್ರಂಥಿ) ಗಂಟುಳ್ಳದ್ದಾಗಿಯೂ ಇರುವದು. ಕೀವಿನಂತೆ ಹೊಲಸು ನಾರುವದು (ಪೂತಿಪೂಯ) ಪಿತ್ತ ಕಫ ದೂಷಿತವಾದದ್ದಿರುತ್ತದೆ. "ಕ್ಷೀಣಾರ್ತವವು" ಮಾಸಿಕ ರಜಸ್ರಿನ ಅಪ್ರವೃತ್ತಿ ಅಥವಾ ಸ್ವಲ್ಪ ಸ್ರಾವ, ಯೋನಿ ನೋವುಗಳುಳ್ಳದ್ದಾಗುತ್ತದೆ. ಮೂತ್ರ ಪುರೀಷ ಗಂಧಿ (ಮಲಮೂತ್ರ ವಾಸನೆಯುಳ್ಳ) ಆರ್ತವವು, ತ್ರಿದೋಷ ದೂಷಿತವಾದದ್ದಿರುತ್ತದೆ. ಇಂಥ ಆರ್ತವವು ಬೀಜ ಪೋಷಣೆಗೆ ಯೋಗ್ಯವಲ್ಲವು. ಶುಕ್ರ ದೋಷ ಲಕ್ಷಣಗಳೆಲ್ಲವನ್ನೂ ಅನ್ವಯಿಸಿ ಆರ್ತವ ದೋಷಗಳನ್ನು ತಿಳಿಕೊಳ್ಳಬೇಕು. "ಆರ್ತವಮಪಿ" ಆರ್ತವವೂ ಕೂಡಾ ಎಂದು ಹೇಳಿರುವದರಿಂದ, ಶುಕ್ರದೋಷಗಳಂತೆಯೇ ಆರ್ತವದೋಷಗಳನ್ನು ತಿಳಿಯಬೇಕೆಂದು ಸ್ಪಷ್ಟವಾಗುತ್ತದೆ. ಶುಕ್ರ, ಆರ್ತವ ದೋಷಗಳಲ್ಲಿ ಭೇದವೇನೂ ಹೆಚ್ಚು ಕಡಿಮೆಯಾದದ್ದಿರುವದಿಲ್ಲ.

ಸ್ತ್ರೀ - ಪುರುಷರಲ್ಲಿಯ ನಪುಂಸಕತ್ವ

ಸ್ತ್ರೀ ಪುರುಷರಿಬ್ಬರಲ್ಲಿಯೂ ಷಂಡರು (ಶುಕ್ರ ಆರ್ತವ ರಹಿತ) ಇರುತ್ತಾರೆ. "ನರ ನಾರಿ ಷಂಡೌ" ಪುರುಷ ಮತ್ತು ಸ್ತ್ರೀ ಷಂಡರೆಂದು ಹೇಳಿದ್ದರಿಂದ, ಚರಕಾಚಾರ್ಯರ ಮತದಂತೆ ಸ್ತ್ರೀಯರಲ್ಲಿಯೂ ಕೂಡಾ ನಪುಂಸಕರಿರುತ್ತಾರೆಂದು ಸಿದ್ಧವಾಗುತ್ತದೆ. (ಚರಕ॥ಶಾರೀರ॥ ಅ ೨ ಶ್ಲೋ ೧೭॥)

ನಪುಂಸಕರಲ್ಲಿಯ ವಿಶೇಷ

ಸ್ತ್ರೀ ಪುರುಷರಲ್ಲಿ ಶುಕ್ರಸಹಿತವಾದ ದೂಷಿತ ಶುಕ್ರಾರ್ತವವುಳ್ಳ ನಪುಂಸಕರಿರುತ್ತಾರೆ ಅವರಿಗೆ "ವಿಪ್ರಕೃತಿಷಂಡ" ರೆಂಬ ಹೆಸರು.

ಆಸೇಕ್ಯಶ್ಚ, ಸುಗಂಧೀಚ, ಕುಂಭೀಕ, ಶ್ಚೈರ್ಷ್ಯಕಸ್ತಥಾ ॥
ಸರೇತಸಸ್ತ್ವಮೀಜ್ಞೇಯಾ, ಅಶುಕ್ರಃ ಷಂಡಸಂಜ್ಞಿತಃ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋಕ ೪೪॥)

ಶುಕ್ರವುಳ್ಳಂಥ "ವಿಪ್ರಕೃತಿ" ಷಂಡರು

೧. ಆಸೇಕ್ಯ, ೨. ಸುಗಂಧೀ, ೩ ಕುಂಭೀಕ, ೪ ಈರ್ಷ್ಯಕ, ಹೀಗೆ ನಾಲ್ಕು ವಿಧವಾದವರಿಗೆ, ದೂಷಿತವಾದ, ಶುಕ್ರಾರ್ತವಗಳಿದ್ದು ಅಥವಾ ದೂಷಿತ ಶುಕ್ರಾರ್ತವಗಳು ಸ್ವಲ್ಪವಿದ್ದು, "ವಿಪ್ರಕೃತಿ" ಪ್ರಕೃತಿಗೆ ವಿರುದ್ಧವಾದ ರೀತಿಯಿಂದ ವರ್ತಿಸಿದಾಗ (ಗುದ, ಮುಖ, ನಾಸಾದಿಗಳಿಂದ) ಅವುಗಳ ಸ್ರಾವವುಂಟಾಗುತ್ತದೆ. ಇದು ಅನೈಸರ್ಗಿಕವಾದ್ದರಿಂದ ಇಂಥ ವರನ್ನು ಷಂಡರೊಳಗೆ (ನಪುಂಸಕರಲ್ಲಿ) ಗ್ರಹಿಸಿದ್ದಾರೆ. ಶುಕ್ರಾರ್ತವಗಳು ಇರುವದರಿಂದಲೂ ಯದ್ವಾತದ್ವಾರತಿಪ್ರಸಂಗದಿಂದಲೂ ಕ್ವಚಿತ್ ಪ್ರಜೋತ್ಪತ್ತಿಯಾಗುವದರಿಂದಲೂ ಇಂಥವರು ಸರೇತಸಃ ಶುಕ್ರವುಳ್ಳ ಷಂಡರು. "ವಿಪ್ರಕೃತಿ" ಪ್ರಕೃತಿ ವಿರುದ್ಧ ರೀತಿಯ ರತಿಯುಳ್ಳವರು ಎಂದು ಹೇಳಿದ್ದಾರೆ. ಇನ್ನು ಸ್ವಾಭಾವಿಕವಾಗಿ ಶುಕ್ರಾರ್ತವಗಳಿಲ್ಲದವರಿಗೆ "ನಪುಂಸಕ" ರೆಂಬ ಹೆಸರು. ಸ್ವಾಭಾವಿಕ ನಪುಂಸಕರಲ್ಲಿ ಪ್ರಜೋತ್ಪಾದನೆಯಾಗುವದಿಲ್ಲ.

ನಪುಂಸಕರ ಹೊರತಾದ ಅಸೇಕ್ಯಾದಿ, ಶುಕ್ರಾರ್ತವ, ದೋಷದಿಂದಲೇ ಷಂಡ ಸಂಜ್ಞೆಯನ್ನು ಹೊಂದಿರುವದರಿಂದ, ಅಶುದ್ಧ ಶುಕ್ರಾರ್ತವಗಳ ವಿಷಯದಲ್ಲಿ ಪ್ರಾಸಂಗಿಕವಾಗಿ ಹೇಳಬೇಕಾದ್ದರಿಂದ ವಿವರಿಸಿದ್ದೇನೆ. ವಿಶೇಷ ಬೇಕಾದವರು ಸುಶ್ರುತವನ್ನು ನೋಡಿರಿ. (ಸುಶ್ರುತ।। ಶಾರೀರ।। ಅ ೨ ಶ್ಲೋ ೩೮ ರಿಂದ ೪೬ ರ ವರೆಗೆ)

"ವಿಪ್ರಕೃತಿ" ಷಂಡರ ದೂಷಿತವಾದ ಶುಕ್ರಾರ್ತವಗಳಿಗೆ ಚಿಕಿತ್ಸೆಯಿಲ್ಲ. ಯಾಕಂದರೆ ಅವರು ದೂಷಿತ ಪ್ರಕೃತಿಯುಳ್ಳ ತಂದೆ ತಾಯಿಗಳ ಶುಕ್ರಾರ್ತವಗಳಿಂದ ಹುಟ್ಟಿ ಅವರಲ್ಲಿ ಕ್ರಮೇಣ ದೋಷ ಪ್ರಬಲವಾಗಿ "ವಿಪ್ರಕೃತಿ" ಯುಂಟಾಗಿರುತ್ತದೆ. ಇದು ಜನ್ಮಜವಾದ್ದರಿಂದ ಚಿಕಿತ್ಸೆಯಿಲ್ಲ. ಇದರಂತೆ ಶುಕ್ರರಹಿತ ನಪುಂಸಕರಿಗೂ ಪ್ರತಿಕ್ರಿಯೆಯನ್ನು ಶಾಸ್ತ್ರದಲ್ಲಿ ಹೇಳಿರುವದಿಲ್ಲ.

(೭) ಗರ್ಭೋತ್ಪತ್ತಿ ವಿಜ್ಞಾನ

ಗರ್ಭಾವಕ್ರಮಣಪ್ರಕ್ರಿಯಾಃ

ಗರ್ಭಾವಕ್ರಮಣವೆಂದರೆ:— ಜೀವಾತ್ಮನು, ತನ್ನ ಲಿಂಗ ಶರೀರ (ಕರ್ಮಜ ದೇಹ) ದೊಡನೆ ಗರ್ಭದಲ್ಲಿ ಅವ್ಯಕ್ತ ಸ್ವರೂಪದಿಂದ ಪ್ರವೇಶಿಸಿ, ಪಾಂಚಭೌತಿಕ ಸೂಕ್ಷ್ಮ ಸ್ಥಿತಿಯ ಗರ್ಭದಲ್ಲಿ ಅನ್ವಯಿಸಿ (ಸಮ್ಮಿಲಿತವಾಗಿ) ಅದನ್ನು ಬೆಳವಣಿಗೆ ಯೋಗ್ಯವಾಗುವಂತೆ ಮಾಡಿ ತಾನೂ ಗರ್ಭಕ್ಕನುಗುಣವಾಗಿ, ಕ್ರಮಶಃ ಪ್ರವ್ಯಕ್ತವಾಗುತ್ತಾ, ಪೂರ್ಣ ಸ್ಥಿತಿಗೆ ಮುಟ್ಟುತ್ತಾನೆ. ಈ ಪ್ರಕಾರ ಕ್ರಮಬದ್ಧವಾದ ಗರ್ಭ ಸ್ಥಿತಿಯ ಪರಿಪೂರ್ಣತೆಯ ವರೆಗಿನ, ಕ್ರಿಯಾ, ಸ್ವರೂಪ, ಸ್ಥಿತಿ, ಇವುಗಳ ಕ್ರಮಕ್ಕೆ "ಗರ್ಭಾವಕ್ರಾಂತಿ"ಯೆಂಬ ಹೆಸರು. ಇದು ಶಾಸ್ತ್ರ ಪ್ರತಿಪಾದಿತವಾಗಿದೆ.

ಗರ್ಭಾವಕ್ರಾಂತಿ(ಗರ್ಭ ಕ್ರಮ) ವಿಷಯದಲ್ಲಿ ಶಾಸ್ತ್ರದ ಸ್ಥೂಲ ದೃಷ್ಟಿಯಿಂದ ವಿಚಾರಿಸಿದರೆ, ಅನೇಕ ಸಂಶಯಗಳೂ ವಿರೋಧ ಕ್ರಿಯಾ ಘಟನೆಗಳೂ ತೋರುತ್ತವೆ. ಇದರಿಂದ ನಿಶ್ಚಯಯಾವದೆಂದು ಗೊತ್ತಾಗುವದಿಲ್ಲ.

ಇದು ಸ್ಥೂಲ ವಿಚಾರವೇ ವಿನಾ ವಿರೋಧವಲ್ಲವು. ಸೂಕ್ಷ್ಮ ವಿಚಾರ ಮಾಡಿದರೆ ವಿರೋಧ ಬರುವದಿಲ್ಲ. ಉದಾ:- ಗರ್ಭ ವಿಷಯದಲ್ಲಿ "ಸುಶ್ರುತಾಚಾರ್ಯರು" ಅಂಗ ಪ್ರತ್ಯಂಗಗಳ ಪೂರ್ಣತೆಯಾಗಿ ಏಳನೇ ತಿಂಗಳಲ್ಲಿ ಗರ್ಭಕ್ಕೆ ಜೀವವುಂಟಾಗುತ್ತದೆಂದು ಹೇಳಿದ್ದಾರೆ. ಹೀಗೆ ಹೇಳಿರುವದರಿಂದ ಏಳು ತಿಂಗಳಿನ ವರೆಗೆ, ಜೀವವಿಲ್ಲದೆ ಗರ್ಭವು ಹೇಗೆ ಬೆಳೆಯಿತು? ಹೀಗೆ ಜೀವವಿಲ್ಲದೆಬೆಳೆಯುವ ಗರ್ಭವು ಪತನವೇಕೆ ಆಗುತ್ತದೆ? ಜೀವವಿದ್ದರೆ ಆಘಾತಾದಿಗಳ (ಅಪಚಾರಗಳ) ಅರಿವಾಗುತ್ತದೆ. ಅದಿಲ್ಲದಿರುವಾಗ ಗರ್ಭ ಪತನ (ನಾಶ) ಯಾಕಾಗಬೇಕು? ಜೀವವಿಲ್ಲದೆ ಬೆಳೆಯುವದಾದರೆ, ಜೀವ ರಹಿತ (ಮೃತ) ದೇಹವೂ ಪಂಚಭೂತಾತ್ಮಕವಾದದ್ದು; ಅದೂ ಸಹ ಯಾಕೆ ಬೆಳೆಯಬಾರದು? ಇತ್ಯಾದಿ ತರ್ಕವಿತರ್ಕಗಳುಂಟಾಗುತ್ತವೆ.

ಗರ್ಭವು, ಶುಕ್ರ, ಶೋಣಿತ, ಸಂಯೋಗದಿಂದಾರಂಭವಾದದ್ದಿರುತ್ತದೆ. ಆರಂಭದಲ್ಲಿಯೇ ಅದು ಅವ್ಯಕ್ತ (ಸೂಕ್ಷ್ಮ) ವಾಗಿ ಚೇತನಾಧಾತುಯುಕ್ತವಾಗಿಯೇ ಇರುತ್ತದೆ. ಗರ್ಭವು ಬೆಳೆದು ಪೂರ್ಣತೆಗೆ ಬಂದಾಗ, ಜೀವವೂ ಪೂರ್ಣವಾಗಿ ಸ್ಥೂಲಸ್ಥಿತಿಯಿಂದ ಗೋಚರವಾಗುತ್ತದೆ. ಗೋಚರ (ಸ್ಥೂಲ) ಸ್ಥಿತಿ ಪ್ರಾಪ್ತವಾಗಲು ಗರ್ಭವು ಪೂರ್ಣವಾಗುವದರಿಂದ ಆಗ ಜೀವ ಬರುತ್ತದೆಂದು ಅನಿಸುತ್ತದೆ. ಇದು ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ಉದಾ:— ಖಾರ, ಅತ್ಯುಷ್ಣ ಪದಾರ್ಥಗಳ ಸೇವನೆಯಿಂದ, ಪಂಚಭೂತಾತ್ಮಕ ಗರ್ಭಪಿಂಡಕ್ಕೆ ಆಘಾತವಾಗಿ, ಚೇತನಾಧಾತು, (ಅವ್ಯಕ್ತಜೀವ) ಬೇರ್ಪಡುತ್ತದೆ. ಇದರಿಂದ ಗರ್ಭಪತನವಾಗುತ್ತದೆ. ಇದರಂತೆ ಗರ್ಭಿಣಿಯ, ಚಿಂತೆ, ಭಯ ಇತ್ಯಾದಿ ಆಘಾತಗಳಿಂದ, ಗರ್ಭದ ಅವ್ಯಕ್ತಚೇತನೆಗೆ, ವೇದನೆಯಾಗಿ, ಗರ್ಭವುಬೇರ್ಪಟ್ಟು ನಾಶಹೊಂದುತ್ತದೆ. ಹೀಗೆದೈಹಿಕವಾದ ಅಯೋಗ್ಯಾಹಾರ(ಖಾರ, ಉಷ್ಣವೀರ್ಯವುಳ್ಳ ಪದಾರ್ಥ)ಸೇವನೆ, ಅತಿಶ್ರಮ, ಬೀಳೋಣ, ತೀವ್ರ ವ್ಯಾಧಿ ಮೊದಲಾದವುಗಳಿಂದಲೂ, ಮಾನಸಿಕವಾದ ಚಿಂತೆ, ಭಯ, ಅಸೂಯೆ ಮೊದಲಾದವುಗಳಿಂದಲೂ, ಗರ್ಭವು ನಾಶವನ್ನೂ ಅಥವಾ ವಿಕೃತಿಯನ್ನೂ ಹೊಂದುವದರಿಂದ, ಗರ್ಭಕ್ಕೆ, ಸ್ಥೂಲವಾದ (ಪಂಚಭೂತಾತ್ಮಕ) ಮತ್ತು ಸೂಕ್ಷ್ಮ ಜೀವಸ್ಥಿತಿ ಇದ್ದೇ ಇರುತ್ತದೆಂದು ನಿಶ್ಚಯವು. ಅವ್ಯಕ್ತ

ಜೀವಸ್ಥಿತಿ ಇರುವದರಿಂದಲೇ ಕ್ರಮೇಣ ಬೆಳೆಯುತ್ತಾ ಸೂಕ್ಷ್ಮ ಸ್ಥಿತಿಯಿಂದ ಸ್ಥೂಲಸ್ಥಿತಿಗೆ ಬಂದು ಪೂರ್ಣವಾಗಿ ಅಂಗೋಪಾಂಗಯುಕ್ತ ದೇಹವಾಗುತ್ತದೆ

ಯೋಗ್ಯ ಗರ್ಭೋತ್ಪತ್ತಿಯ ನಿಯಮಗಳು

ದೇಹವೆಂದರೆ ಒಂದು ಮನೆ ಇದ್ದಂತೆಯೇ ಇರುತ್ತದೆ. ಯೋಗ್ಯನಾದ ಕುಶಲ ಬಡಿಗ, ಉಪಯೋಗಕ್ಕೆ ಯೋಗ್ಯ ಸಾಧನ, ಶ್ರೇಷ್ಠ ತರಗತಿಯ ವಸ್ತುಗಳು ಇವುಗಳೆಲ್ಲದರ ಸಮಾವೇಶವಿದ್ದರೆ, ಉತ್ತಮನೂ, ಬಹು ದಿವಸ ಬಾಳುವಂಥಾದ್ದೂ, ಭದ್ರವಾಗಿರುವ ಗೃಹವು ನಿರ್ಮಾಣವಾಗುತ್ತದೆ ಅದರಂತೆ ನಿರೋಗಿಯೂ, ಸಧೃಡ, ದೀರ್ಘಾಯು, ತೇಜಸ್ವಿಯಾದ ದೇಹವಾಗಬೇಕಾದರೆ, ಗರ್ಭೋತ್ಪತ್ತಿಯಿಂದಲೇ ಆರಂಭಿಸಿ ಯೋಗ್ಯ ಸನ್ನಿವೇಶ ಬೇಕು ಅದನ್ನು ಕುರಿತು ಚರಕಾಚಾರ್ಯರು ಹೀಗೆ ಹೇಳಿದ್ದಾರೆ:—

ಏವಮಯಂ ನಾನಾವಿಧಾನಾಂ ಏಷಾಂ ಗರ್ಭಕರಾಣಾಂ ಭಾವಾನಾಂ ಸಮುದಾಯಾತ್ ಅಭಿನಿವರ್ತತೆಗರ್ಭಃ, ಯಥಾ ಕೂಟಾಗಾರಂ ನಾನಾದ್ರವ್ಯಸಮುದಾಯಾತ್, ಯಥಾ, ವಾರಥೋ ನಾನಾರಥಾಂಗಸಮುದಾಯಾತ್ ॥
(ಚರಕ ಅ ೩ ಶಾರೀರ । ಸೂ ೨೦)

ಅನೇಕ ವಿಧವಾದ ಗರ್ಭಕ್ಕೆ ಕಾರಣವಾದ ಪದಾರ್ಥ ಕ್ರಿಯಾಕಾಲ ಇತ್ಯಾದಿಗಳ ನಿಯತ ಸನ್ನಿವೇಶವುಳ್ಳ ಸಮುದಾಯದಿಂದ 'ಗರ್ಭ'ವು ಆರಂಭವಾದದ್ದಿರುತ್ತದೆ. ಮನೆಗೆಬೇಕಾದ ವಿವಿಧ ದ್ರವ್ಯಸಮುದಾಯಗಳಿಂದ ಮನೆಯು (ಕೂಟಾಗಾರ) ಪ್ರಶಸ್ತವಾದದ್ದಾಗುತ್ತದೆ ರಥಕ್ಕೆ ಬೇಕಾದ, ರಥಾವಯವ ಪದಾರ್ಥಗಳಿಂದ ರಥವು ಕಟ್ಟಲ್ಪಡುವದು. ಗರ್ಭವೂ ಕೂಡಾ ಅದರಂತೆ ಅನೇಕ ದ್ರವ್ಯ ಸನ್ನಿವೇಶದಿಂದುಂಟಾಗಿರುತ್ತದೆ. ಸದ್ಗರ್ಭ (ಉತ್ತಮ ಗರ್ಭ) ಉತ್ಪನ್ನವಾಗಲು ಅನೇಕ ದ್ರವ್ಯಕ್ರಿಯಾದಿಗಳು ಅವಶ್ಯವೆಂದು ಹಿಂದೆಯೇಹೇಳಿದೆ. ಅವುಗಳಲ್ಲಿ ಗರ್ಭೋತ್ಪತ್ತಿಯನ್ನು ಕುರಿತು ಪಾಲಿಸಬೇಕಾದ ನಿಯಮಗಳನ್ನೂ ಶರೀರಕ್ಕೆ ಸಂಬಂಧಪಟ್ಟವುಗಳೆಂದು ಶರೀರ ಶಾಸ್ತ್ರದಲ್ಲಿ ಸಂಗ್ರಹಿಸಿ ಹೇಳಿದ್ದಾರೆ.

ಆಹಾರಾಚಾರಚೇಷ್ಟಾಭಿಃ ಯಾದೃಶೀಭಿಃ ಸಮನ್ವಿತೌ ॥
ಸ್ತ್ರೀಪುಂಸೌಸಮುಪೇಯಾತಾಂತಯೋಃಪುತ್ರೋಽಪಿತಾದೃಶಃ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋ ೪೬)

ಆಹಾರ ನಡತೆ ದೇಹಾರೋಗ್ಯ ಬೇರೇ ಅನೇಕ ಕರ್ಮಾದಿಗಳು (ದ ಪ್ಪತಿ ಸತ್ಪತಿ) ಯಾವ ರೀತಿಯುಳ್ಳ ಸ್ತ್ರೀ ಪುರುಷರು ಮಿಲಿನವಾಗು ತ್ತಾರೋ, ಸಂತತಿಯಾದರೂ ಅದೇ ರೀತಿಯುಳ್ಳ ಆರೋಗ್ಯ ದೌರ್ಬಲ್ಯ ರೋಗ ಮೊದಲಾದವುಗಳಿಂದ ಯುಕ್ತವಾದದ್ದಾಗುತ್ತದೆ ಸಬಲ ಸಂತತಿ ಯಾಗಲಿಕ್ಕೆ ಸ್ತ್ರೀ ಪುರುಷರ ಆರೋಗ್ಯ ನಿರ್ದೋಷ ಸ್ಥಿತಿಯೇ ಕಾರಣವು.

ವೃದ್ಧರಲ್ಲಿ ಗರ್ಭೋತ್ಪತ್ತಿಯಾದರೆ ಹಾನಿಯು

ಅತಿವೃದ್ಧಾಯಾಂ ದೀರ್ಘರೋಗಿಣ್ಯಾಮನ್ಯೇನವಾವಿಕಾರೇ
ಣೋಪಸೃಷ್ಟಾಯಾಂ ಗರ್ಭಾಧಾನಂ ನೈವಕುರ್ವೀತ ಪುರುಷ
ಸ್ಯಾಪ್ಯೇವಂ ವಿಧಸ್ಯತೀವದೋಷಾಃ ಸಂಭವಂತಿ ॥
(ಸುಶ್ರುತ॥ ಶಾರೀರ॥ ಅ ೧೦ ಸೂ ೫೬)

ವೃದ್ಧ (ಮುದುಕ) ಸ್ತ್ರೀಯಲ್ಲಿ ದೀರ್ಘ ರೋಗವುಳ್ಳ ಸ್ತ್ರೀಯಲ್ಲಿ ವ್ಯಾಧಿ ಯಿಂದ ಅಶಕ್ತಳಾದವಳಲ್ಲಿ ಇನ್ನೂ ಅನೇಕ ಗರ್ಭಕ್ಕೆ ಘಾತಕ ವಿಕಾರವುಳ್ಳ (ಯೋನಿದೋಷ ದೂಷಿತಾರ್ತವಾದಿ ದೋಷವುಳ್ಳ) ಸ್ತ್ರೀಯರಲ್ಲಿ ಗರ್ಭಾ ಧಾನ ಮಾಡಬಾರದು. ಇದರಂತೆ ಈ ರೀತಿಯಿರುವ ದುರ್ಬಲ ಪುರುಷನು ಕೂಡ ಯೋಗ್ಯನಲ್ಲವು. ರೋಗಿ ದುರ್ಬಲ ದೂಷಿತರಾದವರಿಂದುತ್ಪನ್ನವಾದ ಗರ್ಭವು ನಿರೋಗಿಯೂ ಬಲವುಳ್ಳದ್ದೂ ಆಗಲಾರದು. ಆದ್ದರಿಂದ ಇವೆಲ್ಲ ತ್ಯಾಜ್ಯವಾದವುಗಳು.

ಅಲ್ಪವಯಸ್ಸಿನವರಲ್ಲಿ ಗರ್ಭೋತ್ಪತ್ತಿ ದೋಷವು

ಊನಷೋಡಶವರ್ಷಾಯಾಮಪ್ರಾಪ್ತಃ ಪಂಚವಿಂಶತಿಂ ॥
ಯದ್ಯಾಧತ್ತೇಪುಮಾನ್‌ಗರ್ಭಂ ಕುಕ್ಷಿಸ್ಥಃ ಸವಿಪದ್ಯತೆ ॥
ಜಾತೋವಾನಚಿರಂಜೀವೇತ್ ಜೀವೇದ್ವಾದುರ್ಬಲೇಂದ್ರಿಯಃ॥
ತಸ್ಮಾದತ್ಯಂತಬಾಲಾಯಾಂ ಗರ್ಭಾಧಾನಂ ನಕಾರಯೇತ್ ॥
(ಸುಶ್ರುತ॥ ಶಾರೀರ॥ ಅ ೧೦ ಶ್ಲೋ ೫೫)

ಹದಿನಾರು ವರ್ಷಕ್ಕಿಂತ ಕಡಿಮೆಯುಳ್ಳ ಸ್ತ್ರೀಯಲ್ಲಿ ಇಪ್ಪತ್ತೈದು ವರ್ಷವಾಗದ ಪುರುಷನು ಗರ್ಭಾಧಾನ ಮಾಡಿದರೆ ಆದರಿಂದುಂಟಾದ ಗರ್ಭವು, ಹೊಟ್ಟೆಯಲ್ಲಿಯೇ ನಾಶವಾಗುತ್ತದೆ. ಒಂದು ವೇಳೆ ಹುಟ್ಟಿದರೂ ಬದುಕಲಾರದು. ಬದುಕಿದರೂ ದುರ್ಬಲವಾಗಿರುತ್ತದೆ. ಇಲ್ಲವಾದರೆ ವಿಕೃತ ಊನ ಇತ್ಯಾದಿಗಳು ಆಗಬಹುದು. ಆದ್ದರಿಂದ ಅತ್ಯಂತ ಚಿಕ್ಕವಳಲ್ಲಿ ಮತ್ತು ಅಲ್ಪ ವಯಸ್ಸಿನವನು ಕೂಡ ಗರ್ಭಾಧಾನ ಮಾಡಬಾರದು. ಇದರಿಂದ ಚಿಕ್ಕ ವಯಸ್ಸಿರುವದರಿಂದ ಸ್ತ್ರೀ ಪುರುಷರ ಆರೋಗ್ಯಕ್ಕೂ ಹಾನಿಯುಂಟಾಗುವದು.

ಋತುಮತಿ ಸ್ತ್ರೀಯಲ್ಲಿ ಗರ್ಭಧಾನ ದೋಷವು

ತತ್ರ ಪ್ರಥಮೇದಿವಸೆಽಽತುಮತ್ಯಾಂ ಮೈಥುನಗಮನಂ ಅನಾಯುಷ್ಯಂ ಪುಂಸಾಂಭವತಿ, ಯಚ್ಚತತ್ರಾಧೀಯತೆಗರ್ಭಃಸಪ್ರಸವಮಾನೋವಿಪದ್ಯತೆ, ದ್ವಿತೀಯೇಹ್ಯೇವಂ ಸೂತಿಕಾಗೃಹೇವಾ, ತೃತೀಯೇಽಹ್ಯೇವಂ ಅಸಂಪೂರ್ಣಾಂಗೋಽಲ್ಪಾಯುರ್ವಾಭವತಿ, ಚತುರ್ಥೇತು ಸಂಪೂರ್ಣಾಂಗೋದೀರ್ಘಾಯುಶ್ಚಭವತಿ।ನ ಚ ಪ್ರವರ್ತಮಾನೆರಕ್ತೆಬೀಜಂಪ್ರವಿಷ್ಟಂಗುಣಕರಂಭವತಿ, ಯಥಾನದ್ಯಾಂಪ್ರತಿಸ್ರೋತಃ ಪ್ಲಾವಿದ್ರವ್ಯಂ ಪ್ರಕ್ಷಿಪ್ತಂ ಪ್ರತಿನಿವರ್ತತೆ, ನೋರ್ಧ್ವಂಗಚ್ಛತಿ, ತದ್ವದೇತದ್ಭ್ರಷ್ಟವ್ಯಂ। ತಸ್ಮಾನ್ನಿಯಮವತೀಂ ತ್ರಿರಾತ್ರಂ ಪರಿಹರೇತ್ ॥

(ಸುಶ್ರುತ ॥ ಶಾರೀರ ॥ ಅ ೨ ಸೂ । ೩೧)

ಋತುಮತಿಯಲ್ಲಿ ಗರ್ಭಾಧಾನದಿಂದ ಪುರುಷನ ಆಯುಷ್ಯ ಕ್ಷೀಣವಾಗುತ್ತದೆ. ಮೊದಲನೇಯ ದಿನ ಋತುಮತಿಯಾದ ಸ್ತ್ರೀ ಗರ್ಭ ಧರಿಸಿದರೆ ಆ ಗರ್ಭವು ಹುಟ್ಟುವದರೊಳಗಾಗಿಯೇ ಮರಣಹೊಂದುತ್ತದೆ. ಇದರಿಂದ ಗರ್ಭ ಧರಿಸಿದವಳಿಗೂ ಅಘಾತವಾಗುವದು. ಎರಡನೇ ದಿನದಲ್ಲಿ ಗರ್ಭ ಧರಿಸಿದರೂ ಇದರಂತೆಯೇ ನಾಶವಾಗುತ್ತದೆ. ಅಥವಾ ಬಾಣಂತಿಯ ಮನೆಯಲ್ಲಿಯೇ ನಾಶವಾಗಬಹುದು. ಮೂರನೇಯ ದಿನದಲ್ಲಿಯಾದರೂ ಇದರಂತೆ, ಅಥವಾ

ಒಂದು ವೇಳೆ ಸಂಪೂರ್ಣ ದಿನ ತುಂಬಿ ಹಡೆದರೂ, ವಿಕೃತಾಂಗ ಪೂರ್ಣವಿಲ್ಲದ ಅವಯವವುಳ್ಳ ಅಲ್ಪಾಯು ದುರ್ಬಲ ಸಂತತಿಯು ಉತ್ಪನ್ನವಾಗುವದು. ನಾಲ್ಕನೇ ದಿನದಲ್ಲಿ ಗರ್ಭಧರಿಸಿದರೆ ಸಂಪೂರ್ಣಅವಯವವುಳ್ಳ ದೀರ್ಘಾಯು ಸಂತತಿಯಾಗುತ್ತದೆ. ಹ್ಯಾಗೆ ನದಿಯು ಹರಿಯುತ್ತಿರುವಾಗ ಕೆಳಗಡೆಯಿಂದ ಮೇಲಕ್ಕೆ ಒಗೆದ ವಸ್ತುವು, ಪ್ರವಾಹಾಭಿಮುಖವಾಗಿ ತಿರುಗಿಬರುತ್ತದೆಯೋ ಅದರಂತೆ ರಕ್ತ (ಮುಟ್ಟು) ಸ್ರಾವ ಇರುತ್ತಿರುವಾಗ, ಪ್ರವಿಷ್ಟವಾದ ಬೀಜವು (ಶುಕ್ರವು) ವ್ಯರ್ಥವೂ, ಒಳ್ಳೆಯದನ್ನುಂಟುಮಾಡುವದೂ ಆಗಲಾರದು. ಆದ್ದರಿಂದ ಋತುಮತಿಯಾದ ಸ್ತ್ರೀಯು ಮೂರು ದಿನ ಗರ್ಭಾದಾನಕ್ಕೆ ತ್ಯಾಜ್ಯವು, ಹರಿಯುತ್ತಿರುವ ನದಿಯ ಉದಾಹರಣೆ ಕೊಟ್ಟದ್ದರಿಂದ, ಮುಂದೆ ಒಂದೆರಡು ದಿನ ಸ್ರಾವವಾಗುವ ಪ್ರಕೃತಿಯಿದ್ದರೆ, ಸ್ರಾವಬಂದಾಗುವವರೆಗೂ ಬಿಡಬೇಕೆಂದು ಸೂಚಿತವಾಗುತ್ತದೆ.

ಯೋಗ್ಯ ಗರ್ಭದ ಸಂನ್ನಿವೇಶ

ಧ್ರುವಂಚತುರ್ಣಾಂಸಾನ್ನಿಧ್ಯಾತ್‌ಗರ್ಭಃಸ್ಯಾತ್‌ವಿಧಿಪೂರ್ವಕಂ ॥
ಋತುಕ್ಷೇತ್ರಾಂಬುಬೀಜಾನಾಂ ಸಾಮಗ್ರ್ಯಾದಂ
ಕುರೋಯಥಾ ॥ (ಸುಶ್ರುತ॥ ಶಾರೀರ॥ ಅ ೨ ಸೂ ೩೩)

ಯೋಗ್ಯವಾದ ಕಾಲ, ಚನ್ನಾಗಿ ಹರಗಿದ ಹೊಲ, ನೀರು, ಉತ್ತಮ ಬೀಜ, ಇವುಗಳ ಪದ್ಧತಿ ಪ್ರಕಾರ ಸನ್ನಿವೇಶ(ಕೂಡವಿಕೆ) ದಿಂದ ಹ್ಯಾಗೆ ಉತ್ತಮವಾದ ಸಸಿಗಳು(ಅಂಕುರ) ಉತ್ಪನ್ನವಾಗುತ್ತವೆಯೋ ಅದರಂತೆ ಗರ್ಭ ಗ್ರಹಣಕ್ಕೆ ಯೋಗ್ಯ ಕಾಲದಲ್ಲಿ, ಗರ್ಭಾಶಯದ ದೂಷಿತವಲ್ಲದ ಪ್ರಸನ್ನ ಸ್ಥಿತಿಯಲ್ಲಿ ಶ್ರೇಷ್ಠವಾದ ರಸವಾಗುವ ಆಹಾರವನ್ನು ಸೇವಿಸುತ್ತಿರುವ ಸ್ತ್ರೀ ಪುರುಷರ ಶುಕ್ರಾರ್ತವಗಳ ಸಂಯೋಗದಿಂದಲೂ, ಹಿಂದೆ ಹೇಳಿದ ಯೋಗ್ಯ ಕಾಲ ಆರೋಗ್ಯ ಸ್ಥಿತಿಯಿಂದ ಯುಕ್ತವಾದದ್ದಾದರೆ, ಸರಿಯಾದ ಸ್ಥಿತಿಯಲ್ಲಿ ಬಿತ್ತಿದ ಬೀಜದಂತೆ, ಪ್ರಸನ್ನ ಗರ್ಭವುಂಟಾಗುವದು. ಆದ್ದರಿಂದಲೇ ಋತ್ವಾದಿ ನಾಲ್ಕರ ಸಾನ್ನಿಧ್ಯದಿಂದ ಪ್ರತ್ಯಕ್ಷ ಕಣ್ಣಿಗೆ ಕಾಣುವ ಹೊಲದಲ್ಲಿಯ ಪೈರನ್ನು ಹೋಲಿಸಿ ಅದರಂತೆ ಗರ್ಭಕ್ಕಾದರೂ ಈ ನಾಲ್ಕರ

ಮುಖ್ಯತೆಯನ್ನು ತೋರಿಸಿದ್ದಾರೆ. ಯೋಗ್ಯ ಸಂನ್ನಿಧಿಯ ಪ್ರಶಸ್ತತೆಯನ್ನು ನಿತ್ಯ ಕಣ್ಣೆದುರಿನ ಉದಾಹರಣೆಯಿಂದ ಸ್ಪಷ್ಟ ಪಡಿಸಿದ್ದಾರೆ.

ಯೋಗ್ಯ ಸನ್ನಿವೇಶದಿಂದುತ್ಪನ್ನವಾದ ಸಂತತಿಯ ಲಕ್ಷಣವು

ಏವಂಜಾತಾರೂಪವಂತಃ ಸತ್ವವಂತಃ ಚಿರಾಯುಷಃ ॥
ಭವಂತಿರುಣಸ್ಯಮೋಕ್ತಾರಃ ಸತ್ಪುತ್ರಾಃ ಪುತ್ರಿಣೇಹಿತಾಃ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋ ೩೪)

ಸನ್ನಿವೇಶ ಸಂಪನ್ನತೆಯಿಂದ ಹುಟ್ಟಿದವರು ಒಲವಂತರೂ ಧೃತಿ ಸ್ಮೃತಿ ಮೇಧಾ ಧೃಢತೆ ಉತ್ಸಾಹಾದಿ ಸತ್ವಯುಕ್ತರಾಗಿ ದೀರ್ಘಾಯುಷವುಳ್ಳವರಾಗುತ್ತಾರೆ. ತಂದೆ ತಾಯಿಗಳಿಗೆ ಹರ್ಷವನ್ನುಂಟು ಮಾಡುವ. ಜನ ಬಂದಿದ್ದನ್ನು ಸಾರ್ಥಕ ಮಾಡಿಕೊಳ್ಳುವ ಸಜ್ಜನರಾಗುತ್ತಾರೆ. ಆದ್ದರಿಂದಲೆ ಸತ್ಪುತ್ರಾಃ (ಒಳ್ಳೆ ಗುಣವುಳ್ಳ ಮಕ್ಕಳು) ಎಂದು ಹೇಳಿದ್ದಾರೆ.

ಗರ್ಭಕ್ಕೆ ಹಿತವಲ್ಲದ ನಡತೆಯು

ತದಾಪ್ರಭೃತಿವ್ಯವಾಯಂ ವ್ಯಾಯಾಮಮತಿತರ್ಪಣಮತಿಕರ್ಶನಂ, ದಿವಾಸ್ವಪ್ನಂ ರಾತ್ರಿಜಾಗರಣಂ ಶೋಕಂಯಾನಾರೋಹಣಂಭಯಮುತ್ಕುಟುಕಾಸನಂ ಚೈಕಾಂತತಃಸ್ನೇಹಾದಿಕ್ರಿಯಾಂ ಶೋಣಿತವೋಕ್ಷಣಂ ಚಾಕಾಲೇವೇಗವಿಧಾರಣಂ ನಸೇವೇತ ॥ (ಸುಶ್ರುತ॥ ಶಾರೀರ॥ ಅ ೩ ಸೂ ೧೬)

ಗರ್ಭಸ್ಥಿತಿ ಆರಂಭವಾದಾಗಿನಿಂದ ರತಿಕ್ರಿಯೆ ವ್ಯಾಯಾಮ ಅತಿಶ್ರಮ ಕೆಲಸ ಬಹಳ ಆಹಾರ ಮೇಲಿಂದ ಮೇಲೆ ಸೇವಿಸುವದು ಜೀರ್ಣವಾಗದಷ್ಟು ಸತ್ವಾಹಾರ ತಕ್ಕೊಳ್ಳುವದು ಅಥವಾ ಕಡಿಮೆ ಆಹಾರ ಸೇವನೆ (ತೃಪ್ತಿಯಾಗದಷ್ಟು) ರೂಕ್ಷನೀರಸ ಪದಾರ್ಥ ಸೇವನೆ (ಕರ್ಶನಂ) ಹಗಲು ನಿದ್ರಿಸುವದು ರಾತ್ರಿ ಜಾಗರಣೆ, ಚಿಂತೆ ವೇಗದಿಂದ ಹೋಗುವ ಯಾನಾದಿಗಳನ್ನು (ದಡಕೆಯುಳ್ಳ) ಕುದುರೆ ಮೊದಲಾದವುಗಳನ್ನು ಹತ್ತುವದು ಭಯವಾಗುವಂಥ ವಸ್ತುದರ್ಶನ ವ್ಯಾಘ್ರಾದಿಭಯ ಎತ್ತರ ಪರ್ವತಾದಿಗಳನ್ನೇರುವದು

ಅಥವಾ ಗೋಡೆ ಮೊದಲಾದ (ಕಡಿದಾವ) ಸ್ಥಳದಲ್ಲಿ ಕೂಡ್ರುವದು ಏಕಾಂತದಲ್ಲಿ ಸ್ನೇಹಾದಿ ಕಾರ್ಯಕ್ರಮ ರಕ್ತ ತೆಗೆಸಿಕೊಳ್ಳೋಣ, ಅಕಾಲ ಭೋಜನ, ಎಲ್ಲ ಕರ್ತವ್ಯಗಳು ಯೋಗ್ಯ ಕಾಲದಲ್ಲಿ ನಡೆಯದಿರುವದು ಮಲ ಮೂತ್ರಾದಿ ವೇಗ ನಿರೋಧ ಮೊದಲಾದವುಗಳನ್ನು ಮಾಡಬಾರದು. ಇವೆಲ್ಲವುಗಳೂ, ಗರ್ಭ ಧರಿಸಿದ ಸ್ತ್ರೀ (ಗರ್ಭವತಿ)ಗೆ ಗರ್ಭಘಾತಕವಾದ್ದರಿಂದ ತ್ಯಾಜ್ಯವಾದವುಗಳು. ಸಮವಾದ ಆರೋಗ್ಯಕ್ಕನುಗುಣ ರೀತಿಯಲ್ಲಿ ವರ್ತಿಸಬೇಕು. ಇಲ್ಲವಾದರೆ ಕುಂಟ, ಕುರುಡ ಅಂಗಹೀನ ವಿಕೃತಾವಯವ ದುರ್ಬಲ ರೋಗಿಷ್ಟ ಸಂತತಿಗೆ ಜನ್ಮಕೊಟ್ಟು ತಂದೆ ತಾಯಿಗಳು ಮರುಗಬೇಕಾದ ಪ್ರಸಂಗ ಬರುವದಿಷ್ಟೇ ಅಲ್ಲ, ಆ ಸಂತತಿಯಾದರೂ ಅಂಗಹೀನ ದುರ್ಬಲವಾದದ್ದಾದರೆ ಕರ್ತವ್ಯ ಜೀವನವಾದ ಪ್ರಪಂಚದಲ್ಲಿ ಪರಾಧೀನವಾಗಿ ಅಥವಾ ಬೇಡಿಯೋ ಕಾಡಿಯೋ ದೈನ್ಯಮಯ ಜೀವನದಿಂದ ಆಯುಷ್ಯಾಂತ್ಯದ ವರೆಗೂ ಇಂಥ ದೇಹ ಬಂದಿದ್ದರ ಫಲವನ್ನನುಭವಿಸುತ್ತ ಭೂಲೋಕವನ್ನೇ ನರಕವೆಂದು ಭಾವಿಸುತ್ತಿರುವರು. ಇದು ಅತಿ ಮುಖ್ಯವಾದ ಅವಶ್ಯವಾಗಿ ಗಮನಿಸತಕ್ಕ ವಿಷಯವಾದ್ದರಿಂದ, ಇದರಿಂದಾಗುವ ದುಷ್ಪರಿಣಾಮ ಸಹಿತ, ಆಚಾರ್ಯರು ಎಚ್ಚರಿಸಿ ಬೋಧಿಸಿದ್ದಾರೆ. ಇನ್ನೂ ಅನೇಕ, ಗರ್ಭ ವಿರೋಧ (ಘಾತಕ) ವಿಷಯಗಳು, ಪ್ರಸವಪರ್ಯಂತವಾಗಿಯೂ ಅವಾವ ಕಾಲದಲ್ಲಿ, ಅಯೋಗ್ಯ ವರ್ತನೆಯಿಂದ ಸಂಭವಿಸುತ್ತವೆ. ಅವುಗಳನ್ನು, ಅವಾವ ಪ್ರಸಂಗಾನುಸಾರ, ಹೇಳುತ್ತಾರೆ.

ಗರ್ಭಾರಂಭ ಕ್ರಮವು

ತತ್ರಸ್ತ್ರೀಪುಂಸಯೋಃ ಸಂಯೋಗೆ, ತೇಜಃ ಶರೀರಾದ್ವಾಯುರುದೀರಯತಿ, ತತಃ ತೇಜೋವಿಲಸನ್ನಿಪಾತಾತ್ ಶುಕ್ರಂ, ಚ್ಯುತಂ ಯೋನಿಮುಭಿಪ್ರತಿಪದ್ಯತೆ, ಸಂಸೃಜ್ಯತೆಚಾರ್ತವೇನ, ತತೋsಗ್ನೀಷೋಮು ಸಂಯೋಗಾತ್, ಸಂಸೃಜ್ಯಮಾನೌ, ಗರ್ಭಾಶಯಮನುಪ್ರಪದ್ಯತೆ, ಕ್ಷೇತಜ್ಞೊ, ವೇದಯಿತಾ, ಸ್ರಷ್ಟಾ, ಘ್ರಾತಾ, ದೃಷ್ಟಾ, ಶ್ರೋತಾ, ರಸಯಿತಾ, ಪುರಷಃ,

ಸ್ರಷ್ಟಾ, ಗಂತಾ, ಸಾಕ್ಷೀ, ಧಾತಾ, ವಕ್ತಾ, ಯಃ ಕೋಽಸಾವಿತ್ಯೇವಮಾದಿಭಿಃ, ಪರ್ಯಾಯವಾಚಕೈಃ ನಾಮಭಿಃ ಅಭಿಧೀಯತೆ, ದೈವಸಂಯೋಗಾದಕ್ಷ್ಯೋಽವ್ಯಯೋಽಚಿಂತ್ಯೋಭೂತಾತ್ಮನಾಸಹಅನ್ವಕ್ಷಂ ಸತ್ವರಜಃ ತಮೋಭಿಃ ದೈವಾಸುರೈಃ ಆಪರೈಶ್ಚ ಭಾವೈರ್ವಾಯುನಾಽಭಿಪ್ರೇರ್ಯಮಾಣೊ, ಗರ್ಭಾಶಯಮನುಪ್ರವಿಶ್ಯ, ಅವತಿಷ್ಠತೆ॥ (ಸುಶ್ರುತ॥ ಶಾರೀರ॥ ಅ ೩ ಸೂ ೪)

"ಗರ್ಭ ಸಂಭವ ಕ್ರಿಯೆಯಲ್ಲಿ" ಸ್ತ್ರೀ ಪುರುಷರ ಯಥಾಯೋಗ್ಯ ಪ್ರಾಸಂಗಿಕ ಸಂಯೋಗದಿಂದ, ಸತ್ವಮಯವಾದ ಶುಕ್ರದ ಸೂಕ್ಷ್ಮ ಸ್ವರೂಪವನ್ನು (ತೇಜಸ್ಸನ್ನು) ಶರೀರದಲ್ಲಿವಾಯುವು ಉದ್ದೀಪನಗೊಳಿಸುತ್ತದೆ. ನಂತರ ಪ್ರಚೋದನೆ ಹೊಂದಿದ ತೇಜಸ್ಸು, ವಾಯು, ಯುಕ್ತವಾಗಿ "ಶುಕ್ರವನ್ನು"ಪತನ ಹೊಂದಿಸುತ್ತದೆ. ಶುಕ್ರವು ಯೋನಿಯಲ್ಲಿ (ಸ್ತ್ರೀಜನನೇಂದ್ರಿಯದಲ್ಲಿ) ಬೀಳುತ್ತದೆ. ಯೋನಿಯಲ್ಲಿ ದ್ರವಿಸಿದ ಆರ್ತವದಿಂದ ಹೊಂದಿಕೆಯಾಗಿ (ಕೂಡಿ) ನಂತರ ಜಡವಾದ ಶುಕ್ರಾರ್ತವಗಳಿಗೆ ಚೈತನ್ಯ ಕೊಡುವ, ಅಪ್ರಮೇಯವಾದ 'ಅಗ್ನಿಷೋಮೀಯ ತತ್ವಗಳಿಂದ ಕೂಡಿ, ಶುಕ್ರಾರ್ತವಗಳು ಏಕರಸವಾಗಿ (ಸಂಮಿಲಿತ) ಚೈತನ್ಯ ಹೊಂದಿ, ಗರ್ಭಾಶಯದಲ್ಲಿ ಪ್ರವೇಶಿಸುತ್ತವೆ. ಕ್ಷೇತ್ರಜ್ಞ ಇತ್ಯಾದಿ ಬಹು ವಿಧ ನಾಮಧೇಯವುಳ್ಳ ಅಸಂಖ್ಯೇಯ ನಾನಾಪ್ರಕಾರ ಕ್ರಿಯಾ ವಿಶಿಷ್ಟನಾದ ಜೀವಾತ್ಮನು ದೈವಯೋಗಾತ್ (ಈಶ್ವರೇಚ್ಛೆಯಿಂದ) ಅಪ್ರಮೇಯನೂ ಸೂಕ್ಷ್ಮ ಸ್ವರೂಪನೂ ಅಚಿಂತ್ಯನಿದ್ದರೂ ಗರ್ಭಾಶಯದಲ್ಲಿ "ಅಗ್ನಿಷೋಮೀಯ" ತತ್ವಯುಕ್ತವಾದ ಸೂಕ್ಷ್ಮ ಚೇತನೆಯುಳ್ಳ ಶುಕ್ರಾರ್ತವಗಳ ಸಮ್ಮಿಲಿತ ಸ್ವರೂಪವಾದ 'ಕಲಲ'ದಲ್ಲಿ ತತ್ಕ್ಷಣವೇ (ಅನ್ವಕ್ಷಂ) ವಾಯುವಿನಿಂದ ಪ್ರೇರಿತನಾಗಿ ಕೂಡಿಕೊಳ್ಳುತ್ತಾನೆ. ಹೀಗೆ ಗರ್ಭಾಶಯದಲ್ಲಿ ಪ್ರವೇಶಿಸಿದ, ಜೀವಾತ್ಮನು, ಗರ್ಭದಲ್ಲಿಯ, ಪಾಂಚಭೌತಿಕ ಸ್ಥಿತಿಯುಳ್ಳವನಾಗುವನು. ಮತ್ತು ತನ್ನ ಜನ್ಮಾಂತರೀಯವಾದ ಸತ್ವರಜಸ್ತಮೋಗುಣ, ದೇವರಾಕ್ಷಸಪೈಶಾಚಿಕ ಅನೇಕ ಭಾವಗಳಿಂದ ಸತ್ಕರ್ಮ ದುಷ್ಕರ್ಮ ಮೊದಲಾದವುಗಳುಳ್ಳ ಸೂಕ್ಷ್ಮ ಶರೀರ (ಕರ್ಮಾರ್ಜಿತ ದೇಹ) ಯುಕ್ತನಾದವನಿರುವನು.

ಶುಕ್ರಾರ್ತವಗಳ ಸಮ್ಮಿಲನ

ಸೌಮ್ಯಂ ಶುಕ್ರಂ ಆಗ್ನೇಯಂ ಆರ್ತವಂ ಇತರೇಷಾಮುಷ್ಮತ್ರ ಭೂತಾನಾಂ ಸಾನ್ನಿಧ್ಯಂ ಅಸ್ತ್ಯಣುನಾವಿಶೇಷೇಣ, ಪರಸ್ಪರೋಪಕಾರಾತ್, ಪರಸ್ಪರಾನುಗ್ರಹಾತ್ ಪ್ರರಸ್ಪರಾನುಪ್ರವೇಶಾಚ್ಚ ॥

(ಸುಶ್ರುತ॥ ಶಾರೀರ॥ ಅ ೩ ಸೂ ೩)

"ಶುಕ್ರವು" ಸೌಮ್ಯ. "ಆರ್ತವವು" ಆಗ್ನೇಯ, ಇನ್ನುಳಿದ ಪೃಥಿವಿಯಾಯು ಆಕಾಶಗಳೂ ಸಹ ಸೂಕ್ಷ್ಮರೂಪದಿಂದ ಶುಕ್ರಾರ್ತವದಲ್ಲಿ ಯುಕ್ತವಾದವುಗಳು ಇರುತ್ತವೆ. ಇವೆಲ್ಲವುಗಳು ಇರುವದರಿಂದಲೇ ಪಂಚಭೂತಾತ್ಮಕವಾದದ್ದು ಗರ್ಭವು. ವಿಶೇಷವಾಗಿ ಶುಕ್ರಾರ್ತವಗಳು ಒಂದಕ್ಕೊಂದು ಹೊಂದಿಕೊಂಡು ಪರಸ್ಪರ ಅನುಕೂಲವಾಗಿ, ಪರಸ್ಪರ ಪೋಷಕ ರೀತಿಯಿಂದ ಒಂದನ್ನೊಂದು ಕೂಡಿಯೇ ಪ್ರವೇಶಮಾಡಿ ಒಂದಕ್ಕೊಂದು ಉಪಕಾರಿಯಾಗಿರುವದರಿಂದ; ಪಂಚಭೂತಗಳ ಸೂಕ್ಷ್ಮವಾದ ಸಾನ್ನಿಧ್ಯವಿದೆಯೆಂದು ನಿರ್ಣಯವಾಗುತ್ತದೆ. ಪಂಚಭೂತಗಳಲ್ಲಿ ದುರ್ಬಲವಾದದ್ದಕ್ಕೆ ಸಬಲವಾದದ್ದು ಉಪಕಾರವಾಗುತ್ತದೆ, ಸಹಾಯಕವಾಗಿ ಕೂಡಿಕೊಳ್ಳುತ್ತದೆ. ಉದಾ:- ಪಂಚಭೂತಾತ್ಮಕಗಳಲ್ಲಿ ಪೃಥಿವಿಯು ಬಲವಾದದ್ದು. ಉಳಿದವು ದುರ್ಬಲ (ಸ್ಥಿರತೆಯಿಲ್ಲದವು) ಆದ್ದರಿಂದ ಪೃಥಿವಿಯು ಜಲಾದಿಗಳಿಗೆ ನಿಲ್ಲಲು ಸ್ಥಳ ಒದಗಿಸಿಕೊಡುತ್ತದೆ. ವಾಯುವು ಜಲದಲ್ಲಿ ಸೇರಿ ಪ್ರವಹಿಸುವಂತೆ ಮಾಡುತ್ತದೆ. ಅಗ್ನಿಯು ಗಾಳಿಯ ಸಹಾಯದಿಂದಲೇ ಪಸರಿಸುತ್ತದೆ. ಗಾಳಿ ಅಗ್ನಿಗಳಿಗೆ ಆಕಾಶವು ಸ್ಥಾನ ಕೊಡುತ್ತದೆ. ಹೀಗಿರುವದರಿಂದ, ಶುಕ್ರಾರ್ತವಗಳ, ಸಂಯುಕ್ತ ಸ್ವರೂಪ "ಕಲಲ"ದಲ್ಲಿ ಪಂಚಭೂತಾತ್ಮಕ ಸೂಕ್ಷ್ಮತತ್ವಗಳು ಇರುತ್ತವೆಂದು ಹೇಳಿದಂತಾಯಿತು.

ಗರ್ಭಾಶಯದಲ್ಲಿ ಗರ್ಭದ ಪರಿಪಾಕವು

ಶುಕ್ರಶೋಣಿತಂ ಗರ್ಭಾಶಯಸ್ಥಂ ಆತ್ಮಪ್ರಕೃತಿವಿಕಾರಸಂಮೂರ್ಛಿತಂ 'ಗರ್ಭ' ಇತ್ಯುಚ್ಯತೆ, ತಂಚೇತನಾವಸ್ಥಿತಂ

ವಾಯುರ್ವಿಭಜತಿ, ತೇಜಪಿನಂ ಪಚತಿ, ಆಪಃ ಕ್ಲೇದಯಂತಿ, ಪೃಥಿವೀಸಂಹಂತಿ, ಆಕಾಶಂವಿವರ್ಧಯತಿ॥

(ಸುಶ್ರುತ॥ ಶಾರೀರ॥ ಅ ೫ ಸೂ ೩)

ಗರ್ಭಾಶಯದಲ್ಲಿರುವ, ಶುಕ್ರಶೋಣಿತ ಮಿಶ್ರಣವು, ಹಿಂದೆ ಹೇಳಿದ ಎಂಟು ಪ್ರಕೃತಿ ವಿಕಾರ ಆತ್ಮ (ಕ್ಷೇತ್ರಜ್ಞ) ಇವೆಲ್ಲವುಗಳಿಂದ ಮಿಶ್ರೀಭಾವ ಹೊಂದಿ, "**ಗರ್ಭ**"ವೆಂಬ ಹೆಸರನ್ನು ಪಡೆಯುತ್ತದೆ. ಆರ್ಧಾತ್ ಗರ್ಭದಲ್ಲಿ ಇವೆಲ್ಲವುಗಳಿರುತ್ತವೆ. ಶಾಸ್ತ್ರಾನುಸಾರವಾಗಿ ಪಂಚವಿಂಶತಿ ತತ್ವಾತ್ಮಕವಾದದ್ದು ಗರ್ಭವು. ಹೀಗೆ ಗರ್ಭಾಶಯದಲ್ಲಿ ಜೀತನಾಯುಕ್ತವಾದ "**ಗರ್ಭವನ್ನು**" ದೋಷ ಧಾತು ಮಲ ಅಂಗ ಪ್ರತ್ಯಂಗ ಇತ್ಯಾದಿ ಅಂಗಗಳಿಗನುಗುಣವಾಗಿ, **ವಾಯುವು** ವಿಭಾಗ ಮಾಡುತ್ತದೆ. **ತೇಜಸ್ಸು** (ಗರ್ಭಾಶಯದಲ್ಲಿಯ ಅಗ್ನಿಯು) ಪಚನ ಮಾಡುತ್ತದೆ ಮತ್ತು ಒಂದು ರೂಪದಿಂದ ಮತ್ತೊಂದು ರೂಪಬರುವಂತೆ ಕುದಿಸುತ್ತದೆ. **ಜಲವು** ಗರ್ಭಾಶಯ ದ್ರವವು, ವಾಯುವಿನಿಂದ ವಿಭಾಗ ಹೊಂದಿ ಅಗ್ನಿಯಿಂದ ಕುದಿಯುತ್ತಿರುವ ಗರ್ಭವನ್ನು ಆರ್ದ್ರವನ್ನಾಗಿ ಮಾಡುತ್ತದೆ. **ಪೃಥಿವಿಯು** (ಗರ್ಭಾಶಯದಲ್ಲಿಯ ಪೃಥ್ವಿತತ್ವವು) ಜಲದಿಂದ ಆರ್ದ್ರವಾದ ಗರ್ಭವನ್ನು, ಸ್ಥಿರಸ್ಥಿತಿಗೆ ಬರುವಂತೆ ಮಾಡುತ್ತದೆ. **ಆಕಾಶವು** (ಗರ್ಭಾಶಯದಲ್ಲಿಯ ಪೊಳ್ಳು ಭಾಗವು) ಗರ್ಭಕ್ಕೆ ಸಮಯಕ್ಕನುಗುಣವಾದ, ಸ್ಥಲವನ್ನು ಒದಗಿಸಿಕೊಟ್ಟು ವರ್ಧನೆಯನ್ನು ಮಾಡುತ್ತದೆ. ಗರ್ಭವು ಹೀಗೆ ಪದ್ಧತಿಯಂತೆ ಪಕ್ವಾದಿ ಸ್ಥಿತಿಗಳನ್ನು ಹೊಂದುತ್ತಾ ಬೆಳೆಯುತ್ತದೆ.

ಗರ್ಭದಲ್ಲಿಯ ಧಾತ್ವಾದಿಗಳ ಪಾಕವು

ಶುಕ್ರಶೋಣಿತ ಮಿಶ್ರಣವಾದ ಗರ್ಭವು ಕಲಲವಾಗುತ್ತದೆ. ನಂತರ ಪಿಂಡ ಮೊದಲಾದ ರೂಪವನ್ನು ಹೊಂದುತ್ತದೆ. ಪ್ರತಿ ಮಾಸಗಳಲ್ಲಿ ಯಾವ ರೂಪಾಂತರ ಹೊಂದಬೇಕೋ ಅವುಗಳೆಲ್ಲ ಸಂಭವಿಸುತ್ತವೆ. ನಾಲ್ಕನೇ ತಿಂಗಳಿನ ವರೆಗೂ ಗರ್ಭಾಶಯದಲ್ಲಿಯ ಉಷ್ಣತೆಯಿಂದ ಪಚನವಾಗುತ್ತಾಗುತ್ತ ಬೇರೆ ಬೇರೆ ಅವಸ್ಥೆಗಳನ್ನು ಗರ್ಭವು ಪಡೆಯುತ್ತದೆ. ನಾಲ್ಕನೇ

ತಿಂಗಳಿನಲ್ಲಿ ಅಂಗ ಪ್ರತ್ಯಂಗಗಳು ಉಂಟಾಗುತ್ತವೆ. ಆಗ ಪಾಕದಿಂದ ರಕ್ತ ಮಾಂಸ ಮೊದಲಾದವುಗಳು ರೂಪಾಂತರ ಹೊಂದಿ ಸಿರಾ ಸ್ನಾಯು ಧಮನಿ ಮೊದಲಾದವುಗಳಾಗುತ್ತವೆ ಗರ್ಭವು ಗರ್ಭಿಣಿಯಿಂದ ಪೋಷಿತವಾಗಿ ರಸ ಸತ್ವವನ್ನು ಗ್ರಹಿಸುತ್ತದೆ. ಅದರಿಂದ ಕ್ರಮೇಣ ಎಲ್ಲಾ ವಿಭಾಗಗಳು ಉತ್ಪನ್ನವಾಗಲಾಗಿ ಶರೀರ ಸ್ವರೂಪ ಬರುತ್ತದೆ. ಹೀಗೆ ಬೇರೆ ಬೇರೆ, ಗರ್ಭದಲ್ಲಿ ವಿಭಾಗಗಳು ಹೇಗೆ ಸಂಭವಿಸುತ್ತವೆ; ಮತ್ತು ಯಾವ ದ್ರವ್ಯಗಳ ಪಾಕದಿಂದ ಯಾವ ವಿಭಾಗ ಉತನ್ನವಾಗುತ್ತದೆಂದು ವಿವೇಚಿಸಿ ವಿಭಾಗಶಃ ಹೇಳುತ್ತಾರೆ. ಕೇವಲ ಶುಕ್ರಾರ್ತವಗಳ ಗುಂಪು ಗರ್ಭವಾಗಿ ಶರೀರ ಸ್ಥಿತಿಯನ್ನು ಹೊಂದುವದರಿಂದ ಗರ್ಭದಲ್ಲಿಯ ಪರಿಪಾಕ ಸ್ಥಿತಿ ರೂವಾಂತರ ಕ್ರಿಯಾ ವಿಭಾಗಗಳು ಅವೆಯೆನ್ನುವದು ನಿಶ್ಚಯವಾದದ್ದೇ ಸರಿ.

ಗರ್ಭಸ್ಯಯಕೃತ್ ಪ್ಲೀಹಾನೌಶೋಣಿತಜೌ, ಶೋಣಿತಫೇನ
ಪ್ರಭವಃ ಪುಪ್ಫುಸಃ ಶೋಣಿತಕಟ್ಟಿಪ್ರಭವಉಂಡುಕಃ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೨೫)

ರಕ್ತಪಾಕವಾಗಿ ಅದರಿಂದ ಗರ್ಭದ "**ಯಕೃತ್ ಪ್ಲೀಹಗಳು**" ಉತ್ಪನ್ನವಾಗುತ್ತವೆ. ಶೋಣಿತದ ಬುರುಗಿನ (ಫೇನ) ಪಾಕದಿಂದ "**ಪುಪ್ಪುಸವು**" ಉತ್ಪನ್ನವಾಗುತ್ತದೆ. ರಕ್ತದ ಕಿಟ್ಟದಿಂದ "**ಉಂಡುಕವು**" ಹುಟ್ಟುತ್ತದೆ. ಗರ್ಭದಲ್ಲಿಯ ಧಾತುಗಳು ಪಿತ್ತ ತೇಜಸ್ಸಿನಿಂದ ಪಕ್ವವಾಗಿ ಅವಾವ ಅಂಗೋಪಾಂಗಗಳು ಉತ್ಪನ್ನವಾಗುತ್ತವೆ.

ತತ್ರಾಸ್ಯಮುಖ್ಯಮಾನಸ್ಯಧ್ಮಾಯಮಾನಸ್ಯರುಕ್ಮವತ್ ॥
ಜಿಹ್ವಾಸಂಜಾಯತೆಸೌಮೀಯಯಾವೇದಯತೀ ರಸಾನ್॥

(ಸುಶ್ರುತ ಟೀಕಾ)

ಗರ್ಭಾಶಯದಲ್ಲಿ ಗರ್ಭವು ಪಾಕವನ್ನು ಹೊಂದುತ್ತಿರಲು, ಘರ್ಷಣ ಕರಗಿಸೋಣ ಗಾಳಿಹೊಡೆಯುವದು ಮೊದಲಾದವುಗಳಿಂದ ಭಂಗಾರವು ಉತ್ಪನ್ನವಾಗುವಂತೆ ಗರ್ಭಕ್ಕೆ ನಾಲಿಗೆಯು ಉತ್ಪನ್ನವಾಗುತ್ತದೆ. ಯಾವದ

ರಿಂದ ಸ್ವಾದು ಮೊದಲಾದ ರಸಗಳನ್ನು ನಾವು ಅರಿತುಕೊಳ್ಳುತ್ತೇವೆಯೋ ಅದೇ ನಾಲಿಗೆಯು.

ಅಸೃಜಃ ಶ್ಲೇಷ್ಮಣಶ್ಚಾಪಿಯಃಪ್ರಸಾದಃ ಪರೋಮತಃ ॥
ತಂಪಚ್ಯಮಾನಂ ಪಿತ್ತೇನವಾಯುಶ್ಚಾಪ್ಯನುಧಾವತಿ ॥
(ಸುಶ್ರುತ॥ ಶಾರೀರ॥ ಅ ೪ ಶ್ಲೋ ೨೬)

ತತೋಽಂತ್ರಾಣಿಜಾಯಂತೇಗುದಂಬಸ್ತಿಶ್ಚದೇಹಿನಃ ॥
ಉದರೆಪಚ್ಯಮಾನಾನಾಮಾಧ್ಮಾನಾದ್ರುಕ್ಸಾರವತ್ ॥೨೭॥

ರಕ್ತ ಮತ್ತು ಶ್ಲೇಷ್ಮ (ಕಫ) ಇವುಗಳ ಪಾಕವು ನಂತರವಾಗುತ್ತದೆ. ಎಲ್ಲ ಪ್ರಸಾದ (ಪಾಕ) ಕ್ಕಿಂತಲೂ ಇದು ಹೆಚ್ಚಿನದಿರುತ್ತದೆ. ರಕ್ತ ಶ್ಲೇಷ್ಮ ಗಳು ಪಚನ ಹೊಂದಿ ಉತ್ತಮ ಪ್ರಸಾದಸಾರ (ಪಕ್ವಸಾರ) ಉತ್ಪನ್ನವಾಗು ತ್ತದೆ. ಹೀಗೆ ಸಾರವು ಪಿತ್ತದಿಂದ ಪಕ್ವವಾಗುತ್ತಿರಲು ವಾಯುವು ಸಹ ಕೂಡಿ ಕೊಳ್ಳುತ್ತದೆ ಹೀಗೆ ವಾಯುವಿನ ಆಧ್ಮಾನ (ಜೋರಿನಿಂದ ಪ್ರಸರಣ)ವಾಗು ತ್ತಿರಲು, ಅಗ್ನಿಯಿಂದ ಪಕ್ವವಾಗುತ್ತಿರಲು ಚನ್ನಾಗಿ ಗಾಳಿ ಹೊಡೆಯುವದ ರಿಂದ ಭಂಗಾರವು ಬೇರೆಯಾಗಿ ಹೊರಡುವಂತೆ, ಶರೀರದ ಕರಳು, ಬಸ್ತಿ, ಗುದಗಳು, ಉತ್ಪನ್ನವಾಗುತ್ತವೆ. ಅರ್ಥಾತ್ ರಕ್ತ ಶ್ಲೇಷ್ಮ ಸಾರವನ್ನು ಉದರದಲ್ಲಿ ಪಿತ್ತಾಗ್ನಿಯು ಪಚನ ಮಾಡುತ್ತಿರಲು, ವಾಯುವು ಅದನ್ನು ಭೇದಿಸಿ ಆಧ್ಮಾನದಿಂದ (ಊದುವಿಕೆಯಿಂದ) ಅಂತ್ರಗಳನ್ನೂ, ಬಸ್ತಿ, ಗುದ ಗಳನ್ನೂ ಉತ್ಪನ್ನ ಮಾಡುತ್ತದೆ

ಕಫಶೋಣಿತಮಾಂಸಾನಾಂ ಸಾರಾಜಿಹ್ವಾಪ್ರಜಾಯತೆ ॥
ಯಥಾರ್ಥಮೂಷ್ಮಣಾಯುಕ್ತೋವಾಯುಃ ಸ್ರೋತಾಂಸಿದಾ
ರಯೇತ್ ॥ (ಸುಶ್ರುತ॥ ಶಾರೀರ॥ ಅ ೪ ಶ್ಲೋ ೨೮)

ಅನುಪ್ರವಿಶ್ಯಪಿಶಿತಂಪೇಶೀರ್ವಿಭಜತೇತಥಾ ॥
ಮೇದಸಃ ಸ್ನೇಹನಾದಾಯುಸಿರಾಸ್ನಾಯುತ್ವಮಾಪ್ನು
ಯಾತ್ ॥೨೯॥

ಕಫ ರಕ್ತ ಮಾಂಸಗಳ ಸಾರದಿಂದ ನಾಲಿಗೆಯು ಉತ್ಪನ್ನವಾಗುತ್ತದೆ. ಯಥಾಯೋಗ್ಯ ಸನ್ನಿವೇಶೋಚಿತವಾಗಿ (ಗರ್ಭಕ್ಕನುಗುಣವಾಗಿ) ಪಿತ್ತ ವನ್ನು ಕೂಡಿಕೊಂಡು ವಾಯುವು ಸ್ರೋತಸ್ಸುಗಳನ್ನುಂಟು ಮಾಡುತ್ತದೆ. ಪೂರ್ವೋಕ್ತವಾಗಿ ಸಾರವು ಪಾಕವಾಗುತ್ತಿರಲು ವಾಯುವು ವಿಭಾಗ ಮಾಡಿ ಸ್ರೋತಸ್ಸುಗಳನ್ನು ಹುಟ್ಟಿಸುತ್ತದೆ ನಂತರ ವಾಯುವು ಮಾಂಸಪಿಂಡವನ್ನು ಪ್ರದೇಶಿಸಿ ಪೇಶೀ (ಮಾಂಸ ಚೀಲ) ಗಳನ್ನು ವಿಭಾಗಿಸಿ ಉಂಟು ಮಾಡುತ್ತದೆ. "ವಿಭಜತೆ" ಎಂದು ಹೇಳಿರುವದರಿಂದ ಅವಾವ ಸ್ಥಳಕ್ಕನುಗುಣವಾಗಿ, ಸ್ಥೂಲ ಸೂಕ್ಷ್ಮ ಹ್ರಸ್ವದೀರ್ಘವರ್ತುಲ ಮುಂತಾದ ಸ್ಥಿತಿಯುಳ್ಳವುಗಳನ್ನು ಸ್ಥಾನೋಚಿತ ಉತ್ಪತ್ತಿಯನ್ನುಮಾಡುತ್ತದೆಂದುಧ್ವನಿತವಾಗುತ್ತದೆ. ಮೇದಸ್ಸಿನ ಸ್ನಿಗ್ಧತೆಯನ್ನು ಗ್ರಹಿಸಿ ವಾಯುವು ಶಿರಾಸ್ನಾಯುಗಳನ್ನುಮಾಡುತ್ತದೆ.

ಸಿರಾಣಾಂತುಮೃದುಃ ಪಾಕಃ ಸ್ನಾಯೂನಾಂಚ ತತಃ ಖರಃ ॥
ಆಶಯ್ಯಾಭ್ಯಾಸಯೋಗೇನ ಕರೋತ್ಯಾಶಯಸಂಭವಮ್ ॥

ಸಿರಗಳ ಪಾಕವು ಮೃದು ಪಾಕವು· ಸ್ನಾಯುಗಳಪಾಕವು ಅದಕ್ಕೂ ಘಟ್ಟಿಯಾದದ್ದು (ಖರ) ಇರುತ್ತದೆ. ವಾಯುವು ಭೇದಿಸುವ ಕ್ರಮದಿಂದ ಸ್ಥಾನವನ್ನು ಮಾಡಿಕೊಂಡು ಆಶಯಗಳ ಉತ್ಪತ್ತಿಯನ್ನುಂಟು ಮಾಡುತ್ತದೆ. ರಕ್ತ ಮೊದಲಾದವುಗಳ ಪಾಕದಿಂದ ಉತ್ಪನ್ನವಾಗುವ ಅಂತ್ರ ಮೊದಲಾದವುಗಳನ್ನುಹೇಳಿ, ನಂತರ ವೃಕ್ಕ ಮೊದಲಾದವುಗಳ ಉತ್ಪತ್ತಿಯನ್ನು ಹೇಳುತ್ತಾರೆ.

ರಕ್ತಮೇದಃ ಪ್ರಸಾದಾತ್ವೃಕ್ಕೌ; ಮಾಂಸಾಸೃಕ್ಕಫಮೇದಃ ಪ್ರಸಾದಾತ್ವೃಷಣೌ; ಶೋಣಿತಕಫಪ್ರಸಾದಜಂ ಹೃದಯಂ; ಯದಾಶ್ರಯಾಹಿಧಮನ್ಯಃ ಪ್ರಾಣವಹಾಃ; ತಸ್ಯಾಧೋವಾ ಮತಃ ಪ್ಲೀಹಾಪುಫ್ಫುಸಶ್ಚ, ದಕ್ಷಿಣತೋಯಕೃತ್‌ಕ್ಲೋಮಚ; ತದ್ವಿಶೇಷೇಣಚೇತನಾಸ್ಥಾನಂ,ಅತಸ್ತಸ್ಮಿನ್‌ತಮಸಾವೃತೆಸರ್ವ ಪ್ರಾಣಿನಃ ಸ್ವಪಂತಿ ॥

(ಸುಶ್ರುತ॥ ಶಾರೀರ॥ ಅ ೪ ಸೂ ೩೧)

ರಕ್ತ ಮೇದಸ್ಸುಗಳಪಾಕದಿಂದ ವೃಕ್ಕಗಳುತ್ಪನ್ನವಾಗುತ್ತವೆ. ಮಾಂಸ ರಕ್ತ ಕಫ ಮೇದಸ್ಸುಗಳ ಪಾಕದಿಂದ ವೃಷಣ (ಅಂಡಕೊಶ) ಉತ್ಪನ್ನ ವಾಗುತ್ತದೆ. ರಕ್ತ ಕಫಗಳ ಪಾಕದಿಂದ ಹೃದಯವು ಉತ್ಪನ್ನವಾಗುತ್ತದೆ. ಹೃದಯವನ್ನಾಶ್ರಯಿಸಿಯೇ ಪ್ರಾಣ ವಾಹಿನೀ ಧಮನಿಗಳು ಇರುತ್ತವೆ. ಹೃದಯದ ಅಧೋಭಾಗದಲ್ಲಿ ಎಡಗಡೆಗೆ ಪ್ಲೀಹ ಪುಪ್ಪುಸಗಳು, ಬಲಗಡೆಗೆ ಯಕೃತ್‌ಕ್ಲೋಮಗಳು ಇರುತ್ತವೆ. ಎಡಗಡೆಗೆ ಪ್ಲೀಹ ಪುಪ್ಪುಸಗಳೆಂದೂ, ಬಲಗಡೆಯಲ್ಲಿ ಯಕೃತ್ ಕ್ಲೋಮಗಳೆಂದೂ, ಸುಶ್ರುತದಲ್ಲಿ ಪ್ರಮಾದ ಪಾರ ಕ್ರಮ ನಡೆದುಬಂದಿದೆಯೆಂದು ಪ್ರತ್ಯಕ್ಷ ಶಾರೀರದಲ್ಲಿಯ ಮತವು. "ಉಭ ಯತಃ ಕ್ಲೋಮುಫುಫ್ಫುಸೌಚ" ಅಂದರೆ ಎರಡೂ ಕಡೆಗೆ ಪುಪ್ಪುಸ ಕ್ಲೋಮಗಳು ಇರುತ್ತವೆ. ಇದು ಯೋಗ್ಯವಾದ ಪಾರವು. ಯಾಕಂದರೆ ಎಡ ಗಡೆಯಲ್ಲಿ ಎಂದು ಹೇಳಿದರೆ ಬಲಗಡೆಗೆ ಇರುವದಿಲ್ಲವೆಂದು ಹೇಳಿದಂತಾ ಯಿತು ಇದರಿಂದ ಬಲಗಡೆಯ ಕ್ಲೋಮ ಪುಪ್ಪುಸಳು ಗ್ರಹಣವಾಗುವ ದಿಲ್ಲ. ಇದರಂತೆ ಬಲಗಡೆಯೆಂದು ಹೇಳಿದರೂ ಸರಿಯಲ್ಲ. ಆದ್ದರಿಂದ "ಉಭ ಯತಃ" ಎನ್ನುವದು ಯೋಗ್ಯವೆಂದು ಪ್ರತ್ಯಕ್ಷವಾಗಿ ನಿರ್ಧರಿಸಿದ್ದಾರೆ. ಹೃದ ಯವು ದೇಹದಲ್ಲಿ ಪ್ರಾಮುಖ್ಯವಾದದ್ದಿರುತ್ತದೆ. ಯಾಕಂದರೆ ಚೈತನ್ಯ ಸ್ಥಾನ ವೆಂದರೇ ಹೃದಯವು. ಹೀಗಿರುವದರಿಂದ ಹೃದಯದಲ್ಲಿ ತಮಸ್ಸು ಆವರಿಸಿ ತೆಂದರೆ ಸರ್ವ ಪ್ರಾಣಿಗಳು ನಿದ್ರಿಸುತ್ತವೆ. ದೇಹದಲ್ಲಿ ಮುಖ್ಯ ಸ್ಥಾನವಾದ ಹೃದಯಕ್ಕೆ ಅಂತ್ಯಂತವಾದ ಭದ್ರ ರಕ್ಷಣೆಯು ಅದರ ಮಹತ್ವವನ್ನು ಸೂಚಿ ಸುತ್ತದೆ. ರಕ್ತಾಶಯ ಪ್ರಾಣ ವಾಹಿನೀ ಧಮನೀಗಳು ಹೃದಯದಲ್ಲಿಯೇ ಇರುತ್ತವೆ ವಿಶೇಷವಾಗಿ ಹೃದಯವು ದೇಹದಲ್ಲಿ ಅತಿ ಮಹತ್ವವೂ ಪ್ರಧಾನ ವಾದದ್ದೂ ಇರುತ್ತದೆ. ಯಕೃತಾದಿಗಳ ವರ್ಣನೆಯು ವಿಸ್ತಾರವಾಗಿ ಮುಂದೆ ಕ್ರಮಶಃ ಬರುವದರಿಂದ ವಿಶದೀಕರಿಸಿಲ್ಲ.

ಗರ್ಭಾಭಿವೃದ್ಧಿ ಕ್ರಮ

ಗರ್ಭಸ್ಯಖಲುರಸನಿಮಿತ್ತಾ, ಮಾರುತಾಧ್ಮಾನನಿಮಿತ್ತಾಚ, ಪರಿವೃದ್ಧಿರ್ಭವತಿ, (ಸುಶ್ರುತ॥ ಶಾರೀರ॥ ಅ ೪ ಸೂ ೫೭)

ತಾಯಿಯ ಅನ್ನಪಾನ ರಸದಿಂದಲೂ, ವಾಯುವಿನಿಂದ ಸ್ರೋತೋ ಮಾರ್ಗವಾಗಿ ಗರ್ಭಪೋಷಣ ರಸಾದಿಗಳ ಸಂಚಾರವಾಗುವಂತೆ ಪ್ರೇರಿಸು ವದರಿಂದಲೂ, ಮತ್ತೂ ವಾಯುವಿನ ಆಧ್ಮಾನದಿಂದ ಗರ್ಭಕ್ಕೆ ಪುಟವಾಗು ವದರಿಂದಲೂ, "**ಗರ್ಭವು**" ಅಭಿವೃದ್ಧಿಯನ್ನು ಹೊಂದುತ್ತದೆ. ತಾಯಿಯ ಆಹಾರ ರಸದಿಂದ ಗರ್ಭವು ಬೆಳೆಯುವದರಿಂದ ಗರ್ಭಿಣಿಯು, ಸಾತ್ವಿಕ ಪೌಷ್ಟಿಕ ಆಹಾರವನ್ನು ತಕ್ಕೊಳ್ಳಬೇಕೆಂಬ ನಿಯಮ ಮಾಡಿದ್ದಾರೆ.

ಏವಂ ವಿವಿರ್ಧಿತಃ ಸಯದಾಹಸ್ತಪಾದಜಿಹ್ವಾಘ್ರಾಣಕರ್ಣ ನಿತಂಬಾದಿಭಿಃ ಅಂಗೈರುಪೇತಃ ತದಾಶರೀರಂ ಇತಿಸಂಜ್ಞಾಂ ಲಭತೆ ॥ (ಸುಶ್ರುತ॥ ಶಾರೀರ॥ ಅ ೫ ಸೂ ೩)

ಪೂರ್ವೋಕ್ತ ರೀತಿಯಿಂದ ಅಭಿವೃದ್ಧಿ ಹೊಂದಿದ ಗರ್ಭವು, ಕೈಕಾಲು ನಾಲಿಗೆ ಕಣ್ಣು ಮೂಗು ಕಿವಿ ಟೊಂಕವೇ ಮೊದಲಾದ ಅಂಗಗಳಿಂದ ಯುಕ್ತವಾದದ್ದಾಗುತ್ತದೆಯೋ ಆಗ "**ಶರೀರ**"ವೆಂಬ ಹೆಸರನ್ನು ಪಡೆಯು ತ್ತದೆ. (ಅವಯವಾದಿಗಳಿಲ್ಲದಿರುವ ಸ್ಥಿತಿಗೆ "**ಗರ್ಭ**" ವೆಂದೂ ಅವಯವ ವುಂಟಾದ ಮೇಲೆ "**ಶರೀರ**" ವೆಂದೂ ತಿಳಿಯಬೇಕು.)

(ಲ) ಗರ್ಭೋತ್ಪತ್ತಿ ವಿಷಯದಲ್ಲಿ ಮತಾಂತರಗಳು

ಗರ್ಭೋತ್ಪತ್ತಿ ವಿಷಯಕಾಣಿಮತಾಂತರಾಣಿ

೧. ಶೌನಕರ ಮತವು

ಗರ್ಭಸ್ಯಖಲುಸಂಭವತಃ ಪೂರ್ವಂ ಶಿರಃ ಸಂಭವತೀತ್ಯಾಹ ಶೌನಕಃ, ಶಿರೋಮೂಲತ್ವಾತ್ ಪ್ರಧಾನೇಂದ್ರಿಯಾಣಾಂ ॥

(ಸುಶ್ರುತ॥ ಶಾರೀರ॥ ಅ ೩ ಸೂ ೩೨)

ಗರ್ಭವು ಪೂರ್ಣವಾಗಬೇಕಾದರೆ ಮೊದಲು "ತಲೆ" ಉತ್ಪನ್ನವಾಗುತ್ತದೆ. ಯಾಕಂದರೆ ಪ್ರಧಾನೇಂದ್ರಿಯಗಳಿಗೆ ತಲೆಯೇ ಮುಖ್ಯವಾದದ್ದು, ಹೀಗೆಂದು ಶೌನಕರು ಹೇಳುತ್ತಾರೆ.

೨. ಕೃತವೀರ್ಯನ ಮತವು

ಹೃದಯಮಿತಿಕೃತವೀರ್ಯೊ, ಬುದ್ಧೇರ್ಮನಸಶ್ಚ ಸ್ಥಾನತ್ವಾತ್ ॥

ಬುದ್ಧಿ ಮತ್ತು ಮನಸ್ಸಿಗೆ ಸ್ಥಾನವಾದ್ದರಿಂದ, "ಹೃದಯವು" ಮೊದಲುತ್ಪನ್ನವಾಗುತ್ತದೆಂದು ಕೃತವೀರ್ಯನ ಮತವು.

೩. ಪರಾಶರ ಮತವು

ನಾಭಿರಿತಿಪಾರಾಶರ್ಯಃ ತತೋಹಿವರ್ಧತೇದೇಹೊದೇಹಿನಃ ॥

"ನಾಭಿಯು" ಮೊದಲು ಹುಟ್ಟುತ್ತದೆ. ಯಾಕಂದರೆ ಅದರಿಂದಲೇ (ನಾಭಿಯಿಂದಲೇ) ಮನುಷ್ಯನ ದೇಹವು ವೃದ್ಧಿಹೊಂದುತ್ತದೆಯಾದ್ದರಿಂದ ನಾಭಿ ಮೊದಲೆಂದು ಪಾರಾಶರ ಅನುಯಾಯಿಗಳ ಅಭಿಪ್ರಾಯವು.

೪. ಮಾರ್ಕಾಂಡೇಯ ಮತ

ಪಾಣಿಪಾದಮಿತಿಮಾರ್ಕಾಂಡೇಯಃ ತನ್ಮೂಲತ್ವಾತ್ ಚೇಷ್ಟಾಯಾಗರ್ಭಸ್ಯ ॥

"ಕೈಕಾಲುಗಳು" ಮೊದಲುತ್ಪನ್ನವಾಗುತ್ತವೆ. ಯಾಕಂದರೆ ಗರ್ಭ ಚಲನೆಗೆ ಅವುಗಳೇ (ಕೈಕಾಲು) ಕಾರಣವು, ಇಂತೆಂದು ಮಾರ್ಕಂಡೇಯರು ಅನ್ನುತ್ತಾರೆ.

೫. ಗೌತಮ ಮತವು

ಮಧ್ಯಶರೀರಮಿತಿಸುಭೂತಿರ್ಗೌತಮಃ, ತನ್ನಿಬದ್ಧತ್ವಾತ್ ಸರ್ವಗಾತ್ರಸಂಭವಸ್ಯ ॥

ಎಲ್ಲ ಅವಯವಗಳು ಮಧ್ಯ ಶರೀರಕ್ಕೆ ಹೊಂದಿಕೊಂಡಿರುವದರಿಂದ, ಮಧ್ಯ ಶರೀರವ ಉತ್ಪತ್ತಿ ಮೊದಲಾಗುತ್ತದೆಂದು ಗೌತಮರ ಮತವು.

೬. ಭಗವಾನ್ ಧನ್ವಂತರಿಯು ಮತವು

ತತ್ತು ನಸಮ್ಯಕ್, ಸರ್ವಾಣ್ಯಂಗಪ್ರತ್ಯಂಗಾನಿ ಯುಗಪತ್, ಸಂಭವಂತೀತ್ಯಾಹಧನ್ವಂತರಿಃ, ಗರ್ಭಸ್ಯಸೂಕ್ಷ್ಮತ್ವಾನ್ನೋಪಲಭ್ಯಂತೆ, ವಂಶಾಂಕುರವತ್ ಚೂತಫಲವಚ್ಚ ತದ್ಯಥಾ:–ಚೂತಫಲೆಪರಿಪಕ್ವೆಕೇಶರಮಾಂಸಾಸ್ಥಿ ಮಜ್ಜಾನಃಪೃಥಕ್, ಪೃಥಕ್, ದೃಶ್ಯಂತೆ ಕಾಲಪ್ರಕರ್ಷಾತ್, ತಾನ್ಯೇವತರುಣೆ ನೋಪಲಭ್ಯಂತೆ ಸೂಕ್ಷ್ಮತ್ವಾತ್, ತೇಷಾಂಸೂಕ್ಷ್ಮಾಣಾಂಕೇಶರಾದೀನಾಂಕಾಲಃ ಪ್ರವ್ಯಕ್ತತಾಂ ಕರೋತಿ, ಏತೇನೈವವಂಶಾಕುರೋಪಿ ವ್ಯಾಖ್ಯಾತಃ॥ ಏವಂಗರ್ಭಸ್ಯತಾರುಣ್ಯೆಸರ್ವೇಷ್ವಂಗಪ್ರತ್ಯಂಗೇಷು ಸತ್ಸ್ವಪಿ, ಸೌಕ್ಷ್ಮ್ಯಾದನುಪಲಬ್ಧಿಃ, ತಾನ್ಯೇವಕಾಲಪ್ರಕರ್ಷಾತ್ಪ್ರವ್ಯಕ್ತಾನಿಭವಂತಿ ॥

ಇವು ಯಾವ ಮತವೂ ಸರಿಯಾದವಲ್ಲ. ಯಾಕಂದರೆ ಎಲ್ಲ ಅಂಗ ಪ್ರತ್ಯಂಗಗಳು ಒಮ್ಮೆಲೇ ಹುಟ್ಟುತ್ತವೆ. ಎಂದು "ಧನ್ವಂತರಿ"ಯು ಹೇಳುತ್ತಾನೆ. ಗರ್ಭವು ಸೂಕ್ಷ್ಮವಿರುವದರಿಂದ ಗೋಚರವಾಗುವದಿಲ್ಲ. ಹೇಗೆಂದರೆ ಕಳಲೆಯಂತೆ ಅಥವಾ ಮಾವಿನ ಮಿಡಿಯಂತೆ. ಕ್ರಮೇಣ ಬೆಳೆಯುವದರಿಂದ, ಪಕ್ವವಾಗಿ ಮಾವಿನ ಹಣ್ಣಿನ ತಿಳಲು, ಗೊರಟು, ಒಳಗಿನ ನರ, ಇವೆಲ್ಲವುಗಳು ಬೇರೆ ಬೇರೆಯಾಗಿರುತ್ತವೆ. ಅರ್ಥಾತ್ ಬೇರೆ ಬೇರೆಯಾಗಿ ಕಾಣುತ್ತವೆ. ಅದೇ ಅವುಗಳು ಮಾವಿನಕಾಯಿ ಹೀಚಿರುವಾಗ ಗೊತ್ತಾಗುವದಿಲ್ಲ. ಯಾಕಂದರೆ ಬಹಳ ಸೂಕ್ಷ್ಮವಾಗಿರುತ್ತವೆಯಾದ್ದರಿಂದ ಪ್ರತ್ಯಕ್ಷವಾಗಿ ಕಾಣುವದಿಲ್ಲ. ಹೀಗೆ ಸೂಕ್ಷ್ಮವಿದ್ದು ಗೋಚರವಲ್ಲದವುಗಳು ಕಾಲ ಕ್ರಮೇಣ ಬೆಳೆದು ಕಣ್ಣಿಗೆ ಕಾಣುವಂತಾಗುತ್ತವೆ. ಇದರಂತೆ ಕಳಲೆಯೂ ಸಹ ಬೆಳೆಯುತ್ತಾ ಪೂರ್ಣ ಗೋಚರವಾಗುತ್ತದೆ.

ಇವುಗಳಂತೆ ಗರ್ಭವೂ ಕೂಡಾ ಹೀಚಿನ(ಸೂಕ್ಷ್ಮ)ಸ್ಥಿತಿಯಲ್ಲಿರುವಾಗ, ಅಂಗಪ್ರತ್ಯಂಗಗಳಿರುತ್ತವೆಯಾದರೂ, ಸೂಕ್ಷ್ಮವಿರುವದರಿಂದ ಗೋಚರಿಸು

ವದಿಲ್ಲ. ಕಾಲ ಕ್ರಮೇಣ ಬೆಳೆಯಿತೆಂದರೆ ಮಾವಿನ ಫಲದಂತೆ ಪೂರ್ಣ ಗೋಚರವಾಗುತ್ತದೆ. ಹೀಗೆಂದು "ಧನ್ವಂತರಿ" ಮತವು ಸಿದ್ಧಾಂತವಾದ ದ್ದಿರುತ್ತದೆ.

ಗರ್ಭೋತ್ಪತ್ತಿಯ ವಿಷಯದಲ್ಲಿ ಸುಶ್ರುತ ಸಂಹಿತೆಯಲ್ಲಿ ಶೌನಕಾದಿ ೬ ಮತಗಳನ್ನು ಹೇಳಿರುತ್ತದೆ. ಕಡೆಗೆ ಧನ್ವಂತರಿಯ ಮತದಂತೆ ನಿರ್ಣಯ ವಾಗುತ್ತದೆ. ಚರಕ ಸಂಹಿತೆಯಲ್ಲಿಯೂ ಕೂಡಾ, ಧನ್ವಂತರಿಮತವೇ ಸಿದ್ಧಾಂತವೆಂದು ಗ್ರಹಿಸಿದ್ದಾರೆ. ಚರಕದಲ್ಲಿ ಬೇರೆ ಬೇರೆ ಆಚಾರ್ಯರು ಶಿರಃ ಪ್ರಭೃತಿ ಅಂಗಗಳನ್ನು ಉದಹರಿಸಿ ಹೇಳಿದ್ದಾರೆ. ಅದನ್ನು ಕ್ರಮಶಃ ಅವಾವ ಅಂಗಪ್ರಧಾನವೆಂದು ಹಿಂದೆ ಹೇಳಿದವರ ಸಂಖ್ಯೆಯನ್ನು ಕೊಟ್ಟು ಹೇಳುತ್ತೇನೆ.

ಸೂಚನೆ:—

॥೧॥ ಇಲ್ಲಿ ಶೌನಕರ ಮತವು 'ಶಿರಃ ಪ್ರಧಾನವೆಂದಿದೆ' ಚರಕದಲ್ಲಿ ಇದೆ ಮತವನ್ನು ಹೇಳಿದವರ ಹೆಸರನ್ನು (೧) ಇಲ್ಲಿ ಹೇಳಿದ ಅಂಕೆಯನ್ನೇ ಇಟ್ಟು ಹೇಳುತ್ತೇನೆ. ಇದರಂತೆ ಮುಂದಿನದನ್ನೂ ತಿಳಿಯಬೇಕು. (ಚರಕ॥ ಶಾರೀರ॥ ಅ ೬ ಸೂ ೨೧)

(೧) **ಕುಮಾರಶಿರಾಃ ಭರದ್ವಾಜಃ॥ ॥೨॥ ಕಾಂಕಾಯನೊಬಾ ಹ್ಲೀಕಭಿಷಕ್ ॥೩॥ ಭದ್ರಕಾಪ್ಯಃ ॥೪॥ ಬಡಿಶಃ** ಇವು ಹಿಂದೆ ಹೇಳಿದಂತೆಯೇ ಇವೆ.

ಮಲಾಶಯ, ಗುದಗಳು ಮೊದಲೆಂದು "**ಭದ್ರಶೌನಕ**" ॥೫॥
ಇಂದ್ರಿಯಗಳು ಮೊದಲೆಂದು ವಿದೇಹ ಅರಸ "**ಜನಕನು**" ॥೬॥

ಪರೋಕ್ಷವಾದ್ದರಿಂದ ಅಚಿಂತ್ಯವಾದದ್ದು, ಯಾವದುಮೊದಲೆಂದು ಹೇಳಲು ಬರುವಂತಿಲ್ಲವೆಂದು "**ಮಾರೀಚಿಃ ಕಶ್ಯಪಃ**" ॥೭॥
ಧನ್ವಂತರಿಯ ಮತವು ಹಿಂದೆ ಹೇಳಿದಂತೆ ಯೋಗ್ಯವೆಂದು ಸಿದ್ಧಾಂತವಾಗಿರುತ್ತದೆ ಒಟ್ಟು ಗರ್ಭ ವಿಷಯದಲ್ಲಿ ಶೌನಕಾದಿ ಹದಿಮೂರು ಜನರ ಭಿನ್ನವಾದ ಎಂಟು ಅಭಿಪ್ರಾಯಗಳಿರುತ್ತವೆ. ಇವುಗಳಲ್ಲಿ ಧನ್ವಂತರಿ ಮತವು, ಯೋಗ್ಯವೆಂದುಸೋದಾಹರಣಪೂರ್ವಕ ನಿರ್ಣಯಿಸಿ ಸಿದ್ಧಾಂತವಾಗಿದೆ.

ಗರ್ಭಿಣೀ ಲಕ್ಷಣಗಳು

ತತ್ರಸದ್ಯೋಗೃಹೀತಗರ್ಭಾಯಾ ಲಿಂಗಾನಿ, ಶ್ರಮೋಗ್ಲಾನಿಃ ಪಿಪಾಸಾ ಸಕ್ಥಿಸದನಂ ಶುಕ್ರಶೋಣಿತಯೋರವಬಂಧಃಸ್ಫುರಣಂ ಚಯೋನೇಃ ॥ (ಸುಶ್ರುತ॥ ಶಾರೀರ॥ ಅ ೩ ಸೂ ೧೩)

ಸದ್ಯದಲ್ಲಿಯೇ ಗರ್ಭ ಗ್ರಹಿಸಿದವಳ ಲಕ್ಷಣವು:— ಶ್ರಮವಾಗುವಂಥ ಕೆಲಸ ಮಾಡದೆ ಸ್ವಾಭಾವಿಕವಾಗಿ ಶ್ರಮವಾಗೆ ೀಣ, ಬಾಡಿ ಬಸವಳಿದಂತೆ ಆಗುವಿಕೆ, ನೀರಡಿಕೆ, ತಿಕದಲ್ಲಿ ಮ್ಲಾನತೆಯು, ಶುಕ್ರಶೋಣಿತಗಳ ಅವಬಂಧ, ಶುಕ್ರವನ್ನು ಗ್ರಹಣ ಮಾಡುವ ಕ್ರಿಯೆಯು ಬಂದಾಗುತ್ತದೆ. ಇದರಂತೆ ಶೋಣಿತವನ್ನು ಬಿಡುವದು(ಮಾಸಿಕ ಕ್ರಮ) ಬಂದಾಗುತ್ತದೆ. ಸ್ತ್ರೀಯರಿಗೂ ಶುಕ್ರವಿರುತ್ತದೆಂದು ಶಾಸ್ತ್ರ ಸಿದ್ಧಾಂತವಿರುವದರಿಂದ ಶುಕ್ರ ಮತ್ತು ಆರ್ತವಸ್ರಾವ ಬಂದಾಗುವದೆಂದು ಅಂದರೂ ಅಡ್ಡಿಯಿಲ್ಲ. ಯೋನಿಯ ಸ್ಫುರಣೆಯು (ಆಕುಂಚನ ಪ್ರಸಾರಣ) ಉಂಟಾಗುತ್ತದೆ.

ಸ್ತನಯೋಃ ಕೃಷ್ಣಮುಖತಾರೋಮರಾಜ್ಯುದ್ಗಮಸ್ತಥಾ ॥
ಅಕ್ಷಿಪಕ್ಷ್ಮಾಣಿಚಾಪ್ಯಸ್ಯಾಃ ಸಂಮ್ಲೀಲ್ಯಂತೆವಿಶೇಷತಃ ॥೧೪॥
ಅಕಾಮತಃ ಛರ್ದಯತಿಗಂಧಾದುದ್ವಿಜತೆಶುಭಾತ್ ॥
ಪ್ರಸೇಕಃ ಸದನಂಚಾಪಿಗರ್ಭಿಣ್ಯಾಲಿಂಗಮುಚ್ಯತೆ ॥
(ಸುಶ್ರುತ॥ ಶಾರೀರ॥ ಅ ೩ ಶ್ಲೋ ೧೪)

ಸ್ತನದ (ಮೊಲೆಯ) ಮುಖ ಭಾಗಗಳಲ್ಲಿ ಕಪ್ಪು ವರ್ಣವುಂಟಾಗುತ್ತದೆ. ಹೊಕ್ಕಳಿನ ಕೆಳ ಭಾಗದಲ್ಲಿ ಕೂದಲಿನ ಗೆರೆಯಂತೆ ಆಗುತ್ತದೆ. ಕಣ್ಣಿನ ರೆಪ್ಪೆಗಳು ವಿಶೇಷವಾಗಿ ಮುಚ್ಚುತ್ತಿರುತ್ತವೆ. ಕಾರಣವಿಲ್ಲದ ವಾಂತಿಯು, ಸುವಾಸನೆಯನ್ನು ಮೂಸಿದರೂ ಕೆಡಕನಿಸಿ ಅಸಹ್ಯವಾಗುವದು. ಬಾಯಲ್ಲಿ ನೀರೂರಿ ಬರುವದು, ಬಾಡಿ ಬಸವಳಿಯುವದು ಮತ್ತೂ ಸೊರಗುವದು ಗರ್ಭ ಧರಿಸಿದ ಸ್ತ್ರೀಯರಿಗೆ ಇವೆಲ್ಲ ಲಕ್ಷಣಗಳುಂಟಾಗುತ್ತವೆ.

ಯೋಷಿತೋಽಪಿಸ್ರವತ್ಯೇವಶುಕ್ರಂ ಪುಂಸಾಂಸಮಾಗಮೆ ॥
ತನ್ನಗರ್ಭಸ್ಯಕಂಚಿತ್ತು ಕರೋತೀತಿನಚಿಂತ್ಯತೆ ॥
(ವ್ಯದ್ದವಾಗ್ಭಟ॥ ಅ, ಸಂ, ಶಾ, ಅ ೧)

ಪುರುಷ ಸಮಾಗದಿಂದ ಸ್ತ್ರೀಯ ಶುಕ್ರವೂ ಕೂಡಾ ಸ್ರವಿಸುತ್ತದೆ ಅದು ಗರ್ಭವನ್ನುಂಟು ಮಾಡುವದಿಲ್ಲವೋ, ಮಾಡುತ್ತದೆಯೋ, ಎನ್ನುವದು ಸಂಶಯಾಸ್ಪದ ವಿಷಯವು. ಆಗು ನಿರ್ಧಾರವಾಗಿ ಹೇಳಲು ಸಾಧ್ಯವಿಲ್ಲವೆಂದು ವಾಗ್ಭಟ ಮತವು. ಇದರ ವಿಷಯ (ಸ್ತ್ರೀ ಶುಕ್ರ ವಿಷಯ) ದಲ್ಲಿ ನಿಶ್ಚಿತ ಹೇಳಲು ಸಾಧ್ಯವಿಲ್ಲವೆಂದು ಅಭಿಪ್ರಾಯವು.

(೯) ಪ್ರಥಮಾದಿ ತಿಂಗಳಲ್ಲಿಯ ಗರ್ಭ ಶರೀರ ವಿಜ್ಞಾನ

ಪ್ರಥಮಾದಿಮಾಸಭೇದೇನ ಗರ್ಭ ಶರೀರ ವಿಜ್ಞಾನಂ ॥
ತತ್ರಪ್ರಥಮೇಮಾಸಿಕಲಲಂ ಜಾಯತೆ, ದ್ವಿತೀಯೇಶೀತೋ
ಷ್ಮಾನಿಲೈರಭಿಪಚ್ಯಮಾನಾನಾಂ ಮಹಾಭೂತಾನಾಂ ಸಂಘಾ
ತೊಘನಃ ಸಂಜಾಯತೆ, ಯದಿಪಿಂಡಃ ಪುಮಾನ್, ಸ್ತ್ರೀಚೇತ್
ಪೇಶೀ ನಪುಂಸಕಂಚೇದರ್ಬುದಮಿತಿ, ತೃತೀಯೇ ಹಸ್ತಪಾದ
ಶಿರಸಾಂಪಂಚಪಿಂಡಿಕಾನಿವರ್ತಂತೆ ಅಂಗಪ್ರತ್ಯಂಗವಿಭಾಗಶ್ಚ ಸೂ
ಕ್ಷ್ಮೋಭವತಿ, ಚತುರ್ಥೇಸರ್ವಾಂಗಪ್ರತ್ಯಂಗವಿಭಾಗಃ ಪ್ರವ್ಯ
ಕ್ತೊಭವತಿ,ಗರ್ಭಹೃದಯಪ್ರವ್ಯಕ್ತಭಾವಾತ್ ಚೇತನಾಧಾತು
ರಭಿವ್ಯಕ್ತೊಭವತಿ, ಕಸ್ಮಾತ್ ? ತತ್‌ಸ್ಥಾನತ್ವಾತ್ । ತಸ್ಮಾ
ದ್ಗರ್ಭಃಚತುರ್ಥೇಮಾಸಿ ಅಭಿಪ್ರಾಯಮಿಂದ್ರಿಯಾರ್ಥೇಷುಕ
ರೋತಿ, ॥ (ಸುಶ್ರುತ॥ ಶಾರೀರ ಅ ೩ ಸೂ ೧೪)

(೧) ಪ್ರಥಮ ತಿಂಗಳಿನಲ್ಲು ಶುಕ್ರ ಆರ್ತವಗಳ ಗುಂಪು ಹೆಪ್ಪುಗಟ್ಟಿದ ಮೊಸರಿನಂತೆ ಆಗುತ್ತದೆ. ಅದಕ್ಕೆ "ಕಲಲ" ವೆಂಬ ಹೆಸರು.

(೨) ಎರಡನೇ ತಿಂಗಳಿನಲ್ಲಿ ಶೀತ, ಗರ್ಭಾಶಯದಉಷ್ಣತೆ, ವಾಯು, ಇವುಗಳಿಂದ ಪಾಕವಾಗುತ್ತಿರಲು ಗರ್ಭದಲ್ಲಿಯ ಪಂಚಮಹಾಭೂತಗಳ ಮೆತ್ತಗಿರುವ (ಮೃದುವಾದ) ಗುಂಪು, ಘಟ್ಟಿಯಾದದ್ದಾಗುತ್ತದೆ. ಗಂಡು ಗರ್ಭವಿದ್ದರೆ ಪಿಂಡದಂತೆ (ಕಣಕದ ಮುದ್ದೆ) ಆಗುತ್ತದೆ. ಸ್ತ್ರೀ ಗರ್ಭ ವಿದ್ದರೆ ಚೀಲದ ಆಕೃತಿ (ಪೇಶೀ) ಯುಳ್ಳದ್ದಾಗುತ್ತದೆ. ನಪುಂಸಕವಿದ್ದರೆ ಬುರುಗಿನ ಗುಳ್ಳೆ (ಅರ್ಬುದ) ಯಂತೆ ಆಗುತ್ತದೆ. ದುಂಡಗಿರುವ (ವರ್ತುಲ) ಫಲದ ಅರ್ಧ ಭಾಗದಂತಿರುವದು.

ಭೋಜದರ್ಶನದಲ್ಲಿಯ ಮತವು

ಚತುರಸ್ರಾಭವೇತ್ ಪೇಶೀ, ವೃತ್ತಃ ಪಿಂಡೋಘನಃ ಸ್ಮೃತಃ ॥
ಶಾಲ್ಮಲೀಮುಕುಲಾಕಾರಂ ಅರ್ಬುದಂಪರಿಚಕ್ಷತೆ ॥
(ಸುಶ್ರುತ ಟೀಕಾ)

ಚೌಕಾಗಿ (ಚತುರಸ್ರವಾಗಿ) ಇರುವದು ಪೇಶಿಯು, ವರ್ತುಲಾಕಾರ ವಾಗಿಯೂ (ದುಂಡಗೆ) ಘಟ್ಟಿಯಾಗಿಯೂ ಇರುವದು ಪಿಂಡವೆಂದು ಹೇಳಲ್ಪ ಟ್ಟಿದೆ. ಬೂರುಗದ (ಶಾಲ್ಮಲೀ) ಮುಗ್ಗಿಯಂತೆ ಇರುವದು "ಅರ್ಬುದ"ವೆಂದು ಹೇಳುತ್ತಾರೆ.

(೩) ಮೂರನೇ ತಿಂಗಳಲ್ಲಿ ಕೈಕಾಲು ತಲೆ ಇವುಗಳ ಐದು ಪಿಂಡಿಕೆ ಗಳು ಗರ್ಭಕ್ಕೆ, ಉಂಟಾಗುತ್ತವೆ. ಅಂಗಪ್ರತ್ಯಂಗ ವಿಭಾಗಗಳು ಸೂಕ್ಷ್ಮ ವಾಗಿ ಉತ್ಪನ್ನವಾಗುತ್ತವೆ.

(೪) ನಾಲ್ಕನೇ ತಿಂಗಳಿನಲ್ಲಿ ಎಲ್ಲಾ ಅಂಗಪ್ರತ್ಯಂಗ ವಿಭಾಗಗಳು ಸ್ಥೂಲವಾಗಿ (ಪ್ರವ್ಯಕ್ತ) ದೃಷ್ಟಿಗೋಚರವಾಗುವಂತೆ ಇರುತ್ತವೆ ಈ ತಿಂಗ ಳದಲ್ಲಿ ಗರ್ಭದ ಹೃದಯವು ಉತ್ಪನ್ನವಾಗುತ್ತದೆ ಗರ್ಭಕ್ಕೆ ಹೃದಯ ವುಂಟಾಗಿರುವದರಿಂದ ಚೇತನಾಧಾತುವು ಕೂಡಾ ವ್ಯಕ್ತವಾಗುತ್ತದೆ. ಯಾಕಂದರೆ ಚೇತನಾಧಾತುವಿಗೆ ಹೃದಯವೇ ಸ್ಥಾನವಾಗಿರುವದು. ಆದ್ದ ರಿಂದ ನಾಲ್ಕನೇ ತಿಂಗಳಿನಲ್ಲಿ ಗರ್ಭವು ಇಂದ್ರಿಯಗಳಿಗೆ ಬೇಕಾದ ನಾನಾ ತರದ ವಿಷಯಗಳಲ್ಲಿ ಇಚ್ಛೆಯನ್ನು ಮಾಡುತ್ತದೆ. ಆದ್ದರಿಂದ ಎರಡು (ತನ್ನ ಮತ್ತು ಗರ್ಭದ) ಹೃದಯವುಳ್ಳವಳು ದೌಹೃದಿನೀ ಎಂದು ಹೇಳುತ್ತಾರೆ.

ಪಂಚಮೆಮನಃ ಪ್ರತಿಬುದ್ಧತರಂಭವತಿ, ಷಷ್ಠೆಬುದ್ಧಿಃ, ಸಪ್ತ ಮೆಸರ್ವಾಂಗಪ್ರತ್ಯಂಗವಿಭಾಗಃ ಪ್ರವ್ಯಕ್ತತರಃ, ಅಷ್ಟಮೆಸ್ಥಿ ರೀಭವತ್ಯೋಜಃ, ತತ್ರಜಾತಶ್ಚೇತ್ ನಜೀವೇತ್‌ನಿರೋಜ ಸ್ತ್ವಾತ್, ನೈರುತಭಾಗತ್ವಾಚ್ಚ, ತತೋಬಲಿಂ ಮಾಂಸೌದನ ಮುಸ್ಮೈ ದಾಪಯೇತ್, ನವಮು, ದಶಮೈಕಾದಶ, ದ್ವಾದಶಾ ನಾಮನ್ಯತಮಸ್ಮಿನ್ ಜಾಯತೆ, ಅತೊಽನ್ಯಥಾವಿಕಾರೀಭವತಿ॥

(ಸುಶ್ರುತ॥ ಶಾರೀರ॥ ಅ ೩ ಸೂ ೩೦)

(ಜ) ಐದನೇ ತಿಂಗಳಿನಲ್ಲಿ ಮನಸ್ಸು ಪೂರ್ಣತೆಗೆ ಬಂದು ಸುಖ ದುಃಖಗಳನ್ನು ಚನ್ನಾಗಿಗ್ರಹಿಸುವಷ್ಟುಪ್ರಬುದ್ಧವಾಗುತ್ತದೆ.

ಚರಕ ಮತವು:— ಈ ತಿಂಗಳಲ್ಲಿ ಎಲ್ಲಾ ತಿಂಗಳಕ್ಕಿಂತಲೂ ಹೆಚ್ಚಾಗಿ ಗರ್ಭಕ್ಕೆ ರಕ್ತ ಮತ್ತು ಮಾಂಸಗಳ ಬೆಳೆಯುವಿಕೆಯು ಆಗುತ್ತದೆ. ಆದ್ದರಿಂದ ಆಗ ಗರ್ಭಿಣಿಯ ವಿಶೇಷವಾಗಿ ಕೃಶಳಾಗುತ್ತಾಳೆ.

(೬) ಆರನೇ ತಿಂಗಳಿನಲ್ಲಿ ಬುದ್ಧಿಯು ಉತ್ಪನ್ನವಾಗುತ್ತದೆ.

ಚರಕ ಮತವು:-ಈ ತಿಂಗಳಿನಲ್ಲಿ ಗರ್ಭಕ್ಕೆ ಬಲವರ್ಣಗಳು ಧಾತುಗಳು ಪುಷ್ಟಿಯೂ ಆಗುತ್ತದೆ. ಆದ್ದರಿಂದ ಆಗ ಗರ್ಭಿಣಿಯು ವಿಶೇಷವಾಗಿ ಬಲ (ಶಕ್ತಿ) ವರ್ಣ (ಸಪ್ತಧಾತುಗಳ ಕಾಂತಿ) ಗಳು ಕಡಿಮೆಯಾಗಿ ದುರ್ಬಲಳು ಆಗುತ್ತಾಳೆ.

(೭) ಏಳನೇ ತಿಂಗಳಲ್ಲಿ ಗರ್ಭದ ಸರ್ವಾಂಗ ಪ್ರತ್ಯಂಗಗಳು ಎಲ್ಲ ವಿಧವಾದ ಶರೀರದ ಪೂರ್ಣತೆಯು ಆಗುತ್ತದೆ. ಇದರಿಂದ ಪ್ರಾಣವೂ ಸಹ ಪ್ರಬುದ್ಧವಾಗುತ್ತದೆಂದು ಹೇಳುವ ಕಾರಣವಿಲ್ಲ **"ಪ್ರವ್ಯಕ್ತತರಃ"** ಎಂದು ಹೇಳಿದ್ದರಿಂದ ಜೀವವೂ ಪೂರ್ಣ ಸ್ಥಿತಿಗೆ ಬಂದಿರುತ್ತದೆಂದು ಹೇಳಿದಂತಾಯಿತು

ಚರಕ ಮತ:— ಈ ತಿಂಗಳಲ್ಲಿ ಗರ್ಭವು ಎಲ್ಲಾ ರೀತಿಯಿಂದಲೂ ಅಭಿವೃದ್ಧಿ ಹೊಂದಿ ಪೂರ್ಣವಾಗಿರುತ್ತದೆ. ಆದ್ದರಿಂದ ಆಗ ಗರ್ಭಿಣಿಯು ಸರ್ವ ವಿಧದಿಂದಲೂ ದುರ್ಬಲಳಾಗಿ ಬಾಡಿದವಳಾಗುತ್ತಾಳೆ.

(೮) ಎಂಟನೇ ತಿಂಗಳಿನಲ್ಲಿ ಗರ್ಭದ ಓಜಸ್ಸು ಅಸ್ಥಿರವಾಗುತ್ತದೆ. ಆದ್ದರಿಂದ ಆಗ ಜನನವಾದರೆ ಬದುಕುವದಿಲ್ಲ. ಯಾಕಂದರೆ ಓಜಸ್ಸಿಲ್ಲದ್ದರಿಂಲೂ ನಿರ್ಋತಿ ಭಾಗ (ರಾಕ್ಷಸರ ಅಂಶ) ವಿರುವದರಿಂದಲೂ ಹೀಗಾಗುತ್ತದೆ.

ಕುಮಾರ ತಂತ್ರ:— ರುದ್ರನು ರಾಕ್ಷಸರಿಗೆ, ಗರ್ಭದಲ್ಲಿ ಮಾಸ ಪ್ರಕಾರ ವಿಭಾಗಿಸಿ ೮ನೇ ಮಾಸದಲ್ಲಿ ಭಾಗವನ್ನು ಕೊಟ್ಟಿದ್ದಾನೆ.

ಚರಕಮತವು:— ಎಂಟನೇತಿಂಗಳಿನಲ್ಲಿ ಓಜಸ್ಸು ಗರ್ಭದಿಂದಓಜಸ್ಸು ತಾಯಿಗೂ, ತಾಯಿಯಿಂದ ಗರ್ಭಕ್ಕೂ ಸಂಚರಿಸುತ್ತಿರುತ್ತದೆ. ಗರ್ಭದಲ್ಲಿ ಪೂರ್ಣವಾಗುವ ವರೆಗೂ ತಾಯಿಯ ಓಜಸ್ಸೇ ಗರ್ಭದ ಬೆಳವಣಿಗೆಯನ್ನು ಮಾಡುತ್ತದೆ. ಗರ್ಭಕ್ಕೆ ಓಜಸ್ಸುಂಟಾಗಿ ಪೂರ್ಣವಾದ ಮೇಲೆ ತಾಯಿಯ ಓಜಸ್ಸುಗರ್ಭದಲ್ಲಿಯೂ,ಗರ್ಭದಓಜಸ್ಸು ತಾಯಿಯಲ್ಲಿಯೂ,ಸಂಚರಿಸುತ್ತಿರುತ್ತದೆ. ಹೀಗೆ ಪುನಃಪುನಃ ತಾಯಿಯಿಂದ ಗರ್ಭಕ್ಕೂ ಗರ್ಭದಿಂದ ತಾಯಿಗೂ ಓಜಃ ಸಂಚಾರವಿರುವದರಿಂದ, ಗರ್ಭಿಣಿಯು ಒಮ್ಮೆ ಸಂತೋಷಿತಳೂ ಮತ್ತೊಂದು ಕ್ಷಣಕ್ಕೆ ಬಾಡಿದವಳೂ ಅಶಕ್ತಳೂ ಆಗುತ್ತಾಳೆ. ಇದರಂತೆ ಗರ್ಭವೂ ಸಹ ಆಗುತ್ತದೆ. ತಾಯಿಯ ಕಡೆಗೆ ಗರ್ಭದ ಓಜಸ್ಸು ಹೋದಾಗ ಜನನವಾದರೆ ತಾಯಿಗೇನು ಬಾಧೆಯಿಲ್ಲ: ಎಂಟರಲ್ಲಿ ಹುಟ್ಟಿದ ಗರ್ಭವು ಬಹುಶಃ ಬದುಕಲಾರದು.ತಾಯಿಯ ಓಜಸ್ಸು ಗರ್ಭದಲ್ಲಿದ್ದಾಗ ಜನನವಾದರೆ ತಾಯಿಗೆ ಬಾಧೆಯುಂಟು. (ಕಷ್ಟ) ಹೀಗೆಂದು ಅನ್ನುತ್ತಾರೆ. ಆದ್ದರಿಂದ ಎಂಟನೆ ತಿಂಗಳನ್ನು ಕುಶಲತೆಯಿಂದ ಲಕ್ಷಗೊಟ್ಟು ಎಣಿಸಿ ತಿಳಕೊಳ್ಳಬೇಕು. ಗರ್ಭಿಣಿ ಗೆವಮಾತ್ರ ನಿಶ್ಚಿತ ಎಂಟನೇ ತಿಂಗಳು ಇದು ಎನ್ನುವದನ್ನು ಹೇಳಬಾರದು. ಯಾಕಂದರೆ ಎಂಟನೇ ತಿಂಗಳನ್ನು ತಿಳಿಸಿದರೆ ಕಠಿಣದಿವಸವೆಂದು ಭಾವಿಸಿ ಗರ್ಭಿಣಿಯು ಚಿಂತೆಯಿಂದ ತನಗೂ ಗರ್ಭಕ್ಕೂ ಬಾಧೆಯನ್ನುಂಟುಮಾಡಿಕೊಳ್ಳಬಹುದು. ಆದ್ದರಿಂದ ಹೇಳಬಾರದೆಂದು ನಿಯಮವಿದೆ. ಈ ತಿಂಗಳಿನಲ್ಲಿ ಅನ್ನ ಮಾಂಸಗಳ ಬಲಿಯನ್ನು ಮಾಡಿ, ಗರ್ಭರಕ್ಷಣೆಯ ಸಲುವಾಗಿ, ನಿರ್ಋತಿಗೆ ಕೊಡಬೇಕೆಂದು ಸುಶ್ರುತರ ಮತವು.

(೯) ಒಂಭತ್ತನೇ ತಿಂಗಳು ಗರ್ಭಕ್ಕೆ ಪ್ರಸವ ಕಾಲವು. ತಂದೆ ತಾಯಿಗಳಿರುತ್ತಿರುವ, ಸಕಲ ಚರಾಚರ ಜೀವಿಗಳಿಗಾಧಾರವಾದ, ವಿಶ್ವ ನಿರ್ಮಾಣಕನ ಅಚಿಂತ್ಯ ಕೌಶಲ್ಯ ನಿದರ್ಶನವಾದ, ಜಗತ್ತಿನ (ಸ್ಥೂಲರೂಪ) ಸಂಸರ್ಗವನ್ನು ಗರ್ಭವು ಹೊಂದುವ ಸಮಯವು. ಒಂಭತ್ತು, ಹತ್ತು, ಹನ್ನೊಂದು, ಹನ್ನೆರಡು ತಿಂಗಳಲ್ಲಿಯೂ, ಯಾವದಾದರೊಂದು ತಿಂಗಳಿನಲ್ಲೆ ಯಾದರೂ, ಗರ್ಭ ಬೆಳವಣಿಗೆಗೆ ಅನುಗುಣವಾಗಿ ಪ್ರಸವವಾಗಬಹುದು. ಹನ್ನೆರಡು ತಿಂಗಳಿನ ನಂತರವಾದರೆ ಗರ್ಭದಲ್ಲಿಯ ವಿಕಾರವೆಂದು ತಿಳಿಯಬೇಕು.

ಚರಕ ಮತವು:— ಎಂಟನೇ ತಿಂಗಳಿನ ನಂತರ ಒಂದು ದಿನ ಕಳೆದರೂ ಪ್ರಸವ ದಿವಸ ಆರಂಭವಾಯಿತೆಂದು ತಿಳಿಯಬೇಕು. ಹತ್ತನೇ ತಿಂಗಳ ಮುಗಿಯುವ ವರೆಗೂ ಪ್ರಸವ ದಿನಗಳು. ಅನಂತರ ಗರ್ಭ ವಿಕೃತಿಯೆಂದು ಹೇಳುತ್ತಾರೆ. ಹನ್ನೊಂದು, ಹನ್ನೆರಡು ತಿಂಗಳಲ್ಲಿ ಪ್ರಸವವು ಸ್ವಲ್ಪ ದೋಷ ಕಾರಣವಿರುವದರಿಂದ ದೋಷ ಪಕ್ವವೆಂದೆಣಿಸಿ, ಹನ್ನೆರಡು ತಿಂಗಳಿನ ನಂತರ ಹೊಟ್ಟೆಯಲ್ಲಿ (ಗರ್ಭಾಶಯದಲ್ಲಿ) ಗರ್ಭವಿರುವದು ವಿಕೃತಿಯೆಂದು ನಿರ್ಣಯಿಸಿದ್ದಾರೆ.

೧೦. ಅಪರಾ ಉತ್ಪತ್ತಿ ಸ್ವರೂಪ

ಅಪರಾನಿರ್ಮಾಣಂ ಸ್ವರೂಪಂಚ ॥

ವ್ಯಪಗತ ಪಿಪಾಸಾಬುಭುಕ್ಷಸ್ತು ಖಲುಗರ್ಭಃ ಪರತಂತ್ರವೃತ್ತಿರ್ಮಾತರಮಾಶ್ರಿತ್ಯ ವರ್ತಯತಿ ಉಪಸ್ನೇಹೋಪಸ್ವೇದಾಭ್ಯಾಂಗರ್ಭಾಶಯೆ ಸದಸದ್ಭಾಂಗಾವಯವಃ॥ ತದನಂತರಂ ಹ್ಯಸ್ಯಕಶ್ಚಿತ್ಲೋಮ ಕೂಪಾಯನೈರುಪಸ್ನೇಹಃ ಕಶ್ಚಿತ್ನಾಭಿನಾಡ್ಯಯನೈಃ॥ ನಾಭ್ಯಾಂಹ್ಯಸ್ಯ ನಾಡೀಪ್ರಸಕ್ತಾನಾಡ್ಯಾಂಚಾಪರಾ ಅಪರಾಚಾಸ್ಯಮಾತುಃ ಪ್ರಸಕ್ತಾ ಹೃದಯೆ ಮಾತೃಹೃದಯಂತಾಂಅಪರಾಂ ಅಭಿ ಸಂಪ್ಲವತೆ ಸಿರಾಭಿಃ ಸತಸ್ಯ ರಸೊ ಬಲವರ್ಣಕರಃ ಸಂಪದ್ಯತೆ ಸಚಸರ್ವರಸವಾನಾಹಾರಃ॥

ಗರ್ಭಾಶಯದಲ್ಲಿ ಗರ್ಭವು ಪರತಂತ್ರವೃತ್ತಿಯುಳ್ಳದ್ದು. ಯಾಕಂದರೆ ತಾಯಿಯನ್ನು ಆಶ್ರಯಿಸಿಯೇ ಅದು ಬದುಕಬೇಕಾಗುತ್ತದೆ. ಹೀಗೆ ಪರಾಧೀನವಾದ ಗರ್ಭವು ಅಂಗಾವಯವ ಉತ್ಪನ್ನವಾಗದಿರುವ ಸಮಯದಲ್ಲಿ ಮತ್ತೂ ಅಂಗಾವಯವ ಉತ್ಪನ್ನವಾದ ಮೇಲೆ ಯಾವ ಪ್ರಕಾರ ಅಭಿವೃದ್ಧಿಯನ್ನೂ, ಬಲವರ್ಣ ರಕ್ಷಣೆಯನ್ನೂ ಹೇಗೆ ಯಾವ ರೀತಿಯಿಂದ ಹೊಂದುತ್ತದೆಂಬುವದನ್ನು ಹೇಳುತ್ತಾರೆ. ಗರ್ಭವು ಅಂಗಾವಯವ ಉತ್ಪನ್ನವಾಗದಿರುವಾಗ ಗರ್ಭಾಶಯಕ್ಕಂಟಿಕೊಂಡು ಆ ಗರ್ಭಾಶಯದಲ್ಲಿಯ ರಸ ಮೊದಲಾದ ಜೀವನ ದ್ರವ್ಯಗಳನ್ನು ಸೂಕ್ಷ್ಮ ಲೋಮ (ರೋಮ) ಛಿದ್ರದಂತಿರುವ ಗರ್ಭ ರಂಧ್ರಗಳಿಂದ ರಸ ಸತ್ವವನ್ನು ಗ್ರಹಿಸುತ್ತದೆ. ಗರ್ಭಾಶಯಕ್ಕೆ ಅಂಟಿಕೊಂಡ ತಾಯಿಯ, ರಸವಾಹಿನೀ ಸಿರಗಳಿಂದ ಗರ್ಭಾಶಯಕ್ಕೆ ಬಂದ, ರಸದ ಉಪಸ್ನೇಹವನ್ನು(ತನಸು) ಹೀರಿಕೊಂಡು ವೃದ್ಧಿಯಾಗುತ್ತದೆ. ಗರ್ಭಕ್ಕೆ ಅಂಗಾವಯವಗಳು ಉತ್ಪನ್ನವಾದ ಮೇಲೆ, ನಾಭಿನಾಲ (ಕೊಕ್ಕಳ ಹುರಿ) ಉಂಟಾಗುತ್ತದೆ. ನಾಭಿನಾಲದಲ್ಲಿ, ಅಪರಾ (ಗರ್ಭಪೋಷಕ ರಸವನ್ನು ಗ್ರಹಿಸುವ ಪರದೆ) ಅಂಟಿಕೊಳ್ಳುವದು. ಅಪರಾ ತಾಯಿಯ ಹೃದಯಕ್ಕೆ ಅಂಟಿಕೊಂಡಿರುವದು. ತಾಯಿಯ ಹೃದಯವು ರಸವಾಹಿನೀ ಸಿರಗಳಿಂದ ಅಪರಾವನ್ನು ಪೋಷಿಸುತ್ತದೆ. ಅಪರಾಕ್ಕೆ ರಸವಾಹಿನೀ, ಸಿರಗಳು ರಸವನ್ನು ಕೊಟ್ಟು (ತುಂಬಿಸಿ) ಪೋಷಿಸುತ್ತವೆಂಬರ್ಥವು. ಹೀಗೆ ರಸಾದಿಗಳನ್ನು ಸಂಗ್ರಹಿಸಿದ ಅಪರಾದಲ್ಲಿಯ ರಸ ಸತ್ವಗಳನ್ನು ನಾಭಿನಾಲ ಮಾರ್ಗಗಳಿಂದ ಗರ್ಭವು ಹೀರಿಕೊಂಡು, ಬೆಳೆಯುತ್ತದೆ. ಆಹಾರ ರಸ ಹೀರಿಕೊಳ್ಳುವ ನಾಭಿನಾಲಾದಿ ಸಾಧನಗಳುತ್ಪನ್ನವಾಗಿರುವದರಿಂದಲೂ, ಅಂಗೋಪಾಂಗ ಸ್ಥಿತಿಯುಳ್ಳ ಗರ್ಭವು ದೊಡ್ಡದಾಗಿರುವದರಿಂದ ಹೆಚ್ಚಿಗೆ ಪೋಷಣೆ ಬೇಕಾಗುತ್ತದೆ. ಸಾಧನಗಳಿರುವದರಿಂದ ರಸಾದಿ ಸಂಗ್ರಹಗಳಿಂದ ಗರ್ಭವು ಅಭಿವೃದ್ಧಿ ಹೊಂದಿ, ಬಲವರ್ಣ, ಯುಕ್ತವಾಗುವದು. ಗರ್ಭ ಪೋಷಣೆಗೆ ಎಲ್ಲ ರಸಯುಕ್ತ ಆಹಾರವೆಂದರೆ, ಗರ್ಭಾಭಿವೃದ್ಧಿ ಮಾಡುವ ಬಲವರ್ಣಕರವಾದ ರಸವು.

ಅಪರಾ ನಿರ್ಮಾಣ ವಿಷಯದಲ್ಲಿ ಸುಶ್ರುತ ಮತವು

ಗೃಹೀತ ಗರ್ಭಾಣಾಮಾರ್ತವವಹಾನಾಂ ಸ್ರೋತಸಾಂ ವ

ತ್ಕಾನಿ ಅವರುಂಧ್ಯಂತೆ ಗರ್ಭಿಣಿ ತಸ್ಮಾತ್ ಗೃಹೀತ ಗರ್ಭಾ ಣಾಮಾರ್ತವಂ ನದೃಶ್ಯತೆ। ತತಃ ತದಧಃ ಪ್ರತಿಹತಮೂರ್ಧ್ವ ಮಾಗತಮಪರಂ ಚೋಪಚೀಯಮಾನಂ ಅಪರೇತ್ಯಭಿಧೀ ಯತೆ, ಶೇಷಂಚೋರ್ಧ್ವತರಮಾಗತಂ ಪಯೋಧರಾವಭಿಪ್ರತಿ ಪದ್ಯತೆ, ತಸ್ಮಾದ್ಗರ್ಭಿಣ್ಯಃ ಪಿನೋನ್ನತಪಯೋಧರಾಭವಂತಿ॥

(ಸುಶ್ರುತ ॥ ಶಾರೀರ ॥ ಅ ೪ ಸೂ ೨೪)

ಗರ್ಭಿಣಿಯರ ಆರ್ತವ ವಾಹಿನೀ ಸ್ರೋತೋ ಮಾರ್ಗಗಳು ಗರ್ಭದಿಂದ ಅಡ್ಡಿಮಾಡಲ್ಪಡುತ್ತವೆ. ಆದ್ದರಿಂದ ಗರ್ಭ ಧರಿಸಿದವರಿಗೆ ಆರ್ತವದರ್ಶನ (ಮುಟ್ಟು) ಆಗುವದಿಲ್ಲ. ಇದು ಬಹುಶಃ ಮುಖ್ಯ ನಿಯಮ, ಕ್ವಚಿತ್ ಗರ್ಭಿಣೀ ಸ್ತ್ರೀಯರಿಗೆ ರಜೋದರ್ಶನ (ಮಾಸಿಕ) ವಾಗುವದುಂಟು. ಅನಂತರ ಕೆಳಗೆ ಗರ್ಭದಿಂದ ಅಡ್ಡಿಯಾಗಿರೋಣದರಿಂದ "ಆರ್ತವ"ವು ಮೇಲಕ್ಕೇರಿ ಗರ್ಭಾಶಯಕ್ಕಂಟಿಕೊಂಡು ಅಡ್ಡಿಯಾಗಿ "ಅಪರಾ" ಎಂದು ಹೇಳಿಸಿ ಕೊಳ್ಳಲ್ಪಡುತ್ತದೆ. ಇನ್ನುಳಿದ ಆರ್ತವವು ಗರ್ಭಾಶಯವನ್ನು ದಾಟಿ ಮೇಲೆ ಹೋಗಿ, ಸ್ತನಕ್ಕೆ ಸೇರುತ್ತದೆ. ಆದ್ದರಿಂದಲೇ ಗರ್ಭಿಣಿಯರ ಸ್ತನಗಳು ದೊಡ್ಡದಾದವುಗಳೂ ಎದ್ದು ನಿಂತಂಥವುಗಳೂ ಇರುತ್ತವೆ.

ಅಪರಾ ಪರಿಚಯವು

ಜರಾಯು, ಅಪರಾ, ಅಮರಾ, ಅಮಲಾ ಇತ್ಯಾದಿ ಹೆಸರುಗಳು ಇರುತ್ತವೆ. "ಅಪರಾ" ಅಂದರೆ ಗರ್ಭ ಪರೆದೆಯು, ಜರಾಯುವೆಂಬ ಹೆಸರು. ಇದು ಗರ್ಭಾಶಯದ ಒಳಗಡೆ ಗರ್ಭದ ಸುತ್ತಲೂ ಆವರಿಸಿದ್ದು, ಶಿಶು ಜನನ ವಾದ ನಂತರ ಹೊರಗೆ ಬರುತ್ತದೆ. ಇದಕ್ಕೆಅಪರಾಪಾತನವೆಂಬ ಹೆಸರು. ಕನ್ನಡದಲ್ಲಿ ಮಾಸ ಬೀಳುವದು, ಎಂದು ಹೇಳುವ ವಾಡಿಕೆಯಿದೆ.

ಅಪರಾ ವಿಷಯದಲ್ಲಿ ಭೋಜನ ಮತವು

ಗರ್ಭೋರುಣದ್ಧಿಸ್ರೋತಾಂಸಿರಸರಕ್ತವಹಾನಿವೈ ॥
ರಕ್ತಾಜ್ಜರಾಯುರ್ಭವತಿನಾಡೀಚೈವ ರಸಾತ್ಮಿಕಾ ॥೧॥

ಸಾನಾಡೀಗರ್ಭಮಾಪ್ನೋತಿತಯಾಗರ್ಭಸ್ಯವರ್ತನಂ ॥
ಯದ್ಯದಶ್ನಾತಿಮಾತಾಸ್ಯಭೋಜನಂ ಹಿಚತುರ್ವಿಧಮ್ ॥೨॥
ತಸ್ಮಾದನ್ನಾದ್ರಸೀಭೂತಂ ವೀರ್ಯಂತ್ರೇಧಾಪ್ರವರ್ತತೆ ॥
ಭಾಗಃ ಶರೀರಂ ಪುಷ್ಣಾತಿ, ಸ್ತನ್ಯಂಭಾಗೇನವರ್ಧತೆ ॥೩॥
ಗರ್ಭಃ ಪುಷ್ಯತಿಭಾಗೇನವರ್ಧತೇಚಯಥಾಕ್ರಮಂ ॥
ಗರ್ಭಂ ಕುಲ್ಯೇವಕೇದಾರಂ ನಾಡೀಪ್ರೇಣಾತಿತರ್ಪಿತಾ ॥೪॥
(ಸುಶ್ರುತ ಟೀಕಾ॥ ಶಾರೀರ॥ ಅ ೩ ಸೂ ೩೨)

ಗರ್ಭವು, ರಸ,ರಕ್ತಗಳನ್ನು ಒಯ್ಯುವಸ್ರೋತಸ್ಸುಗಳನ್ನು ಅಡ್ಡಿಮಾಡುತ್ತದೆ. ರಕ್ತದಿಂದ ಜರಾಯು (ಅಪರಾ) ಉಂಟಾಗುತ್ತದೆ. ರಸದಿಂದ ಗರ್ಭಕ್ಕೆ ನಾಡಿಯು (ಹೊಕ್ಕಳ ಹುರಿ) ಉತ್ಪನ್ನವಾಗುವದು. ಆ ನಾಡಿಯು ಗರ್ಭವನ್ನು ಪೋಷಿಸುತ್ತದೆ ತಾಯಿಯ ಆಹಾರ ರಸದಿಂದುಂಟಾದ ಸತ್ವವು ಮೂರು ಭಾಗವಾಗಿ ಹೆಂಚಲ್ಪಡುತ್ತವೆ. ಒಂದುಭಾಗವು ಗರ್ಭಿಣಿಯ ಶರೀರವನ್ನು ಪೋಷಿಸುತ್ತದೆ. ಎರಡನೇ ಭಾಗವು ಸ್ತನಗಳಲ್ಲಿ ಹಾಲನ್ನುಂಟುಮಾಡುತ್ತದೆ. ಮೂರನೇ ಭಾಗವು ಗರ್ಭವನ್ನು ಬೆಳೆಸುತ್ತದೆ ಗರ್ಭವು ನಾಡಿಯಿಂದ (ನಾಭಿನಾಲ) ಆಹಾರ ರಸಸತ್ವವನ್ನು ಹೀರಿ ಬೆಳೆಯುವದು. **ಹ್ಯಾಗಂದರೆ:—** ಹೊಲವು ಕಾಲುವೆಯಿಂದ ನೀರನ್ನು ಗ್ರಹಿಸಿ ಅಭಿವೃದ್ಧಿಯಾಗುವದೋ ಅದರಂತೆ, ಗರ್ಭವೂ, ವೃದ್ಧಿಯಾಗುವದು.

(೧೧) ಗರ್ಭ ಪೋಷಣ ಕ್ರಮವು

ಮಾತುಸ್ತುಖಲುರಸವಹಾಯಾಂನಾಡ್ಯಾಂ ಗರ್ಭನಾಭಿನಾಡೀ ಪ್ರತಿಬದ್ಧಾ, ಸಾಸ್ಯಮಾತುರಾಹಾರರಸವೀರ್ಯಮುಭಿವಹತಿ| ತೇನೋಪಸ್ನೇಹೇನಾಸ್ಯಾಭಿವೃದ್ಧಿರ್ಭವತಿ| ಅಸಂಜಾತಾಂಗಪ್ರತ್ಯಂಗಪ್ರವಿಭಾಗವಾನಿಷೇಕಾತ್ ಪ್ರಭೃತಿ ಸರ್ವಶರೀರಾವಯವಾನುಸಾರಿಣೇನಾಂ ರಸವಹಾನಾಂ ತಿರ್ಯಗ್ಗತಾನಾಂ ಧಮನೀನಾಮುಪಸ್ನೇಹೋಜೀವಯತಿ ॥
(ಸುಶ್ರುತ॥ ಶಾರೀರ॥ ಅ ೨ ಸೂ ೩೧)

ತಾಯಿಯ ರಸವಾಹಿನೀ ನಾಡಿಯಲ್ಲಿ, ಗರ್ಭದ ನಾಭಿಯ ನಾಡಿಯು ಅಂಟಿಕೊಂಡಿರುತ್ತದೆ. ಅದು (ನಾಡಿಯು) ಗರ್ಭಕ್ಕೆ ತಾಯಿಯ ಆಹಾರ ರಸಸತ್ವವನ್ನು ಒಯ್ದು ಮುಟ್ಟಿಸುತ್ತದೆ. ಈ ರಸ ಸತ್ವದಿಂದ ಗರ್ಭವು ಬೆಳೆಯುತ್ತದೆ. ಅಂಗ ಪ್ರತ್ಯಂಗಗಳುಂಟಾದ ಮೇಲೆ, ಗರ್ಭನಾಭಿನಾಡಿಯುಂಟಾಗುವದು. ಆಗ ನಾಡಿಯಿಂದ ಗರ್ಭ ಪೋಷಣೆಯಾಗುತ್ತದೆ. ಆದರೆ ನಾಭಿನಾಡಿ (ಹೊಕ್ಕಳಹುರಿ) ಉತ್ಪನ್ನವಾಗದ ಮೊದಲು ಗರ್ಭದ ಗತಿಯೇನು? ಹ್ಯಾಗೆ ಬೆಳೆಯುತ್ತದೆ. ಎನ್ನುವ ವಿಚಾರ ಉಂಟಾಗುವದು.

ಆದ್ದರಿಂದ ಅಂಗಪ್ರತ್ಯಂಗೋತ್ಪತ್ತಿಯ ಮೊದಲಿನ ಪೋಷಣ ಕ್ರಮವನ್ನು ಹೇಳುತ್ತಾರೆ:— ಗರ್ಭಾದಾನ ಮೊದಲುಗೊಂಡು, ಅಂಗಾವಯವಗಳುತ್ಪನ್ನವಾಗುವ ವರೆಗೆ, ಸರ್ವ ಶರೀರದಲ್ಲಿಪಸರಿಸಿದ ರಸವಾಹಿಗಳಾದ ಗರ್ಭಾಶಯದ ಸುತ್ತಲಿರುವಂಧ ಧಮನಿಗಳ ಉಪಸ್ನೇಹೆ (ರಸಸತ್ವ) ವು, ಗರ್ಭವನ್ನು ಪೋಷಿಸುತ್ತದೆ.

ಉದಾ:— ಕೆರೆ ಸರೋವರಗಳಲ್ಲಿ ನೀರಿರುವದರಿಂವ ಅವುಗಳ ದಂಡೆಯ (ತೀರದ) ಸುತ್ತಲಿರುವ ಗಿಡ ಮರಗಳು ಪ್ರತ್ಯಕ್ಷ ನೀರಿಲ್ಲದಿದ್ದರೂ, ಸರೋವರದ ನೀರಿನ ಸತ್ವದಿಂದ (ತಂಪಿನಿಂದ) ಹೇಗೆ ಪ್ರಫುಲ್ಲಿತವಾಗಿ ಬೆಳೆಯುತ್ತವೆಯೋ ಅದರಂತೆ, ಗರ್ಭಾಶಯದ ಸುತ್ತಲಿರುವ ರಸವಾಹಿನೀ ಧಮನಿಗಳ ಸತ್ವದಿಂದ, ಗರ್ಭವು ಬೆಳೆಯುತ್ತದೆಂದು ತಿಳಿಯಬೇಕು.

ಸೂಚನೆ:— ಆಹಾರ ರಸದಿಂದ ಯಾವ ಯಾವ ಕ್ರಿಯೆಯುಳ್ಳ, ಗರ್ಭಾಶಯಕ್ಕೆ ಸಂಬದ್ಧ ಅಂಗಗಳಿಂದ, ಹ್ಯಾಗೆ ಗರ್ಭಪೋಷಣೆಯಾಗುವದೆಂದು ಅಂತರ್ಗತ ಕ್ರಮಗಳನ್ನು ಹೇಳಿ, ಆಹಾರ ವಿಹಾರ ವಿಚಾರಾದಿ ಬಹಿರ್ಗತವಾದ ಗರ್ಭಪೋಷಣ ಕ್ರಮಗಳನ್ನು ಹೇಳುತ್ತಾರೆ:---

ಗರ್ಭಪೋಷಣೆಗೆ ಯೋಗ್ಯವಾದ ಆಹಾರ ವಿಹಾರ ವಿಧಿಯು

**ಗರ್ಭಿಣೀ ಪ್ರಥಮದಿವಸಾತ್ ಪ್ರಭೃತಿನಿತ್ಯಂ ಪ್ರಹೃಷ್ಟಾಶುಚ್ಯ
ಲಂಕೃತಾ ಶುಕ್ಲವಸನಾ ಶಾಂತಿಮಂಗಲದೇವತಾಬ್ರಾಹ್ಮಣ
ಗುರುಹರಾ ಚ ಭವೇತ್, ಮಲಿನಪಿಕೃತಹೀನ ಗಾತ್ರಾಣಿನ**

ಸ್ಪೃಶೇತ್, ದುರ್ಗಂಧ ದುರ್ದರ್ಶನಾನಿಪರಿಹರೇತ್, ಉದ್ವೇ
ಜನೀಯಾಶ್ಚ ಕಥಾಃ, ಶುಷ್ಕಂ ಪರ್ಯುಷಿತಂ ಕುಥಿತಂ ಕ್ಲಿನ್ನಂ
ಚಾನ್ನಂ ನೋಪಭುಂಜೀತ, ಬಹಿರ್ನಿಷ್ಕ್ರಮಣಂ ಶೂನ್ಯಾಗಾರ
ಚೈತ್ಯಸ್ಮಶಾನ ವೃಕ್ಷಾಶ್ರಯಾನ್ ಕ್ರೋಧಮಯಶಸ್ಕರಾಂಶ್ಚ,
ಭಾವಾನುಚ್ಚೈರ್ಭಾಷ್ಯಾದಿಕಂ ಚ ಪರಿಹರೇದ್ಯಾನಿ ಚ ಗರ್ಭಂ
ವ್ಯಾಪಾದಯಂತಿ, ನಚಾಭೀಕ್ಷ್ಣಂ ತೈಲಾಭ್ಯಂಗೋತ್ಸಾದ
ನಾದೀನಿಸೇವೇತ, ನಚಾಯಾಸಯೇಚ್ಛರೀರಂ, ಪೂರ್ವೋಕ್ತಾ
ವಿಚ ಪರಿಹರೇತ್ ಶಯನಾಸನಂ ಮೃದ್ವಾಸ್ತೀರ್ಣಂ ನಾತ್ಯು
ಚ್ಚಮಪಾಶ್ರಯೋಪೇತಮಸಂಬಾ ಧಂ ಚ ವಿದಧ್ಯಾತ್

॥ (ಸುಶ್ರುತ ॥ ಶಾರೀರ ॥ ೮ ಸೂ ೩)

ಗರ್ಭಿಣಿಯು ಗರ್ಭಧರಿಸಿದಂದಿನಿಂದ ಮೊದಲುಗೊಂಡು.—
ಸದಾ ಸಂತೋಷಿತಳಾಗಿಯೂ, ಶುಚಿಯಾಗಿಯೂ, ಅಲಂಕಾರ ಧರಿಸಿ ಶ್ವೇತ ವಸ್ತ್ರವನ್ನುಟ್ಟು, ಶಾಂತಿ, ಮಂಗಲಕಾರ್ಯ, ದೇವರು, ಬ್ರಾಹ್ಮಣರು, ವಿದ್ಯಾ ಗುರುಗಳು, ಇವರಲ್ಲಿ ಆದರವುಳ್ಳವಳಾಗಬೇಕು. ಮಲಿನ (ಹೊಲಸಾದದ್ದು) ಕೆಟ್ಟದ್ದು, ವಿಕಾರವುಳ್ಳ, ಹೀನವಾದ, ಪದಾರ್ಥಗಳ ಸ್ಪರ್ಶವನ್ನು ಮಾಡ ಬಾರದು. ಮಲಿನಾದಿ ಶರೀರವುಳ್ಳವರನ್ನೂ ಸ್ಪರ್ಶಿಸಬಾರದು. ದುರ್ಗಂಧ ವನ್ನೂ, ನೋಡಲಿಕ್ಕೆ ಅಸಹ್ಯವಾದವುಗಳನ್ನೂ, ಬಿಡಬೇಕು. ಬಹುಹರ್ಷ, ಚಿಂತೆ, ಭಯ, ಹೇಸಿಗೆಬರುವಂಥ, ಉದ್ವೇಗವನ್ನುಂಟುಮಾಡುವ ಕಥೆಗಳನ್ನು ಕೇಳಬಾರದು. ಒಣಗಿದ (ನೀರಸವಾದ), ಹಳಸಿದ (ಪರ್ಯುಷಿತ), ಕೊಳೆತ, ನೀರೊಡೆದ ಅನ್ನವನ್ನು ಊಟಮಾಡಬಾರದು. ಬಹಳ ದೂರ ಅಡ್ಡಾಡಲು ಹೋಗಬಾರದು ಹೊರಗೆ ಸದಾ ಗಾಳಿಯಲ್ಲಿಯೇ ಇರಬಾರದು. ಹಾಳು ಮನೆ, ಪಿಶಾಚಿಗಳಿರುವ ಮರ, ಸ್ಮಶಾನ, ಮಹಾವೃಕ್ಷಗಳನ್ನಾಶ್ರಯಿಸುವದು, ಸಿಟ್ಟು, ಅಯೋಗ್ಯವಾದವುಗಳು, ಒದರಿ ಮಾತಾಡುವದು, ಒದರಿಕೊಳ್ಳು ವದು, ಇತ್ಯಾದಿಗಳನ್ನೂ, ಗರ್ಭಿಣಿಯರು ಗರ್ಭಕ್ಕೆದುಃಖದಾಯಕವಿರುವವೋ ಅವೆಲ್ಲವುಗಳನ್ನು ಬಿಡಬೇಕು. ಬಹಳ ತಂಪಾಗವಂತೆ ತೈಲಅಭ್ಯಂಗವನ್ನೂ ಮೈಯನ್ನು ಒತ್ತಿ ತಿಕ್ಕುವದನ್ನೂ ವರ್ಜಿಸಬೇಕು. ಶರೀರಕ್ಕೆ ಬಹಳ ಶ್ರವ'

ಕೊಡಬಾರದು. ಪೂರ್ವೋಕ್ತವರ್ಜ್ಯವಾದವುಗಳನ್ನು ತ್ಯಜಿಸಬೇಕು. ಮಲ
ತಕ್ಕ ಕೂಡ್ರುವ ಆಸನವು ಮೃದುವಾದದ್ದೂ ಬಹಳ ಎತ್ತರವಿಲ್ಲದ್ದೂ ಹಿಡಿ
ಮೇಲೆಹತ್ತಲುಆಶ್ರಯವಿದ್ದ ವ ಂಚಮೊದಲಾದ, ಸಂದರ್ಭದಲ್ಲಿಲ್ಲದ ಯಾ
ರೀತಿಯಿಂದಲೂ ಬಾಧಕವಲ್ಲದ್ದನ್ನೇ ಯೋಜಿಸಬೇಕು. ಈಮೊದಲುಗರ್ಭಪ
ತಕವರ್ಜ್ಯವಾದವುಗಳನ್ನು ಹೇಳಿದರೂ ಪುನಃವಿಸ್ತಾರ ವಿವರಣೆ ಮಾಡಿದ್ದಾ ರೆ

ಪ್ರಥಮಾದಿವಾಸ ಕ್ರಮದಿಂದ ಪೋಷಕ ಆಹಾರ ಉಪಚಾರಗಳ

**ಹೃದ್ಯಂ ದ್ರವಮಧುರಪ್ರಾಯಂ ಸ್ನಿಗ್ಧಂದೀಪನೀಯಸಂಸೃತಂ
ಚ ಭೋಜನಂ ಭೋಜಯೇತ್, ಸಾವಮಾನ್ಯಮೇತತ್ ಆಪ್ರಸ
ವಾತ್ ॥** (ಸುಶ್ರುತ॥ ಶಾರೀರ॥ ಅ ೧೦ ಸೂ ೬)

ಸಾತ್ವಿಕ, ರುಚಿಕರವಾದ, (ಹೃದ್ಯ) ರಸಯುಕ್ತವೂ, ಮಧುರವೂ
ಪೌಷ್ಟಿಕವೂ (ಸ್ನಿಗ್ಧ) ಆದ, ಜಡವಲ್ಲದ ಸೌಮ್ಯವಾಗಿ ಸಹಜ ಪಚನವಾಗುಃ
ಆಹಾರವನ್ನು, ಯೋಗ್ಯ ರೀತಿಯಿಂದ ಪರಿಷ್ಕೃತವಾಗಿ ತಯಾರಿಸಿ ಯೋಗ್ಯ
ಕಾಲದಲ್ಲಿ, (ಸಮಯ ಮೀರದೆ) ಆಹಾರ ವ್ಯವಸ್ಥೆಯನ್ನಿಡಬೇಕು.
ಗರ್ಭಿಣಿಯರು, ಹಡೆಯುವ ಪರ್ಯಂತವೂ, ಸಾಮಾನ್ಯವಾಗಿ ಆಹಾ
ನಿಯಮವು ಇದರಂತೆ ಇರಬೇಕು. ವಿಹಾರವನ್ನು (ಕಾರ್ಯಕ್ರಮ) ನಿಯ
ಮದಂತೆ ವಿಧಿಸಿ ಆಹಾರಾದಿಗಳ ನಿಯಮನ ಮಾಡಿ ಮುಂದೆ ಪ್ರಥಮಾದಿ
ತಿಂಗಳಲ್ಲಿಯ ವಿಶೇಷ ಅನುಪಾನವನ್ನು ವಿವರಿಸುತ್ತಾರೆ:–

**ವಿಶೇಷತಸ್ತು ಗರ್ಭಿಣೀಪ್ರಥಮದ್ವಿತೀಯೆತೃತೀಯಮಾಸೇಷು,
ಮಧುರ ಶೀತದ್ರವಪ್ರಾಯಮಾಹಾರಮುಪಸೇವೇತ, ವಿಶೇಷ
ತಸ್ತು ತೃತೀಯೇ ಷಷ್ಟಿಕೌದನಂ ಪಯಸಾಭೋಜಯೇತ್,
ಚತುರ್ಥೆದಧ್ನಾ, ಪಂಚಮೆಪಯಸಾ, ಷಷ್ಠೆ ಸರ್ಪಿಷೇತ್ಯೇಕೆ,
ಚತುರ್ಥೆಪಯೋನವನೀತಸಂಸೃಷ್ಟಮಾಹಾರಯೇತ್ ಜಾಂಗ
ಲಮಾಂಸಸಹಿತಂ ಹೃದ್ಯಮನ್ನಂಚಭೋಜಯೇತ್, ಪಂಚಮೆ
ಕ್ಷೀರಸರ್ಪಿಃ ಸಂಸೃಷ್ಟಂ, ಷಷ್ಠೆಶ್ವದಂಷ್ಟ್ರಾಸಿದ್ಧಸ್ಯಸರ್ಪಿಷೋ**

ಮಾತ್ರಾಂಪಾಯಯೇತ್, ಯವಾಗೂಂವಾ, ಸಪ್ತಮೆಸರ್ಪಿಃ
ಪೃಥಕ್ ಪಣ್ಯಾದಿಸಿದ್ಧಂ ಏವಂ ಆಪ್ಯಾಯತೆಗರ್ಭಃ ॥
(ಸುಶ್ರುತ॥ ಶಾರೀರ॥ ಅ ೧೦ ಸೂ ೪)

॥೧॥ **ಒಂದು ಎರಡು ಮೂರನೇ ತಿಂಗಳುಗಳಲ್ಲಿ** ಗರ್ಭಿಣಿಯು ಮಧುರ, ಶೀತ, ದ್ರವಯುಕ್ತವಾದ ಆಹಾರವನ್ನು ಸೇವಿಸಬೇಕು. ವಿಶೇಷವಾಗಿ, ೬೦ ದಿನಕ್ಕೆ ಬೆಳೆಯುವ ಅಕ್ಕಿಯಅನ್ನವನ್ನು ಹಾಲಿನ ಸಂಗಡ ಊಟ ಮಾಡಬೇಕು.

ಚರಕ ಮತವು:— ಮೊದಲನೇ ತಿಂಗಳಿನಲ್ಲಿ ಹಿತಕರ (ಸಾತ್ಮ್ಯ) ಆಹಾರವನ್ನು ಪ್ರಾತಃ ಸಾಯಂಕಾಲಗಳಲ್ಲಿ ಉಪಯೋಗಿಸಬೇಕು. ಹಾಲಿಗೆ ಏನನ್ನೂ ಕೂಡಿಸದೆ, ಸ್ವಲ್ಪ, ಸ್ವಲ್ಪ, ಕಾದಾರಿತಣ್ಣಗಾದದ್ದನ್ನು, ಕಾಲಕ್ಕನುಗುಣವಾಗಿ, (ಇಚ್ಛಾನುಸಾರ) ಸೇವಿಸಬೇಕು.

॥೨॥ **ಎರಡನೇ ತಿಂಗಳಿನಲ್ಲಿ** ಆಹಾರವು ಮೊದಲನೇ ತಿಂಗಳಿನಂತೆಯಿರುವದು. ಹಾಲನ್ನುಮಧುರವಾದಔಷಧಗಳಿಂದಸಿದ್ಧಮಾಡಿ (ಸಂಸ್ಕರಿಸಿ) ಕುಡಿಯಬೇಕು.

॥೩॥ **ಮೂರನೇ ತಿಂಗಳಿನಲ್ಲಿ** ಆಹಾರವು ಹಿಂದಿನಂತೆ, ಹಾಲಿನಲ್ಲಿ, ಜೇನುತುಪ್ಪ ತುಪ್ಪಗಳನ್ನು ಸಮ ಪ್ರಮಾಣವಾಗದಂತೆ ಕೂಡಿಸಿ ಹಾಲನ್ನು ಕುಡಿಯಬೇಕು.

॥೪॥ **ನಾಲ್ಕನೇ ತಿಂಗಳಿನಲ್ಲಿ** ಮೊಸರನ್ನವು, ಮತ್ತು ಹಾಲು, ಬೆಣ್ಣೆ ಮೊದಲಾದವುಗಳಿಂದ ಯುಕ್ತವಾದ ಮಧುರಸ್ನಿಗ್ಧಾಹಾರವನ್ನು ತಕ್ಕೊಳ್ಳಬೇಕು. ಮಾಂಸಾಹಾರಿಗಳಿದ್ದರೆ, ಬೈಲು ದೇಶದಲ್ಲಿಯ ಪ್ರಾಣಿಗಳ ಮಾಂಸವನ್ನುಪಯೋಗಿಸಬಹುದು.

॥೫॥ **ಐದನೇ ತಿಂಗಳಿನಲ್ಲಿ,** ಹಾಲು ಅನ್ನವು, ಮತ್ತು ಹಾಲು, ತುಪ್ಪಯುಕ್ತವಾದ ಆಹಾರವನ್ನು ತಕ್ಕೊಳ್ಳಬೇಕು. ಅಥವಾ ಹಾಲಿನಲ್ಲಿ ತುಪ್ಪವನ್ನು ಕೂಡಿಸಿ ಸಂಸ್ಕರಿಸಿ ಕುಡಿಯಬೇಕು

॥೬॥ **ಆರನೇ ತಿಂಗಳಿನಲ್ಲಿ,** ತುಪ್ಪಾ ಅನ್ನ, ಗೋಕ್ಷುರ (ನೆಗ್ಗಿಲ ಮುಳ್ಳು) ದಿಂದ ಸಿದ್ಧ ಮಾಡಿದ ತುಪ್ಪದ ಮಾತ್ರಾ (ಪ್ರಮಾಣಯುಕ್ತ) ನುಸಾರ ಕುಡಿಸಬೇಕು. ಅಥವಾ ಈ ತುಪ್ಪವನ್ನಾಗಲೀ ಕೂಡಿಸಿ, ಇಲ್ಲವೇ ಹಾಗೇ ಯವಾಗೂ (ಗಂಜಿ) ಪಾನ ಮಾಡಿಸಬೇಕು.

ಚರಕ ಮತವು:— ಮಧುರ ಔಷಧಯುಕ್ತವಾದ ಹಾಲು ತುಪ್ಪ ವನ್ನುಪಯೋಗಿಸಬೇಕು. ಏಳನೇ ತಿಂಗಳಿನಲ್ಲಿಯೂ ಇವರಂತೆ ವರ್ತಿಸ ಬೇಕೆಂದು ಚರಕಾಚಾರ್ಯರ ಮತವು

॥೭॥ **ಏಳನೇ ತಿಂಗಳಲ್ಲಿ,** ಪೃಥಕ್ ಪರ್ಣಿ, (ಮೂರಿಲೆ ಹೊನ್ನೆ) ಯಿಂದ ಸಿದ್ಧವಾದ ತುಪ್ಪವನ್ನುಪಯೋಗಿಸಬೇಕು. ಇದರಿಂದ ಗರ್ಭವು ಪೋಷಿತವಾಗಿ ವೃದ್ಧಿ ಹೊಂದುತ್ತದೆ.

ಸೂಚನೆ:— ಏಳನೇ ತಿಂಗಳಿನಲ್ಲಿ ಆಹಾರವನ್ನು ಹೇಳಲಿಲ್ಲವಾದ್ದ ರಿಂದ ವಿಶೇಷ ನಿಯಮವಿಲ್ಲೆಂದು ತಿಳಿದು, ಮೊದಲು ಸಾಮಾನ್ಯವಾಗಿ ಹೇಳಿದ ಒಂದರಿಂದ ಒಂಭತ್ತನೇ ತಿಂಗಳ ವರೆಗಿನ ಸಾಮಾನ್ಯ ನಿಯಮ ದಂತೆ ಆಹಾರ ತಕ್ಕೊಳ್ಳಬೇಕು. ಎಲ್ಲಿ ಯಾವ ತಿಂಗಳಲ್ಲಿ ಆಹಾರ ನಿಯಮ ವನ್ನು ಹೇಳಿಲ್ಲವೋ ಆವಾವ ತಿಂಗಳಲ್ಲಿ ಈ ಸಾಮಾನ್ಯ ನಿಯಮವನ್ನೇ ಅನುಸರಿಸಬೇಕು.

ಚರಕ ಮತವು

ಗರ್ಭಿಣಿಗೆ, ಏಳನೇ ತಿಂಗಳಿನಲ್ಲಿ ಚರ್ಮದಲ್ಲಿ ತಿಂಡಿ (ತುರಿಕೆ) ಯುಂಟಾಗುತ್ತದೆ. ದೇಹದಲ್ಲಿ ದಾಹವೂ ಆಗುವದು. ಇದಕ್ಕೆ ಹೆಂಗಸರು, ಶಿಶುವಿಗೆ ಕೂದಲು ಹುಟ್ಟುವದರಿಂದ ಹೀಗಾಗುತ್ತದೆಂದು ಹೇಳುತ್ತಾರೆ. ಆದರೆ ಅದು ಪ್ರಾಮಾಣಿಕ (ಸತ್ಯ) ವಾದದ್ದಲ್ಲವೆಂದು, ಆತ್ರೇಯರ ಅಭಿ ಗ್ರಾಯವು. ವಸ್ತುತಃ ಗರ್ಭ ಬೆಳೆದು ಮೊದಲಿನ ಎಲ್ಲಾ ತಿಂಗಳಿಗಿಂತಲು ಭಾರವೂ ದೊಡ್ಡದಾದದ್ದೂ ಇದ್ದು ಅವಯವಾದಿಗಳ ಚಲನವಾಗಹತ್ತಲೂ ಗರ್ಭದಿಂದ ಗರ್ಭಾಶಯಕ್ಕೆ ಪೀಡೆಯಾಗ ಹತ್ತುವದು. ಈ ಪೀಡೆಯಿಂದ ವಾತ. ಪಿತ್ತ ಕಫಗಳು ಪ್ರಕೋಪವನ್ನು ಹೊಂದಿ, ಎದೆಯಲ್ಲಿ ಎಲ್ಲಾ ಕಡೆ

ಯಲ್ಲಿ ವಿದಾಹವನ್ನುಂಟು ಮಾಡುತ್ತವೆ. ಇದರಿಂದ ತಿಂಡಿಯುಂಟಾಗುತ್ತದೆಯೇ ವಿನಾ, ಗರ್ಭದಲ್ಲಿಯ ಕೂಸಿನ ಕೂದಲು ಉತ್ಪನ್ನವಾಗುವದರಿಂದ ಅಲ್ಲವು.

ವಿಶೇಷ

ಗರ್ಭವು ಬೆಳೆದು, ದೊಡ್ಡದೂ, ಭಾರವಾದದ್ದೂ ಇರುವದರಿಂದ, ಗರ್ಭಾಶಯಕ್ಕನುಗುಣವಾಗಿ, ಹೊಟ್ಟೆಯು ಮೇಲ್ಭಾಗವ, ಚರ್ಮವೂ ಕೂಡ ವಿಸ್ತಾರವಾಗಿ ಪ್ರಸರಣ ಹೊಂದಬೇಕಾಗುತ್ತದೆ. ಒಮ್ಮೆಲೇ ಜಗ್ಗಿ,(ಎಳೆದು) ವಿಸ್ತಾರ ಮಾಡಿದಂತೆ ಆಗುವದರಿಂದ, ಚರ್ಮದಲ್ಲಿ ಅಲ್ಲಲ್ಲಿ ಒಡ ಒಡಕು ಗೆರೆಗಳಂತೆ ಆಗುತ್ತವೆ. ಇದಕ್ಕೆ ಆಯುರ್ವೇದದಲ್ಲಿ "ಕಿಕ್ಕಿಸಾವಾಪ್ತಿ" "ಚರ್ಮ ವಿದಾರಣ"ವೆಂದು ಹೇಳುತ್ತಾರೆ. ಚರ್ಮದಲ್ಲಿ ಒಡಒಡಕಾಗಿ ಬಿರಿದು ಗೆರೆಗಳಾಗುತ್ತಿರುವದರಿಂದ ತಿಂಡಿಯುಂಟಾಗುವದು. ಗರ್ಭ ತುಂಬಿದಾಗ, ವಿಶೇಷ ಭಾರವಾದ ಒತ್ತಡವಿರುವದರಿಂದ, ಚರ್ಮವಿದಾರಣವು (ಒಡಕು) ಕಾಣಿಸುವದಿಲ್ಲ. ಹಡೆದ ನಂತರ, ಚರ್ಮವೆಲ್ಲ ಆಕುಂಚನಹೊಂದಿ ಮುದ್ದಿಯಾದಾಗ ಹಿಂದೆ (ಮೊದಲು)ಒಡೆಯೋಣದರಿಂದಾದ ಗುರುತುಗಳು, ಸೂಕ್ಷ್ಮವಾಗಿ ಕೆದರಿದ, ಘಾಯಗಳ, ಮಾದಮೇಲಿನ ಕಲೆಗಳಂತೆ, ಕಾಣುತ್ತವೆ ಹಡೆದ ನಂತರ ಬಹು ಜನರಿಗೆ ಹೀಗಾಗುತ್ತದೆ. ಚರ್ಮದಲ್ಲಿ ಬಹಳೇ ಸ್ನಿಗ್ಧತೆಯುಳ್ಳ, ಚರ್ಮವು ದಪ್ಪವಿರದೆ, ಮೆತ್ತಗಾಗಿ, ಬಿರಸಿಲ್ಲದಿದ್ದರೆ ಅಂಥವರಿಗೆ ಕಲೆ ಬೀಳುವದಿಲ್ಲ. ಕ್ವಚಿತ್ ಅಂಥವರೂ ಇದ್ದಾರೆ. ನಂತರ ಗರ್ಭಿಣಿಯರಾದಾಗಲೆಲ್ಲ ಗರ್ಭ ತುಂಬಿಕೊಂಡ ನಂತರ ಈ ಕಲೆಗಳು ಕಾಣುವದಿಲ್ಲ. ಇದರಂತೆ ಸ್ತನಗಳೂ ಸಹ ಹಾಲಿನ ಒತ್ತಡ ಭಾರ ಪುಷ್ಟತೆಗಳಿಂದ ಹಾಗೆಯೇ ಆಗುತ್ತವೆ ಬಾರೀ ಚಕ್ಕೆಯ ಕಷಾಯದಲ್ಲಿ (ಕೋಲೋದಕದಲ್ಲಿ) ಮಧುರಾಸಥದಿಂದ ಸಿದ್ಧಮಾಡಿದ, ಬೆಣ್ಣೆಯನ್ನು ಒಂದು ಅಡಿಕೆ. ಯಷ್ಟು ಹಾಕಿ ಕಾಲವರಿತು (ಯೋಗ್ಯ ಕಾಲದಲ್ಲಿ) ಕುಡಿಯಬೇಕು. ಚಂದನ ಕಮಲದದೇಟು, ಇವುಗಳ ಕಲ್ಕವನ್ನು ಮಾಡಿ, ಗರ್ಭಿಣಿಯ ಸ್ತನ, ಹೊಟ್ಟೆಗೆ ಹಚ್ಚಿ, ಅತಿ ಸಾವಕಾಶವಾಗಿ ಕೈಯ್ಯಾಡಿಸಬೇಕು. ಕರವೀರಸಿದ್ಧ ತೈಲದಿಂದ ಅಭ್ಯಂಗವನ್ನು ಮಾಡಿಸಬೇಕು. ಜಾಜಿ, ಇಪ್ಪೇಯಲೆ, (ಮಧುಕ) ಹಾಕಿ ಕಾಯಿಸಿದ ನೀರನ್ನು ಧಾರೆಯಾಗಿ ತಿಂಡಿಯಿಡುವ ಜಾಗಕ್ಕೆ ಪರಿಷೇಚನೆ

ಮಾಡಬೇಕು. ಸಾಧ್ಯವಿದ್ದ ಮಟ್ಟಿಗೆ ತಿಂಡಿಯಾದಾಗ ಉಗುರಿನಿಂದ ಕೆದರಿ, ಕೆರಕೊಳ್ಳಬಾರದು. ಹೀಗೆ ಕೆರೆಯುವದರಿಂದ ತಿಂಡಿ ಹೆಚ್ಚಾಗಿ ಪ್ಯೆಯ್ಯು ಮತ್ತಿಷ್ಟು ಒಡೆಯುವದು. ಆದ್ದರಿಂದ ಉಗುರನ್ನು ಹಚ್ಚಬಾರದು ಸಾವಕಾಶವಾಗಿ ಕೈಯ್ಯಾಡಿಸುವದರಿಂದಲೂ, ಕಂಬಳಿಯಿಂದ ಸಾವಕಾಶ ತಿಕ್ಕುವದರಿಂದಲೂ ತಿಂಡಿಯು ಕಡಿಮೆಯಾಗುತ್ತದಲ್ಲದೆ, ಕೆರಕೊಂಡಂತೆ ಯಾವದೇ ತೊಂದರೆಯಾಗುವದಿಲ್ಲಾ. ಮಧುರಾಹಾರ ತಕ್ಕೊಳ್ಳಬೇಕು. ಆ ಆಹಾರವು ವಾತನಾಶಕವಿದ್ದು ಸ್ವಲ್ಪ ಸ್ನಿಗ್ಧ (ಸ್ನೇಹ) ವಾದ ಲವಣ ರಸಯುಕ್ತವಾದ ದ್ದಿರಬೇಕು. ನೀರನ್ನು ಸ್ವಲ್ಪ ಉಷ್ಣಯೋಗಿಸಬೇಕು. ಇದರಿಂದ ದೇಹದಲ್ಲಿಯು ತಿಂಡಿಯು ಕಡಿಮೆಯಾಗುವದು.

ಅಶ್ವಮೇಬದರೋದಕೇನ, ಬಲಾತಿಬಲಾಶತಪುಷ್ಪಾಪಲಲಪಯೋದಧಿಮುಸ್ತೈಲ ಲವಣಮದನಫಲಮಧುಘೃತಮಿಶ್ರೇಷಾಸ್ಥಾಪಯೇತ್, ಪುರಾಣಪುರೀಷಶುಧ್ಯರ್ಥಮನುಲೋಮನಾರ್ಥಂಚ, ವಾಯೋಃ, ತತಃಪಯೋಮಧುರಕಷಾಯಸಿದ್ಧೇನ, ತೈಲೇನಾನುವಾಸಯೇತ್ ॥ ಅನುಲೋಮೇಹಿ ವಾಯೌಸುಖಂ ಪ್ರಸೂಯತೆ, ನಿರುಪದ್ರವಾಚ ಭವತಿ ಅತ ಊರ್ಧ್ವಂ, ಸ್ನಿಗ್ಧಾಭಿಃ ಯವಾಗೂಭಿರ್ಜಾಂಗಲರಸೈಶ್ಚೋಪಕ್ರಮೇದಾಪ್ರಸವಕಾಲಾತ್, ಏವಮುಪಕ್ರಾಂತಾ, ಸ್ನಿಗ್ಧಾ ಬಲವತೀಸುಖಂ ಅನುಪದ್ರವಾಪ್ರಸೂಯತೆ, ॥
(ಸುಶ್ರುತ॥ ಶಾರೀರ॥ ಅ ೧೦ ಸೂ ೪)

॥೮॥ **ಚರಕ ಮತವು:**— ಎಂಟನೇ ತಿಂಗಳಲ್ಲಿ ಗರ್ಭಿಣಿಗೆ ಹಾಲಿನಿಂದ ಮಾಡಿದ (ಸ್ವಲ್ಪಹಾಲುಹಾಕಿದ) ಗಂಜಿಯನ್ನು ಸ್ವಲ್ಪ ತುಪ್ಪವನ್ನು ಹಾಕಿ ಕಾಲಕ್ಕನುಸರಿಸಿ ಕುಡಿಯಕೊಡಬೇಕು. ಹೀಗೆ ಕೊಡಬಾರದೆಂದು **"ಭದ್ರಕಾಪ್ಯ"** ಎಂಬುವರು ಹೇಳುತ್ತಾರೆ. ಯಾಕಂದರೆ ಇದರಿಂದ ಪೈಂಗಲ್ಯ ಬಾಧೆಯ (ಕಣ್ಣುಕೆಂಪಾಗುವಿಕೆ) ಬಂದು ಗರ್ಭದಲ್ಲಿಯ ಶಿಶುವಿನಕಣ್ಣು ಕೆಂಪಾಗುತ್ತವೆ. ಹೀಗೆಂದು ಹೇಳಿದ ನಂತರ ಇದನ್ನು ವಿರೋಧಿಸಿ ನಿರ್ಣಯ ಕೊಡುತ್ತಾರೆ. ಸ್ವಲ್ಪವಾದ್ದರಿಂದ ಪೈಂಗಲ್ಯಬಾಧೆಯು ಬಂದರೂ ಅಡ್ಡಿ

ಯಿಲ್ಲ. ಮುಂದೆ ಬರತಕ್ಕ ಪ್ರಸೂತಿ ಕಾಲದ ವಾತಾದಿಬಾಧೆಗಳು ಇದರಿಂದ ನಿವಾರಣೆ ಹೊಂದುತ್ತವಲ್ಲದೆ, ಒಂದು ವೇಳೆ ಪೈಂಗಲ್ಯಬಾಧೆ ಉಂಟಾದರೂ ಸುಲಭ ಕ್ರಿಯೆಯಿಂದ ಗುಣವನ್ನು ಹೊಂದುತ್ತದೆ. ಆದ್ದರಿಂದ ಯವಾಗೂ ಪಾನ ನಿಷಿದ್ಧವಲ್ಲವೆಂದು ಆತ್ರೇಯರ ಮತವು. ಗರ್ಭಿಣಿಯೂ ಕೂಡ ಯವಾಗೂ ಸೇವನೆಯಿಂದ ಆರೋಗ್ಯವಂತಳೂ ನಿರೋಗಿಯೂ ಆಗುತ್ತಾಳೆ. ಬಲವರ್ಣವುಳ್ಳ ಅಂಗಾಂಗಗಳ ಸೌಷ್ಠವಯುಕ್ತ ಪರಿಪುಷ್ಟ ಸಂತತಿಯನ್ನು ಪಡೆಯುತ್ತಾಳೆ. ಇವೆಲ್ಲ ಕಾರಣಗಳಿಂದ ಯವಾಗು ಪಾನವು ಯೋಗ್ಯವೆಂದು ಹೇಳುತ್ತಾರೆ

ಸುಶ್ರುತ ಮತವು:— ಎಂಟನೇ ತಿಂಗಳಿನಲ್ಲಿ, ಆಸ್ಥಾಪನ, ಅನುವಾಸನ ಬಸ್ತಿಗಳನ್ನು ಕೊಡಬೇಕು. ಆಸ್ಥಾಪನ ಬಸ್ತಿಯನ್ನು ಉಪಯೋಗಿಸುವದರಿಂದ ಹಳೆಯದಾದ ಮಲ ಸಂಗ್ರಹವು ಹೋಗಿ ಸ್ವಚ್ಛವಾಗುತ್ತದೆ. ಅನುವಾಸನ ಬಸ್ತಿಯಿಂದ, ವಾಯುವು ಯೋಗ್ಯ ಸ್ಥಿತಿಯಲ್ಲಿರುವದಲ್ಲದೆ, ಸುಖ ಪ್ರಸೂತಿಯಾಗುವದು.

ಆಸ್ಥಾಪನ ಬಸ್ತಿ:— ಕಷಾಯ ಮತ್ತು ಸ್ನೇಹರಸ (ಘೃತತೈಲಾದಿ) ಗಳನ್ನು ಕೂಡಿಸಿಕೊಡುವ ಬಸ್ತಿಗೆ ಆಸ್ಥಾಪನ ಬಸ್ತಿಯೆಂದು ಹೆಸರು. ದೋಷ ಧಾತುಗಳನ್ನು, ಶೋಧನ ಮಾಡಿ, ಪ್ರಕೋಪಹೊಂದಿ ಸಿಕ್ಕಸಿಕ್ಕ ಕಡೆಗೆ ಹೋಗಗೊಡದೆ ತಮ್ಮ ಸ್ಥಾನದಲ್ಲಿರುವಂತೆ ಮಾಡುವದರಿಂದಲೂ ಈ ಹೆಸರು ಬಂದಿರುತ್ತದೆ. ಆಸ್ಥಾಪನ ಬಸ್ತಿಯಲ್ಲಿ ಹಾಕುವ ಕಷಾಯ, **ಉತ್ತಮ ಪ್ರಮಾಣ,** (೮ ತೊಲೆ) **ಮಧ್ಯಮ** (೬ ತೊ.) **ಕನಿಷ್ಠ,** (೪ ತೊ.) ದೇಹದಬಲಾಬಲ,ದೋಷ ಸ್ಥಿತಿ ಬಲಾಬಲಗಳನ್ನನುಸರಿಸಿ ಹೀನ, ಮಧ್ಯಮ ಉತ್ತಮ ಪ್ರಮಾಣಗಳನ್ನು ಯೋಜಿಸಬೇಕು.

ಆಸ್ಥಾಪನಬಸ್ತಿಯ ಕಷಾಯ ಕ್ರಮವು:— ಬಲಾ (ಕಲ್ಲಂಗಡ್ಲೆ) ಅತಿಬಲಾ (ದೊಡ್ಡಿಲೆಯುಳ್ಳ ಬಲಾ) ಬಡೇಸೋಪು, ಇವುಗಳಿಂದ ಸಿದ್ಧ ಮಾಡಿದ ತೈಲ, ಅಥವಾ ಮಾಂಸ ಸ್ನೇಹ, (ಚರಬಿ) ಹಾಲು, ಮೊಸರು, ಮೊಸರಿನ ಕೆಳಗಿರುವ ನೀರು, ತೈಲ,(ಎಳ್ಳೆಣ್ಣೆ ಔಡಲಯಣ್ಣೆ ಮೊದಲಾದವು)

ಜೇನುತುಪ್ಪ, ಇಲ್ಲವೇ ಮದನಫಲ (ಮಗ್ಗಾರೆಕಾಯಿ) ಲವಣ ಇವುಗಳಿಂದ ಸಿದ್ಧವಾದ ಘೃತ, ಇವುಗಳಲ್ಲಿ ಯಾವದಾದರೊಂದನ್ನು ಸಮಯಕ್ಕನುಗುಣವಾಗಿ **ಕಷಾಯ**ದಲ್ಲಿ ಕೂಡಿಸಿ ಯೋಜಿಸಬೇಕು. ಬಾರಿಯಚಕ್ಕೆ(ಒಣಗಿದ್ದು) ಗಳನ್ನು, ನೀರಿನಲ್ಲಿ ಅಬಡಜಬಡ ಕುಟ್ಟಿ ಹಾಕಿ ಚನ್ನಾಗಿ ಮರಳಿಸಿ, ಇಳಿಸಿ ಸೋಸಿ, ಘೃತ, ಅಥವಾ ತೈಲಾದಿ ಯೋಜಿಸುವ ಸ್ನೇಹ ದ್ರವ್ಯವನ್ನು ಹಾಕಿ, ತಡೆಯುವಷ್ಟು ಬಿಸಿಯಿದ್ದಾಗಲೇ ಕೈಹಾಕಿ ನೋಡಿ (ನೋಡದೇ ಕೊಟ್ಟರೆ ಬಿಸಿಹೆಚ್ಚಾಗಿ ಅನರ್ಥ ಸಂಭವಿಸುವದು) ಸಮಗ್ರಾಹ್ಯವಾದಾಗ, ಬಸ್ತಿ ಕೊಡಬೇಕು. ತಣ್ಣಗಾದರೂ ಉಪಯೋಗ ಬೀಳುವದಿಲ್ಲ ಬಸ್ತಿ ಕೊಡುವ ದರಿಂದ ಹಳೇ ಮಲವು ಹೋಗಿ ದೇಹ ಹಗುರಾಗಿ, ವಾಯುವು ಸ್ವಸ್ಥಾನ ದಲ್ಲಿ ಬರುವಂಧದಾಗುತ್ತದೆ

ಅನುವಾಸನ ಬಸ್ತಿ:— ಆಸ್ಥಾಪನಬಸ್ತಿಯನ್ನು ಕೊಟ್ಟು ೪–೫ ದಿನಗಳ ನಂತರ ಅನುವಾಸನ ಬಸ್ತಿಯನ್ನು ಕೊಡಬೇಕು. ಈ ಅನುವಾಸನ ಬಸ್ತಿಯು ಕಷಾಯದಲ್ಲಿ ೨ ಸ್ನೇಹ (ಘೃತ, ತೈಲ) ವನ್ನು ಹಾಕಬೇಕು. ಅನುವಾಸನ ಬಸ್ತಿಯ ಪ್ರಮಾಣ **ಉತ್ತಮ** (೨೪ ತೊ) **ಮಧ್ಯಮ** (೧೬ ತೊ) **ಕನಿಷ್ಠ** (೬ ತೊ) ಅನುವಾಸನ ಬಸ್ತಿಯಲ್ಲಿ ಸ್ನೇಹ (ಘೃತ–ತೈಲ) ಪ್ರಮಾಣ ೨ ಅಂಶವೆಂದು ಹೇಳಿದ್ದರಿಂದ, **ಉತ್ತಮ ಬಸ್ತಿಯ ಮಿಶ್ರಣದಲ್ಲಿ" ಕಷಾಯ** ೧೪ ತೊ, **ಸ್ನೇಹ ದ್ರವ್ಯ** ೬ ತೊ. ಒಟ್ಟು ಮಿಶ್ರಣ (೨೪ ತೊ) ಇರಬೇಕು. ಇದರಂತೆ ಮುಂದಿನದನ್ನು ತಿಳಿಯಬೇಕು. ಅನುವಾಸನ ಬಸ್ತಿಯನ್ನು ಸಹ ಬಲಾಬಲವನ್ನು ನೋಡಿ ಉತ್ತಮ, ಮಧ್ಯಮ, ಕನಿಷ್ಠ, ಪ್ರಮಾಣವನ್ನು ಯೋಜಿಸಬೇಕು.

ಕೇವಲ ಸಿದ್ಧ ತೈಲವನ್ನು (ಔಡಲ ಎಣ್ಣೆ) ಮಾತ್ರ ಕಷಾಯವಿಲ್ಲದೆ ಯೋಜಿಸಬಹುದು. ಅದರ ಪ್ರಮಾಣ **ಉತ್ತಮ ಪ್ರಮಾಣ** ೬ ತೊ, **ಮಧ್ಯಮ** ೫ ತೊ, **ಕನಿಷ್ಠ** ೨॥ ತೊಲೆ ಈ ಪ್ರಮಾಣದಿಂದ ತೈಲ (ಔಡಲ ಯಣ್ಣೆ) ವನ್ನು ಪಯೋಗಿಸಬೇಕು.

(೯) **ಒಂಭತ್ತನೇ ತಿಂಗಳಿಂದ,** ಹಡೆಯುವ ಪರ್ಯಂತವೂ, ಸ್ನಿಗ್ಧವಾದ (ಸ್ನೇಹಯುಕ್ತ) ಗಂಜಿಯನ್ನು ಉಪಯೋಗಿಸಬೇಕು. ಮಾಂಸಾ

ಹಾರಿಗಳು ಬೈಲುಸೀಮೆ ದೇಶದಲ್ಲಿಯ ಪ್ರಾಣಿಯ ಮಾಂಸವನ್ನುಪಯೋಗಿಸ ಬೇಕು. ಹೀಗೆ ಪದ್ಧತಿಯಿಂದಿದ್ದರೆ ಆರೋಗ್ಯದಿಂದ ಹಡೆಯುತ್ತಾಳೆ.

ಚರಕ ನುತವು:— ಮೇಲಿನಂತೆ ನಿಯಮಗಳನ್ನು ಹೇಳಿ ವಿಶೇಷ ನಿಯಮವನ್ನು ಹೇಳುತ್ತಾರೆ.

ತೈಲ ಸ್ನೇಹಾದಿಗಳಿಂದ ಯುಕ್ತವಾದ(ತೊಯ್ದ) ಪಿಚುವನ್ನು (ಅಳ್ಳಿಯ ಮುದ್ದೆ) ಗರ್ಭಬರುವ ಮಾರ್ಗವು ಮೃದುವಾಗುವಸಲುವಾಗಿ, ಯೋನಿಯಲ್ಲಿ (ಜನನೇಂದ್ರಿಯಲ್ಲಿ)ಧಾರಣ ಮಾಡಬೇಕು. ಈ ವಿಧಾನವನ್ನು ಗರ್ಭ ಧಾರಣ ಮಾಡಿದ ಮಾಸದಿಂದ ನೊದಲುಗೊಂಡು, ಪ್ರಸವ ದಿನಗಳ ವರೆಗೂ, ದಿನ ಬಿಟ್ಟು ದಿನದಂತೆ ಅಥವಾ ವಾರದಲ್ಲಿ ಎರಡುದಿನ ಧಾರಣಮಾಡುತ್ತಿರಬೇಕು. ಗರ್ಭಿಣಿಯಹೊಟ್ಟೆ, ಟೊಂಕ,ಪಾರ್ಶ್ವ, ಹಿಂಭಾಗ, ಇವೆಲ್ಲವೂ ಮೃದುವಾಗುತ್ತವೆ. ಇದರಿಂದ ವಾಯುವು ಪ್ರಕೋಪಹೊಂದದೆ ಮೃದುವಾಗಿ ತನ್ನ ಸ್ಥಾನದಲ್ಲಿರುತ್ತದೆ. ಮಲ, ಮೂತ್ರಗಳು ಯೋಗ್ಯವಾಗಿ ನಿಯಮಿತವಾಗುತ್ತವೆ. ವರ್ಣ ಬಲ, ಹೆಚ್ಚಾಗುತ್ತದೆ. ಸ್ನೇಹಧಾರಣೆಯ ವಿಶೇಷವೇನಂದರೆ, ಸ್ಥಾನವು ಮೃದುವಾದ್ದರಿಂದ ಶಿಶುಜನಿಸಲಿಕ್ಕೆ ತೊಂದರೆಯಾಗುವದಿಲ್ಲ. ಯಾಕಂದರೆ ಮೃದು ಸ್ಥಾನವು ವಿಕಾಸ (ವಿಸ್ತಾರ) ಹೊಂದಲು, ಬಹಳ ತ್ರಾಸಾಗುವ ದಿಲ್ಲ. ಆದ್ದರಿಂದ ಅಡ್ಡಿಯಿಲ್ಲದೆ ಅನುಕೂಲವಾಗಿ ಜನನವಾಗುವದು. ಗರ್ಭ ಪೋಷಣೆಗೆ ಅನುಕೂಲ ಪ್ರಶಸ್ತವಾದ ಶಾಸ್ತ್ರೀಯ ಕ್ರಮಗಳು ಇಂತಿರುತ್ತವೆ.

ಬಸ್ತಿಯ ವಿಷಯದಲ್ಲಿ ಸೂಚನೆ

(ಶಾರ್ಙ್ಗಧರ ೩ ಖಂ, ಅ ೫)

ಅತಿ ಸ್ನಿಗ್ಧತೆ ಉಳ್ಳವರಿಗೆ, ಅನುವಾಸನ ಬಸ್ತಿಯು ನಿಷಿದ್ಧವಿರುತ್ತದೆ. ಇದರಂತೆ ರೂಕ್ಷತೆಯುಳ್ಳವರಿಗೆ ಮತ್ತು ಗರ್ಭಿಣಿಯರಿಗೆ ಆಸ್ಥಾಪನ ಬಸ್ತಿಯು ಯೋಗ್ಯವಲ್ಲವೆಂದು ಹೇಳಿದ್ದಾರೆ.

ಚರಕ–ಸುಶ್ರುತರ ಕಾಲದಲ್ಲಿ ಜನರ ಆಹಾರ ಪರಿಸ್ಥಿತಿಗಳಿಂದ ಸದೃಢತೆ ಇದ್ದಿರುವ ಮೂಲಕ ಅದಕ್ಕನುಸರಿಸಿದ ಯೋಜನೆಯಿದೆ. ಆದ್ದ

ರಿಂದ, ದೋಷ, ದೂಷ್ಯ, ದೇಶ, ಕಾಲ, ಬಲ, ಅಗ್ನಿ (ಜಠರಾಗ್ನಿ) ಪ್ರಕೃತಿ, ವಯಸ್ಸು ಇವುಗಳನ್ನು ಯೋಚಿಸಿ ಅವಶ್ಯವಿದ್ದಾಗಲೂ, ಅತ್ಯಾಯಿಕ ಪರಿಸ್ಥಿತಿಯಲ್ಲಿಯೂ, ವೈದ್ಯರಾದವರೇ ಬಸ್ತಿಯನ್ನು ಯೋಚಿಸಲು ಅಡ್ಡಿಯಿಲ್ಲ.

೧೨. ಗರ್ಭದಲ್ಲಿಯ ಪಿತೃಜಾದಿ ಲಕ್ಷಣ

ಗರ್ಭಸ್ಯಪಿತೃ, ಮಾತೃ, ರಸ,ಆತ್ಮ, ಸತ್ವ, ಸಾತ್ಮ್ಯಜಾನಿ ಲಕ್ಷಣಾನಿ. (ಸುಶ್ರುತ॥ ಶಾರೀರ॥ ಅ ೩ ಸೂ ೩೩)

ತತ್ರಗರ್ಭಸ್ಯ, ಪಿತೃಜ, ಮಾತೃಜ, ರಸಜ, ಆತ್ಮಜ, ಸತ್ವಜ, ಸಾತ್ಮ್ಯಜಾನಿ, ಶರೀರ ಲಕ್ಷಣಾನಿ ವ್ಯಾಖ್ಯಾಸ್ಯಾಮಃ॥ ಗರ್ಭಸ್ಯಕೇಶಶ್ಮಶ್ರು ಲೋಮಾಸ್ಥಿ ನಖಸಿರಾ ಸ್ನಾಯುಧಮನೀರೇತಃ ಪ್ರಭೃತೀನಿಸ್ಥಿರಾಣಿ ಪಿತೃಜಾನಿ॥ಮಾಂಸ,ಶೋಣಿತ ಮೇದೋ ಮಜ್ಜ ಹೃನ್ನಾ ಭಿ ಯಕೃತ್ ಪ್ಲೀಹಾಂತ್ರ ಗುದ ಪ್ರಭೃತೀನಿ ಮಾತೃಜಾನಿ॥ ಶರೀರೋಪಚಯೋ ಬಲಂ ವರ್ಣಃ ಸ್ಥಿತಿಃ ಹಾನಿಶ್ಚ ರಸಜಾನಿ॥ ಇಂದ್ರಿಯಾಣಿ ಜ್ಞಾನಂ ವಿಜ್ಞಾನಂ ಆಯುಃ ಸುಖ ದುಃಖಾದಿಕಂ ಚಾತ್ಮಜಾನಿ ॥ ಸತ್ವಜಾನಿ ಉತ್ತರತ್ರವ ಕ್ಷ್ಯಾಮಃ॥ (ಗರ್ಭ ವ್ಯಾಕರಣೆ ೬೪ ಆರಭ್ಯ ೬೦ ಪರ್ಯಂತಂ॥ ೬೧ಆ. ಸಂಪೂರ್ಣಂ)ವೀರ್ಯವಾರೋಗ್ಯಂ ಬಲವರ್ಣೌಮೇಧಾಚಸಾತ್ಮ್ಯಜಾನಿ ॥

(೧) ಗರ್ಭದಲ್ಲಿ ಪಿತೃಜ
ತಂದೆಯ ಅಂಶದಿಂದ ಉತ್ಪನ್ನವಾದವುಗಳು

ಗರ್ಭದ ತಲೆಕೂದಲು, ಗಡ್ಡಮೀಸೆ, (ಮುಂದೆ ಬರತಕ್ಕವು)ರೋಮ (ಮೈಮೇಲೆ ಎಲ್ಲ ಕಡೆಗಿರುವ ಕೂದಲು) ಎಲಬು, ಉಗುರು, ಹಲ್ಲು (ನಂತರ ಬರತಕ್ಕವು) ಸಿರಾ, ಸ್ನಾಯು, ಧಮನೀ ರೇತಸ್ಸು (ತಾರುಣ್ಯದಲ್ಲಿ ಪ್ರಕಟವಾಗುವದು) ಸ್ಥಿರವಾದವುಗಳೆಲ್ಲವೂ, ತಂದೆಯ ಅಂಶದಿಂದ ಗರ್ಭದಲ್ಲಿ ಉತ್ಪನ್ನವಾದವುಗಳು.

(೨) ಗರ್ಭದಲ್ಲಿ ಮಾತೃಜವಾದವುಗಳು

ಮಾಂಸ, ರಕ್ತ, ಮೇದಸ್ಸು, ಮಜ್ಜಾ, ಹೃದಯ, ನಾಭಿ, (ಹೊಕ್ಕಳು) ಯಕೃತ್, ಸ್ಲೀಹಾ, ಅಂತ್ರ, (ಕರಳು) ಗುದ, (ಮಲದ್ವಾರ) ಮೊದಲಾದ ಮೃದು ವಿಭಾಗಗಳು, ತಾಯಿಯಅಂಶದಿಂದಗರ್ಭದಲ್ಲುಂಟಾದವುಗಳು.

ಚರಕ ಮತವು:— ಕ್ಲೋಮ, ಚರ್ಮ, ವೃಕ್ಕ (ಮಾಂಸ ಪಿಂಡಗಳು) ಬಸ್ತಿ, ಪಕ್ವಾಶಯ, (ಮಲಾಶಯ) ಆಮಾಶಯ, ಗುದದ ಆದಿಭಾಗ, ಅಂತ್ಯಭಾಗ, ಸ್ಥೂಲಾಂತ್ರ, (ದೊಡ್ಡ ಕರುಳು) ಕ್ಷುದ್ರಾಂತ್ರ, (ಸಣ್ಣ ಕರುಳು) ವಪೆಯನ್ನು ಒಯ್ಯುವ ನಲಿಕೆಗಳು, (ತೈಲವರ್ತಿಕಾ) ಇವುಗಳು ಮಾತೃಜ ವೆಂದು ವಿಸ್ತಾರವಾಗಿ ಹೇಳಿರುತ್ತಾರೆ.

(೩) ರಸದಿಂದ ಗರ್ಭದಲ್ಲುಂಟಾದವುಗಳು

ಶರೀರೋಪಚಯ, (ದೇಹದ ಪರಿಪುಷ್ಟತೆಯು) ಬಲವು, ವರ್ಣ, (ಬಣ್ಣ ಹೊಳಪು) ಸ್ಥಿತಿ, (ಬಮಕಿ ಬೆಳೆಯುವದು) ಹಾನಿ, (ನಾಶವಾಗುವಿಕೆ ಹೀನ, ದುರ್ಬಲವಾಗುವಿಕೆ) ಇವು ಗರ್ಭಕ್ಕೆ ಗರ್ಭಿಣಿಯ ಆಹಾರರಸ ದಿಂದುಂಟಾಗುತ್ತವೆ.

ಚರಕ ಮತವು:— ತಾಯಿ ಗರ್ಭಗಳ, ಪೋಷಣೆ, ಗರ್ಭಾಭಿವೃದ್ಧಿ, ಅಂಗೋಪಾಂಗಗಳನ್ನುಂಟುಮಾಡುವದು, ಪ್ರಾಣಾನುಬಂಧ, (ಬಲೋಪಚಯ) ತೃಪ್ತಿ, ಪುಷ್ಟಿ, ಉತ್ಸಾಹ, ಈವುಗಳು ಯೋಗ್ಯ ರಸ ಸೇವನೆಯಿಂದ ಉಂಟಾದವುಗಳು.

(೪) ಆತ್ಮಾನುಬಂಧವಾಗಿ ಗರ್ಭದಲ್ಲುಂಟಾದವುಗಳು

ಏಕಾದಶ ಇಂದ್ರಿಯಗಳು, ಜ್ಞಾನ, (ಮೋಕ್ಷ ವಿಷಯಕ ತಿಳುವಳಿಕೆ) ವಿಜ್ಞಾನ (ಶಿಲ್ಪಾದಿ ವಿಷಯಕ ಜ್ಞಾನ) ಆಯುಸ್ಸು, ಸುಖ, ದುಃಖ ಇವೆಲ್ಲವು ಆತ್ಮಜಗಳು.

ಚರಕ ಮತವು:— ಅನೇಕ ಯೋನಿಗಳಲ್ಲಿ ಉತ್ಪತ್ತಿ, ಆಯುಸ್ಸು, ಆತ್ಮಜ್ಞಾನ, ಮನಸ್ಸು, ಇಂದ್ರಿಯಗಳು, ಪ್ರಾಣಪಾನಗಳು, ಇಂದ್ರಿಯಗಳ ಪ್ರೇರಣೆ, ದಾರಣೆಗಳು, ಆಕೃತಿ, ಸ್ವರ, ವರ್ಣ ಮೊದಲಾದವುಗಳೂ ಸುಖ, ದುಃಖ, ಇಚ್ಛಾ, ದ್ವೇಷ, ಚೇತನಾ, ಧೃತಿ, ಬುದ್ಧಿ, ಸ್ಮೃತಿ, ಅಹಂಕಾರ ಪ್ರಯತ್ನ ಇವು ಆತ್ಮಜವಾದವುಗಳು.

(೫) ಗರ್ಭದಲ್ಲಿ ಸತ್ವದಿಂದುತ್ಪನ್ನವಾದವುಗಳು

ಚರಕ ಮತವು॥ ಭಕ್ತಿಃ, ಪೂಜ್ಯರಲ್ಲಿ ಆದರವು, **ಶೀಲಂ** ಸದ್ವೃತ್ತಿ, **ಶೌಚಂ** ಸ್ವಚ್ಛತೆ, **ದ್ವೇಷ, ಸ್ಮೃತಿಃ** ನೆನಪು, **ಮೋಹ** ಅಜ್ಞಾನ, **ತ್ಯಾಗ, ಮಾತ್ಸರ್ಯ, ಶೌರ್ಯ, ಭಯ, ಕ್ರೋಧ, ತಂದ್ರಾ** (ಮಬ್ಬಾದಂತೆ ಯಿರುವದು.) **ಉತ್ಸಾಹ, ಕಠೋರ** (ಕ್ರೂರ), **ಮೃದುತ್ವ** (ವಿನಯ), **ಗಾಂಭೀರ್ಯ** (ದೃಢತೆಯು) **ಚಂಚಲತೆ,** ಇವೇ ಮೊದಲಾದವುಗಳು ಸತ್ವ ದಿಂದುತ್ಪನ್ನವಾದವುಗಳು.

(೬) ಗರ್ಭದಲ್ಲಿ ಸಾತ್ಮ್ಯಜವಾದವುಗಳು

ವೀರ್ಯ, ಆರೋಗ್ಯ, ಬಲ, ವರ್ಣ, ಮೇಧಾ, (ಬುದ್ಧಿ) ಇವು ಸಾತ್ಮ್ಯಜಗಳು.

ಚರಕ ಮತವು:—ಆರೋಗ್ಯ, ಆಲಸ್ಯಯಿಲ್ಲದೇ ಇರುವದು. ಅತ್ಯಾಶೆ ಯಿಲ್ಲದಿರುವದು, ಇಂದ್ರಿಯಗಳು ಪ್ರಸನ್ನವಾಗಿರೋಣವು, ಸ್ವರ, ವರ್ಣಗಳು, ಬೀಜಸಂಪತ್ತು (ಶುಕ್ರ) ರತಿ ಸಮಯದಲ್ಲಿ ಬಹಳ ಆನಂದವು, ಇವು ಸಾತ್ಮ್ಯಶೆ ದಿಂದ ಗರ್ಭದಲ್ಲುಂಟಾದವುಗಳು.

ಸತ್ವಾದಿ ದೇಹ ಲಕ್ಷಣ

ಸತ್ವಾದಿ ದೇಹ ಲಕ್ಷಣಗಳು: — ಸಾತ್ವಿಕ, ರಾಜಸ, ತಾಮಸ, ಭೇದಗಳಿಂದ ಹದಿನಾರು ಭೇದಗಳಾಗುತ್ತವೆ. ಅವನ್ನು ಕ್ರಮಶಃ ಹೇಳುತ್ತಾರೆ

ಸಾತ್ವಿಕಕಾಯ ಲಕ್ಷಣಂ ಸಾತ್ವಿಕಾಯಾಃ ಸಪ್ತ ॥೬॥

ಬ್ರಹ್ಮಕಾಯಲಕ್ಷಣ ॥೭॥

ಶೌಚಮಾಸ್ತಿಕ್ಯಮಭ್ಯಾಸೋವೇದೇಷುಗುರುಪೂಜನಂ ॥
ಪ್ರಿಯಾತಿಥಿತ್ವಮಿಜ್ಯಾಚಬ್ರಹ್ಮಕಾಯಸ್ಯ ಲಕ್ಷಣಂ ॥

(ಸುಶ್ರುತ॥ ಶಾರೀರ॥ ೪ ಃ ಶ್ಲೋ ೮೧ ರಿಂದ)

ಶುದ್ಧವಾಗಿರುವದು, ಆಸ್ತಿಕತೆ, ವೇದಾಭ್ಯಾಸ, ಗುರುಗಳಲ್ಲಿ ಆದರೆ, ಅತಿಥಿ ಅಭ್ಯಾಗತರ ಆತಿಥ್ಯ, ಯಜ್ಞಯಾಗಾದಿಗಳನ್ನು ಮಾಡೋಣ ಇವು ಬ್ರಹ್ಮಕಾಯದ ಲಕ್ಷಣಗಳು.

ಮಾಹೇಂದ್ರಕಾಯ ಲಕ್ಷಣ ॥೭॥

ಮಾಹಾತ್ಮ್ಯಂಶೌರ್ಯಮಾಜ್ಞಾಚಸತತಂ ಶಾಸ್ತ್ರಬುದ್ಧಿತಾ ॥
ಭೃತ್ಯಾನಾಂಭರಣಂಚಾಪಿಮಾಹೇಂದ್ರಂ ಕಾಯಲಕ್ಷಣಂ ॥

ಮಹತ್ವಾಕಾಂಕ್ಷೆ, ಮತ್ತೂ ಮಹಾಪ್ರಭಾವ, ಶೌರ್ಯ, ಆಜ್ಞಾ ಮಾಡೋಣ, ಯಾವಾಗಲೂ ಶಾಸ್ತ್ರ ವಿಚಾರ ಪರನಾಗುವದು, ಆಳು, ಸೇವ ಕರನ್ನು ಯೋಗ್ಯ ರೀತಿಯಿಂದ ನಡೆಯಿಸಿಕೊಳ್ಳುವದು, ಇದು ಮಾಹೇಂದ್ರ ಕಾಯದ ಲಕ್ಷಣವು.

ವರುಣಕಾಯ ಲಕ್ಷಣ ॥೩॥

ಶೀತಸೇವಾಸಹಿಷ್ಣುತ್ವಂ ಸೈಂಗಲ್ಯಂಹರಿಕೇಶಿತಾ॥ಪ್ರಿಯವಾದಿ
ತ್ವಮಿತ್ಯೇತದ್ವಾರುಣಂ ಕಾಯಲಕ್ಷಣಂ ॥

ಶೀತವಾದ ಪದಾರ್ಥ ಸೇವನೆ, ಥಂಡಿಯಲ್ಲಿರುವದು, ಸಹನತೆ, ಕಪಿಲ ವರ್ಣವು (ಕಪ್ಪುಕೆಂಪುಮಿಶ್ರ) ಸಿಂಹ ಜಡೆಯಂತೆ ಕೂದಲು, ಪ್ರಿಯ ಮಾತನ್ನಾಡುವದು, ವರುಣಕಾಯದ ಲಕ್ಷಣವು.

ಕೌಬೇರಕಾಯ ಲಕ್ಷಣ ॥೪॥

ಮಧ್ಯಸ್ಥತಾಸಹಿಷ್ಣುತ್ವಮರ್ಥಸ್ಯಾಗಮಸಂಚಯೌ ॥
ಮಹಾಪ್ರಸವಶಕ್ತಿತ್ವಂ ಕೌಬೇರಂಕಾಯಲಕ್ಷಣಂ ॥

ತಟಸ್ಥನಾಗಿರುವದು, ತಾಳ್ಮೆ, ಧನಾರ್ಜನೆ ಮತ್ತು ಸಂಚಯ, ಪ್ರಜೋತ್ಪಾದನ ಸಾಮರ್ಥ್ಯ ಹೆಚ್ಚಿಗೆ ಇರೋಣ, ಇವು ಕುಬೇರಕಾಯ ಲಕ್ಷಣಗಳು.

ಗಂಧರ್ವಕಾಯ ಲಕ್ಷಣ ॥೫॥

ಗಂಧಮಾಲ್ಯಪ್ರಿಯತ್ವಂಚನೃತ್ಯನಾದಿತ್ರಕಾಮಿತಾ ॥
ವಿಹಾರಶೀಲತಾಚೈವಗಾಂಧರ್ವಂ ಕಾಯಲಕ್ಷಣಂ ॥

ಗಂಧ, ಹೂವಿನ ಮಾಲೆಗಳಲ್ಲಿ ಪ್ರಿತಿಯು, ನರ್ತನ,ವೀಣಾ ಮೊದಲಾದ ವುಗಳಲ್ಲಿ ಆಸಕ್ತಿ, ವಿಹರಿಸುವಗುಣ, ಇವು ಗಂಧರ್ವಕಾಯದ ಲಕ್ಷಣಗಳು.

ಯಮಸತ್ವ ದೇಹಲಕ್ಷಣ ॥೬॥

ಪ್ರಾಪ್ತಕಾರೀದೃಢೋತ್ಥಾನೋ ನಿರ್ಭಯಃ ಸ್ಮೃತಿಮಾನ್ ಶುಚಿಃ॥ ರಾಗಮೋಹಮದದ್ವೇಷೈಃ ವರ್ಜಿತೋಯೋಮ್ಯಸತ್ವವಾನ್ ॥

ಯೋಗ್ಯವಾದ ಕಾರ್ಯವನ್ನು ಮಾಡುವವನು, ಆರಂಭಿಸಿದ ಕಾರ್ಯವನ್ನು ಬಿಡದವನು, ಭಯವಿಲ್ಲದಿರುವಿಕೆ, ಶುಚಿಯಾಗಿರುವದು, ತನ್ನದೆಂಬ ಆಸಕ್ತಿ, ಅಜ್ಞಾನ, ದ್ವೇಷ, ಅಹಂಕಾರ ಇವಿಲ್ಲದವನು, ಯಮಸತ್ವವುಳ್ಳವನು.

ಋಷಿಸತ್ವ ದೇಹಲಕ್ಷಣ ॥೭॥

ಜಪವ್ರತ ಬ್ರಹ್ಮಚರ್ಯಹೋಮಾಧ್ಯಯನ ಸೇವಿನಮ್ ॥
ಜ್ಞಾನವಿಜ್ಞಾನಸಂಪನ್ನಮೃಷಿತ್ವಂ ನರಂವಿದುಃ ॥

ಮಂತ್ರಾನುಷ್ಠಾನ, ವ್ರತ, ಬ್ರಹ್ಮಚರ್ಯ, ಹೋಮ, ಅಧ್ಯಯನಾದಿಗಳನ್ನು ಮಾಡುವವನು. ಜ್ಞಾನ, ವಿಜ್ಞಾನಯುಕ್ತನಾದವನು, ಋಷಿಸತ್ವ ದೇಹವುಳ್ಳವನು; ಇವು ಏಳು ಸಾತ್ವಿಕ ದೇಹಗಳು.

ರಾಜಸದೇಹ ಆರು ಪ್ರಕಾರವಾದದ್ದಿರುತ್ತವೆ. ಅವುಗಳಲ್ಲಿ:—

ಆಸುರಕಾಯ ಲಕ್ಷಣವು ॥೧॥

ಐಶ್ವರ್ಯವಂತಂರೌದ್ರಂಚ ಶೂರಂಚಂಡವಮಸೂಯಕಂ ॥
ಏಕಾಶಿನಂಚೌದರಿಕವಾಸುರಂ ಸತ್ವಮೀದೃಶಂ ॥

ಧನ ಸಂಗ್ರಹವುಳ್ಳ ಅಧವಾ ಅಧಿಕಾರ ನಡೆಸುವ ಗುಣವುಳ್ಳ, ರೌದ್ರ (ಹೆದರಿಕೆ ಬರುವಂಥ) ಪರಾಕ್ರಮವುಳ್ಳ, ತೀವ್ರಕೋಪ, ಪರರ ಗುಣಗಳಲ್ಲಿ ಮತ್ಸರ, ಒಬ್ಬನೇ ತಿನ್ನುವವ, ಹೊಟ್ಟೆಬಾಕ ಗುಣವು, ಇವುಗಳು ರಾಕ್ಷಸ ಕಾಯದ ಲಕ್ಷಣಗಳು.

ಸರ್ಪಸತ್ವಕಾಯ ಲಕ್ಷಣವು ॥೨॥

ತೀಕ್ಷ್ಣಮಾಯಾಸಿನಂಭೀರುಂಚಂಡಂಮಾಯಾನ್ವಿತಂತಥಾ ।
ವಿಹಾರಾಚಾರಚಪಲಂಸರ್ಪಸತ್ವಂ ವಿದುರ್ನರಂ ॥

ಬಹಳ ಕ್ರೂರವಾದ, ಆಯಾಸ ಹೊಂದುವ, ಭಯಪಡುತ್ತಿರುವ, ತೀವ್ರ ಸಿಟ್ಟುಳ್ಳ, ಅಡಗಿಕೊಂಡಿರುವ, ಅಡ್ಡಾಡುವಿಕೆ, ಮುಂತಾದ ನಡತೆಯಿವುಗಳೂ ಚಂಚಲವಾಗಿರುವ ದೇಹವು ಸರ್ಪಸತ್ವವುಳ್ಳದ್ದು.

ಪಕ್ಷಿಕಾಯದ ಲಕ್ಷಣವು ॥೩॥

ಪ್ರವೃದ್ಧಕಾಮುಸೇವೀಚಾಪ್ಯಜಸ್ರಾಹಾರಏವಚ ॥
ಅಮರ್ಷಣೋಽನವಸ್ಥಾಯೀಶಾಕುನಂಕಾಯ ಲಕ್ಷಣಂ ॥

ಅತ್ಯಂತ ರತಿಸುಖ ಭೋಗಿಸುವವನು, ಯಾವಾಗಲೂ ಆಹಾರ ತಿನ್ನುವವನೂ, ಸಿಟ್ಟಿನವನು, ಒಂಡೇ ಸ್ಥಳದಲ್ಲಿ ನಿಲ್ಲದವನೂ, ಶಾಕುನಕಾಯ (ಪಕ್ಷಿ) ವುಳ್ಳವನೆಂದು ತಿಳಿಯಬೇಕು.

ರಾಕ್ಷಸಕಾಯ ಲಕ್ಷಣವು ॥೪॥

ಏಕಾಂತಗ್ರಾಹಿತಾರೌದ್ರಮಸೂಯಾಧರ್ಮಬಾಹ್ಯತಾ ॥
ಭೃಶಮಾತ್ರಂತಮಶ್ನಾಪಿರಾಕ್ಷಸಂ ಕಾಯಲಕ್ಷಣಂ ॥

ಗುಪ್ತವಾಗಿ ಮಂದಿಯನ್ನು ಹಿಡಿಯುವ ಗುಣ, ಭೀಷಣವಾದ ರೂಪ, ಅಸೂಯಾ, ಅಧರ್ಮಾಚರಣೆ, ಅತ್ಯಂತ ತಮೋಗುಣವ್ಯಾಪಾರವುಳ್ಳ ಶರೀರವು, ರಾಕ್ಷಸ ಕಾಯವು.

ಪಿಶಾಚಕಾಯ ಲಕ್ಷಣವು ॥೫॥

ಉಚ್ಛಿಷ್ಟಾಹಾರತಾತೈಕ್ಷ್ಣ್ಯಂಸಾಹಸಪ್ರಿಯತಾತಥಾ ॥
ಸ್ತ್ರೀಲೋಲುಪತ್ವಂನೈರ್ಲಜ್ಯಂ ಪೈಶಾಚಂ ಕಾಯಲಕ್ಷಣಂ ॥

ತಿಂದು ಬಿಟ್ಟದ್ದನ್ನು ತಿನ್ನುವ, ಸಿಟ್ಟುಳ್ಳ, ಸಾಹಸ ಗುಣ, ಸ್ತ್ರೀಯರಲ್ಲಿ ಆಸಕ್ತಿ, ನಾಚಿಕೆ ಇಲ್ಲದಿರೋಣ, ಇವು ಪಿಶಾಚ ಶರೀರವುಳ್ಳವರ ಲಕ್ಷಣವು

ಪ್ರೇತಸತ್ವ ದೇಹಲಕ್ಷಣ ॥೬॥

ಅಸಂವಿಭಾಗಮಲಸಂದುಃಖಶೀಲಮಸೂಯಕಂ ॥
ಲೋಲುಪಂಚಾಪ್ಯದಾತಾರಂ ಪ್ರೇತಸತ್ವಂ ವಿದುರ್ನರಂ ॥

ಯಾವದು ಹೇಗೆಂದು ತಿಳಿಯುವ ವಿಚಾರವಿಲ್ಲದಿರುವಿಕೆ, ಆಲಸ್ಯವುಳ್ಳ, ಯಾವಾಗಲೂ ದುಃಖ ಪಡುತ್ತಿರುವ, ಅಸೂಯೆ, ಆಶೆಬುರುಕ, ಎರಡನೆಯವರಿಗೆ ಕೊಡುವ ಗುಣವಿಲ್ಲದವನು, ಪ್ರೇತಸತ್ವವುಳ್ಳವನು. ಅಸುರಾದಿಳಿರು ಪ್ರಕಾರ ರಾಜಸಕಾಯಲಕ್ಷಣವು.

ತಾಮಸ ಪ್ರಕೃತಿಯ ದೇಹವು ಮೂರು ಪ್ರಕಾರವಾದದ್ದು:-

ಪಾಶವ ಶರೀರವು ॥೭॥

ದುರ್ಮೇಧಸ್ತ್ವಂಮಂದತಾಚಸ್ವಪ್ನೈಮೈಥುನನಿತ್ಯತಾ ॥
ವಿರಾಕರಿಷ್ಣುತಾಚೈವವಿಜ್ಞೇಯಾಃ ಪಾಶವಾಃ ಗುಣಾಃ ॥

ದುರ್ಬುದ್ಧಿ, ಜಾಡ್ಯವುಳ್ಳ, ನಿತ್ಯದಲ್ಲಿಯೂ ಸ್ವಪ್ನೇಂದ್ರಿಯವಾಗೋಣ, ತಿರಸ್ಕಾರ ಗುಣವುಳ್ಳವನು, ಪಶುಶರೀರವುಳ್ಳವನು.

ಮತ್ಸ್ಯಸತ್ವದೇಹದ ಲಕ್ಷಣವು ॥೨॥

ಅನವಸ್ಥಿತತಾಮೌಖ್ಯ್ಯ ಭೀರುತ್ವಂ ಸಲಿಲಾರ್ಥಿತಾ ॥
ಪರಸ್ಪರಾಭಿಮರ್ದಶ್ಚಮತ್ಸ್ಯಸತ್ವಸ್ಯಲಕ್ಷಣಂ ॥

ಸ್ಥಿರತೆ ಇಲ್ಲದಿರುವ, ಮೂರ್ಖತಾ, ಹೆದರಿಕೆ, ನೀರನ್ನು ಬಯಸುವ, ತಮ್ಮ ತಮ್ಮಲ್ಲಿ ಬಡೆದಾಡುವ,ಅಥವಾ ದೊಡ್ಡ ಮೀನವು ಸಣ್ಣ ಮೀನವನ್ನು ನುಂಗುವಂತೆ, ತನಗಿಂತ ಅಲ್ಪನಾದವನನ್ನು ತನ್ನ ಸ್ವಾಧೀನಮಾಡಿಕೊಳ್ಳುವವನು, ಮತ್ಸ್ಯಸತ್ವ ದೇಹವುಳ್ಳವನು.

ವಾನಸ್ಪತ್ಯ ದೇಹ ಲಕ್ಷಣವು ॥೩॥

ಏಕಸ್ಥಾನರತಿರ್ನಿತ್ಯಮಾಹಾರೈಕೇವಲೇರತಃ ॥
ವಾನಸ್ಪತ್ಯೋನರಃ ಸತ್ವಧರ್ಮಕಾಮಾರ್ಥವರ್ಜಿತಃ ॥

ಒಂದೇ ಸ್ಥಾನದಲ್ಲಿ ನಿತ್ಯವೂ ಇರುವದು, ಕೇವಲ ಆಹಾರ ಮಾತ್ರ ತೆಗೆದುಕೊಳ್ಳುವದೊಂದೇ ಕರ್ತವ್ಯವು, ಯಾವದೇ ಒಂದು ವಿಶೇಷ ಪ್ರಭಾವಯುಕ್ತದೇಹದ ಚಟುವಟಿಕೆ ಇಲ್ಲದಿರುವಿಕೆ, ಧರ್ಮ ಕಾಮಾರ್ಥಗಳಲ್ಲಿ ಸಂಗ್ರಹಮಾಡುವ ಗುಣವಿಲ್ಲದವನು.ವಾನಸ್ಪತ್ಯ(ಮರದಂತೆ)ದೇಹವುಳ್ಳವನು. ಸಾತ್ವಿಕದೇಹ ೭, ರಾಜಸದೇಹ ೬, ತಾಮಸದೇಹ ೩ ಹೀಗೆ ಹದಿನಾರು (೧೬) ದೇಹಗಳು

ವಾತಾದಿ ಪ್ರಕೃತಿಗಳು

ವಾತ ಪ್ರಕೃತಿಯ ದೇಹ ಲಕ್ಷಣ ॥೧॥

ತತ್ರವಾತಪ್ರಕೃತಿಃ ಪ್ರಜಾಗರೂಕಃ ಶೀತದ್ವೇಷೀದುರ್ಭಗಃ ಸ್ತೇನೋಮತ್ಸರ್ಯನಾರ್ಯೋ ಗಂಧರ್ವಚಿತ್ತಃ ಸ್ಫುಟಿತಕರಚರಣೋಽಲ್ಪರೂಕ್ಷಸ್ಮಶ್ರುನಖಕೇಶಃ ಕ್ರೋಧೀದಂತಖಾದೀ ಚ ಭವತಿ॥ (ಸುಶ್ರುತ ॥ ಶಾರೀರ ॥ ಅ. ೪ ಸೂ. ೬೪)

ಬಹಳ ಎಚ್ಚರಿಕೆಯುಳ್ಳವನು, ಥಂಡಿಯನ್ನು ಸಹಿಸದವನು, ಹುರ ಬರಕ ಒಣಕ ನೋಡಲಿಕ್ಕೆ ಅಸಹ್ಯ ಕಾಣುವಂಥವನು, ಕಳ್ಳ, ಹೊಟ್ಟೇ ಕಿಚ್ಚುಳ್ಳವನು, ಕಾಡು ಮನುಷ್ಯನಂತೆ ಇರುವವನು, ಗೀತ ನೃತ್ಯಾದಿಗಳಲ್ಲಿ ಅಸಕ್ತಿಯುಳ್ಳನ ಮತ್ತು ರಸಿಕ ಸ್ಥಿತಿಯಿರುವವನು, ಕಾಲು, ಕೈಗಳಲ್ಲಿ ಹುರ ಬರಕು ಒಡಕು ಚರ್ಮವುಳ್ಳವನು, ಹಿಂಸಾಗುಣ, ನಿದ್ರೆಯಲ್ಲಿ ಹಲ್ಲುಕಟಿಯುತ್ತಿರುವವನು, ವಾತಪ್ರಕೃತಿ ದೇಹವುಳ್ಳವನು.

ಅಧೃತಿರಧೃಷ್ಠಸೌಹೃದಃ ಕೃತಘ್ನಃ ಕೃಶಪುರುಷೋ ಧಮನೀ ತತಃ ಪ್ರಲಾಪೀ ಧೃತಗತಿರಟನ್ಯೋನವಸ್ಥಿತಾತ್ಮಾವಿಯತಿ ಚ ಗಚ್ಛತಿಸಂಭ್ರಮೇಣಸುಪ್ತಃ ॥೬೫॥

ಧೈರ್ಯವಿಲ್ಲದವನು,ಅಸ್ಥಿರಮಿತ್ರತೆ, ಉಪಕಾರವನ್ನರಿಯದವನು,ಕೃಶ, ಕಠೋರ ಸ್ವಭಾವ, ಧಮನಿಗಳು ಶಬ್ದ ಮಾಡುತ್ತಿರುವ ಅಥವಾ ದೇಹದಲ್ಲಿ ವ್ಯಾಪ್ತವಾದ ಧಮನಿಗಳುಳ್ಳ,(ಹೆಚ್ಚಿನದಾಗಿ ಕಾಣುವ) ಬಡಬಡಿಸುವ, ದೃತಗಾಮೀ, ಶೀಘ್ರಭಾಷೀ, ಸಂಚಾರಶೀಲ, ಚಂಚಲ, ನಿದ್ದೆ ಮಾಡಿದಾಗ ಆಕಾಶದಲ್ಲಿಸಂಚರಿಸಿದಂತೆ ಸ್ವಪ್ನವನ್ನುಕಾಣುವನು, ಇನ್ನೆಲ್ಲ ಲಕ್ಷಣವುಳ್ಳವನು ವಾತಪ್ರಕೃತಿ ಮನುಷ್ಯನು.

ಅವ್ಯವಸ್ಥಿತಮತಿಶ್ಚಲದೃಷ್ಟಿರ್ಮಂದರತ್ನ ಧನಸಂಚಯಮಿತ್ರಃ ॥ ಕಿಂಚಿದೇವ ವಿಲಪತ್ಯನಿಬದ್ಧಂ ಮಾರುತಪ್ರಕೃತಿರೇಷ ಮನುಷ್ಯಃ ॥೬೬॥

ಅವ್ಯವಸ್ಥಿತ ಬುದ್ಧಿಯು, ಚಂಚಲದೃಷ್ಟಿ, ಜಡವಾದ ರತ್ನ ಧನ ಸಂಚಯದಲ್ಲಿ ಪ್ರೀತಿಯುಳ್ಳವನು, ಅಥವಾ ರತ್ನಾದಿ ಸಂಚಯ ಮಾಡಿದಂಥ ಮಿತ್ರರನ್ನು ದೊರಕಿಸಿಕೊಳ್ಳುವವನು, ಯಾವಾಗಾದರೊಮ್ಮೆ ಸ್ವಲ್ಪಬಡಬಡಿಸುವವನು, ವಾತಪ್ರಕೃತಿಯವನು.

ವಾತಿಕಾಶ್ಚಾಜಗೋವಾಯುಶಶಾಖೂಷ್ಟ್ರಶುನಾಂ ತಥಾ ॥ ಗೃಧ್ರಕಾಕಖರಾದೀನಾಮನೂಕೈಃ ಕೀರ್ತಿತಾನರಾಃ ॥೬೭॥

ಆಡು, ನರಿ, ಮೊಲ, ಇಲಿ, ಒಂಟೆ, ನಾಯಿ, ಹದ್ದು, ಕಾಗೆ, ಕತ್ತೆ, ಇವುಗಳ ಸ್ವಭಾವ, ಗುಣಗಳಂತೆ ವಾತ ಪ್ರಕೃತಿಯವರ ಸ್ವಭಾವ ಗುಣಗಳು ಇರುತ್ತವೆ.

ಪಿತ್ತ ಪ್ರಕೃತಿಯ ಶರೀರ ಲಕ್ಷಣವು ॥೨॥

ಪಿತ್ತಪ್ರಕೃತಿಸ್ತು ಸ್ವೇದಸೋದುರ್ಗಂಧಃ ಪೀತಶಿಥಿಲಾಂಗಸ್ತಾ
ಮ್ರನಖನಯನತಾಲುಜಿಹ್ವೌಷ್ಠಪಾಣಿಪಾದತಲೋ, ದುರ್ಭ
ಗೋವಲೀಪಲಿತಖಾಲಿತ್ಯಜುಷ್ಟೋಬಹುಭುಗುಷ್ಣ ದ್ವೇಷೀಕ್ಷಿ
ಪ್ರಕೋಪಪ್ರಸಾದೋಮಧ್ಯಬಲೋಮಧ್ಯಾಯುಶ್ಚ ಭವತಿ, ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೬೮)

ಬೆವರು ಬರುತ್ತಿರುವವನು, ದುರ್ಗಂಧವುಳ್ಳವನು, ಹಳದಿ, ಶಿಥಿಲವಾದ ಅವಯವವುಳ್ಳವನು, ಉಗುರು, ಕಣ್ಣು, ಕಾಲು, (ನಾಲಿಗೆಯ ಕೆಳಭಾಗ) ನಾಲಿಗೆ, ತುಟಿ, ಕಾಲು ಕೈಗಳ ತಳಭಾಗ ಇವು ಕೆಂಪುಳ್ಳವನು, ಅಸಹ್ಯ ರೂಪವುಳ್ಳವನು, ಚರ್ಮ ನೆರಿಗೆಯುಳ್ಳ, ನೆರೆಗೂದಲು, ಖಾಲಿತ್ಯವುಳ್ಳ. ಬಹಳ ಊಟಮಾಡುವವನು, ಬಿಸಿಯನ್ನೊಲ್ಲದವನು, ಶೀಘ್ರಕೋಪಿಯು, ಕೂಡ್ಲೇ ಸಂತೋಷಹೊಂದುವವನು,ಮಧ್ಯಮ ಬಲವುಳ್ಳ, ಮಧ್ಯಾಯು, ಪಿತ್ತ ಪ್ರಕೃತಿಯ ಮನುಷ್ಯನ ಲಕ್ಷಣವು.

ಮೇಧಾವೀನಿಪುಣಮತಿರ್ವಿಗೃಹ್ಯವಕ್ತಾ ತೇಜಸ್ವೀ ಸಮಿತಿಷು
ದುರ್ನಿವಾರವೀರ್ಯಃ ॥ ಸುಪ್ತಃ ಸನ್ಕನಕಪಲಾಶಕರ್ಣಿ
ಕಾರಾನ್ ಸಂಪಶ್ಯೇದಪಿಚಹುತಾಶವಿದ್ಯುದುಲ್ಕಾಃ ॥೬೯॥

ಬುದ್ಧಿವಂತನು, ಜಾಣ್ಮೆಯುಳ್ಳವನು ಪ್ರತಿ ಶಬ್ದವನ್ನು ವಿಂಗಡಿಸಿ ವಿಶದವಾಗಿ ಹೇಳುವವನು, ಯುದ್ಧಗಳಲ್ಲಿ ಬಹು ಪರಾಕ್ರಮಿಯು, ನಿದ್ರೆಯಲ್ಲಿ ಭಂಗಾರ, ಮುತ್ತಲ ಮರದ ಹೂವು, ಕರ್ಣಿಕಾರ ಹೂವು (ಕಮಲದಂತೆ ಹೂವಿದ್ದು ನಿರ್ಗಂಧವಾದದ್ದು) ಇವುಗಳನ್ನು ನೋಡುತ್ತಾನೆ. ಅಗ್ನಿ, ಮಿಂಚು, ಉಲ್ಕಾಪಾತ ಇವುಗಳನ್ನು ಸ್ವಪ್ನದಲ್ಲಿ ನೋಡುವನು ಪಿತ್ತ ಪ್ರಕೃತಿಯ ಮನುಷ್ಯನು.

ನಭಯಾತ್ ಪ್ರಣಮೇದನತೇಷ್ವಮೃದುಃ ಪ್ರಣತೇಷ್ವಪಿಸಾಂತ್ವ ದಾನರುಚಿಃ॥ ಭವತೀಹಸದಾವ್ಯಥಿತಾಸ್ಯಗತಿಃ ಸಭವೇದಿವಪಿತ್ತ ಕೃತಪ್ರಕೃತಿಃ ॥೭॥

ಭಯದಿಂದ ಬಗ್ಗದ, ಮತ್ತು ವಿನಯವಿಲ್ಲದವರಲ್ಲಿ ಕಠೋರವಾಗಿ ನಡೆಯುವನು, ವಿನಯ-ವಿದ್ದವರಲ್ಲಿ ಆವರನ್ನು ಸಮಾಧಾನ ಪಡಿಸುವನು, ಆವರಿಗೆ ಬೇಕಾದ್ದನ್ನು ಕೊಡುವದರಲ್ಲಿ ಪ್ರೀತಿಯುಳ್ಳವನಿರುತ್ತಾನೆ. ವಿಶೇಷವಾಗಿ ಮುಖಪಾಕದಿಂದ ಮೋರೆಯು ದುಃಖಿತವಾದ್ದಿರುತ್ತದೆ. ನಡೆಯುವ ತ್ರಾಸನ್ನು ಸಹಿಸಲಾರದವನಾದ್ದರಿಂದ ಕಷ್ಟದಿಂದ ನಡೆಯುವವನಾಗಿರುತ್ತಾನೆ. ಇವು ಪಿತ್ತಪ್ರಕೃತಿಯ ದೇಹ ಲಕ್ಷಣವು.

ಭುಜಂಗೋಲೂಕಗಂಧರ್ವ ಯಕ್ಷಮಾರ್ಜಾರವಾನರೈಃ ॥ ವ್ಯಾಘ್ರೃಕ್ಷ್ವನಕುಲಾನೂಕೈಃ ಪೈತ್ತಿಕಾಸ್ತು ನರಾಃ ಸ್ಮೃತಾಃ ॥
(ಸುಶ್ರುತ ॥೭೧॥)

ಸರ್ಪ, ಉಲೂಕ, (ಕಾಗಿಗೆ ವೈರಿಯಾದ ಹಾಳೀಹದ್ದು) ಗಂಧರ್ವ, ಯಕ್ಷ, ಬೆಕ್ಕು, ಮುಂಗ, ವ್ಯಾಘ್ರ (ಹುಲಿ) ಋಕ್ಷ (ಕರಡಿ) ಮುಂಗಲಿ, ಇವುಗಳ ಸ್ವಭಾವ ಗುಣದಂತೆಯಿರುವವನು ಪಿತ್ತ ಪ್ರಕೃತಿಯ ಮನುಷ್ಯನು.

ಕಫ ಪ್ರಕೃಯ ಶರೀರ ಲಕ್ಷಣವು ॥೩॥

ಶ್ಲೇಷ್ಮಪ್ರಕೃತಿಸ್ತು ದೂರ್ವೇಂದೀವರನಿಸ್ತ್ರಿಂಶಾದ್ಯಾರಿಷ್ಟಕಶ ರಕಾಂಡಾನಾಮನ್ಯತಮವರ್ಣಃ ಸುಭಗಃ ಪ್ರಿಯದರ್ಶನೋ ಮಧುರಪ್ರಿಯಃ ಕೃತಜ್ಞೋಧೃತಿವಾನ್ ಸಹಿಷ್ಣುರಲೋಲು ಪೋಬಲವಾಂಶ್ಚಿರಗ್ರಾಹೀ, ದೃಢವೈರಶ್ಚ ಭವತಿ ॥೭೨॥

ದೂರ್ವೆ, ನೀಲ ಕಮಲ, ಖಡ್ಗ, ಅಂಟಾಳಕಾಯಿ, ಬಾಣದಬುಡ, ಇವುಗಳಲ್ಲಿ ಯಾವದಾದರೊಂದರಂತೆ ವರ್ಣವುಳ್ಳವನು, ನೋಡಲು ಸುಂದರನೂ, ಯೋಗ್ಯ ಸನ್ನಿವೇಶವುಳ್ಳ ದೇಹವುಳ್ಳವನೂ, ಸಿಹಿಯಲ್ಲಿ ಆಸಕ್ತಿಯುಳ್ಳವನೂ, ಕೃತಜ್ಞ, ಧೈರ್ಯವುಳ್ಳವನು, ಸಹನೆಯುಳ್ಳ, ಆಶೆಬುರುಕನಲ್ಲದವನೂ, ಬಲವಂತನೂ, ಬಲವಾದ ನೆನಪುಳ್ಳವನೂ ದೃಢ ವೈರವುಳ್ಳವನೂ, ಕಫ ಪ್ರಕೃತಿಯ ಮನುಷ್ಯನು.

ಶುಕ್ಲಾಕ್ಷಃ ಸ್ಥಿರಕುಟಿಲಾಲಿನೀಲಕೇಶೋಲಕ್ಷ್ಮೀವಾನ್ ಜಲದ
ಮೃದಂಗಸಿಂಹಘೋಷಃ॥ ಸುಪ್ತಃ ಸನ್ ಸಕಮಲಹಂಸಚಕ್ರ
ವಾಕಾನ್ ಸಂಪಶ್ಯೇದಪಿಚಜಲಾಶಯಾನ್ ಮನೋಜ್ಞಾನ್ ॥

ಶುಭ್ರವಾದ ಕಣ್ಣುಳ್ಳವನು, ಘಟ್ಟಿಯಾದ ಉಂಗುರ ಗೂದಲಿನ ಅತಿ ಕಪ್ಪಾದ ಸಮೂಹವುಳ್ಳವನೂ, ಧನವುಳ್ಳವನೂ, ಮೃದಂಗ ಸಿಂಹ ಇವು ಗಳಂತೆ ಸ್ವರವುಳ್ಳವನೂ, ನಿದ್ರೆಯಲ್ಲಿ ಕಮಲ, ಹಂಸ, ಚಕೋರ, ಮನೋ ಹರಜಲಾಶಯಇವುಗಳನ್ನು ನೋಡುವವನೂ, ಕಫ ಪ್ರಕೃತಿಯಮನುಷ್ಯನು.

ರಕ್ತಾಂತನೇತ್ರಃ ಸುವಿಭಕ್ತಗಾತ್ರಃ ಸ್ನಿಗ್ಧಚ್ಛವಿಃ ಸತ್ವಗುಣೋ
ಪಪನ್ನಃ ॥ ಕ್ಲೇಶಕ್ಷಮೋಮಾನಯಿತಾಗುರೂಣಾಂಜ್ಞೇ
ಯೋಬಲಾಸಪ್ರಕೃತಿರ್ಮನುಷ್ಯಃ ॥೭೪॥ (ಸುಶ್ರುತ ೭೪)

ಕಣ್ಣಿನಒಳಗಡೆ ಕೆಂಪುಳ್ಳವನೂ, ಒಳ್ಳೇ ಪರಿಪುಷ್ಟ ಸನ್ನಿವೇಶ ಯೋಗ್ಯ ದೇಹವುಳ್ಳವನೂ, ಸತ್ವಗುಣವುಳ್ಳವನೂ, ಕಷ್ಟಸಹಿಷ್ಣುವೂ, ಗುರುಗಳಿಗೆ ಮಾನ್ಯತೆ ಕೊಡುವವನೂ, ಕಫಪ್ರಕೃತಿಯ ಮನುಷ್ಯನು.

ದೃಢಶಾಸ್ತ್ರಮತಿಃ ಸ್ಥಿರಮಿತ್ರಧನಃ ಪರಿಗಣ್ಯಚಿರಾತ್ ಪ್ರದದಾ
ತಿಬಹು,॥ ಪರಿನಿಶ್ಚಿತವಾಕ್ಯಪದಃ ಸತತಂಗುರುಮಾನಕರಶ್ಚ
ಭವೇತ್ ಸಸದಾ, ॥೭೫॥

ಶಾಸ್ತ್ರದಲ್ಲಿದೃಢಬುದ್ಧಿಯೂ, ಸ್ಥಿರವಾದ ಮಿತ್ರಧನವುಳ್ಳವನೂ, ಬಹು ವಿಚಾರ ಮಾಡಿ ಬಹಳ ದಾನಮಾಡತಕ್ಕವನೂ, ನಿರ್ಣಯಯುಕ್ತವಾದ ಮಾತನ್ನೇ ಆಡುವವನೂ, ಯಾವಾಗಲೂ ಗುರುಗಳಿಗೆ ಮಾನಕೊಡತಕ್ಕ ವನೂ, ಕಫ ಪ್ರಕೃತಿಯವನು ಇರುತ್ತಾನೆ.

ಬ್ರಹ್ಮರುದ್ರೇಂದ್ರವರುಣೈಃ ಸಿಂಹಾಶ್ವಗಜಗೋವೃಷೈಃ॥
ತಾಕ್ಷ್ಯಹಂಸಸಮಾನೋಕಾಃ ಶ್ಲೇಷ್ಮಪ್ರಕೃತಯೋನರಾಃ ॥

ಬ್ರಹ್ಮ, ರುದ್ರ, ಇಂದ್ರ, ವರುಣ ಇವರಂತೆ, ಸಿಂಹ, ಕುದುರೆ, ಆನೆ, ಎಳಕು, ಎತ್ತು, ಗರುಡ, ಹಂಸ ಇವುಗಳಂತೆ ಗುಣವುಳ್ಳವನು, ಶ್ಲೇಷ್ಮ ಪ್ರಕೃತಿಯ ಮನುಷ್ಯನು. ವಾತಾದಿ ಪ್ರಕೃತಿಗಳ ದೇಹ ಲಕ್ಷಣಗಳು ಮುಗಿದವು.

ದ್ವಿದೋಷ ತ್ರಿದೋಷ ಪ್ರಕೃತಿ

ದ್ವಯೋರ್ವಾತಿಸೃಣಾಂವಾಪಿಪ್ರಕೃತೀನಾಂತುಲಕ್ಷಣೈಃ
ಜ್ಞಾತ್ವಾಸಂಸರ್ಗಜಾವೈದ್ಯಃ ಪ್ರಕೃತೀರಭಿನಿರ್ದಿಶೇತ್ ॥೭೭॥

ಎರಡೆರಡು ದೋಷಗಳಿಗೊಂದರಂತೆ, ಮೂರು ಪ್ರಕೃತಿಗಳು. ಮೂರೂ ದೋಷಗಳುಳ್ಳದ್ದು ಒಂದು. ಹೀಗೆ ನಾಲ್ಕು (೪). ವಾತಾದಿ ಒಂದೊಂದರಂತೆ ಈ ಹಿಂದೆ ವಿವರಿಸಿದ ಪ್ರಕೃತಿ ಮೂರು (೩). ಒಟ್ಟು ಏಳು (೭). ವಾತಾದಿ ದೋಷ, ದ್ವಿದೋಷ, ತ್ರಿದೋಷಗಳಿಂದ ಯುಕ್ತವಾದ ಶರೀರ ಲಕ್ಷಣವನ್ನು ಹೇಳಿದ್ದಾರೆ. ದ್ವಿದೋಷ, ತ್ರಿದೋಷ ಪ್ರಕೃತಿಗಳನ್ನುಊಹಿಸಿ ತಿಳಿಯಬೇಕು.

ಪ್ರಕೃತಿ ವಿಷಯದಲ್ಲಿಯ ವಿಶೇಷ

ಸತ್ವಾದಿಗುಣ ಭೇದಗಳಿಂದ ಚಿತ್ತ (ಮನಸ್ಸಿನ) ಪ್ರಕೃತಿಗಳನ್ನು ನಿರ್ದೆಶಿಸಿ, ನಂತರ ವಾತಾದಿಗಳು ಅವಶ್ಯವಾಗಿ ಶರೀರಾರಂಭಕ ಪ್ರಕೃತಿ ಗಳಾದ್ದರಿಂದ ನಿರ್ದೇಶಿಸಿದ್ದಾರೆ. ಇದು ಅಪ್ರಾಸಂಗಿಕವೆಂದೆನಿಸಬಹುದು. ಸೂಕ್ಷ್ಮವಾಗಿ ಶಾಸ್ತ್ರದೃಷ್ಟ್ಯಾ ವಿವೇಚಿಸುವ ವಿಷಯದಲ್ಲಿ ಅತ್ಯಂತ ಸಂಬಂಧ ಇರುವದರಿಂದ ಪ್ರಕೃತವಾಗಿ ಇದರ ವಿವೇಚನೆಬೇಕು:- ವಾತಾದಿ ಪ್ರಕೃತಿ ಗಳು ಭೂತಾತ್ಮಕವೆಂದು ಕೆಲವರು ಹೇಳುತ್ತಾರೆ. ಇದರಿಂದ ಭೌತಿಕ ವಿಚಾರದಿಂದಲೂ ಸಹ ವಿಶೇಷವಾಗಿ ವಾತಾದಿ ಪ್ರಕೃತಿಗಳನ್ನು ಗ್ರಹಿಸಲೇ ಬೇಕೆಂದು ಸೂಚಿತವಾಗುತ್ತದೆ. ಇದರ ವಿವರವು:—

ಭೂತ ಪ್ರಕೃತಿ

ಪ್ರಕೃತಿಮಿಹನರಾಣಾಂಭೌತಿಕೀಂಕೇಚಿದಾಹುಃ :ಪವನದಹನ
ತೋಯೈಃ ಕೀರ್ತಿತಾಸ್ತಾಸ್ತುತಿಸ್ರಃ ॥ ಸ್ಥಿರವಿಪುಲಶರೀರಃ
ಪಾರ್ಥಿವಶ್ಚಲ್ಪವಾನಾನ್‌ಶುಚಿರಥಚಿರಜೀವೀನಾಭಸಃ ಖೈರ್ಮ
ಹದ್ಭಿಃ ॥ (ಸುಶ್ರುತ॥ ಶಾರೀರ॥ ಅ ೫ ಸೂ ೮೦)

ಮನುಷ್ಯರ ಪ್ರಕೃತಿಯು ಪಂಚಭೂತಾತ್ಮಕಗಳ ಪ್ರಕೃತಿಯಂತೇ ಇರುತ್ತದೆಂದು ಕೆಲವರು ಹೇಳುತ್ತಾರೆ. ಅವರ ಮತದಂತೆ ವಾಯು, ಅಗ್ನಿ, ಜಲ ಇವುಗಳು, ವಾತ, ಪಿತ್ತ, ಕಫಗಳೆಂಬ ದೇಹದಲ್ಲಿಯ ಪ್ರಕೃತಿ ಸ್ವರೂಪದಿಂದ ಈ ಹಿಂದೆ ಹೇಳಲ್ಪಟ್ಟಿರುತ್ತವೆ. ಇನ್ನುಳಿದವುಗಳೆಂದರೆ ಪೃಥಿವಿ, ಆಕಾಶಗಳು. ಅವುಗಳ ಗುಣಗಳು:—

ಪಾರ್ಥಿವ ಪ್ರಕೃತಿ:— ಸ್ಥಿರವಾಗಿಯೂ, ವಿಶಾಲವಾಗಿಯೂ, ಸಹನತೆಯುಕ್ತವಾಗಿಯೂ, ಶುಚಿಯಾಗಿಯೂ, ಚಿರಾಯುವಾಗಿಯೂ ಇರುವ ದೇಹವುಳ್ಳವನು, ಪೃಥಿವೀ ತತ್ವದ ಶರೀರವುಳ್ಳವನು.

ಆಕಾಶತತ್ವ ಪ್ರಕೃತಿ:— ಆಕಾಶವೆಂದರೆ ದೇಹದಲ್ಲಿಯ ಪೊಳ್ಳು ಭಾಗ, ಮತ್ತೂ ರಂಧ್ರಗಳು. ಕಿವಿ, ಮೂಗು ಮೊದಲಾದ ರಂಧ್ರಗಳು ವಿಸ್ತಾರವುಳ್ಳವುಗಳಾಗಿದ್ದರೆ ಆಕಾಶ ತತ್ವ ಬಹುಲವಾದ ಶರೀರವುಳ್ಳವನು. ಇವು ದೇಹದಲ್ಲಿಯ ಪಂಚಭೂತ ಲಕ್ಷಣಗಳು. ಯಾವದರ ಲಕ್ಷಣ ವಿಶೇಷ ಗೋಚರವಾಗುತ್ತದೆಯೋ ಆ ಭೂತಾತ್ಮಕ ದೇಹವುಳ್ಳವನೆಂದು ತಿಳಿಯಬೇಕು. ಇದು ಪ್ರಾಧಾನ್ಯವಾಗಿರುತ್ತದೆಂಬರ್ಥವು.

(೧೩) ಬಯಕೆಯ ಲಕ್ಷಣ

ದೌಹೃದ ಲಕ್ಷಣಾನಿ

ಗರ್ಭಿಣಿಯರಿಗೆ ೩ ತಿಂಗಳ ನಂತರ ಬಯಕೆಯಾಗುತ್ತದೆ. ಕೆಲವರಿಗೆ ಎರಡನೇ ತಿಂಗಳಲ್ಲಿಯೂ ಸಹ ಆರಂಭವಾಗುವದುಂಟು. ಕೆಲವರು ಬಯಕೆ ಲಕ್ಷಣವು ವಾಂತಿ ಮತ್ತೂ ಯಾವದಾದರೊಂದು ವಸ್ತುವಿನಲ್ಲಿ ವಿಶೇಷ ಅಭಿಲಾಷೆ ಉಂಟಾಗದವರು ಸಹ ದೃಷ್ಟಿಗೋಚರವಾಗುತ್ತಾರೆ. ಸಾಮಾನ್ಯತಃ ಮೂರು ತಿಂಗಳು ಕಳೆದ ನಂತರ, ನಾಲ್ಕನೆಯ ತಿಂಗಳಲ್ಲಿ ಬಯಕೆಯಾಗುವದನ್ನು ವಿವರಿಸಿದ್ದಾರೆ. ಬಯಕೆ ಉತ್ಪನ್ನವಾಗಲು ಕಾರಣವೇನಂದರೆ, ನಾಲ್ಕನೇ ತಿಂಗಳಿನಲ್ಲಿ ಗರ್ಭದ ಅಂಗಪ್ರತ್ಯಂಗಗಳು ಸ್ಪುಟ

ವಾಗಿ ಉತ್ಪನ್ನವಾಗುತ್ತವೆಯಾದ್ದರಿಂದ, ಗರ್ಭದ ಹೃದಯ ಸ್ಥಾನವು ಉಂಟಾಗುವದು. ಹೃದಯವೇಸ್ಥಾನವಾದ ಚೇತನಾಧಾತು ಅಭಿವ್ಯಕ್ತವಾಗುತ್ತದೆ. ಮನಸ್ಸಿಗೆ ಸ್ಥಾನ (ಆಶ್ರಯ) ವಾದ ಹೃದಯದ ಉತ್ಪತ್ತಿಯಿಂದ ಮನಸ್ಸು ಗರ್ಭದಲ್ಲಿ ಪ್ರಾದುರ್ಭವಿಸಿ, ತನಗೆ ಇಚ್ಛಿತವಾದ ವಸ್ತುವನ್ನು ಬಯಸುತ್ತದೆ. ಗರ್ಭವು ಗರ್ಭಿಣಿಯಾದ ತಾಯಿಯಿಂದಲೇ ಪೋಷಿತವಾಗುವದರಿಂದ, ಗರ್ಭಕ್ಕೆ ಅಪೇಕ್ಷಿತವಾದದ್ದನ್ನು ಸ್ವತಂತ್ರ ಗ್ರಹಿಸಲು ಬರುವದಿಲ್ಲ. ತನಗೆ ಬೇಕಾದ್ದನ್ನು ತಾಯಿಯ ಆಹಾರದಿಂದಲೇ ಪಡೆಯಬೇಕಾಗುತ್ತದೆ ಈ ಕಾರಣದಿಂದ ಬಯಕೆ ಆಗುವದೆಂದು ಸುಶ್ರುತಾಚಾರ್ಯರ ಸಿದ್ಧಾಂತವು.

ಚತುರ್ಥೇಸರ್ವಾಂಗಪ್ರತ್ಯಂಗವಿಭಾಗಃ ಪ್ರವ್ಯಕ್ತೋಭವತಿ, ಗರ್ಭಹೃದಯಸ್ಪಾದುರ್ಭಾವಾತ್ ಚೇತನಾಧಾತುರಭಿವ್ಯಕ್ತೋ ಭವತಿ, ಕಸ್ಮಾತ್? ತತ್‌ಸ್ಥಾನತ್ವಾತ್‌ತಸ್ಮಾದ್ಗರ್ಭಃ ಚತುರ್ಥೇ ಮಾಸ್ಯಭಿಪ್ರಾಯಮಿಂದ್ರಿಯಾರ್ಥೇಷುಕರೋತಿ, ದ್ವಿಹೃದಯಾಂಚನಾರೀಂ ದೌಹೃದಿನೀಮಾಚಕ್ಷತೆ ॥

(ಸುಶ್ರುತ॥ ಶಾರೀರ॥ ಅ ೩ ಸೂ ೧೪)

ನಾಲ್ಕನೇ ತಿಂಗಳಿನಲ್ಲಿ ಸರ್ವಅಂಗಪ್ರತ್ಯಂಗ ವಿಭಾಗಗಳು, ಸ್ಪಷ್ಟವಾಗಿ ಉತ್ಪನ್ನವಾಗುತ್ತವೆ. ಗರ್ಭದಲ್ಲಿ ಹೃದಯ ಸ್ಥಾನ ನಿರ್ಮಾಣವಾಗುವದರಿಂದ ಚೇತನಾಧಾತು ಪ್ರಾದುರ್ಭವಿಸುತ್ತದೆ. ಇದರಿಂದ ಗರ್ಭವು ಇಂದ್ರಿಯಾರ್ಥ ವಿಷಯಗಳಲ್ಲಿ ಅಭಿಲಾಷೆಯುಕ್ತವಾದದ್ದಾಗುತ್ತದೆ. ಗರ್ಭದ ಹೃದಯ (ಮನಸ್ಸು) ಗರ್ಭಿಣೀಯ ಹೃದಯಗಳು, ಒಟ್ಟು ಎರಡು ಇರುವದರಿಂದ "**ದ್ವಿಹೃದಯಾ, ದೌಹೃದಿನೀ**" ಎಂದು, ಬಯಕೆ ಉತ್ಪನ್ನವಾದ ಸ್ತ್ರೀಯರ ಹೆಸರುಗಳು. ಅವುಗಳ ಸ್ವರೂಪವೇ, **ದೌಹೃದ, ದ್ವೈಹೃದಯ್ಯ** ವೆಂದು ಶಾಸ್ತ್ರ ಪ್ರತಿಪಾದಿತವಾಗಿದೆ. ಬಯಕೆ ಉಳ್ಳವಳ ಸ್ವರೂಪ ಎಂಬರ್ಥವು

ತದ್ಯಥಾ:-ಆರ್ತವಾದರ್ಶನಮಾಸ್ಯಸಂಸ್ರವಣಮನನ್ನಾಭಿಲಾಷಃ ಛರ್ದ್ದಿರರೋಚಕೋಽವ್ಲ ಕಾಮತಾ,ಚ ವಿಶೇಷೇಣಶ್ರದ್ಧಾಪ್ರಣ ಯನಮುಚ್ಚಾವಚೇಷು, ಭಾವೇಷುಗುರುಗಾತ್ರತ್ವಂಚಕ್ಷು ಷೋರ್ಗ್ಲಾನಿಃ ಸ್ತನಯೋಃ ಸ್ತನ್ಯವೋಷ್ಮಯೋಃಸ್ತನಮಂಡಲ ಯೋಶ್ಚ ಕಾಷ್ಣ್ಯಮತ್ಯರ್ಥಂಶ್ವಯಥುಃ ಪಾದಯೋರೀಷ ಲ್ಲೋಮರಾಜ್ಯುದ್ಗಮೋ, ಯೋನ್ಯಾಶ್ಚಾಲತ್ವಮಿತಿಗರ್ಭೇ ಪರ್ಯಾಗತೇರೂಪಾಣಿಭವಂತಿ ॥

(ಚರಕ॥ ಶಾರೀರ॥ ಅ ೪ ಸೂ ೧೬)

ಮಾಸಿಕರಜಃ ಸ್ರಾವವು ಬಂದಾಗುತ್ತದೆ. ಬಾಯಲ್ಲಿ ನೀರೇಳುತ್ತಿರುವದು, ಅನ್ನದಲ್ಲಿ ವಿಶೇಷ ಅಭಿಲಾಷೆಯಿಲ್ಲದಿರುವದು, ವಾಂತಿಯಾಗೋಣ, ಹುಳಿಯಲ್ಲಿ ಅಪೇಕ್ಷೆಯು, ಅನೇಕ ವಿಧವಾದ (ಉಚ್ಚಾವಚಂ) ಮಾತಾಡುವ ವಿಷಯದಲ್ಲಿ ಹೆಚ್ಚಾಗಿ ಪ್ರೀತಿ ಉಂಟಾಗುವದು. ದೇಹ ಸ್ವರೂಪದಲ್ಲಿ ಸ್ವಲ್ಪ ಸ್ಥೂಲ ಅಥವಾ ಜಡತೆಯು ಉತ್ಪನ್ನವಾಗುವಿಕೆ, ಕಣ್ಣುಗಳಲ್ಲಿ ಗ್ಲಾನಿಯು ಸ್ತನಗಳಲ್ಲಿ (ಹಾಲು) ಸ್ತನ್ಯೋತ್ಪತ್ತಿಯು, ತುಟಿಗಳಲ್ಲಿ, ಸ್ತನಗಳ ಸುತ್ತಲಿನ ಭಾಗಗಳಲ್ಲಿ ಕಪ್ಪು ವರ್ಣವಾಗುವಿಕೆ, ಬಹಳವಾಗಿ ಕಾಲು ಮೊದಲಾದ ಅಂಗಗಳಲ್ಲಿ ಉಬ್ಬುವಿಕೆ (ಶ್ವಯಥುಃ), ಕಾಲುಗಳಲ್ಲಿ ಸ್ವಲ್ಪ ಪ್ರಮಾಣದಿಂದ ಕೂದಲುತ್ಪನ್ನವಾಗುವಿಕೆ, ಜನನೇಂದ್ರಿಯದ ವಿಕಾಸವು (ಅರಳುವದು), ಗರ್ಭವುಬೆಳೆಯುತ್ತಿರುವಾಗಮೂರನೆತಿಂಗಳಲ್ಲಿದೌಹೃದ (ಬಯಕೆ) ಲಕ್ಷಣವು ಇದರಂತೆಇರುತ್ತದೆ.

ಬಯಕೆಯಲಕ್ಷಣಗಳನ್ನುತಿಳಿಯುವದರಿಂದ ಪ್ರಯೋಜನ

ಗರ್ಭಿಣೀಯರಿಗೆ ಗರ್ಭಕ್ಕನುಕೂಲವಾದ ಆಹಾರ ವಿಹಾರಗಳನ್ನು ಯೋಜಿಸುವದರಿಂದ, ಯೋಗ್ಯ ಸಮಯದಲ್ಲಿ ಶ್ರೇಷ್ಠ ಸಂತತಿಯನ್ನು; ಸುಖವಾಗಿಪ್ರಸವಿಸುತ್ತಾರೆ ತಾಯಿಯ ಆರೋಗ್ಯವೂ ಸಹ ಸಮಯ ಪ್ರಸವದಿಂದ ಯಥಾಯೋಗ್ಯವಾದದ್ದಾಗುತ್ತದೆ. ಗರ್ಭಾರಂಭ ಮೊದಲು ಗೊಂಡು ಈ ಕ್ರಮಗಳ ಅವಶ್ಯಕತೆ ಇರುವದು. ಆದ್ದರಿಂದ ಗರ್ಭದಲ್ಲಿಯ

ಅವಾವ ತಿಂಗಳಿದ ಸ್ಥಿತಿ ಲಕ್ಷಣಗಳನ್ನು ಹೇಳುತ್ತಾರೆ. ಈ ಲಕ್ಷಣಗಳ ಹೊರತಾಗಿ ಅವ್ಯಕ್ತ, ಸೂಕ್ಷ್ಮ ಗರ್ಭವು, ಸ್ಪುಟವಾಗಿ ತಿಳಿಯುವದಿಲ್ಲ. ಬಯಕೆಯಾದ ಪದಾರ್ಥಗಳನ್ನು ಗರ್ಭಿಣಿಗೆ ಒದಗಿಸಿಕೊಡದಿದ್ದರೆ ಗರ್ಭವು ವಿಕೃತವಾಗುತ್ತದೆ ಗರ್ಭವು ಯಥಾಯೋಗ್ಯ ಬೆಳೆಯಲಿಕ್ಕೆ ಬಯಕೆಯ ಪೂರ್ಣತೆ (ತೃಪ್ತಿ) ಯಾಗಬೇಕು ಬಯಕೆಯನ್ನು ತಿಳಿದುಕೊಳ್ಳಬೇಕಾದರೆ, ಅದರ ಲಕ್ಷಣಬೇಕು. ಈ ಉದ್ದೇಶದಿಂದ ಬಯಕೆಯ ಲಕ್ಷಣವು ಪ್ರತಿಪಾದಿತವಾಗಿದೆ. ಇದನ್ನು ಕುರಿತು ಚರಕಾಚಾರ್ಯರ ಮತವು ಹೀಗಿದೆ.

ತಸ್ಯಾಗರ್ಭಾಪತ್ತ್ಯೇದ್ವೈಹೃದಯಸ್ಯಚವಿಜ್ಞಾನಾರ್ಥಂಲಿಂಗಾನಿಸಮಾಸೇನೋಪದೇಕ್ಷ್ಯಾಮಃ। ಉಪಚಾರಸಾಧನಂ ಹ್ಯಸ್ಯ ಜ್ಞಾನೆ, ಜ್ಞಾನಂಚಲಿಂಗತಃ, ತಸ್ಮಾದಿಷ್ಟೋಲಿಂಗೋಪದೇಶಃ
(ಚರಕ॥ ಶಾರೀರ॥ ಅ ೪ ಸೂ ೨೬)

ಗರ್ಭಕ್ಕೆ ಬಯಸಿದ್ದು ದೊರೆಯದಿದ್ದರೆ ಆಪತ್ತಿಯನ್ನುಂಟುಮಾಡುವ, ಅಥವಾ ಗರ್ಭಕ್ಕೆ ದುಃಖವನ್ನುಂಟು ಮಾಡುವ, ಗರ್ಭಿಣಿಯ ಬಯಕೆಯನ್ನು ತಿಳಿದುಕೊಳ್ಳುವದಕ್ಕಾಗಿ ಅದರಲಕ್ಷಣಗಳನ್ನು ವಿಸ್ತಾರವಾಗಿ ಹೇಳುತ್ತೇನೆ. ಈ ಬಯಕೆಯ ಲಕ್ಷಣ ಜ್ಞಾನದಿಂದ ಉಪಚಾರ ಸಾಧನವಾದ ವಸ್ತುಗಳು ಯಾವವೆಂದು ತಿಳಿಯುತ್ತವೆ. ಆ ಜ್ಞಾನವು ಲಕ್ಷಣಗಳಿಂದ ತಿಳಿದು ಬರುತ್ತದೆ. ಆದ್ದರಿಂದ ಗರ್ಭಿಣಿಯ ಬಯಕೆಯನ್ನು ತಿಳಿಯಲು ಲಕ್ಷಣೋಪದೇಶವು (ಲಿಂಗೋಪದೇಶ) ಅತ್ಯಂತ ಅವಶ್ಯವಾಗಿದೆ.

ಗರ್ಭವೆಂದು ಭಾಸವಾಗುವ ನಾಗೋದರ ಲಕ್ಷಣ
ಉಪವಾಸವ್ರತಕರ್ಮಪರಾಯಾಃ ಪುನಃಕದಾಹಾರಾಯಾಃ ಸ್ನೇಹ ದ್ವೇಷಿಣ್ಯಾವಾತ ಪ್ರಕೋಪಣೋಕ್ತಾನ್ಯಾಸೇವಮಾನಾಯಾ ಗರ್ಭೋವೃದ್ಧಿಂ ನಪ್ರಾಪ್ನೋತಿ ಪರಿಶುಷ್ಕತ್ವಾತ್ । ಸಚಾಪಿ, ಕಾಲಮುವತಿಷ್ಠತೇsತಿವಾತ್ರಂ ಅಸ್ಪಂದನಶ್ಚಭವತಿ ತಂತುನಾಗೋದರಮಾ ಚಕ್ಷತೆ ॥
(ಚರಕ॥ ಶಾರೀರ॥ ಅ ೮ ಸೂ ೨೭॥)

ಗರ್ಭಿಣಿಯು, ಉಪವಾಸಾದಿಗಳನ್ನು ಮಾಡುವದರಿಂದ, ರೂಕ್ಷ, ನೀರಸ, ತೀಕ್ಷ್ಣಆಹಾರ ಮೊದಲಾದವುಗಳಿಂದ, ಗರ್ಭವು ಬೆಳೆಯದೆ ಹಾಗೇ ಯಿರುತ್ತದೆ ಯಾಕಂದರೆ ಗರ್ಭವು ಒಣಗಿ ಹೋಗಿರುತ್ತದೆ. ಇದಾದರೂ ಹೊಟ್ಟೆಯಲ್ಲಿ ಬಹುಕಾಲ ಇರುತ್ತದೆ. ಹೊಟ್ಟೆಯಲ್ಲಿದ್ದರೂ ಚಲಿಸುವದಿಲ್ಲ. ಇದನ್ನು ನಾಗೋದರವೆಂದು ಹೇಳುತ್ತಾರೆ. "ತು" ಎಂಬ ಪದದಿಂದ ಹೇಳಿದ್ದರಿಂದ ವಿಕಲ್ಪವೆಂದು ತಿಳಿಯಬೇಕು ಹೀಗೆ ವಿಕಲ್ಪ ಸಿದ್ಧಾಂತದಿಂದ ಶುಷ್ಕ ಗರ್ಭರೂಪವಾದ ನಾಗೋದರ (ಇಲ್ಲಿ ಗರ್ಭ ಬೆಳೆಯುವದಿಲ್ಲ) ಮತ್ತೂ ರೋಗ ರೂಪವಾದ ನಾಗೋದರವೆಂದು ಭಿನ್ನವಾಗಿ ಅರ್ಥವನ್ನು ಕೆಲವರು ಮಾಡುತ್ತಾರೆ. ಅವರ ಮತದಂತೆ.— **ರೋಗ ರೂಪದ ಲಕ್ಷಣ:—**

ನಾಗೋದರ ಲಕ್ಷಣ:— ಸ್ತ್ರೀಯರಿಗೆ ನಾಗೋದರವೆಂಬರೋಗವಾಗುತ್ತದೆ. ಅದು ಹೊಕ್ಕಳ ಕೆಳಗೆ, ಬಸ್ತಿಯ ಮೇಲ್ಭಾಗದಲ್ಲಿರುವದರಿಂದ ಗರ್ಭವೆಂಬ ಭಾವನೆಯು ಬರುತ್ತದೆ. ಅತ್ಯಂತ ಹೊಟ್ಟೆ ಉಬ್ಬಿ ಕಾಲು ಕೈಗಳು ದುರ್ಬಲವಾಗುತ್ತ ಹೋಗಿ ಮಲಮೂತ್ರ ನಿರೋಧದಿಂದ, ಕ್ರಮೇಣ ರೋಗವುಳ್ಳವಳು ಮರಣ ಹೊಂದುತ್ತಾಳೆ. ಹೊಟ್ಟೆ ಉಬ್ಬುವಿಕೆಯಿದ್ದರೂ ಸ್ತನಪುಷ್ಟತೆ ವಮನ ಇತ್ಯಾದಿ ಬಯಕೆ ಮತ್ತೂ ಗರ್ಭಿಣಿಯ ಲಕ್ಷಣಗಳು ನಾಗೋದರದಲ್ಲಿ ಇರುವದಿಲ್ಲ. ಈ ಲಕ್ಷಣಗಳಿಲ್ಲದಿದ್ದರೆ ಗರ್ಭಿಣಿಯಿಲ್ಲವೆಂದು ನಿರ್ಣಯಿಸಲು ಲಕ್ಷಣ ಅವಶ್ಯವಾಗಿ ಬೇಕು. ಜಲೋದರ ಉದರ, ಮೊದಲಾದ ರೋಗಗಳಲ್ಲಿ, ಗರ್ಭಿಣಿಯ ಲಕ್ಷಣ ಉಂಟಾಗದಿರುವದರಿಂದಲೇ ಗರ್ಭವಲ್ಲವೆಂದು ನಿಶ್ಚಯಿಸಲು ಬರುತ್ತದೆ.

ಗರ್ಭದಂತೆಯೇ ಇರುವ ರಕ್ತಗುಲ್ಮ ಲಕ್ಷಣ:—

ಸ್ತ್ರೀಯರ ರಕ್ತಗುಲ್ಮವು ಅತ್ಯಂತ ಗರ್ಭಿಣೀ ಲಕ್ಷಣಗಳೆಲ್ಲದರಿಂದಲೂ ಯುಕ್ತವಾಗಿರುತ್ತದೆ.

ಶೋಣಿತಗುಲ್ಮಸ್ತು ಖಲುಸ್ತ್ರಿಯಾಏವಭವತಿನಪುರಷಸ್ಯ, ಗರ್ಭ ಕೋಷ್ಠಾರ್ತವಾಗಮನವೈಶೇಷ್ಯಾತ್|ಸಾರತಂತ್ರ್ಯಾದವೈಶಾರದ್ಯಾತ್ಸತತಮುಪಚಾರಾನುರೋಧಾದ್ವಾ ವೇಗಾನುದೀರ್ಣಾನುಪರುಂಧತ್ಯಾಆಮುಗರ್ಭೇವಾಽಸ್ಯಚಿರಪತಿತೇಽಥವಾಽಸ್ಯಚಿರ

ಪ್ರಜಾತಾಯಾ, ಋತೌವಾ ವಾತಪ್ರಕೋಪಣಾನ್ಯಾಸೇವಮಾ
ನಾಯಾಃ ಕ್ಷಿಪ್ರಂ ವಾತಃ ಪ್ರಕೋಪಮಾಪದ್ಯತೆ, ॥
(ಚರಕ॥ ನಿದಾನಸ್ಥಾನ॥ ಅ ೩ ಸೂ ೧೩)

ರಕ್ತಗುಲ್ಮವು ಸ್ತ್ರೀಯರಿಗೇ ಆಗುತ್ತದೆ. ಪುರುಷರಿಗೆ ಆಗುವದಿಲ್ಲ. ಗರ್ಭಾಶಯದಲ್ಲಿ ವಿಶೇಷ ರೀತಿಯಿಂದ ಆರ್ತವ ಆಗಮನ ವಾತ ಪ್ರಕೋಪ ಸ್ಥಿತಿಯಿಂದ ಅಥವಾ ಆರ್ತವ ಪ್ರತಿಬಂಧದಿಂದಲೂ ರಕ್ತಗುಲ್ಮವಾಗುವದು. ಸ್ತ್ರೀಯು ಪರತಂತ್ರಳಾದ್ದರಿಂದ ಯಾವಾಗಲೂ ಗೃಹಕೃತ್ಯಾದಿ ಉಪಚಾರ ಗಳಲ್ಲಿ ತೊಡಗಿ, ಅಜ್ಞಾನದಿಂದ, ಮಲಮೂತ್ರಾದಿ ವೇಗಗಳನ್ನು ಹೆಚ್ಚಾಗಿ ನಿರೋಧ ಮಾಡುವದರಿಂದಲೂ, ಅಥವಾ, ಸದ್ಯದಲ್ಲುಂಟಾದ ಗರ್ಭವುಳ್ಳವ ಳಿಗೂ, ಅಥವಾ ಸದ್ಯದಲ್ಲಿ ಗರ್ಭಪಾತವಾದವಳಿಗೂ, ಸ್ವಲ್ಪ ದಿನಗಳಲ್ಲಿ ಪ್ರಸವ ಹೊಂದಿದವಳಿಗೂ, ಅಥವಾ ಮಾಸಿಕ ಸ್ರಾವವಾಗುವ ದಿನಗಳಲ್ಲಿ ವಾತ ಪ್ರಕೋಪಕರವಾದ ಆಹಾರ, ವಿಹಾರ,ಆಚಾರಗಳಸೇವನೆಗಳಿಂದಲೂ, ತೀವ್ರವಾಗಿ ವಾಯುವು ಪ್ರಕೋಪ ಹೊಂದುತ್ತದೆ ಪ್ರಕೋಪ ಹೊಂದಿದ ವಾಯುವು ಗುಲ್ಮ ರೋಗವನ್ನುಂಟುಮಾಡುತ್ತದೆ.

ಸಪ್ರಕುಪಿತೋ ಯೋನಿಮುಖಮನು ಪ್ರವಿಶ್ಯಾರ್ತವಮುಪರು
ಣದ್ಧಿ, ಮಾಸಿ, ಮಾಸಿ, ತದಾರ್ತವಮುಪರುಧ್ಯಮಾನಂಕುಕ್ಷಿ
ಮುಭಿವರ್ಧಯತಿ,। ತಸ್ಯಾಃ ಶೂಲಕಾಸಾತೀಸಾರಛರ್ದ್ಯರೋ
ಚಕಾವಿಪಾಕಾಂಗಮರ್ದನಿದ್ರಾಲಸ್ಯಸ್ತ್ರೈಮಿತ್ಯಕಫಪ್ರಸೇಕಾಃ
ಸಮುಪಜಾಯಂತೆ, ಸ್ತನಯೋಶ್ಚಸ್ತನ್ಯಂ, ಓಷ್ಠಯೋಃ ಸ್ತನ
ಮಂಡಲಯೋಶ್ಚ ಕಾರ್ಷ್ಣ್ಯಂ, ಅತ್ಯರ್ಥಂಗ್ಲಾನಿಶ್ಚಕ್ಲಮೋಃ,
ಮೂರ್ಛಾ, ಹೃಲ್ಲಾಸೋ, ದೋಹದಃ, ಶ್ವಯಥುಶ್ಚಪಾ
ದಯೋಃ, ಈಷಚ್ಚೋದ್ಗವೋರೋಮರಾಜ್ಯಾಃ, ಯೋನ್ಯಾ
ಶ್ಚಾಟಾಲತ್ವಂ, ಅಪಿಚಯೋನ್ಯಾದೌರ್ಗಂಧ್ಯಮಾಸ್ರಾವಶ್ಚೋ
ಪಜಾಯತೆ, ಕೇವಲಶ್ಚಾಸ್ಯಾಗುಲ್ಮಃ ಪಿಂಡಿತವಿವಸ್ಪಂದತೆ,
ತಾಮುಗರ್ಭಾಂಗರ್ಭಿಣೀಮಿತ್ಯಾಹುರ್ಮೂರ್ಧಾಃ ॥
(ಚರಕ॥ ನಿದಾನ॥ ಅ ೩ ಸೂ ೧೪)

ಹಿಂದೆ ಹೇಳಿದ ವೇಗವಿಧಾರಣ ಅಹಿತಾಹಾರ ಸೇವನೆಗಳಿಂದ ತೀವ್ರ ಪ್ರಕುಪಿತವಾದ ವಾಯುವು, ಯೋನಿಯನ್ನು (ಜನನೇಂದ್ರಿಯ) ಪ್ರವೇಶಿಸಿ ಮಾಸಿಕ (ಮುಟ್ಟು) ಸ್ರಾವವನ್ನು ತಡೆಯುತ್ತದೆ. ಪ್ರತಿ ತಿಂಗಳಲ್ಲಿ ತಡೆದು ಸಂಚಿತವಾದ ಆರ್ತವವು ಹೊಟ್ಟೆಯನ್ನುಬ್ಬಿಸುತ್ತದೆ. ಇಂಥ ಸ್ತ್ರೀಯರಿಗೆ ಶೂಲೆ, ಕೆಮ್ಮು, ಹೊಟ್ಟೆ ಝಾಡಿಸುವದು, ವಾಂತಿ, ಬಾಯಿರುಚಿ ಇಲ್ಲದಿರೋಣ, ಮುಖವಿಪಾಕಾದಿಗಳು, ಮೈಯಲ್ಲಿ ನೋವು, ನಿದ್ರೆ, ಆಲಸ್ಯ, ಜಡತೆ, ಕಫಪ್ರಸೇಕ, ಇವುಗಳುತ್ಪನ್ನವಾಗುತ್ತವೆ. ಮೊಲೆಗಳಲ್ಲಿಹಾಲು, ತುಟಿ, ಸ್ತನದ ಸುತ್ತಲಿನ ಭಾಗದಲ್ಲಿ ಕಪ್ಪು ಬಣ್ಣವು, ಕಣ್ಣುಗಳಲ್ಲಿ ಬಹಳ ಗ್ಲಾನಿಯು, ಮೂರ್ಛಾ, ಹೃದಯದಲ್ಲಿ ವೇದನೆ, ಬಯಕೆ, ಕಾಲುಗಳಲ್ಲಿ ಬಾವುಬರುವಿಕೆ, ಸ್ವಲ್ಪವುಟ್ಟಿಗೆ ರೋಮುಗಳ ಸಾಲುಂಟಾಗುವಿಕೆ, ಯೋನಿಯು ವಿಕಸಿತವಾಗೋಣ, ವಮತ್ತು ಯೋನಿಯಲ್ಲಿ ದುರ್ಗಂಧ ಸ್ರಾವ, ಮೊದಲಾದ ವುಗಳೆಲ್ಲವೂ ಸಂಭವಿಸುತ್ತವೆ. ಕೇವಲ ಗುಲ್ಮವು ಹೊಟ್ಟೆಯಲ್ಲಿ ಸ್ಪಂದನ (ಚಲನ) ವನ್ನು, ವಾಯು ಪ್ರಕೋಪದಿಂದ ಹೊಂದುತ್ತದೆ. ಗುಲ್ಮದಿಂದ ಹೊಟ್ಟೆ ದೊಡ್ಡದಾಗಿರುವವರನ್ನು ಮೂಢರು ಗರ್ಭಿಣಿಯೆಂದು ಹೇಳುತ್ತಾರೆ. ಈ ಹಿಂದೆ ಬಯಕೆಯ ಲಕ್ಷಣದಲ್ಲಿ ಇವೇ ಲಕ್ಷಣಗಳನ್ನು ಹೇಳಿದ್ದರೂ, ಸುಗಮವಾಗಲೆಂದು ಸ್ಪಷ್ಟಪಡಿಸಿದ್ದಾರೆ. ಅದರ ಕ್ರಮ ಲಕ್ಷಣವನ್ನು ವಿಶದವಾಗಿ ಇದಕ್ಕೂ ಹೆಚ್ಚು ಸ್ಪಷ್ಟ ಪಡಿಸುತ್ತಾರೆ.

ಋತಾವನಾಹಾರತಯಾಭಯೇನಪಿರೂಕ್ಷಣೈರ್ವೇಗವಿನಿಗ್ರಹೈಶ್ಚ ॥ ಸಂಸ್ತಂಭಿನೋಲ್ಲೇಖನಯೋನಿದೋಷೈರ್ಗುಲ್ಮಃ ಸ್ತ್ರೀಯಂ ರಕ್ತಭವೋಽಭ್ಯುಪೈತಿ ॥

(ಚರಕ ॥ ಚಿಕಿತ್ಸಾ ॥ ಅ. ೫ ಶ್ಲೋ. ೧೮)

ಪುಷ್ಪದರ್ಶನ ಕಾಲದಲ್ಲಿ (ಮಾಸಿಕ ಸ್ರಾವ ದಿನಗಳಲ್ಲಿ) ಎರಡನೇಯವರನ್ನು ಕೇಳಬೇಕಾಗುತ್ತದೆಂಬ ಭಯದಿಂದ ರೂಕ್ಷಾಹಾರ ಸೇವಿಸುವದು, ಅಥವಾ ಮಲಮೂತ್ರಾದಿ ವೇಗ ನಿರೋಧಮಾಡುವದು, ರಜಸ್ಸಿನ ಸ್ತಂಭನೆ, ಅಥವಾ ಸ್ತಂಭಕ, ವಾತಪ್ರಕೋಪಆಹಾರಾದಿ ಸೇವನೆ, ಬಹಳ ಸ್ರಾವದಿಂದ ರೂಕ್ಷವಾಗುವಿಕೆ, ಯೋನಿದೋಷ ಮೊದಲಾದವುಗಳಿಂದ, ಸ್ತ್ರೀಯರಿಗೆ ರಕ್ತ ಗುಲ್ಮವಾಗುವದು.

ಯಃ ಸ್ಪಂದತೇಪಿಂಡಿತವಿವನಾಂಗೈಶ್ಚಿರಾತ್ ಸಶೂಲಃ ಸಮು ಗರ್ಭಲಿಂಗಃ ॥ ಸರೌಧಿರಸ್ತ್ರೀಭವವಿವಗುಲ್ಮೋವಮಾಸೇವ್ಯತೀ ತೇದಶಮೇಚಿಕಿತ್ಸ್ಯಃ ॥

(ಚರಕ ॥ ಚಿಕಿತ್ಸಾ ॥ ಅ. ೫ ಶ್ಲೋ. ೧೮)

ಬಹಳ ದಿನಗಳಿಂದಲೂ ಶೂಲೆಯಿಂದ ಕೂಡಿರುತ್ತದೆ. ಗುಲ್ಮದ ಗಂಟು ಗರ್ಭದಂತೆ ಚಲಿಸುತ್ತದೆ. ಆದರೆ ಗರ್ಭದಂತೆ ಅಂಗೋಪಾಂಗಗಳಿರುವದಿಲ್ಲ. ಮತ್ತು ವಾಯುವಿನಿಂದ ಚಲಿಸುತ್ತದೆಯೇ ಹೊರತು, ಗರ್ಭದಂತೆ ಸ್ವತಃ ಚಲಿಸುವದಿಲ್ಲ. ಗರ್ಭಿಣಿಯ ಬಯಕೆ ಮೊದಲಾದ ಎಲ್ಲ ಚಿನ್ಹಗಳು ರಕ್ತ ಗುಲ್ಮದಲ್ಲಿ ತೋರುತ್ತವೆ. ರಕ್ತದಿಂದುಂಟಾಗುವ ಈ ಗುಲ್ಮ ರೋಗವು ಸ್ತ್ರೀಯರಿಗೇ ಆಗುತ್ತದೆ. ಹತ್ತು ತಿಂಗಳು ಕಳೆದ ಮೇಲೆ ಚಿಕಿತ್ಸೆಮಾಡಬೇಕು. ಯಾಕಂದರೆ ರಕ್ತಗುಲ್ಮ ವಿಷಯದಲ್ಲಿ ಮಾತ್ರ ಯಾವದೇ ಲಕ್ಷಣಗಳಿಂದಲೂ ಗರ್ಭವಲ್ಲವೆಂದು ನಿಶ್ಚಯಿಸಲು ಬರುವದಿಲ್ಲ. ಗರ್ಭದಲ್ಲಿ ಸಂಭವಿಸುವ ಲಕ್ಷಣ ಗಳೆಲ್ಲವೂ ಇದರಲ್ಲಿರುತ್ತವೆ ಚಿಕಿತ್ಸೆ ಮಾಡಲು ನಿಶ್ಚಯವಾಗದಿರುವದರಿಂದ ಬಹಳೇ ದುಸ್ತರವು. ಹತ್ತು ತಿಂಗಳ ನಂತರ ಗರ್ಭವಾದರೆ ಪ್ರಸವವಾಗುತ್ತದೆ. ಪ್ರಸವವಾಗದಿದ್ದರೆ ರಕ್ತಗುಲ್ಮದ ಚಿಕಿತ್ಸೆಯನ್ನು ಮಾಡಲು ಶಾಸ್ತ್ರವು ವಿಧಿ ಸುತ್ತದೆ. ಹತ್ತು ತಿಂಗಳ ನಂತರ ಗುಲ್ಮವು ಪಕ್ವ ಸ್ಥಿತಿಗೆ ಮುಟ್ಟಿರುವದರಿಂದ ಚಿಕಿತ್ಸೆ ಮಾಡಲು ಯೋಗ್ಯವಾಗುವದು. ಮೊದಲೇ ಅಪಕ್ವವಿದ್ದಾಗ ಚಿಕಿತ್ಸೆ ಮಾಡಿದರೆ ಬಹಳ ರಕ್ತಸ್ರಾವವೂ, ಗರ್ಭಾಶಯಕ್ಕೆ ಧಕ್ಕೆಯೂ, ಸಂಭವಿಸು ತ್ತದೆ. ದಶಮ ಮಾಸಾ ನಂತರ ಚಿಕಿತ್ಸೆಗೆ ಯೋಗ್ಯ ಕಾಲವಿರುವದರಿಂದ, ಗರ್ಭವಿದ್ದ ಪಕ್ಷದಲ್ಲಿ ಪ್ರಸವವಾಗುವದರಿಂದಲೂ, ರೋಗ ನಿಶ್ಚಯ ಚಿಕಿತ್ಸಾ ಸಮಯ ಇವೆರಡರ ಸನ್ನಿವೇಶವು ಯೋಗ್ಯ ದರ್ಶನಕ್ಕೆ ಅರ್ಹವಾಗುವದು.

ವಿಶೇಷ ವಿಚಾರ:—

ರಕ್ತಗುಲ್ಮ ಮತ್ತು ಗರ್ಭಲಕ್ಷಣ ಒಂದೇಇದ್ದರೂ ಸೂಕ್ಷ್ಮವಾಗಿ ಅವ ಲೋಕಿಸಲು ಸಾಧ್ಯವಿದೆ:– ಶಾಸ್ತ್ರಜ್ಞರೂ ಕರ್ಮಕುಶಲ ನಿಪುಣ ವೈದ್ಯರೂ ರಕ್ತಗುಲ್ಮವನ್ನು ತಿಳಿದುಕೊಳ್ಳಬಹುದು. ಗರ್ಭವು ನಾಲ್ಕು ತಿಂಗಳಿನ ನಂತರ

ಅಂಗಅವಯವ ಉಳ್ಳದ್ದಾಗುತ್ತದೆ ಏಳನೇ ತಿಂಗಳಿನ ನಂತರ ಜೀವಬಂದ ಅವಯವ ಚಲನವಲನೆಸಹ ಆರಂಭವಾಗುತ್ತದೆ. ಗುಲ್ಮವು ಮಾತ್ರ ಮಣ್ಣಿನ ಮುದ್ದೆಯಂತಿರುತ್ತದೆ. ಸೂಕ್ಷ್ಮವಾಗಿ ಮನಗೊಟ್ಟು ಗರ್ಭ ಸ್ಥಾನದಲ್ಲಿ ಎಲ್ಲ ಕಡೆಗೂ ಸಾವಕಾಶ ಕೈಯಿಟ್ಟು ಒತ್ತಿನೋಡಿದರೆ ಅವಯವಉಳ್ಳದ್ದೋ? ಅಥವಾ ಮುದ್ದೆಯಂತಿದೆಯೋ? ಎನ್ನುವದು ತಿಳಿಯುತ್ತದೆ. ಇಲ್ಲವೇ, ಆ ಸ್ಥಾನದಲ್ಲಿ ಕಿವಿಯಿಟ್ಟು ಕೇಳಿದರೆ ಅಂಗಾಂಗಚಲನವಲನ ಧ್ವನಿಯುಗೋಚರವಾಗುತ್ತದೆ ಈ ಪ್ರಕಾರ ಒಂದೇ ದಿನ ತಾಸಿಗೊಮ್ಮೆಯಂತೆ ೩-೪ ಸಲ ನೋಡಲು ಚಲನವಲನೆ ಕಂಡುಬಂದರೆ ಗರ್ಭವೆಂದು ತಿಳಿಯಬೇಕು. ಸ್ಪರ್ಶದಿಂದಮುದ್ದೆಯಂತೆ ಕಂಡುಬಂದು ಚಲನವಲನವನ್ನವಲೋಕಿಸಿದಾಗ ಯಾವದಾದರೊಂದುಸಲ, ವಾಯುಪ್ರಕೋಪದಿಂದ ಚಲಿಸುತ್ತಲಿದ್ದು ಅವಯವಚಲನೆ, ಇತ್ಯಾದಿ ಇಲ್ಲದಿದ್ದರೆ ಗುಲ್ಮವೆಂದು ನಿಶ್ಚಯಿಸಬೇಕು.

"ಯಃಸ್ಪಂದತೆಪಿಂಡಿತಏವನಾಂಗೈಃ" ಮುದ್ದೆಯು ಚಲಿಸಿದಂತೆ ಚಲನವಾಗುತ್ತದೆ ಅವಯವಗಳಿಂದ ಚಲಿಸುವದಿಲ್ಲ ಎಂದು ಹೇಳಿದ್ದರಿಂದ ಸೂಕ್ಷ್ಮ ಬುದ್ಧಿಯವರಿಗೆ ಇದರಿಂದ ನಿಶ್ಚಯಮಾಡಲು ಸಾಧ್ಯವೆಂದು ಈ ವಾಕ್ಯದಿಂದ ಧ್ವನಿತವಾಗುತ್ತದೆ

ಬಹಳ ದಿನಕ್ಕೆ ಪ್ರಸೂತವಾಗುವ ಗರ್ಭ:—

ಆಹಾರಮಾಪ್ನೋತಿಯದಾನಗರ್ಭಃ,ಶೋಷಂಸಮಾಪ್ನೋತಿಪರಿಸೃತಿಂವಾ॥ ತಂಸ್ತ್ರೀಪ್ರಸೂತೆಸುಚಿರೇಣಗರ್ಭಂ, ಪುಷ್ಣೋಯದಾವರ್ಷಗಣೈರಪಿಸ್ಯಾತ್ ॥

(ಚರಕ॥ ಶಾರೀರ॥ ಅ ೧ ಶ್ಲೋ ೧೫)

ಗರ್ಭವು ಬೆಳೆಯಲಿಕ್ಕೆ ಯೋಗ್ಯ ಆಹಾರವಿಲ್ಲದಿದ್ದರೆ, ಗರ್ಭವು ಕ್ಷೀಣವಾಗುತ್ತದೆ. ಅಥವಾ ಪತನವಾಗುತ್ತದೆ. ಕ್ಷೀಣವಾಗಿಯೂ ಪತನಹೊಂದದೆ ಸಾವಕಾಶ ಬೆಳೆಯಲಿಕ್ಕೆ ಹತ್ತಿದ ಗರ್ಭವು ಒಂದು ವರ್ಷ ಕಳೆದ ನಂತರ ಬೆಳೆಯಹತ್ತುತ್ತದೆ. ಇದರಿಂದ ಎರಡನೇ ಅಥವಾ ಮೂರನೇ ವರ್ಷಗಳ

ಜನನವಾಗುತ್ತದೆ. "ವರ್ಷಗಣೈಃ" ಎಂದು ಹೇಳಿರುವದರಿಂದ ಮೂರು ವರ್ಷ ಮುಗಿಯುವ ವರೆಗೂ ಅವಧಿ ಇರುತ್ತದೆಂದು ಧ್ವನಿತವಾಗುವದು.

ಉಪವಿಷ್ಟಕ ಗರ್ಭಲಕ್ಷಣ:—

ಯಸ್ಯಾಃ ಪುನರುಷ್ಣತೀಕ್ಷ್ಣೋಪಯೋಗಾದ್ಗರ್ಭಿಣ್ಯಾಮಹತಿ ಸಂಜಾತಸಾರೇ ಗರ್ಭೇಪುಷ್ಪದರ್ಶನಂ ಸ್ಯಾದನ್ಯೋವಾಯೋನಿ ಸ್ರಾವಸ್ತಸ್ಯಾ ಗರ್ಭೋವೃದ್ಧಿಂನಪ್ರಾಪ್ನೋತಿನಿಃಸ್ರುತತ್ವಾತ್, ಸಕಾಲನುವರ್ತಿಷ್ಯತೇsತಿವಾತ್ರಂತಮುಪವಿಷ್ಟಕಮಿತ್ಯಾಚಕ್ಷತೇ ಕೇಚಿತ್ ॥ (ಚರಕ॥ ಶಾರೀರ॥ ೪ ಲ ಸೂ ೨೬)

ಗರ್ಭಿಣಿಯು ಉಷ್ಣವಿರ್ಯ, ತೀಕ್ಷ್ಣಪದಾರ್ಥಗಳನ್ನು ಸೇವಿಸುವದರಿಂದ, ಯೋಗ್ಯವಾಗಿಗರ್ಭವುತಿರಂಭವಾಗಿದ್ದರೂ, ಪುಷ್ಪದರ್ಶನ (ಮುಟ್ಟು) ವಾಗುತ್ತದೆ. ಅಥವಾ ಯೋನಿ ಸ್ರಾವ ಮೊದಲಾದವುಗಳುಂಟಾಗುತ್ತವೆ. ಈ ಕಾರಣದಿಂದ, ಗರ್ಭ ವೃದ್ಧಿಯು ಯೋಗ್ಯ ಕಾಲದಲ್ಲಿ ಆಗುವದಿಲ್ಲ. ಯಾಕಂದರೆ, ಎಲ್ಲ ಬೆಳವಣಿಗೆಗೆ ಬೇಕಾದ ಸತ್ವವು ಸ್ರಾವಹೊಂದಿರುತ್ತದೆ. ಇಂಥ ಗರ್ಭವುಬೆಳೆಯಲು ಬಹಳದಿನಗಳು ಬೇಕು ಕೆಲವರು ಇದಕ್ಕೆ "**ಉಪವಿಷ್ಟಕ**"ವೆಂದು ಅನ್ನುತ್ತಾರೆ. ಉಪವಿಷ್ಟಕದ ಅರ್ಥವು ಒಳಗೆಕೂತುಕೊಂಡಿರುವದು ಎಂದಾಗುತ್ತದೆ. ಬಯಕೆಯನ್ನು ತಿಳಿದುಕೊಳ್ಳುವದರಿಂದ ಪ್ರಯೋಜನವನ್ನು ಹೇಳುವ ಪ್ರಸಂಗದಿಂದ ಗರ್ಭದಂತೆಕಾಣುವ ರೋಗಗಳನ್ನುಗರ್ಭವಲ್ಲವೆಂದುನಿಶ್ಚಯಿಸಲು ಉಪಯೋಗವೆಂದು ವಿಸ್ತಾರವಾಗಿವಿವರಿಸಿದ್ದಾಗಿದೆ.

(೧೫) ಬಯಕೆಯ ಮಹತ್ವವು

ಬಯಕೆಯಾಗುವಕಾರಣ ಲಕ್ಷಣಗಳನ್ನು ತಿಳಿಸಿದನಂತರ ಬಯಕೆಯ ತೃಪ್ತಿಯಿಂದಾಗುವ ಸುಪರಿಣಾಮ, ಬಯಕೆಯ ತಿರಸ್ಕಾರದಿಂದಾಗುವ ದುಷ್ಪರಿಣಾಮವನ್ನು ಬೋಧಿಸುತ್ತಾರೆ. ಹೀಗೆ ಸುಪರಿಣಾಮ ದುಃಖಕಾರಕ ಫಲವನ್ನುಂಟು ಮಾಡುವ ಬಯಕೆಯ ಹೆಚ್ಚಿನದಾದಪ್ರಭಾವಕ್ಕೆ ಬಯಕೆಯ ಮಹತ್ವವೆಂಬ ಹೆಸರು:—

ಬಯಕೆಯ ತಿರಸ್ಕಾರದಿಂದಾಗುವ ದುಷ್ಪರಿಣಾಮ:—

ದೌಹೃದವಿಮಾನನಾತ್ ಕುಬ್ಜಂ ಕುಣಿಂ ಖಂಜಂ ಜಡಂ ವಾಮನಂ ವಿಕೃತಾಕ್ಷ್ಯನುನಕ್ಷಂವಾ ನಾರೀಸುತಂ ಜನಯತಿ, ತಸ್ಮಾತ್ ಸಾಯೆದ್ಯದಿಚ್ಛೇತ್ತತ್ತಸ್ಯೈದಾಪಯೇತ್ ಲಬ್ಧದೌಹೃದಾಹಿತ್ ವೀರ್ಯವಂತಂ ಚಿರಾಯುಷಂಚಪುತ್ರಂಜನಯತಿ॥

(ಸುಶ್ರುತ ॥ ಶಾರೀರ ॥ ಅ. ೩ ಸೂ ೧೪)

ಬಯಕೆಯ ತಿರಸ್ಕಾರದಿಂದ ಗರ್ಭಿಣಿಯು, ಮುದುಡಿದ ಅವಯವವುಳ್ಳ (ಕುಬ್ಜಂ), ರೋಗಾದಿಗಳಿಂದ ಕೆಟ್ಟಿರುವ ಕೈಯುಳ್ಳ (ಕುಣಿಂ), ಕುಂಟನನ್ನು (ಖಂಜಂ), ಮಂದವಾದ ದೇಹ ಬುದ್ಧಿಯುಳ್ಳ (ಜಡಂ), ಗಿಡ್ಡನನ್ನು (ವಾಮನ), ವಿರೂಪವಾದ ಕಣ್ಣುಳ್ಳ (ವಿಕೃತಾಕ್ಷ), ಕುರುಡನನ್ನು (ಅನಕ್ಷ), ಇನ್ನೂ ಅನೇಕ ವಿಕಾರವುಳ್ಳ ಸಂತತಿಯನ್ನು ಪ್ರಸವಿಸುತ್ತಾಳೆ. ಈಪ್ರಕಾರ ಬಯಕೆಯ ತಿರಸ್ಕಾರದಿಂದಗರ್ಭವು ವಿಕೃತವಾಗುತ್ತದೆ.ಆದ್ದರಿಂದ ಗರ್ಭಿಣಿಯು ಏನನ್ನು ಬಯಸುವಳೋ ಅದನ್ನು ಕೊಡಬೇಕು. ಬಯಕೆಯ ತೃಪ್ತಿಯಾದರೆ ಬಲವಂತ ದೀರ್ಘಾಯುವಾದ ಪುತ್ರನನ್ನು ಹಡೆಯುತ್ತಾಳೆ. ಈ ಎಲ್ಲ ಕಾರಣಗಳನ್ನವಲೋಕಿಸಿ ಗರ್ಭಿಣಿಯರಿಗೆ ಆಪ್ತರು, ಇಷ್ಟರು, ತಮ್ಮ ಮನೆಗೆ ಕರೆದು ಬಯಕೆಯ ಪದಾರ್ಥಗಳನ್ನು ತಿಳಕೊಂಡು, ಊಣ ಬಡಿಸುವ, ಸಾಮಾಜಿಕ ಅಥವಾ ಧಾರ್ಮಿಕ ಪದ್ಧತಿಯನ್ನು, ರೂಢಿಯಲ್ಲಿ ತಂದಿದ್ದಾರೆ. ಇದು ಗಮನಿಸಬೇಕಾದ ವಿಷಯವೂ ಯೋಗ್ಯವೂ ಇರುತ್ತದೆ. ಯಾಕಂದರೆ, ಒಬ್ಬಳೇ ಆದ ಗರ್ಭಿಣಿಯು ತನ್ನ ಮನೆ ಕೆಲಸವನ್ನು ಪೂರೈಸಿ ತನಗೆ ಬೇಕಾದ್ದನ್ನು ಮಾಡಿಕೊಳ್ಳಲು ಶ್ರಮವಾಗುವದು. ಆದ್ದರಿಂದ ಬಂಧು ಬಾಂಧವರ ಭೆಟ್ಟಿಯೂ ವಿಶೇಷ ಶ್ರಮವಿಲ್ಲದೆ ಬಯಕೆಯ ಪೂರೈಕೆಯು ಸಾಮಾನ್ಯರಿಗೂ ದೊರೆಯಲೆಂಬ ವಿಶಾಲ ಭಾವನೆಯ ಹಿನ್ನೆಲೆಯೇ ಈ ರೂಢಿಯ ಜನಕವೆಂದು ಸ್ಪಷ್ಟವಾಗುವದು.

ಬಯಕೆಯು ಅತೃಪ್ತಿಯಿಂದ ಸಂಭವಿಸುತ್ತಿರುವ ಗರ್ಭವಿಕೃತಿಯು:—

ಮಾತೃಜಂ ಚಾಸ್ಯಹೃದಯಂ ಮಾತೃಹೃದಯೇನ ಅಭಿಸಂಬದ್ಧಂಭವತಿರಸವಾಹಿನೀಭಿಃ ಸಂವಾಹಿನೀಭಿಃತಸ್ಮಾತ್ತಯೋಸ್ತಾ

ಭಿರ್ಭಕ್ತ್ರಿಃ ಸಂಸ್ಪಂದತೆ। ತಚ್ಚೈವ ಕಾರಣಮುನೇಕ್ಷ್ಮಮಾಣಾ ನದ್ವೈಹೃದಯಸ್ಯವಿಮಾನಿತಂಗರ್ಭಮಿಚ್ಚಂತಿಕರ್ತುಂ।ವಿಮಾನನೇಹ್ಯಸ್ಯದೃಶ್ಯತೆವಿನಾಶೋವಿಕೃತಿರ್ವಾ। ಸಮಾನಯೋಗಕ್ಷೇಮಾ ಹಿ ತದಾಭವತಿ ಗರ್ಭೇಣಕೇಷುಚಿದರ್ಥೇಷು ಮಾತಾ । ತಸ್ಮಾತ್ಪ್ರಿಯಹಿತಾಭ್ಯಾಂಗರ್ಭಿಣೀಂ ವಿಶೇಷೇಣೋಪಚರಂತಿಕುಶಲಾಃ ॥ (ಚರಕ ॥ ಶಾರೀರ ॥ ಅ. ೪ ಸೂ. ೧೫)

ತಾಯಿಯಿಂದುತ್ಪನ್ನವಾದ ಗರ್ಭದಹೃದಯವು, ಮಾತೃ ಹೃದಯಕ್ಕೆ ಸಂಬಂಧವುಳ್ಳದ್ದಾಗುವದು. ಹ್ಯಾಗಂದರೆ ತಾಯಿಯಹೃದಯದಿಂದ ಹೊರಟ ರಸವಾಹಿನೀ ಸಿರಗಳು, ಗರ್ಭಾಶಯಕ್ಕೆ ಅಂಟಿಕೊಂಡು ರಸಾದಿಸತ್ವಗಳಿಂದ ಗರ್ಭಪೋಷಣೆ ಮಾಡುತ್ತವೆ. ಇದನ್ನು ಹಿಂದೆ ವಿವರಿಸಿದೆ. ರಸವಾಹಿನೀ ಸಂವಾಹಿನೀ (ಸಂಜ್ಞಾವಾಹಿ) ಸಿರಗಳು, ತಾಯೀ ಹೃದಯು ಗರ್ಭ ಹೃದಯಕ್ಕೆ ಸಂಬಂಧವನ್ನುಂಟುಮಾಡುತ್ತವೆ. ಆದ್ದರಿಂದ ಗರ್ಭವು ಬಯಸಿದ ವಸ್ತುವಿನಲ್ಲಿ ತಾಯಿಗೂ ಇಚ್ಛೆಯಾಗುವದು. ಹೀಗಿರುವದರಿಂದಲೇ "ತಯೋಃ ಭಕ್ತ್ರಿಃ" ತಾಯಿ, ಗರ್ಭಗಳಿಬ್ಬರ ಇಚ್ಛೆಯು ಎಂಬ ಪದ ಪ್ರಯೋಗ ಮಾಡಿದ್ದಾರೆ. ಸಂವಾಹಿನೀ ಸಿರಗಳು ಬಯಕೆ ಪೂರೈಸಲ್ಪಡದ ಗರ್ಭವನ್ನು, ಬೆಳೆಸಲು (ಪೂರ್ಣ ಮಾಡಲು) ಇಚ್ಛಿಸುವದಿಲ್ಲ ಬಯಕೆಯ ತೃಪ್ತಿಯನ್ನೇ ಗುರಿಯಾಗಿಟ್ಟುಕೊಂಡು, ಆದನ್ನೇ ದಾರೀ ನೋಡುತ್ತಿರುವ, (ಅವೇಕ್ಷಮಾಣಾಃ) ರಸವಾಹಿನೀ ಸಿರಗಳು ಅದಿಲ್ಲವಾದರೆ ಪೋಷಣ ಕ್ರಮವನ್ನು ಶಿಥಿಲಮಾಡುತ್ತವೆ. ಬಯಕೆಯ ತಿರಸ್ಕಾರದಿಂದ ಗರ್ಭದ ನಾಶ ಅಥವಾ ವಿಕೃತಿಯಾಗುವದು ಅನುಭವಸಿದ್ಧವಾದದ್ದು. ಬಯಕೆಯ ವಸ್ತುವಿನ ನಿರಾಕರಣೆಯಿಂದ ಗರ್ಭನಾಶವೂ, ಬಯಕೆಯ ಅಪೂರ್ಣತೆ (ಸ್ವಲ್ಪ ತೃಪ್ತಿ) ಯಿಂದ ಗರ್ಭ ವಿಕೃತಿಯೂ ಆಗುತ್ತದೆ. ಕೆಲವಷ್ಟು ವಿಷಯಗಳಲ್ಲಿ ತಾಯಿಯ ಮತ್ತು ಗರ್ಭಗಳು, ಸಮಾನ ಸುಖದುಃಖ (ಯೋಗ್ಯಕ್ಷೇಮ) ವುಳ್ಳವು ಕೆಲವಷ್ಟು ವಿಷಯಗಳಲ್ಲಿ ಎಂದು ಹೇಳಿರುವದರಿಂದ, ತಾಯಿಯ ವಿಶೇಷವಾದ ದೈನಂದಿನಕ ಹಸಿವೆ, ನೀರಡಿಕೆಗಳು, ಗರ್ಭವನ್ನು ಬಾಧಿಸುವ

ದಿಲ್ಲ ಆದರೆ ಪ್ರಮಾಣ ಮೀರಿ ಉಪವಾಸ, ತೃಷ್ಣಾನಿರೋಧವು ಅಹಿತಕಾರಕವು. ನಿತ್ಯದ ಆಹಾರ ಕ್ರಮದಲ್ಲಿ ಸ್ವಲ್ಪ ತಡವಾಗುವದರಿಂದ ಹೆಸಿವೆ ಹೆಚ್ಚಾಗುವದು ಸ್ವಾಭಾವಿಕವು. ಅದನ್ನು ಸಹ ಶಾಸ್ತ್ರಕಾರರು ಯೋಗ್ಯವಲ್ಲ ವೆಂದು ಹೇಳಿದ್ದಾರೆ. ಯುಕ್ತಾಹಾರ ವಿಹಾರವನ್ನು ಯೋಜಿಸಬೇಕೆಂದು ವಿಧಿಸಿದ್ದಾರೆ. ಆದ್ದರಿಂದಲೇ ಕುಶಲರು (ಅನುಭವಿಕ), ಗರ್ಭಿಣಿಯನ್ನು ಪ್ರಿಯವಾಗಿಯೂ, ಹಿತಕರ ಆಹಾರಾದಿಗಳನ್ನು ಯೋಜಿಸಿಯೂ, ವಿಶೇಷ ವಾಗಿ ಉಪಚರಿಸುತ್ತಾರೆ.

ಗರ್ಭಿಣಿಯ ಆರೈಕೆ:—

ಯೇಽಸ್ಯಕುಕ್ಷೌವೃದ್ಧಿಹೇತುಸಮಾಖ್ಯಾತಾಭಾವಾಸ್ತೇಷಾಂವಿ ಪರ್ಯಯಾದುದರೆ ವಿನಾಶಮಾಪದ್ಯತೇs ಥವಾs ಚಿರಜಾತಃ ಸ್ಯಾತ್ ॥ (ಚರಕ॥ ಶಾರೀರ॥ ಅ ೪ ಸೂ ೮೯)

ಹೊಟ್ಟೆಯಲ್ಲಿ ಗರ್ಭಕ್ಕೆ ಬೆಳೆಯಲು ಯಾವ ಸೌಕರ್ಯಗಳು ಬೇಕೆಂದು, ವಿವರಿಸಿದ್ದಾರೆಯೋ, ಅದಿಲ್ಲವಾದರೆ ಅಥವಾ ವಿರುದ್ಧ ಉಪಚಾರ ಮಾಡಿದರೆ ಹೊಟ್ಟೆಯಲ್ಲಿಯೇ ನಾಶವಾಗುತ್ತದೆ. ಗರ್ಭವು ಒಣಗಿ ನಾಗೋದರ ಮೊದಲಾದವುಗಳಾಗುತ್ತವೆಯೆಂದು ಈ ಹಿಂದೆ ವಿವರಿಸಲಾಗಿದೆ. ಅಥವಾ ಗರ್ಭಪಾತ, ದಿನತುಂಬದೆ ಹಡೆಯುವ, ಸ್ಥಿತಿಸಹ ಬರುತ್ತದೆ.

ಬಯಕೆಯ ವಿಷಯದಲ್ಲಿ ವಿಶೇಷ ವಿಚಾರವು:—

ಕೆಲವು ಗರ್ಭಿಣೀ ಸ್ತ್ರೀಯರಿಗೆ, ಬಯಕೆಆದಾಗ ಹುಳಿ, ಖಾರ, ಬೂದಿ, ಮಣ್ಣು, ಇದ್ದಲಿ ಮೊದಲಾದ ಅನೇಕ ಕೆಡಕನ್ನುಂಟುಮಾಡುವ ಪದಾರ್ಥಗಳಲ್ಲಿ ತೀವ್ರ ಇಚ್ಛೆಯಾಗುತ್ತದೆ. ಅಹಿತಕಾರಕ ಪದಾರ್ಥವನ್ನು ಕೊಡುವದರಿಂದಲೂ, ಅಥವಾ ಬಿಡುವದರಿಂದ ಬಯಕೆಪೂರೈಸದೆ, ಗರ್ಭಕ್ಕೆ ಹಾನಿಯಾಗುವದೆಂಬ ಆಕಾಂಕ್ಷೆ ಬರುವದು. ಬಿಟ್ಟರು ಕಷ್ಟಹಿಡಿದರೂ ಕಷ್ಟ ಹೇಗೆ ನಡೆಯಬೇಕೆನ್ನುವದರಲ್ಲಿ ನಿರ್ಣಯವು ಧರ್ಮ ಸಂಕಟವೆನಿಸುವದು. ಇದಕ್ಕೆ ಚರಕಾಚಾಯರ ಮತವು:— ಬಯಕೆಯ ತೀವ್ರತೆಯ ವಿಘಾತ

ದಿಂದಾಗುವ ಪರಿಣಾಮಕ್ಕಿಂತಲೂ, ಅಹಿತಪದಾರ್ಥ ಸೇವನೆಯಿಂದ (ಬಯಕೆಯ ತೃಪ್ತಿಯಿಂದ) ಸ್ವಲ್ಪ ಪ್ರಮಾಣದ ಹಾನಿಯನ್ನು ಲಕ್ಷಿಸಿ, ವಿರುದ್ಧವಾದದ್ದನ್ನು ಸಹಬಯಕೆಯಲ್ಲಿ ಅಪೇಕ್ಷಿಸಿದರೆ ಕೊಡಬೇಕೆಂದು ಹೇಳಿದ್ದಾರೆ.

ತೀವ್ರಾಯಾಂತುಖಲುಪ್ರಾರ್ಥನಾಯಾಂಕಾಮನುಹಿತಮುಪ್ಯ
ಸ್ಯೈಹಿತೇನೋಪಹಿತಂದದ್ಯಾತ್ ಪ್ರಾರ್ಥನಾsವಿನಯನಾರ್ಥ
ಮ್। ಪ್ರಾರ್ಥನಾಸಂಧಾರಣಾದ್ಧಿವಾಯುಃ ಪ್ರಕುಪಿತೊsಂತಃ
ಶರೀರಮನುಚರನ್ ಗರ್ಭಸ್ಯಾಪದ್ಯವಾನಸ್ಯ ವಿನಾಶಂ ವೈರೂ
ಪ್ಯಂ ವಾಕುರ್ಯಾತ್ ॥ (ಚರಕ॥ ಶಾರೀರ॥ ಅ ೪ ಸೂ ೧೯)

ಅಹಿತವಾದ ಪದಾರ್ಥಗಳಲ್ಲಿ ಗರ್ಭಿಣಿಗೆ ತೀವ್ರ ಬಯಕೆಯಾದರೆ, ಅಹಿತವಾದ ಪದಾರ್ಥವನ್ನು, ಹಿತಕರವಾದ ಪದಾರ್ಥಗಳ ಸಂಗಡ ಕೂಡಿಸಿ, ಅಥವಾ, ಸ್ವಲ್ಪವನ್ನೇ ವಿಚಾರವರಿತು ಯೋಜಿಸಬೇಕು. ತೀವ್ರವಾದ ಅಪೇಕ್ಷೆಯನ್ನು ತಡೆಹಿಡಿದು ನಿರರ್ಥಕ ಮಾಡಬಾರದು. ಯಾಕಂದರೆ, ಇದರಿಂದ ಗರ್ಭಕ್ಕೂ ಗರ್ಭಿಣಿಗೂ ಬಾಧೆಯುಂಟಾಗುವದು. ಬಯಕೆಯ ಪದಾರ್ಥಗಳನ್ನು ಕೊಡದಿದ್ದರೆ ಬಯಕೆಯ ಸಂಧಾರಣ (ಅಡ್ಡಿ) ವಾಗುವದು ಇದರಿಂದ ವಾಯುವು ಪ್ರಕುಪಿತವಾಗಿ ಶರೀರದಲ್ಲಿ ಪ್ರಚಲಿಸುವದು ಬಯಕೆಯ ನಿರೋಧದಿಂದ ದುಃಖಹೊಂದಿದ ವಾಯುವು ಗರ್ಭದ ನಾಶವನ್ನು ಅಥವಾ ಅಂಗಹೀನತೆ, ದೌರ್ಬಲ್ಯ ಮುಂತಾದ ವಿಕಾರಗಳನ್ನುಂಟು ಮಾಡುತ್ತದೆ. ಆದ್ದರಿಂದ ಅಹಿತ ಪದಾರ್ಥಗಳಲ್ಲಿ ಸಹ ತೀವ್ರವಾದ ಬಯಕೆ ಆದರೆ ಕ್ರಮವರಿತು ಯೋಜಿಸಬೇಕೆಂದು ಶಾಸ್ತ್ರನಿರ್ಣಯವು. ಇದನ್ನು ಕುರಿತು ಸುಶ್ರುತಾಚಾರ್ಯರು ಹೀಗೆ ಹೇಳಿದ್ದಾರೆ.

ಇಂದ್ರಿಯಾರ್ಥಾಂಸ್ತು ಯಾನ್ ಯಾನ್ ಸಾಭೋಕ್ತುಮಿಚ್ಛತಿ
ಗರ್ಭಿಣೀ॥ಗರ್ಭಾಬಾಧಭಯಾತ್ತಾಂ ಸ್ತಾನ್ ಭಿಷಗಾಹೃತ್ಯದಾ
ಪಯೇತ್ ॥ (ಸುಶ್ರುತ ॥ ಶಾರೀರ ॥ ಅ. ೩ ಶ್ಲೋ. ೧೯)

ಗರ್ಭಿಣಿಯು ಯಾವ ವಸ್ತುಗಳನ್ನು ಇಚ್ಛಿಸುತ್ತಾಳೆಯೋ ಅವುಗಳನ್ನು ವೈದ್ಯನು ಯೋಜಿಸಬೇಕು. ಇಲ್ಲವಾದರೆ ಗರ್ಭಕ್ಕೆ ಬಾಧೆಯಾಗುವದು.

ಸಾಪ್ರಾಪ್ತದೌಹೃದಾಪುತ್ರಂಜನಯೇತಗುಣಾನ್ವಿತಂ ॥
ಅಲಬ್ಧದೌಹೃದಾಗರ್ಭೇಲಭೇತಾತ್ಮನಿವಾಭಯಂ ॥೨೦॥

ಬಯಕೆಯ ತೃಪ್ತಿಯನ್ನು ಹೊಂದಿದ ಗರ್ಭಿಣಿಯು ಯೋಗ್ಯ ಬಲಾನ್ವಿತ ಸಂತತಿಯನ್ನು ಪಡೆಯುತ್ತಾಳೆ. ಗರ್ಭ ವಿಷಯದಲ್ಲಿ ಅಥವಾ ತನ್ನ ವಿಷಯದಲ್ಲಿ ಬಯಕೆಯ ಪದಾರ್ಥಗಳನ್ನು ಪಡೆಯದ ಗರ್ಭಿಣಿಯು ಭಯವನ್ನು ಹೊಂದುತ್ತಾಳೆ. ಆ ಭಯವು ಯಾವದೆಂದರೆ, ಬಯಕೆಯ ತೃಪ್ತಿ ಆಗದಿರುವದರಿಂದ ತನಗೆ ಅಥವಾ ಗರ್ಭಕ್ಕೆ ಹಾನಿಯಾಗುವದೆಂಬ ಹೆದರಿಕೆಯು. ಹಿಂದಿನ ಕಾಲದಲ್ಲಿ ಇಂಥ ಸೂಕ್ಷ್ಮ ವಿಷಯಗಳೂ ಸಹ ಸಾಮಾನ್ಯರಲ್ಲಿಯೂ ಬಾಯ್ಮಾತಾಗಿತ್ತೆಂಬುದವದು ಇದರಿಂದ ಸ್ಪಷ್ಟವಾಗುತ್ತದೆ.

ಯೇಷುಯೇಷ್ವಿಂದ್ರಿಯಾರ್ಥೇಷುದೌಹೃದೇನೈವಮಾನತಾ ॥
ಪ್ರಜಾಯೇತಸುತಸ್ಯಾರ್ತಿಸ್ತಸ್ಮಿಂಸ್ತಸ್ಮಿಂಸ್ತಥೇಂದ್ರಿಯೇ॥೨೧॥

ಗರ್ಭಿಣಿಯ ಯಾವ ಇಂದ್ರಿಯಗಳ, ಯಾವ ವಿಷಯಗಳಲ್ಲಿಯ ಬಯಕೆಯು ತಿರಸ್ಕರಿಸಲ್ಪಡುತ್ತದೆಯೋ, ಗರ್ಭದಲ್ಲಿಯ ಶಿಶುವಿನ ಆವಾವ ಇಂದ್ರಿಯಗಳಲ್ಲಿ ದುಃಖವು (ವಿಕೃತಿ) ಉತ್ಪನ್ನವಾಗುತ್ತದೆ.

ಉದಾ:— ಗರ್ಭಿಣಿಯ ಗಾಯನ ಕೇಳಬೇಕೆಂಬ ತೀವ್ರವಾದ ಬಯಕೆಯ ತಿರಸ್ಕಾರದಿಂದ ಗರ್ಭಸ್ಥ ಶಿಶುವಿನ ಕಿವಿಗಳಲ್ಲಿಯೂ, ರಮ್ಯ ಸ್ಥಳಾದಿಗಳನ್ನು, ನೋಡಬೇಕೆಂಬದರ ತಿರಸ್ಕಾರದಿಂದ ಗರ್ಭದಲ್ಲಿಯ ಶಿಶುವಿನ ಕಣ್ಣುಗಳಲ್ಲಿಯೂ, ವಿಕೃತಿಯುಂಟಾಗುತ್ತದೆ. ಇದರಂತೆ ಪ್ರತಿಯೊಂದನ್ನೂ ತಿಳಿಯಬೇಕು.

ದೋಷಾಭಿಘಾತೈರ್ಗರ್ಭಿಣ್ಯಾ ಯೋಯೋಭಾಗಃ ಪ್ರಪೀಡ್ಯತೆ॥
ಸಸಭಾಗಃ ಶಿಶೋಸ್ತಸ್ಯಗರ್ಭಸ್ಥಸ್ಯಪ್ರಪೀಡ್ಯತೆ ॥೨೨॥

ದೋಷ ಪ್ರಕೋಪಗಳಿಂದಲೂ ಅಥವಾ ಆಘಾತ ಹೊಡತ ಮೊದಲಾದವುಗಳಿಂದಲೂ ಗರ್ಭಿಣಿಯ ಶರೀರದ ಯಾವ ಭಾಗವು ವೇದನೆಯನ್ನು

ಹೊಂದುತ್ತದೆಯೋ, ಗರ್ಭದಲ್ಲಿಯ ಶಿಶುವಿನ ಆವಾವ ಭಾಗವು ಪೀಡೆಯನ್ನು ಹೊಂದುತ್ತದೆ. ಆದ್ದರಿಂದ ಗರ್ಭಿಣಿಯನ್ನು, ವಿಶೇಷ ಅಂಗಾಂಗಗಳಲ್ಲಿ ಆಘಾತವಾಗುವ ಕೆಲಸಗಳಲ್ಲಿ ನಿಯಮಿಸಬಾರದೆಂದು, ಸ್ಪಷ್ಟವಾಗುತ್ತದೆ. **"ಗರ್ಭಿಣೀಂ ವಿಶೇಷೇಣೋಪಚರಂತಿಕುಶಲಾಃ"** ಗರ್ಭಿಣಿಗೆ ದುಃಖ ಆಘಾತಗಳುಂಟಾದರೆ ಗರ್ಭಕ್ಕೆ ಹಾನಿಯಾಗುವದೆಂದು ತಿಳಿದು, ಜಾಣರು ಗರ್ಭಿಣಿಯನ್ನು ವಿಶೇಷ ಲಕ್ಷಪೂರ್ವಕವಾಗಿ ಉಪಚರಿಸುತ್ತಾರೆ.

ಗರ್ಭಿಣಿಯ ಬಯಕೆಯಿಂದ ಗರ್ಭ ಲಕ್ಷಣ:—

ರಾಜಸಂದರ್ಶನೇಯಸ್ಯಾದ್ದೌಹೃದಂಜಾಯತೇಸ್ತ್ರಿಯಾಃ ॥
ಆರ್ಹವಂತಂಮಹಾಭಾಗಂ ಕುಮಾರಂಸಾಪ್ರಸೂಯತೆ ॥

(ಸುಶ್ರುತ॥ ಶಾರೀರ॥ ಅ ೩ ಶ್ಲೋ ೨೨)

ಯಾವ ಗರ್ಭಿಣೀ ಸ್ತ್ರೀಗೆ ರಾಜಸಂದರ್ಶನದಲ್ಲಿ ಬಯಕೆಯಾಗುತ್ತದೆಯೋ, ಅವಳು ಲಕ್ಷ್ಮೀವಂತನಾದ ಮಹಾ ಪುಣ್ಯವಂತ ಮಗನನ್ನು ಹಡೆಯುತ್ತಾಳೆ

ದುಕೂಲಪಟ್ಟಕೌಶೇಯಭೂಷಣಾದಿಷುದೌಹೃದಾತ್ ॥
ಅಲಂಕಾರೈಷಿಣಂ ಪುತ್ರಂ ಲಲಿತಂಸಾಪ್ರಸೂಯತೆ ॥೨೩॥

ಸೂಕ್ಷ್ಮ ಮನೋಹರ ವಸ್ತ್ರದಲ್ಲಿಯೂ ಪೀತಾಂಬರದಲ್ಲಿಯೂಅಲಂಕಾರಾದಿ ಆಭರಣಗಳಲ್ಲಿಯೂ ಬಯಕೆಯಾದರೆ, ಅಲಂಕಾರವನ್ನು ಪ್ರೀತಿಸುವ ಮನೋಹರ ರಸಿಕ ಪುತ್ರನನ್ನು ಪಡೆಯುತ್ತಾಳೆ.

ಆಶ್ರಮೇಸಂಯತಾತ್ಮಾನಂ ಧರ್ಮಶೀಲಂ ಪ್ರಸೂಯತೆ ॥

ಗರ್ಭಿಣಿಗೆ ತಪಸ್ವಿಗಳಿರುವ ಆಶ್ರಮದಲ್ಲಿ ವಾಸಿಸುವ ಇಚ್ಛೆ ಆದರೆ, ಸಂಯಮಿಯೂ ಸದ್ಗುಣಿಯೂ ಆದ ಮಗನನ್ನು ಪಡೆಯುವಳೆಂದು ತಿಳಿಯಬೇಕು.

ದೇವತಾಪ್ರತಿಮಾಯಾಂತುಪ್ರಸೂತೇಪಾರ್ಷದೋಪಮಮ್॥

ದೇವ ದರ್ಶನದಲ್ಲಿಚ್ಛೆಯಾದರೆ, ದೇವತಾರಧಕನನ್ನೂ ಅಥವಾ ಸಭ್ಯನಾದ (ಸತ್ಯವಂತ) ಪುತ್ರನನ್ನು ಪ್ರಸವಿಸುತ್ತಾಳೆ.

ದರ್ಶನೇವ್ಯಾಲಜಾತೀನಾಂ ಹಿಂಸಾಶೀಲಂಪ್ರಸೂಯತೆ ॥೨೪॥

ಕ್ರೂರ ಮೃಗಾದಿಗಳನ್ನು ನೋಡುವ ಇಚ್ಛೆಯಾದರೆ, ಅಥವಾ, ಕ್ರೂರ ಮೃಗಗಳಂತೆ, ಅನ್ಯರಿಗೆ ತ್ರಾಸನ್ನು ಕೊಟ್ಟು ತಾನು ಸಂತೋಷ ಹೊಂದುವ ಬುದ್ಧಿಉಂಟಾದರೆ ಪರಹಿಂಸಕನಾದ ಕ್ರೂರ ಮೃಗದಂತಿರುವವನನ್ನು ಪಡೆಯುತ್ತಾಳೆ. ಎಷ್ಟೋ ಗರ್ಭಿಣಿಯರು ಸ್ವಭಾವತಃ ಶಾಂತರಿದ್ದೂ, ಗರ್ಭಾವಸ್ಥೆಯಲ್ಲಿ ಕ್ರೂರ ಸ್ವಭಾವವುಳ್ಳವರಾಗುತ್ತಾರೆ. ಇದಕ್ಕೆ ಹೊಟ್ಟೆಯಲ್ಲಿರುವ ಗರ್ಭದ ಭಾವನೆಯೇ ಕಾರಣವು ತಮ್ಮ ಆತ್ಮದಂತಿರುವ ಅತ್ಯಂತ ಪ್ರೀತಿಯುಳ್ಳ ಮಕ್ಕಳನ್ನು ವೇಲಿಂದಮೇಲೆ ಹೊಡೆಯುತ್ತಾ ಇದರಿಂದ ತಾವು ಸಂತೋಷ ಹೊಂದುವರು. ಹೀಗೆ ನಾನಾಪ್ರಕಾರದ ವಿಲಕ್ಷಣ ವೈಚಿತ್ರ್ಯವನ್ನನುಲಕ್ಷಿಸಿ ಇವೆಲ್ಲಕ್ಕೂ ಜನ್ಮಾಂತರೀಯ ಕರ್ಮ ಗುಣಯುಕ್ತವಾದ: ಗರ್ಭವೇ ಕಾರಣವೆಂದು ಅನುಭವ ಪಟ್ಟಿದ್ದಾರೆ. ಇದರ ಸತ್ಯಾಸತ್ಯತೆಯು ಅನುಭವದಿಂದ ತಿಳಿಯುವದು.

ಗೋಧಾಮಾಂಸಾಶನೆಪುತ್ರಂ ಸುಷುಪ್ಸುಂಧಾರಣಾತ್ಮಕಂ ॥

ನೀರಿನಲ್ಲಿರುವ ಹಲ್ಲಿಯಂಥ ಪ್ರಾಣಿಯು (ಗೋಧಾ) ಅದರ ಮಾಂಸದಲ್ಲಿ ಇಚ್ಛೆಯಾದರೆ ನಿದ್ರಾಳುವಾದ ಧಾರಣಾಶಕ್ತಿಯುಕ್ತ ಮಗನನ್ನು ಪಡೆಯುತ್ತಾಳೆ. ಅಥವಾ ಓಡುವ ಶೀಲವುಳ್ಳ (ಧಾವನಾತ್ಮಕ) ವನೆಂದೂ ಅರ್ಥಮಾಡುತ್ತಾರೆ. ಓಡುವ ಸ್ವಭಾವವೆಂದರೆ ಅಂಜುಬುರುಕನೆಂದಾಗುವದು. ಆಗ ಧಾರಣ ಶಬ್ದದ ಬದಲು ಧಾವನ ಶಬ್ದವನ್ನು ಹೇಳಿದ್ದಾರೆಂದು ತಿಳಿಯಬೇಕು.

ಗವಾಂ ಮಾಸೇಂತುಬಲಿನಂ ಸರ್ವಕ್ಲೇಶ ಸಹಂತಥಾ ॥೨೫॥

ಆಕಳ ಮಾಂಸದಲ್ಲಿ ಬಯಕೆಯಾದರೆ, ಸರ್ವ ದುಃಖವನ್ನು ಸಹಿಸುವ ಬಲಿಷ್ಠನಾದ ಮಗನನ್ನು ಪ್ರಸವಿಸುವಳು.

ಮಾಹಿಷೇದೌಹೃದಾತ್ ಶೂರಂರಕ್ತಾಕ್ಷಂಲೋಮಸಂಯುತಂ॥

ಕೋಣನ ಮಾಂಸದಲ್ಲಿ ಇಚ್ಛೆಯಾದರೆ, ಶೂರರನ್ನೂ ಕೆಂಪು ಕಣ್ಣುಳ್ಳವನನ್ನೂ ಬಹಳ ಕೂದಲುಳ್ಳ ಪುತ್ರನನ್ನೂ ಪಡೆಯುತ್ತಾಳೆ.

ವರಾಹಮಾಂಸಾತ್ ಸ್ವಪ್ನಾಲುಂಶೂರಂಸಂಜನಯೇತ್ಸುತಂ॥ ೨೬॥

ಹಂದಿಯ ಮಾಂಸದಲ್ಲಿ ಬಯಕೆಯಾದರೆ, ಬಹು ನಿದ್ರೆ ಮಾಡುವ, ಶೂರ ಮಗನನ್ನು ಪಡೆಯುತ್ತಾಳೆ.

ಮಾರ್ಗಾತ್ವಿಕ್ರಾಂತಜಂಘಾಲಂ ಸದಾವನಚರಂ ಸುತಂ ॥

ಮೃಗ ಮಾಂಸದಲ್ಲಿ, (ಚಿಗರೆ ವಗೈರೆ) ಇಚ್ಛೆಯಾದರೆ, ಉದ್ಯೋಗ ಮಾಡುವ, ವೇಗವುಳ್ಳ, ಸದಾ ಅಡವಿಯಲ್ಲಿ ಸಂಚರಿಸುವ, ಮಗನನ್ನು ಪ್ರಸವಿಸುತ್ತಾಳೆ.

ಸೃಮರಾದ್ವಿಗ್ನಮನಸಂ ನಿತ್ಯಭೀತಂ ಚ ತೈತ್ತಿರಾತ್ ॥ ೨೭ ॥

ದೊಡ್ಡ ಹೆಂದಿ ಅಥವಾ ಬಹಳ ಕೂದಲಿರುವ ನಾಯಿಯಂಥ ಪ್ರಾಣಿ ಇವುಗಳ ಮಾಂಸದಲ್ಲಿ ಬಯಕೆ ಉಂಟಾದರೆ, ಉದ್ವಿಗ್ನಮನಸ್ಸುಳ್ಳ ಮಗನನ್ನು ಪಡೆಯುತ್ತಾಳೆ. ತಿತ್ತಿರ ಪಕ್ಷಿಯ ಮಾಂಸದಲ್ಲಿ ಅಭಿಲಾಷೆಯಾದರೆ, ಸದಾ ಹೆದರಿಕೆಯುಳ್ಳ ಅಥವಾ ಶೀಲವಂತನನ್ನು ಪಡೆಯುತ್ತಾಳೆ.

ಆತೋಽನುಕ್ತೇಷುಯಾನಾರೀಸಮುಭಿಧ್ಯಾತಿದೌಹೃದಂ ॥
ಶರೀರಾಚಾರಶೀಲೈಃ ಸಾಸಮಾನಂ ಜನಯಿಷ್ಯತಿ ॥ ೨೮ ॥

ಇನ್ನು ಹೇಳದೇ ಇದ್ದಂಥ ಬೇರೆಬೇರೆ ಪ್ರಾಣಿಗಳ ಮಾಂಸವಿಷಯದಲ್ಲಿ ಗರ್ಭಿಣಿಯು ಇಚ್ಛೆಯನ್ನು ಮಾಡಿದರೆ, ಆ ಪ್ರಾಣಿಯ ಶರೀರ ಸೂಚ್ಯತೆ,

ಆಚಾರ, ಶೀಲಗಳಿಗೆ ಸಮಾನವಾದ, ಶರೀರಾದಿಗುಣಗಳುಳ್ಳ ಮಗನನ್ನು ಹಡೆಯುತ್ತಾಳೆ.

ಕರ್ಮಣಾಚೋದಿತಂಜಂತೋರ್ಭವಿತವ್ಯಂಪುನರ್ಭವೇತ್॥ ಯಥಾ ತಥಾ ದೈವಯೋಗಾತ್ದೌಹೃದಂಜನಯೇತ್ಹೃದಿ ॥ ೨೯ ॥

ಹೇಗೆ ಗರ್ಭಿಣಿಯ ಹೃದಯದಲ್ಲಿ ಅನಿರ್ವಚನೀಯವಾದ ಗರ್ಭಜೀವದ ಕರ್ಮಸಂಸ್ಕಾರ ರೂಪವಾದ ದೈವಯೋಗದಿಂದ ಬಯಕೆಯು ಉತ್ಪನ್ನವಾಗುತ್ತದೆಯೋ, ಅದರಂತೆ ಮುಂದೆ ಹುಟ್ಟುವಮನುಷ್ಯನ ಗುಣವಾದರೂ ಸಹ ಆ ಕರ್ಮಗಳಿಂದ ಕೂಡಿದ ಭವಿತವ್ಯವುಳ್ಳದ್ದಿರುವದು ಆದ್ದರಿಂದ ಹಿಂದೆ ವಿವೇಚಿಸಲ್ಪಟ್ಟ, ಮನುಷ್ಯನ ಕರ್ಮರೂಪವಾದ ಸಂಸ್ಕಾರವುಳ್ಳ, ಮನಸ್ಸೆಂಬ ಲಿಂಗ ಶರೀರವು, ಪ್ರತಿ ಜನ್ಮದಲ್ಲಿಯೂ ಪ್ರಕಟವಾಗುತ್ತದೆಂದು ತಿಳಿಯಬೇಕು ಹಿಂದಿನ ಜನ್ಮದಲ್ಲಿಯ ಸಂಸ್ಕಾರಯುಕ್ತ ಮನಸ್ಸು ಈ ಜನ್ಮದಲ್ಲಿಯೂ ಈಗಿನ ಜನ್ಮದಲ್ಲಿಯದು ಮುಂದೆಯೂ; ಹೀಗೆ ಕ್ರಮಶಃ ಚಕ್ರದಂತೆ ಪರಿವರ್ತನವುಳ್ಳದ್ದಿರುವದೆಂದು ತಿಳಿಯಬೇಕು.

(೧೫) ಪ್ರತಿ ತಿಂಗಳದಲ್ಲಿಯ ಗರ್ಭದ ಅಂಗೋಪಾಂಗಗಳು

ಮಾಸಿಮಾಸಿ ಗರ್ಭಸ್ಯ ಅಂಗೋಪಾಂಗ ನಿರ್ವೃತ್ತಿಃ ॥

ಪ್ರತಿಯೊಂದು ತಿಂಗಳಿನಲ್ಲಿಯ ಗರ್ಭದ ಅಂಗೋಪಾಂಗ ಪರಿಪೂರ್ಣತೆಯ ಕ್ರಮವನ್ನು ಹೇಳುತ್ತಾರೆ.

ತತ್ರಪ್ರಥಮೇಮಾಸಿಕಲಲಂಜಾಯತೆ, ದ್ವಿತೀಯೇದಿನಃ, ದಿತೃತೀಯೇ ಹಸ್ತ, ಪಾದ, ಶಿರಸಾಂ, ಪಂಚಪಿಂಡಿಕಾನಿವರ್ತಂತೆ, ಅಂಗಪ್ರತ್ಯಂಗವಿಭಾಗಶ್ಚಸೂಕ್ಷ್ಮೋಭವತಿ, ಚತುರ್ಥೆಸರ್ವಾಂಗ ಪ್ರತ್ಯಂಗವಿಭಾಗಃ ಪ್ರವ್ಯಕ್ತೋಭವತಿ, ಪಂಚಮೇಮನಃ ಪ್ರತಿ

ಬುದ್ಧತರಂಭವತಿ,ಷಷ್ಠೇಬುದ್ಧಿಃ,ಸಪ್ತಮೇಸರ್ವಾಂಗಪ್ರತ್ಯಂಗ ವಿಭಾಗಃಪ್ರವ್ಯಕ್ತತರೋಭವತಿ, ಅಷ್ಟಮೇಽಸ್ಥಿರೀಭವತ್ಯೋಜಃ, ನವಮದಶಮೈಕಾದಶ ದ್ವಾದಶಾನಾಟವನ್ಯತಥಿಮುಸ್ಮಿನ್ ಜಾಯತೆ, ಅಥೋಽನ್ಯಥಾವಿಕಾರೀಭವತಿ ॥

(ಸುಶ್ರುತ । ಶಾರೀರ । ಅ. ೩ ಸೂ. ೧೮-೩೦)

ಗರ್ಭಾಶಯದಲ್ಲಿ ಶುಕ್ರಶೋಣಿತಸಂಯುಕ್ತವಾದ ಗುಂಪು **ಮೊದಲನೇ ತಿಂಗಳಿನಲ್ಲಿ** ನೊಸರಿನಂತೆ (ಕಲಲ) ಆಗುತ್ತದೆ. **ಎರಡನೇ ತಿಂಗಳಿನಲ್ಲಿ** ಘಟ್ಟಿಯಾಗಿ ಮುದ್ದೆಯಂತೆ (ಘನ) ಆಗುತ್ತದೆ. **ಮೂರನೇ ತಿಂಗಳಿನಲ್ಲಿ** ಕೈ, ಕಾಲು, ತಲೆಗಳ, ಐದು ಪಿಂಡಗಳು ಉತ್ಪನ್ನವಾಗುತ್ತವೆ. ಅದು ಹೇಗಂದರೆ:— ಐದು ಸಣ್ಣ ಸಣ್ಣ ಪಿಂಡಿಕೆಗಳು, ಆಯಾ ಸ್ಥಾನಗಳಲ್ಲಿ, ಉಂಟಾಗುತ್ತವೆ. ಮುಂದೆ ಅವೇ ಕೈ, ಕಾಲು, ತಲೆಗಳಾಗುತ್ತವೆ. ಐದು ಪಿಂಡಿಕೆಗಳೆಂದರೆ, ಕೈ, ಕಾಲು, ತಲೆಗಳ ಸೂಕ್ಷ್ಮ ಸ್ವರೂಪಗಳು ಮತ್ತು ಅಂಗಪ್ರತ್ಯಂಗ ವಿಭಾಗಗಳು ಸೂಕ್ಷ್ಮವಾಗಿ ಆರಂಭವಾಗಿರುತ್ತವೆ. **ನಾಲ್ಕನೇ ತಿಂಗಳಿನಲ್ಲಿ** ಸರ್ವಾಂಗ ಪ್ರತ್ಯಂಗ ವಿಭಾಗಗಳು ಪ್ರವ್ಯಕ್ತವಾಗುತ್ತವೆ. ಗರ್ಭದ ಹೃದಯ ಭಾಗವು ಉತ್ಪನ್ನವಾಗುವದರಿಂದ ಚೇತನಾಧಾತುವು ಅಭಿವ್ಯಕ್ತವಾಗುತ್ತದೆ. **ಐದನೇ ತಿಂಗಳಿನಲ್ಲಿ** ಮನಸ್ಸು ಪ್ರವ್ಯಕ್ತವಾಗುತ್ತದೆ **ಆರನೇ ತಿಂಗಳಿನಲ್ಲಿ** ಬುದ್ಧಿಯು ಉತ್ಪನ್ನವಾಗುತ್ತದೆ. **ಏಳನೇ ತಿಂಗಳಿನಲ್ಲಿ** ಸರ್ವ ಅಂಗಪ್ರತ್ಯಂಗಗಳು ಸ್ಪುಟವಾಗಿ ಉತ್ಪನ್ನವಾಗುತ್ತವೆ **ಎಂಟನೇ ತಿಂಗಳನಲ್ಲಿ** ಓಜಸ್ಸು ಅಸ್ಥಿರ (ಚಂಚಲ) ವಾಗುತ್ತದೆ. **ಒಂಭತ್ತನೇ ತಿಂಗಳು** ಅಥವಾ **ಹತ್ತು, ಹನ್ನೊಂದು, ಹನ್ನೆರಡನೇ ತಿಂಗಳಿನಲ್ಲಿ** ಯಾವದಾದರೊಂದು ತಿಂಗಳಲ್ಲಿ ಹಡೆಯುತ್ತಾಳೆ ಅದಕ್ಕೂ ಹೆಚ್ಚು ದಿನಗಳಾದರೆ ಗರ್ಭವು ವಿಕಾರಹೊಂದಿದೆಯೆಂದು ತಿಳಿಯಬೇಕು. ಹನ್ನೆರಡು ತಿಂಗಳ ನಂತರ ಹಡೆಯುವ ಗರ್ಭದಲ್ಲಿ ಪ್ರತಿಯೊಂದು ತಿಂಗಳಲ್ಲಿ ಹೇಳಿದ ಆವಾವ ಅಂಗಪ್ರತ್ಯಂಗ ಸ್ಥಿತಿಗಳು ಆವಾವ ತಿಂಗಳಂತೆಯೇ ಉತ್ಪನ್ನವಾಗಲಾರವು. ಹಾಗೆ ಶಾಸ್ತ್ರದಲ್ಲಿ ಹೇಳಿದಂತೆ, ಪ್ರತಿತಿಂಗಳ ಸ್ಥಿತಿಗಳಂತೆ ಗರ್ಭೋಪಕ್ರಮ ಸಾಗಿದರೆ; ಹೆಚ್ಚು ದಿನ ಹಿಡಿದರೂ ಒಂದು ವರ್ಷದಲ್ಲಿ ಜನನವಾಗ

ಲಿಕ್ಕೇಬೇಕು ಹಾಗೆ ಆಗದೆ ಇರುವ ಗರ್ಭದಲ್ಲಿ, ಕ್ರಮವಾದ ಬೆಳವಣಿಗೆ ಇಲ್ಲವೆಂಬುದು ಸ್ಪಷ್ಟ ನಿಶ್ಚಿತಾರ್ಥವಾದದ್ದಿರುತ್ತದೆ. ಇಂಥ ವರ್ಷ ಮೀರಿದ ಮೇಲೆ ಯಾವಾಗಲಾದರೂ ಹೆಡೆಯುವ ಗರ್ಭದಲ್ಲಿ; ಪ್ರತಿ ತಿಂಗಳನಂತೆ ಗರ್ಭದ ಅಂಗಪ್ರತ್ಯಂಗಕ್ರಮಗಳು ನಡೆಯುವದಿಲ್ಲವೆಂಬುವದೇ ಸ್ಪಷ್ಟಾರ್ಥವು.

೧. ಗರ್ಭ ವಿಷಯದಲ್ಲಿ ವಿಶೇಷ

ಗರ್ಭಿಣೀ ಸ್ಥಿತಿಯಲ್ಲಿ ಇರುವಾಗಿನ ಆಚಾರಾದಿ ವೈದಿಕಕ್ರಿಯೆಗಳನ್ನೂ, ಪುಂಸವನ ಮೊದಲಾದವುಗಳನ್ನೂ ಹೇಳಿರುತ್ತಾರೆ. ಮತ್ತೂ ವಿಶೇಷವಾದ ಗರ್ಭ ವಿಷಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಹೇಳುತ್ತಾರೆ ಅವುಗಳು ಅಭ್ಯಾಸಿಗಳಿಗೆ ಒಂದೇ ಕಡೆಯಲ್ಲಿ ದೊರೆಯಲೆಂದು ಸಂಗ್ರಹಿಸಿ ಹೇಳುತ್ತೇನೆ. ವಿಷಯವನ್ನೇ ಅನುಸರಿಸಿ ಗ್ರಂಥ ರಚನೆಯನ್ನು ಕೈಕೊಂಡಿದ್ದರಿಂದ ವಿಷಯಕ್ಕೆ ಸಂಬಂಧ ಬರದಂಥವುಗಳನ್ನು ಇಲ್ಲಿ ಸಂಗ್ರಹಿಸಿರುತ್ತದೆ.

ಋತುಕಾಲದಲ್ಲಿಯ ನಿಯಮ

ಋತೌ ಪ್ರಥಮ ದಿವಸಾತ್ ಪ್ರಭೃತಿ ಬ್ರಹ್ಮಚಾರಿಣೀದಿವಾಸ್ವಪ್ನಾಂಜನಾತಿಶ್ರಾಸಾತಸ್ನಾನಾನುಲೇಪನಾಭ್ಯಂಗನಖಚ್ಛೇದನಪ್ರಧಾವನಹಸನಕಥನಾತಿಶಬ್ದ ಶ್ರವಣಾವಲೇಖನಾನಿಲಾಯಾಸಾನ್ ಪರಿಹರೇತ್ ॥ ಕಿಂಕಾರಣಂ? ದಿವಾಸ್ವಪಂತ್ಯಾಃಸ್ವಾಪಶೀಲಃ, ಅಂಜನಾದಂಧಃ, ರೋದನಾದ್ವಿಕೃತದೃಷ್ಟಿಃ, ಸ್ನಾನಾನುಲೇಪನಾತ್ ದುಃಖಶೀಲಃ, ತೈಲಾಭ್ಯಂಗಾತ್ ಕುಷ್ಠೀ, ನಖಾಪಕರ್ತನಾತ್ ಕುನಖೀ, ಪ್ರಧಾವನಾತ್ ಚಂಚಲಃ, ಹಸನಾಚ್ಛ್ಯಾವದಂತೌಷ್ಠತಾಲುಜಿಹ್ವಃ, ಪ್ರಲಾಪೀಚಾತಿಕಥನಾತ್, ಅತಿಶಬ್ದಶ್ರವಣಾದ್ಬಧಿರಃ, ಅವಲೇಖನಾತ್ ಖಲತಿಃ, ವಾಯುತಾಯಾಸಸೇವನಾದುನ್ಮತ್ತೋ ಗರ್ಭೋಭವತೀತ್ಯೇವಮೇತಾನ್ ಪರಿಹರೇತ್ ॥

(ಸುಶ್ರುತ ॥ ಶಾರೀರ ॥ ಅ. ೨ ಸೂ. ೨೮)

ಮಾಸಿಕ ಋತು (ರಜಸ್ರಾವ) ಕಾಲದಲ್ಲಿ ಸ್ತ್ರೀಯು ಮೊದಲನೇ ದಿವಸ ಮೊದಲುಗೊಂಡು ಬ್ರಹ್ಮಚಾರಿಣಿಯಾಗಿರಬೇಕು. ಹಗಲು ನಿದ್ರಿಸುವದು, ಅಂಜನವನ್ನು ಹೆಚ್ಚಿಕೊಳ್ಳುವದು, ಅಳುವದು, ಸ್ನಾನಮಾಡೋಣ, ಮೈಗೆ ಗಂಧಾದಿಗಳನ್ನು ಹೆಚ್ಚಿಕೊಳ್ಳುವಿಕೆ, ಅಭ್ಯಂಗ ಸ್ನಾನ ಮೊದಲಾದವುಗಳು, ಉಗುರು ಕತ್ತರಿಸುವದು, ಓಡುವದು, ನಗುವದು, ಶೃಂಗಾರಾದಿ ಕಥೆಗಳನ್ನು ಕೇಳುವದು ಮತ್ತು ಹೇಳುವದು, ಅತಿ ಮಾತಾಡುವದು ಅಥವಾ ಬಹಳ ಮಾತನ್ನು ಕೇಳುವದು ಇಲ್ಲವೇ ಬಹುದೊಡ್ಡ ಸಪ್ಪಳವನ್ನು ಕೇಳುವದು, ತಲೆ ಬಾಚಿಕೊಳ್ಳುವದು, ವಾತಪ್ರಕೋಪ ಮಾಡುವ ಆಹಾರ ಆಚಾರ ವಿಹಾರ ಗಳು ಅಥವಾ ಗಾಳಿಯಲ್ಲಿರುವದು, ಶ್ರಮಕರವಾದ ಕೆಲಸ ಇಲ್ಲವೇ ಕಷ್ಟಪ್ರದ ವಾದ ಕರ್ತವ್ಯ ಮೊದಲಾದವುಗಳನ್ನು ಬಿಡಬೇಕು.

ಯಾಕಂದರೆ:— ಹಗಲು ನಿದ್ರಿಸುವದರಿಂದ ನಿದ್ರಾಶೀಲನಾದ ಮಗನನ್ನು ಪಡೆಯುತ್ತಾಳೆ. ಅಂಜನವನ್ನು ಹೆಚ್ಚಿಕೊಳ್ಳುವದರಿಂದ ಕುರುಡನು, ಅಳುವದರಿಂದ ವಿಕಾರವಾದ ಕಣ್ಣುಳ್ಳವನು, ಸ್ನಾನಮಾಡುವದರಿಂದ ಮತ್ತು ಗಂಧಾದಿಲೇಪನಮಾಡಿಕೊಳ್ಳುವದರಿಂದ ದುಃಖಿಯು ಅಥವಾ ದುಷ್ಟಬುದ್ಧಿಯುಳ್ಳವನು, ತೈಲಾಭ್ಯಂಗದಿಂದ ಕುಷ್ಠರೋಗಿಯು, ಉಗುರು ಕತ್ತರಿಸಿ ಕೊಳ್ಳುವದರಿಂದ ಕೆಟ್ಟ ಉಗುರುಳ್ಳವನು, ಓಡುವದರಿಂದ ಚಂಚಲನು, ನಗುವದರಿಂದ ಧೂಸರ ಕೆಂಪು ಬಣ್ಣವುಳ್ಳ, ಹೆಲ್ಲು ತುಟಿ ಕಾಲು ನಾಲಿಗೆಗಳಿಂದ ಕೂಡಿರುವವನು, :ಬಹಳ ಮಾತಾಡುವದರಿಂದ ಪ್ರಲಾಪಿಯು, ಕರ್ಕಶ ಬಹು ದೊಡ್ಡ ಸಪ್ಪಳವನ್ನು ಕೇಳುವದರಿಂದ ಕಿವುಡನು, ಲೆತ ಬಾಚಿಕೊಳ್ಳುವದರಿಂದ ಬೋಳುತಲೆಯವನು, ಬಹಳ ವಾತಲ ಪದಾರ್ಥ ಸೇವನೆ ಅಥವಾ ವಾಯು ಸೇವನೆಯಿಂದ ಉನ್ಮತ್ತನು ಮೊದಲಾದ ಪುತ್ರೋತ್ಪತ್ತಿಯುಆಗುತ್ತದೆ. ಆದ್ದರಿಂದ ಯೋಗ್ಯ ಗರ್ಭ ಉತ್ಪತ್ತಿಯಾಗಬೇಕಾದರೆ ಇವೆಲ್ಲವುಗಳನ್ನು ಬಿಡಬೇಕು. ಈ ಶ್ಲೋಕದಲ್ಲಿ ನಿಷಿದ್ಧವಾದ ಆಚಾರಾದಿಗಳಿಂದ ಉತ್ಪನ್ನವಾಗುವ ವಿಕೃತಿಯುಕ್ತವಾದಗರ್ಭ ಸ್ವರೂಪವನ್ನು ಹೇಳಿದ್ದಾರೆ.

ದರ್ಭಸಂಸ್ತರಶಾಯಿನೀಂಕರತಲಶರಾವಪರ್ಣಾನ್ಯತವುಭೋ
ಜಿನೀಂ ಹವಿಷ್ಯಂ, ತ್ರ್ಯಹಂ ಚ ಭರ್ತುಃ ಸಂರಕ್ಷೇತ್ ॥

ತತಃ ಶುದ್ಧಸ್ನಾತಾಂ ಚತುರ್ಥೇಽಹನ್ಯಹತವಾಸಃ ಸಮಲಂಕೃತಾಂಕೃತಮಂಗಲಸ್ವಸ್ತಿವಾಚನಾಂಭರ್ತಾರಂದರ್ಶಯೇತ್ ॥
ತತ್ಕಸ್ಯಹೇತೋಃ ? ॥
(ಸುಶ್ರುತ ॥ ಶಾರೀರ ॥ ಅ ೨ ಸೂ ೨೫)

ಧರ್ಭೆಯು ಚಾಪೆ ಮೊದಲಾದವುಗಳಲ್ಲಿ ಶಯನ ಮಾಡತಕ್ಕವಳಾಗಿಯೂ, ಕೈಯಲ್ಲಿಯೇ ಆಹಾರ ಪದಾರ್ಥಗಳನ್ನು ಹಾಕಿಸಿಕೊಂಡು ಊಟ ಮಾಡಬೇಕು. ಅಥವಾ ಹರಿವಾಣ, ಎಲೆ, ಮೊದಲಾದವುಗಳಲ್ಲಿ ಯಾವದಾದರೊಂದರಲ್ಲಿ ಹವಿಷ್ಯಾನ್ನವನ್ನು ಭುಂಜಿಸಬೇಕು. ಹೀಗೆ ಮುಟ್ಟಾದಾಗ ಮೂರು ದಿನ ನಿಯಮವತಿಯಾಗಿರುವವಳನ್ನು ಗಂಡನ ಸಕಾಶದಿಂದ ವೈದ್ಯನು ರಕ್ಷಣೇ ಮಾಡಬೇಕು. **"ತ್ರ್ಯಹಂಚ"** ಎಂದು ಹೇಳಿರುವದರಿಂದ ಮಾಸಿಕ ಸ್ರಾವದ ಅವಧಿಯು ಹೆಚ್ಚು ದಿನವಿದ್ದರೆ ಆ ದಿನಪರ್ಯಂತರವೂ, ಈ ವಿಧಿಗಳನ್ನನುಸರಿಸಬೇಕೆಂದು ಸೂಚಿತವಾಗುತ್ತದೆ.

ಮಾಸಿಕ ಸ್ರಾವ ಪೂರ್ತಿಯಾದ ನಂತರ (ಮುಗಿದ ಮೇಲೆ) ಸ್ನಾನಾದಿಗಳಿಂದ ಶುದ್ಧ ವಾದವಳನ್ನು ನಾಲ್ಕನೇ ದಿನ (ಶುದ್ಧ ಸ್ನಾತಳಾದ ನಂತರ) ದಲ್ಲಿ, ನವೀನ ವಸ್ತ್ರಗಳನ್ನೂ ಅಲಂಕಾರ ಆಭರಣಾದಿಗಳನ್ನೂ ಧರಿಸಿದಂಧವಳಿಗೆ, ಪುರೋಹಿತರು **"ಮಂಗಲ ಸ್ವಸ್ತಿವಾಚನ"** ಪೂರ್ವಕವಾಗಿ ಪತಿದರ್ಶನವನ್ನುಮಾಡಿಸಬೇಕು. ಪತಿ ದರ್ಶನವನ್ನೇ ಯಾಕೆಮಾಡಿಸಬೇಕೆಂದರೆ, ಋತು ಸ್ನಾತಳಾದ ಸ್ತ್ರೀಯು ಮೊದಲು ಯಾರನ್ನು ನೋಡುತ್ತಾಳೆಯೋ ಅಂಥ ಪುತ್ರನನ್ನೇ ಪಡೆಯುತ್ತಾಳೆ. ಆದ್ದರಿಂದ ಋತು ಸ್ನಾತಳಾದವಳು ಮೊದಲು ಪತಿ ದರ್ಶನವನ್ನೇ ಮಾಡಬೇಕೆಂದು ಶಾಸ್ತ್ರಕಾರರು ವಿಧಿಸಿದ್ದಾರೆ.

ಪೂರ್ವಂ ಪಶ್ಯೇತ್ ಋತುಸ್ನಾತಾಯಾದೃಶಂನರಮಂಗನಾ ॥
ತಾದೃಶಂಜನಯೇತ್ ಪುತ್ರಂಭರ್ತಾರಂದರ್ಶಯೇದತಃ॥ ೨೬॥
ತತೋವಿಧಾನಂ ಪುತ್ರೀಯಮುಪಾಧ್ಯಾಯಃ ಸಮಾಚರೇತ್
ಕರ್ಮಾಂತೇಚಕ್ರಮುಂ ಹ್ಯೇತನಮಾರಭೇತವಿಚಕ್ಷಣಃ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋ ೨೭)

ಮಾಸಿಕವಾದ ಋತುಸ್ನಾನಾನಂತರ ಸ್ತ್ರೀಯು ಮೊದಲು ಯಾರನ್ನು ನೋಡುತ್ತಾಳೆಯೋ ಅವನಂತೇ ಇರುವ ಪುತ್ರನನ್ನು ಪಡೆಯುತ್ತಾಳೆ. ಆದರಿಂದ ಪತಿ ದರ್ಶನವನ್ನೇ ಮಾಡಬೇಕೆಂದು ಹೇಳಿದ್ದಾರೆ. ಪತಿ ದರ್ಶನಾನಂತರದಲ್ಲಿ ಪುರೋಹಿತರು "ಪುತ್ರೀಯ" ವಿಧಾನವನ್ನು ಜರುಗಿಸಬೇಕು. "ಪುತ್ರೇಭ್ಯೋಹಿತಂ ಪುತ್ರೀಯಂ" ಪುತ್ರರಿಗೆ (ಸಂತತಿಗೆ) ಹಿತವಾಗುವಂಥ ಮಂತ್ರಾರ್ಚನ ಹೋಮಾದಿ ವಿಧಾನಕ್ಕೆ "ಪುತ್ರೀಯ" ವೆಂಬ ಹೆಸರು. ಪುತ್ರೀಯ ವಿಧಾನಗಳ ಕರ್ಮಾಂತ್ಯದಲ್ಲಿ ಮುಂದೆ ವಿವರಿಸುವ ಕ್ರಮವನ್ನು ಅನುಸರಿಸಬೇಕು.

ತತೋಽಪರಾಹ್ಣೇಪುಮಾನ್ಮಾಸಂಬ್ರಹ್ಮಚಾರೀಸರ್ಪಿಃ ಸ್ನಿಗ್ಧಃ ಸರ್ಪಿಃ ಕ್ಷೀರಾಭ್ಯಾಂ ಶಾಲ್ಯೋದನಂ ಭುಕ್ತ್ವಾಮಾಸಂಬ್ರಹ್ಮಚಾರಿಣೀಂ ತೈಲಸ್ನಿಗ್ಧಾಂ ತೈಲಮಾಷೋತ್ತರಾಹಾರಾಂ ನಾರೀಮುಪೇಯಾದಾತ್ರೌಸಾನುಭರಭಿವಿಶ್ವಾಸ್ಯ;ವಿಕಲ್ಪ್ಯೈವಂಚತುರ್ಥ್ಯಾಂಷಷ್ಠ್ಯಾಮಷ್ಟಮ್ಯಾಂದಶಮ್ಯಾಂ ದ್ವಾದಶ್ಯಾಂಚೋಪೇಯಾದತಃ ಪರಂಮಾಸಾದುಪೇಯತ್, ಪುತ್ರಕಾಮಃ॥ ಲಬ್ಧಗರ್ಭಾಂನೈವಚ ॥ (ಸುಶ್ರುತ॥ ಶಾರೀರ॥ ಅ ೨ ಸೂ ೨೮)

ಮಾಸಿಕ ರಜೋದರ್ಶನದ ಕಾಲದಲ್ಲಿ ಬ್ರಹ್ಮಚರ್ಯವನ್ನೂ ನಿಯಮಾದಿಗಳನ್ನೂ ಆಯುರ್ವೇದಾಚಾರ್ಯರು ಸ್ವಯಂ ವಿಧಿಸಿರುತ್ತಾರೆ ಆದರೆ ವಿಶಿಷ್ಟ ಸಂತತಿಯನ್ನು ಪಡೆಯುವ ಸಲುವಾಗಿ ಪ್ರತ್ಯೇಕ ವಿಧಾನವಾದ "ಪುತ್ರೀಯ" ವಿಧಿಯನ್ನು ಅನುಸರಿಸುವಾಗ, ಋತು ಕಾಲದ ಪೂರ್ವದಲ್ಲಿ ಒಂದು ತಿಂಗಳು ಪತಿ ಪತ್ನಿಯರಿಬ್ಬರೂ ಬ್ರಹ್ಮಚರ್ಯ ನಿಯಮಾದಿಗಳನ್ನು ಪಾಲಿಸಬೇಕೆಂದು ಶಾಸ್ತ್ರವಿಧಿ ಇರುತ್ತದೆ ಸ್ತ್ರೀಯ ಋತುಸ್ನಾತ ಕ್ರಮ ಮುಗಿದ ಮೇಲೆ ಪುತ್ರೀಯ ವಿಧಾನದಂತೆ ಇರುವ ದಂಪತಿಗಳು ರಾತ್ರಿಯಲ್ಲಿ ಸಂಯೋಗವನ್ನು ಹೊಂದಬೇಕು. ಪುರುಷನು ಪೂರ್ವದಲ್ಲಿ ಒಂದು ತಿಂಗಳಿಂದಲೂ ಬ್ರಹ್ಮಚರ್ಯವನ್ನನುಸರಿಸಿ ಘೃತಪಾನಾದಿಗಳಿಂದ ಸ್ನಿಗ್ಧತೆಯುಳ್ಳವನಾಗಿ, ತುಪ್ಪ ಹಾಲು ಯುಕ್ತವಾದ ಶಾಲ್ಯೋದನವನ್ನು ಭುಂಜಿಸಬೇಕು. ಸ್ತ್ರೀಯಾದರೂ ವ್ರತದಿಂದ ಇದ್ದು ತೈಲದಿಂದ ಬಸಿ

ಮೊದಲಾದವುಗಳನ್ನು ತಕ್ಕೊಂಡು ಸ್ನಿಗ್ಧತೆಉಳ್ಳವಳಾಗಿ, ತೈಲ ಮಾಷ ಯುಕ್ತ ಪದಾರ್ಥಗಳನ್ನು ಭೋಜನದ ಅಂತ್ಯ ಸಮಯದಲ್ಲಿ ಸೇವಿಸಬೇಕು. ಹೀಗೆ ನಿಯಮವನ್ನನುಸರಿಸಿದ ಪುರುಷನು ಸ್ತ್ರೀಯನ್ನುಸ್ನೇಹದಿಂದ ಸಂತೈಸಿ ಸಂಯೋಜಿತನಾಗಬೇಕು. ಪುತ್ರನನ್ನು ಪಡೆಯಬೇಕೆಂಬ ಇಚ್ಛೆಯುಳ್ಳವನು ಸ್ತ್ರೀಯ ಋತುಸ್ನಾನಾ ನಂತರ ನಾಲ್ಕನೇ ದಿನದಲ್ಲಿ ಸಂಯೋಗವನ್ನು ಮಾಡ ಬೇಕು. ಇದರಂತೆ ೬ನೇಯ ೮-೧೦-೧೨ ದಿನಗಳಲ್ಲಿ ಯುಕ್ತನಾಗಬೇಕು. ಸ್ತ್ರೀ ಸಂತತಿಯನ್ನು ಇಚ್ಛಿಸುವವನು ೫-೭-೯-೧೧ ನೇಯ ದಿನಗಳಲ್ಲಿ ಸಂಯೋಗವನ್ನು ಹೊಂದಬೇಕು. ಋತುಸ್ನಾನಾ ನಂತರ ದ್ವಾದಶ ಶಾತ್ರಿ ಕಳೆದ ಮೇಲೆ ಸಂಭೋಗಿಸಬಾರದೆಂದು ನಿಯಮವಿರುತ್ತದೆ ನಂತರ ಮುಂದಿನ ಪುಷ್ಪ ದರ್ಶನಾ ನಂತರ ಸಂಯೋಗ ಮಾಡಬೇಕು. ಗರ್ಭ ಧರಿಸಿ ದರೆ ಸಂಭೋಗಿಸಬಾರದು.

ಅತಃಪರಂ ಪಂಚಮ್ಯಾಂ ಸಪ್ತಮ್ಯಾಂ ನವಮ್ಯಾಮೇಕಾದಶ್ಯಾಂ ಚ ಸ್ತ್ರೀಕಾಮಃ; ತ್ರಯೋದಶೀಪ್ರಭೃತಯೋನಿಂದ್ಯಾಃ ॥
(ಸುಶ್ರುತ ॥ ಶಾರೀರ ॥ ಅ. ೨ ಸೂ. ೩೦)

ಸ್ತ್ರೀ ಸಂತತಿ ಇಚ್ಛೆಯುಳ್ಳವನು ಯಾವ ದಿವಸಗಳಲ್ಲಿ ಸಂಯೋಗ ಮಾಡಬೇಕೆನ್ನುವದನ್ನು ಹಿಂದೆ ವಿವರಿಸಿರುತ್ತದೆ. ಋತುಸ್ನಾನಾ ನಂತರ ಹದಿಮೂರನೇ ದಿನ ಮೊದಲುಗೊಂಡು ನಿಂದ್ಯವಾದ ದಿನಗಳು. ಆದ್ದರಿಂದ ನಿಂದ್ಯ ದಿನಗಳು ಸಂಭೋಗಕ್ಕೆ ಯೋಗ್ಯವಲ್ಲವೆಂದು ಹೇಳಿದ್ದಾರೆ

ಏಷೂತ್ತರೋತ್ತರಂ ವಿದ್ಯಾದಾಯುರಾರೋಗ್ಯಮೇವಚ
ಪ್ರಜಾಸೌಭಾಗ್ಯಮೈಶ್ವರ್ಯಂ ಬಲಂ ಚ ದಿವಸೇಷುವೈ ॥
(ಸುಶ್ರುತ ॥ ಶಾರೀರ ॥ ಅ. ೨ ಶ್ಲೋ. ೨೯)

ಪೂರ್ವೋಕ್ತವಾದ ದಿವಸ ನಿಯಮಗಳನ್ನು ಪಾಲಿಸುವದರಿಂದ ಉತ್ತ ರೋತ್ತರವಾಗಿ ಆಯುಷ್ಯ ಆರೋಗ್ಯಗಳ ಅಭಿವೃದ್ಧಿಯಾಗುತ್ತದೆ. ಸಂತತಿ ಸೌಭಾಗ್ಯ ಸಂಪತ್ತು ಬಲ ಮೊದಲಾದವುಗಳನ್ನು ಪಡೆಯಲು ಸಮರ್ಥರಾಗು ತ್ತಾರೆ. ಈ ನಿಯಮವನ್ನು ಅನುಸರಿಸುವದರಿಂದ ಆಯುರಾರೋಗ್ಯ ಬಲ ಯುಕ್ತರಾಗುತ್ತಾರೆಂಬ ಅಭಿಪ್ರಾಯವು.

ಲಬ್ಧಗರ್ಭಾಯಾಶ್ಚೈತೇಷ್ವಹಃಸುಲಕ್ಷ್ಮಣಾ ವಟಶುಂಗ ಸಹ ದೇವಾ ವಿಶ್ವದೇವಾ ನಾಮನ್ಯತಮಾಂಕ್ಷೀರೇಣಾಭಿಷುತ್ಯತ್ರೀಂ ಶ್ಚತುರೋವಾಬಿಂದೂನ್ದದ್ಯಾದ್ದಕ್ಷಿಣೇ ನಾಸಾಪುಟೇ ಪುತ್ರ ಕಾಮಾಯೈನ ಚ ತಾನ್ನಿಷ್ಠೀವೇತ್ ॥

(ಸುಶ್ರುತ ॥ ಶಾರೀರ ॥ ಅ. ೨ ಸೂ. ೩೨)

ಪೂರ್ವೋಕ್ತ ವಿಧಿಸಿದ ದಿನಗಳಲ್ಲಿ ಗರ್ಭವನ್ನು ಧರಿಸಿದ ಗರ್ಭಿಣಿಯು ಮೂಗಿನಲ್ಲಿ ಕೆಳಗೆ ಬರೆದ ಔಷಧ ರಸವನ್ನು ಹಾಕಬೇಕು. ಈ ಔಷಧ ಯೋಗದಿಂದ ಗಂಡು ಸಂತತಿ ಆಗುತ್ತದೆ.

"ಲಕ್ಷ್ಮಣಾ" ಬಿಳೀ ಹೂವಾಗುವ ಗುಳ್ಳದ ಗಿಡವು. "ವಟಶುಂಗ" ಆಲದ ಮುಗುಳು. "ಸಹದೇವಾ" ಹಳದೀ ಹೂವಾಗುವ ಬಲಾ ಎಂಬ ವನಸ್ಪತಿಯು. "ವಿಶ್ವದೇವಾ" ಬಿಳೀ ಹೂವಾಗುವ ಬಲಾ ಜಾತಿಯು ಇವುಗಳಲ್ಲಿ ಯಾವದಾದರೊಂದನ್ನು ಆಕಳ ಹಾಲಿನಲ್ಲಿ ತೆಯ್ದು (ಅಭಿಷುತ್ಯ) ಪುತ್ರ ಸಂತತಿಯನ್ನಪೇಕ್ಷಿಸುವ ಸ್ತ್ರೀಯಳ ಬಲಗಡೆಯ ಮೂಗಿನ ರಂಧ್ರದಲ್ಲಿ ಮೂರು ಅಥವಾ ನಾಲ್ಕು ಹನಿಗಳನ್ನು ಬಿಡಬೇಕು. ಮೂಗಿನಲ್ಲಿ ಹಾಕಿದ ಔಷಧವು ಬಾಯಿಯಲ್ಲಿ ಬಂದರೆ ಅದನ್ನು ಉಗುಳಬಾರದು. ನುಂಗಬೇಕೆಂದು ಶಾಸ್ತ್ರದಲ್ಲಿ ವಿಧಾನ ಮಾಡಿದ್ದಾರೆ.

ಋತುಸ್ತು ದ್ವಾದಶರಾತ್ರಂ ಭವತಿ ದೃಷ್ಟಾರ್ತವಃ; ಅದೃಷ್ಟಾರ್ತವಾಸ್ಯಸ್ತೀತ್ಯೇಕೇಭಾಷಂತೆ ॥

(ಸುಶ್ರುತ ॥ ಶಾರೀರ ॥ ಅ. ೩ ಸೂ. ೧೬)

ಸ್ತ್ರೀ ಪುರುಷರಸಂಯೋಗದಿಂದ ಯಾವ ಕಾಲದಲ್ಲಿ ಗರ್ಭವು ಉತ್ಪನ್ನವಾಗುತ್ತದೆಯೋ, ಆಕಾಲಕ್ಕೆ "ಋತುಕಾಲ" ವೆಂದು ಹೇಳುತ್ತಾರೆ. ಯಾವ ಕಾಲದಲ್ಲಿ ಗರ್ಭಕಾರಕ ಆರ್ತವವು ಸ್ಫುಟವಿದ್ದು ಗರ್ಭವನ್ನುತ್ಪನ್ನ ಮಾಡುವ ಕಾಲವೋ ಅದಕ್ಕೆ "ದೃಷ್ಟಾರ್ತವ" ವೆಂಬ ಹೆಸರು. ಋತು ಸ್ನಾತಳಾದ ನಂತರ (೧೨) ರಾತ್ರಿಯ ಕಾಲಕ್ಕೆ "ಋತು ದೃಷ್ಟಾರ್ತವ"

ವೆಂದು ಹೇಳುತ್ತಾರೆ. ಆದ್ದರಿಂದ (೧೨) ದಿನಗಳ ನಂತರ ಗರ್ಭಗ್ರಹಣವಾಗುವದಿಲ್ಲವಾದ್ರರಿಂದ ಸಂಭೋಗಿಸಬಾರದೆಂದು ಹೇಳಿದ್ದಾರೆ. ಮತ್ತು ಒಂದು ವೇಳೆ ಪೂರ್ವದಲ್ಲಿ ಗರ್ಭಗ್ರಹಣವಾದದ್ದಿದ್ದರೆ, ಸಂಭೋಗ ಘರ್ಷಣದಿಂದ ಸದ್ಯೋಗೃಹಿತ ಗರ್ಭವು ಚ್ಯುತಿಯನ್ನು ಹೊಂದುತ್ತದೆ. ಆದ್ದರಿಂದ ದ್ವಾದಶ ರಾತ್ರೆಯ ನಂತರ ಪುನಃ ಋತುಸ್ನಾತಳಾಗುವ ವರೆಗೂ ಸಂಯೋಗಿಸಬಾರದೆಂದು ವಿಧಿಸಿದ್ದಾರೆ. ಗರ್ಭಧಾರಣೆಯಾಗಿದ್ದರಂತೂ ಸಂಭೋಗಿಸಲೇ ಕೂಡದೆಂದು ವಿಧಿಸಿದ್ದಾರೆ. ಆರ್ತವ ಸ್ರಾವಾದಿಗಳು (ಮಾಸಿಕ ರಜೋದರ್ಶನ) ಇಲ್ಲದಿರುವ "ಅದೃಷ್ಟಾರ್ತವಾ" ಸ್ತ್ರೀಯು ಸಹ ಇದ್ದಾಳೆಂದು ಕೆಲವರು ಹೇಳುತ್ತಾರೆ.

ಅದೃಷ್ಟಾರ್ತವ ಸ್ತ್ರೀ ಲಕ್ಷಣ

ಪೀನಪ್ರಸನ್ನವದನಾಂ ಪ್ರಕ್ಲಿನ್ನಾತ್ಮಮುಖದ್ವಿಜಾಂ ॥
ನರಕಾವಯಾಂ ಪ್ರಿಯಕಥಾಂ ಸ್ರಸ್ತಕುಸ್ಪೃಕ್ಷೇವಮೂರ್ಧಜಾಂ॥೬॥
ಸ್ಫುರದ್ಭುಜಕುಜಶ್ರೋಣೀನಾಭ್ಯೂರುಜಘನಸ್ಪಿಚಾಂ॥ ಹರ್ಷಾ
ತ್ಸ್ಪೃಕ್ಪರಾಂಚಾsಪಿವಿದ್ಯಾದೃತುಮತೀಂ ಸ್ತ್ರೀಯಂ ॥
(ಸುಶ್ರುತ ॥ ಶಾರೀರ ॥ ಅ. ೩ ಶ್ಲೋ. ೮)

ಗರ್ಭಧಾರಣೆಗೆ ಯೋಗ್ಯಳಾದ "ಅದೃಷ್ಟಾರ್ತವಾ" ಸ್ತ್ರೀಯ ಲಕ್ಷಣವು. ತುಂಬಿ ಬೆಳೆದ ಪ್ರಸನ್ನವಾದ ಮುಖವುಳ್ಳವಳೂ, ಸ್ನೇಹಭಾವದಿಂದ ಆರ್ದ್ರವಾಗುತ್ತಿರುವ, ಆತ್ಮಾ ಮುಖ ಹಲ್ಲುಗಳ ಆದಿ ಭಾಗಗಳು, ಸುಖಾದಿ ಭಾವ ಸ್ಮರಣೆಯಿಂದ ನೀರೊಡೆಯುವದರಿಂದ ಆರ್ದ್ರತೆವುಳ್ಳಂಥವಾಗುತ್ತವೆ ಪುರುಷರನ್ನು ಇಚ್ಛಿಸುವವಳೂ, ಪ್ರಣಯಜನಕ ಕಥೆಯನ್ನು ಕೇಳುವವಳೂ, ಹೊಟ್ಟೆಯು ಜೋಲುಬೀಳುತ್ತಿರುವದು, ಕಣ್ಣು ಚಂಚಲ ಅಥವಾ ವಿಶಾಲವಾಗೋಣ, ತಲೆ ಕೂದಲುಗಳು ವಿಶಾಲವಾಗುವಿಕೆ, ಕೂದಲ ಭಾಗದಿಂದ ತುರುಬು ಇಳಿಬಿದ್ದಿರೋಣ, ಭುಜಸ್ತನಕಟಿ ನಾಭಿ ತೊಡೆ ಟೊಂಕದ ಮುಂಭಾಗ (ಜಘನ) ಕಟಿಸ್ಥ ಮಾಂಸಪಿಂಡ (ಸ್ಪಿಚ) ಇವುಗಳಲ್ಲಿ ಸ್ಪುರಣೆಗಳುಂಟಾಗುತ್ತವೆ. ಆನಂದ ಲವಲವಿಕೆಯುಳ್ಳವಳು ಅಥವಾ ಪುರುಷ

ಸಂಸರ್ಗ ವಿಷಯದಲ್ಲಿ ಅತ್ಯಾತುರತೆಯುಳ್ಳವಳನ್ನು, ಋತುಮತಿಯಾಗಿರುವ ಳೆಂದು ತಿಳಿದುಕೊಳ್ಳಬೇಕು. ಪ್ರತ್ಯಕ್ಷವಾಗಿ ಮಾಸಿಕ ರಜಸ್ರಾವವಾಗದಿರುವಾಗ ಈ ಹಿಂದೆ ಹೇಳಿದ ಲಕ್ಷಣಗಳಿಂದ ಗರ್ಭಾಧಾನಕ್ಕೆ ಯೋಗ್ಯಳೆಂದು ತಿಳಿಯಬೇಕು.

ಗರ್ಭಾಶಯ ಸಂಕೋಚವು

ನಿಯತಂ ದಿನಸೇಽತೀತೇ ಸಂಕುಚತ್ಯಂಬುಜಂ ಯಥಾ॥ ಋತೌ
ವ್ಯತೀತೇನಾರ್ಯಾಸ್ತು ಯೋನಿಃ ಸಂಪ್ರಿಯತೆ ತಥಾ ॥

(ಸುಶ್ರುತ ॥ ಶಾರೀರ ॥ ಅ ೩ ಶ್ಲೋ. ೯)

ಹಗಲು ಕಳೆದ ನಂತರ ನಿಶ್ಚಯವಾಗಿಯೂ ಕಮಲವು ಹೇಗೆ ಮುದುಡಿಕೊಳ್ಳುತ್ತದೆಯೋ, ಅದರಂತೆ ಋತುಕಾಲವು (ಗರ್ಭಗ್ರಹಣದ ಅವಧಿಯು) ಕಳೆದ ಮೇಲೆ ಗರ್ಭಾಶಯವು ಸಂಕೋಚಹೊಂದುತ್ತದೆ. ಅರ್ಥಾತ್ ಗರ್ಭಾಶಯದ್ವಾರವು ಮುದುಡಿಕೊಳ್ಳುತ್ತದೆ ಆದ್ದರಿಂದ ಬೀಜಗ್ರಹಣವಾಗುವದಿಲ್ಲ. ಬೀಜ (ಶುಕ್ರ) ಪ್ರವೇಶವು ಗರ್ಭಾಶಯದಲ್ಲಿ ಆಗುವದಿಲ್ಲವೆಂದರ್ಥ

ಸ್ತ್ರೀಪುಂನಪುಸಂಕಗರ್ಭೋತ್ಪತ್ತಿ

ತತ್ರ ಶುಕ್ರ ಬಾಹುಲ್ಯಾತ್ ಪುಮಾನ್, ಆರ್ತವ ಬಾಹುಲ್ಯಾತ್
ಸ್ತ್ರೀ, ಸಾಮ್ಯಾತ್ ಉಭಯೋರ್ನಪುಸಂಕಮಿತಿ ॥

(ಸುಶ್ರುತ ॥ ಶಾರೀರ ॥ ಅ ೩. ಶ್ಲೋ. ೫)

ಗರ್ಭದ ಉತ್ಪತ್ತಿಯಲ್ಲಿ ಶುಕ್ರಾಧಿಕ್ಯವಾದರೆ ಗಂಡು, ಆರ್ತವಾಧಿಕ್ಯದಿಂದ ಸ್ತ್ರೀಯು, ಶುಕ್ರಾರ್ತವಗಳು ಸಮ ಪ್ರಮಾಣದಿಂದ ಯುಕ್ತವಾದರೆ ನಪುಸಂಕ ಸಂತತಿಯು ಉತ್ಪನ್ನವಾಗುತ್ತದೆ.

ಸ್ತ್ರೀಯ ರಜೋಧಿಕ್ಯ ನ್ಯೂನತೆಯ ದಿನಗಳು

ಯುಗ್ಮೇಷುತುದಿನೇಷ್ವಾಸಾಂಭವತ್ಯಲ್ಪತರಂರಜಃ ॥

ಸಂಯೋಗಂ ತತ್ರಯಾಗಚ್ಛೇತ್ ಸಾಪುನಾಂಸಂಪ್ರಸೂಯತೆ॥
ಅಯುಗ್ಮೇಷುದಿನೇಷ್ವಾಸಾಂಭವೇದ್ಬಹುತರಂ ರಜಃ ॥
ಸಂಯೋಗಂ ತತ್ರಯಾಗಚ್ಛೇತ್ ಸಾತುಕನ್ಯಾಂ ಪ್ರಸೂಯತೆ॥
(ವಿದೇಹೆ)

ಸಮ ದಿನಗಳಲ್ಲಿ ಸ್ತ್ರೀಯರ ರಜಸ್ಸು ಕಡಿಮೆಯಾಗುತ್ತದೆ. ಆಗ ಸ್ತ್ರೀಯು ಸಂಯೋಗ ಹೊಂದಿದರೆ ಪುರುಷನ ಶುಕ್ರಾಧಿಕ್ಯವಾಗುವದರಿಂದ ಗಂಡು ಸಂತತಿಯನ್ನು ಪಡೆಯುತ್ತಾಳೆ. ವಿಷಮ ದಿನಗಳಲ್ಲಿ ಅಂದರೆ ೫-೭ ಇತ್ಯಾದಿ ದಿನಗಳಲ್ಲಿ ಸ್ತ್ರೀಯರಿಗೆ ಆರ್ತವವು ಹೆಚ್ಚಾಗುತ್ತದೆ. ಆದ್ದರಿಂದ ವಿಷಮ ದಿನಗಳಲ್ಲಿ ಸ್ತ್ರೀಯು ಸಂಯೋಗ ಹೊಂದಿದರೆ ಪುರಷರ ಶುಕ್ರವು ಕಡಿಮೆಯಾಗುವದರಿಂದ ಸ್ತ್ರೀ ಸಂತತಿಯಾಗುತ್ತದೆ. ಸಮ ವಿಷಮ ದಿನಗಳಲ್ಲಿಯ ಪುರುಷ ಸ್ತ್ರೀ ಗರ್ಭಗಳಿಗೆ ಆರ್ತವದ ಕಡಿಮೆ ಹೆಚ್ಚು ವಿಕೆಯೇ ಕಾರಣವಾಗಿರುವದೆಂದು ದರ್ಶಿಸಿದ್ದಾರೆ.

ಅಯುಗ್ಮೇಸ್ತ್ರೀಪುಮಾನ್ ಯುಗ್ಮೇಸಂ ಧ್ಯಯೋಸ್ತು ನಪುಂಸಕಂ॥ಶುಕ್ರಾಧಿಕತ್ವಾತ್ ಪುರುಷಃಪ್ರಮದಾರಜಸೋಽಧಿಕಾತ್॥
ಶುಕ್ರಶೋಣಿತಯೋಃ ಸಾಮ್ಯಾತ್ತೃತೀಯಾಪ್ರಕೃತಿರ್ಭವೇತ್॥
(ಭೋಜಸಂಹಿತಾಯಾಂ)

ಸ್ತ್ರೀಯು ರಜಃ ಸ್ನಾತಳಾದ ನಂತರ ವಿಷಮ ದಿನ ಸಂಯೋಗದಿಂದ ಹೆಣ್ಣು ಸಂತತಿಯನ್ನೂ, ಸಮದಿನಗಳಲ್ಲಿ ಗಂಡು ಸಂತತಿಯನ್ನೂ, ವಿಷಮ ಸಮದಿನಗಳ ಸಂಧಿಗಳಲ್ಲಿ ನಪುಂಸಕ ಸಂತತಿಯನ್ನು ಪಡೆಯುತ್ತಾಳೆ. ಶುಕ್ರಾಧಿಕವಾಗುವದರಿಂದ ಗಂಡು, ರಜೋಽಧಿಕ್ಯದಿಂದ ಸ್ತ್ರೀಯು, ಶುಕ್ರ ಶೋಣಿತಗಳು ಸಮವಾಗಿರುವದರಿಂದ ನಪುಂಸಕನೂ, ಉತ್ಪನ್ನವಾಗುತ್ತಾರೆ.

ಪುರುಷ ಸ್ತ್ರೀ ನಪುಂಸಕ ಗರ್ಭ ಲಕ್ಷಣ

ತತ್ರಯಸ್ಯಾದಕ್ಷಿಣೇಸ್ತನೇಸ್ರಾಕ್‌ಪಯೋದರ್ಶನಂ ಭವತಿ ದಕ್ಷಿಣಕುಕ್ಷಿವುಹತ್ವಂಚಪೂರ್ವಂಚ ದಕ್ಷಿಣಂ ಸಕ್ಥ್ಯತ್ಕರ್ಷತಿಬಾ

ಹುಲ್ಯಾಚ್ಚ ಪುಂನಾಮಧೇಯೇಷು ದ್ರವ್ಯೇಷುದೌಹೃದಯವು
ಭಿಧ್ಯಾಯತಿ ಸ್ವಪ್ನೇಷುಚೋಪಲಭತೇ ಪದ್ಮೋತ್ಪಲಕುವುಮು
ದಾಮ್ರಾತಕಾದೀನಿಪುನ್ನಾಮಾನ್ಯೇವಪ್ರಸನ್ನ ಮುಖವರ್ಣಾಚ
ಭವತಿತಾಂ ಬ್ರೂಯಾತ್ ಪುತ್ರವಿಯಂಜನಯಿಷ್ಯತೀತಿ, ತದ್ವಿ
ಪರ್ಯಯೇಕನ್ಯಾಂ, ಯಸ್ಯಾಃ ಪಾರ್ಶ್ವದ್ವಯವುವನತಂಪು
ರಸ್ತಾನ್ನಿರ್ಗತವುದರಂಪ್ರಾಗಭಿಹಿತಂಚ ಲಕ್ಷಣಂಚ ತಸ್ಯಾ
ನಪುಂಸಕವಿತಿವಿದ್ಯಾತ್, ಯಸ್ಯಾವುಧ್ಮೆನಿವ್ನಂ ದ್ರೋಣೀ
ಭೂತವುದರಂ ಸಾಯುಗ್ಮಂ ಪ್ರಸೂಯತೆಇತಿ ॥

(ಸುಶ್ರುತ॥ ಶಾರೀರ॥ ಅ ೩ ಸೂ ೩೪)

ಗರ್ಭವು ಅಪ್ರತ್ಯಕ್ಷವಾದರೂ ಹಾಲು ಉತ್ಪನ್ನವಾಗುವ ಲಕ್ಷಣಾದಿಗ
ಳಿಂದ ಸ್ತ್ರೀ ಪುಂ ನಪುಸಂಕ ಭೇದವನ್ನು ತಿಳಿಕೊಳ್ಳುವ ಕ್ರಮವನ್ನು ಹೇಳು
ತ್ತಾರೆ. ಗರ್ಭಿಣಿಯ ಬಲಗಡೆಯ ಸ್ತನದಲ್ಲಿ ಮೊದಲು ಹಾಲು ತೋರಿದರೆ,
ಬಲಗಡೆ ಹೊಟ್ಟೆಯು ಹೆಚ್ಚು ದೊಡ್ಡದಾದರೆ, ಮೊದಲು ಬಲಗಡೆಯ
ತೊಡೆಯು ದೊಡ್ಡದಾದರೆ, ಹೆಚ್ಚಾಗಿ ಪುರುಷ ಹೆಸರುಳ್ಳ ದ್ರವ್ಯಗಳಲ್ಲಿ ಬಯ
ಕೆಯಾಗುತ್ತದೆಯೋ, ಮತ್ತು ಸ್ವಪ್ನದಲ್ಲಿ ಇವುಗಳ ದರ್ಶನವಾದರೆ, ಗಂಡು
ಗರ್ಭವೆಂದು ತಿಳಿಯಬೇಕು. ಇಲ್ಲಿ ಪದ್ಮಾದಿಗಳು ಪುರುಷ ಹೆಸರುಗಳನ್ನು
ಹೊಂದಿರುವದರಿಂದ "ಪುನ್ನಾಮಧೇಯ" ವೆಂದು ಹೇಳುತ್ತಾರೆ. ಸ್ತ್ರೀ
ನಾಮಧೇಯ ಹೊಂದಿದಲ್ಲಿ ಪದ್ಮಿನೀ ಮುಂತಾದ ರೂಪಗಳಾಗುತ್ತವೆ.
"ಪದ್ಮ" ಕೆಂಪು ವರ್ಣವುಳ್ಳ ಸೂರ್ಯ ವಿಕಾಸೀ ಕಮಲವು. "ಉತ್ಪಲ"
ನೀಲ ವರ್ಣವುಳ್ಳ ಕಮಲವು. "ಕುವುದ" ಬಿಳೀ ವರ್ಣವುಳ್ಳ ಕಮಲವು.
"ಆವ್ರಾತಕ" ಪುಂಡಿಯ ಗಿಡದ ಹೂವು. ಅಥವಾ ಅವುಟೇ ಹೂವು. ಇವು
ಗಳು ಪುರುಷ ಹೆಸರುಳ್ಳವುಗಳೆಂದು ಶಾಸ್ತ್ರಕಾರರು ಗ್ರಹೀತ ವುಾಡಿದ್ದಾರೆ.
ಸ್ವಪ್ನದಲ್ಲಿ ಇವುಗಳ ದರ್ಶನವಾಗುವದು. ಅಥವಾ ಇವುಗಳಲ್ಲಿ ಬಯಕೆಯಾಗು
ತ್ತದೆ. ಮುಖದಲ್ಲಿ ಸಂತೋಷದ ಕಳೆ ಬರುತ್ತದೆ. ಇಂಥ ಲಕ್ಷಣಯುಕ್ತ ಗರ್ಭ
ಣಿಯು ಪುತ್ರ ಸಂತತಿಯುನ್ನುಪಡೆಯುತ್ತಾಳೆಂದು ಹೇಳಬೇಕು. ಪೂರ್ವೋಕ್ತ
ಲಕ್ಷಣ ವಿರುದ್ಧವಿದ್ದಲ್ಲಿ ಕನ್ಯಾಗರ್ಭವೆಂದು ತಿಳಿಯಬೇಕು. ಗರ್ಭಿಣೀ

ಸ್ತ್ರೀಯಳ ಹೊಟ್ಟೆಯ ಎರಡೂ ಪಾರ್ಶ್ವಗಳು ಜೋತುಬಿದ್ದರೆ, ಮತ್ತು ಹೊಟ್ಟೆಯ ಮುಂಭಾಗವು ಪುಷ್ಪವಾಗಿ ಉಬ್ಬಿ ತುಂಬಿಕೊಂಡಿರದಿದ್ದರೆ, ಬಯಕೆ ಸ್ವಪ್ನ ಲಕ್ಷಣಗಳು ಸ್ತ್ರೀ ಪುರುಷರ ಲಕ್ಷಣಗಳೆರಡರಿಂದ ಯುಕ್ತವಾದರೆ, ನಪುಸಂಕ ಗರ್ಭವೆಂದು ತಿಳಿಯಬೇಕು. ಗರ್ಭಿಣಿಯ ಹೊಟ್ಟೆಯು ಚನ್ನಾಗಿ ತುಂಬಿ ಬೆಳೆದಿದ್ದು ಮಧ್ಯ ಭಾಗದಲ್ಲಿ ಕಾಲುವೆ ಅಥವಾ ದೋಣಿಯಂತೆ ತಗ್ಗಾಗಿದ್ದರೆ ಯುಗ್ಮ (ಅವಳಿ ಮಕ್ಕಳು) ಸಂತತಿಯಾಗುತ್ತದೆಂದು ತಿಳಿಯಬೇಕು.

ಗರ್ಭದಲ್ಲಿ ವರ್ಣ ಸಂಭವವು

ತತ್ರತೇಜೋಧಾತುಃವರ್ಣಾನಾಂಪ್ರಭವಃ, ಸಯದಾಗರ್ಭೋತ್ಪತ್ತೌ ಅಬ್ಧಾತುಪ್ರಾಯೋಭವತಿತದಾಗರ್ಭಂಗೌರಂಕರೋತಿ, ಪೃಥಿವೀಧಾತುಪ್ರಾಯಃಕೃಷ್ಣಂ;ಪೃಥಿವ್ಯಾಕಾಶಧಾತುಪ್ರಾಯಃ ಕೃಷ್ಣಶ್ಯಾವಂ, ತೋಯಾಕಾಶಧಾತು ಪ್ರಾಯೋಗೌರಶ್ಯಾವಂ॥ 'ಯಾದೃಗ್ವರ್ಣಮಾಹಾರಮುಪಸೇವತೇಗರ್ಭಿಣೀತಾದೃಗ್ವರ್ಣಪ್ರಸವಾಭವತಿ, ಇತ್ಯೇಕೇಭಾಷಂತೇ॥ ತತ್ರದೃಷ್ಟಿಭಾಗವಂಪ್ರತಿಪನ್ನಂತೇಜೋಜಾತ್ಯಂಧಂಕರೋತಿ, ತದೇವರಕ್ತಾನುಗತಂರಕ್ತಾಕ್ಷಂ, ಪಿತ್ತಾನುಗತಂ ಪಿತ್ತಾಕ್ಷಂ, ಶ್ಲೇಷ್ಮಾನುಗತಂಶುಕ್ಲಾಕ್ಷಂ, ವಾತಾನುಗತಂ ವಿಕೃತಾಕ್ಷವಿತಿ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋ ೩೫)

ಗರ್ಭಕ್ಕೆ ಬಣ್ಣವನ್ನುಂಟು ಮಾಡುವಂಥಾದ್ದು ತೇಜೋ ಧಾತುವಾಗಿರುತ್ತದೆ. ಗರ್ಭೋತ್ಪತ್ತಿಯಲ್ಲಿ ತೇಜೋ ಧಾತುವು, ಜಲ ಧಾತು ಅಧಿಕವುಳ್ಳದ್ದಾದರೆ ಗರ್ಭವನ್ನು ಬಿಳೀ ವರ್ಣವುಳ್ಳದ್ದನ್ನಾಗಿ ಮಾಡುತ್ತದೆ. ಪೃಥಿವೀ ಧಾತುವು ಅಧಿಕವಿದ್ದರೆ ಕಪ್ಪು ವರ್ಣವುಳ್ಳ, ಪೃಥಿವಿ ಆಕಾಶ ಧಾತು ಅಧಿಕವಾದರೆ ಕಪ್ಪು ನೀಲ ಮಿಶ್ರಿತ ವರ್ಣಯುಕ್ತವಾದ, ಜಲಧಾತು ಆಕಾಶ ಧಾತುತ್ವಾಧಿಕ್ಯವಿದ್ದರೆ ಶ್ವೇತ ನೀಲ ವರ್ಣವುಳ್ಳ ಗರ್ಭವನ್ನುತ್ಪನ್ನ ಮಾಡುತ್ತದೆ. ಗರ್ಭಿಣಿಯು ಯಾವ ವರ್ಣವುಳ್ಳ ಆಹಾರವನ್ನು ಸೇವಿಸುತ್ತಾಳೋ,

ಆ ವರ್ಣವುಳ್ಳ ಗರ್ಭವು ಉತ್ಪನ್ನವಾಗುತ್ತದೆಂದು ಕೆಲವರು ಹೇಳುತ್ತಾರೆ ಗರ್ಭದ ದೃಷ್ಟಿ ಭಾಗದಲ್ಲಿ ತೇಜೋ ಧಾತುವು ಇರದಿದ್ದರೆ ಕುರುಡ ಗರ್ಭವನ್ನುಂಟು ಮಾಡುತ್ತದೆ. ಅದೇ ತೇಜೋ ಧಾತುವು ರಕ್ತಧಾತುಯುಕ್ತವಾದರೆ ಕೆಂಪು ಕಣ್ಣುಳ್ಳ ಗರ್ಭವನ್ನೂ, ಪಿತ್ತ ಸಹಿತವಾದರೆ ಪಿಂಗಾಕ್ಷವುಳ್ಳ, ಶ್ಲೇಷ್ಮ ಯುಕ್ತವಾದರೆ ಶುಕ್ಲಾಕ್ಷವುಳ್ಳ, ವಾತಯುಕ್ತವಾದರೆ ವಿಕೃತವಾದ ಕಣ್ಣುಳ್ಳ ಗರ್ಭವನ್ನೂ ಉತ್ಪನ್ನ ಮಾಡುತ್ತದೆ

ಘೃತಪಿಂಡೋಯಥೈವಾಗ್ನಿಮಾಶ್ರಿತಃ ಪ್ರವಿಲೀಯತೆ॥ ವಿಸರ್ಪ
ತ್ಯಾರ್ತವಂ ನಾರ್ಯಾಸ್ತಥಾಪುಂಸಾಂ ಸಮಾಗಮೇ ॥
(ಸುಶ್ರುತ ॥ ಶಾರೀರ ॥ ಅ. ೨ ಶ್ಲೋ. ೩)

ಘಟ್ಟಿಯಾದ ತುಪ್ಪವು ಅಗ್ನಿಯ ಸಂಯೋಗದಿಂದ ಕರಗಿ ದ್ರವವಾಗುವಂತೆ, ಪುರುಷರ ಸಮಾಗಮವಾಗುತ್ತಿರಲು ಸ್ತ್ರೀಯ ಆರ್ತವವು ದ್ರವಿಸುತ್ತದೆ

ಯೋಷಿತೋಽಪಿಸ್ರವಂತ್ಯೇವಶುಕ್ರಂ ಪುಂಸಾಂ ಸಮಾಗಮೇ॥
ತನ್ನ ಗರ್ಭಸ್ಯ ಕಂಚಿತ್ತು ಕರೋತೀತೀತಿನಚಿಂತ್ಯತೆ ॥
(ವೃದ್ಧ ವಾಗ್ಭಟ ॥ ಅ. ಸಂ. ಶಾ. ಅ ೧)

ಪುರುಷರ ಸಮಾಗಮದಿಂದ ಸ್ತ್ರೀಯ ಶುಕ್ರವು ಕೂಡಾ ಸ್ರವಿಸುತ್ತದೆ ಅದು ಗರ್ಭಕ್ಕೆ ಕಾರಣವಾಗುವದಿಲ್ಲವೋ ಅಥವಾ ಆಗುತ್ತದೆಯೋ ಎನ್ನುವದು ವಿಚಾರ ಮಾಡಲ್ಪಡುವದಿಲ್ಲ.

ಬೀಜೇಽಂತರ್ವಾಯುನಾಭಿನ್ನೇ ದ್ವೌಬೀಜೌಕುಕ್ಷಿಮಾಗತೌ ॥
ಯಮಾವಿತ್ಯಭಿದೀಯೇತೇ ಧರ್ಮೇತರಪುರಸ್ಸರೌ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೊ ೩೭)

ಬೀಜ ಶುಕ್ರವು ಅಂತರ್ವಾಯುವಿನಿಂದ ವಿಬಾಗ ಹೊಂದಿ ಎರಡಾಗಿ, ಗರ್ಭಾಶಯದಲ್ಲಿ ಬಂದು ಬೆಳೆಯುತ್ತವೆ. ಈ ಎರಡು ಗರ್ಭಕ್ಕೆ "**ಯಮೌ**" "**ಯಮಲ**" ಎಂದು ಅನ್ನುತ್ತಾರೆ. ಕನ್ನಡದಲ್ಲಿ "**ಅವಳಿ ಜವಳಿ**" ಯೆಂದು

ಹೇಳುವ ವಾಡಿಕೆ ಇರುತ್ತದೆ. ಇಂಥ ಗರ್ಭವು ಅಧರ್ಮದಿಂದ ಹುಟ್ಟಿರುತ್ತದೆಂದು ಶ್ರುತಿ ಸ್ಮೃತಿಗಳ ಮತವು. ಆಯುರ್ವೇದದ ಮತದಂತೆ ಗರ್ಭಗ್ರಹಣ ಕಾಲದಲ್ಲಿಯ ವಿಕೃತಿ ಇಲ್ಲವೇ ವೈದ್ಯಕದಲ್ಲಿ ಹೇಳಿದ ಸಂಭೋಗಕ್ಕೆ ವಿರುದ್ಧವಾದ ನಡತೆ ಅಥವಾ ಅತಿ ಸಂಭೋಗ ಮೊದಲಾದವುಗಳಿಗೆ ಅಧರ್ಮವೆಂದು ಹೇಳುತ್ತಾರೆ. ಇದರಿಂದ ಸಂಭವಿಸುವದರಿಂದ ಅಧರ್ಮ ಗರ್ಭವೆಂದು ಹೇಳಬಹುದು

ವಿಶ್ರೀಭಾವೇಯದಾಪುಂಸಾಂ ರೇತಸ್ತು ಬಹುನಿರ್ಮಲಂ
ತದಾಪ್ರಸೂಯತೇ ನಾರೀ ಗರ್ಭಿಣೀದಾರಕ ದ್ವಯಂ ॥
ವಿತ್ರೀಭಾವೇ ಸ್ತ್ರೀಯೋಶ್ಚೈವ ಬಹುಶುಕ್ರಂ ಯದಾಭವೇತ್ ॥
ಕನ್ಯಾದ್ವಯಂ ತದಾನಾರೀಸೂಯತೇನಾತ್ರ ಸಂಶಯಃ ॥

(ಸುಶ್ರುತೇಽಧಿಕಃ ಪಾಠಃ)

ಸಂಯೋಗದಲ್ಲಿ ಪುರುಷನರೇತಸ್ಸು ಬಹಳವಾಗಿದ್ದರೆ, ಅಂಥ ಸನುಯದಲ್ಲಿ ಗರ್ಭಿಣಿಯಾದವಳು ಎರಡು ಗಂಡು ಶಿಶುಗಳನ್ನು ಹಡೆಯುತ್ತಾಳೆ. ಅದೇ ಸಂಯೋಗಕಾಲದಲ್ಲಿ ಸ್ತ್ರೀಶುಕ್ರವು ಬಹಳವಾದದ್ದಾರೆ ಅದರಿಂದ ಗರ್ಭವಾದಾಗ, ಎರಡು ಹೆಣ್ಣು ಶಿಶುಗಳನ್ನು ನಿಶ್ಚಯವಾಗಿಯೂ ಹಡೆಯುತ್ತಾಳೆ.

ಸ್ತ್ರೀಯುರಿಬ್ಬರ ಸಂಯೋಗದಿಂದ ಗರ್ಭೋತ್ಪತ್ತಿಯು
ಯದಾನಾರ್ಯಾವುಪೇಯಾತಾಂ ವೃಷಸ್ಯಂತೌಕಥಂಚನ ॥
ಮುಂಚತಃ ಶುಕ್ರಮನ್ಯೋನ್ಯಮನಸ್ಥಿಸ್ತತ್ರಜಾಯತೇ ॥

(ಸುಶ್ರುತ॥ ಶಾರೀರ॥ ಅ ೨ ಶ್ಲೋ ೪೭)

ಯಾವಾಗ ಇಬ್ಬರು ಸ್ತ್ರೀಯರು ಸಂಯೋಗವನ್ನು ಮಾಡುತ್ತಾರೋ, ಆಗ ಪರಸ್ಪರವಾಗಿ ಶುಕ್ರವನ್ನು ಬಿಡುತ್ತಾರೆ. ಒಂದು ವೇಳೆಇದರಿಂದ ಗರ್ಭ ಸಂಭವಿಸಿದರೆ ಮೃದ್ವಸ್ಥಿಯುಳ್ಳ ಅಥವಾ ಅಸ್ಥಿರವಾದ ಮಾಂಸ ಪಿಂಡದಂತಿರುವ ಗರ್ಭವುಂಟಾಗುತ್ತದೆ.

ಋತುಸ್ನಾತಾತುಯಾನಾರೀ ಸ್ವಪ್ನೇ ಮೈಥುನಮಾಹವೇತ್ ॥
ಆರ್ತವಂವಾಯುರಾದಾಯ ಕುಕ್ಷೌಗರ್ಭಂಕರೋತಿಹಿ॥೪೮॥

ಋತುಸ್ನಾನ ಮಾಡಿದ ಸ್ತ್ರೀಯು ಸ್ವಪ್ನದಲ್ಲಿ ಮೈಥುನ ಮಾಡಿದಂತೆ ಅನಿಸಿ ಆರ್ತವವು ಧ್ರವಿಸುತ್ತದೆ. ಧ್ರವಿಸಿದ ಆರ್ತವವನ್ನು ವಾಯುವು ಗರ್ಭಾಶಯಕ್ಕೆ ಒಯ್ದು ಗರ್ಭವನ್ನುಂಟು ಮಾಡುತ್ತದೆ.

ಮಾಸಿಮಾಸಿವಿವರ್ಧೇತಗರ್ಭಿಣ್ಯಾಗರ್ಭಲಕ್ಷಣಂ ॥
ಕಲಲಂಜಾಯತೆ ತಸ್ಯಾವರ್ಜಿತಂ ಪೈತೃಕೈರ್ಗುಣೈಃ ॥೪೯॥

ಸ್ವಪ್ನ ಮೈಥುನದಿಂದುತ್ಪನ್ನವಾದ ಗರ್ಭವುಪ್ರತಿತಿಂಗಳಲ್ಲಿಯೂ ಗರ್ಭಿಣಿಯ ಗರ್ಭ ಲಕ್ಷಣವನ್ನುಹೆಚ್ಚಿಸುತ್ತದೆ. ಗರ್ಭವು ಮಾತ್ರ ಪಿತೃಗುಣ ರಹಿತವಾಗಿ "ಕಲಲ" ದಂತೇ ಇರುತ್ತದೆ. ಕಲಲವೆಂದರೆ ಮೊಸರಿನಂತೆ ಇರುವ ಪದಾರ್ಥವು. ಸುಂಬಳದಂತೇ ಇರುತ್ತದೆಂದು ಟೀಕಾಕಾರರು ಹೇಳಿದ್ದಾರೆ

ಸರ್ಪ ಮೊದಲಾದ ವಿಕೃತ ಗರ್ಭಗಳು.

ಸರ್ಪವೃಶ್ಚಿಕಕೂಷ್ಮಾಂಡವಿಕೃತಾಕೃತಯಶ್ಚಯೇ ॥
ಗರ್ಭಾಸ್ತ್ವೇತೇಸ್ತ್ರೀಯಾಶ್ಚೈವಜ್ಞೇಯೋಃಸಾಪಕೃತೋಭೃಶಂ॥

(ಸುಶ್ರುತ ಶಾರೀರ॥ ಅ ೨ ಶ್ಲೋ ೫೦)

ಅತ್ಯಂತ ತೀವ್ರ ಪಾಪ ಮಾಡಿದ ಸ್ತ್ರೀಗೆ ಸರ್ಪ, ಚೇಳು, ಕುಂಬಳಕಾಯಂತಿರುವ ಗರ್ಭ, ವಿಕೃತಾಕೃತಿಯುಳ್ಳ, ರಾಕ್ಷಸ ಮೊದಲಾದ ಗರ್ಭಗಳು ಉತ್ಪನ್ನವಾಗುತ್ತವೆ. "ಸ್ತ್ರಿಯಾಶ್ಚ" ಎಂದು ಹೇಳಿದ್ದರಿಂದ "ಚ" ಸಮುದಾಯವಾಚಕವೆಂದು ಗ್ರಹಿಸಿ, ಪುರುಷನ ಅತ್ಯಂತ ತೀವ್ರ ಪಾಪದಿಂದಲೂ ಸರ್ಪಾದಿ ಗರ್ಭವುಂಟಾಗುತ್ತವೆಂದು ಹೇಳುತ್ತಾರೆ. ಮನುಷ್ಯರಲ್ಲಿ ಅನ್ಯ ಯೋನಿ ಗರ್ಭ ಸಂಭವ ಹೇಗಾಗುತ್ತದೆಂಬ ಆಕ್ಷೇಪ ಬರುತ್ತದೆ. ಪಾಪ ಕರ್ಮದ ವೈಚಿತ್ರ್ಯದಿಂದಲೇ ಹೀಗಾಗುತ್ತದೆಂದು ಆಚಾರ್ಯರು ಹೇಳುತ್ತಾರೆ.

ಮಾತಾಪಿತ್ರೋಸ್ತು ನಾಸ್ತಿಕ್ಯಾದಶುಭೈರ್ಜಪುರಾಕೃತೈಃ॥ ವಾತಾದೀನಾಂ ಪ್ರಕೋಪೇಣ ಗರ್ಭೋವೈಕೃತಮಾಪ್ನುಯಾತ್ ॥

(ಸುಶ್ರುತ॥ ಶಾರೀರ॥ ಅ ೩ ಶ್ಲೋ ೫೨)

ತಾಯಿ ತಂದೆಗಳ ನಾಸ್ತಿಕತೆಯಿಂದಲೂ, ಗರ್ಭದಲ್ಲಿಯ ಜೀವದ ಜನ್ಮಾಂತರ ಪಾಪ ಕರ್ಮದಿಂದಲೂ, ಅಥವಾ ಈಗಿನ ಜನ್ಮದಲ್ಲಿಯ ಪಾಪಗಳಿಂದಲೂ, ಗರ್ಭವು ವಿಕೃತಿಯನ್ನು ಹೊಂದುತ್ತದೆ. ಮತ್ತು ತ್ರೀವ್ರವಾದ ವಾತಾದಿ ದೋಷ ಪ್ರಕೋಪಗಳಿಂದಲೂ ಗರ್ಭವಿಕೃತಿಯುಂಟಾಗುತ್ತದೆ.

ಶರೀರ ಪರಮಾಣುಗಳು

ಗರ್ಭೋತ್ಪತ್ತಿ ಕ್ರಮ ವಿಚಾರಣಾವಿಷಯೇ, ಪಂಚಭೂತಾತ್ಮಕ ದೇಹಾಣೂನಾಂ ಕರ್ಮ ಚ ॥

ಪಂಚಭೂತಾತ್ಮಕಗಳಲ್ಲಿ ಪೃಥಿವ್ಯಾದಿ (ಆಕಾಶವನ್ನು ಬಿಟ್ಟು) ಗಳನ್ನು ಅಣುಗಳ ಕಾರ್ಯ ರೂಪವೆಂದು ಹೇಳಿದ್ದಾರೆ. ಪಂಚಭೂತ ವಿಕಾರ (ರೂಪಾಂತರ ಹೊಂದಿದ ಪಂಚಭೂತಗಳ ಸ್ವರೂಪ) ವಾದ ದೇಹದಲ್ಲಿಯ ಅಣುಗಳನ್ನು ಹೇಳುತ್ತಾರೆ. **ಪೃಥಿವಿ, ಜಲ, ತೇಜಸ್ಸು ವಾಯು, ಆಕಾಶ**ಗಳು ದೇಹದಲ್ಲಿ ಯಾವಯಾವ ವಿಭಾಗ ಸ್ಥಿತಿ ಹೊಂದಿದವುಗಳೆನ್ನುವದನ್ನು ಹಿಂದೆ ವಿವರಿಸಿರುತ್ತದೆ. ದೇಹದಲ್ಲಿ ಪಂಚಭೂತಗಳೆಂದರೆ ಮಣ್ಣು ಮೊದಲಾದವುಗಳಲ್ಲ. ಪೃಥಿವ್ಯಾದಿಗಳ ಗುಣವುಳ್ಳ ರೂಪಾಂತರ ಹೊಂದಿದ ಸ್ಥಿತಿಯುಳ್ಳವುಗಳು. ಪೃಥಿವ್ಯಾದಿಗಳ ಕಾರ್ಯ ರೂಪಕ್ಕೆ(ಸ್ಥೂಲಕ್ಕೆ) ಅಣುಗಳು ಹೀಗೆ ಕಾರಣವಾಗಿರುತ್ತವೆಯೋ, ಅದರಂತೆ ಕಾರ್ಯರೂಪವಾದ ದೇಹಕ್ಕೂ ಸಹ ಅಣುಗಳೇ ಕಾರಣವಾಗುತ್ತವೆ. ಶರೀರ ಶಾಸ್ತ್ರವಾದ್ದರಿಂದ "**ದೇಹದಲ್ಲಿಯ ಅಣು ಸ್ವರೂಪಗಳನ್ನು**" ಅಲ್ಲಲ್ಲಿ ಹೇಳಿದ್ದಾರೆ. ಅವುಗಳನ್ನು ಹಿಂದೆ (೪೨-೪೩ ನೇ ಪುಟದಲ್ಲಿ) ವಿವರಿಸಿ ಹೇಳಿರುವದರಿಂದ ಈಗ ನಿದರ್ಶನಕ್ಕಾಗಿ ಅವುಗಳ ಸಂಗ್ರಹವನ್ನು ಮಾತ್ರ ಸೂಚಿಸುತ್ತೇನೆ.

"ಸಶಬ್ದಾರ್ಚಿರ್ಜಲಸಂತಾನವದಣುನಾವಿಶೇಷೇಣ"
(॥ಶಾ. ವಿಜ್ಞಾನ॥ ಪು. ೬೩)

"ಭೂತಾನಾಂ ಸಾನ್ನಿಧ್ಯಂ ಆಸ್ಯಣುನಾವಿಶೇಷೇಣ"
(ಶಾ. ವಿ. ೯೭)

ಆಯುರ್ವೇದದ ಶಾಸ್ತ್ರದಲ್ಲಿ ದೇಹದಲ್ಲಿಯ ಪಂಚಭೂತಾತ್ಮಕ ಅಣು ಸ್ವರೂಪವನ್ನು ಹೇಳಿರುತ್ತಾರೆ. ಅನೇಕ ಅಸಂಖ್ಯಾತ ಅಣುಗಳ ಸಂಯೋಗ ದಿಂದ ದೇಹವು ಉತ್ಪನ್ನವಾಗಿರುವದೆಂದೂ, ಅಸಂಖ್ಯ ಅಣುಸಂಯೋಗವುಳ್ಳ ಅವಯವಗಳಿಂದ ದೇಹವು ಯುಕ್ತವಾಗಿರುವದೆಂದೂ "ಚರಕಾರ್ಯ"ರ ಮತ ವಾಗಿರುತ್ತದೆ ತಾರ್ಕಿಕರ ಈ ಸಿದ್ಧಾಂತವನ್ನು ಯೋಗ್ಯವೆಂದು ಗ್ರಹಿಸಿ ಸ್ವತಃ ಚರಕ ಸಂಹಿತೆಯಲ್ಲಿ ವಿವರಿಸಿದ್ದಾರೆ.

ಶರೀರಾವಯವೇವಾಸ್ತು ಪರಮಾಣುಭೇದೇನಾಽಪರಿಸಂಖ್ಯೇ
ಯಾಭವಂತ್ಯತಿ ಬಹುತ್ವಾದತಿಸೌಕ್ಷ್ಮ್ಯಾದತೀಂದ್ರಿಯತ್ವಾಚ್ಚ ॥
ತೇಷಾಂ ಸಂಯೋಗವಿಭಾಗೇಪರಮಾಣೂನಾಂ ಕಾರಣಂನಾ
ಯುಃಕರ್ಮಸ್ವಭಾವಶ್ಚ ॥ (ಚರಕ॥ ಶಾರೀರ॥ ಅ ೭ ಸೂ ೧೭)

ಶರೀರದ ಅವಯವಗಳಾದ ಪರಮಾಣುಗಳು ಭಿನ್ನವಾಗಿ ಭೇದಯುಕ್ತ ವಾದವುಗಳಿರುವದರಿಂದ ಅಸಂಖ್ಯಾತವಾಗಿರುತ್ತವೆ. ಅವು ಅತಿ ಬಹಳವೂ, ಅತಿ ಸೂಕ್ಷ್ಮವೂ, ಇಂದ್ರಿಯ ಗೋಚರವಲ್ಲದವುಗಳೂ ಇರುತ್ತವೆ. ಇಂಥ ಪರಮಾಣುಗಳ ಸಂಯೋಗ ವಿಭಾಗಗಳನ್ನು ಮಾಡಲಿಕ್ಕೆ ಕರ್ಮ ಸ್ವಭಾವ ಉಳ್ಳವಾಯುವು ಕಾರಣವಾಗುತ್ತದೆ ವಾಯುವು ಪರಮಾಣುಗಳ ಸಂಯೋಗ ವಿಯೋಗಗಳನ್ನು ಮಾಡುತ್ತದೆಂಬರ್ಥವು "ಕರ್ಮ ಸ್ವಭಾವವುಳ್ಳ" ದೇಹ ದಲ್ಲಿಯ ಪರಮಾಣುಗಳ ಘಟವಿಘಟನಾತ್ಮಕ ಕಾರ್ಯವನ್ನು ಮಾಡುವ ವಾಯುವನ್ನೇ ಇಲ್ಲಿ ಗ್ರಹಿಸಿದ್ದಾರೆ. ಕೇವಲ ವಾಯುವನ್ನು ಗ್ರಹಿಸಿರುವದಿಲ್ಲ.

ಯದಾಸಂಯೋಜಕಃ ಸ್ವಭಾವೇನ ಕರ್ಮಣಾಪರಿಗೃಹೀತೋ
ವಾಯುರ್ಭವತಿ ತದಾಪರಮಾಣೂನಾಂ ಸಂಯೋಗಂಕುರ್ವ

ನ್ ಶರೀರಮಾರಭತೇ॥ ಯದಾತುವಿಯೋಜನಸ್ವಭಾವೇನಕರ್ಮ ಣಾವಾಯುಃ ಪರಿಗೃಹೀತೋಭವತಿ ತದಾವಿಭಾಗಂ ಪರಮಾ ಣೂನಾಂ ವಿನಾಶರೂಪಂ ಜನಯತಿ ॥ (ಚರಕ ಟೀಕಾ)

ಸಂಯೋಜಕ ಧರ್ಮವುಳ್ಳ ವಾಯುವು ಕರ್ಮದಿಂದ ಯುಕ್ತವಾಗಿ (ಕರ್ಮಕಾರಿಯಾಗಿ) ಪರಮಾಣುಗಳ ಸಂಯೋಗವನ್ನು ಮಾಡುತ್ತ ಶರೀರ ವನ್ನು ಉಂಟು ಮಾಡುತ್ತದೆ. ವಿಘಟನಾತ್ಮಕ ಧರ್ಮವುಳ್ಳ ವಾಯುವು ಕರ್ಮ ಕಾರಿಯಾಗಿ ಪರಮಾಣುಗಳ ಸ್ಥೂಲರೂಪದ ವಿಭಾಗವನ್ನು ಮಾಡುತ್ತ ವಿನಾಶವನ್ನುಂಟು ಮಾಡುತ್ತದೆ ಪರಮಾಣುಗಳ ಸಂಯೋಗ ರೂಪದಿಂದ ಉತ್ಪನ್ನವಾದ ಕಾರ್ಯವು ಸಂಯೋಗವಿರುವ ವರೆಗೆ ಇರುತ್ತದೆ. ಸಂಯೋಗ ವಿರುದ್ಧವಾದ ವಿಘಟನೆಯುಂಟಾಗಲು ಸ್ಥೂಲರೂಪ ಕಾರ್ಯವು ನಾಶ ಹೊಂದುತ್ತದೆ. ಆದ್ದರಿಂದ ವಾಯುವು ಪರಮಾಣುಗಳ ಘಟವಿಘಟನಾತ್ಮಕ ಕರ್ಮಗಳನ್ನು ಸಂಯೋಗ ವಿಯೋಗ ಧರ್ಮವುಳ್ಳದ್ದಾಗಿ ಮಾಡುತ್ತದೆಂದು ವಿವರಿಸಿದ್ದಾರೆ. ಒಂದೇವಾಯುವು ಸಂಯೋಗ ಧರ್ಮದಿಂದ ಉತ್ಪತ್ತಿಯನ್ನೂ, ವಿಯೋಗ ಧರ್ಮದಿಂದ ನಾಶವನ್ನೂ, ಹೇಗೆ ಮಾಡುತ್ತದೆಂಬ ಆಕ್ಷೇಪ ಬರು ತ್ತದೆ. ಆದ್ದರಿಂದ ವಾಯುವು ಕರ್ಮ ಸ್ವಭಾವಯುಕ್ತವಾಗಿ ಸಂಯೋಗ ವಿಭಾಗವನ್ನನುಸರಿಸುತ್ತದೆಂದು ನಿರ್ಣಯಿಸಿ, ಕೇವಲ ವಾಯುವಿನ ಕಾರ್ಯ ವಲ್ಲದೆ; ಕರ್ಮ ಸ್ವಭಾವ ಪರಿಗೃಹಿತ ವಾಯುವಿನ ಕರ್ತವ್ಯವೆಂದು ಸಿದ್ಧಾಂತ ಪಡಿಸಿರುತ್ತಾರೆ. ವಾಯುವು ಸದಾ ಇರುತ್ತಿದ್ದು ಪರಮಾಣುಗಳೂ ಸಹ ಇದ್ದೇಇರುತ್ತವೆ. ಆದ್ದರಿಂದ ಘಟವಿಘಟನಾತ್ಮಕ ಕಾರ್ಯಗಳು ಸದಾ ಆಗುತ್ತಾ ಆದರಂತೆ ನಾಶವೂಸಹನಡೆಯುತ್ತಿರಬೇಕೆಂಬ ಆಕ್ಷೇಪಬರುತ್ತದೆ ಪರಮಾಣು ಗಳ ಸಂಯೋಗವಿಯೋಗಗಳು ವಾಯುಕೃತವಾಗಿದ್ದರೂ ವಾಯುವು ಆತ್ಮನ ಇಚ್ಛಾನುವರ್ತಿಯಾಗಿರುತ್ತದೆ. ತರ್ಕಶಾಸ್ತ್ರದಲ್ಲಿ ಪರಮಾಣುಗಳ ಸಂಯೋಗಾ ದಿಗಳಿಗೆ ಈಶ್ವರ ಇಚ್ಛೆಯೇ ಕಾರಣವೆಂದು ಹೇಳಿದ್ದಾರೆ. ಈಶ್ವರೇಚ್ಛೆಯು ಉತ್ಪತ್ತಿ ಮಾಡಬೇಕೆಂದು ಪ್ರವೃತ್ತಿಹೊಂದಿದಕೂಡಲೇ, ಪರಮಾಣುಗಳಲ್ಲಿ ಸಂಯೋಗಾರಂಭವಾಗಿಭೂತಾದಿಗಳುಉತ್ಪನ್ನವಾಗುತ್ತವೆ. ಇದರಂತೆಇಚ್ಛಾ ನಿವೃತ್ತಿಯಾದಾಗ ವಿಭಾಗಹೊಂದಿ ಪರಮಾಣುಗಳ ಸ್ಥಿತಿಹೊಂದುತ್ತವೆ.

"ಆಯುರ್ವೇದದಲ್ಲಿ" ಶರೀರಾದ್ಯುತ್ಪತ್ತಿಯನ್ನು ಕುರಿತು ವಾಯು ಕರ್ಮಕಾರಿ ಇರುವದರಿಂದ ಪಂಚಮಹಾಭೂತ ವಿಕಾರವುಳ್ಳ, ಶರೀರಾರಂಭ ಕಾಣುಗಳು ಸಂಯೋಗವಿಯೋಗ ಹೊಂದುತ್ತವೆಂದು ನಿರ್ದೇಶಿಸಿದ್ದಾರೆ "ಕರ್ಮ ಸ್ವಭಾವ" ಪರಿಗೃಹೀತವೆಂದು ಹೇಳುವದರಿಂದ ಆತ್ಮಾಧೀನ ವಾಗಿಯೇ ಉತ್ಪತ್ತಿನಾಶ ಸಂಭವವೆಂದು ಸಿದ್ಧವಾಗುತ್ತದೆ. ಅಥವಾ, ಕರ್ಮ ಸ್ವಭಾವ ರಹಿತವಾದವುಗಳ ಉತ್ಪತ್ತಿಆಗದೆ ಸ್ವಸ್ಥಿತಿಯಲ್ಲಿರುತ್ತವೆ. ಕರ್ಮಾದಿಗಳು (ಉಪಾಧಿ) ಇದ್ದರೆ ದೇಹಾದಿ ಉತ್ಪತ್ತಿಯಾಗುತ್ತದೆಂದು ಇದರಿಂದ ಹೇಳಿದಂತಾಗುತ್ತದೆ. ಹೀಗೆ ಪಂಚಭೂತ ವಿಕಾರವಾದ ದೇಹದ ಉತ್ಪತ್ತಿ ನಾಶಗಳಲ್ಲಿಯು, ಪರಮಾಣುಗಳ ಸಂಯೋಗ ವಿಭಾಗಗಳನ್ನು ಪ್ರತಿಪಾದಿಸಿದ್ದಾರೆ. ದೇಹವೆಲ್ಲದರ ಉತ್ಪತ್ತ್ಯಾದಿಗಳನಿಮಿತ್ತ ಸ್ವರೂಪವನ್ನವಲೋಕಿಸಿ ಅದಕ್ಕೆ ಕಾರಣನೊಬ್ಬನಿರುವನೆಂದು ಶಾಸ್ತ್ರಕಾರರು ನಿರ್ಣಯಿಸಿದ್ದಾರೆ.

"ಪರಮಾಣೂನಾಂ ಘಟವಿಘಟನಾತ್ಮಕಂ ಕರ್ಮ ಯದ್ಯೇವಂ ಚಲತಿಕಸ್ಮಾತ್"

ಪರಮಾಣುಗಳ ನಿಯಮಿತ ಕಾರ್ಯವು ನಡೆಯುತ್ತಿರುತ್ತದೆ. ಇದಕ್ಕೆ ಕಾರಣವೇನು? ಅಥವಾ ಇದಕ್ಕೆಕಾರಣಯಾರು? ಎಂದು ಉದ್ಘೋಷಿಸಿದ್ದಾರೆ.

೧೬. ಗರ್ಭಾಶಯದಲ್ಲಿ ಗರ್ಭದ ಇರುವಿಕೆ

ಗರ್ಭಶಯ್ಯಾಯಾಂ ಗರ್ಭಸ್ಥಿತಿ ಸ್ವರೂಪ ವರ್ಣನಂ ॥

ಗರ್ಭಾಶಯದಲ್ಲಿ ಗರ್ಭವು ಹೇಗಿರುತ್ತದೆಂದು ಇರುವಿಕೆ ಸ್ವರೂಪಗಳನ್ನು ವಿವರಿಸುತ್ತಾರೆ. ಈ ಗರ್ಭ ಸ್ಥಿತ್ಯಾದಿಗಳಿಂದ ಪ್ರಸವಕಾಲದಲ್ಲಿಯ ಗತಿ ಸ್ವರೂಪ ತಿಳಿಯುವದರಿಂದ ಇದರ ವಿವರಣೆಯು ಅವಶ್ಯವಾದದ್ದಾಗಿರುತ್ತದೆ.

ಗರ್ಭಸ್ತ್ವಖಲು ಮಾತುಃ ಪೃಷ್ಠಾಭಿಮುಖ ಊರ್ಧ್ವಶಿರಾಃ ಸಂಕುಚ್ಯಾಂಗಾನ್ಯಾಸ್ತೇಽಂತಃ ಕುಕ್ಷೌ ॥
(ಚರಕ ॥ ಶಾರೀರ ॥ ಅ. ೬ ಸೂ. ೨೨)

ಗರ್ಭಾಶಯದಲ್ಲಿ ಗರ್ಭವು ತಾಯಿಯ ಪೃಷ್ಠ ಕಡೆಗೆ ಮುಖವುಳ್ಳ ದ್ದಾಗಿರುತ್ತದೆ ತಲೆಯನ್ನು ಮೇಲ್ಗಡೆಮಾಡಿಕೊಂಡು ಅಂಗಗಳಿಲ್ಲವನ್ನೂ ವುದುಡಿಸಿ ಗುಂಪಾದದ್ದಾಗಿರುತ್ತದೆ

ಸುಶ್ರುತ ಮತದಂತೆ ಗರ್ಭಸ್ಥಿತಿಯು

ಆಭುಗ್ನೋಭಿಮುಖಃ ಶೇತೇಗರ್ಭೋಗರ್ಭಾಶಯೇಸ್ತ್ರಿಯಾಃ॥
ಸಯೋನಿಂ ಶಿರಸಾಯಾತಿಸ್ವಭಾವಾತ್ ಪ್ರಸವಂಪ್ರತಿ ॥

(ಸುಶ್ರುತ॥ ಶಾರೀರ॥ ಅ ೫ ಶ್ಲೋ ೪೫)

ಸ್ತ್ರೀಗರ್ಭಾಶಯದಲ್ಲಿ ಗರ್ಭವು ನಿರ್ಗಮನ ದ್ವಾರಕ್ಕೆ ಅಭಿಮುಖವಾಗಿ ಅಂಗಾಂಗಗಳನ್ನೆಲ್ಲ ಸಂಕೋಚ (ಆಭುಗ್ನ) ಮಾಡಿಕೊಂಡು ಇರುತ್ತದೆ ಸ್ವಾಭಾವಿಕವಾದ (ಯೋಗ್ಯ) ಪ್ರಸವ ಸಮಯದಲ್ಲಿ ತಲೆಯನ್ನು ಮುಂದೆ ಮಾಡಿಕೊಂಡು ಯೋನಿ ಮಾರ್ಗವನ್ನು ಹೊಂದುತ್ತದೆ.

ಗರ್ಭ ನಿರ್ಗಮನ (ಪ್ರಸೂತಿ)

ಸಚೋಪಸ್ಥಿತಕಾಲೇಜನ್ಮನಿಪ್ರಸೂತಿ ಮಾರುತಯೋಗಾತ್ ಪರಿವೃತ್ಯಾsನಾಕ್ ಶಿರಾನಿಷ್ಕ್ರಮತ್ಯಪತ್ಯಪಥೇನ, ಏಷಾಪ್ರಕೃತಿಃ, ವಿಕೃತಿಃ ಪುನರತೋsನ್ಯಥಾ॥ ಪರಂತ್ವತಃ ಸ್ವತಂತ್ರವೃತ್ತಿರ್ಭವತಿ ॥ (ಚರಕ॥ ಶಾರೀರ॥ ಅ ೬ ಸೂ. ೨೪)

ಪ್ರಸವ (ಪ್ರಸೂತಿ) ಕಾಲದಲ್ಲಿ, ಗರ್ಭವು ಪ್ರಸೂತಿ ವಾಯುವಿನ ಸಹಯೋಗದಿಂದ ಹೊರಳಿ ಕೆಳಗಡೆಗೆ ತಲೆಯಾಗಿ ಯೋನಿ ಮಾರ್ಗದಿಂದ ಹೊರಗೆ ಬರುತ್ತದೆ. ಯೋನಿ ದ್ವಾರದಿಂದ ತಲೆ ಕೆಳಗಾಗಿ ಹೊರಗೆ ಬರುತ್ತದೆಂಬರ್ಥವು. ತಲೆಯು ಮೊದಲು ಬರುವದೇ ಪ್ರಸವ ಸ್ಥಿತಿಯಲ್ಲಿ ಸ್ವಾಭಾವಿಕವಾದದ್ದೆಂದು ತಿಳಿಯಬೇಕು. ತಲೆಯ ಹೊರತಾಗಿ ಒಂದು ಕಾಲು ಒಂದು ಕೈ ಮುಂತಾದವು ಮೊದಲಾಗಿ ಬಂದರೆ ಸ್ವಾಭಾವಿಕವಲ್ಲದ್ದು (ವಿಕೃತಿ) ಯೆಂದು ತಿಳಿಯಬೇಕು. ಕಾಲುಗಳೆರಡೂ ಮುಂದಾಗಿ ಪ್ರಸೂತಿಯಾಗು

ವಾಗ ಒಮ್ಮೊಮ್ಮೆ ಕುತ್ತಿಗೆಯ ವರೆಗೆ ಹೊರಬಂದ ನಂತರ,ತಲೆಯು ದೊಡ್ಡ ದಿರುವದರಿಂದ ತಡೆದು ನಿಲ್ಲುತ್ತದೆ. ಕುತ್ತಿಗೆಯು ಸಣ್ಣದಿರುವದರಿಂದ ಯೋನಿ ದ್ವಾರವು ಸಂಕುಚಿತವಾಗುವದು. ಆದ್ದರಿಂದ ತಲೆಯು ಹೊರಗೆ ಬರದೆ ದ್ವಾರವು ಸಣ್ಣದಿರುವದರಿಂದ ಅಲ್ಲಿಯೇ ತಡೆಯುವ ಸಂಭವವೂ ಇರುತ್ತದೆ. ಕಾಲು ಮುಂದಾಗಿ ಬರುವದು ತಲೆ ಮೊದಲು ಬಂದಷ್ಟು ಸುಲಭವಲ್ಲದ್ದರಿಂದಲೂ, ಒಮ್ಮೊಮ್ಮೆ ಹಿಂದೆ ಹೇಳಿದಂತೆ ಕುತ್ತಿಗೆಯ ಭಾಗದಲ್ಲಿ ಯೋನಿ ಮಾರ್ಗದ ಆಕುಂಚನದಿಂದ ತಲೆಯು ಸಿಕ್ಕಿಕೊಳ್ಳುವದರಿಂದಲೂ, ವಿಕೃತಿಯೆಂದು ಹೇಳಿದ್ದಾರೆ. ತಲೆ ಮುಂದಾಗಿ ಬರುವದು ಸ್ವಾಭಾವಿಕವೂ ಸುಖ ಪ್ರಸವವೂ ಆಗಿರುತ್ತದೆ. ಹೀಗಿರುವದರಿಂದಸ್ವಾಭಾವಿಕ ಪ್ರಸವ ಸ್ಥಿತಿಯ ಹೊರತಾಗಿರುವದೆಲ್ಲವೂ ವಿಕೃತಿಯೆಂದು ಹೇಳಿರುತ್ತಾರೆ ಅವುಗಳಲ್ಲಿ ಮುಂದೆ ಮೂಢ ಗರ್ಭಾದಿಗಳೆಂದು ನಿರ್ದೇಶಿಸುವಂಥವುಗಳು ಕಷ್ಟಸ್ಪದವೂ ಮತ್ತು ಅಸಾಧ್ಯವೂ ಇರುತ್ತವೆ ಮೂಢ ಗರ್ಭದಲ್ಲಿ ಕಾಲಹರಣ ಮಾಡುವದು ಮಾರಕವಾಗಿರುತ್ತದೆ ಆಗಿಂದಾಗ ಉಪಾಯವನ್ನು ಕೈಕೊಂಡರೆ ಮಾತ್ರ ಗರ್ಭಿಣಿಯು ಬದುಕುವ ಸಂಭವವಿರುತ್ತದೆ ಪ್ರಸವ ಕಾಲದಲ್ಲಿ ಮೊದಲು ಸ್ವಾಭಾವಿಕ ಪ್ರಸವವೋ? ವಿಕೃತಿಯೋ? ಎನ್ನುವದನ್ನು ವಿಚಾರಿಸುವದು ಆದ್ಯ ಕರ್ತವ್ಯವಾಗಿರುತ್ತದೆ. ಸ್ವಾಭಾವಿಕ ಪ್ರಸವವಲ್ಲದಿದ್ದರೆ ವಿಶೇಷ ಲಕ್ಷ ಕೊಡಬೇಕು. ಒಂದು ಕಾಲು ಅಥವಾ ಕೈ ಬರುವ **"ಮೂಢಗರ್ಭ"** ಪ್ರಸವ ವಿಷಯದಲ್ಲಿ **ತತ್‌ಕ್ಷಣ** ಚಿಕಿತ್ಸಾ ಕ್ರಮ ನಡೆದರೆ ಮಾತ್ರ ಜೀವಿಸುವ ಸಂಭವವಿರುತ್ತದೆ. ಆದ್ದರಿಂದ ಸದ್ಯ ಪ್ರತೀಕಾರ ಸಮಯದಲ್ಲಿ ಕಾಲವಿಲಂಬವು ಘಾತವಾದದ್ದೆಂದು ಶಾಸ್ತ್ರಕಾರರು ಎಚ್ಚರಿಸಿ ಬೋಧಿಸಿದ್ದಾರೆ. ಪ್ರಸವ ವಿಷಯದಲ್ಲಿ ಪ್ರತಿಯೊಂದು ಕುಟುಂಬದಲ್ಲಿಯೂ ಸ್ತ್ರೀಯರಿಗೆ ವಿಶೇಷ ಜ್ಞಾನ ವಿರಲಿಕ್ಕೇಬೇಕು. ಜ್ಞಾನವಿದ್ದರೆ ಪ್ರಸವ ಸ್ಥಿತಿಯಲ್ಲಿ ಸಾಮಾನ್ಯವಾಗಿ ನಿವಾರಿಸಬಹುದಾದ ಕಷ್ಟ ಸ್ಥಿತಿಯನ್ನು ಹೋಗಲಾಡಿಸಬಹುದು. ಸಾಮಾನ್ಯ ನಿವಾರಿಸಲು ಬರುವ ಸ್ಥಿತಿಯೂ ಸಹ ಅಜ್ಞತೆಯಿಂದ ಉಪೇಕ್ಷಿಸಿ ಅಥವಾ ಹೆದರಿ ಸುಮ್ಮನಿದ್ದರೆ ಅದೇ ಪ್ರಾಣಹಾರಕವಾಗಿ ಸಂಭವಿಸುತ್ತದೆ. ಪ್ರಸವ ವಿಷಯದಲ್ಲಿ ಚೆನ್ನಾಗಿ ಅರಿತ ಸ್ತ್ರೀಯರಿದ್ದರೆ ಇಂಥ ಪ್ರಸಂಗಗಳಲ್ಲಿ ತತ್ಕಾಲ

ಪ್ರತೀಕಾರ ದೊರೆಯುತ್ತದೆಯಾದ್ದರಿಂದ ಅದರಿಂದೊದಗುವ ಕಠಿಣ ಪರಿಸ್ಥಿತಿ ಬರುವ ಆಸ್ಪದವೇ ಇರುವದಿಲ್ಲ. ತೀವ್ರ ಪರಿಸ್ಥಿತಿಯಲ್ಲಿ ಶಸ್ತ್ರಚಿಕಿತ್ಸಕರೇ ನಿರ್ವಹಿಸುವ ಕರ್ತವ್ಯವಾಗಿದೆ. ಅನ್ಯಥಾ ಪ್ರಯೋಜನವಿಲ್ಲ. ಅಷ್ಟೇ ಅಲ್ಲ ಸ್ಥಿತಿಯು ಕೈಮೀರಿದ ಮೇಲೆ "**ಸದ್ಯ ಪ್ರಾಣಹರಣವಿರುವದರಿಂದ**" ಅಸಾಧ್ಯವೇ ಇರುತ್ತದೆ. ಆದ್ದರಿಂದ ದುರ್ಬಲ, ರೋಗಪೀಡಿತ, ಅಶಕ್ತ ಗರ್ಭಿಣಿಯರಿದ್ದಲ್ಲಿ ಮೊದಲೇ ಚಿಕಿತ್ಸಕರ ಸಹಾಯ ವ್ಯವಸ್ಥೆಗಳನ್ನು ನಿರ್ವಹಿಸಿಟ್ಟರ ಬೇಕಾದ್ದು, ಸಮಯೋಚಿತವಾಗಿರುತ್ತದೆ. ತಾಯಿಯ ಹೊಟ್ಟೆಯಲ್ಲಿರುವ ಪರ್ಯಂತವಾಗಿ ಗರ್ಭವು ತಾಯಿಯು ಸೇವಿಸಿದ ಆಹಾರ ರಸದಿಂದಲೇ ಅಭಿವೃದ್ಧಿಯನ್ನು ಹೊಂದುತ್ತದೆ. ತಾಯಿಯನ್ನೇ ಅನುಸರಿಸಿ ಅಭಿವೃದ್ಧಿಯನ್ನೂ ಜೀವನವನ್ನೂ ನಿರ್ವಹಿಸುತ್ತಿರುವದರಿಂದ ಪರಾಧೀನ ವೃತ್ತಿಯುಳ್ಳದ್ದೆಂದು ಹೇಳಬಹುದಾಗಿದೆ. ಪ್ರಸವದ ನಂತರ "**ಶಿಶು**" ಸ್ವತಃ ತನ್ನ ಬಾಯಿಯಿಂದಲೇ ಆಹಾರವನ್ನು ಗ್ರಹಿಸಿ ಜೀರ್ಣಿಸಿ ಪೋಷಣೆಯನ್ನು ಹೊಂದುವದರಿಂದ, ಸ್ವತಂತ್ರ ವೃತ್ತಿಯುಳ್ಳದ್ದೆಂದು ಹೇಳಿರುವರು. ಪ್ರಸವದ ನಂತರವಾದರೂ ತಾಯಿಯ ಹಾಲಿನಿಂದಲೇ "**ಶಿಶು**"ವಿನ ಜೀವರಕ್ಷಣೆಯು ಪ್ರಶಸ್ತವಾದ್ದರಿಂದ ತಾಯಿಗೆ ಯೋಗ್ಯವಾದ ಸ್ತನ್ಯಕರ ಆಹಾರವನ್ನು ಯೋಜಿಸಬೇಕು. ತಾಯಿಯ ಹಾಲು ದೂಷಿತವಾಗಿದ್ದರೆ ಅಥವಾ ಪ್ರಸೂತಿ ನಂತರ ವ್ಯಾಧಿಗ್ರಸ್ತಳಾದರೆ ಆಕಳ ಹಾಲನ್ನು ಉಪಯೋಗಿಸಬೇಕು. ದೂಷಿತ ಹಾಲಿನಿಂದ ರೋಗ ಸಂಭವಿಸುವದರಿಂದ ಮೊಲೆ ಕುಡಿಸಬಾರದು. ತಾಯಿಯ ಆರೋಗ್ಯ ಚನ್ನಾಗಿದ್ದು ದೋಷರಹಿತ ಹಾಲಿರುತ್ತಿದ್ದಾಗ ಎರಡನೇಯದೇನನ್ನೂ ಉಪಯೋಗಿಸುವ ಅವಶ್ಯಕತೆಯೇ ಇಲ್ಲ. ಸ್ವಾಭಾವಿಕವಾಗಿ ಪ್ರಾಣಿ ಮಾತ್ರದ ಜೀವನೋಪಾಯವೆಂದು ನಿರ್ಮಿಸಿದ ತಾಯಿಯ ಹಾಲಿನಷ್ಟು, ಹಿತಕರವೂ ಸಾತ್ಮ್ಯವೂ ಸುಲಭವಾಗಿ ದೊರೆಯುವಂಥದೂ ಮತ್ತಾವದೂ ಇಲ್ಲವೆನ್ನುವದು ಸ್ಪಷ್ಟವಾಗಿ ತೋರುವ ವಿಷಯವೇ ಆಗಿರುತ್ತದೆ. ಪ್ರಸೂತಿಯಾದ ನಂತರ "**ತಾಯಿ ಶಿಶುಗಳ**" ಇಬ್ಬರ ವಿಷಯದಲ್ಲಿಯೂ ವಿಶೇಷಜಾಗ್ರತೆಯನ್ನು ವಹಿಸಬೇಕಾಗುತ್ತದೆ. ಅಂದರೆ ಆರಂಭವಾದ ಗರ್ಭಸ್ಥಿತಿಯು ಸುಖದಾಯಕವಾಗುವದು.

ಗರ್ಭಾಶಯವಿರುವ ಸ್ಥಾನ

ಗರ್ಭಾಶಯೋಽಷ್ಟಮಃ ಸ್ತ್ರೀಣಾಂ ಪಿತ್ತಪಕ್ವಾಶಯಾಂತರೇ ॥
(ವಾಗ್ಭಟ॥ ಶಾರೀರ॥ ಅ ೩ ॥)

ಎಂಟನೇ ಆಶಯವಾದ **"ಗರ್ಭಾಶಯವು"** ಸ್ತ್ರೀಯರಿಗೆ ಪಿತ್ತಾಶಯ ಮಲಾಶಯಗಳ ಮಧ್ಯಭಾಗದಲ್ಲಿರುತ್ತದೆ.

ಯಥಾರೋಹಿತಮುತ್ಸ್ಯಸ್ಯಮುಖಂ ಭವತಿರೂಪತಃ ॥
ತತ್ಸಂಸ್ಥಾನಾಂತಥಾರೂಪಾಂಗರ್ಭಶಯ್ಯಾಂ ವಿದುರ್ಬುಧಾಃ॥
(ಸುಶ್ರುತ॥ ಶಾರೀರ॥ ಅ ೫ ಶ್ಲೋ ೪೪)

ರೋಹಿತವೆಂಬ ಮೀನದ ಮುಖದಂತೆ ತದ್ವತ್ ಗರ್ಭಾಶಯದ ಆಕೃತಿ ಸ್ವರೂಪಗಳು ಇರುತ್ತವೆಂದು ಪಂಡಿತರ ಮತವು. ರೋಹಿತ ಮೀನದ ಮುಖವು ಮುಂದೆ ಸಣ್ಣದಾಗಿದ್ದು ಅನಂತರ ದೊಡ್ಡದಾಗಿಯೂ, ಒಳಗೆ ಪೊಳ್ಳು ಭಾಗವು ಅಧಿಕವಾಗಿಯೂ ಇರುತ್ತದೆ. ಇದರಂತೆಯೇ ಗರ್ಭಾಶಯ ವಿರುತ್ತದೆಂದು ತಿಳಿಯಬೇಕು.

ಗರ್ಭಾಶಯ ದ್ವಾರವು

ಶಂಖನಾಭ್ಯಾಕೃತಿರ್ಯೋನಿಃ ತ್ರ್ಯಾವರ್ತಾಸಾಪ್ರಕೀರ್ತಿತಾ ॥
ತಸ್ಯಾಃ ತೃತೀಯೇತ್ವಾವರ್ತೇಗರ್ಭಶಯ್ಯಾಪ್ರತಿಷ್ಠಿತಾ ॥
(ಸುಶ್ರುತ॥ ಶಾರೀರ॥ ಅ ೫ ಶ್ಲೋ ೪೩)

ಶಂಖದ ನಾಭಿಯ ಆಕಾರದಂತೆ (ಶಂಖದ ನಾಭೀ ರಂದ್ರದಂತೆ) ಯೋನಿಯು ಇರುತ್ತದೆ. ಮೂರು ಆವರ್ತ (ಮುರಿಗೆ) ಗಳಿಂದ ಕೂಡಿರುತ್ತದೆ. ಮೂರನೇ ಆವರ್ತದಲ್ಲಿ **"ಗರ್ಭಾಶಯವು"** ಅಂಟಿಕೊಂಡಿರುತ್ತದೆ. ಶಂಖದ ದ್ವಾರದಂತೆ ಆವರ್ತ (ಮುರಿಗೆ)ಗಳಿಂದ ಕೂಡಿದ ಯೋನಿದ್ವಾರವು, ನಂತರ ಶಂಖದ ಒಳಗಡೆಯ ದೊಡ್ಡದಾದ ಪೊಳ್ಳು ಭಾಗದಂತೆ ಗರ್ಭಾಶ

ಯದ ಒಳಭಾಗವಿರುತ್ತದೆ. ಅಲ್ಲಿಯೇ ಗರ್ಭವು ಆರಂಭವಾಗಿ ಬೆಳೆಯುತ್ತದೆ. ಮೂಢ ಗರ್ಭಾದಿಗಳಲ್ಲಿ ಗರ್ಭ ನಿರ್ಗಮನ ಮಾರ್ಗವನ್ನು ನಿರ್ದೇಶಿಸಲು ಯೋನಿದ್ವಾರ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ.

ಗರ್ಭಾಶಯದಲ್ಲಿ ಗರ್ಭಸ್ವರೂಪ

ಮಲಾಲ್ಪತ್ವಾದಯೋಗಾಚ್ಚ ವಾಯೋಃ ಪಕ್ವಾಶಯಸ್ಯಚ ॥
ವಾತಮೂತ್ರಪುರೀಷಾಣಿನಗರ್ಭಸ್ಥಃ ಕರೋತಿಹಿ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋ ೫೩)

ಗರ್ಭಾಶಯಸ್ಥ ಗರ್ಭದಲ್ಲಿ ಮಲವು ಅಲ್ಪವಿರುವದರಿಂದ ಅಥವಾ ಜೀವನ ಸ್ಥಿತಿಗೆ ಅರ್ಹವಾದ ರಸಸತ್ವವನ್ನೇ ಗ್ರಹಿಸುವದರಿಂದ ಮಲದ ಯೋಗವೇ ಇರುವದಿಲ್ಲ. "**ಮಲಾಲ್ಪತ್ವಾತ್**" ಎಂದು ಹೇಳಿದ್ದರಿಂದ ರಸ ಸತ್ವದ ಮಲವು ಸೂಕ್ಷ್ಮ ಸ್ಥಿತಿಯಲ್ಲಿರುತ್ತದೆಂದು ಧ್ವನಿತವಾಗುತ್ತದೆ. ಜನನವಾದ ಮೇಲೆ ಪ್ರತ್ಯಕ್ಷ ಆಹಾರ ಸ್ವೀಕಾರಮಾಡಿ ಪಚನವಾದ ನಂತರ ದಲ್ಲಿಯ, ಕಿಟ್ಟ ಭಾಗವಾದ ಮಲದಂತೆ ಸ್ಥೂಲವಾದದ್ದಲ್ಲ. ರಸಸತ್ವವನ್ನೇ ಗ್ರಹಿಸುವದರಿಂದ ಕಿಟ್ಟ ರೂಪ ಮಲವು ಸಂಭವಿಸಲಾರದು. ಆದ್ದರಿಂದ "**ಅಯೋಗಾತ್**" ಎಂದು ಹೇಳಿದ್ದಾರೆ ಇಲ್ಲವೇ ಪಕ್ವಾಶಯದಲ್ಲಿಯ ವಾಯುವಿನ ಯೋಗವಿಲ್ಲದಿರುವದರಿಂದಲೂ ಗರ್ಭಾಶಯಸ್ಥ ಶಿಶುವು, ವಾತ, ಮೂತ್ರ ಮಲಗಳ ವಿಸರ್ಜನೆಯನ್ನು ಮಾಡುವದಿಲ್ಲ. ಮಲ ಮೂತ್ರಗಳ ವಿಸರ್ಜನೆ ಇಲ್ಲದಿರುವದು ಮಲಾಲ್ಪತೆ (ಸೂಕ್ಷ್ಮತೆ) ಯಿಂದ ಸ್ವಾಭಾವಿಕ ವಾಗಿರುತ್ತದೆ. ಆದರೆ ವಾಯು ಸಂಚಾರವಿಲ್ಲದಿದ್ದರೆ ಗರ್ಭವು ಹೇಗೆ ಬದು ಕುತ್ತದೆಂಬ ವಿಚಾರವುಂಟಾಗುತ್ತದೆ ಮತ್ತು ಶಿಶುವಿಗೆ ಶ್ವಾಸೋಚ್ಛ್ವಾಸ ವಿಲ್ಲದಿದ್ದರೆ ಪ್ರಾಣವಿರುವದೆಂದು ಹೇಗೆ ತಿಳಿಯಬೇಕು. ಜೀವವಿದ್ದರೆ ಉಸು ರಾಡಿಸುವದು ಅವಶ್ಯವೇ ಆಗಿರುತ್ತದೆ. ಇದಕ್ಕೆ ಶಾಸ್ತ್ರಕಾರ ಮತವೇನೆಂದರೆ ಸ್ಥೂಲಭೂತ ಶಬ್ದಾದಿಗಳನ್ನು ಹೊರಡಿಸುವ ವಾಯು ಸಂಚಾರವಿಲ್ಲೆಂದೂ ಸೂಕ್ಷ್ಮವಾದ ವಾಯು ಸಂಚಾರ ಇದ್ದೇ ಇದೆಯೆಂದೂ ಹೇಳಿದ್ದಾರೆ.

(ವಾಯು ಸಂಚಾರ ಸ್ಥಿತಿಯನ್ನು ಮುಂದೆ ವಿವರಿಸುತ್ತಾರೆ)

ಜರಾಯುಣಾವಮುಖೇಚ್ಛನ್ನೇಕಂಠೇಚ ಕಫವೇಷ್ಟಿತೆ ॥
ವಾಯೋರ್ಮಾರ್ಗನಿರೋಧಾಚ್ಚ ನಗರ್ಭಸ್ಥ ಪ್ರರೋದಿತಿ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋ ೫೪)

ಗರ್ಭವೇಷ್ಟನಪರದೆಯಿಂದ (ಜರಾಯುಣಾ) ಮುಖವು ಮುಚ್ಚಿರುವದರಿಂದಲೂ, ಕುತ್ತಿಗೆಯ ದ್ವಾರದಲ್ಲಿ ಕಫವು ವ್ಯಾಪಿಸಿರುವದರಿಂದಲೂ ವಾಯು ಸಂಚಾರ ಮಾರ್ಗನಿರೋಧವಾಗಿರುವದರಿಂದಲೂ, ಗರ್ಭಾಶಯದಲ್ಲಿ ಶಿಶುವು ರೋದಿಸುವದಿಲ್ಲ.

"ವಾಯು ಸಂಚಾರ ಮಾರ್ಗ ನಿರೋಧವಾಗಿರುವದರಿಂದ" ಎಂದು ಹೇಳಿರುತ್ತಾರೆ. ಗರ್ಭದಲ್ಲಿ ವಾಯು ಸಂಚಾರ ಬಂದಾದರೆ ಗರ್ಭವು ಹೇಗೆ ಜೀವಿಸುತ್ತದೆಂದು ಕೇಳಬಹುದು? ಇಲ್ಲಿ ರೋದನ ವಿಷಯವನ್ನು ಕುರಿತು ವಿವೇಚನೆ ಮಾಡಿರುವದರಿಂದ ಶಬ್ದ(ಘೋಷ)ವನ್ನುಂಟು ಮಾಡುವ ವಾಯುವಿನ ಮಾರ್ಗ ನಿರೋಧವೆಂದು ತಿಳಿಯಬೇಕು ಆದ್ದರಿಂದ ಅಳೋಣವು (ರೋದನ) ಇರುವದಿಲ್ಲೆಂದು ಪ್ರತಿಪಾದಿಸಿದ್ದಾರೆ. ನಿಶ್ವಾಸಾದಿ ರೂಪವುಳ್ಳ ವಾಯುವು ಸಂಚರಿಸುತ್ತಿರುತ್ತದೆ. ನಿಶ್ವಾಸಾದಿಗಳನ್ನುಂಟು ಮಾಡುವ ವಾಯುನಿರೋಧ ಇಲ್ಲವೇ ಅಭಾವವಾದರೆ, ಜೀವವು ಇರಲಾರದು. ಆದ್ದರಿಂದ ಜೀವನ (ಬದುಕುವಿಕೆಯ) ವ್ಯಾಪಾರವಾದ ನಿಃಶ್ವಾಸೋಚ್ಛ್ವಾಸಗಳನ್ನು ವಹಿಸಿರುವ ವಾಯುವಿನ ಸಂಚಾರವು ನಡೆದಿರುತ್ತದೆಂದು ತಿಳಿಯಬೇಕು. ಗರ್ಭಾಶಯದ ಒಳಗೆ ಆವರಣೆಯಲ್ಲಿರುವ ಗರ್ಭವು ನಿಃಶ್ವಾಸಾದಿಗಳನ್ನು ಹೇಗೆ ಮಾಡುತ್ತದೆಂದು ಅನಿಸಬಹುದು ಇಲ್ಲಿಯೇ ಮುಂದಿನ ಶ್ಲೋಕದಲ್ಲಿ ಆ ವಿಷಯವನ್ನು ವಿವರಿಸಿ ಹೇಳುತ್ತಾರೆ.

ನಿಃಶ್ವಾಸೋಚ್ಛ್ವಾಸಸಂಕ್ಲೇಭಸ್ವಪ್ನಾನ್ ಗರ್ಭೋಽಧಿಗಚ್ಛತಿ॥
ಮಾತುರ್ನಿಶ್ವಸಿತೋಚ್ಛ್ವಾಸಸಂಕ್ಷೋಭಸ್ವಪ್ನಸಂಭವಾನ್ ॥
(ಸುಶ್ರುತ॥ ಶಾರೀರ॥ ಅ ೨ ಶ್ಲೋ ೫೫)

ತಾಯಿಯ ಶ್ವಾಸೋಚ್ಛ್ವಾಸ, ಸಂಚಲನ, ನಿದ್ರಾದಿಗಳನ್ನನುಸರಿಸಿ, ಗರ್ಭವು ಶ್ವಾಸೋಚ್ಛ್ವಾಸ, ಸಂಚಲನ, ನಿದ್ರೆಗಳನ್ನು ಹೊಂದುತ್ತದೆ.

ಅರ್ಥಾತ್ ತಾಯಿಯು ನಿಶ್ವಾಸಾದಿ ಯಾವ ಕರ್ತವ್ಯವನ್ನು ಮಾಡುತ್ತಾಳೋ, ಗರ್ಭವೂ ಕೂಡ ಅದನ್ನೇ ಮಾಡುತ್ತದೆಂಬರ್ಥವು. ಹೀಗೆ ಗರ್ಭಿಣಿಯ ಪ್ರತಿ ಜೀವದಂತೆ ಗರ್ಭವು ಅನುಸರಿಸಿ ನಡೆಯುವದರಿಂದ, ಗರ್ಭಿಣಿಯ ಸುಖ ದುಃಖ, ರೋಗವೊದಲಾದವುಗಳನ್ನು ಹೊಂದುತ್ತದೆ. ಆದ್ದರಿಂದ ಗರ್ಭಿಣಿಯ ದುಃಖ ಮೊದಲಾದವುಗಳು ಗರ್ಭವಿಕೃತಿಕಾರಕವಾಗಿರುತ್ತವೆ. ತಾಯಿಯಂತೆ ಸುಖದುಃಖವನ್ನು ಗರ್ಭವು ಅನುಭವಿಸುವದರಿಂದ ಜಾಗರ ಅತಿಚಲನವಲನೆ ಗಳನ್ನು ಇನ್ನೂ ಅನೇಕ ಶ್ರಮದಾಯಕಕೆಲಸಗಳನ್ನು ವರ್ಜಿಸಬೇಕು. ಆದ್ದರಿಂದ ಅತಿಶ್ರಮಚಿಂತೆ ಉಪವಾಸ ರೂಕ್ಷ ಉಷ್ಣಾಹಾರಸೇವನೆ ಮೊದಲಾದವುಗಳು ಗರ್ಭಕ್ಕೆ ದುಃಖಕಾರಕವಾಗಿರುತ್ತವೆ. ಗರ್ಭ ಮತ್ತು ಗರ್ಭಿಣಿಯ ಹಿತ ದೃಷ್ಟಿಯಿಂದ ಅಹಿತಕಾರಕ ವಿಕೃತಿಯನ್ನುಂಟು ಮಾಡುವ ಆಹಾರ ವಿಹಾರಾದಿಗಳಿಂದ ಉತ್ಪನ್ನವಾದ ದುಷ್ಪರಿಣಾಮವನ್ನು ಅವಲೋಕಿಸಿ, ಪ್ರತ್ಯಕ್ಷ ಅನುಭವ ಪಡೆದು ವಿಮರ್ಶೆಯಿಂದ ನಿರ್ಣಯಮಾಡಿ; ಅಹಿತಕಾರಿಯಾದವುಗಳ ನಿಷೇಧವನ್ನೂ, ಪೋಷಕ ಹಿತಕರವಾದವುಗಳ ಸಮಯೋಚಿತ ಯೋಜನೆ ಯನ್ನೂ, ವಿಧಿಸಿದ್ದಾರೆ. ನಿಷೇಧ ವಿಧಾನಗಳಲ್ಲಿಯ ಅಹಿತಕಾರಿ ಹಿತವನ್ನುಂ ಮಾಡುವ ವಿಭಾಗಗಳನ್ನು ಅವಲೋಕಿಸಿದರೆ ಸಾಮಾನ್ಯರಿಗೂ ಗರ್ಭಿಣೀ ಉಪಚಾರ ಕ್ರಮಗಳು ತಿಳಿಯುವಂತಿವೆ.

ಶರೀರಾವಯವಗಳ ರಚನೆಯು

ಸನ್ನಿವೇಶಃ ಶರೀರಾಣಾಂದಂತಾನಾಂ ಪತನೋದ್ಭವೌ ॥
ತಲೇಷ್ವಸಂಭವೋಯಶ್ಚ ರೋಮ್ಣಾಮೇತತ್ ಸ್ವಭಾವತಃ ॥

(ಸುಶ್ರುತ॥ ಶಾರೀರ॥ ಅ ೨ ಶ್ಲೋ ೫೬)

ಶರೀರಾವಯವಗಳ ರಚನೆಯು (ಸನ್ನಿವೇಶಃ) ಕರಚರಣಾದಿಗಳ ಸಮೋಚಿತವಾದ ಹೊಂದಿಕೆ ಮೊದಲಾದವುಗಳು ಸ್ವಾಭಾವಿಕವಾಗಿಯೇ ಜರಗುತ್ತವೆ. ಇದರಂತೆ ಹಲ್ಲುಗಳ ಬಿದ್ದು ಹುಟ್ಟುವಿಕೆ (ಒಮ್ಮೆ ಬಂದ ಹಲ್ಲು ಬಿದ್ದು, ಪುನಃ ಹುಟ್ಟೋಣ), ಅಂಗೈಪಾದ ತಲಗಳಲ್ಲಿ ಕೂದಲುಬಾರದೇ

ಇರುವದು, ಸ್ವಾಭಾವಿಕವಾದದ್ದಾಗಿರುತ್ತದೆ. ಅರ್ಥಾತ್ ಇವುಗಳುಯಾವದೇ ಒಂದು ಕಾರಣದಿಂದ ಆಗಿಲ್ಲವಾದ್ದರಿಂದ ಸ್ವಾಭಾವಿಕ ಸ್ಥಿತಿಯೇ ಹೀಗೆಂದು ತಿಳಿಯಬೇಕು

ದೃಷ್ಟಿಶ್ಚರೋಮಕೂಪಾಶ್ಚ ನವರ್ಧಂತೇಕದಾಚನ ॥ ಧ್ರುವಾ ಣ್ಯೇತಾನಿವರ್ತ್ಮಾನಾಮಿತಿ ಧನ್ವಂತರೇರ್ಮತಂ ॥

(ಸುಶ್ರುತ ॥ ಶಾರೀರ ॥ ಅ ೪ ಶ್ಲೋ ೬೦)

ಕಣ್ಣಿನ ದೃಷ್ಟಿ ಮತ್ತು ರೋಮ-ಕೂಪಗಳು ಎಂದೂ ವೃದ್ಧಿಹೊಂದುವದಿಲ್ಲ. ಮನುಷ್ಯರಿಗೆ ಇವುಗಳು ನಿಶ್ಚಲ (ನಿಶ್ಚಿತ) ವಾಗಿರುವದರಿಂದ ಅಭಿವೃದಿ ಹೊಂದುವದಿಲ್ಲೆಂದು ಧನ್ವಂತರಿಯ ಮತವು.

ಶರೀರೇಕ್ಷೀಯಮಾಣೇಽಪಿವರ್ಧೇತೇದ್ವೌವಿಮೌಸದಾ ॥ ಸ್ವಭಾವಂ ಪ್ರಕೃತಿಂ ಕೃತ್ವಾನಖ ಕೇಶಾವಿತಿಸ್ಥಿತಿಃ ॥

(ಸುಶ್ರುತ ॥ ಶಾರೀರ ॥ ಅ. ೪ ಶ್ಲೋ. ೬೧)

ಶರೀರವು ಕ್ಷೀಣವಾಗುತ್ತಿದ್ದರೂ ಉಗುರು(ನಖ)ಕೂದಲುಗಳೆರಡು ಸ್ವಾಭಾವಿಕವಾಗಿ (ಸ್ವಭಾವ ಪ್ರಕೃತಿಯಿಂದ) ಯಾವಾಗಲೂ ವೃದ್ಧಿಹೊಂದುತ್ತವೆ. ಅರ್ಥಾತ್ ಇವುಗಳ ಸ್ವಭಾವವು ವೃದ್ಧಿಹೊಂದುವ ಸ್ಥಿತಿಯುಳ್ಳದ್ದಿರುವದು.

(ಹಿಂದೆ ವಿವರಿಸಿದ ಸ್ವಭಾವ ಪ್ರಕೃತಿ ವಾದಿಗಳ ಮತವಾಗಿರುತ್ತದೆ)

ಅಂಗಪ್ರತ್ಯಂಗನಿರ್ವೃತ್ತಿಃ ಸ್ವಭಾವಾದೇವಜಾಯತೆ ॥ ಅಂಗ ಪ್ರತ್ಯಂಗನಿರ್ವೃತ್ತೌಯೇಭವಂತಿಗುಣಾಽಗುಣಾಃ॥ತೇತೇಗರ್ಭಸ್ಯ ವಿಜ್ಞೇಯಾ ಧರ್ಮಾಽಧರ್ಮ ನಿಮಿತ್ತಜಾಃ॥

(ಸುಶ್ರುತ ॥ ಶಾರೀರ ॥ ಅ. ೩ ಶ್ಲೋ. ೩೬)

ಅಂಗಪ್ರತ್ಯಂಗಗಳ ಉತ್ಪತ್ತಿ ಪರಿಪೂರ್ಣತೆಯು ಸ್ವಾಭಾವಿಕವಾಗಿಯೇ ಆಗುತ್ತದೆ. ಉತ್ಪತ್ತಿ ಮತ್ತು ರಚನೆಯಲ್ಲಿಯ ಗುಣದೋಷಗಳು ಗರ್ಭದ ಧರ್ಮಾಽಧರ್ಮಗಳಿಂದುಂಟಾಗಿರುತ್ತವೆಂದು ತಿಳಿಯಬೇಕು. ಜನ್ಮಾಂತರದಲ್ಲಿ

ಮಾಡಿದ ಪಾಪ ಕರ್ಮ ಫಲವನ್ನು ಭೋಗಿಸಬೇಕಾದ್ದರಿಂದ, ಗರ್ಭವು ದುಃಖವನ್ನುಂಟು ಮಾಡುವ ವಿಕೃತಿ ಅಂಗಹೀನತೆ ಮೊದಲಾದವುಗಳನ್ನು ಹೊಂದುತ್ತದೆ ಜೀವದ ಕರ್ಮಜ (ಸೂಕ್ಷ್ಮ ಶರೀರ) ವಾದ ಮನಸ್ಸು ದುಷ್ಕರ್ಮಫಲವನ್ನನುಭೋಗಿಸಲು ಯೋಗ್ಯವಾದ ಶರೀರವನ್ನು ಪಡೆಯುತ್ತದೆ.

ಶರೀರ ರಚನೆಯನ್ನುಕುರಿತು ಶರೀರೋತ್ಪತ್ತಿಯಲ್ಲಿಯ ವಿಶೇಷಗಳನ್ನು ಸ್ವಾಭಾವಿಕವೆಂದು ವಿವರಿಸಿದ್ದಾರೆ. ಇದರಂತೆ ದೇಹಕ್ಕೆ ಚೈತನ್ಯವನ್ನುಂಟು ಮಾಡುವ ಆತ್ಮನ ಗುಣವಾದ ಬುದ್ಧಿಯ ಭಾವನಾಧಿಕ್ಯದಿಂದುಂಟಾಗುವ ವಿಶೇಷಗಳನ್ನು ನಿರ್ದೇಶಿಸುತ್ತಾರೆ:—

ಆತ್ಮನ ಭಾವನಾಧಿಕ್ಯವುಳ್ಳ ಬುದ್ಧಿ ವೈಶಿಷ್ಟ್ಯವು

ಭಾವಿತಾಃ ಪೂರ್ವದೇಹೇಷುಸತತಂ ಶಾಸ್ತ್ರಬುದ್ಧಯಃ ॥
ಭವಂತಿಸತ್ವಭೂಯಿಷ್ಠಾಃ ಪೂರ್ವಜಾತಿಸ್ಮರಾನರಾಃ ॥

(ಸುಶ್ರುತ॥ ಶಾರೀರ॥ ಅ ೨ ಶ್ಲೋ ೫೭)

ಹಿಂದಿನ ಜನ್ಮದಲ್ಲಿಯ ದೇಹಾವಸ್ಥೆಗಳಲ್ಲಿ, ಯಾವಾಗಲೂ ಶಾಸ್ತ್ರದಲ್ಲಿ ಭಾವನಾರೂಪದಿಂದ ಸ್ಥಿರವಾದ ವಿಚಾರವುಳ್ಳ ಬುದ್ಧಿಯುಕ್ತರಾದವರು; ಸಂಸ್ಕಾರ ಬಲದಿಂದ ಶಾಸ್ತ್ರ ಬುದ್ಧಿಯುಳ್ಳವರಾಗುತ್ತಾರೆ. ಹೀಗೆ ಸಂಸ್ಕಾರ ಯುಕ್ತಭಾವನಾ ವಿಶೇಷವುಳ್ಳವರು ಕಡಿಮೆ ತರಗತಿಯದಾಗಿರುವ ರಜಸ್ತಮೋಗುಣಗಳ ಅಭಾವದಿಂದ ಅಥವಾ ಅಲ್ಪತೆಯಿಂದ, ಕೇವಲ ಸತ್ವಗುಣವುಳ್ಳವರು ಇಲ್ಲವೇ ಸತ್ವಾಧಿಕ್ಯ (ಸತ್ವಗುಣ ಪ್ರಧಾನ) ವುಳ್ಳವರಾಗುತ್ತಾರೆ ಸಾತ್ವಿಕ ಬುದ್ಧಿ ವಿಶೇಷದಿಂದ ನಿರಾವರಣ ಜ್ಞಾನವಿರುತ್ತದೆ. ಇದರಿಂದ ಪೂರ್ವಜನ್ಮ ಸ್ಮೃತಿ (ನೆನಪು) ಉಳ್ಳವರಿರುತ್ತಾರೆ. ಅರ್ಥಾತ್ ಶಾಸ್ತ್ರಾದಿ ಸಚ್ಚರಿತ ಭಾವನಾವಿಶಿಷ್ಟ ಬುದ್ಧಿಯಿಂದ ಸತ್ವಗುಣಾಧಿಕ್ಯರಾಗಿ ನಿರಾವರಣ ಜ್ಞಾನದಿಂದ ಪೂರ್ವ ಜನ್ಮಗಳನ್ನು ತಿಳಿಯುತ್ತಾರೆ ಇದರ ವಿರುದ್ಧವಾದ ಭಾವನಾ ವಿಶಿಷ್ಟ ಸಂಸ್ಕಾರವುಳ್ಳ ಬುದ್ಧಿಯೂ ಸಹ ರಜಸ್ತಮಾವಿಷ್ಟವಾಗಿ, ದುಷ್ಕರ್ಮ ಮದಮಾನಾದಿಯುಕ್ತವಾಗುತ್ತದೆ. ಆವರಣ ರೂಪವಾದ್ದರಿಂದ

ಇಲ್ಲಿ ಸಾತ್ವಿಕಗುಣಾಧಿಕ್ಯದಿಂದ ಪೂರ್ವಜನ್ಮ ಸ್ಮರಣಾದಿಗಳಿರುವದಿಲ್ಲ. ಹೀಗೆ ಸ್ವಾಭಾವಿಕವಾಗಿರುವ ಆತ್ಮನ ಗುಣವಾದ ಬುದ್ಧಿ ವಿಶೇಷವನ್ನು ನಿರ್ದೇಶಿಸಿದ್ದಾರೆ.

ಪ್ರಕೃತಿ ವಿಕಾರ ಪುರುಷರಲ್ಲಿಯ ವಿಶೇಷವು

ದೇಹದಲ್ಲಿಯ ರಚನಾ (ಸನ್ನಿವೇಶ) ವಿಶೇಷಗಳ ಸ್ವಾಭಾವಿಕತೆ, ಗರ್ಭೋತ್ಪತ್ತಿಯಲ್ಲಿಯ ದೋಷ ಪ್ರಕೋಪ ಆಹಾರಾಚಾರ ವಿಹಾರಗಳಿಂದ ಕುಬ್ಜಖಂಜತ್ವಾದಿಗಳು, ವಾಗಿಂದ್ರಿಯ ವಿಕೃತಿಯಿಂದ ಮೂಕ ಮಿನ್ಮಿಣಗರ್ಗ ದತ್ವಾದಿಗಳು, ಮನಸ್ಸು ಬುದ್ಧಿಗಳ ಸಾತ್ವಿಕ ಸಂಸ್ಕಾರ ಸ್ಥಿರತೆಯಿಂದ ಶಾಸ್ತ್ರ ಜ್ಞಾನ ಪೂರ್ವಜನ್ಮ ಸ್ಮರಣೆಯು, ಮೊದಲಾದ ಸರ್ವವೂ ಸ್ವಾಭಾವಿಕ ಸಿದ್ಧ ವಾದವುಗಳಾಗಿದ್ದರೂ ಕರ್ಮಗಳಿಂದಲೆ ಸಂಭವಿಸಿರುತ್ತವೆಂದು ಹೇಳುತ್ತಾರೆ ಅರ್ಥಾತ್ ಸ್ವಭಾವಾದಿ ಸರ್ವವೂ ಕರ್ಮದಿಂದಲೇ ಆ ಸ್ಥಿತಿಯನ್ನು ಪಡೆದಿರುವದರಿಂದ ಕರ್ಮವೇ ಪ್ರಧಾನವೆಂದು ನಿರ್ದೇಶಿಸುತ್ತಾರೆ.

ಕರ್ಮಣಾಚೋದಿತೊಯೇನತದಾಪ್ನೋತಿಪುನರ್ಭವೇ॥ ಅಭ್ಯಸ್ತಾಃ ಪೂರ್ವದೇಹೆಯೇತಾನೇವಭಜತೇಗುಣಾನ್ ॥

(ಸುಶ್ರುತ ॥ ಶಾರೀರ ॥ ಅ. ೨ ಶ್ಲೋ. ೫೮)

ಜನ್ಮಾಂತರದಲ್ಲಿ ಯಾವ ಕರ್ಮದಿಂದ ಸಂಸ್ಕಾರಹೊಂದಿದವನು (ಚೋದಿತನು) ಆಗುತ್ತಾನೆಯೋ, ನಂತರವಾದ ಜನ್ಮದಲ್ಲಿ ಅದನ್ನೇ ಅನುಸರಿಸುತ್ತಾನೆ. ಕರ್ಮಯೋಗದಿಂದ ಯಾವದು ಪಡೆಯಲ್ಪಟ್ಟಿರುವದೋ, ಅಥವಾ ಯಾವದು ಅಭ್ಯಾಸ ಮಾಡಲ್ಪಟ್ಟಿರುವದೋ, ಆ ಗುಣಗಳನ್ನೇ ಹೊಂದುತ್ತಾನೆ. ಆದ್ದರಿಂದ ಸ್ವಭಾವಾದಿಗಳು ಸಹ ಕರ್ಮ ಸಹಾಯದಿಂದ ಅಭ್ಯಸ್ತವಾದ್ದರಿಂದ ಕರ್ಮವೇ ಮೂಲವೆಂದು ಅನ್ನುತ್ತಾರೆ ಒಮ್ಮೆ **ಗುಣ, ಮನಸ್ಸು, ಬುದ್ಧಿ, ಸ್ವಭಾವ, ಕರ್ಮ** ಮೊದಲಾವುಗಳನ್ನು ಪ್ರತಿಯೊಂದು ಮುಖ್ಯವಾದದ್ದೆಂದು ಹೇಳುತ್ತಾ ಹೋಗಿರುವದದರಿಂದ ವಾಚಕರಿಗೆ ಅನವಸ್ಥಿತವೆಂದೆನಿಸುವದು ಸ್ವಾಭಾವಿಕವಾಗಿದೆ

ಉದಾ:— ಒಂದು ಮನೆಯಲ್ಲಿ ಬೇರೆ ಬೇರೆ ವಿಭಾಗಗಳಲ್ಲಿಯ ಮಹತ್ವವನ್ನು ಹೇಳಿದಾಗ ಅಲ್ಲಲ್ಲಿಯ ಶ್ರೇಷ್ಠತೆಯನ್ನು ನಾವು ತಿಳಿಯುತ್ತೇವೆಯೋ ಅದರಂತೇ, ಸಾತ್ವಿಕಾದಿ ಗುಣವಿಶೇಷಗಳನ್ನು ಹೇಳಿದಾಗ ಶಾಸ್ತ್ರಬುದ್ಧಿ ಮೊದಲಾದವುಗಳ ಮಹತ್ವವನ್ನೂ, ರಜಸ್ತಮೋ ಗುಣಾಧಿಕ್ಯದಲ್ಲಿ ಮನೋದೋಷ ಪ್ರಾಬಲ್ಯದಿಂದ ಮನಸ್ಸಿನ ಹಿರಿಮೆಯನ್ನೂ, ಮೋಕ್ಷ ಪ್ರಾಪ್ತಿ ಮೊದಲಾದವುಗಳಲ್ಲಿ ಆತ್ಮಾಧಿಕರಣ ಬುದ್ಧಿಯ ಹೆಚ್ಚುವಿಕೆಯನ್ನೂ, ದೇಹ ರಚನೆ ಅಂಗಾಂಗಗಳ ಸಂನಿವೇಶಗಳಲ್ಲಿ ಸ್ವಭಾವ ಪ್ರಧಾನತೆಯನ್ನೂ, ಅವಾವ ಸಂದರ್ಭಾನುಸಾರ ಮಹತ್ವವುಳ್ಳವುಗಳಾಗಿರುತ್ತವೆಂದು ತಿಳಿಯಬೇಕು. ಸಾಮಾನ್ಯತಃ ಇವೆಲ್ಲವುಗಳು ವಿಶೇಷವಾಗಿ ಪೂರ್ವ ಕರ್ಮಗಳಿಂದ ಅಭ್ಯಸ್ತವಾಗಿರುವದರಿಂದ ಕರ್ಮವೇ ಪ್ರಧಾನವೆಂದು ನಿರ್ಣಯಿಸಿರುವದು ಯೋಗ್ಯವೇ ಇರುತ್ತದೆ ಯಾಕಂದರೆ ತನೋಽಧಿಕವುಳ್ಳವನು ಕ್ರೋಧಾದಿಗಳನ್ನು ತಡೆದು ಸ್ವಪ್ರಯತ್ನ ರೂಪವಾದ ಕರ್ಮಗಳಿಂದ ಸತ್ವ ಗುಣ ಪಡೆಯಬಹುದು. ಆದ್ದರಿಂದ ಕರ್ಮವೂ ಪ್ರಾಧಾನ್ಯವೆನ್ನುವದು ಸಮಂಜಸವಾಗಿರುತ್ತದೆ. ಬಹು ಸೂಕ್ಷ್ಮ ಜಟಿಲ ಸಮಸ್ಯೆಯಾದ್ದರಿಂದ ವಿರೋಧಾಭಾಸವೆನಿಸುವದೇ ಹೊರತು ವಸ್ತುತಃ ವಿರೋಧ ಬರುವದಿಲ್ಲ.

ಪ್ರಸವಾವಸ್ಥೆಯಲ್ಲಿಯ ಬಂಧ ವಿಮೋಚನೆಯು

ಕಾಲಸ್ಯಪರಿಣಾಮೇನಮುಕ್ತಂ ವ್ಯಂತಾದ್ಯಥಾಫಲಂ ॥ ಪ್ರಪದ್ಯತೆ ಸ್ವಭಾವೇನನಾನ್ಯಥಾಪತಿತುಂ ಧೃವಂ॥

(ಸುಶ್ರುತ॥ ನಿದಾನ॥ ಅ ೪ ಶ್ಲೋ ೭)

ಯೋಗ್ಯ ಕಾಲದಿಂದ ಪಕ್ವಸ್ಥಿತಿಹೊಂದಿದ ಫಲವು ಹೇಗೆ ತುಂಬಿನಿಂದ (ದೇಟಿನಿಂದ) ಬೇರೆಯಾಗಿ ಕೆಳಗೆ ಬೀಳುತ್ತದೆಯೋ? ಅದರಂತೆ ಯೋಗ್ಯ ರೀತಿಯಿಂದ ಕಾಲ ಪರಿಣಾಮವುಳ್ಳ ಗರ್ಭವು ಸ್ವಾಭಾವಿಕವಾಗಿ ಹೊರಬೀಳು

ತ್ತದೆ. ಹೀಗೆ ಆಗುವದು ಯೋಗ್ಯವಾದದ್ದೇ ಹೊರತು ಪತನವೆಂದು ಹೇಳಿಸಿ ಕೊಳ್ಳಲಾರದು ಯೋಗ್ಯವಾದ ಪ್ರಸವಕಾಲದ ಹೊರತಾಗಿ ಆಘಾತಾದಿಗಳಿಂದ ಜನನವಾದರೆ ಪತನವು.

ಏವಂ ಕಾಲಪ್ರಕರ್ಷೇಣವುಕ್ತೋನಾಡೀನಿ ಬಂಧನಾತ್ ॥
ಗರ್ಭಾಶಯೆಸ್ಥೋಯೋ ಗರ್ಭೋಜನನಾಯಪ್ರಪದ್ಯತೆ ॥೪॥

ಹೀಗೆ ಯೋಗ್ಯಕಾಲದಲ್ಲಿ ಪರಿಣಾಮಹೊಂದಿದ ಗರ್ಭವು ನಾಡೀಬಂಧನದಿಂದ ಮುಕ್ತವಾಗಿ ಗರ್ಭಾಶಯದಲ್ಲಿ ಜನನಕ್ಕೋಸ್ಕರ ಸಿದ್ಧವಾಗುತ್ತದೆ.

ಗರ್ಭಪತನದ ಕಾರಣಗಳು

ಕೃಮಿವಾತಾಭಿಘಾತೈಸ್ತು ತ ದೇವೋಪಪದ್ಯತಂ ಫಲಂ ॥ ಪತತ್ಯ
ಕಾಲೇಽಪಿಯಥಾ ತಥಾಸ್ಯಾದ್ಗರ್ಭವಿಚ್ಯುತಿಃ ॥೯॥

(ಸುಶ್ರುತ ॥ ನಿದಾನ ॥ ಅ. ೮ ಶ್ಲೋ ೯)

ಕೃಮಿಗಳಿಂದ ಅಥವಾ ಗಾಳಿ ಪೆಟ್ಟು ತಾಗೋಣ ಮೊದಲಾದ ಆಘಾತಗಳಿಂದ, ಇಲ್ಲವೇ ತನ್ನಿಂದ ತಾನೇ ಕೆಟ್ಟಿಂಥ ಫಲವು ಚನ್ನಾಗಿ ಬೆಳೆದು ಪಕ್ವವಾಗದೆ ಅಕಾಲದಲ್ಲಿ ಪತನ ಹೊಂದುತ್ತದೆ. ಅದರಂತೇ ಗರ್ಭವೂ ಸಹ ಆಘಾತಾದಿಗಳಿಂದ ಪರಿಪೂರ್ಣವಾಗದೇನೇ ಪತನಹೊಂದುವದು ಇದಕ್ಕೆ ಗರ್ಭವಿಚ್ಯುತಿ ಅಥವಾ ಗರ್ಭಪಾತವೆಂದು ಹೆಸರು.

ಆಚತುರ್ಥಾತ್ತತೋಮಾಸಾತ್ ಪ್ರಸ್ರುವೇದ್ಗರ್ಭವಿದ್ರವಃ ॥
ತತಃ ಸ್ಥಿರಶರೀರಸ್ಯಪಾತಃ ಪಂಚಮಷಷ್ಠಯೋಃ ॥
(ಸುಶ್ರುತ॥ ನಿದಾನ॥ ಅ ೮ ಶ್ಲೋ ೧೦)

ನಾಲ್ಕು ತಿಂಗಳು ಮುಗಿಯುವದರೊಳಗೆ ಯಾವದೇ ಮಾಸದಲ್ಲಾಗಲೀ, ಗರ್ಭಚ್ಯುತಿಯಾದರೆ ಅದಕ್ಕೆ ಗರ್ಭಸ್ರಾವವೆಂಬ ಹೆಸರು. ಯಾಕಂದರೆ ನಾಲನೇ ತಿಂಗಳಿನ ವರೆಗೆ ಗರ್ಭವು ಘನ (ಘಟ್ಟಿ) ಸ್ವರೂಪವನ್ನು ಹೊಂದಿ

ರುವದಿಲ್ಲ ದ್ರವ ರೂಪದಲ್ಲಿರುವದರಿಂದ ಸ್ರಾವವೆಂದು ಹೇಳುತ್ತಾರೆ. ನಂತರ ಐದನೇ ಆರನೇ ತಿಂಗಳಿನಲ್ಲಿ ಗರ್ಭವು ಸ್ಥಿರ (ಘಟ್ಟಿ) ಶರೀರವಿರುವ ದರಿಂದ ಪಾತವೆಂದೂ ಹೆಸರು. ಹೀಗಿರುವದರಿಂದ ನಾಲ್ಕನೇ ತಿಂಗಳ ಪೂರ್ವದಲ್ಲಿ ದ್ರವರೂಪದಿಂದ ಸ್ರಾವವಾದ ಮೂಢಗರ್ಭವು ಬಾಧಿಸಲಾರದು.

ಗರ್ಭಸ್ರಾವ ವಿಷಯದಲ್ಲಿ ಭೋಜಮತವು:—

ತೃತೀಯಾತ್ತತೋವಾಸಾತ್ ಗರ್ಭಃ ಸ್ರವತಿಶೋಣಿತಂ ॥
ಊರ್ಧ್ವಂಸಂಯಾವಭೂತಸ್ತು ಗರ್ಭೋಪತತಿಯೋಷಿತಾಂ॥

ಮೂರನೇ ತಿಂಗಳಿನ ಮೊದಲು ಸ್ರಾವವಾಗುವ ಗರ್ಭಕ್ಕೆ ದ್ರವ ರೂಪವಿರುವದರಿಂದ, ಶೋಣಿತ ಸ್ರಾವವೆಂದು ಹೇಳಬೇಕು ಆನಂತರ ನಾಲ್ಕನೇ ತಿಂಗಳ ಪರ್ಯಂತರದಲ್ಲಿ ಅತಿ ಮೃದುವಲ್ಲದೆಯೂ, ಕಠಿಣವಲ್ಲದೆಯೂ ಸಂಯಾವ (ಗುಡಪಿಷ್ಟಭಕ್ಷ್ಯ) ದಂತಿರುವ ಗರ್ಭವು ಬೀಳುತ್ತದೆ. ಸಾಮಾನ್ಯ ಮೃದುವಾಗಿರುವದರಿಂದ ಸ್ರಾವವೆಂದು ಗ್ರಹಿಸಿದ್ದಾರೆ. ಆಮೇಲೆ ಅಂಗಪ್ರತ್ಯಂಗಗಳು ಪ್ರವ್ಯಕ್ತವಾಗಿ ಘನ ಸ್ವರೂಪ ಹೊಂದಿರುವದರಿಂದ ಗರ್ಭಪತನನೆಂದು ಹೇಳುತ್ತಾರೆ. ಮೂಢ ಗರ್ಭವಿದ್ದರೆ ಪತನವು ಕಷ್ಟತರವಾಗುವದು

ಕಾಶ್ಯಪಸಂಹಿತೆಯಲ್ಲಿಯ ಮತವು:—

ಆಚತುರ್ಥಾತ್ತತೋವಾಸಾತ್ ಪ್ರಸ್ರುತಂಶೋಣಿತಂಮತಂ ॥
ತತಃ ಸ್ಥಿರಶರೀರಸ್ತು ಮೂಢಃ ಪತಿತಕೃಚ್ಛ್ರತಃ ॥

ನಾಲ್ಕನೇ ತಿಂಗಳ ಮೊದಲು ಸ್ರಾವವಾಗುವದಕ್ಕೆ ಶೋಣಿತವೆಂದು ಅಭಿಪ್ರಾಯವು. ನಂತರ ಗರ್ಭ ಶರೀರವು ಸ್ಥಿರ (ಘಟ್ಟಿ) ವಾಗುವದರಿಂದ ಮೂಢ ಗರ್ಭವು ಕಷ್ಟದಿಂದ ಪತನವಾಗುತ್ತದೆ

ಸ್ವಾಭಾವಿಕ ಪ್ರಸವಾರಂಭ ಲಕ್ಷಣವು:—

ಜಾತೇಹಿಶಿಥಿಲೇಕುಕ್ಷೌಮುಕ್ತೇಹೃದಯಬಂಧನೇ ॥
ಸಶೂಲೇಜಘನೇನಾರೀಜ್ಞೇಯಾಸಾತುಪ್ರಜಾಯಿನೀ ॥

(ಸುಶ್ರುತ॥ ಶಾ॥ ಅ ೧೦ ಶ್ಲೋ ೬)

ಹೊಟ್ಟೆಯು ಜೋಲು ಬೀಳುವಂತೇ ಆಗುತ್ತಿರಲು (ಶಿಥಿಲ) ಹೃದಯ ಸ್ಥಾನದಲ್ಲಿ ಗರ್ಭಾಶಯಕ್ಕೆ ಅಂಟಿಕೊಂಡ ಧಮನಿಗಳ ಬಂಧನವು ಸಡಿಲಾದ ನಂತರ, ಕಟಿ ಪ್ರದೇಶದಲ್ಲಿ ಶೂಲೆ ಉತ್ಪನ್ನವಾಗಲು ಗರ್ಭಿಣಿಯು ಪ್ರಸವಿ ಸುತ್ತಾಳೆಂದು ತಿಳಿಯಬೇಕು

ತತ್ರೋಪಸ್ಥಿತಪ್ರಸವಾಯಾಃ ಕಟೀಪೃಷ್ಠಂ ಪ್ರತಿಸಮಂತಾದ್ವೇ
ದನಾಭವತ್ಯಭೀಕ್ಷ್ಣಂ ಪುರೀಷಪ್ರವೃತ್ತಿರ್ಮೂತ್ರಂಪ್ರಸಿಚ್ಯತೇ
ಯೋನಿಮುಖಾತ್ ಶ್ಲೇಷ್ಮಾಚ ॥

(ಸುಶ್ರುತ। ಶಾರೀರ। ಅ ೧೦ ಸೂ ೭)

ಪ್ರಸವ ಸಮೀಪಿಸಿದ ಸ್ತ್ರೀಯಳಿಗೆ ಟೊಂಕ ಪೆನ್ನಿನಲ್ಲಿ ಎಲ್ಲಾ ಕಡೆ ವೇದನೆಯಾಗುತ್ತದೆ. ತೀವ್ರವಾದ ಮಲ ಪ್ರವೃತ್ತಿಯೂ ಮೂತ್ರ ಪ್ರವರ್ತನೆಯೂ ಜನನೇಂದ್ರಿಯದಿಂದ ಶ್ಲೇಷ್ಮ (ಜಿಗುಟಾದ ಲೋಳೆಯಂಥಪದಾರ್ಥ) ಹೊರಬೀಳೋಣವೂ ಮೊದಲಾದವುಗಳು ಸಂಭವಿಸುತ್ತವೆ.

ಮೂಢಗರ್ಭವು ತಡೆದುನಿಲ್ಲುವ ಸ್ಥಿತಿ

ಫಲವಿವವೃಂತಬಂಧನಾದಭಿಘಾತವಿಶೇಷೈಃ; ಸವಿಮುಕ್ತ
ಬಂಧನೋ ಗರ್ಭಾಶಯಮುತಿಕ್ರಮ್ಯ ಯಕೃತ್ ಪ್ಲೀಹಾಂತ್ರ
ವಿವರೈರವಸ್ರಂಸಮಾನಃ ಕೋಷ್ಠಸಂಕ್ಷೋಭಮಾಪಾದಯತಿ॥

(ಸುಶ್ರುತ । ನಿ. ಅ. ೪ ಸೂ ೧೩)

ಪೆಟ್ಟು ತಾಗಿದ ಫಲವು ಹೇಗೆ ತುಂಬಿನಿಂದ ಬೇರ್ಪಡುತ್ತದೆಯೋ, ಅದರಂತೆ ಆಘಾತಾದಿಗಳಿಂದ ಗರ್ಭವು ಸ್ಥಾನಚ್ಯುತಿಯನ್ನುಹೊಂದುತ್ತದೆ. ಚ್ಯುತಿಯನ್ನುಹೊಂದಿದನಂತರ ಹೊರಗೆ ಬರದೆ ಗರ್ಭಾಶಯ ದ್ವಾರದಲ್ಲಿಯೇ ತಡೆಯಲ್ಪಡುತ್ತದೆ. ಗರ್ಭಾಶಯದಿಂದ ವಿಸ್ರಂಸನವಾಗಿ ಹೊರಗೆ ಬರುವ ದ್ವಾರದಲ್ಲಿ ಅಡ್ಡಿಯಾಗುತ್ತದೆ ಅಥವಾ ದ್ವಾರದಲ್ಲಿ ವಿಕೃತ ಕ್ರಮದಿಂದ ಗರ್ಭವು ಹೊರಗೆ ಕೈ ಮೊದಲಾದ ರೀತಿಯಿಂದ ಬಂದು ಸಿಕ್ಕಿಕೊಳ್ಳುತ್ತದೆ. ಗರ್ಭವು ಮೊದಲು ಬಂಧನಾದಿಗಳಿಂದ ವಿಮುಕ್ತವಾಗುತ್ತದೆ ಬಂಧನವೆಂದರೆ ಗರ್ಭಾಶಯಕ್ಕೆ ಪ್ರತಿಬದ್ಧವಾಗಿ ಅಂಟಿಕೊಂಡ ಧಮನೀ ಪೇಶಿಗಳು. ಗರ್ಭಾಶಯಕ್ಕೆ ಸುತ್ತಿಕೊಂಡ ಬಳ್ಳಿಯಂತಿರುವ ಧಮನ್ಯಾದಿಗಳು ಸಡಿಲಾಗಿಬಿಟ್ಟ ಕೂಡಲೇ, ಗರ್ಭವು ಗರ್ಭಾಶಯದಿಂದ ಹೊರಗೆಬರುವ ದ್ವಾರಕ್ಕೆ ಬರುತ್ತದೆ. ಪೂರ್ಣ ಹೊರಗೆ ಬರಲು ಸಾಧ್ಯವಿಲ್ಲದೆ ದ್ವಾರದಲ್ಲಿ ಸಿಕ್ಕಿಕೊಳ್ಳುತ್ತದೆ. ಧಮನ್ಯಾದಿಗಳ ಹಿಡಿತ (ಬಂಧನ) ತಪ್ಪಿದ ಕೂಡಲೇ ಕರುಳಿನ ಮಧ್ಯ ಪೊಳ್ಳು ಭಾಗದಲ್ಲಿರುವ ಗರ್ಭಾಶಯವನ್ನು ಒತ್ತುತ್ತವೆ ಆದ್ದರಿಂದ ಗರ್ಭವು ಗರ್ಭಾಶಯದಿಂದ ಸರಿಯುತ್ತದೆ ಹೀಗೆ ವಿರುದ್ಧ ಕ್ರಮದಿಂದ ಪೂರ್ಣ ಹೊರಗೆ ಬರದೇ ಇರುವದರಿಂದ ಕೋಷ್ಠವು ಪ್ರಕ್ಷುಬ್ಧವಾಗುತ್ತದೆ.

ಉದಾ:— ನೀರಿನಲ್ಲಿಳಿದ ಮನುಷ್ಯನು ಹೊರಗೆ ಬರದೆ ಅಲ್ಲಿಯೇ ಅತ್ತಿಂದಿತ್ತ ಚಲಿಸುತ್ತಿದ್ದರೆ, ತೆರೆಗಳೆದ್ದ ಜಲಾಶಯವು ಹೇಗೆ ಪ್ರಕ್ಷೋಭ ಹೊಂದುವದೋ ಅದರಂತೆಯೆಂದು ತಿಳಿಯಬೇಕು.

ಕೋಷ್ಠ ಲಕ್ಷಣವು:—

ಸ್ಥಾನಾನ್ಯಾಮಾಗ್ನಿ ಪಕ್ವಾನಾಂ ಮೂತ್ರಸ್ಯರುಧಿರಸ್ಯ ಚ ॥
ಹೃದುಂಡುಕಂ ಫುಫ್ಫುಸಶ್ಚ ಕೋಷ್ಠ ಇತ್ಯಭಿಧೀಯತೆ ॥

ಆಮಾಶಯ, ಅಗ್ನ್ಯಾಶಯ, ಪಕ್ವಾಶಯ, ಮೂತ್ರಾಶಯ ಇವುಗಳ ಸ್ಥಾನಗಳೂ ಹೃದಯ, ಉಂಡುಕ, ಫುಫ್ಫುಸ ಮೊದಲಾದವುಗಳು. ಇವೆಲ್ಲವುಗಳ ಸ್ಥಾನಕ್ಕೆ "ಕೋಷ್ಠ" ಎಂಬ ಹೆಸರು. ಸ್ತ್ರೀಯರಿಗೆ ಕೋಷ್ಠ ಮಧ್ಯದಲ್ಲಿ ಗರ್ಭಾಶಯವಿರುತ್ತದೆ.

ಕೋಷ್ಠ ಸಂಕ್ಷೋಭದಿಂದ ಗರ್ಭ ನಾಶವು·—

ತಸ್ಯಾಜಠರಸಂಕ್ಷೋಭಾದ್ವಾಯುರಪಾನೊಮೂಢಃ ಪಾರ್ಶ್ವ ಬಸ್ತಿಶೀರ್ಷೋದರಯೋನಿಶೂಲಾನಾಹಮೂತ್ರಸಂಗಾನಾವು ನ್ಯತಮಮಾಪಾದ್ಯಗರ್ಭಂಚ್ಯಾವಯತಿ (ವ್ಯಾಪಾದಯತಿ) ತರುಣಂಶೋಣಿತಸ್ರಾವೇಣ,ತಮೇವಕದಾಚಿದ್ವಿವೃದ್ಧಮುಸಮ್ಯ ಗಾಗತಮುಪತ್ಯಪಥಮನುಪ್ರಾಪ್ತಮನಿರಸ್ಯನೂನಂ ತ್ರಿಗುಣಾ ಪಾನಸಂಮೋಹಿತಂ ಗರ್ಭಂ ಮೂಢಗರ್ಭವಿತ್ಯಾಚಕ್ಷತೆ ॥

(ಸುಶ್ರುತ॥ ನಿದಾನ॥ ೮ ೮ ಸೂ ೩)

ಗರ್ಭಿಣಿಯ ಜಠರ (ಹೊಟ್ಟೆ) ಕ್ಷೋಭದಿಂದ ಅಪಾನವಾಯುವು ಗತಿನಿರುದ್ಧವಾಗಿ ಬಸ್ತಿಯ ಆದಿಭಾಗ ಹೊಟ್ಟೆ ಜನನೇಂದ್ರಿಯ ಶೂಲೆ ವಾಯು ನಿರೋಧ, (ಆನಾಹ) ಮೂತ್ರ ನಿರೋಧ ಇವುಗಳನ್ನುಂಟು ಮಾಡುತ್ತದೆ ಪ್ರಬಲವಾಗಿ ಇವುಗಳಲ್ಲಿ ಒಂದು, ಎರಡು ಅಥವಾ ಎಲ್ಲವುಗಳೂ ಸಂಭವಿಸಬಹುದು. ಇದರಿಂದ ಗರ್ಭವು ನಾಶಹೊಂದುವದು ಗರ್ಭವು ಪೂರ್ಣ ಸ್ಥಿತಿಯಲ್ಲಿರದಿದ್ದರೆ, ಕಷ್ಟವಿಲ್ಲದೆ ಸ್ರಾವವಾಗಿ ಹೋಗುತ್ತದೆ ಒಂದು ವೇಳೆ ಗರ್ಭವು ಅಂಗಾಂಗಗಳಿಂದ ವೃದ್ಧಿ ಹೊಂದಿದ್ದರೆ ಹೊರಗೆ ಬರುವದಿಲ್ಲ. ಯೋಗ್ಯವಾಗಿ ಬರದೆ ವಕ್ರವಾಗಿ ಬರುವದರಿಂದ ಯೋನಿ ದ್ವಾರಕ್ಕೆ ಬಂದು ಹೊರಗೆಬೀಳದೇ, ಅಪಾನವಾಯುವಿನ ವಿಗುಣ (ಪ್ರಕೋಪ) ತೆಯಿಂದ ತಡೆಯುವದರಿಂದ ಮೂಢ ಗರ್ಭವೆಂದು ಹೇಳುತ್ತಾರೆ.

ಮೂಢಗರ್ಭದ ಪ್ರಕಾರಗಳು

ತತಃಸಂಕೀಲಃ ಪ್ರತಿಖುರೋಬೀಜಕಃ ಪರಿಘಇತಿ।ತತ್ರಊರ್ಧ್ವ ಬಾಹುಶಿರಃ ಪಾದೋಯೋ ಯೋನಿಮುಖಂ ನಿರುಣದ್ಧಿ ಕೀಲ ಇವಸಂಕೀಲಃ, ನಿಃಸೃತಹಸ್ತಪಾದಶಿರಾಃ ಕಾಯಸಂಗೀಪ್ರತಿ ಖುರಃ, ಯೋನಿರ್ಗಚ್ಛತ್ಯೇಕಶಿರೋಭುಜಃ ಸಬೀಜಕಃ, ಯಸ್ತು

ಪರಿಘಇವಯೋನಿಮುಖಮಾವೃತ್ಯತಿಷ್ಠತಿಸಪರಿಘಃ, ಇತಿಚ ತುರ್ವಿಧೋಭವತೀತ್ಯೇಕೇಭಾಷಂತೇ॥ ತತ್ತು ನಸಮ್ಯಕ್, ಕಸ್ಮಾತ್? ಸಯದಾವಿಗುಣಾನಿಲಪ್ರಪೀಡಿತೋಽಪತ್ಯಪಥಮನೇಕಧಾಪ್ರಪದ್ಯತೆ ತದಾಸಂಖ್ಯಾಹೀಯತೆ॥ (ಸು| ನಿ| ಅ ೪ ಸೂ ೪)

ಗರ್ಭಾಶಯ ದ್ವಾರದಲ್ಲಿ ಸಿಕ್ಕಿಕೊಂಡು ಹೊರಗೆ ಬರದೆ ಕಷ್ಟದಾಯಕವಾದ ಮೂಢ ಗರ್ಭವು ನಾಲ್ಕು ಪ್ರಕಾರದ್ದಾಗಿರುತ್ತವೆ. **ಸಂಕೀಲ, ಪ್ರತಿಖುರ, ಬೀಜಕ, ಪರಿಘ** ಎಂಬ ಹೆಸರುಳ್ಳವುಗಳು.

೧. ಸಂಕೀಲ:— ಯಾವ ಮೂಢ ಗರ್ಭದಲ್ಲಿ ಶಿಶುವಿನ ಎರಡೂ ಕಾಲು ಕೈಗಳು ತಲೆಗೆ ಹೊಂದಿಕೊಂಡು, ಊರ್ಧ್ವ (ಮೇಲಕ್ಕೆ) ವಾಗಿರುವದೋ ಅದು ಸಂಕೀಲವು. ಕೀಲದಂತೆ (ಬೆಣೆ) ಗರ್ಭ ನಿರ್ಗಮನ ದ್ವಾರವನ್ನು ಬಂದು ಮಾಡುವದರಿಂದ ಅದಕ್ಕೆ ಸಂಕೀಲವೆಂಬ ಹೆಸರು.

ಸಂಕೀಲದಲ್ಲಿ:— ಶಿಶುವಿನ ತಲೆಯು ಗರ್ಭಾಶಯದ ಮೇಲ್ಭಾಗದಲ್ಲಿದ್ದು, ಅದಕ್ಕೆ ಎರಡು ಕಾಲು ಕೈಯ್ಗಳು ತಾಗಿಕೊಂಡಿರುತ್ತವೆ ಹೀಗಿರುವದರಿಂದ ಗರ್ಭಾಶಯದ ದ್ವಾರದಲ್ಲಿ ಶಿಶುವಿನ ಮುಕುಳಿ (ಸ್ಫಿಚ) ಸಿಕ್ಕಿಕೊಳ್ಳುತ್ತದೆ. ತಿಕವು (ಸ್ಫಿಚ) ಹೊರಗೆ ಬರುವಷ್ಟು ಗರ್ಭಾಶಯದ ದ್ವಾರವು ವಿಸ್ತಾರವಾಗುವದಿಲ್ಲ. ಆದ್ದರಿಂದ ಬೆಣೆಯಂತೆ ಸ್ಥಿರವಾಗುತ್ತದೆ. ಹೀಗಿರುವದರಿಂದ ಸಂಕೀಲವು ಯೋನಿ ದ್ವಾರದ ಮುಖವನ್ನು ಬಂದು ಮಾಡುತ್ತದೆ.

೨. ಪ್ರತಿಖುರ:— ಕೈಕಾಲು ತಲೆಗಳು ಕೂಡಿದ ಗುಂಪು, ಯೋನಿ ದ್ವಾರದಲ್ಲಿ ಸಿಕ್ಕಿಕೊಳ್ಳುವದು; ಪ್ರತಿಖುರವೆಂಬ ಹೆಸರಿನ ಮೂಢ ಗರ್ಭವು. ದೇಹದ ಮೇಲ್ಭಾಗ ದೊಡ್ಡದಿರುವದರಿಂದ ಹೊರಗೆ ಬರುವದಿಲ್ಲ.

ಪ್ರತಿಖುರದಲ್ಲಿ:— ಕೈಕಾಲುಗಳು ತಲೆಗೆ ಹತ್ತಿಕೊಂಡು, ಕೆಳಮುಖವಾಗಿ ಗರ್ಭ ದ್ವಾರದಲ್ಲಿ ಬರುತ್ತದೆ ಒಬ್ಬ ಮನುಷ್ಯನು ನಿಂತುಕೊಂಡು ಮುಂದೆ ಬಗ್ಗಿ ಭೂಮಿಗೆ ತನ್ನ ಎರಡೂ ಕೈಗಳನ್ನು ಹಚ್ಚಿ ನಿಂತರೆ, ಕೆಳಭಾಗವು ಸಣ್ಣದಿದ್ದು ಮೇಲ್ಭಾಗವು ವಿಸ್ತಾರ (ದೊಡ್ಡ) ದ್ದಾಗಿರುವದು ಸ್ಪಷ್ಟ

ವಾಗುತ್ತದೆ. ಅಥವಾ "ಖುರ"ವೆಂದರೆ ದನವಿನ ಕಾಲಿನ ಕೊಳಗ. ಅದು ಭೂಮಿಯಲ್ಲಿಡುವಭಾಗವು ದೊಡ್ಡದಾಗಿಯೂ ಮೇಲ್ಭಾಗವು ಸಣ್ಣದಾಗಿಯೂ ಇರುತ್ತದೆ. "ಪ್ರತಿಖುರ" ವೆಂದರೆ ಈ ಖುರ (ಗೊರಸು)ದ ಮೇಲ್ಭಾಗವನ್ನು ಕೆಳಗೆ (ವಿರುದ್ಧ) ಮಾಡಿ ಇಡುವದು. ಹೀಗಿಟ್ಟರೆ ಭೂಮಿಯಲ್ಲಿಯ ಭಾಗವು ಸಣ್ಣದಾಗಿಯೂ ಮೇಲ್ಭಾಗವು ದೊಡ್ಡದಾಗಿಯೂ ಆಗುತ್ತದೆ. ಇದರಂತೆಯೇ ಪ್ರತಿಖುರ ಮೂಢಗರ್ಭವು ಇರುತ್ತದೆ

೩. ಬೀಜಕ:— ಯಾವ ಗರ್ಭವು, ಒಂದು ಕಾಲು ತಲೆ, ಅಥವಾ ಒಂದು ಕೈ ತಲೆ, ಕೂಡಿಕೊಂಡು ಹೊರಗೆ ಬರುತ್ತದೆಯೋ ಅದಕ್ಕೆ ಬೀಜಕ ಮೂಢ ಗರ್ಭವೆಂಬ ಹೆಸರು. "ಏಕಶಿರೋಭುಜಃ" ಎಂದು ನಿರ್ದೇಶಿಸಿರುವದರಿಂದ, ಒಂದು ಕೈ, ಅಥವಾ ಒಂದು ಕಾಲು, ಬಂದರೂ ಸಹ ಕಷ್ಟತರವೆಂದು ತಿಳಿಯಬೇಕು. ಈ ಒಂದೊಂದು ಅವಯವಗಳಿಂದ, ಯುಕ್ತವಾದ ಶಿರ (ತಲೆ) ವೆಂದು ತಿಳಿಸಲು ಶಿರ ಶಬ್ದದ ಗ್ರಹಣ ಮಾಡಿದ್ದಾರೆ. ಕೇವಲ ತಲೆಯು ಒಂದೇ ಬರುವದು ಸ್ವಾಭಾವಿಕ ಪ್ರಸವವೆಂದು ಹಿಂದೆ ವಿವರಿಸಲ್ಪಟ್ಟಿದೆ.

ಬೀಜಕದಲ್ಲಿ:— ಒಂದು ಕೈ ತಲೆ ಹೊರಗೆ ಒಂದರಿ, ಮತ್ತೊಂದು ತೋಳಿನಿಂದ ಅಡ್ಡಿಯಾಗುತ್ತದೆ. ಒಂದು ಕಾಲು ತಲೆ ಹೊರಗೆ ಬಂದರೆ, ಮತ್ತೊಂದು ಕಾಲಿನಿಂದ ತಡೆಯಲ್ಪಡುವದು. ಕೇವಲ ಒಂದು ಕೈ ಹೊರಗೆ ಬಂದರೆ, ಗರ್ಭವು (ಶಿಶು) ಅಡ್ಡ ವಿರುವದೆಂದು ತಿಳಿಯಬೇಕು. ಒಂದು ಕಾಲು ಮಾತ್ರ ಬಂದರೂ ಅಡ್ಡವಾಗಿರುವದೆಂದು ತಿಳಿಯಬೇಕು.

೪. ಪರಿಘ:— ಯಾವ ಮೂಢ ಗರ್ಭವು ಪರಿಘದಂತೆ (ಅಗಳಿ) ಗರ್ಭಾಗಮನ ದ್ವಾರವನ್ನು ಬಂದು ಮಾಡಿರುತ್ತದೆಯೋ, ಅದು ಪರಿಘವೆಂಬ ಮೂಢ ಗರ್ಭವು. "ಪರಿಘೋಽರ್ಗಲದಂಡಃ"

ನಾಗಾರ್ಜುನೀಯಮತದಲ್ಲಿ, ಪರಿಘವು:—

ಯೋನಿಮಾವೃತ್ಯ ಯಸ್ತಿಷ್ಠೇತ್ ಪರಿಘೋಗೋಪುರಂಯಥಾ॥

ಯೋನಿ ದ್ವಾರವನ್ನು ಆವರಿಸಿ ಯಾವ ಗರ್ಭವು ಗೋಪುರದಂತೆ ಇರುತ್ತದೆಯೋ, ಅದಕ್ಕೆ ಪರಿಘವೆಂಬ ಹೆಸರು. ಗರ್ಭ ದ್ವಾರಕ್ಕಿಂತಲೂ ದೊಡ್ಡದಾಗಿ ಹೊರಗೆ ಬರದೆ ಗೋಪುರದಂತೇ ಇರುತ್ತದೆ ಹಿಂದೆ ಹೇಳಿದ ಲಕ್ಷಣವು (ಅರ್ಗಲದಂಡ) ಎನ್ನುವದರಿಂದ ಅಗಳಿಯಂತೆ ಅಡ್ಡವಾಗಿ ಗರ್ಭ ದ್ವಾರವನ್ನು ತಡೆಯುವದೆಂದು ತಿಳಿಯಬೇಕು.

ಗೋಪುರದಂತೆ ಎಂದು ತಿಳಿದಾಗ ಗೋಪುರದಂತೆ ವಿಸ್ತಾರ (ದೊಡ್ಡ) ವಿದ್ದು, ಗರ್ಭ ನಿರ್ಗಮ ದ್ವಾರದಲ್ಲಿ ಬರದೇ ಇರುವದೆಂದು ತಿಳಿಯಬೇಕು. ಹೀಗೆ ಎರಡೂ ಲಕ್ಷಣಗಳನ್ನು ಸಮನ್ವಯಿಸಿ ನೋಡಬೇಕು ಈ ರೀತಿಯಾಗಿ ಗರ್ಭದ ಗತಿ ವೈಚಿತ್ರ್ಯಗಳಿಂದ ನಾಲ್ಕು ವಿಧವಾದ ಮೂಢ ಗರ್ಭವೆಂದು ಕೆಲವರು ಹೇಳುತ್ತಾರೆ.

ಮೂಢಗರ್ಭದಲ್ಲಿಯ ವಿಶೇಷವು

ಮೂಢ ಗರ್ಭವು ನಾಲ್ಕು ವಿಧವಾಗಿರುವದೆಂದು ಕೆಲವರು ಅನ್ನುತ್ತಾರೆ. ಅದು ಸಮಂಜಸವಾದದ್ದಲ್ಲ. ಯಾಕಂದರೆ ಮೂಢ ಗರ್ಭವೆಂದರೆ ವಿಚಿತ್ರ ವಿಕೃತಗತಿಯುಳ್ಳ ಗರ್ಭವು. ಗತಿ ವಿಶೇಷ ದೋಷ ಪ್ರಕೋಪ ಇವುಗಳಿಂದ ಗರ್ಭ ಗತಿಯು ವಿರುದ್ಧವಾಗುವದು. ಗರ್ಭ ನಿರ್ಗಮನ ಗತಿಯ ಲಕ್ಷಣದಿಂದಲೇ ಆವಾವ ಮೂಢ ಗರ್ಭವನ್ನು ಹೇಳಿರುವದರಿಂದ, ಗರ್ಭ ಗತಿಯ ವಿಲಕ್ಷಣವೇ ಮೂಢ ಗರ್ಭವು. ಮೂಢ ಗರ್ಭವೆಂಬ ನಾಲ್ಕು ವಿಧವಾದ ಗರ್ಭವು, ಉತ್ಪನ್ನವಾಗುವದೆಂದು ಯಾರೂ ತಿಳಿಯಬಾರದು. ಮೂಢ ಗರ್ಭವಾದರೂ, ತೀವ್ರಪ್ರಕೋಪ ಹೊಂದಿದ ವಾಯುವಿನಿಂದ ಪೀಡಿತವಾಗಿ, ಅನೇಕಸಲ ಮೇಲೆ, ಅಡ್ಡ, ವಿಲಕ್ಷಣವಾಗಿ ಚಲಿಸುತ್ತ ಎಷ್ಟೋ ಸಲ ಗರ್ಭ ದ್ವಾರಕ್ಕೆ ಬಂದು ಹೋಗಿ, ಮಾಡುತ್ತದೆ. ಹೀಗಿರುವದರಿಂದ, ಒಮ್ಮೆ "ಸಂಕೀಲ" ಸ್ಥಿತಿಯಲ್ಲಿದ್ದ ಮೂಢ ಗರ್ಭವು ಚಲಿಸಿ, ಗತಿ ವೈಶಿಷ್ಟ್ಯದಿಂದ "ಪ್ರತಿಖುರ" ಲಕ್ಷಣವುಳ್ಳದ್ದಾಗಬಹುದು. ಆದ್ದರಿಂದ ಮೂಢ ಗರ್ಭ ಸಂಖ್ಯೆಯು ನಿಶ್ಚಿತವಲ್ಲವೆಂದು ಸುಶ್ರುತಾಚಾರ್ಯರ ಮತವು. ಮೂಢ ಗರ್ಭದಲ್ಲಿ ಗತಿ ವೈಶಿಷ್ಟ್ಯವೇ ಪ್ರಾಧಾನ್ಯವು.

ಎಂಟುವಿಧವಾದಮೂಢಗರ್ಭಗತಿಯು

ತತ್ರಕಶ್ಚಿತ್ ದ್ವಾಭ್ಯಾಂಸಕ್ಥಿಭ್ಯಾಂ ಯೋನಿಮುಖಂ ಪ್ರತಿಪದ್ಯತೆ; ಕಶ್ಚಿದಾಭುಗ್ನೈಕಸಕ್ಥಿರೇಕೇನ; ಕಶ್ಚಿದಾಭುಗ್ನಸಕ್ಥಿ ಶರೀರಃಸ್ಪಿಗ್ಧೇ ಶೇನತಿರ್ಯಗಾಗತಃ; ಕಶ್ಚಿದುರಃ ಪಾರ್ಶ್ವಪೃಷ್ಠಾನಾಮನ್ಯತ ಮೇನಯೋನಿದ್ವಾರಂ ಪಿಧಾಯಾವತಿಷ್ಠತೆ; ಅಂತಃ ಪಾರ್ಶ್ವಾ ಪವೃತ್ತಶಿರಾಃ ಕಶ್ಚಿದೇಕೇನಬಾಹುನಾ; ಕಶ್ಚಿದಾಭುಗ್ನಶಿರಾ ಬಾಹುದ್ವಯೇನ; ಕಶ್ಚಿದಾಭುಗ್ನಮಧ್ಯೋಽಹಸ್ತಪಾದಶಿರೋ ಭಿಃ; ಕಶ್ಚಿದೇಕೇನಸಕ್ಥ್ನಾಯೋನಿಮುಖಂ ಪ್ರತಿಪದ್ಯತೇ;ಪರೇ ಣಪಾಯುಮ್; ಇತ್ಯಷ್ಟವಿಧಾ ಮೂಢಗರ್ಭಗತಿರುದ್ದಿಷ್ಟಾಸ ಮಾಸೇನ ॥ (ಸುಶ್ರುತ॥ ನಿದಾನ॥ ಅ ೮ ಸೂ ೫)

೧ **ಪ್ರಥಮಗತಿ:**— ಎರಡು ತೊಡೆಗಳು ಕೂಡಿಕೊಂಡು, ಯೋನಿ ದ್ವಾರದ ಮುಖದಲ್ಲಿ ಬರುವದು.

೨ **ದ್ವಿತೀಯಗತಿ:**— ಒಂದು ತೊಡೆಯು ವಕ್ರವಾಗಿ (ಅಡ್ಡವಾಗಿ) ನಿಂತು ಮತ್ತೊಂದು ತೊಡೆಯು ದ್ವಾರದಲ್ಲಿ ಬರುವದು.

೩ **ತೃತೀಯಗತಿ:**— ತೊಡೆಗಳು ಶರೀರವು ಅಡ್ಡವಾಗಿ, ಒಂದು ಪಕ್ಕದ ತಿಕ (ಪೃಷ್ಠ) ದಿಂದ ಯೋನಿ ಮುಖವು ತಡೆಯಲ್ಪಡುತ್ತದೆ.

೪ **ಚತುರ್ಥಗತಿ:**—ಒಮ್ಮೆ ಎದೆ ಪಕ್ಕ (ಎಡಪಾರ್ಶ್ವ-ಬಲಪಾರ್ಶ್ವ) ಬೆನ್ನು ಇವುಗಳಲ್ಲಿ ಯಾವದಾದರೊಂದರಿಂದ,ಯೋನಿ ಮಾರ್ಗವನ್ನು ಬಂದು ಮಾಡಿ ತಡೆದು ನಿಲ್ಲುತ್ತದೆ.

೫ **ಪಂಚಮಗತಿ:**— ತಲೆಯನ್ನು ಒಂದು ಪಕ್ಕದಲ್ಲಿ (ಪಾರ್ಶ್ವ) ಹೊರಳಿಸಿ ಇದ್ದು, ಒಂದೇ ಕೈ ಹೊರಗೆ ಬರುತ್ತದೆ.

೬ **ಷಷ್ಠಗತಿ:**— ತಲೆಯು ಅಡ್ಡವಾಗಿ (ಮುಖವು) ನಿಂತು ಎರಡೂ ಕೈಗಳು ದ್ವಾರದಲ್ಲಿ ಬರುತ್ತವೆ.

೭ ಸಪ್ತಮಗತಿ:— ಮಧ್ಯ ಭಾಗವು ಬಗ್ಗಿದ್ದಾಗಿ, ಹಸ್ತ, ಪಾದ, ತಲೆಗಳಿಂದ ಕೂಡಿ ಯೋನಿ ದ್ವಾರದಲ್ಲಿ ಬಂದು ಸಿಕ್ಕಿಕೊಳ್ಳುತ್ತದೆ. ಈ ಪ್ರಕಾರವಾದ ೭ ನೇ ಗತಿಯು ಅಸಾಧ್ಯವಾದ ಮೂಢ ಗರ್ಭಗತಿಯು.

೮ ಅಷ್ಟಮಗತಿ:— ಒಂದು ಕಾಲು ಯೋನಿ ಮಾರ್ಗದಲ್ಲಿ ಬರುತ್ತದೆ. ಎರಡನೇ ಕಾಲಿನಿಂದ ಗುದ ಮಾರ್ಗವನ್ನು ಬಂದು ಮಾಡುತ್ತದೆ ಈ (೮) ನೇ ಮೂಢ ಗರ್ಭಗತಿಯು ಅಸಾಧ್ಯವಾಗಿರುವದು. ಸಾಮಾನ್ಯವಾಗಿ ಮೂಢ ಗರ್ಭದ ಗತಿಗಳನ್ನು ಅನುಲಕ್ಷಿಸಿ, ಎಂಟು ವಿಧವೆಂದು ನಿರ್ಣಯಿಸಿದ್ದಾರೆ ಇನ್ನು ಅನೇಕ ಪ್ರಕಾರವಾಗಿ, ಅಡ್ಡವಾಗಿ, ಪಾರ್ಶ್ವದಿಂದ ಕುತ್ತಿಗೆಯಿಂದ ತಡೆದು, ತೊಡೆಯು ಅಡ್ಡವಾಗಿ, ಮೊಳಕಾಲು ಸಿಕ್ಕಿಕೊಂಡು, ಮೊದಲಾದ ರೀತಿಯ ಗತಿ ವಿಶೇಷಗಳಿಂದ ಮೂಢ ಗರ್ಭಗಳು ಅಸಂಖ್ಯವಾಗಿರುವವು ಸಾಮಾನ್ಯತಃ ಎಂಟು ಮೂಢ ಗರ್ಭ ಸ್ಥಿತಿಗಳು ದರ್ಶಿಸಲ್ಪಟ್ಟಿರುತ್ತವೆ.

ಮೂಢ ಗರ್ಭಗಳ ಸಾಧ್ಯಾಸಾಧ್ಯ ವಿಚಾರ:—

ತತ್ರದ್ವಾವಂತ್ಯಾವಸಾಧ್ಯೌಮೂಢಗರ್ಭೌ, ಶೇಷಾನಪಿವಿಪರೀತೇಂದ್ರಿಯಾರ್ಥಾಕ್ಷೇಪಕ ಯೋನಿಭ್ರಂಶಸಂವರಣಮುಕ್ಕಲ್ಲ ಶ್ವಾಸಕಾಸಭ್ರಮನಿಪೀಡಿತಾನ್ ಪರಿಹರೇತ್॥ (ಸು॥ನಿ॥ಅಲಸೂ೬)

ಅಂತ್ಯದ್ವಾದ ಕಡೇ ಎರಡು (೭-೮)ಮೂಢ ಗರ್ಭ ಗತಿಗಳು ಅಸಾಧ್ಯವಾಗಿರುತ್ತವೆ. ಉಳಿದ (೬) ಮೂಢ ಗರ್ಭಗತಿಗಳು ವಿಪರೀತೇಂದ್ರಿಯಾರ್ಥಗಳಿಂದ ಕೂಡಿದ್ದರೆ, (ಮೂಗು ವಾಸನೆಯನ್ನು ಯೋಗ್ಯ ಗ್ರಹಿಸದೆ, ಅಥವಾ ಸುವಾಸನೆಯನ್ನು ದುರ್ವಾಸನೆಯನ್ನಾಗಿ ತಿಳಿಯುವದು, ಇದರಂತೆ ಎಲ್ಲ ಇಂದ್ರಿಯಗಳನ್ನು ತಿಳಿಯಬೇಕು.) ಪ್ರಕೋಪ ಹೊಂದಿದ ಆಕ್ಷೇಪಕಾದಿ ವಾತವಿಕಾರವುಳ್ಳ, ಯೋನಿ ಭ್ರಂಶವುಳ್ಳ, ಯೋನಿದ್ವಾರ ಆಕುಂಚನವಾಗೋಣ, ಮುಕ್ಕಲ್ಲವೆಂಬ ವಾಯುಶೂಲೆ, ಶ್ವಾಸ, ಕಾಸ, ಭ್ರಮ, (ಬಡ ಬಡಿಸೋಣ) ಇವುಗಳಿಂದ ಕೂಡಿ ಪೀಡಿತವಾದ, "ಉಪದ್ರವ" ರೂಪವಾದ ವ್ಯಾಧಿಗಳುಂಟಾದರೆ, ಅಂಥಾ ಈ (೬) ಮೂಢ ಗರ್ಭಗಳು ಸಹ ಚಿಕಿತ್ಸೆಗೆ, ಅಸಾಧ್ಯವೆಂದು ತಿಳಿಯಬೇಕು.

ಅಸಾಧ್ಯ ಮೂಢಗರ್ಭವುಳ್ಳ ಗರ್ಭಿಣೀ ಲಕ್ಷಣವು

ಪ್ರವಿಧ್ಯತಿಶಿರೋಯಾತುಶೀತಾಂಗೀನಿರಪತ್ರಪಾ ॥
ನೀಲೋದ್ಧತಶಿರಾಹಂತಿಸಾ ಗರ್ಭಂ ಸಚತಾಂ ತಥಾ ॥
(ಸು। ನಿ। ಅ. ೪ ಸೂ ೧೧)

ಯಾವ ಗರ್ಭಿಣಿಯ ತಲೆಯು ಕೆಳಗೆ ಬಗ್ಗಿರುತ್ತದೆಯೋ, ಅವಯವಗಳೆಲ್ಲ ತಣ್ಣಗಾಗಿ ದೇಹದಲ್ಲಿ ಎಚ್ಚರಿಕೆಯಿಲ್ಲದ್ದರಿಂದ ನಾಚಿಕೆ ಇಲ್ಲದೇ ಇರೋಣವು, ನೀಲವರ್ಣದ ಶಿರಗಳು ಗರ್ಭಾಶಯ ಸ್ಥಾನದಲ್ಲಿ ಮೇಲೆ ಸ್ಪುಟವಾಗಿ ಎದ್ದು ಕಾಣುತ್ತಿರುವದೋ ಈ ಮೊದಲಾದ ಲಕ್ಷಣವುಳ್ಳ ಗರ್ಭಿಣಿಯ ಗರ್ಭವು ನಾಶಹೊಂದುತ್ತದೆ. ಇಂಥ ನಾಶಹೊಂದಿದ ಗರ್ಭವು ಗರ್ಭಿಣಿಯನ್ನು ನಾಶಪಡಿಸುತ್ತದೆ

ಮೃತಗರ್ಭ ಲಕ್ಷಣವು

ಗರ್ಭಾಸ್ಪಂದನವಮಾವೀನಾಂ ಪ್ರಣಾಶಃ ಶ್ಯಾವಪಾಂಡುತಾ
ಭವತ್ಯುಚ್ಛ್ವಾಸಪೂತಿತ್ವಂ ಶೂಲಂ ಚಾಂ ತರ್ಮೃತೆಶಿಶೌ ॥
(ಸುಶ್ರುತ। ನಿ। ಅ. ೪ ಶ್ಲೋ. ೧೩)

ಗರ್ಭದ ಸ್ಪಂದನೆಯಾಗದೇ ಇರೋಣ, ಹಡೆಯುವ ಬೇನೆಯು (ಆವೀ) ಉತ್ಪನ್ನವಾಗದಿರೋಣ, ಗರ್ಭಿಣಿಯು ನಿಸ್ತೇಜವಾಗೋಣ, ಬೂದಿ ಗೆಂಪು ಬಿಳೀ ವರ್ಣವುಂಟಾಗೋಣ, ಶ್ವಾಸವು ದುರ್ಗಂಧವುಳ್ಳದ್ದು, ಪೀಡನೆಯಾಗುವದು, ಮೊದಲಾದವುಗಳು **"ಶಿಶುವು ಗರ್ಭಾಶಯದಲ್ಲಿ ಮೃತವಾದರೆ"** ಇವೆಲ್ಲ ಲಕ್ಷಣಗಳು ಸಂಭವಿಸುತ್ತವೆ

ಅನ್ಯಮತವು:— ಒಳಗೆ ಮೃತವಾದಗರ್ಭವು ಉಬ್ಬಿದ ಬಸ್ತಿಯಂತೆ ತಡೆಯಲ್ಪಡುತ್ತದೆ. ಹೀಗೆ ತಡೆಯೋಣದರಿಂದ ಸ್ತ್ರೀಯ ಹೊಟ್ಟೆಯು ಅತ್ಯಂತವಾಗಿ ಜಡವಾಗುತ್ತದೆ. (ಅನಾಹ) ಅವಯವಗಳು ಕೀಳಲ್ಪಡುವಂತೆ ಆಗುತ್ತವೆ. ಮೂತ್ರಾಶಯಬಸ್ತಿ ಸ್ಥಾನವು ಒಡೆದಂತೆಯಾಗುತ್ತದೆ. ಕ್ಲೋಮ, ಪ್ಲೀಹ, ಯಕೃತ್, ಪುಪ್ಫುಸ, ಹೃದಯ, ಇವುಗಳು ಅತ್ಯಂತವಾಗಿ ಗರ್ಭ

ದಿಂದ ಪೀಡೆಹೊಂದಿದವುಗಳಾಗಿ ಮೇಲೇರಿದವುಗಳಾಗುತ್ತವೆ. ಆಗ ಗರ್ಭಿಣೀ ಸ್ತ್ರೀಯು ನಿಶ್ಚೇಷ್ಟಿತಳಾಗುತ್ತಾಳೆ. ಮೋಹಹೊಂದು (ಎಚ್ಚರಗಪ್ಪು) ತ್ತಾಳೆ. ಅಥವಾ ಕಷ್ಟದಿಂದ ಶ್ವಾಸಗತಿ ನಿರೋಧವಾಗುವದರಿಂದ ಬಹಳೇ ತ್ರಾಸಾಗಿ ಶ್ವಾಸೋಚ್ಛ್ವಾಸವಾಗುತ್ತದೆ. ಆ ಶ್ವಾಸವು ಬಹಳ ದುರ್ಗಂಧವುಳ್ಳದ್ದಿರುತ್ತದೆ. ಮೈಯಲ್ಲಿ ಬೆವರುಂಟಾಗುತ್ತದೆ. ನಾಲಿಗೆ ತಾಲು ಇವುಗಳು ಒಣಗುತ್ತವೆ. ನಡಗುತ್ತಾಳೆ. ಬಡಬಡಿಸುತ್ತಾಳೆ. ಜೀವವು ತಡೆದು ನಿಲ್ಲುತ್ತದೆ. ಇವೆಲ್ಲ ಲಕ್ಷಣಗಳಿಂದ ವೈದ್ಯನು ಹೊಟ್ಟೆಯಲ್ಲಿ ಮೃತವಾದ ಗರ್ಭಸ್ವರೂಪವನ್ನು ತಿಳಿದುಕೊಳ್ಳಬೇಕು.

ಗರ್ಭಿಣೆಯುಮೃತಳಾಗಿಗರ್ಭವುಜೀವಂತವಿರುವಲಕ್ಷಣವು:—
ಬಸ್ತಮಾರ ನಿಪನ್ನಾಯಾಃ ಕುಕ್ಷೇಃ ಪ್ರಸ್ಪಂದತೇಯದಿ ॥
ತತ್ ಕ್ಷಣಾತ್ ಜನ್ಮಕಾಲೇತಂ ಪಾಟಯಿತ್ವೋದ್ಧರೇದ್ಭಿಷಕ್ ॥

(ಸು॥ ನಿ॥ ಅ. ೮ ಶ್ಲೋ. ೯)

ಆಡನ್ನು ಕೊಲ್ಲುವಂತೆ (ಬಸ್ತಮಾರ) ತತ್‌ಕ್ಷಣವೇ ಮೃತಳಾದ ಗರ್ಭಿಣಿಯ, ಗರ್ಭದ ಆಶ್ರಯವಾದ ಹೊಟ್ಟೆಯಲ್ಲಿಯ ಸ್ಥನವು ಹಾರುತ್ತಿದ್ದರೆ (ಪ್ರಸ್ಪಂದನ)ಗರ್ಭವು ಜೀವಂತವಿದೆಯೆಂದು ತಿಳಿಯಬೇಕು "ಬಸ್ತಮಾರ" ವೆಂದರೆ ಯಜ್ಞದಲ್ಲಿ ಯಾಜ್ಞಿಕರು ಹೋತನ್ನು ಶ್ವಾಸೋಚ್ಛ್ವಾಸವಾಗದಂತೆ ಬಿಗಿಯಾಗಿ ಬಾಯಿಕಟ್ಟಿ, ಅತ್ಯಂತ ಕ್ರೂರ ರೀತಿಯಿಂದ ನಾಶಮಾಡುತ್ತಾರೆ. ಬಾಯಿ ಬಂದು ಮಾಡಿದ ನಂತರ ಒಂದೇ ಕ್ಷಣದಲ್ಲಿ ಒದ್ದಾಡಿ ಸಾಯುತ್ತದೆ. ಇದರಂತೆ ವಿಕೃತ ಗರ್ಭದಿಂದ ಗರ್ಭಿಣಿಯ ಶ್ವಾಸ ಬಂದಾಗಿ, ತತ್‌ಕ್ಷಣ ಸಾಯುವದರಿಂದ "ಬಸ್ತಮಾರ" ಉದಾಹರಣೆಯನ್ನು ಕೊಟ್ಟಿದ್ದಾರೆ. ಹೀಗೆ ಗರ್ಭಿಣಿಯ ಮರಣ ಸಂಭವಿಸಿದಲ್ಲಿ ಕ್ವಚಿತ್ ಗರ್ಭವು ಜೀವಂತವಿರುತ್ತದೆ. ಗರ್ಭಿಣಿಯು ಮೃತಳಾದರೂ ಗರ್ಭಸ್ಥಾನ ಲಕ್ಷಣದಿಂದ (ಹಿಂದೆ ವಿವರಿಸಿದಂತೆ) ಗರ್ಭ ಬದುಕಿರುವದು ನಿಶ್ಚಿತವಾದರೆ, ಗರ್ಭಸ್ಥಾನವನ್ನು ವಿದಾರಣ ಮಾಡಿ ಜೀವಂತವಿರುವ ಶಿಶುವನ್ನು ಹೊರತೆಗೆದು ಬದುಕಿಸಬೇಕು ಇಲ್ಲವಾದರೆ ಆ ಕ್ಷಣವೇ ಗರ್ಭಸ್ಥ ಶಿಶುವು ನಾಶಹೊಂದುವದು. ಗರ್ಭಿಣಿಯು ಮೃತ

ಳಾಗಿರುವದರಿಂದ ಶಸ್ತ್ರಕ್ರಿಯೆಯಿಂದ ಹಾನಿಯೇನೂ ಇಲ್ಲ ಆದರೂ ಗರ್ಭ ಜೀವಂತವಿದ್ದ ಲಕ್ಷಣವನ್ನು ಚನ್ನಾಗಿ ತಿಳಿದುಕೊಳ್ಳದಿದ್ದರೆ ವ್ಯರ್ಥ ಶಸ್ತ್ರ ಕ್ರಿಯೆಯನ್ನುಮಾಡಿ ಶ್ರಮಪಡಬಾರದೆಂದು ನಿಷ್ಕರ್ಷಮಾಡಿದ್ದಾರೆ.

ಸೂಚನೆ:—

ಗರ್ಭಿಣಿಯ ಪ್ರಸೂತಿ ಸಮಯದಲ್ಲಿಯ ಕಠಿಣ, ಅಸಾಧ್ಯ ಪರಿಸ್ಥಿತಿಗ ಳನ್ನು ಸಾಮಾನ್ಯರೂ ತಿಳಿಯಲೆಂದು ವಿವರಿಸಿರುವೆನು. ಅಂಥಸ್ಥಿತಿಯು ತತ್ ಕ್ಷಣ ಮಾರಕವೂ, ತೀವ್ರವೂ ಇರುವದರಿಂದ ತಡಮಾಡದೆ, ಉಪಾಯವನ್ನು ಕೈಕೊಳ್ಳಬೇಕು. ಸುಜ್ಞರಾದವೈದ್ಯರಿಂದಲೇ ಸಾಧ್ಯವಿರುವದರಿಂದ, ಸ್ವಪ್ರ ಯತ್ನ ಅಜ್ಞಪ್ರಯತ್ನಗಳು ಘಾತಕವಾಗಿರುವವು. ಅಸಾಧ್ಯ ಸ್ಥಿತಿಯಂತೂ "ಶಸ್ತ್ರವೈದ್ಯ" ರಿಂದಲೇ ಸಾಧಿಸತಕ್ಕದ್ದು. ಆದ್ದರಿಂದ ವಿಶೇಷ ಗಮನಿಸತಕ್ಕ ವಿಷಯವು. ದುರ್ಬಲ, ಕ್ಷೀಣ, ದೀರ್ಘರೋಗಿಯಾದ ಗರ್ಭಿಣಿಯವಿಷಯದಲ್ಲಿ ಪೂರ್ವದಲ್ಲಿಯೇ ಸುಜ್ಞ ಚಿಕಿತ್ಸಕರನ್ನು ಬರಮಾಡಿಕೊಂಡಿರಬೇಕು. ಅಯು ರ್ವೇದದಲ್ಲಿ ಮೂಢಗರ್ಭಾದಿಗಳನ್ನು ಸಮಸ್ಥಿತಿಗೆತರುವ, ಕ್ರಿಯಾತ್ಮಕಯೋಗ ಗಳನ್ನೂ ಶಸ್ತ್ರಚಿಕಿತ್ಸೆ ಮೊದಲಾದವುಗಳನ್ನೂ ಬಹು ವಿಸ್ತಾರವಾಗಿ ತಿತೀಕ್ಷಾ ಬುದ್ಧಿಯಿಂದ ವಿವರಿಸಿದ್ದಾರೆ. ಅದು ಚಿಕಿತ್ಸಾ ವಿಷಯವಾದ್ದರಿಂದಲೂ, ನುರಿತ ಚಿಕಿತ್ಸಾನುಭವವುಳ್ಳವರಿಂದಲೇ ಸಾಧ್ಯ ಇರುವದರಿಂದ,ಆ ವಿಷಯಗಳ ಉಪಯೋಗ ದೃಷ್ಟಿಯಿಂದ ವಿವರಣೆಯು; ಪ್ರಯೋಜನಕಾರಿಯಲ್ಲವೆಂದು ವಿವರಿಸಿಲ್ಲ. ಓದಿ ತಿಳಕೊಳ್ಳಬೇಕೆನ್ನುವವರು ಸಶ್ರುತದಲ್ಲಿಯ ಮೂಢಗರ್ಭ ಚಿಕಿತ್ಸಾಧ್ಯಾಯವನ್ನುನೋಡಿರಿ. (ಸುಶ್ರುತ॥ ಚಿಕಿತ್ಸಾ॥ ಅ. ೧೫ ನೋಡಿರಿ)

(೧೭) ಗರ್ಭೋದಕ ಉಲ್ಬಗಳಸ್ವರೂಪ

ಗರ್ಭೋದಕ, ಉಲ್ಬಯೋಃ ಸ್ವರೂಪಂ ॥

ಗರ್ಭೋದರುಣದ್ಧಿಸ್ರೋತಾಂಸಿರಸರಕ್ತವಹಾನಿವೈ ॥
ರಕ್ತಾಜ್ಜರಾಯುರ್ಭವತಿ ನಾಡೀಚೈವರಸಾತ್ಮಿಕಾ ॥
(ಸುಶ್ರುತ॥ ಶಾರೀರ॥ ಅ ೪ ಸೂ. ೩೨ ರಲ್ಲಿ ಟೀಕಾ)

ಗರ್ಭವು ಸ್ರೋತಸ್ಸುಗಳನ್ನು ತಡೆಯುತ್ತದೆ. ಆ ಸ್ರೋತಸ್ಸುಗಳು ಯಾವವೆಂದರೆ ರಸ ರಕ್ತಗಳನ್ನು ಒಯ್ಯುವಂಥವುಗಳು. ಗರ್ಭದಿಂದ ತಡೆಯಲ್ಪಟ್ಟ ರಕ್ತವು ಗರ್ಭಕ್ಕೆ ವೇಷ್ಟನವಾಗಿ (ತೆಳ್ಳಗಿನ ಪರದೆಯಂತೆ) "ಜರಾಯು" "ಉಲ್ಬ" ಎಂದು ಹೇಳಿಸಿಕೊಳ್ಳಲ್ಪಡುತ್ತದೆ. ಶಿಶು ಜನನ ನಂತರದಲ್ಲಿ ಈ ತೆಳ್ಳಗಿನ ಪರದೆಯು ಮುದ್ದೆಯಾಗಿ, ಒಳಗೆ ಗರ್ಭೋದಕವನ್ನೆಲ್ಲ ತುಂಬಿ ಬಸ್ತಿ ಆಕಾರದಂತಿದ್ದು ಹೊರಗೆ ಬರುತ್ತದೆ. ಇದಕ್ಕೆ "ನೀರಿನ ಬುಡ್ಡೆ" "ಮಾಷ" ನೊದಲಾದ ವ್ಯವಹಾರಿಕ ಹೆಸರುಗಳು ಇರುತ್ತವೆ. ರಕ್ತದಿಂದ ಉಲ್ಬವು (ಗರ್ಭವೇಷ್ಟನ ಪರದೆ) ಆಗುತ್ತದೆ. ಗರ್ಭ ನಾಡೀ (ಹೊಕ್ಕಳಹುರಿ) ರಸದಿಂದುಂಟಾಗುತ್ತದೆ

ಗರ್ಭೋದಕ

ಪ್ರಸವಕಾಲದ ಆದಿಯಲ್ಲಿ ಅಥವಾ ಪ್ರಸವಾನಂತರದಲ್ಲಿಯೂಕೂಡಾ, ಗರ್ಭಾಶಯದಿಂದ ದ್ರವ ರೂಪವಾದ ನೀರಿನಂಥ ಪದಾರ್ಥವು ಸ್ರವಿಸುತ್ತದೆ. ಇದಕ್ಕೆ "ಗರ್ಭೋದಕವೆಂಬ" ಹೆಸರು. ಇದು ಗರ್ಭಾಶಯದಲ್ಲಿ ಸಂಚಿತವಾಗಿದ್ದು ಪ್ರಸೂತಿಯ ಮೊದಲೂ ನಂತರದಲ್ಲಿಯೂ ಸ್ರವಿಸುತ್ತದೆ "**ಪ್ರಸೇಕಶ್ಚ ಗರ್ಭೋದಕಸ್ಯ**" (**ಚರಕ॥ ಶಾರೀರ॥ ಅ ೮ ಸೂ ೨೬**) ಪ್ರಸವದಲ್ಲಿ ಗರ್ಭೋದಕ ಸ್ರಾವವಾಗುತ್ತದೆ ಎಂದು ಹೇಳಿದ್ದಾರೆ.

ಗರ್ಭದ ಬೆಳವಣಿಗೆಗೆ ಬೇಕಾದ ಸತ್ವರೂಪವಾದ ದ್ರವವನ್ನು, ಧಮನಿಗಳು ಗರ್ಭಕ್ಕೆ ಒದಗಿಸಿಕೊಡುತ್ತವೆ. ಅಸತ್ವದ ಉಪಸ್ನೇಹದಿಂದ ಗರ್ಭವು ಬೆಳೆಯುತ್ತದೆ. ತನ್ನ ನಾಭಿನಾಲ ಲೋಮಬಿದ್ರ (ರೋಮರಂಧ್ರ) ಗಳಿಂದ ಗರ್ಭವು ಕೇವಲ ಸತ್ವವನ್ನು ಹೀರಿಕೊಳ್ಳುತ್ತದೆ ಗರ್ಭಾಶಯದಲ್ಲಿಯ ಶಿಶುಪೋಷಕ ದ್ರವಸಂಚಯವೇ ಗರ್ಭೋದಕವು. ರಸದ ಕೇವಲ ಸತ್ವ ಭಾಗವೂ ನಿಯಮಿತ ಸಂಚಯವೂ ಇರುವದರಿಂದ ಈ ದ್ರವದಿಂದ ಮಲವು ಸಂಭವಿಸುವದಿಲ್ಲ. ಸತ್ವಭಾಗವು ಗರ್ಭಪೋಷಕವಾಗಿದ್ದು ಅದರ ನಿಯಮಿತ ಸಂಚಯವು ಗರ್ಭಾಶಯದಲ್ಲಿ ಬಾಧಕವಾಗಿರುವದಿಲ್ಲ.

(೧೮) ಶರೀರ ವರ್ಣನೆಯು

ಇವು ಶರೀರ ಪರ್ಯಾಯ ಶಬ್ದಗಳು:—

ಕಲೇವರಂ, ಗಾತ್ರಂವಪುಃ ಸಂಹನನಂ ಶರೀರಂ ವಪ್ರ್ಮವಿಗ್ರಹಃ ॥ಕಾಯೋದೇಹಃ ಕ್ಲೀಬಪುಂಸೋಃ ಸ್ತ್ರಿಯಾಂ ವಮೂರ್ತಿಸ್ತನು ಸ್ತನೂಃ ॥

(ಅಮರ॥)

(೧) ಕಲಿರೇತಸಿಸ್ತ್ರಿಯತೆಉಪಯುಜ್ಯತೆಇತಿ ॥ ॥ಕಲೇವರಂ॥ ರೇತಸ್ಸಿನಿಂದ (ಶುಕ್ರ) ವ್ಯಾಪಿಸಲ್ಪಡುತ್ತದಾದ್ದರಿಂದ "ಕಲೇವರ" ವೆಂಬ ಹೆಸರು.

(೨) ಗಾಙ್‌ಗತೌ॥ ಗಾತೇಗಚ್ಛತೀಗಾತ್ರಂ ॥

ಬಂದಂಥಾ ದೇಹವು ಅನಿತ್ಯವಿರುವದರಿಂದ ಹೋಗುತ್ತದೆ. ಆದ್ದರಿಂದ "ಗಾತ್ರ" ವೆಂಬ ಹೆಸರು.

(೩) ವಪತಿಉಪ್ಯತೇವಾವಪುಃ॥ ಡುವಪ್‌ಬೀಜಸಂತಾನೆ ॥

ಹುಟ್ಟಿಸಲ್ಪಡುತ್ತದೆ, ಹುಟ್ಟಿಸುತ್ತದೆಯಾದ್ದರಿಂದ"ವಪು"ವೆಂಬ ಹೆಸರು.

(೪) ಸಂಹಂತಿ, ಸಂಹನ್ಯತೆವಾ, ಸಂಹನನಂ॥ ಯದ್ವಾಸಂಹ ನ್ಯಂತೇಸ್ಮಿನ್‌ಭೂತಾನಿಇತಿಸಂಹನನಂ ॥

ಕೂಡಿ ಗುಂಪಾಗಿರುತ್ತದೆ. ಅಥವಾ ಕೂಡಲ್ಪಡುತ್ತದೆ. ಪಂಚಮಹಾ ಭೂತಗಳು ದೇಹದಲ್ಲಿ ಸಂಯೋಜಿತವಾಗಲ್ಪಡುತ್ತವೆಯಾದ್ದರಿಂದ "ಸಂಹ ನನ" ವೆಂಬ ಹೆಸರು.

(೫) ಶೃಹಿಂಸಾಯಾಂ॥ ಶೃಣಾತಿಶೀರ್ಯತೇವಾಶರೀರಂ,॥

ದುಃಖವನ್ನು ಹೊಂದುತ್ತದೆ. ದುಃಖವು ಹೊಂದಿಸಲ್ಪಡುತ್ತದೆಂದೂ ಅಥವಾ, ಕ್ಷೀಣವಾಗುವದರಿಂದ "**ಶರೀರ**" ವೆಂಬ ಹೆಸರು ಬಂದಿರುತ್ತದೆ.

(೬) **ವೃಷುಸೇಚನೆ॥ ವರ್ಷತಿವೃಷ್ಯತೇನಾವರ್ಷ್ಮ,॥**

ಶುಕ್ರಾದಿಗಳನ್ನು ಸುರಿಸುತ್ತದೆ ಅಥವಾ ಆನಂದವನ್ನು ಹೊಂದಿಸಲ್ಪಡುತ್ತದೆಂದು "**ವರ್ಷ್ಮ**" ವೆಂದು ಹೇಳುತ್ತಾರೆ.

(೭) **ವಿವಿಧಂ ಸುಖಾದಿಗೃಣ್ಹಾತಿ, ವಿವಿಧೈರ್ವ್ಯಾಧಿಭಿರ್ಗೃಹ್ಯತೆ ಇತಿವಿಗ್ರಹಃ ॥**

ದೇಹವು ನಾನಾರೀತಿಯುಳ್ಳ ಸುಖವನ್ನು ಗ್ರಹಿಸುತ್ತದೆ. ವಿವಿಧ ರೋಗಗಳಿಂದ ವ್ಯಾಪಿಸಲ್ಪಡುತ್ತದೆ. ಆದ್ದರಿಂದ "**ವಿಗ್ರಹ**" ವೆಂಬ ಹೆಸರು.

(೮) **ಚಿಞ್ಚಯನೆಚೀಯತೆ ಅನ್ನಾದಿಭಿಃ ಇತಿಕಾಯಃ,॥**

ಅನ್ನಾದಿ ಆಹಾರಗಳಿಂದ ಅಭಿವೃದ್ಧಿ ಹೊಂದುವದರಿಂದ "**ಕಾಯ**" ವೆಂಬ ಹೆಸರು.

(೯) **ದಿಹಉಪಚಯೆದಿಹ್ಯತೆಇತಿದೇಹಃ ॥**

ಅಭಿವೃದ್ಧಿಯನ್ನುಹೊಂದುವದು,ಆವರಿಸಿವ್ಯಾಪಿಸಿರುವದರಿಂದ"**ದೇಹ**" ವೆಂಬ ಹೆಸರು.

(೧೦) **ಮೂರ್ಚ್ಛಾನಮೋಹಸಮುಚ್ಛ್ರಾಯಯೋಃ, ಮೂರ್ಚ್ಛತೀತಿಮೂರ್ತಿಃ ॥**

ಅತ್ಯಂತ ಧೃಡವಾದ ಆವರಣೆಯುಳ್ಳ ಆಶ್ರಯವಾಗಿರುವದರಿಂದ "**ಮೂರ್ತಿ**" ಯೆಂಬ ಹೆಸರು.

(೧೧) **ತನೋತಿ, ತನ್ಯತೇವಾತನುಃ ॥**

ಸಂತತ್ಯಾದಿಗಳಿಂದ ಅಥವಾ ಬೆಳೆಯುವದರಿಂದ, ವಿಸ್ತಾರವಾಗುತ್ತದೆ ವಿಸ್ತಾರಹೊಂದಿಸಲ್ಪಡುತ್ತದೆ. ಆದ್ದರಿಂದ "ತನು" ವೆಂಬ ಹೆಸರು ಬಂದಿರುತ್ತದೆ. ಇವು ಶರೀರವಾಚಕ ಪರ್ಯಾಯಶಬ್ದಗಳು.

ಅವಯವಗಳು

ಅಂಗಂ ಪ್ರತೀಕೋವಯವಃ ಅಪಘನಃ ॥

ಇವು ಅವಯವಗಳ ಪರ್ಯಾಯವಾಚಕ ಶಬ್ದಗಳು

(೧) **ಅಗಿಗತೌಅಗತಿಗಚ್ಛತೀತಿಅಂಗಂ ॥**

ದೇಹವನ್ನು ಕುರಿತು ಹೋಗುತ್ತದೆ, ಅಂದರೆ ಅಂಟಿಕೊಳ್ಳುತ್ತದೆಂಬರ್ಥವು ಅಥವಾ ನಾಶಾತ್ಮಕವಾದ್ದರಿಂದ ನಾಶ ಹೊಂದುತ್ತದೆ ದೇಹಕ್ಕೆ ಅಂಗಗಳು ಗಮನಾದಿಗಳನ್ನುಂಟು ಮಾಡಲು ಸಾಧನಗಳಾಗುತ್ತವೆ. ಆದ್ದರಿಂದ "**ಅಂಗ**" ವೆಂದು ಅನ್ನುತ್ತಾರೆ

(೨) **ಇಙ್ಗಗತೌ॥ ಪ್ರತ್ಯೇತಿಪ್ರತೀಯತೇವಾ, ಪ್ರತೀಕಃ ॥**

ವಿಷಯಗಳ ಪ್ರಯೋಜನವನ್ನು ಹೊಂದುತ್ತದೆ, ಹೊಂದಿಸುತ್ತದೆಂದು "**ಪ್ರತೀಕ**"ವೆಂಬ ಹೆಸರು.

(೩) **ಯೂಮಿಶ್ರಣೆ, ಅವಯೌತಿಇತಿಅವಯವಃ ॥**

ಶರೀರದಲ್ಲಿ ಮಿಶ್ರವಾಗುತ್ತದೆ, ಶರೀರಕ್ಕೆ ಬೇಕಾಗುವದನ್ನು ಹೊಂದಿಸುವ ಸಾಧನಗಳು, ಆದ್ದರಿಂದ "**ಅವಯವ**" ವೆಂಬ ಹೆಸರು.

(೪) **ಅಪಘನಃ ಅಪಹನ್ಯತೆಇತಿಅಪಘನಃ ॥**

ಯೋಗ್ಯ ಸಾಧನಸಂಗ್ರಹಾದಿ ಕರ್ತವ್ಯಗಳಿಂದ, ಸೌಲಭ್ಯ ಲಭಿಸಿ, ದುಃಖವನ್ನು ಹೊಡೆದುಹಾಕಿ, ದೂರ ಮಾಡುವ ಸಾಧನವಾದ್ದರಿಂದ "**ಅಪಘನ**"ವೆಂಬ ಹೆಸರು. ಇವು ಶರೀರಾವಯವವಾಚಕ ಪರ್ಯಾಯ ಶಬ್ದಗಳು.

ಶರೀರವೆಂದರೇನು?

ತತ್ರಶರೀರಂನಾಮ ಚೇತನಾಧಿಷ್ಠಾನಭೂತಂ ಪಂಚಮಹಾ ವಿಕಾರ ಸಮುದಾಯಾತ್ಮಕಂ ಸಮುಯೋಗವಾಹಿ ॥
(ಚರಕ| ಶಾರೀರ| ಅ. ೬ ಸೂ ೪)

ಶರೀರವೆಂದರೆ:— ಆತ್ಮನಿಗೆ ಅಧಿಷ್ಠಾನ (ಆಶ್ರಯ) ವಾಗಿಯೂ, ಪಂಚಮಹಾಭೂತಗಳ ರೂಪಾಂತರ (ವಿಕಾರ) ವುಳ್ಳ ಸಮುದಾಯಾತ್ಮಕ ವಾಗಿಯೂ, ಇವೆಲ್ಲವುಗಳ ಸಮಯೋಚಿತ ಯೋಗ್ಯ (ಸಮ) ಧಾರಣೆಯನ್ನು ಮಾಡುವದರಿಂದ "**ಶರೀರ**"ವೆಂಬ ಶಾಸ್ತ್ರೀಯ ಹೆಸರು ಬಂದಿರುತ್ತದೆ

ಶರೀರ ವಿಷಯದಲ್ಲಿಯ ವಿಶೇಷ:— ಚೇತನಾ ಆತ್ಮನಲ್ಲಿಯೇ ಇರುವದರಿಂದ ದೇಹವು ಚೈತನ್ಯವಿಶಿಷ್ಟವಾದ್ದರಿಂದ, ಶರೀರವು ಆತ್ಮಕ್ಕೆ ಅಧಿ ಷ್ಠಾನಭೂತವಾಗಿರುತ್ತದೆಂದು ಸ್ಪಷ್ಟವಾಗುತ್ತದೆ. ನಿಶ್ಚಿತಾರ್ಥವೆಂದರೆ ಚೇತ ನೆಯು ಆತ್ಮನನ್ನು ಆಶ್ರಯಮಾಡಿಕೊಂಡಿರುತ್ತದೆ. ಈ ಚೈತನ್ಯದಿಂದಲೇ ಅಗೋಚರ ಆತ್ಮವನ್ನು ಲಕ್ಷಿಸಿ ಸಿದ್ಧಾಂತಮಾಡಿರುತ್ತಾರೆ. ಪಂಚಮಹಾ ಭೂತಾದಿಗಳ ವಿಕಾರವಾದ ಶರೀರಾರಂಭಕ ಧಾತುಗಳ (ರಸಾದಿಗಳ) ಸಮು ದಾಯವು ಶರೀರವು ಇಲ್ಲಿ ಕೇವಲ ಗುಂಪೆಂದು ಅರ್ಥಮಾಡಬಾರದು. ಯಾಕಂದರೆ ಶರೀರಾರಂಭಕ ಧಾತುಗಳ ಸಮುದಾಯ (ಗುಂಪು)ಮಾಡಿದರೆ, ಅದರಿಂದ ಶರೀರವು ತಯಾರಾಗಲಾರದು. ಆತ್ಮವು ಶರೀರಾರಂಭಕ ಕ್ರಿಯೆ ಯಲ್ಲಿ ಕಾರಣ (ಮಿಶ್ರ) ವಾಗಿದ್ದರೆ ಮಾತ್ರ ದೇಹೋತ್ಪತ್ತಿಯಾಗುವದು. ಆದ್ದರಿಂದ ಇದಕ್ಕೆ ಅಲೌಕಿಕಮೇಲಕವೆಂದು ಅನ್ನುತ್ತಾರೆ. ಸಮಯೋಚಿತ ಪ್ರಮಾಣದಿಂದ ಇವೆಲ್ಲವುಗಳ, ಧಾತುಗಳ ಸಂಮಿಲನ ಚನ್ನಾಗಿ ಯಥಾ ಯೋಗ್ಯವಾಗಿರಲು ಅದಕ್ಕೆಶರೀರವೆಂಬ ಹೆಸರು. ಆದ್ದರಿಂದ "**ಸಮಯೋಗ ವಾಹಿ**" ಎಂಬ ಶಬ್ದವನ್ನು ಯೋಜಿಸಿದ್ದಾರೆ.

ಸುಶ್ರುತನುತವು:— ಶುಕ್ರ, ಶೋಣಿತಗಳಗುಂಪು ತನ್ನ ಸ್ವಾಭಾವಿಕ ಸ್ಥಿತಿ ವಿಕಾರಗಳಿಗನುಗುಣವಾಗಿ ಆವಾವಸ್ವರೂಪಹೊಂದಿಕೊಂಡು, ಮುಂದೆ

ಬೆಳವಣಿಗೆಗೆ ಅನುಗುಣವಾಗಿರುವದೇ "**ಗರ್ಭ**"ವು. ಈ ಗರ್ಭವು ಬೆಳೆದು ಅಂಗೋಪಾಂಗ ಉತ್ಪನ್ನವಾಗಲು ಅದಕ್ಕೆ "**ಶರೀರ**"ವೆಂಬ ಹೆಸರು.

ಏವಂ ವಿವರ್ಧಿತಃ ಸಯದಾ ಹಸ್ತ ಪಾದ ಜಿಹ್ವಾಘ್ರಾಣ ಕರ್ಣ ನಿತಂಬಾದಿಭಿರಂಗೈರುಪೇತಸ್ತದಾಶರೀರಂಇತಿಸಂಜ್ಞಾಂಲಭತೆ॥

(ಸುಶ್ರುತ। ಶಾರೀರ। ಅ. ೫ ಸೂ. ೩)

ಗರ್ಭವು ಬೆಳೆದು ಯಾವಾಗ ಕೈ ಕಾಲು ನಾಲಿಗೆ ಮೂಗು ತಿಕ (ನಿತಂಬ) ಮೊದಲಾದ ಅಂಗಗಳಿಂದ ಯುಕ್ತವಾಗಲು "**ಶರೀರ**" ವೆಂಬ ಹೆಸರುಳ್ಳದ್ದಾಗುತ್ತದೆ.

ಶರೀರ ಸ್ವರೂಪ ವರ್ಣನೆಯು:— ಶರೀರದಲ್ಲಿ ದೃಢವಾದ ಅಸ್ಥಿ ಪಂಜರಕ್ಕೆ, ಕ್ರಮಾನುಸಾರವಾಗಿ ಮಾಂಸಮೊದಲಾದವುಗಳು ಅಂಟಿಕೊಂಡಿರುತ್ತವೆ. ಮಾಂಸಕ್ಕೆ ಸ್ಥಿರವಾದಸ್ನಾಯುವಿನ ಬಂಧನವಿರುತ್ತದೆ. ಸ್ನಾಯುವು ಬಳ್ಳಿಯಂತೆ ಅಥವಾ ಪಟ್ಟದಂತೆ (ಮರದ ತೊಗಟೆ) ಸ್ಥಾನೋಚಿತ ಬಂಧನಕ್ಕನುಗುಣವಾಗಿರುತ್ತದೆ. ಸ್ನಾಯುಗಳ ಬಿಗಿತ (ಹಿಡಿತ) ವಿರುವದರಿಂದ ಮಾಂಸವು ಪರಿಪುಷ್ಟವಾಗಿ, ತನ್ನ ಸ್ಥಾನದಿಂದ ಕದಲದೆ ರಕ್ಷಣೆಹೊಂದುತ್ತದೆ. ಮನೆ ನಿಲ್ಲಲಿಕ್ಕೆ ಕಂಭ ಮೊದಲಾದ ಧಾರಕ ಆಧಾರಗಳಿರುತ್ತವೆಯೋ, ಅದರಂತೇ "ಶರೀರವೆಂಬ **ಗೃಹಕ್ಕೆ**" ಅಸ್ಥಿಗಳ ಸಮುಯೋಚಿತ ಸನ್ನಿವೇಶವಾದ ಅಸ್ಥಿಪಂಜರವೇ ಸ್ತಂಭವಾಗಿರುತ್ತದೆ ಇದಿಲ್ಲದಿದ್ದರೆಶರೀರವು ಒಂದುಮಾಂಸ ಪಿಂಡದಂತೆ ಆಗುತ್ತಿತ್ತು. ಚಲನವಲನೆಗಳು ಅದರಿಂದ ಸಾಧ್ಯವಾಗುತ್ತಿದ್ದಿಲ್ಲ. ಮತ್ತೂ ಸ್ಥಿರವಾಗಿ ನಿಲ್ಲಲೂ, ಭಾರವಹನಾದಿಗಳೂ ಆಗುತ್ತಿದ್ದಿಲ್ಲ. ಹೀಗಿರುವದರಿಂದ ದೇಹಕ್ಕೆ ಆಧಾರವೆಂದರ ಅಸ್ಥಿಪಂಜರವು. ಅಸ್ಥಿಗಳೆಲ್ಲವೂ ಅಖಂಡವಾಗಿದ್ದರೆ ಮಣಿಯಲು, ಆಕುಂಚನಹೊಂದಲು ಬರುತ್ತಿದ್ದಿಲ್ಲ. ಅದಕ್ಕಾಗಿ ಅಲ್ಲಲ್ಲಿ ವ್ಯವಸ್ಥಿತ ಸಂದು (ಸಂಧಿ) ಗಳಿದ್ದು ನಿಯಮಿತ, ಆಕುಂಚನ ಪ್ರಸಾರಣಕ್ಕೆ ಅನುಕೂಲವಾಗಿವೆ. ಆವಾವ ಸ್ಥಳಗಳಲ್ಲಿಯ ಕ್ರಿಯಾನುರೂಪ ಬೇರೆ ಬೇರೆ ರೀತಿಯುಳ್ಳ ಸಂಧಿಗಳು ಇರುತ್ತವೆ.

ಉದಾ:— ಒಂದು ವಸ್ತುವನ್ನು ಕೈಯಲ್ಲಿ ಮುಷ್ಟಿಮಾಡಿ ಹಿಡಿಯಬೇಕಾದರೆ, ಕೈಬೆರಳುಗಳು ಮುದುಡಿಕೊಳ್ಳಬೇಕಾಗುತ್ತದೆ. ಸಂಧಿಗಳಲ್ಲದಿದ್ದರೆ ಆಕುಂಚನೆಯಾಗುತ್ತಿದ್ದಿಲ್ಲ. ಯಾವ ವಸ್ತುಗಳನ್ನೂ ಸ್ಥಿರವಾಗಿ ಧರಿಸಲು ಸಹ ಬರುತ್ತಿದ್ದಿಲ್ಲ. ಅಥವಾ ಬೆರಳುಗಳು ಹಿಂದೂ ಮಡಚುವಂತಿದ್ದರೆ ಭಾರವಾದ ವಸ್ತುವನ್ನು ಹಿಡಿದಾಗ ಹಿಂದೂ ಬಗ್ಗಿ, ವಸ್ತುವು ಕೈಯಿಂದ ಬಿದ್ದು ಹೋಗಬೇಕಿತ್ತು. ಇವು ಯಾವವೂ ಸಂಭವಿಸುವದಿಲ್ಲವಾದ್ದರಿಂದ ಸಂಧಿಯು ಕ್ರಿಯಾನುರೂಪ ಸಂನಿವೇಶವುಳ್ಳದ್ದಾಗಿ, ಬೇರೆಬೇರೆ ರೀತಿಯುಳ್ಳದ್ದೆಂದು ಸ್ಪಷ್ಟವಾಗುತ್ತದೆ. ಇದರಂತೇ ದೇಹಕ್ಕೆ ಆಧಾರಭೂತವಾದ, ಅಖಂಡವಾಗಿ ತೋರುವ "**ಅಸ್ಥಿಯೆಂತ್ರ**"ವು ಸನುಯೋಚಿತ ಬೇರೆಬೇರೆ ಸಂಧಿಗಳಿಂದ ಯೋಚಿತವಾಗಿದೆಯೆಂದು ತಿಳಿಯಬೇಕು.

ಅಸ್ಥಿಪಂಜರ ವರ್ಣನೆಯು

ದುಂಡಾಗಿರುವ ತಲೆಯು ಅತ್ಯಂತ ಬಿರುಸು ಧೃಢತೆಯುಳ್ಳ ಎಲುಬಿನಿಂದ ನಿರ್ಮಿತವಾಗಿದೆ. ಇದು ಟೆಂಗಿನ ಪರಟೆ (ಚಿಪ್ಪು) ಯಂತೆ ದುಂಡಗಾಗಿರುವ, ಸಾಮಾನ್ಯತಃ ತೆಳುವಾದ ಎಲುಬಿನ ಆವರಣವೆಂದು ಹೇಳಬಹುದು ಇದರ ಒಳಭಾಗದಲ್ಲಿ ಬಹಳೇ ಮೃದುವಾದ ಮಸ್ತಿಷ್ಕ(ಮಿದುಳು) ಇರುತ್ತದೆ. **ಕಣ್ಣು, ಕಿವಿ, ಮೂಗು,** ಬಾಯಿಗಳು ಶೀರ್ಷಾಸ್ಥಿರಂಧ್ರಗಳಲ್ಲಿ ಭದ್ರವಾದ ರಕ್ಷಣೆಹೊಂದಿರುತ್ತವೆ. ಈ ಶಿರವು ಮಧ್ಯಭಾಗದಎಲುಬಿನ ಕೋಲಿಗೆ ಹೊಂದಿಕೊಂಡಿರುತ್ತದೆ. ತಲೆಯನ್ನು ಧಾರಣೆಮಾಡಿದ ಅಸ್ಥಿದಂಡವು ಬೇರೆಬೇರೆ ತುಣುಕುಗಳಿಂದ ಕೂಡಿದ ಸರಪಣಿಯಂತೆ ಇರುತ್ತದೆ. ಇವಕ್ಕೆ ಕುತ್ತಿಗೆ ಕೆಳಭಾಗದಲ್ಲಿ ಪ್ರತಿಯೊಂದು ಗಣಲಿಗೆ (ಕೊಂಡಿ) ಒಂದರಂತೆ, ಎರಡೂ ಬದಿಯಿಂದ ತೆಳುವಾದ ಎಲುಬಿನ ದಬ್ಬೆ (ಪಟ್ಟಿ) ಗಳು ಹೊರಡುತ್ತವೆ. ಅವು ಮುಂಭಾಗದಲ್ಲಿರುವ, ಎದೆಯ (ಉರೊಮಧ್ಯ) ನಡುವಿರುವ ತೆಳ್ಳಗೆ ಪಟ್ಟಿಯಂತಿರುವ, ಎಲುಬಿಗೆ ಕೂಡಿಕೊಳ್ಳುತ್ತವೆ. ಇದರಿಂದ ಎದೆಯ ಸ್ಥಳವು ಅಸ್ಥಿದಂಡಕ್ಕೆ ಒಂದು ಬುಟ್ಟೀ ಕಟ್ಟಿದಂತೆ ಕಾಣುತ್ತದೆ. ನಿಜವಾಗಿಯೂ ಈ ಈ ಉರೋಸ್ಥಿಗಳು ಮಾನವನ ಮುಖ್ಯ ಜೀವಿತವಾದ "**ಹೃದ**"ವನ್ನು

ಸುತ್ತಲೂ ಧೃಢವಾಗಿ ರಕ್ಷಿಸುತ್ತವೆ. ಭದ್ರವಾದ ಖಜಾನೆಯು ಹಣವನ್ನು ರಕ್ಷಿಸುವಂತೆ ಹೃದಯವನ್ನು ಕಾಪಾಡುತ್ತವೆ. ಈ ಅಸ್ಥಿರೂಪವಾದ ಪಂಜರದ ಮಧ್ಯದಲ್ಲಿ, ಆಘಾತರಹಿತವಾಗಿ ಹೃದಯವು ಇರುತ್ತದೆ. ಮನುಷ್ಯನ ಬದುಕು ವಿಕೆಗೆ ಮುಖ್ಯವಾದ ಹೃದಯವನ್ನು ಈ ಎಲುಬಿನ ಪೆಟ್ಟಿಗೆಯು ಭದ್ರವಾಗಿಡುತ್ತದೆ. ಉರೋಽಸ್ಥಿಯ ಅದಿ ಭಾಗದಲ್ಲಿ ಎರಡೂ ಕೈಗಳ ಎಲುಬುಗಳು ಸಂಧಿತವಾಗುತ್ತವೆ. ಅಸ್ಥಿದಂಡದ ಕೊನೆಯು ತ್ರಿಕಾಸ್ಥಿಗೆ (ಮೂರು ಸಂಧಿತವಾಗುವ ಅಸ್ಥಿ) ಹೊಂದಿಕೊಂಡಿದೆ. ಮತ್ತು ಎರಡೂ ಕಾಲಿನ ಅಸ್ಥಿಗಳು ಕೂಡಾ ತ್ರಿಕಾಸ್ಥಿಗೆ ಸಂಧಿತವಾಗಿವೆ. ಹೀಗೆ ಅಸ್ಥಿದಂಡ, ಎರಡು ತೊಡೆಯ ಅಸ್ಥಿಗಳು ಹೊಂದಿಕೆಯಾಗುವದರಿಂದ "ತ್ರಿಕಾಸ್ಥಿ"ಯೆಂಬ ಹೆಸರು ಬಂದಿರುತ್ತದೆ. ತ್ರಿಕಾಸ್ಥಿಯು ಬಲವಾದದ್ದೂ, ಇವೆಲ್ಲವುಗಳನ್ನು ಧೃಢವಾಗಿ ಧಾರಣೇ ಮಾಡುವಷ್ಟು ಸಮರ್ಥವಾದದ್ದಿರುತ್ತದೆ. ಮುಖ್ಯವಾಗಿ **ತಲೆ, ಮಧ್ಯಭಾಗ, ಎರಡು ಕೈಗಳು, ಎರಡು ಕಾಲುಗಳು** ಹೀಗೆ ಆರು ಮುಖ್ಯ ಅಸ್ಥಿವಿಭಾಗಗಳು ದೇಹದಲ್ಲಿ ಇರುತ್ತವೆ ಇವಕ್ಕೆ ಅಂಗಗಳೆಂದೂ ಅಥವಾ ಮುಖ್ಯಾಂಗಗಳೆಂದೂ ಅನ್ನುತ್ತಾರೆ. ಘಟ್ಟಯಾಗಿರುವ ಈ ಎಲುವಿನ ಪಂಜರಕ್ಕೆ ಹೊಂದಿಕೊಂಡೇ, ದೇಹದಲ್ಲಿಯ ಮಾಂಸಾದಿ ಸರ್ವ ಪದಾರ್ಥಗಳು ಇರುತ್ತವೆ. ಹೀಗಿರುವದರಿಂದ ಶರೀರದಲ್ಲಿಯ ಎಲ್ಲ ವಸ್ತುಗಳಿಗೆ ಆಧಾರವಾದದ್ದು ಅಸ್ಥಿಪಂಜರವೆಂದು ಹೇಳುತ್ತಾರೆ.

ಶರೀರದಲ್ಲಿಯ ಪದಾರ್ಥಗಳು

ಚರ್ಮ, ಕಲಾ, ಧಾತು, ಮುಲ, ದೋಷ, ಯಕೃತ್, ಪ್ಲೀಹ, ಫುಪ್ಫುಸ, ಉಂಡುಕ, ಹೃದಯ, ಆಶಯಗಳು, ಅಂತ್ರ (ಕರುಳು), **ವೃಕ್ಕ** (ಮಾಂಸಪಿಂಡ), **ಸ್ರೋತಸ್ಸು, ಕಂಡರ** (ದೊಡ್ಡ ಸ್ನಾಯು), **ಜಾಲ, ಕೂರ್ಚ, ರಜ್ಜು** (ಹುರಿಯಂತಿರುವ ಮಾಂಸದ ಹಗ್ಗವು), **ಸೇವನೀ, ಸಂಘಾತ, ಸೀಮಂತ, ಅಸ್ಥಿ, ಸಂಧಿ, ಸ್ನಾಯು, ಪೇಶೀ, ಮರ್ಮ, ಸಿರಾ, ಧಮನೀ, ಯೋಗವಾಹೀ ಸ್ರೋತಸ್ಸುಗಳು;** ಹೀಗೆ ಶರೀರದಲ್ಲಿ, ಬೇರೆಬೇರೆಕಾರ್ಯಸ್ಥಿತಿಗಳಿಗೆ ಪ್ರಯೋಜನವುಳ್ಳದ್ರವ್ಯಾದಿಗಳು ಇರುತ್ತವೆ. ಇವೆಲ್ಲವುಗಳು ಆವಾವ ಸ್ಥಳದಲ್ಲಿ ಸನ್ನಿಹಿತವಾಗಿ ಯೋಗ್ಯ

ವಾಗಿ ಸಂಯೋಜಿತವಾಗಿರುತ್ತವೆ. ಇವುಗಳ ಪ್ರತಿಯೊಂದರ ವರ್ಣನೆಯು ಮುಂದೆ ಬರುತ್ತದೆ. ಸದ್ಯ ಶರೀರ ವರ್ಣನೆಯಲ್ಲಿ ಹೆಸರನ್ನು ಮಾತ್ರ ಹೇಳಿರುತ್ತದೆ.

ಇಂದ್ರಿಯಗಳ ವಿಭಾಗ

ಜ್ಞಾನೇಂದ್ರಿಯಗಳು (೫)

ಕಿವಿ, ಸ್ಪರ್ಶನೇಂದ್ರಿಯ, ಕಣ್ಣು, ನಾಲಿಗೆ, ನಾಸಿಕಾ, ಇವು ಶಬ್ದ ಮೊದಲಾದವುಗಳನ್ನು ಗ್ರಹಿಸಿ ಜ್ಞಾನ ಮಾಡಿಕೊಡುತ್ತವೆ. ಆದ್ದರಿಂದ ಇವುಗಳಿಗೆ ಜ್ಞಾನೇಂದ್ರಿಯವೆಂಬ ಹೆಸರು.

ಕರ್ಮೇಂದ್ರಿಯಗಳು (೫)

ಮಾತಾಡುವ ಇಂದ್ರಿಯ, ಹಸ್ತ, ಪಾದ, ಜನನೇಂದ್ರಿಯ, ಗುದ, ಇವುಗಳು ಮಾತಾಡುವದು ಮೊದಲಾದ ಕೆಲಸವನ್ನು ಮಾಡುವದರಿಂದ ಕರ್ಮೇಂದ್ರಿಯಗಳೆಂಬ ಹೆಸರು.

ಮನಸ್ಸು — ಮನಸ್ಸು, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳೆರಡರಲ್ಲಿಯೂ ಇದ್ದುಕೊಂಡು ಇಂದ್ರಿಯಗಳಿಂದಾಗುವ ಜ್ಞಾನ ಮತ್ತು ಕರ್ಮಗಳಿಗೆ, ಪ್ರಚೋದಕ ಮತ್ತು ಗ್ರಾಹಕವಾಗಿರುತ್ತದೆ. ಮನಸ್ಸು ಯೋಗ್ಯ ಸ್ಥಿತಿಯಲ್ಲಿರದಿದ್ದರೆ ಜ್ಞಾನೇಂದ್ರಿಯಗಳು ಸರಿಯಾಗಿ ವಿಷಯವನ್ನು ಗ್ರಹಿಸಿ ಜ್ಞಾನ ಮಾಡಲಾರವು ಮನಸ್ಸು ಎರಡನೇ ಕಡೆಯಿದ್ದಾಗ ಎದುರಿನಲ್ಲಿ ಒಬ್ಬನು ಹೋದರೂ ನಮಗೆ ಗೊತ್ತಾಗುವದಿಲ್ಲ. ಇದರಿಂದ ಮನಸು ಇಂದ್ರಿಯಗಳಲ್ಲಿದ್ದು ಗ್ರಹಿಸತಕ್ಕದ್ದನ್ನು ಜ್ಞಾನವಾಗುವಂತೆ ಮಾಡುತ್ತದೆಂದು ಇದರಿಂದ ಸಿದ್ಧವಾಗುತ್ತದೆ ದೇಹದಲ್ಲಿರುವ ವಿಶೇಷ ವಿಭಾಗಗಳನ್ನು ವರ್ಣನಾ ರೂಪದಿಂದ ಹೀಗೆ ನಿರ್ದೇಶಿಸಿದ್ದಾರೆ. ಸಂಪೂರ್ಣ ದೇಹದಲ್ಲಿರುವ ಪದಾರ್ಥಗಳೆಂದರೆ ಈಗ ನಿರ್ದೇಶಿಸಿದವುಗಳು ಸಾಮಾನ್ಯತಃ ಎಷ್ಟು ರೀತಿಯ ದ್ರವ್ಯಗಳು ಮತ್ತು ವಿಭಾಗಗಳವೆಯೆಂದು ನಿರ್ದೇಶ ಮಾಡಲಿಕ್ಕಾಗಿ ಕೇವಲ ಹೆಸರನ್ನು ಹೇಳಿದ್ದೇನೆ. " ಶಾರೀರದಲ್ಲಿ " ವಿಶೇಷ ವಿವೇಚನೆ ವಿಚಾರಮಾಡಬೇಕಾದವುಗಳೆಂದರೆ ಈ ಪೂರ್ವೋಕ್ತ ವಿಭಾಗಗಳು.

ಶರೀರದಲ್ಲಿಯ ವಿಶೇಷ

ಅಗ್ನಿಃ ಸೋಮೋವಾಯುಃ ಸತ್ವಂ ರಜಸ್ತಮಃ ಪಂಚೇಂದ್ರಿಯಾಣಿ ಭೂತಾತ್ಮೇತಿ ಪ್ರಾಣಾಃ॥ (ಸುಶ್ರುತ॥ ಶಾರೀರ॥ ಅಃ ಸೂಃ)

ಅಗ್ನಿ (ಪಿತ್ತ, ಪಾಚಕಾಗ್ನಿ ಮೊದಲಾದವು), ಸೋಮ (ಶ್ಲೇಷ್ಮ), ವಾಯು, ಸತ್ವ, ರಜೋಗುಣ, ತಮಸ್ಸು (ಪ್ರಕೃತಿಯ ಗುಣಗಳು), ಭೂತಾತ್ಮಾ (ಕರ್ಮ ಪುರುಷ), ಇಂದ್ರಿಯಗಳು, ಮನಸ್ಸು, ಇವುಗಳು ಜೀವನ ನಿರ್ವಹಣೆಯನ್ನುಮಾಡುವದರಿಂದ, ಇವೆಲ್ಲವುಗಳಿಗೂ "ಪ್ರಾಣಾಃ" ಎಂದು ಹೇಳಿದ್ದಾರೆ. ಅರ್ಥಾತ್ ಪ್ರಾಣದಷ್ಟೇ ಮುಖ್ಯವಾದವುಗಳು ಅಥವಾ ಇವುಗಳ ಸಾನ್ನಿಧ್ಯಗಳಿಂದ ಜೀವಯಾತ್ರೆಯು ಸುಗಮವಾಗುವದರಿಂದ ಮುಖ್ಯವೆಂದು ಅನ್ನುತ್ತಾರೆ. ಇಲ್ಲವೇ "ಆತ್ಮವನ್ನೂ" ಇಲ್ಲಿ ಹೇಳಿದ್ದರಿಂದ ಆತ್ಮಾಧಿಷ್ಠಾನವಾಗಿ ಮನಸ್ಸು ಮೊದಲಾದವುಗಳು ಸುಖ ದುಃಖ ಸಾಕ್ಷಾತ್ಕಾರಾದಿಗಳಿಂದ ದೇಹಧಾರಣೆಯ ವಿಷಯದಲ್ಲಿ ಬಹಳೇ ಮಹತ್ವವಾಗಿರುತ್ತವೆ

(೧) ಅಗ್ನಿ

ಅಗ್ನಿರತ್ರಪಾಚಕ ಭ್ರಾಜಕ ಆಲೋಚಕ ರಂಜಕ ಸಾಧಕಾನಾಂ ಪಾಂಚಭೌತಿಕಾನಾಂ ಸರ್ವಧಾತ್ವನುಗತಾನಾಂ ಚೋಷ್ಮಣಾಂ ಶಕ್ತಿರೂಪ ತಯಾವಸ್ಥಿತೊನಾಚೋಧಿದೈವತ್ವನಾಪನ್ನೋ ಬೋದ್ಧವ್ಯಃ ॥ (ಸುಶ್ರುತ ಟೀಕಾ)

ದೇಹದಲ್ಲಿಯ ಅಗ್ನಿ ಯಾವದೆಂದರೆ:— ಪಾಚಕ, ಭ್ರಾಜಕ, ಆಲೋಚಕ, ರಂಜಕ, ಸಾಧಕ ಮೊದಲಾದವುಗಳು. ಪಿತ್ತರೂಪವಾದ ಅಗ್ನಿಗಳಿಗೆ ಮತ್ತು ಪಂಚಭೂತಾತ್ಮಕವಾದ ಸರ್ವ ಸಾದಿ ಧಾತುಗಳಲ್ಲಿರುವ ಅಗ್ನಿಗಳಿಗೆ ಉಷ್ಣತೆಯನ್ನು ಕೊಡುವದಾಗಿಯೂ ಇವೆಲ್ಲಕ್ಕೂ ಶಕ್ತಿರೂಪವಾಗಿರುವದು. ಮತ್ತು ವಾಣಿಗೆ ಅಧಿದೈವತವಾಗಿರುವದು. ಈ ಪೂರ್ವೋಕ್ತವಾದದ್ದೇ ಶರೀರವನ್ನು ಧಾರಣೆಮಾಡುವ "ಅಗ್ನಿ"ಯು ದೇಹದಲ್ಲಿಯ ಆಹಾರಾದಿಗಳನ್ನು ಪಚನಮಾಡುತ್ತದೆ.

(೨) ಸೋಮ

ಶ್ಲೇಷ್ಮರಸ ಶುಕ್ರಾದೀನಾಂ ತೋಯಾತ್ಮಕಾನಾಂ ಭಾವಾನಾಂ ರಸನೇಂದ್ರಿಯಸ್ಯ ಚ ಶಕ್ತಿರೂಪತಯಾऽವಸ್ಥಿತೋ ಮನಸೋऽಧಿದೈವತ್ವಮಾಪನ್ನಃ ಸೋಮ ಇತಿ ॥

(ಸುಶ್ರುತ ಟೀಕಾ)

"ಸೋಮವು" ಕಫ ರಸ ಶುಕ್ರ ಮೊದಲಾದ ಜಲಾತ್ಮಕವಾದವುಗಳಿಗೆ ಮತ್ತು ರಸನೇಂದ್ರಿಯಕ್ಕೆ ಶಕ್ತಿಯನ್ನು ಕೊಡತಕ್ಕದ್ದಾಗಿಯೂ, ಸೋಮಾತ್ಮಕವಾದ್ದರಿಂದ ತಂಪು ಆಹ್ಲಾದ ಹುಟ್ಟಿಸುವದಾಗಿಯೂ ಇರುತ್ತದೆ. ಇದೇ **ಮನಸ್ಸಿಗೆ ಅಧಿದೈವತವಾದ "ಸೋಮವು"** ಇದು ದೇಹಕ್ಕೆ ಆಹ್ಲಾದ ಕೊಟ್ಟು ದೇಹಧಾರಣೆಯನ್ನುಮಾಡುತ್ತದೆ. ರಸಾದಿ ಎಲ್ಲ ಸೌಮ್ಯ ಧಾತುಗಳನ್ನು ಪೋಷಿಸುತ್ತದೆ.

(೩) ವಾಯು

ಪಂಚಾತ್ಮಕಃ ಪ್ರಾಣಾದಿಭೇದೇನ॥ ವಾಯುಶ್ಚದೋಷ ಧಾತು ಮಲಾದೀನಾಂ ಸಂಚಾರಣೋಚ್ಛ್ವಸನನಿಃಶ್ವಾಸಾಭ್ಯಾಂ ಚ ॥

(ಸುಶ್ರುತ ಟೀಕಾ)

"ವಾಯುವು" ಪ್ರಾಣಾऽಪಾನಾದಿ ಭೇದದಿಂದ ಐದು ಪ್ರಕಾರವಾಗಿರುತ್ತದೆ. ಪಿತ್ತಕಫ ಮೊದಲಾದ ದೋಷಗಳನ್ನೂ, ರಸರಕ್ತಾದಿಧಾತುಗಳನ್ನೂ ದೇಹದಲ್ಲಿ ಸಂಚರಿಸುವಂತೆ ಮಾಡುತ್ತದೆ. ವಾಯುವಿನ ಸಹಾಯದಿಂದಲೇ ಜಡವಾದ ರಸಾದಿಗಳೆಲ್ಲವೂ ದೇಹದಲ್ಲಿ ಸಂಚರಿಸುತ್ತವೆ. ಮತ್ತು ಉಚ್ಛ್ವಾಸ ನಿಃಶ್ವಾಸ (ಮುಖದಿಂದ ಒಳಗೆ ಹೊರಗೆ ಸಂಚರಿಸುವದು) ಗಳನ್ನು ಮಾಡಿಸುತ್ತದೆ ಪೂರ್ವೋಕ್ತವಾದ ಕರ್ಮಗಳನ್ನು ದೇಹದಲ್ಲಿ "ವಾಯುವು" ಮಾಡುತ್ತಾ ದೇಹವನ್ನು ರಕ್ಷಿಸುತ್ತದೆ.

(೪) ಸತ್ವಾದಿಗುಣಗಳು

ಸತ್ವರಜಸ್ತಮಾಂಸಿತು ಪ್ರಕೃತೇರಷ್ಟ ರೂಪಾಯಾಗುಣಾಃ ॥ ಸತ್ವಾದೀನಿ ಮನೋರೂಪತಯಾ ಪರಿಣತಂ ಭೂತಾತ್ಮನಃ ಶರೀರಾಂತರಗ್ರಹಣಮೋಕ್ಷಣೇಹೇತುರಿತಿತದಪಿಪ್ರಾಣಯತಿ॥
(ಸುಶ್ರುತ ಟೀಕಾ)

"**ಸತ್ವರಜತಮಸ್ಸುಗಳು**" ಅಷ್ಟರೂಪ ಪ್ರಕೃತಿಯ ಗುಣಗಳು. ಭೂತಾತ್ಮನಿಗೆ (ಪುರುಷನಿಗೆ) ಮನೋರೂಪದಿಂದ ಸತ್ವರಜಸ್ತಮಸ್ಸುಗಳು ಬೇರೆ ಬೇರೆ ದೇಹವನ್ನುಹೊಂದಲಿಕ್ಕೂ, ಮೋಕ್ಷಕ್ಕೂ ಕಾರಣವಾದ್ದರಿಂದ ಅವು ಕೂಡ ಮುಖ್ಯವಾದವುಗಳು ಪ್ರಾಣಧಾರಣೆಯನ್ನು ಮಾಡುತ್ತವೆಂದು ಹೇಳಿದ್ದಾರೆ.

(೫) ಇಂದ್ರಿಯಗಳು

"ಇಂದ್ರಿಯಾಣಿ" ಶ್ರವಣದರ್ಶನ ಸ್ಪರ್ಶನರಸನ ಘ್ರಾಣಾನಿ ಪಂಚ॥ ಚಕ್ಷುರಾದೀನಿಜ್ಞಾನೇಂದ್ರಿಯಾಣಿ ರೂಪಾದಿಗ್ರಹಣ ಕರ್ಮಣಾ ಪ್ರಾಣಯಂತಿ ॥ (ಸುಶ್ರುತ ಟೀಕಾ)

"**ಜ್ಞಾನೇಂದ್ರಿಯಗಳು**" ಶ್ರೋತ್ರ, ನೇತ್ರ, ಸ್ಪರ್ಶೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯಗಳು. ಇವು ರೂಪಾದಿಗಳನ್ನು ಗ್ರಹಿಸುವ ಕಾರ್ಯದಿಂದ ದೇಹವನ್ನು ಬದುಕಿಸುತ್ತವೆ. ಅರ್ಥಾತ್ ಜೀವನಕ್ಕೆ ಅತಿ ಮುಖ್ಯವಾದ ಕಾರ್ಯಗಳು ಇವುಗಳಿಂದ ಆಗುತ್ತವೆಂದರ್ಥವು

(೬) ಭೂತಾತ್ಮಾ

"ಭೂತಾತ್ಮಾ" ಶುಭಾಽಶುಭಕರ್ಮಭಿಃ ಪರಿಗೃಹಿತಃ ಕರ್ಮ ಪುರುಷಃ॥ ಸೋಽಸ್ಯಶೇಷಸ್ಯೈವಕರ್ಮರಾಶೆಶ್ಚೇತನಾಹೇತು ರಿತಿಪ್ರಾಣಯತಿ ॥ ಏತೇಚಾಗ್ನೀಷೋಮಾದಯಃ ಪ್ರಾಣ ಯಂತಿಜೀವಯಂತೀತಿಪ್ರಾಣಾಃ ॥ (ಸುಶ್ರುತ ಟೀಕಾ)

"ಭೂತಾತ್ಮನು" ಸತ್ಕರ್ಮ ಅಥವಾ ದುಷ್ಕರ್ಮವೊದಲಾದವುಗಳಿಂದ ದೇಹವನ್ನು ಪಡೆದು ದೇಹಕ್ಕೆ ಆತ್ಯಂತಿಕ ಸಂಬಂಧದಿಂದ (ಪರಿಗೃಹೀತ) ಅಂಟಿಕೊಂಡು, ಅವನೇ ಈ ಕರ್ಮ ಫಲವನ್ನು ಭೋಗಿಸುವ ಶರೀರಕ್ಕೆ ಚೈತನ್ಯ ಕಾರಣನಾಗಿರುವದರಿಂದ ಚೈತನ್ಯಾತ್ಮಕನಾಗಿ ಶರೀರವನ್ನು ಬದುಕಿಸುತ್ತಾನೆ ಕಲ್ಲಿ "**ಭೂತಾತ್ಮಾ ಮನಶ್ಚ**" ಎನ್ನುವ ಪಾರವೂ ಇರುವದರಿಂದ ಮನಸ್ಸು ಸಹ "ಕರ್ಮ ಪುರುಷನಿಗೆ" ಮುಖ್ಯವಾಗಿ ಎಲ್ಲವನ್ನೂ ತನ್ನ ಗ್ರಹಣ ಸಾಮರ್ಥ್ಯದಿಂದ ಇಂದ್ರಿಯಗಳ ಮುಖಾಂತರವಾಗಿ, ವಿಷಯಗಳನ್ನು ಸ್ವೀಕಾರ ಮಾಡಿಸುತ್ತದೆ ಹೀಗಿರುವದರಿಂದ ಮನಸ್ಸೂ ಸಹ ಮುಖ್ಯವಾದದ್ದಾಗಿ ಪ್ರಾಣಯಾತ್ರೆಗೆ ಯೋಗ್ಯವಾಗಿರುತ್ತದೆ.

"**ಅಗ್ನಿಸೋಮಾದಿಗಳು**" ದೇಹಕ್ಕೆ ಒದುಕುವ ವಿಷಯದಲ್ಲಿ ಮುಖ್ಯತಃ ಪ್ರಾಣವೇ ಆಗಿರುವದರಿಂದ ಇವುಗಳಿಗೆ "**ಪ್ರಾಣಾಃ**" ಎಂದು ಸುಶ್ರುತಾಚಾರ್ಯರು ಹೇಳಿದ್ದಾರೆ ಇವುಗಳು ವಿಶೇಷವಾದ ಕರ್ಮಗಳಿಂದ ಶರೀರವನ್ನು ಬದುಕಿಸುತ್ತವೆಯಾದ್ದರಿಂದ ಪ್ರಾಣಗಳು.

ಶರೀರಾವಯವ ಸಂಖ್ಯಾವಿಭಾಗವು

ಅಥಾತಃ ಶರೀರಸಂಖ್ಯಾವ್ಯಾಕರಣಂ ಶಾರೀರಂ ವ್ಯಾಖ್ಯಾಸ್ಯಾಮಃ॥ (ಸುಶ್ರುತ॥ ಶಾರೀರ॥ ಅ ೫)

ಯಥೋವಾಚಭಗವಾನ್ ಧನ್ವಂತರಿಃ ॥೨॥

ಶರೀರದ ಉತ್ಪತ್ತಿ ಮೊದಲುಗೊಂಡು ಗರ್ಭದಲ್ಲಿಯ ಬೆಳವಣಿಗೆ ಮೊದಲಾದವುಗಳನ್ನು ಹೇಳಿ, ನಂತರ ಅಂಗೋಪಾಂಗಾವಿಗಳ ವಿಭಾಗಗಳನ್ನೂ ಶರೀರದಲ್ಲಿರುವ ಸರ್ವ ದ್ರವ್ಯಾದಿ ವಿಭಾಗಗಳನ್ನೂ ಹೇಳುತ್ತಾರೆ ಅದಕ್ಕೆ "**ಶರೀರಸಂಖ್ಯಾ ವ್ಯಾಕರಣ**"ವೆಂಬ ಹೆಸರು. ಇದನ್ನು ಸುಶ್ರುತಾಚಾರ್ಯರು ಗುರುಗಳಾದ ಶ್ರೀ ಭಗವಾನ್ ಧನ್ವಂತರಿಯ ಮತಾನುಸಾರವಾಗಿ ಹೇಳುತ್ತಾರೆ

ಅಂಗಗಳು

ತಚ್ಚತುಷ್ಟಯಂಗಳಂ:- ಶಾಖಾಚತಸ್ರೋ, ಮಧ್ಯಂ ಪಂಚಮಂ, ಷಷ್ಠಂ ಶಿರಇತಿ ॥

(ಸುಶ್ರುತ॥ ಶಾರೀರ॥ ಅ ೫ ಸೂ ೩)

ಶರೀರದ ಆರು ಅಂಗಗಳು.— ದೇಹದ ಶಾಖಾ (ಟೊಂಗೆ) ರೂಪವಾದ ಬಾಹು (೨), ಕಾಲು (೨), ಹೀಗೆ ಶಾಖೆಗಳು ನಾಲ್ಕು (೪). "ಮಧ್ಯಭಾಗವು" ಐದನೇದು (೫). ಆರನೇದು **ಶಿರಸ್ಸು** (ತಲೆ) (೬) ಹೀಗೆ ಶರೀರಕ್ಕೆ ಆರು (೬) ಮುಖ್ಯವಾದ ಅಂಗಗಳಿರುತ್ತವೆ

ಉಪಾಂಗ (ಪ್ರತ್ಯಂಗ)ಗಳು

ಅತಃಪರಂಪ್ರತ್ಯಂಗಾನಿವಕ್ಷ್ಯಂತೆ:-ಮುಸ್ತಕೋದರಪೃಷ್ಠನಾಭಿ ಲಲಾಟನಾಸಾಚಿಬುಕಬಸ್ತಿಗ್ರೀನಾಇತ್ಯೇತಾಏಕೈಕಾಃ॥ ಕರ್ಣ ನೇತ್ರಭ್ರೂಶಂಖಾಂಸಗಂಡಕಕ್ಷಸ್ತನವಂಕ್ಷಣವೃಷಣಪಾರ್ಶ್ವ ಸ್ಫಿಕ್ಜಾನುಕೂರ್ಪರಬಾಹೂರುಪ್ರಭೃತಯೋದೇದ್ವೇ॥ವಿಂಶತಿರಂಗುಲಯಃ॥ ಸ್ರೋತಾಂಸಿವಕ್ಷ್ಯಮಾಣಾನಿ (ನವ)॥ ಏಷ ಪ್ರತ್ಯಂಗವಿಭಾಗಉಕ್ತಃ ॥

(ಸುಶ್ರುತ॥ ಶಾರೀರ॥ ಅ ೫ ಸೂ ೪)

ಅಂಗಗಳನ್ನು ನಿರ್ದೇಶಿಸಿದ ನಂತರ ಪ್ರತ್ಯಂಗಗಳನ್ನು ಹೇಳುತ್ತಾರೆ ಪ್ರತ್ಯಂಗವೆಂದರೆ "ಉಪಾಂಗಗಳು" ಅವುಗಳಲ್ಲಿ ಒಂದೊಂದೇ ಇರುತ್ತಿರುವವುಗಳನ್ನೂ ಎರಡು ಇರುವವುಗಳನ್ನೂ ವಿಭಾಗಿಸಿ ಹೇಳಿರುವರು.

೧. **ಮುಸ್ತಕ** (ತಲೆ), ೨. **ಉದರ** (ಹೊಟ್ಟೆ), ೩. **ಪೃಷ್ಠ** (ಬೆನ್ನು), ೪ **ನಾಭಿ** (ಹೊಕ್ಕಳು), ೫. **ಲಲಾಟ** (ಹಣೆ), ೬ **ನಾಸಾ** (ಮೂಗು),

೭. ಚಿಬುಕ (ತುಟಿಯ ಕೆಳಭಾಗ ಗದ್ದ), ೮. ಬಸ್ತಿ (ನಾಭಿಯ ಕೆಳಗಿರುವ ಮೂತ್ರಾಶಯ), ೯. ಗ್ರೀವಾ (ಕುತ್ತಿಗೆ), ಇವುಗಳು ಒಂದೊಂದಿರುವ ಉಪಾಂಗಗಳು.

೧ ಕರ್ಣ (ಕಿವಿಗಳು), ೨ ನೇತ್ರ (ಕಣ್ಣುಗಳು), ೩ ಶಂಖ (ಕಣ್ಣು ಹುಬ್ಬುಗಳ ಕೊನೆಯಮೇಲ್ಭಾಗಗಳ, ಕಿವಿ ಹಣೆಗಳ ಮಧ್ಯ ಭಾಗಗಳಲ್ಲಿ "ಶಂಖ"ವು ಇರುತ್ತವೆ. ಇವಕ್ಕೆ ಮೆಲಕು ಅನ್ನುತ್ತಾರೆ), ೪ ಭ್ರೂ (ಕಣ್ಣು ಹುಬ್ಬು ಅಥವಾ ಕಣ್ಣಿನ ಮೇಲ್ಭಾಗ ಹುಬ್ಬು ಇರುವ ಸ್ಥಳವು), ೫ ಆಂಸ (ಹೆಗಲು, ಬಾಹುವಿನ ಬುಡಗಳು), ೬ ಗಂಡ (ಕಪೋಲಗಳು), ೭ ಕಕ್ಷ (ಬಗಲಿನ ತಗ್ಗು ಭಾಗಗಳು), ೮ ಸ್ತನ (ಮೊಲೆ ಅಥವಾ ಸ್ತನ ಭಾಗಗಳು), ೯ ವಂಕ್ಷಣ (ತೊಡೆಯ ಎಲುಬು ಕೂಡುವ ಸಂಧಿಗಳು), ೧೦ ವೃಷಣ (ಪುರುಷರ ಅಂಡಕೋಶ ವಿಭಾಗಗಳು), ೧೧ ಪಾರ್ಶ್ವ(ಪಕ್ಕ, ಎಡ ಬಲ ಪಕ್ಕಗಳು) ೧೨ ಸ್ಫಿಕ್ (ತಿಕ, ಕಟಿಪ್ರದೇಶಗಳಲ್ಲಿಯ ಉಬ್ಬಿದ ಮಾಂಸ ಪಿಂಡಗಳು), ೧೩ ಜಾನು (ಮೊಣಕಾಲ ಮೇಲಿನ ಸಂಧಿ ಭಾಗಗಳು), ೧೪ ಕೂರ್ಪರ (ಬಾಹು ಮಧ್ಯದಲ್ಲಿಯ ಸಂಧಿಗಳು), ೧೫ ಬಾಹು (ತೋಳು ಗಳು), ೧೬ ಊರು (ತೊಡೆಗಳು), ಇವು ಮೊದಲಾದವುಗಳು ಎರಡಿರುವ ಉಪಾಂಗಗಳು. "ಪ್ರಭೃತಯಃ" ಮೊದಲಾದವುಗಳು ಎಂದು ಹೇಳಿದ್ದರಿಂದ ಮುಂದೆ ಬರುವ "ಓಷ್ಠ" ಮೊದಲಾದವುಗಳು ಗ್ರಹಣವಾಗುತ್ತವೆ.

ಪ್ರಭೃತಿ ಗ್ರಹಣಾತ್ ಚೌಷ್ಠ ಸೃಕ್ಕಣೇ ಕುಕುಂದರಾಣಾಮಾವರೋಧಃ ॥

(ಸುಶ್ರುತ ಟೀಕಾ)

೧೭ ಓಷ್ಠ (ತುಟಿಗಳು), ೧೮ ಸೃಕ್ಕಣೇ (ತುಟಿಗಳ ಎಡಬಲಗಳ ಲ್ಲಿಯ ಕಟಬಾಯಿ ಅಂತ್ಯಭಾಗಗಳು), ೧೯ ಕುಕುಂದರ (ನಿತಂಬದ ಕೆಳ ಭಾಗಗಳಲ್ಲಿರುವ ತಗ್ಗು ಭಾಗಗಳು). ಇವು ಗ್ರಹಣವಾಗ ತ್ತವೆ.

(೯) "**ಸ್ರೋತಾಂಸಿ**" **ಶ್ರವಣ**, ಕಿವಿಗಳು (೨), "**ನಯನ**" ಕಣ್ಣುಗಳು (೨), "**ಘ್ರಾಣ**" ಮೂಗಿನ ರಂಧ್ರಗಳು (೨), ಒಟ್ಟು (೬). "**ವದನ**" ಬಾಯಿರಂಧ್ರವು (೭), (೮) **ಗುದ** ಮಲ ವಿಸರ್ಜನೆಯ ಅಂಗದ ರಂಧ್ರವು, (೯) **ಮೇಢ್ರ** ಮೂತ್ರವಿಸರ್ಜನಾಂಗ, ಪುರುಷ ಜನನೇಂದ್ರಿಯ ರಂಧ್ರವು. ಸ್ತ್ರೀಯರಿಗೆ ಮೂರು ರಂಧ್ರಗಳು ಹೆಚ್ಚಿಗೇ ಇರುತ್ತವೆ "**ಸ್ತನ**" ಮೊಲೆಗಳಲ್ಲಿ ಹಾಲು ಹೊರಗೆ ಬರಲಿಕ್ಕೆ ಇರುವ ರಂಧ್ರಗಳು (೨), "**ಅಧ ಸ್ತಾದ್ರಕ್ತವಹಂ**" ಪ್ರತಿಮಾಸಿಕ ರಜಸ್ಸನ್ನು ಹೊರಗೆ ಹಾಕುವ ರಂಧ್ರವು (೧), **ಹೀಗೆ ಪುರುಷರಲ್ಲಿ** (೯), **ಸ್ತ್ರೀಯರಲ್ಲಿ** (೧೨) ರಂಧ್ರಗಳು ಬಹಿರ್ಮುಖವಾಗಿರುತ್ತವೆ.

ಶರೀರದ ಅಂಗೋಪಾಂಗಗಳು

ಮುಖ್ಯಾಂಗಗಳು

ಅಂಗಗಳು:— **ಕಾಲು** (೨), **ಬಾಹು** (೨), **ಮಧ್ಯಭಾಗ** (೧), **ಶಿರಸ್ಸು** (೧) ಹೀಗೆ ಮುಖ್ಯಾಂಗಗಳು (೬).

ಉಪಾಂಗಗಳು

"**ಮುಸ್ತಕಾದಿ**" ಒಂದೊಂದಿರುವ ಪ್ರತ್ಯಂಗಗಳು (೯), "**ಕರ್ಣಾದಿ**" ಎರಡಿರುವ ಪ್ರತ್ಯಂಗಗಳು (೩೮), "**ಅಂಗುಲಿ**" ಕೈಕಾಲುಗಳ ಬೆರಳುಗಳು (೨೦), "**ಸ್ರೋತಸ್ಸು**" ರಂಧ್ರಗಳು (೯), ಸ್ತ್ರೀಯರ ಅಧಿಕರಂಧ್ರಗಳು (೩)

ಶರೀರದ ಒಟ್ಟು ಅಂಗ ಪ್ರತ್ಯಂಗಗಳ ಸಂಖ್ಯೆಯು

ಮುಖ್ಯ ಅಂಗಗಳು (೬) **ಮುಸ್ತಕಾದಿ** (೯) **ಕರ್ಣಾದಿ** (೩೮) **ಅಂಗುಲಿ** (೨೦) **ರಂಧ್ರಗಳು** (೯) ಸ್ತ್ರೀಯ ಅಧಿಕ ರಂಧ್ರಗಳು (೩) ಅಂಗಪ್ರತ್ಯಂಗಗಳ ಸಂಖ್ಯೆಗಳು ಒಟ್ಟು (೮೫) ಇರುತ್ತವೆ.

ಚರಕ ಮತದಂತೆ ಅಂಗಪ್ರತ್ಯಂಗಗಳು

ಅಂಗಗಳು

ತತ್ರಾಯಂ ಶರೀರಸ್ಯಾಂಗವಿಭಾಗಃ; ತದ್ಯಥಾದ್ವೌ ಬಾಹೂ, ದ್ವೇಸಕ್ಥನೀ, ಶಿರೋಗ್ರೀವಂ, ಅಂತರಾಧಿಃ, ಇತಿಷಡಂಗಮುಂ ಗಮ್ ॥ (ಚರಕ॥ ಶಾರೀರ॥ ಅ ೭ ಸೂ ೫)

ಶರೀರದಅಂಗವಿಭಾಗವು "ದ್ವೌಬಾಹೂ" (ಎರಡುತೋಳುಗಳು)(೨), "ದ್ವೇಸಕ್ಥನೀ" (ಎರಡು ತೊಡೆಗಳು) (೨), "ಶಿರೋಗ್ರೀವಂ" ತಲೆಯಿಂದ ಸಹಿತವಾದ ಕುತ್ತಿಗೆಯು. ೬ "ಅಂತರಾಧಿಃ" ದೇಹದ ಮಧ್ಯಭಾಗವು. ಇವು ಆರು (೬) ಶರೀರದ ಅಂಗಗಳು.

ಪ್ರತ್ಯಂಗಗಳು

ಷಟ್ ಪಂಚಾಶತ್ ಪ್ರತ್ಯಂಗಾನಿಷಟ್ ಸ್ವಂಗೇಷೂಪನಿಬದ್ಧಾನಿ, ಯಾನ್ಯಪರಿಸಂಖ್ಯಾತಾನಿಪೂರ್ವಮುಂಗೇಷು ಪರಿಸಂಖ್ಯಾಯ ಮಾನೇಷು, ತಾನ್ಯನ್ಯೈಃ ಪರ್ಯಾಯೈರಿಹಪ್ರಕಾಶ್ಯಾನಿಭವಂತಿ ॥ ತದ್ಯಥಾ:– ದ್ವೇಜಂಘಾಪಿಂಡಿಕೆ, ದ್ವೇಊರುಪಿಂಡಿಕೆ, ದ್ವೌಸ್ಫಿಚೌ, ದ್ವೌವೃಷಣೌ, ಏಕಂಶೇಫಃ, ದ್ವೇಲುಖೆ, ದ್ವೌವಂಕ್ಷಣೌ, ದ್ವೌಕುಕುಂದರೌ, ಏಕಂಬಸ್ತಿಶೀರ್ಷಂ, ಏಕಂಉದರಂ, ದ್ವೌಸ್ತನೌ, ದ್ವೌಶ್ಲೇಷ್ಮಭುವೌ, ದ್ವೇಬಾಹುಪಿಂಡಿಕೆ, ಚಿಬುಕಮೇಕಂ, ದ್ವಾವೋಷ್ಠೌ, ದ್ವೇಸೃಕ್ಕಣೌ, ದ್ವೌದಂತವೇಷ್ಟಕೌ, ಏಕಂತಾಲು, ಏಕಾಗಲಶುಂಡಿಕಾ, ದ್ವೇಉಪಜಿಹ್ವಿಕೆ, ಏಕಾಗೋಜಿಹ್ವಿಕಾ, ದ್ವೌಗಂಡೌ, ದ್ವೇಕರ್ಣಶಷ್ಕುಲಿಕೆ, ದ್ವೌಕರ್ಣಪುತ್ರಕೌ, ದ್ವೇಅಕ್ಷಿಕೂಟೆ, ಚತ್ವಾರ್ಯಕ್ಷಿವರ್ತ್ಮಾನಿ, ದ್ವೇಅಕ್ಷಿಕನೀನಿಕೆ, ದ್ವೇಭ್ರುವೌ, ಚತ್ವಾರಿಸಾಣಿಪಾದಹೃದಯಾನಿ, ॥

(ಚರಕ॥ ಶಾರೀರ॥ ಅ ೭ ಸೂ ೧೧)

ಐವತ್ತಾರು (೫೬) ಪ್ರತ್ಯಂಗಗಳು, ಆರು (೬) ಮುಖ್ಯಾಂಗಗಳಲ್ಲಿ ಸಂಬದ್ಧವಾಗಿರುತ್ತವೆ. ಈಗ ಪ್ರತ್ಯಂಗವಾಗಿ ಹೇಳಬೇಕಾದಂಥವುಗಳು ಮೊದಲು ಅಂಗಗಳನ್ನು ಹೇಳಿದ್ದರಿಂದ ಗ್ರಹಣವಾಗುತ್ತಿದ್ದರೂ, ಇಲ್ಲಿ ಪ್ರತ್ಯಂಗಗಳನ್ನು ಪರ್ಯಾಯವಾಗಿ ಹೇಳಬೇಕಾದ್ದರಿಂದ ಪ್ರಕಾಶಿತವಾಗಿರುತ್ತವೆ. ಅರ್ಥಾತ್ ಹಸ್ತಪಾದಾದಿ ಷಡಂಗಗಳನ್ನು ಹೇಳಿರುವದರಿಂದಲೇ ಅವುಗಳಲ್ಲಿರುವ "**ಜಂಘಾಪಿಂಡಿಕಾದಿಗಳು**" ಹೇಳಲ್ಪಟ್ಟಿರುತ್ತವೆ. ಅವಯವ ವಿಶೇಷವಾದ "**ಪ್ರತ್ಯಂಗಗಳನ್ನು**" ಹೇಳಬೇಕಾದ್ದರಿಂದ ಪ್ರತ್ಯೇಕ ವ್ಯವಹಾರಕ್ಕಾಗಿ ವಿಶದೀಕರಿಸುತ್ತಾರೆ

೧ "**ಜಂಘಾಪಿಂಡಿಕೆ**" ಮೊಣಕಾಲುಗಳಲ್ಲಿ ಹಿಂದಿರುವ ಉಬ್ಬಿದ ಮಾಂಸಪಿಂಡಗಳು (೨), (೩) "**ಊರುಪಿಂಡಿಕೆ**" ತೊಡೆಗಳಲ್ಲಿರುವ ಮಾಂಸ ಪಿಂಡಗಳು (೨), (೩) "**ಸ್ಫಿಚೌ**" ಕಟಪ್ರದೇಶದಲ್ಲಿರುವ ಮಾಂಸಪಿಂಡಗಳು (೨), (೪) "**ವೃಷಣೌ**" ಪುರುಷರ ಅಂಡಬೀಜಗಳು (೨), (೫) "**ಶೇಫಃ**" ಪುರುಷನ ಜನನೇಂದ್ರಿಯ (೧), (೬) "**ಉಖೆ**" ಬಗಲುಗಳಲ್ಲಿಯ ತಗ್ಗು ಪ್ರದೇಶಗಳು (೨), (೭) "**ವಂಕ್ಷಣೌ**" ತೊಡೆಯ ಎಲವುಗಳ ಸಂಧಿಗಳು (೨), (೮) "**ಕುಕುಂದರೌ**" ನಿತಂಬದ ಕೆಳಗಡೆಯಿರುವ ತಗ್ಗು ಪ್ರದೇಶಗಳು (೨), (೯) "**ಬಸ್ತಿಶೀರ್ಷಂ**" ಬಸ್ತಿಯ ಬುಡ ನಾಭಿಯ ಕೆಳಭಾಗವು (೧), (೧೦) "**ಉದರಂ**" ಹೊಟ್ಟೆಯು (೧), (೧೧) "**ಸ್ತನೌ**" ಮೊಲೆಗಳು (೨), (೧೨) "**ಶ್ಲೇಷ್ಮಧರೌ**" ಕುತ್ತಿಗೆಯ ಎಡಬಲ ಪಾರ್ಶ್ವಗಲ್ಲಿರುವ ವ್ಯವಸ್ಥಿತವಾದ ಕಫದಭಾಗಗಳು (೨), (೧೩) "**ಬಾಹುಪಿಂಡಿಕೆ**" ತೋಳಿನ ಮೊಳಕೈ ಮತ್ತು ಮೇಲ್ಭಾಗಕ್ಕಿರುವ ಮಾಂಸದ ಪಿಂಡಿಕೆಗಳು (೨), (೧೪) "**ಚಿಬುಕಂ**" ತುಟಿಯ ಕೆಳಭಾಗ ಗದ್ದವು (೧), (೧೫) "**ಓಷ್ಠೌ**" ಮೇಲೆ ಕೆಳಗಿನ ತುಟಿಗಳು (೨), (೧೬) "**ಸೃಕ್ಕಣ್ಯೌ**" ತುಟಿಗಳ ಅಂತ್ಯಭಾಗವಾದ "**ಕಟಬಾಯಿಗಳು**" ಅಥವಾ ಎರಡೂ ಕಟಬಾಯಿಗಳ ಎಡಬಲಗಳಲ್ಲಿರುವ ಒಳಗಿನ ಭಾಗಗಳು (೨),(೧೭) "**ದಂತವೇಷ್ಟಕೌ**" ದಂತಪಂಗ್ತಿಗಳ ಬುಡದಲ್ಲಿರುವ ಮಾಂಸವೇಷ್ಟನ "**ವಸಡಿಗಳು**" (೨), (೧೮) "**ತಾಲು**" ನಾಲಿಗೆಯ ಮೇಲ್ಭಾಗದಲ್ಲಿರುವ ಭಿತ್ತಿಪ್ರದೇಶ "**ಅಂಗಳವು**" (೧), [೧೯] "**ಗಲಶುಂಡಿಕಾ**" ತಾಲು ಮೂಲದಲ್ಲಿ ನಾಲಿಗೆಗೆಹತ್ತಿಕೊಂಡಿರುವ, ಕಂಠ ರಂಧ್ರ

ದಲ್ಲಿಯ ಸೂಕ್ಷ್ಮವಾದ ಮಾಂಸಪಿಂಡವು, ಇದು ಕಿರುನಾಲಿಗೆಅಲ್ಲ [೧], [೨೦] "**ಉಪಜಿಹ್ವಿಕೆ**" ನಾಲಿಗೆಯ ಮೇಲ್ಭಾಗದಲ್ಲಿರುವ ಕಿರುನಾಲಿಗೆ, ಮತ್ತು ನಾಲಿಗೆಯ ಕೆಳಗೆ ಹತ್ತಿಕೊಂಡಿರುವ ನಾಲಿಗೆ ಕೆಳಪ್ರದೇಶ, ಉಪ ಜಿಹ್ವೆಗಳು [೨], [೨೧] "**ಗೋಜಿಹ್ವಿಕಾ**" ಮಾತಾಡಲಿಕ್ಕೆ ಕಾರಣವಾದ ಪ್ರಧಾನಜಿಹ್ವೆ "ನಾಲಿಗೆಯು" [೧], [೨೨] "**ಗಂಡೌ**" ಎಡಬಲಗಳಲ್ಲಿರುವ "ಕವ್ಹೋಲಗಳು" [೨], [೨೩] "**ಕರ್ಣಶಷ್ಕುಲಿಕೆ**" ಕಿವಿರಂಧ್ರಗಳ ಮುರಿಗೆ ಗಳು [೨], [೨೪] "**ಕರ್ಣಪುತ್ರಕೌ**" ರಂಧ್ರದ ಸುತ್ತಲೂ ಬಹಿರ್ಭಾಗ ದಲ್ಲಿರುವ "ಕಿವಿಗಳು" [೨], [೨೫] "**ಅಕ್ಷಿಕೂಟೆ**" ಅಕ್ಷಿಗೋಲಕ "ಕಣ್ಣು ಗುಡ್ಡೆಗಳು" [೨], [೨೬] "**ಅಕ್ಷಿಕನೀನಿಕೆ**" ಮೂಗಿನ ಆದಿಯಲ್ಲಿ ಹತ್ತಿ ಕೊಂಡಿರುವ ಎರಡೂ ಕಣ್ಣುಗಳ ಸಂಧಿ ಭಾಗಗಳು [೨], [೨೭] "**ಭ್ರುವೌ**" ಹುಬ್ಬು, ಕಣ್ಣಿನಮೇಲ್ಭಾಗಗಳು [೨], ಈಗ ಹೇಳಿದ ೪ ಕ್ಕೆ "**ಅಕ್ಷಿವರ್ತ್ಮ**" ವೆಂಬ ಹೆಸರು. [೨೮] "**ಆವಟುಃ**" ಕುತ್ತಿಗೆ ತಲೆಗಳೆರಡೂ ಕೂಡುವ ಹಿಂಬದಿಯ ಸಂಧಿ ಭಾಗದಲ್ಲಿರುವ ಗಂಟು, ಅಥವಾ, ಹಿಂಬದಿಯಲ್ಲಿ ಎರಡೂ ಭುಜಗಳ ಸರಿಯಾಗಿ ಮಧ್ಯದಲ್ಲಿರುವ ಕುತ್ತಿಗೆಯ ಸಂಧಾನಕವಾದ ಗಂಟು, ಇಲ್ಲವೇ, ಕುತ್ತಿಗೇ ಸಂಧಿಯ ನಂತರವಾದ ಭಾಗವು [೧], [೨೯] "**ಪಾಣಿ ಪಾದಹೃದಯಾನಿ**" ಹಸ್ತಪಾದಗಳ ತಳಭಾಗಗಳಲ್ಲಿಯ ಮಧ್ಯ ಪ್ರದೇಶವು [೪], ಹೀಗೆ ಅಂಗಗಳು[೬], ಉಪಾಂಗಗಳು [೫೬] ಚರಕ ಮತದಂತೆ ಇರುತ್ತವೆ.

ಶರೀರವಿಭಾಗ ನಿರ್ದೇಶವು

ತಸ್ಯ ಪುನಃ ಸಂಖ್ಯಾನಂ :— ತ್ವಚಃ ಕಲಾಧಾತವೋಮಲಾ ದೋಷಾ ಯಕೃತ್ ಪ್ಲೀಹಾನೌ ಫುಫ್ಫುಸ ಉಂಡುಕೋಹೃದ ಯಮಾಶಯಾ ಅಂತ್ರಾಣಿವೃಕ್ಕೌ ಸ್ರೋತಾಂಸಿಕಂಡರಾಜಾ ಲಾನಿಕೂರ್ಚಾರಜ್ಜವಃ ಸೇವನ್ಯಃ ಸಂಘಾತಾಃ ಸೀಮಂತಾ ಅಸ್ಥೀನಿ ಸಂಧಯಃ ಸ್ನಾಯವಃ ಪೇಶ್ಯೋಮರ್ಮಾಣಿಸಿರಾಧ ಮನ್ಯೋ ಯೋಗವಹಾನಿ ಸ್ರೋತಾಂಸಿ ಚ ॥

(ಸುಶ್ರುತ॥ ಶಾರೀರ॥ ಅ. ೫ ಸೂ. ೫)

(೧) "ತ್ವಚಃ" ಚರ್ಮಗಳು. (೨) "ಕಲಾ" ಆಶಯಗಳ ಸ್ಥಾನಗಳ ಸುತ್ತಲಿರುವ ಪ್ರದೇಶಗಳು (೩) "ಧಾತವಃ" ರಸದಿಂದಾರಂಭಿಸಿ ಶುಕ್ರ ಪರ್ಯಂತವಾದ ಧಾತುಗಳು. (೪) "ಮಲಾ" ಮಲಮೂತ್ರ ಸ್ವೇದಾದಿಗಳು. (೫) "ದೋಷಾಃ" ವಾತ ಪಿತ್ತ ಕಫಗಳು. (೬) "ಯಕೃತ್ ಪ್ಲೀಹಾನೌ" ಯಕೃತ್‌ಖಂಡ, ಪ್ಲೀಹಗಳು. (೭) "ಫುಫ್ಫುಸಃ" ಎಡಬಲದ ಎರಡು ಭಾಗಗಳುಳ್ಳ ಫುಫ್ಫುಸವು. (೮) "ಉಂಡುಕಃ" ಕೋಷ್ಠದ ಒಳಗಿನ ಭಾಗದಲ್ಲಿದ್ದು ಮಲಮೂತ್ರಗಳನ್ನು ವಿಭಾಗಿಸುತ್ತದೆ. (೯)"ಹೃದಯಂ"ಹೃದಯವುಜೀವಿಸಲಿಕ್ಕೆ ಅತಿಮುಖ್ಯವಾದದ್ದೂ ಸತ್ವಮಯವೂ ಚೇತನಾಧಿಷ್ಠಾನವೂಆಗಿರುತ್ತದೆ. (೧೦) "ಆಶಯಾಃ" ವಾತಾಶಯಾದಿ ಏಳುಆಶಯಗಳು, ಸ್ತ್ರೀಯರಿಗೆ ಗರ್ಭಾಶಯವು ಅಧಿಕವಿರುತ್ತದೆ. (೧೧) "ಅಂತ್ರಾಣಿ" ದೊಡ್ಡ ಕರುಳು ಸಣ್ಣ ಕರುಳುಗಳೆಂಬ ಭೇದವುಳ್ಳ ಕರುಳುಗಳು. (೧೨) "ವೃಕ್ಕೌ" ಹೊಟ್ಟೆಯಲ್ಲಿರುವ ಮಾಂಸದ ಪಿಂಡಗಳು "ಕುಕ್ಷಿಗೋಲಕೌ" ಎಂದು ಹೇಳುತ್ತಾರೆ. (೧೩) "ಸ್ರೋತಾಂಸಿ" ಕಿವಿ ಮೊದಲಾದ ರಂಧ್ರಗಳು. (೧೪) "ಕಂಡರಾಃ" ಕಂಡರವೆಂದರೆ ಮಹಾಸ್ನಾಯುಗಳು. (೧೫) "ಜಾಲಾನಿ" ಮಾಂಸ ಸಿರಾಸ್ನಾಯು ಅಸ್ಥಿಗಳ ಪರಸ್ಪರವಾಗಿ ಕೂಡಿ ಹೆಣೆಯಲ್ಪಟ್ಟ ಜಾಳಿಗೆ (ಬಲೆ) ಯಂತೆ ಇರುತ್ತವೆ. ಆದ್ದರಿಂದ "ಜಾಲಾನಿ" ಎಂದು ಹೇಳಿದ್ದಾರೆ. (೧೬) "ಕೂರ್ಚಾ" ಬೇರೆಬೇರೆಯಾದ ಬೆರಳು ಮೊದಲಾದವುಗಳು ಕೂಡಿ ಒಟ್ಟಾದ ಭಾಗವು. ಕುಂಚದಂತೆ ಕಾಣುತ್ತಿರುತ್ತವೆ (೧೭) "ರಜ್ಜವಃ" ಹಗ್ಗದಂತಿರುವ ಮಾಂಸ ರಜ್ಜುಗಳು (೧೮) "ಸೇವನ್ಯಃ" ಹೊಲಿಗೆಗಳು ಎರಡು ವಿಭಾಗಗಳನ್ನು ಕೂಡಿಸಿ ಹೊಲಿದಂತೆ ಇರುವ ಸ್ಥಳಗಳು. (೧೯) "ಸಂಘಾತಾಃ" ಅಸ್ಥಿಗಳು ಗುಂಪಾಗಿ ಕೂಡಿದ ಭಾಗಗಳು. (೨೦) "ಸೀವಂತಾಃ" ಅಸ್ಥಿಗಳ ಕೂಡುವಿಕೆಯ ಮಧ್ಯವು. ಬೈತಲೆಯಂತೇ ಇರುವದರಿಂದ "ಸೀವಂತ"ವೆಂದು ಹೇಳಿದ್ದಾರೆ. (೨೧) "ಅಸ್ಥೀನಿ" ಎಲುವುಗಳು. (೨೨) "ಸಂಧಯಃ" ಅಸ್ಥಿಗಳು ಒಂದಕ್ಕೊಂದುಕೂಡಿದಸ್ಥಳ ಸಂಧಿಗಳು ಕನ್ನಡದಲ್ಲಿ "ಎಲುಬುಗಳ ಕೀಲುಗಳೆಂದು" ಅನ್ನುತ್ತಾರೆ. (೨೩) "ಸ್ನಾಯವಃ" ದೇಹದಲ್ಲಿಯ ಅಸ್ಥಿಗೆ ಹೊಂದಿದ ಮಾಂಸಾದಿಗಳನ್ನು ಕದಲದಂತೆ ಆವಾವ ಸ್ಥಳದಲ್ಲಿ ಬಿಗಿಯಾಗಿ ಕಟ್ಟುವ ಬಂಧನಗಳೇ ಸ್ನಾಯುಗಳು. ಬಿರುಸಾದ ಮಾಂಸದ ಪಟ್ಟಿಯಂತೇ

ಇರುತ್ತವೆ. (೨೪) "ಪೇಶ್ಯಃ" ಮಾಂಸದಚೀಲಗಳು (೨೫) "ಮರ್ಮಾಣಿ":- ವ್ಯಾಯತೆಅನೇನೇತಿ ಮರ್ಮ ॥ ಯಾವ ಸ್ಥಳದಲ್ಲಿ ಪೆಟ್ಟು ತಾಗಿದರೆ ಸಾಯುವದು ಅಥವಾ ಅತ್ಯಂತ ನೋವಾಗುವದೋ, ಅದು ಮರ್ಮವು (೨೬) "ಸಿರಾಃ":— ಸರಣಾತ್ ಸಿರಾಃ ॥ ರಸರಕ್ತಾದಿಗಳನ್ನು ಶರೀರದ ಎಲ್ಲ ಭಾಗಕ್ಕೂ ಒಯ್ಯಲು, ಪಸರಿಸಿದ "ನರಗಳು" ಅವುಗಳಿಗೆ "ಸಿರಾ" ಎಂಬ ಹೆಸರು (೨೭) "ಧಮನ್ಯಃ":— ಧ್ಮಾನಾದ್ಧಮನ್ಯಃ ॥ ಬಾಹ್ಯವಾದ ರಸ ವೊದಲಾದವುಗಳನ್ನು ತಕ್ಕೊಂಡು ತುಂಬಿಕೊಂಡು ಪಸರಿಸುವದರಿಂದ, ಧಮನಿಗಳೆಂಬ ಹೆಸರು. (೨೮) "ಯೋಗವಹಾನಿಸ್ರೋತಾಂಸಿಚ" ಧಮನೀ ವ್ಯಾಕರಣದಲ್ಲಿ ಹೇಳುವ, ಪ್ರಾಣೋದಕ ಅನ್ನವಾಹಿಗಳಾದ ಅಂತ ರ್ಮುಖ ಸ್ರೋತಸ್ಸುಗಳು. ಹಿಂದೆ ಹೇಳಿರುವವು "ಬಹಿರ್ಮುಖ" ಬಾಯಿ ಮೊದಲಾದವುಗಳು.

ಧ್ಮಾನಾದ್ಧಮನ್ಯಃ, ಸ್ರವಣಾತ್ಸ್ರೋತಾಂಸಿ, ಸರಣಾತ್ ಸಿರಾಃ॥
(ಚರಕ॥ ಸೂತ್ರ. ಸ್ಥಾ. ಅ. ೩೦ ಸೂ. ೧೨)

ಆಹಾರ ರಸಾದಿಗಳನ್ನು ಹೊರಗಿನಿಂದ ತನ್ನಲ್ಲಿ ತುಂಬಿಕೊಂಡು ನಡೆ ಸುತ್ತದೆಯೆಂದು "ಧಮನಿ"ಯೆಂಬ ಹೆಸರು. ಪೋಷಕ ರಸಾದಿಗಳ ಸ್ರವಣದಿಂದ "ಸ್ರೋತಸ್ಸೆಂಬ" ಹೆಸರು. ದೇಹದಲ್ಲಿ ಎಲ್ಲ ಕಡೆಗೂ ರಸಾದಿಗಳನ್ನು ಪ್ರಸರಣ ಮಾಡುವದರಿಂದ "ಸಿರಾ" ಎಂದನ್ನುವರು.

ಮುಖ್ಯವಾಗಿ ಶರೀರ ವಿಭಾಗಗಳ ನಾಮ ನಿರ್ದೇಶಾತ್ಮಕವಾಗಿ (೨೯) ಇರುತ್ತವೆ. "ಯಕೃತ್ಪ್ಲೀಹ" ಎಂಬಲ್ಲಿ ಎರಡು ಸಂಖ್ಯೆಯನ್ನುಗ್ರಹಿಸಬೇಕು.

ಶರೀರ ವಿಭಾಗಗಳ ಸಂಖ್ಯಾ ನಿರ್ದೇಶವು.

ತ್ವಚಃಸಪ್ತ, ಕಲಾಃಸಪ್ತ, ಆಶಯಾಃಸಪ್ತ, ಧಾತವಃಸಪ್ತ, ಸಪ್ತ ಸಿರಾಶತಾನಿ,ಪಂಚಪೇಶೀಶತಾನಿ, ನವಸ್ನಾಯುಶತಾನಿ,ತ್ರೀಣ್ಯ ಸ್ಥಿಶತಾನಿ, ದ್ವೇದಶೋತ್ತರೇಸಂಧಿಶತೆ,ಸಪ್ತೋತ್ತರಂ ಮರ್ಮ ಶತಂ, ಚತುರ್ವಿಂಶತಿರ್ಧಮನ್ಯಃ, ತ್ರಯೋದೋಷಾಃ, ತ್ರಯೋ

ಮಲಾಃ, ನವಸ್ರೋತಾಂಸಿ, ಷೋಡಶಕಂಡರಾಃ, ಷೋಡಶ ಜಾಲಾನಿ, ಷಟ್ ಕೂರ್ಚಾಃ, ಚತಸ್ರೋರಜ್ಜವಃ, ಸಪ್ತ ಸೇವನ್ಯಃ, ಚತುರ್ದಶ ಸಂಘಾತಾಃ, ಚತುರ್ದಶ ಸೀವನಂತಾಃ, ದ್ವಾವಿಂಶತಿರ್ಮರ್ಮಾಣಿ, ದ್ವಿಕಾನ್ಯಂತ್ರಾಣಿ, ಚೇತಿಸಮಾಸಃ॥ [ಸುಶ್ರುತ॥ ಶಾರೀರ॥ ಅ. ೫ ಸೂ. ೬]

೧] ಚರಕ ಮತದಂತೆ:— ತ್ವಚಿಗಳು [೬]
"ತ್ವಚಃ" ಚರ್ಮಗಳು [೭]

೨] "ಕಲಾಃ" ಕಲಾಸ್ಥಾನಗಳು [೭]

೩] "ಆಶಯಾಃ" ವಾತಾದಿ ಆಶಯಗಳು [೭]

೪] "ಧಾತವಃ" ರಸಾದಿ ಧಾತುಗಳು [೭]

೫] "ಸಿರಾಃ" ದೇಹದಲ್ಲಿ ರಸರಕ್ತಾದಿಗಳನ್ನು ಸಂಚಾರ ಮಾಡಿಸುವ ನರಗಳು [೭೦೦]

೬] "ಪೇಶ್ಯಃ" ಮಾಂಸ ಚೀಲಗಳು [೫೦೦]

೭] "ಸ್ನಾಯವಃ" ಸ್ನಾಯುಗಳು [೯೦೦]

೮] "ಅಸ್ಥೀನಿ" ಅಸ್ಥಿಗಳು [೩೦೦]

೯] "ಸಂಧಯಃ" ಸಂಧಿಗಳು [೨೧೦]
ಅತ್ರೇಯ ಮತದಂತೆ:— ಸಂಧಿಗಳು [೨೦೦೦]

೧೦] "ಮರ್ಮಾಣಿ" ಮರ್ಮಗಳು [೧೦೭]

೧೧] "ಧಮನ್ಯಃ" ಧಮನಿಗಳು [೨೪]

೧೨] "ದೋಷಾಃ" ವಾತ ಪಿತ್ತ ಕಫಗಳು [೩]

೧೩] "ಮಲಾಃ" ಮಲಮೂತ್ರ ಸ್ವೇದಗಳು [೩]

೧೪] "ಸ್ರೋತಾಂಸಿ" ಬಹಿರ್ಮುಖವಾದ ಬಾಯಿ ಮೊದಲಾದ ರಂಧ್ರಗಳು [೯]

೧೫] "ಕಂಡರಾಃ" ಮಹಾಸ್ನಾಯುಗಳು [೧೬]

೧೬] "ಜಾಲಾನಿ" ಬಲೆಗಳಂತೆ ಇದ್ದವುಗಳು [೧೬]

೧೭] "ಕೂರ್ಚಾಃ" ಕುಂಚನದಂತಿರುವವುಗಳು [೬]

೧೮] "ರಜ್ಜವಃ" ಮಾಂಸದ ಹಗ್ಗಗಳು [೪]

೧೯] "ಸೇವನ್ಯಃ" ಹೊಲಿಗೆಗಳು [೭]
೨೦] "ಸಂಘಾತಾಃ" ಅಸ್ಥಿಗಳ ಗುಂಪುಗಳು [೧೪]
೨೧] "ಸೀವ್ಯಂತಾಃ" ಅಸ್ಥಿಗಳು ಕೂಡುವ ಮಧ್ಯ ಭಾಗಗಳು
ಬೈತಲೆಯಂತೆ ಇರುತ್ತವೆ [೧೪]
೨೨] "ಯೋಗವಾಹಿಸ್ರೋತಾಂಸಿ" ಅಂತರ್ಮುಖ
ಸ್ರೋತಸ್ಸುಗಳು [೨೨]
೨೩["ಅಂತ್ರಾಣಿ" ದೊಡ್ಡ ಮತ್ತು ಸಣ್ಣ ಕರುಳುಗಳು [೨]

ಪ್ರತಿಯೊಂದು ವಿಭಾಗದ ಸಂಖ್ಯಾ ನಿರ್ದೇಶವು ಮುಗಿಯಿತು.

(೧೯) ಸಪ್ತತ್ವಗ್ವಿಜ್ಞಾನವು

ದೇಹಕ್ಕೆ ಬಹಿರ್ಭಾಗದಲ್ಲಿ ಆವರಣೆಯೆಂದರೆ ಚರ್ಮ [ತ್ವಕ್] ವಾಗಿರುತ್ತದೆ. ಮರಗಳಿಗೆ ಹೇಗೆ ತೊಗಟೆಯು (ಚಲ್ಲಿ) ಹೊರಭಾಗದಲ್ಲಿದ್ದು ಒಳಭಾಗವನ್ನು ರಕ್ಷಿಸುತ್ತದೆಯೋ, ಅದರಂತೆ ಚರ್ಮವು ಬಹಿರ್ಭಾಗದಲ್ಲಿದ್ದು ಕೊಂಡು ದೇಹವನ್ನೂ, ಒಳಭಾಗವನ್ನೂ ರಕ್ಷಿಸುತ್ತದೆ. ಮೇಲೆ ಕಾಣುವ ಚರ್ಮದ ಒಳಗಡೆಗೆ ಬಹಳೇ ತೆಳುವಾದ ಚರ್ಮದ ಥರಗಳು ಇರುತ್ತವೆ. ಅವುಗಳಿಗೆ "ಅಂತಸ್ತ್ವಚಃ" ಎಂದು ಅನ್ನುತ್ತಾರೆ. ಬಹಿರ್ಭೂತವಾದ ಸ್ಥೂಲ ಚರ್ಮದ ಒಳಗಡೆ [೬] ಚರ್ಮಗಳು ಒಂದರ ಮೇಲೊಂದರಂತೆ ಇರುತ್ತವೆ. ಬಾಹ್ಯ ಚರ್ಮ (೧), ಅಂತರ್ಭಾಗದಲ್ಲಿ (೬), ಹೀಗೆ [೭] ತ್ವಚೆಗಳು ಇರುತ್ತವೆ.

ತ್ವಚೋನಾಮ:— ಸರ್ವದೇಹಾವರಣರೂಪಾ, ಭೂಮಿಃ ಸ್ಪರ್ಶನೇಂದ್ರಿಯಸ್ಯ ಸ್ರೋತಸಾಂ ಚ ಸ್ವೇದವಹಾನಾಂ, ರೋಮ್ಣಾಮಪಿ ಸರೋಮಕೂಪಾನಾಂ ॥

ಚರ್ಮಗಳೆಂದರೆ ಸಂಪೂರ್ಣ ದೇಹಕ್ಕೆ ಹೊದಿಕೆಯಂತಿರುತ್ತವೆ. ನಾವು ಯಾವದರಿಂದ ಸ್ಪರ್ಶಜ್ಞಾನವಾಡಿಕೊಳ್ಳುತ್ತೇವೆಯೋ ಅಂಥ ಸ್ಪರ್ಶನೇಂದ್ರಿ

ಯವು, ಸಮಗ್ರಶರೀರದಲ್ಲಿ ಚರ್ಮವನ್ನಾಶ್ರಯಿಸಿಯೇ ಇರುತ್ತದೆ. ಮುಖಾದಿ ರಂಧ್ರಗಳಿಗೂ, ಸ್ವೇದ [ಬೆವರು]ವನ್ನು ಹೊರಗೆ ಹಾಕುವ ಸ್ವೇದವಾಹಕವಾದ ಪರಮ ಸೂಕ್ಷ್ಮ ಸಿರಗಳಿಗೂ, ಕೂದಲುಗಳಿಗೂ, ಸೂಕ್ಷ್ಮಛಿದ್ರಗಳಾದ ರೋಮ ಕೂಪಗಳಿಗೂ, ಆಶ್ರಯಭೂಮಿಯಾಗಿರುತ್ತವೆ

ತಸ್ಯಖಲ್ವೇವಂ ಪ್ರವೃತ್ತಸ್ಯ ಶುಕ್ರಶೋಣಿತಸ್ಯಾಭಿಪಚ್ಯಮಾನಸ್ಯ ಕ್ಷೀರಸ್ಯೈವ ಸಂತಾನಿಕಾಃ ಸಪ್ತತ್ವಚೋ ಭವಂತಿ ॥

[ಸುಶ್ರುತ॥ ಶಾರೀರ॥ ಅ ೪ ಸೂ. ೪]

ಗರ್ಭಾಶಯದಲ್ಲಿ ಮಿಲಿತವಾದ ಶುಕ್ರಶೋಣಿತದ ಗುಂಪು, ಭೂತಾತ್ಮ [ಜೀವ] ನಿಂದ ಕೂಡಿರಲು, ಅದು ಗರ್ಭಾಶಯ ತೇಜಸ್ಸಿನಿಂದ [ಉಷ್ಣತೆಯಿಂದ] ಪಾಕವಾಗುತ್ತದೆ. ಆಗ ಕಾಯಿಸುತ್ತಿರುವ ಹಾಲಿಗೆ ಹೇಗೆ ಕೆನೆ [ಥರ] ಬರುತ್ತದೆಯೋ, ಅದರಂತೇ ಶುಕ್ರಶೋಣಿತ ಗುಂಪಿನ ಪಾಕವಾಗುತ್ತಿರಲು ಚರ್ಮ [ಆವರಣ] ಗಳು ಉತ್ಪನ್ನವಾಗುತ್ತವೆ.

* ತ್ವಚಾವಿಷಯತಂತ್ರಾಂತರದಲ್ಲಿ

ತ್ವಚಾಯಾಮಖಿಲಃ ಕಾಯಃ ಸಂವೃತೋವಿಶ್ವಕರ್ಮಣಾ॥
ಬಾಹ್ಯೋಪದ್ರವಸಂಘಾತಾದ್ರಕ್ಷಿತಃ ಸಾಧುತಿಷ್ಠತಿ ॥೧॥

ಸ್ತರದ್ವಯವತೀಯಂತ್ವಕ್ ಬಾಹ್ಯಚರ್ಮೇತಿಕಥ್ಯತೇ॥
ಸ್ತರೋನಾಮೋಚ್ಯತೇಂತಸ್ತ್ವಕ್ ಭೂಮಿಃ ಸ್ಪರ್ಶೇಂದ್ರಿಯಸ್ಯಸಾ ॥೨॥

ಉಪರ್ಯುಪರಿವಿಸ್ತೀರ್ಣಸ್ತರಸಪ್ತಕಸಂಹತೇ॥
ಏಷಾತ್ವಗಖಿಲಾಜಾತಾಕೈಶ್ಚಿದಿತಿಚಮನ್ಯತೇ ॥೩॥

ತೋಯಾನಿಲಾದಿಸಂಕರ್ಷಃ ಸ್ವೇದಸ್ಯಚವಿನಿರ್ಗಮಃ ॥
ದೈಹಿಕಸ್ಯೋಷ್ಮಣೋರಕ್ಷಾತ್ವಚಾಸಂಪದ್ಯತೇಧೃವಮ್ ॥೪॥

ಸೃಷ್ಟಿಕರ್ತನಾದ ವಿಶ್ವಕರ್ಮನು ಚರ್ಮದಿಂದ ಸಂಪೂರ್ಣದೇಹವನ್ನು ಸುತ್ತಿರುತ್ತಾನೆ. ಚರ್ಮದಲ್ಲಿ ದೇಹವನ್ನು ಇಟ್ಟು ಸುತ್ತಲ್ಪಟ್ಟಂತೆ ಸಮಗ್ರ ದೇಹವನ್ನು ಚರ್ಮವು ವ್ಯಾಪಿಸಿರುತ್ತದೆ. ಹೊರಗೆ ಚರ್ಮದ ಆವರಣ ರೂಪವಾದ ಹೊದಿಕೆಇರುವದರಿಂದ ಬಾಹ್ಯವಾದ ಚಳಿಮಳೆ ಉಷ್ಣತೆ ಆಘಾತಾದಿಗಳಿಂದ, ಒಳಭಾಗ ದೇಹವು ರಕ್ಷಿಸಲ್ಪಟ್ಟಿದ್ದಾಗಿ ಚನ್ನಾಗಿರುತ್ತದೆ. ತ್ವಚಾದಲ್ಲಿ ಎರಡು ವಿಭಾಗಗಳನ್ನು ಮಾಡಿರುತ್ತಾರೆ. ಕಣ್ಣಿಗೆ ಕಾಣುವ ಬಾಹ್ಯದಲ್ಲಿರುವದಕ್ಕೆ "ಚರ್ಮ"ವೆಂದೂ ಒಳಗಡೆ ಇರುವ ತ್ವಚೆಗೆ "ಸ್ತರ"ವೆಂದೂ ಅನ್ನುತ್ತಾರೆ ಸ್ತರದಲ್ಲಿ ಸ್ಪರ್ಶೇಂದ್ರಿಯ ಆಶ್ರಯಸ್ಥಾನವು ಇರುತ್ತದೆ. ಸ್ಪರ್ಶೇಂದ್ರಿಯ ಆಶ್ರಯವಾದ ಅಂತಸ್ತ್ವಚೆಗೆ "ಸ್ತರ"ವೆಂದು ಹೇಳುತ್ತಾರೆ.

ಒಂದರಮೇಲೊಂದರಂತೆ ಸ್ತರಗಳು (೭) ಕೂಡಿ ಒಂದು ಥಪ್ಪವಾದ ತ್ವಚೆಯಾಗಿದೆಯೆಂದು, ಕೆಲವರಿಂದ ತಿಳಿಯಲ್ಪಡುತ್ತದೆ. ಎಲ್ಲ ಚರ್ಮಗಳು ಒಟ್ಟಾಗಿ ಒಂದರಮೇಲೊಂದರಂತೆ ಹೊಂದಿಕೊಂಡು, ಈ ಸ್ಥೂಲವಾದ (ಥಪ್ಪ) ತ್ವಚೆಯಾಗಿದೆಯೆಂದು ಕೆಲವರು ಹೇಳುತ್ತಾರೆ. ನೀರು ಗಾಳಿ ಮೊದಲಾದವುಗಳನ್ನು ಒಳಗೆ ತಕ್ಕೊಳ್ಳುವದು ಸ್ವೇದವನ್ನು ಹೊರಗೆ ಹಾಕುವದು ಮೊದಲಾದ ಕರ್ತವ್ಯಗಳನ್ನು ತ್ವಚೆಯು ಮಾಡುತ್ತದೆ. ದೇಹದ ಒಳಭಾಗಗಳಲ್ಲಿ ಉಷ್ಣತೆಯನ್ನು ರಕ್ಷಿಸುವ ಕೆಲಸವು ತ್ವಚೆಯಿಂದಲೇ ನಡೆಯುತ್ತದೆ. ಅರ್ಥಾತ್ ದೇಹದ ಒಳಭಾಗ ಹೊರಭಾಗಗಳು ತ್ವಚೆಯಿಂದ ರಕ್ಷಿತವಾಗುತ್ತವೆಂದರ್ಥವು.

ಸಪ್ತತ್ವಚಃ

ತಾಸಾಂಪ್ರಥಮ್ಯಾವಭಾಸಿನೀನಾಮು, ಯಾ ಸರ್ವಾನ್‌ವರ್ಣಾನವಭಾಸಯತಿ ಪಂಚವಿಧಾಂಚಛಾಯಾಂ ಪ್ರಕಾಶಯತಿ, ಸಾವ್ರೀಹೇರಷ್ಟಾದಶಭಾಗಪ್ರಮಾಣಾ, ಸಿಧ್ಮಪದ್ಮಕಂಟಕಾಧಿಷ್ಠಾನಾ; ದ್ವಿತೀಯಾಲೋಹಿತಾನಾಮು, ಷೋಡಶಭಾಗಪ್ರ

★ ಈ ಗುರುತುಳ್ಳ ವಿಷಯಗಳು ತಂತ್ರಾಂತರದಲ್ಲಿಯವೆಂದು ತಿಳಿಯಬೇಕು.

ಮಾಣಾ, ತಿಲಕಾಲಕನ್ಯಚ್ಛವ್ಯಂಗಾಧಿಷ್ಠಾನಾ; ತೃತೀಯಾಶ್ವೇತಾನಾಮ, ದ್ವಾದಶಭಾಗಪ್ರಮಾಣಾ, ಚರ್ಮದಲಾಜಗಲ್ಲೀಮುಷಕಾಧಿಷ್ಠಾನಾ; ಚತುರ್ಥೀತಾಮ್ರಾನಾಮಷ್ಟಭಾಗ ಪ್ರಮಾಣಾ, ವಿವಿಧಕಿಲಾಸಕುಷ್ಠಾಧಿಷ್ಠಾನಾ; ಪಂಚಮೀನೇದಿನೀನಾಮಷ್ಟಭಾಗಪ್ರಮಾಣಾ, ಕುಷ್ಠವಿಸರ್ಪಾಧಿಷ್ಠಾನಾ; ಷಷ್ಠೀರೋಹಿಣೀನಾಮವ್ರೀಹಿಪ್ರಮಾಣಾ, ಗ್ರಂಥ್ಯಪಚ್ಯರ್ಬುದಶ್ಲೀಪದಗಲಗಂಡಾಧಿಷ್ಠಾನಾ; ಸಪ್ತಮೀಮಾಂಸಧರಾನಾಮವ್ರೀಹಿದ್ವ್ಯಯಪ್ರಮಾಣಾ, ಭಗಂದರ ವಿದ್ರಧ್ಯರ್ಶೋಽಧಿಷ್ಠಾನಾ ॥ ಯದೇತತ್ಪ್ರಮಾಣಂ ನಿರ್ದಿಷ್ಟಂ ತನ್ಮಾಂಸಲೇಷ್ವವಕಾಶೇಷು, ನಲಲಾಟೇಸೂಕ್ಷ್ಮಾಽಂಗುಲ್ಯಾದಿಷುಚ; ಯತೋವಕ್ಷ್ಯತ್ಯುದರೇಷು:- ವ್ರೀಹಿಮುಖೇನಾಂಗುಷ್ಠೋದರಪ್ರಮಾಣಮವಗಾಢಂವಿಧ್ಯೇತ್, (ಚಿ. ಅ. ೧೪) ಇತಿ॥

(ಸುಶ್ರುತ॥ ಶಾರೀರ॥ ಅ ೪ ಸೂ ೪)

(೧) "ಅವಭಾಸಿನೀ" ಎಂಬ ಹೆಸರುಳ್ಳ ಮೊದಲನೇಯ ತ್ವಚೆಯು ಶ್ವೇತ ಕೃಷ್ಣಾದಿವರ್ಣ (ಬಣ್ಣ) ಗಳನ್ನು ತನ್ನಲ್ಲಿರುವ ಭ್ರಾಜಕಾಗ್ನಿಯಿಂದ; ಸ್ಪುಟವಾಗಿ ಭಾಸವಾಗುವಂತೆ ಮಾಡುತ್ತದೆ. ಪಂಚಭೂತಗಳ ಸ್ವರೂಪವಾದ "ತ್ವಚೆಯು" ಪೃಥಿವ್ಯಾದಿಗಳ ಛಾಯೆಯುಳ್ಳದ್ದಿರುವದರಿಂದ "ಪಂಚವಿಧ ಛಾಯೆಯನ್ನು" ಪ್ರಕಟಮಾಡುತ್ತದೆ. ಪ್ರಥಮ ತ್ವಚೆ (ಚರ್ಮ) ಪ್ರಮಾಣವು; ಭತ್ತದ ಹದಿನೆಂಟು ಭಾಗಗಳಷ್ಟು ಧಪ್ಪವಾಗಿರುತ್ತದೆ ಸಿಧ್ಮ(ಚಿಬ್ಬು), ಪದ್ಮ (ಒಂದು ಕುಷ್ಠ ಭೇದವು,) ಕಂಟಕ (ತ್ವಚೆಯಲ್ಲಿಯ ಮುಳ್ಳಿನಂಥ ಗುಳ್ಳೆಗಳು) ಗಳಿಗೆ ಸ್ಥಾನವಾಗಿರುತ್ತದೆ.

ಛಾಯಾ ವರ್ಣ ಪ್ರಭಾದಿಗಳು

ತ್ವಚೆಯಲ್ಲಿ ಛಾಯಾ ವರ್ಣ ಪ್ರಭಾದಿಗಳು ಇರುತ್ತವೆ. "ಛಾಯೆ" ಯೆಂದರೆ ಪ್ರತಿ ಬಿಂಬದಲ್ಲಿ ಕಾಣುತ್ತಿರುವದು, ನೆರಳು."ವರ್ಣ"ವೆಂದರೆ ಶುಕ್ಲ ಕೃಷ್ಣ ಮೊದಲಾದ ಬಣ್ಣಗಳು. "ಪ್ರಭಾ" ಎಂದರೆ ಹೊಳಪು, ಕೆಂಪು ಹಳದಿ

ವೊದಲಾದವುಗಳು. ರೋಗಿಯ ನೈಸರ್ಗಿಕವಾದ ಛಾಯಾದಿಗಳು ಬದಲಾಗುವದರಿಂದಗತಾಯುಷ್ಪ್ವ (ಮರಣ) ಲಕ್ಷಣವನ್ನು ಶಾಸ್ತ್ರಕಾರರು ಹೇಳುತ್ತಾರೆ ಆ ಲಕ್ಷಣವುತ್ವಚೆಯಲ್ಲಿ (ಚರ್ಮವನ್ನಾಶ್ರಯಿಸಿ) ಇರುವದರಿಂದಲೂ, ಚಿಕಿತ್ಸೆಯಲ್ಲಿ ಛಾಯಾದಿಗಳ ಸ್ಥಾನಾಶ್ರಯ ಪರಿಚಯ ಭೇದ ಬೋಧಕ್ಕಾಗಿಯೂ ಇಲ್ಲಿ ನಿರ್ದೇಶ ಮಾಡಿದ್ದಾರೆ. "ಛಾಯೆಯಯು" ವರ್ಣ ಪ್ರಭೆಗಳನ್ನು ಆಶ್ರಯಿಸಿಕೊಂಡಿರುತ್ತದೆಯಾದ್ದರಿಂದ "ಛಾಯಾ ವರ್ಣಪ್ರಭಾಶ್ರಯಾ" ಎಂದು ಹೇಳಿದ್ದಾರೆ. ಛಾಯೆಯು, ಕನ್ನಡಿ, ನೀರು, ಬಿಸಿಲು ಮೊಲಾದವುಗಳಲ್ಲಿ ಪ್ರತಿಬಿಂಬಕ್ಕೆ ಕಾರಣವಾಗಿರುತ್ತದೆ. ಛಾಯಾ ಪ್ರಭೆಗಳು ಬಹಳೇ ಸೂಕ್ಷ್ಮವಿದ್ದುದರಿಂದ ನಿರ್ಣಯಕ್ಕಾಗಿ ಭೇದವನ್ನು ವಿವರಿಸಿದ್ದಾರೆ.

ವರ್ಣಮಾಕ್ರಮತಿಚ್ಛಾಯಾ ಛಾಸ್ತುವರ್ಣಪ್ರಕಾಶಿನೀ ॥
ಆಸನ್ನಾ ಲಕ್ಷ್ಯತೇ ಛಾಯಾ ಛಾಃ ಪ್ರಕೃಷ್ಟಾ ಪ್ರಕಾಶತೆ ॥
(ಚರಕ॥ ಇಂ, ಸ್ಥಾ. ಅ ೭ ಶ್ಲೋ ೧೬)

"ಛಾಯೆಯಯು" ವರ್ಣ (ಬಣ್ಣ)ವನ್ನು ಆಕ್ರಮಿಸುತ್ತದೆ. ಅರ್ಥಾತ್, ಛಾಯೆಯು ಆವರಿಸಿದರೆ ಬಣ್ಣವು ಕಾಣುವದಿಲ್ಲ ಹೀಗಿರುವದರಿಂದಲೇ ವರ್ಣವನ್ನು ಆಕ್ರಮಿಸುತ್ತದೆಂದು ಹೇಳಿದ್ದಾರೆ ಛಾಯೆ-ಯಿಂದ ಮುಚ್ಚಿದ ಬಣ್ಣವು ಕಾಣಿಸುವದಿಲ್ಲ.

"ಪ್ರಭೆಯಯು" ವರ್ಣ (ಬಣ್ಣ) ವನ್ನು ಪ್ರಕಟವಾಗುವಂತೇ ಮಾಡುತ್ತದೆ. ಚರ್ಮದಲ್ಲಿರುವ ಹೊಳಪು (ಪ್ರಭೆಯು) ದೇಹದಲ್ಲಿಯ ಚರ್ಮಗತವಾದ ಬಣ್ಣವನ್ನು, ಸ್ಪುಟವಾಗಿ ಕಾಣುವಂತೆ ಪ್ರಕಟ ಮಾಡುತ್ತದೆ. ಆದ್ದರಿಂದಲೇ ದೇಹದಲ್ಲಿಯಪ್ರಭಾಕ್ಷೀಣವಾಗಲು ವರ್ಣವು ಗೋಚರವಾಗದೆ ಮಲಿನವಾಗಿ ಮನುಷ್ಯನು ಸಪ್ಪಗೆ ಕಾಣುತ್ತಾನೆ. ಇದರಿಂದ ಪ್ರಭೆಯು ವರ್ಣವನ್ನು ಸ್ಪುಟವಾಗಿ ಕಾಣುವಂತೇ ಮಾಡುತ್ತದೆನ್ನುವದು ಸಿದ್ಧವಾಯಿತು.

"ಛಾಯೆಯಯು" ಸಮೀಪದಲ್ಲಿದ್ದರೆ ಮಾತ್ರ ಗೋಚರವಾಗುತ್ತದೆ. **ಉದಾ:**— ಚಿತ್ರದಲ್ಲಿಯ ಛಾಯೆಯು ಸಮೀಪ ಗೋಚರವಾದದ್ದಿರುತ್ತದೆ. ದೂರದಲ್ಲಿದ್ದರೆ ಸ್ಪಷ್ಟ ಕಾಣುವದಿಲ್ಲ.

"**ಪ್ರಭಾ**" ರತ್ನ ಮುತ್ತು ಅಗ್ನ್ಯಾದಿಗಳ ಪ್ರಭೆಯು ದೂರದಲ್ಲಿದ್ದರೂ ಕಾಣುತ್ತದೆ. ಸಮೀಪದಲ್ಲಿದ್ದರಂತೂ ಕಂಡೇಕಾಣುತ್ತದೆ. **ಛಾಯೆಯು** ಅಸ್ವತಂತ್ರವೂ **ಪ್ರಭೆಯು** ಸ್ವತಂತ್ರವೂ ವರ್ಣಾದಿಗಳನ್ನು ಸ್ಫುಟ ಪಡಿಸುವಂಥಾದ್ದೂ ಇರುತ್ತದೆ.

ವರ್ಣ:— ಶ್ವೇತ, ಕೃಷ್ಣ, ಶ್ಯಾಮ, ಗೌರಶ್ಯಾಮ, ಮೊದಲಾವ ನಾಲ್ಕು (೪) **ವರ್ಣಗಳು.**

ಪ್ರಭಾ:- ರಕ್ತಾ, ಪೀತಾ, ಸಿತಾ, ಶ್ಯಾವಾ, ಹರಿತಾ, ಪಾಂಡುರಾ, ಅಸಿತಾ, ಇತ್ಯಾದಿ (೭) ಪ್ರಭೆಗಳು.

ಛಾಯಾ:— ಸ್ನಿಗ್ಧಾ, ವಿಮಲಾ, ರೂಕ್ಷಾ, ಮಲಿನಾ, ಸಂಶ್ಲಿಷ್ಟಾ, ಎಂಬ (೫) ಛಾಯೆಗಳು. (ವರ್ಣಾದಿಗಳ ವಿಷಯದಲ್ಲಿ ವಿಶೇಷ ಬೇಕಾದವರು ಸುಶ್ರುತದ "**ಛಾಯಾವಿಪ್ರತಿಪತ್ತಿ**" ಅಧ್ಯಾಯವನ್ನೂ, ಚರಕದ "**ಪನ್ನಾರೂಪೀಯ**" ಅಧ್ಯಾಯವನ್ನು ನೋಡಿರಿ)

(೨) "**ಲೋಹಿತಾ**" ಎರಡನೇ ತ್ವಚೆಯು ಲೋಹಿತವೆಂಬ ಹೆಸರುಳ್ಳದ್ದು, ಭತ್ತದ ಹದಿನಾರು ಭಾಗಗಳ ಪ್ರಮಾಣ ಧಪ್ಪವಾಗಿರುತ್ತದೆ. "**ತಿಲಕಾಲಕ**" (ಎಳ್ಳಿನಾಕಾರದ ಕಪ್ಪುಚಿಕ್ಕೆಗಳು) "**ನ್ಯಚ್ಛ**" (ದೇಹದಲ್ಲಿಯ ಕಪ್ಪು, ಬೂದೀ ಬಣ್ಣದ ಮಂಡಲಗಳು) "**ವ್ಯಂಗ**" (ಮುಖದ ಮೇಲಿನ ಕಪ್ಪು ಮಂಡಲ, ಭಂಗು,) ಮೊದಲಾದವುಗಳು ಉತ್ಪನ್ನವಾಗುವ ಸ್ಥಾನವಾಗಿರುತ್ತದೆ.

(೩) "**ಶ್ವೇತಾ**" ಎಂಬ ಮೂರನೇ ತ್ವಚೆಯು, ವ್ರೀಹಿಯ ಹನ್ನೆರಡು ಭಾಗಗಳಷ್ಟು ಧಪ್ಪವಾಗಿರುತ್ತದೆ. "**ಚರ್ಮದಲ**" (ಚರ್ಮವನ್ನು ಉದುರಿಸುವ, ನಾಶಮಾಡುವ ಕುಷ್ಠ) "**ಅಜಗಲ್ಲೀ**" (ಹೆಸರು ಕಾಳಿನಂತೆ ಚರ್ಮದಲ್ಲೀಳುವ ನೋವಿಲ್ಲದ (ನೀರುಜ) ಗುಳ್ಳೆಗಳು) "**ಮಷಕ**" (ಉದ್ದಿನಂತೆ ಕಪ್ಪು ವರ್ಣವಿದ್ದು ನೋವಿಲ್ಲದ ಸ್ಥಿರವಾದ ಗುಳ್ಳೆಗಳು, "**ಮಚ್ಛೆ**" ಎಂದು ಅನ್ನುತ್ತಾರೆ) ಇವುಗಳಿಗೆ ಆಶ್ರಯ ಸ್ಥಾನವಾಗಿರುತ್ತದೆ.

(೪) "**ತಾಮ್ರಾ**" ನಾಲ್ಕನೇ ತ್ವಚೆಯು ಭತ್ತದ ಎಂಟು ಭಾಗಗಳ ಪ್ರಮಾಣ ಧಪ್ಪವಿದ್ದು, "**ಕಿಲಾಸ**" (ಗುಹ್ಯ ಭಾಗದಲ್ಲಿ ಕೈಕಾಲುಗಳಲ್ಲಿ ಉತ್ಪನ್ನವಾಗುವ ಕೆಂಪು ಬಣ್ಣದ ಕುಷ್ಠವು) "**ವಿವಿಧಕುಷ್ಠ**" (ಸಪ್ತಮಹಾ ಕುಷ್ಠ, ಏಕಾದಶಕ್ಷುದ್ರ ಕುಷ್ಠ), ಇವುಗಳ ಉತ್ಪತ್ತಿ ಮತ್ತು ಆಶ್ರಯಸ್ಥಾನ ವಾಗಿರುತ್ತದೆ.

(೫) ನೇದಿನೀ" ಎಂಬ ಹೆಸರುಳ್ಳ ಐದನೇ ತ್ವಚೆಯು ವ್ರೀಹಿಯ ಐದು ಭಾಗಗಳ ಪ್ರಮಾಣ ಧಪ್ಪವುಳ್ಳದ್ದಿರುತ್ತದೆ. ಕುಷ್ಠಗಳಿಗೂ, ಸರ್ವ ವಿಧವಾದ (೭) ವಿಸರ್ಪಗಳಿಗೂ, ಅಧಿಷ್ಠಾನವಾಗಿರುತ್ತದೆ.

(೬) "**ರೋಹಿಣೀ**" ಎಂಬ ಹೆಸರುಳ್ಳ ಆರನೇ ತ್ವಚೆಯು, ಒಂದು ವ್ರೀಹಿ ಪ್ರಮಾಣ ಧಪ್ಪವಾಗಿರುತ್ತದೆ. "**ಗ್ರಂಥಿ**" (ಬಾವಿನಿಂದ ಕೂಡಿದ ಸಿರಾಪ್ರದೇಶದಲ್ಲುತ್ಪನ್ನವಾದ ಗಂಟು). "**ಅಪಚೀ**" (ಗಂಡಮಾಲೆಯ ಭೇದ, ನೆಲ್ಲೀಕಾಯಿ ಪ್ರಮಾಣದಂತೆ ಬಹಳವಾಗಿ ಒಡೆದುಸೋರಿ ಗುಣವಾಗುವದು. ಮತ್ತು ಹೊಸದಾಗಿ ಉತ್ಪನ್ನವಾಗುತ್ತಾ ಬಹುಕಾಲ ಇರುತ್ತದೆ.) "**ಅರ್ಬುದ**" ನೀರಿನ ದೊಡ್ಡ ಗುಳ್ಳೆಯಂತೆ ಇರುತ್ತದೆ. ವಿಶೇಷ ಬುಡದಲ್ಲಿ ದೊಡ್ಡಗಡ್ಡೆಯಂತೆ ಇರುತ್ತಿದ್ದು, ರಕ್ತಾರ್ಬುದದವಿನಾ ಉಳಿದವುಗಳು, ಪಾಕ ವಾಗುವದಿಲ್ಲ. "**ಶ್ಲೀಪದ**" ಕಾಲಿನ ಚರ್ಮವು ಹುತ್ತಿನಂತೆ ಆಗುವದು. ಇದಕ್ಕೆ ವಾಡಿಕೆಯಲ್ಲಿ ಆನೆಗಾಲೆಂಬ ಹೆಸರು. "**ಗಲಗಂಡ**" ಗಲ ಪ್ರದೇಶ ದಲ್ಲಿ ಅಂಡಕೋಶ ಸದೃಶವಾದಗಂಟುತ್ಪನ್ನವಾಗಿಜೋಲುತ್ತಿರುತ್ತದೆ. ರೋಹಿ ಣಿಯು ಗ್ರಂಥಿ ಮೊದಲಾದವುಗಳಿಗೆ ಉತ್ಪತ್ತಿ ಆಶ್ರಯಗಳಿಗೆ ಸ್ಥಾನ ವಾಗಿರುತ್ತದೆ.

(೭) "**ಮಾಂಸಧರಾ**" ಎಂಬ ತ್ವಚೆಯು ಎರಡು ವ್ರೀಹಿಯಷ್ಟು ದಪ್ಪ ವಾಗಿರುತ್ತದೆ. "**ಭಗಂದರ**" ಅಂಡಕೋಶದ ಕೆಳಗೆ ಬಲ ಎಡ ಪಾರ್ಶ್ವಗಳಲ್ಲಿ ಉಂಟಾಗುತ್ತದೆ. ಭಗದಂತೆ ತೂತುಳ್ಳದಾಗುವದರಿಂದ ಅದನ್ನು ಉಪಮೆಯಾ ಗಿಟ್ಟು ಹೇಳಿದ್ದಾರೆ "**ವಿದ್ರಧಿ**" ಕುರವು. "**ಅರ್ಶಃ**" ಮೂಲವ್ಯಾಧಿ, ಗಂಟು, ಮೊಳೆ, ನೊದಲಾದವುಗಳು. ಮಾಂಸಧರಾ ತ್ವಚೆಯು ಇವುಗಳಿಗೆ ಆಶ್ರಯ ವಾಗಿರುತ್ತದೆ.

ಪ್ರತಿಯೊಂದು ಚರ್ಮದ "ವ್ರೀಹಿಭಾಗ ಪ್ರಮಾಣವು" ಮಾಂಸಲ (ವಿಶೇಷ ಮಾಂಸವುಳ್ಳ) ಪ್ರದೇಶಗಳಲ್ಲಿಯದೆಂದು ತಿಳಿಯಬೇಕು. ಸ್ವಲ್ಪ ಮಾಂಸವಿದ್ದು ಚರ್ಮವು ಹೆಚ್ಚಾಗಿ ತಿಳುವಾಗಿರುವ ಪ್ರದೇಶಗಳಲ್ಲಿ ಈ ನಿಯಮವು ಅನ್ವಯಿಸಲಾರದು ಆದ್ದರಿಂದ ಮಾಂಸವು ಕಡಿಮೆಯಿರುವ ಹಣೆ, ಮತ್ತು ತೆಳುವಾದ ಬೆರಳು, ಮುಂತಾದವುಗಳಲ್ಲಿ ಪೂರ್ವೋಕ್ತ ಪ್ರಮಾಣವಿರುವದಿಲ್ಲ. ಆದ್ದರಿಂದ ಸ್ವಲ್ಪ ಮಾಂಸವಿರುವ ತಿಳುವಾದ ಪ್ರದೇಶಗಳಲ್ಲಿಯ ಪ್ರಮಾಣಗಳನ್ನು, ಪ್ರತ್ಯಕ್ಷವಾಗಿ ತಿಳಿಯಬೇಕೆಂದು ಧ್ವನಿತವಾಗುತ್ತದೆ. ದಪ್ಪವಾದ ಪ್ರದೇಶಗಳಲ್ಲಿ ಮಾತ್ರ ತ್ವಚೆಯ ಪ್ರಮಾಣ ಯೋಗ್ಯವಿರುತ್ತದೆ. ಯಾಕಂದರೆ ಉದರ ರೋಗಗಳಲ್ಲಿ ಶಸ್ತ್ರಚಿಕಿತ್ಸೆಯ ಪ್ರಮಾಣವನ್ನು ಹೀಗೆ ಹೇಳಿರುತ್ತಾರೆ. "ವ್ರೀಹಿಮುಖ" ಶಸ್ತ್ರದಿಂದ ಅಂಗುಷ್ಠ ಬೆರಳಿನ ತಳಭಾಗದ ಹೊಟ್ಟೆಯಷ್ಟು ಪ್ರಮಾಣ ತಗ್ಗಾಗುವಂತೇ ಛೇದನಮಾಡಬೇಕು. ಎಂದು ನಿರ್ದೇಶಮಾಡಿದ್ದಾರೆ.

ವಿಶೇಷ

ಮಾಂಸಲವುಳ್ಳ ಭಾಗಗಳಲ್ಲಿ ತ್ವಚೆಗಳಿಗೆಹೇಳಿದ ಪ್ರಮಾಣವು ಸರಿಯಾದದ್ದಿರುತ್ತದೆಂದು ತೋರಿಸಲು, ಉದರದಲ್ಲಿಯ ಶಸ್ತ್ರಕ್ರಿಯೆಯ ಛೇದನೇ ಮಾಡುವ ಪ್ರಮಾಣವನ್ನು ಹೇಳಿದ್ದಾರೆ ಏಳೂ ತ್ವಚೆಗಳ ಪ್ರಮಾಣವನ್ನು ಕೂಡಿಸಲು, ಅಂಗುಷ್ಠೋದರ ಪ್ರಮಾಣವಾಗುತ್ತದೆ. ಅಂಗುಷ್ಠೋದರ ಪ್ರಮಾಣವೆಂದರೆ:— ವ್ರೀಹಿಯ ಇಪ್ಪತ್ತನೇ ಭಾಗ ಕಡಿಮೆ ಇರುವ ಆರು ವ್ರೀಹಿ ಪ್ರಮಾಣವು. ಪ್ರತಿಯೊಂದು ಚರ್ಮದ ಪ್ರಮಾಣವನ್ನು ಏಳು ತ್ವಚೆಯು ವಿಗಿಯುವ ವರೆಗೆ ಕೂಡಿಸಿದರೆ, ಈ ಪ್ರಮಾಣವು ಸಿದ್ಧವಾಗುತ್ತದೆ ಪ್ರತಿಯೊಂದು ವ್ರೀಹಿಯಲ್ಲಿಯೂ ಮೊದಲು (೨೦) ಭಾಗ ಮಾಡಿ, ನಂತರ ಆವಾವ ಭಾಗವನ್ನು ಗಣಿಸಬೇಕು. ಉದಾ:— ಪ್ರಥಮ ತ್ವಚೆಯು "ಅವಭಾಸಿನೀ" ಎನ್ನುವದರಪ್ರಮಾಣ ವ್ರೀಹಿಯ ೧೮ ಭಾಗವು, ವ್ರೀಹಿಯಲ್ಲಿ ೨೦ ಭಾಗಮಾಡಿ ೪ ಭಾಗಗಳಲ್ಲಿಯ ೧೮ ಭಾಗಗಳಷ್ಟು ಪ್ರಮಾಣವಿರುತ್ತದೆಂದು ತಿಳಿಯಬೇಕು. ಕ್ರಮಶಃ ಪ್ರತಿಯೊಂದು ತ್ವಚೆಗಳ ಪ್ರಮಾಣ = $\frac{18}{20}+\frac{16}{20}+\frac{14}{20}+\frac{12}{20}+\frac{10}{20}+\frac{8}{20}+\frac{6}{20}=\frac{84}{20}\|\|4\frac{4}{20}\|\|$ ವ್ರೀಹಿಗಳು. ಎಲ್ಲ ತ್ವಚೆಗಳು ಕೂಡಿದ ಪ್ರಮಾಣವು.

(೨೦) ಕಲಾವಿಜ್ಞಾನವು

ಧಾತುಗಳ ಸ್ಥಾನ ಮತ್ತು ಆಶಯಗಳ ಪ್ರದೇಶಗಳಲ್ಲಿರುವ ವಿಶೇಷ ಪಕ್ವವಾದ ದೇಹೋಷ್ಮ (ಉಷ್ಣತೆ)ದಿಂದ ಕೂಡಿದ ಅನ್ನರಸ ಕ್ಲೇದವಿರುತ್ತದೆ. ಆ ಕ್ಲೇದವು ಧಾತುಗಳಿರುತ್ತಿರುವ ಸ್ಥಾನದ ಒಳಭಾಗಗಳ ಸುತ್ತಲೂ ಆಶಯಾದಿ ಪ್ರದೇಶಗಳ ಒಳಭಾಗದ ಸುತ್ತಲೂ ಇರುತ್ತದೆ ಈ ಭಾಗಗಳಿಗೆ ಕಲಾಭಾಗವೆಂದೂ, "ಕಲಾ" ಎಂದೂ ಅನ್ನುತ್ತಾರೆ

ಕಲಾಃ ಖಲ್ವಪಿಸಪ್ತ ಭವಂತಿ ಧಾತ್ವಾಶಯಾಂತರಮರ್ಯಾದಾಃ॥

(ಸುಶ್ರುತ॥ ಶಾರೀರ॥ ಅ ೪ ಸೂ ೫)

ಏಳು ಕಲಾಗಳು ಇರುತ್ತವೆ ಧಾತುಗಳ ಸ್ಥಾನ, ಮತ್ತು ಆಶಯಗಳ ಒಳಗಡೆಯ ಪ್ರದೇಶಗಳಲ್ಲಿ, ಸೀಮಾಭೂತ ಪ್ರದೇಶವರ್ತಿಗಳಾಗಿರುತ್ತವೆ.

ಕಲಾಸ್ವರೂಪ

ಯಥಾಹಿ ಸಾರಃ ಕಾಷ್ಠೇಷುಛಿದ್ಯಮಾನೇಷು ದೃಶ್ಯತೆ ॥
ತಥಾಹಿ ಧಾತುರ್ಮಾಂಸೇಷು ಛಿದ್ಯಮಾನೇಷು ದೃಶ್ಯತೆ ॥೬॥
ಸ್ನಾಯುಭಿಶ್ಚ ಪ್ರತಿಚ್ಛನ್ನಾನ್ ಸಂತತಾಂಶ್ಚ ಜರಾಯುಣಾ ॥
ಶ್ಲೇಷ್ಮಣಾವೇಷ್ಟಿತಾಂಶ್ಚಾಪಿ ಕಲಾಭಾಗಾಂಸ್ತು ತಾನ್ವಿದುಃ ॥

(ಸುಶ್ರುತ॥ ಶಾರೀರ॥ ಅ. ೪ ಶ್ಲೋ ೬)

ಕಟ್ಟಿಗೆಗಳು ಕಡಿಯಲ್ಪಡುತ್ತಿರಲು ಒಳಗಿರುವ ಸಾರವು ಹೇಗೆ ದೃಷ್ಟಿಗೋಚರವಾಗುತ್ತದೆಯೋ, ಅದರಂತೆ ಮಾಂಸಗಳು ಛೇದಿಸಲ್ಪಡುತ್ತಿರಲು ಒಳಗಿರುವ ಧಾತುವು ಸ್ಪಷ್ಟವಾಗಿಕಾಣುತ್ತದೆ ಸ್ನಾಯುಗಳಿಂದ ವ್ಯಾಪ್ತವಾದ ಮತ್ತು ಜರಾಯುವಿನಿಂದ (ತೆಳುವಾದ ಪರದೆಯಂತಿರುವ ಒಳಚರ್ಮದಿಂದ) ಸುತ್ತಲೂ ಪಸರಿಸಲ್ಪಟ್ಟಿರುವ, ಸರ್ವದೇಹ ವ್ಯಾಪಿಯಾದ ಶ್ಲೇಷ್ಮದಿಂದ ಆವೇಷ್ಟಿತವಾದ, ಭಾಗಗಳನ್ನು ಕಲಾಭಾಗಗಳೆಂದು ಅನ್ನುತ್ತಾರೆ.

ಕಲಾ ವಿಷಯದಲ್ಲಿ ವೃದ್ಧವಾಗ್ಭಟಮತವು·—

ಯಸ್ತು ಧಾತ್ವಾಶಯಾಂತರೇಷು ಕ್ಲೇದೋಽವತಿಷ್ಠತೆ ಸಯಥಾ ಸ್ವಮೂಷ್ಮಭಿರ್ವಿಪಕ್ವಃ ಸ್ನಾಯು ಶ್ಲೇಷ್ಮ ಜರಾಯು ಘನ್ನಃ ಕಾಷ್ಠ ಇವಸಾರೋ ಧಾತುರಸವಿಶೇಷೋಽಲ್ಪತ್ವಾತ್ ಕಲಾ ಸಂಜ್ಞಃ॥

ಧಾತುಸ್ಥಾನ ಆಶಯಸ್ಥಾನಗಳ ಒಳಭಾಗಗಳಲ್ಲಿ ಯಾವ ಕ್ಲೇದವು ಇರುತ್ತದೆಯೋ, ಅದು ಧಾತುಸ್ಥಾನಾಗ್ನಿಗಳಿಂದ ಪರಿಪಕ್ವವಾಗಿ ಸ್ನಾಯು, ಜರಾಯು, ಶ್ಲೇಷ್ಮ, ಮೊದಲಾದವುಗಳಿಂದ ವ್ಯಾಪ್ತವಾಗಿರುತ್ತದೆ. ಕಟ್ಟಿಗೆ ಒಳಗಿನ ಸಾರದಂತೆ ದೇಹದಲ್ಲಿಯ ಧಾತುರಸವಿಶೇಷವು ಸ್ವಲ್ಪವಾಗಿದ್ದು ಕಲಾ ಎಂಬ ಹೆಸರುಳ್ಳದ್ದಾಗಿರುತ್ತದೆ. ಅನ್ನರಸ ಕ್ಲೇದಕ್ಕೆ ಕಲಾ ಎಂದು ಕೆಲವರು, ಧಾತುರಸ ವಿಶೇಷಕ್ಕೆ ಕಲಾ ಎಂದು, ಭಿನ್ನಮತಗಳಿರುತ್ತವೆ. ಅನ್ನರಸ ಕ್ಲೇದ ಕ್ಕಾದರೂ ಧಾತುಸಂಜ್ಞೆ ಇರುವದರಿಂದ ಯಾವದನ್ನು ಗ್ರಹಿಸಿದರೂ ಯೋಗ್ಯವೇ ಇರುತ್ತದೆ.

ಸುಶ್ರುತಮತವು

ಧಾತ್ವಾಶಯಾಂತರೇಽನ್ನಸ್ಯಯಃ ಕ್ಲೇದಸ್ತ್ವಧಿತಿಷ್ಠತಿ ॥
ದೇಹೋಷ್ಮಣಾವಿಪಕ್ವಸ್ತು ಸಾಕಲೇತ್ಯಭಿಧೀಯತೆ ॥
(ಸುಶ್ರುತಾಧಿಕ ಪಾಠಃ ಟೀಕಾಯಾಂ)

ಧಾತ್ವಾಶಯ ಒಳಭಾಗದಲ್ಲಿ ಅನ್ನರಸದ ಯಾವ ಕ್ಲೇದವಿರುತ್ತ ದೆಯೋ, ಅದು ದೇಹದಲ್ಲಿರುವ ಊಷ್ಮ (ಅಗ್ನಿಯಿಂದ) ದಿಂದ ಪರಿಪಕ್ವವಾ ಗಲು ಕಲಾ ಎಂದು ಹೇಳಲ್ಪಡುತ್ತದೆ ಕಲಾ ಭಾಗಗಳು ಏಳು ಇರುತ್ತವೆ. ಅವುಗಳನ್ನು ಕ್ರಮಶಃ ಹೇಳುತ್ತಾರೆ.

ತಾಸಾಂ ಪ್ರಥಮಾ ಮಾಂಸಧರಾಯಸ್ಯಾಂ ಮಾಂಸೇ ಸಿರಾ ಸ್ನಾಯು ಧಮನೀ ಸ್ರೋತಸಾಂಪ್ರತಾನಾಭವಂತಿ॥
(ಸುಶ್ರುತ॥ ಶಾರೀರ॥ ಅ. ೪ ಸೂ. ೮)

(೧) "ಮಾಂಸಧರಾ" ಯಾವ ಕಲಾಭಾಗದ ಮಾಂಸದಲ್ಲಿ, ಸಿರಾ, ಸ್ನಾಯು, ಧಮನೀ, ಸ್ರೋತಸ್ಸುಗಳ ಸ್ಥಿತಿ (ಇರುವಿಕೆ) ಯು ಇದ್ದು ಎಲ್ಲ ಕಡೆಗೆ ಬಳ್ಳಿಯಂತೆ ಹಬ್ಬಿ ಪಸರಿಸುತ್ತವೆಯೋ, ಆ ಭಾಗವು ಮಾಂಸಧರಾ ಎಂಬ ಹೆಸರಿನ ಮೊದಲನೆಯ ಕಲೆಯು.

ಯಥಾಬಿಸಮೃಣಾಲಾನಿ ವಿವರ್ಧಂತೇಸಮಂತತಃ ॥
ಭೂಮೌಪಂಕೋದಕಸ್ಥಾನಿತಥಾಮಾಂಸೇಸಿರಾದಯಃ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೯)

ಭೂಮಿಯಲ್ಲಿ ಕೆಸರು ನೀರಿನಲ್ಲಿ ಬಿಸಮೃಣಾಲ ಮೊದಲಾದ ಕಮಲ ಮೂಲಗಳು, ಬೆಳೆದು ಎಲ್ಲಕಡೆಗೂ ಪಸರಿಸುವಂತೆ ಹಬ್ಬುತ್ತವೆಯೋ; ಅದರಂತೆ ಮಾಂಸದಲ್ಲಿ ಸಿರಾದಿಗಳು ಅಭಿವೃದ್ಧಿಯನ್ನುಹೊಂದಿ ಸಮಗ್ರ ದೇಹದಲ್ಲಿಯೂ ಪಸರಿಸಿಕೊಂಡಿರುತ್ತವೆ. ಇಲ್ಲಿ ಕ್ರಮದಂತೆಯೆಂದರೆ, ರಕ್ತಧರವಾದ ನಂತರ ಮಾಂಸಧರವಾಗಬೇಕಿತ್ತು, ಆದರೆ ಇದಕ್ಕೆ ವಿರುದ್ಧವಾಗಿ ಮೊದಲೇ "ಮಾಂಸಧರಾ"ವನ್ನು ಹೇಳಿದ್ದೇಕೆನಿಸುತ್ತದೆ. ರಕ್ತವಾದ ನಂತರ ಮಾಂಸದ ಕ್ರಮಬದ್ಧವಾದ ರೀತಿಯು ಇರುತ್ತದೆ. ಇಲ್ಲಿ ಹೇಳಿರುವದು ಯೋಗ್ಯವೇ ಇರುತ್ತದೆ. ಯಾಕಂದರೆ, ಪೋಷಣೆಯ ವಿಷಯದಲ್ಲಿ ರಕ್ತ ಮಾಂಸಾದಿಗಳಲ್ಲಿ ರಕ್ತವು ಮೊದಲು ಬರುತ್ತದೆ. ಇಲ್ಲಿ ಧಾರಣೆಯ (ಧರಿಸುವ) ಕ್ರಮದಲ್ಲಿ ಮಾಂಸವೇ ಮೊದಲಿನದಾಗಿರುತ್ತದೆ. ರಕ್ತವು ದ್ರವರೂಪವಾಗಿರುವದರಿಂದ ಎರಡನೇಯದನ್ನು ಆಶ್ರಯಿಸಿಯೇ ಇರಬೇಕಾಗುತ್ತದೆ. ಆದಕ್ಕೆ (ರಕ್ತಕ್ಕೆ) ಆಶ್ರಯವಾದ ಸಿರಾದಿಗಳುಇರತಕ್ಕ ಸ್ಥಾನವು ಮಾಂಸವಾದ್ದರಿಂದ, ಆದಿಯಲ್ಲಿಯೇ ಮಾಂಸವನ್ನು ಹೇಳಿರುವದು ಯೋಗ್ಯವು.

ದ್ವಿತೀಯಾರಕ್ತಧರಾಮಾಂಸಸ್ಯಾಂಭ್ಯಂತರತಃ, ತಸ್ಯಾಂ ಶೋಣಿತಂ ವಿಶೇಷತಶ್ಚಸಿರಾಸುಯುಕ್ತಂ ಹ್ಲಿಹ್ಲ್ಲ್ಲೇಶ್ಚ (ಸ್ರವತಿ) ಭವತಿ ॥

(ಸುಶ್ರುತ॥ ಶಾರೀರ॥ ಅ ೪ ಸೂ ೧೦)

(೨) "ರಕ್ತಧರಾ" ಎಂಬ ಹೆಸರಿನ ಕಲೆಯು ಮಾಂಸದ ಒಳ ಭಾಗದಲ್ಲಿದ್ದು, ಎರಡನೇಯಕಲಾಭಾಗವಾಗಿರುತ್ತದೆ. ಇದರಲ್ಲಿಯಸಿರಾಗಳಲ್ಲಿ ರಕ್ತವು ವಿಶೇಷವಾಗಿ ಇರುತ್ತದೆ. ಯಕೃತ್‌ಪ್ಲೀಹಗಳಲ್ಲಿ ರಕ್ತವು ತಯಾರಾಗುತ್ತದೆ. ಯಕೃತ್‌ಪ್ಲೀಹಗಳಲ್ಲಿ ಸ್ರವಿಸುತ್ತದೆಯೆಂದೂ ಅನ್ನುತ್ತಾರೆ ಯಕೃತ್‌ಪ್ಲೀಹೆಗಳಲ್ಲಿಯೇ ಅನ್ನ ರಸವು ರಕ್ತವಾಗುವದರಿಂದ "ಭವತಿ" ಎನ್ನುವದೇ ಯೋಗ್ಯವು. ಅಲ್ಲಿ ರಕ್ತವಾಗಿ ಎರಡನೇ ಕಡೆ ಹೋಗುವದರಿಂದ ಸ್ರವಿಸುತ್ತದೆ ಎನ್ನುವ ಕಾರಣವೇ ಇಲ್ಲ. ಹೀಗಿರುವದರಿಂದ "ಸ್ರವತಿ" ಎನ್ನುವದರಿಂದ ರಕ್ತವಾಗುವದನ್ನು ಹೇಳಿದಂತಾಗುವದಿಲ್ಲ ಉಭಯತೋಽಪಿ"ಸ್ರವತಿ" ಎಂದೆನ್ನುವದು ಅಷ್ಟು ಪ್ರಶಸ್ತವಾದದ್ದಲ್ಲವು

ಮಾಂಸದ ಒಳಗಡೆಯಲ್ಲಿ ರಕ್ತಪ್ರಸರಣೆಇರುತ್ತದೆನ್ನುವದಕ್ಕೆದೃಷ್ಟಾಂತ ಕೊಟ್ಟು ಧೃಡಪಡಿಸುತ್ತಾರೆ:—

ವೃಕ್ಷಾದ್ಯಥಾಽಭಿಪ್ರಹತಾತ್ ಕ್ಷೀರಿಣಃ ಕ್ಷೀರವಾಸ್ರವೇತ್ ॥
ಮಾಂಸಾದೇವಂಕ್ಷತಾತ್ ಕ್ಷಿಪ್ರಂಶೋಣಿತಂ ಸಂಪ್ರಸಿಚ್ಯತೆ ॥

(ಸುಶ್ರುತ॥ ಶಾರೀರ॥ ಅ ೪ ಸೂ ೧೧)

ಕಚ್ಚು ಹಾಕಿದ ಕ್ಷೀರವೃಕ್ಷದಿಂದ ಹೇಗೆ ಹಾಲು ಸುರಿಯುತ್ತದೆಯೋ, ಹಾಗೆಯೇ ಘಾಯನಮಾಡಲಾಗಿ ಮಾಂಸದಿಂದ ರಕ್ತವು ಸೋರುತ್ತದೆ ಕ್ಷೀರವೃಕ್ಷದ ಉದಾಹರಣೆಯಿಂದ, ಮಾಂಸದ ಒಳಗಡೆಯಲ್ಲಿ ರಕ್ತದ ಸ್ಥಾನವೆಂದು ಸಿದ್ಧವಾಯಿತು. ಘಾಯ ಮಾಡಿದ ಮಾಂಸದಿಂದ "ಸಂಪ್ರಸಿಚ್ಯತೆ" ಚನ್ನಾಗಿ ಸೋರುತ್ತದೆಂದು ಹೇಳಿದ್ದರಿಂದ, ಸಾಮಾನ್ಯ ಚರ್ಮ ಭಾಗಕ್ಕಿಂತಲೂ ಮಾಂಸದಲ್ಲಿ ರಕ್ತಪ್ರಸರಣಸ್ಥಿತಿಯು ಸ್ಥೂಲವಾದದ್ದೆಂದು ಧ್ವನಿತವಾಗುತ್ತದೆ.

ತೃತೀಯಾಮೇದೋಧರಾ; ಮೇದೋಽಸರ್ವಭೂತಾನಾಮು
ದರಸ್ಥಮಣ್ವಸ್ಥಿಷುಚ, ಮಹತ್ಸುಚಮಜ್ಜಾಭವತಿ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೧೨)

(೩) "ಮೇದೋಧರಾ" ಎಂಬ ಹೆಸರಿನ ಕಲೆಯು ಮೂರನೇಯ ದಾಗಿರುತ್ತದೆ ಮೇದಸ್ಸು ಸರ್ವ ಪ್ರಾಣಿಗಳ ಉದರ ಪ್ರದೇಶದಲ್ಲಿರುತ್ತದೆ. ಅಲ್ಪಾಸ್ಥಿ (ಅಣ್ವಸ್ಥಿ) ಗಳಲ್ಲಿ ಮೇದಸ್ಸೂ, ಸ್ಥೂಲಾಸ್ಥಿಗಳಲ್ಲಿ (ಪೊಳ್ಳು ಭಾಗ ದಲ್ಲಿ) ಮಜ್ಜೆಯೂ ಇರುತ್ತದೆ.

ಸ್ಥೂಲಾಸ್ಥಿಷುವಿಶೇಷೇಣಮಜ್ಜಾತ್ವಭ್ಯಂತರಾಶ್ರಿತಃ ॥
ಅಥೇತರೇಷುಸರ್ವೇಷುಸರಕ್ತಂ ಮೇದಉಚ್ಯತೆ ॥
ಶುದ್ಧಮಾಂಸಸ್ಯಯಃ ಸ್ನೇಹಃ ಸಾವಸಾಪರಿಕೀರ್ತಿತಾ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೧೩)

ಸ್ಥೂಲವಾದ ಅಸ್ಥಿಗಳ ಮಧ್ಯಭಾಗಗಳಲ್ಲಿ, ಮಜ್ಜೆಯು ಒಳಗೆ ಪೊಳ್ಳು ಭಾಗಗಳಲ್ಲಿಇರುತ್ತದೆ. ಇತರವಾದ ಅಲ್ಪಾಸ್ಥಿಗಳಲ್ಲಿ ರಕ್ತದಿಂದಯುಕ್ತವಾದ ಮೇದಸ್ಸಿರುತ್ತದೆ. ಶುದ್ಧವಾದ ಮಾಂಸದ ಸ್ನೇಹ (ನೆಣ, ನಯವುಳ್ಳ ಸತ್ವ ಭಾಗ)ಕ್ಕೆ ವಸಾ ಎಂದು ಹೇಳುತ್ತಾರೆ. **ಮೇದಃ ವಪಾವಸಾ** ಇವುಗಳು ಮೇದಸ್ಸಿನ ಪರ್ಯಾಯವಾಚಕ ಶಬ್ದಗಳು. ಮೇದಸ್ಸೆಂದರೆ ತುಪ್ಪದಂತೆ ದಟ್ಟಾದ ನಯವುಳ್ಳ ಶರೀರದಲ್ಲಿಯ ಧಾತುವಾಗಿರುತ್ತದೆ

ಮೇದೋನಾಮ:- ಸಾಂದ್ರಸರ್ಪಿಸ್ತುಲ್ಯಃ ಸ್ನೇಹಧಾತುಃ ಶರೀರಸ್ಯ ॥ (ಸುಶ್ರುತ ಟೀಕಾ)

ಅಷ್ಟಾಂಗಸಂಗ್ರಹ ಮತವು:— ಮಜ್ಜಾ, ತದೇವಚ ಸಿರಸಿಕ ಪಾಲಪ್ರತಿಚ್ಛನ್ನಂ ಮಸ್ತಿಷ್ಕಾಖ್ಯಂ ಮಸ್ತುಲುಂಗಾಖ್ಯಂಚ ॥

(ಅಷ್ಟಾಂಗಸಂಗ್ರಹ॥ ಶಾರೀರ॥ ಅ ೫)

ತಲೆಯಲ್ಲಿ ತಲೆಬುರುಡೆಯ ಭಾಗಗಳಿಂದ ಮುಚ್ಚಲ್ಪಟ್ಟಿರುವ ಮಜ್ಜೆಗೆ, ಮಸ್ತಿಷ್ಕ, ಮಸ್ತುಲುಂಗವೆಂದು ಹೇಳುತ್ತಾರೆ. ಅಂದರೆ ಇವುಗಳು ಮಿದುಳಿನ ಹೆಸರುಗಳು.

ಚತುರ್ಥೀಶ್ಲೇಷ್ಮಧರಾಸರ್ವಸಂಧಿಷುಪ್ರಾಣಭೃತಾಂಭವತಿ ॥

(ಸುಶ್ರುತ॥ ಶಾರೀರ॥ ಅ ೪ ಸೂ ೧೪)

(೪) "ಶ್ಲೇಷ್ಮಧರಾ" ಎಂಬ ನಾಲ್ಕನೇ ಕಲಾಭಾಗವು ಪ್ರಾಣಿಗಳ ಸರ್ವ ಸಂಧಿಗಳಲ್ಲಿಯೂ ಇರುತ್ತದೆ. ಶ್ಲೇಷ್ಮವೆಂದರೆ ಕಫವು ಸರ್ವ ದೇಹವನ್ನು ವ್ಯಾಪಿಸಿಕೊಂಡಿರುತ್ತದೆ. ವಿಶೇಷವಾಗಿ ಅಸ್ಥಿ ಸಂಧಿಗಳಲ್ಲಿ ಇರುತ್ತಿದ್ದು, ಕೀಲುಗಳಿಗೆ ಚಲನವಲನೆಗಳಲ್ಲಿ ಸರಿದಾಡುವಂತೆ ಮಾಡುತ್ತದೆ.

ಸ್ನೇಹಾಭ್ಯೆಕ್ತೇಯಥಾಹ್ಯಕ್ಷೇಚಕ್ರಂ ಸಾಧುಪ್ರವರ್ತತೆ ॥
ಸಂಧಯಃ ಸಾಧುವರ್ತಂತೆಸಂಶ್ಲಿಷ್ಟಾಃ ಶ್ಲೇಷ್ಮಣಾತಥಾ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೧೫)

ರಥ ಚಕ್ರದ ರಂಧ್ರಗಳಲ್ಲಿ ಸ್ನೇಹ (ಎಣ್ಣೆ) ಮೊದಲಾದವುಗಳನ್ನು ಹಾಕಲು, ಚಕ್ರವು ಚನ್ನಾಗಿ ತಿರುಗುತ್ತವೆ. ಇದರಂತೆ ಸಂಧಿ ಕೀಲುಗಳಲ್ಲಿ ಶ್ಲೇಷ್ಮವು ಅಂಟಿಕೊಂಡಿರುವದರಿಂದ, ಆಕುಂಚನಪ್ರಸಾರಣಗಳಿಗೆಅನುಕೂಲವಾಗಿ; ಚನ್ನಾಗಿ ಕೀಲುಗಳು ತಿರುಗುತ್ತವೆ.

ಪಂಚಮೀ ಪುರೀಷಧರಾನಾಮ; ಯಾ್ಯಂತಃ ಕೋಷ್ಠೇ ಮುಲ
ಮುಭಿ ವಿಭಜತೆ ಪಕ್ವಾಶಯಸ್ಥಾ ॥

(ಸುಶ್ರುತ॥ ಶಾರೀರ॥ ಅ. ೪ ಸೂ. ೧೬)

(೫) "ಪುರೀಷಧರಾ" ಇದು ಐದನೇ ಕಲೆಯು, ಕೋಷ್ಠದ ಮಧ್ಯದಲ್ಲಿ ಮಲವನ್ನು ವಿಭಾಗಿಸುತ್ತದೆ. ಪಕ್ವಾಶಯದಲ್ಲಿರುತ್ತದೆ

ಯಕೃತ್ ಸಮಂತಾತ್ ಕೋಷ್ಠಂ ಚ ತಥಾ್ಯಂತ್ರಾಣಿಸಮಾ
ಶ್ರಿತಾ ॥ ಉಂಡುಕಸ್ಥಂ ವಿಭಜತೇ ಮುಲಂ ಮುಲಧರಕಲಾ ॥

(ಸುಶ್ರುತ॥ ಶಾರೀರ॥ ಅ. ೪ ಶ್ಲೋ. ೧೭)

ಯಕೃತ್ತಿನ ಸುತ್ತಲಿನಪ್ರದೇಶದಲ್ಲಿಯೂಕೋಷ್ಠಅಂತ್ರಗಳನ್ನಾಶ್ರಯಿಸಿ ಇರುತ್ತದೆ. "ಪುರೀಷಧರಾ"ಕಲೆಯು ಉಂಡುಕದಲ್ಲಿದ್ದ ಮಲವನ್ನು ವಿಭಾಗಿಸುತ್ತದೆ. ಸಮಸ್ತಕೋಷ್ಠವನ್ನಾಶ್ರಯಿಸಿಇರುವದೆಂದೂ"ಉಂಡುಕದಲ್ಲಿದ್ದ" ಮಲಮೂತ್ರಾದಿಗಳನ್ನು ಕೋಷ್ಠದಿಂದ ವಿಭಾಗವಮಾಡುತ್ತದೆಂದೂ ಇದರಿಂದ ಸ್ಪಷ್ಟವಾಗುತ್ತದೆ. ಚರಕದಲ್ಲಿ ಉಂಡುಕಕ್ಕೆ ಮಲಧರಕಲೆಯೆಂದು ಗ್ರಹಿಸಿದ್ದಾರೆ.

ಕೋಷ್ಠ ಲಕ್ಷಣವು

ಸ್ಥಾನಾನ್ಯಾಮಾಗ್ನಿಪಕ್ವಾನಾಂಮೂತ್ರಸ್ಯರುಧಿರಸ್ಯ ಚ ॥
ಹೃದುಂಡುಕಂ ಫುಫ್ಫುಸಶ್ಚ ಕೋಷ್ಠ ಇತ್ಯಭಿಧೀಯತೆ ॥
(ಸುಶ್ರುತ॥ ಚಿ. ಸ್ಥಾ. ಅ ೨)

ಆಮಾಶಯ ಅಗ್ನ್ಯಾಶಯ ಪಕ್ವಾಶಯ ಮೂತ್ರಾಶಯ ರಕ್ತಾಶಯ ಸ್ಥಾನಗಳು. ಹೃದಯ ಉಂಡುಕ ಫುಫ್ಫುಸಗಳು ಕೋಷ್ಠವೆಂದು ಹೇಳಲ್ಪಡುತ್ತವೆ. ಹೀಗೆ ಹೇಳಿರುವದರಿಂದ ಸಂಪೂರ್ಣ ಕೋಷ್ಠಸ್ಥಾನಗಳನ್ನಾಶ್ರಯಿಸಿಕೊಂಡು ಮಲಧರ ಕಲೆಯು ಇರುತ್ತದೆ ಆವಾವ ಸ್ಥಾನಗಳಲ್ಲಿರುವ ಮಲವನ್ನು ವಿಭಾಗಿಸುತ್ತದೆಂದು ಹೇಳಿದಂತಾಯಿತು. ಉಂಡುಕದಲ್ಲಿದ್ದುಕೊಂಡು ವಿಶೇಷವಾಗಿ ಮಲ (ಪುರೀಷ) ವನ್ನು ವಿಭಾಗಿಸುತ್ತದೆ. ಸ್ವಾಭಾವಿಕವಾಗಿ ಮಲ ವಿಭಜನೆಯಾದನಂತರ ಕಿಟ್ಟಭಾಗವು ಮಲಾಶಯದಲ್ಲಿ ಬರುವದರಿಂದ, ವಿಭಾಗವಾದ ಸ್ಥಿತಿಯೇ ಇರುತ್ತದೆ. ಹೀಗಿರುವದರಿಂದ ಮಲಾಶಯಕ್ಕೆಬರುವ ಪೂರ್ವದಲ್ಲಿಯೇವಿಭಾಗವಾಗುವದರಿಂದ,ಮಲಾಶಯದಪೂರ್ವದಲ್ಲಿಯೇ ಉಂಡುಕವಿರುತ್ತದೆಂದು ಕೆಲವರು ಪ್ರತಿಪಾದಿಸಿದ್ದಾರೆ. ಕೋಷ್ಠಗ್ರಹಣಮಾಡಿರುವದರಿಂದ ಕೋಷ್ಠಭಾಗಗಳಲ್ಲಿ ವ್ಯಾಪಕವಾಗಿರುತ್ತದೆಂತಲೂ ವಿಶೇಷವಾಗಿ ಉಂಡುಕದಲ್ಲಿದ್ದು, ಸ್ಥೂಲರೂಪವಾದ ಪುರೀಷವನ್ನುವಿಭಾಗವಾಡುತ್ತದೆಂದೂ ಸ್ಪಷವಾಗುತ್ತದೆ. ಕೋಷ್ಠದಿಂದ ಮಲವನ್ನು ಹೊರಗೆಹಾಕುತ್ತದೆಂತಲೂ ಗ್ರಹಿಸಿದರು ಸಮಗ್ರ ಭಾಗಗಳನ್ನು ವ್ಯಾಪಿಸಿರುವದರಿಂದ, ಪಕ್ವಾಶಯದಲ್ಲಿಯೂ ಇರುತ್ತದೆಂದು ಸಿದ್ಧವೇಆದೆ.

ಷಷ್ಠೀಪಿತ್ತಧರಾ; ಯಾ ಚತುರ್ವಿಧಮನ್ನಪಾನಮಾಶಯಾತ್ ಪ್ರಚ್ಯುತಂ ಪಕ್ವಾಶಯೋಪಸ್ಥಿತಂ ಧಾರಯತಿ ॥

(ಸುಶ್ರುತ॥ ಶಾರೀರ॥ ಅ. ೪ ಸೂ ೧೮)

(೬) "ಪಿತ್ತಧರಾ" ಇದು ಆರನೇ ಕಲಾ, ಭಕ್ಷ್ಯಾದಿ ಚತುರ್ವಿಧ ಅನ್ನವನ್ನೂ ಪಾನಮಾಡಿರುವ ಪೇಯಾದಿಗಳನ್ನೂ ಆಮಾಶಯದಿಂದಹೊರಗೆ ಹೊರಟು ಪಕ್ವಾಶಯಕ್ಕೆ ಹೋಗಲು ಸಿದ್ಧವಾದದ್ದನ್ನು; ಧಾರಣೆಯನ್ನು ಮಾಡುತ್ತದೆ. ಇಲ್ಲಿ ಪಿತ್ತವೆಂದರೆ ಅಂತರಗ್ನಿ ಸಂಜ್ಞೆಯುಳ್ಳ ಪಿತ್ತವು

ಷಷ್ಠೀಪಿತ್ತಧರಾನಾಮ ಪಕ್ವಾಮಾಶಯ ಮಧ್ಯಸ್ಥಾ, ಸಾಹ್ಯಂತ ರಗ್ನ್ಯಧಿಷ್ಠಾನತಯಾಮುಪಕ್ವಾಶಯೋರ್ಮಧ್ಯೇ ಚತುರ್ವಿಧ ಮನ್ನಂ ಬಲೇನವಿಧಾರ್ಯ ಪಿತ್ತತೇಜಸಾಶೋಷಯಂತೀ ಪಚತಿ ॥ (ಅಷ್ಟಾಂಗಸಂಗ್ರಹ॥ ಶಾ॥ ಅ. ೫)

ಪಿತ್ತಧರಾ ಎಂಬ ಆರನೇಕಲೆಯು ಆಮಾಶಯ ಪಕ್ವಾಶಯಗಳ ಮಧ್ಯ ಭಾಗದಲ್ಲಿದ್ದು, ಅದು ಅಂತರಗ್ನಿಯೆಂಬ ನಾಮಧೇಯವನ್ನು ಸಾಹಚರ್ಯದಿಂದ ಹೊಂದಿರುವದರಿಂದ ಪಚನಕ್ರಿಯೆಯನ್ನುಮಾಡುತ್ತದೆ. ಆಮಾಶಯ ಪಕ್ವಾಶಯಗಳ ಮಧ್ಯವರ್ತಿಯಾದ ಚತುರ್ವಿಧವಾದ ಆಹಾರವನ್ನು ತನ್ನ ಶಕ್ತಿಯಿಂದ ಧಾರಣೆಮಾಡಿ ಪಿತ್ತೋಷ್ಮದಿಂದ ಶೋಷಿಸಿ ಪಚನಮಾಡುತ್ತದೆ.

ಅಶಿತಂ ಖಾದಿತಂ ಪೀತಂ ಲೀಢಂಕೋಷ್ಠಗತಂನೃಣಾಂ ॥
ತಜ್ಜೀರ್ಯತಿಯಥಾಕಾಲಂ ಶೋಷಿತಂ ಪಿತ್ತತೇಜಸಾ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೧೯)

ಉಣ್ಣುವದು ತಿನ್ನುವದು ಕುಡಿಯುವದು ನೆಕ್ಕುವದು ಮುಂತಾದ ಬಗೆಯ ಆಹಾರವನ್ನು, ಮನುಷ್ಯರ ಕೋಷ್ಠ ಪ್ರದೇಶಗತವಾದಮೇಲೆ, ಪಿತ್ತ ತೇಜಸ್ಸಿನಿಂದ ಶೋಷಿಸಿ ಪಚನಮಾಡುತ್ತದೆ. ಇದು ಪಿತ್ತಧರ ಕಲೆಯ ಕಾರ್ಯವಾಗಿರುತ್ತದೆ.

ಸಪ್ತಮೀಶುಕ್ರಧರಾ, ಯಾಸರ್ವಪ್ರಾಣಿನಾಂ ಸರ್ವಶರೀರವ್ಯಾಪಿನೀ ॥ (ಸುಶ್ರುತ॥ ಶಾರೀರ॥ ಅ ೪ ಸೂ ೨೦)

(೭) "ಶುಕ್ರಧರಾ" ಎಂಬ ಏಳನೇ ಕಲಾ, ಸರ್ವ ಪ್ರಾಣಿಗಳ ಸಮಗ್ರ ಶರೀರ ವ್ಯಾಪಿಯಾಗಿರುತ್ತದೆ. ಅದು ಹೇಗೆಂದು ಉದಹರಿಸಿ ಹೇಳುತ್ತಾರೆ.

ಯಥಾಪಯಸಿಸರ್ಪಿಸ್ತು ಗೂಢಶ್ಚೇಕ್ಷೌರಸೋಯಥಾ ॥
ಶರೀರೇಷುತಥಾಶುಕ್ರಂ ನೃಣಾಂ ವಿದ್ಯಾತ್ ಭಿಷಗ್ವರಃ ॥

(ಸು॥ ಶಾ॥ ಅ ೪ ಶ್ಲೋ ೨೧)

ಹಾಲಿನಲ್ಲಿ ಸೂಕ್ಷ್ಮವಾಗಿ ಹೇಗೆ ತುಪ್ಪವೂ, ಕಬ್ಬಿನಲ್ಲಿ ರಸವು ಗೂಢವಾಗಿ ಸರ್ವ ವ್ಯಾಪಿಯಾಗಿರುತ್ತದೆಯೋ ಅದರಂತೆ, ಶರೀರಗಳಲ್ಲಿ ಶುಕ್ರವು ವ್ಯಾಪಿಯಾಗಿಯೂ ಸೂಕ್ಷ್ಮವಾಗಿಯೂ ಸರ್ವ ಶರೀರದಲ್ಲಿಯೂ ಇರುತ್ತದೆಂದು ವೈದ್ಯ ಶ್ರೇಷ್ಠನು ತಿಳಿಯಬೇಕು.

ದ್ವ್ಯಂಗುಲೇದಕ್ಷಿಣೇಪಾರ್ಶ್ವೇ ಬಸ್ತಿದ್ವಾರಸ್ಯಚಾಪ್ಯಧಃ ॥
ಮೂತ್ರಸ್ರೋತಃ ಪಥಾಚ್ಛುಕ್ರಂಪುರುಷಸ್ಯಪ್ರವರ್ತತೆ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೨೨)

ಬಸ್ತಿದ್ವಾರದ ಕೆಳಗಡೆ ಬಲಪಕ್ಕದಲ್ಲಿ ಎರಡು ಅಂಗುಲ ಪ್ರದೇಶದಲ್ಲಿ, ಮುಖ್ಯವಾಗಿ ಶುಕ್ರಧರಾಕಲೆ ಇರುತ್ತದೆ. ಮೂತ್ರ ದ್ವಾರ ಸ್ರೋತಸ್ಸಿನ ಮಾರ್ಗದಿಂದ ಶುಕ್ರವು ಪುರುಷನಿಗೆ ಪ್ರವರ್ತನೆಯಿಂದ ಹೊರಗೆ ಬರುತ್ತದೆ. ಇಲ್ಲಿ ಇನ್ನೊಂದು ಪ್ರಸಕ್ತಿಯೆಂದರೆ ಬಲಗಡೆಯಲ್ಲಿ ಶುಕ್ರದ ಸ್ಥಿತಿ ಗಮನಾದಿಗಳನ್ನು ಹೇಳಿದರೆ, ಪ್ರತ್ಯಕ್ಷಕ್ಕೂ ಸ್ವಶಾಸ್ತ್ರಕ್ಕೂ ವಿರೋಧವಾಗುತ್ತದೆ. ಹೇಗಂದರೆ ಸುಶ್ರುತದಲ್ಲಿ "**ಶುಕ್ರವಹೇದ್ವೇ ಶುಕ್ರಸ್ರಾದುರ್ಭಾವಾಯ ದ್ವೇಶುಕ್ರುವಿಸರ್ಗಾಯಚ॥**" (ಟೀಕಾ) ಶುಕ್ರವಹನವನ್ನು ಮಾಡತಕ್ಕ

ಸ್ರೋತಸ್ಸುಗಳಿರಡು, ಅವು ಶುಕ್ರವನ್ನುತ್ಪನ್ನ ಮಾಡುತ್ತವೆ. ಶುಕ್ರವಿಸರ್ಗ ಮಾಡುವವುಗಳು ಎರಡು ಎಂದು ಹೇಳಿರುವದರಿಂದ, ಎರಡೂ ಕಡೆಗೆ ಎಂದು ಹೇಳುವದೇ ಯೋಗ್ಯವು. ಬಲಗಡೆ ಎಂದು ಹೇಳುವದರಿಂದ ಎಡಗಡೆಯಲ್ಲಿರುವದು ಗ್ರಹಿತವಾಗುವದಿಲ್ಲ. "ದ್ಯ್ವಂಗುಲೇದಕ್ಷಿಣೇವಾಮೇ" ಇತ್ಯೇವ ಸಾಧೀಯಾನ್‌ಪಾಠಃ. (ಪ್ರತ್ಯಕ್ಷ ಶಾರೀರೆ)

ಕೃತ್ಸ್ನದೇಹಾಶ್ರಿತಂ ಶುಕ್ರಂ ಪ್ರಸನ್ನ ಮನಸಸ್ತಥಾ ॥
ಸ್ತ್ರೀಷುವ್ಯಾಯಚ್ಛತಶ್ಚಾಪಿಹರ್ಷಾತ್ ತತ್ ಸಂಪ್ರವರ್ತತೆ ॥

(ಸುಶ್ರುತ॥ ಶಾರೀರ॥ ಅ. ೪ ಶ್ಲೋ. ೨೩)

ಸಂಪೂರ್ಣ ದೇಹದಲ್ಲಿವ್ಯಾಪಕವಾಗಿರುವ ಶುಕ್ರವು, ಪ್ರಸನ್ನವಾದ ಮನಸ್ಸುಳ್ಳವನಿಗೆ, ಸ್ತ್ರೀಯರಲ್ಲಿ ರತಿಯನ್ನಾರಂಭಿಸಿದವನಿಗೆ ಹರ್ಷಉತ್ಪನ್ನವಾಗಲು ಹೊರಬೀಳುತ್ತದೆ. ರತಿ ಸಮಯದಲ್ಲಿ ಸಮಗ್ರ ದೇಹದಲ್ಲಿಯೂ ಹರ್ಷವಾಗುವದರಿಂದ, ದೇಹದಲ್ಲಿ ವ್ಯಾಪಕವಾಗಿ ಶುಕ್ರವಿರುತ್ತದೆಂದು ಸಿದ್ಧವಾಗುತ್ತದೆ ಸುಶ್ರುತದಲ್ಲಿ ಬಲಗಡೆ ಇರುತ್ತದೆಂದು ಹೇಳುವದರಿಂದ ವಿರೋಧ ಸಂಭವಿಸುತ್ತದೆ. ಆದ್ದರಿಂದ ಬಸ್ತಿಯ ಕೆಳಗಡೆ ಎರಡಂಗುಲ ಪಾರ್ಶ್ವಗಳಲ್ಲಿ, ಎರಡೂ ಕಡೆಗೆ ಇರುತ್ತದೆಂದು ಹೇಳುವದು ಯೋಗ್ಯವೆಂದು ನಿರ್ಣಯಿಸಿದ್ದಾರೆ.

(೨೧) ಧಾತ್ವಾದಿ ವಿಜ್ಞಾನವು

ವಿಸ್ತಾರೋಽತಊರ್ಧ್ವಂ, ತ್ವಚೋಽಭಿಹಿತಾಃ ಕಲಾಧಾತವೋ
ಮುಲಾದೋಷಾ ಯಕೃತ್‌ಪ್ಲೀಹಾನೌ ಫುಫ್ಫುಸ ಉಂಡುಕೋ
ಹೃದಯಂ ವೃಕ್ಕೌಚ ॥ (ಸುಶ್ರುತ॥ ಶಾರೀರ॥ ಅ. ೪ ಸೂ. ೨)

ವಿಸ್ತಾರವಾಗಿ ಇನ್ನು ಮುಂದೆ ವಿಭಾಗಶಃ ವಿವರವಾಗಿ ಹೇಳುತ್ತಾರೆ. ತ್ವಚೆ ಮತ್ತು ಕಲೆಗಳು ಹೇಳಲ್ಪಟ್ಟಿರುತ್ತವೆ. ಧಾತು, ಮಲ, ದೋಷ, ಯಕೃತ್, ಪ್ಲೀಹೆ, ಫುಪ್ಪುಸ, ಉಂಡುಕ, ಹೃದಯ, ವೃಕ್ಕ ಮೊದಲಾದವುಗಳನ್ನು ಹೇಳುತ್ತಾರೆ.

ಧಾತುಗಳು

ತಏತೇಶರೀರಧಾರಣಾತ್ ಧಾತವ ಇತ್ಯುಚ್ಯಂತೆ ॥
(ಸುಶ್ರುತ॥ ಸೂ. ಸ್ಥಾ. ಅ. ೧೪ ಸೂ. ೨೦)

ರಸಾSಸೃಕ್ ಮಾಂಸಮೇದೋSಸ್ಥಿ ಮಜ್ಜ ಶುಕ್ರಾಣಿ ಧಾತವಃ॥
(ವಾಗ್ಭಟ॥ ಅ. ೧ ಶ್ಲೋ. ೧೩)

"ದಧ" ಧಾರಣೆ ದಧತೀತಿ ಧಾತವಃ ॥

ಶರೀರವನ್ನು ಧಾರಣೆಮಾಡುವದರಿಂದ ರಸರಕ್ತ ಮೊದಲಾದವುಗಳು ಧಾತುವೆಂದು ಹೇಳಲ್ಪಡುತ್ತವೆ. ದೇಹದಲ್ಲಿ ಧಾತುಗಳು ಇರುವದರಿಂದಲೇ ದೇಹಾಭಿವೃದ್ಧಿಯೂ, ಪೋಷಣೆಯೂ, ದೇಹಧಾರಣೆಯೂ, ಆಗುತ್ತದೆ. ಧಾರಣಾರ್ಥಕವುಳ್ಳ "ದಧ" ಧಾತುವಿನ ರೂಪವು, ಧಾರಣೆಯನ್ನುಮಾಡುತ್ತದೆಯಾದ್ದರಿಂದ "ಧಾತು" ಎಂದು ಪ್ರತಿಪಾದಿತವಾಗಿದೆ ರಸದಿಂದಾರಂಭಿಸಿ ಏಳು ಧಾತುಗಳು ಇರುತ್ತವೆ.

೧ ರಸ ೨ ರಕ್ತ ೩ ಮಾಂಸ ೪ ಮೇದಸ್ಸು ೫ ಅಸ್ಥಿ ೬ ಮಜ್ಜಾ ೭ ಶುಕ್ರಗಳೆಂದು ಶರೀರದಲ್ಲಿ ಏಳು ಧಾತುಗಳು ಇರುತ್ತವೆ.

ಉಪಧಾತುಗಳು

ಧಾತುಗಳಿಂದ ಉತ್ಪನ್ನವಾಗುವ ಐದು ಉಪಧಾತುಗಳು ಇರುತ್ತವೆ. ಅವು ರಸಾದಿಗಳಿಂದ ಉತ್ಪನ್ನವಾಗುತ್ತವೆ. ಆದ್ದರಿಂದ ಅವಕ್ಕೆ ಉಪಧಾತುಗಳೆಂದು ಹೇಳುತ್ತಾರೆ.

ರಸಾತ್ಸ್ತ್ಯನ್ಯಂ ತಥಾ ರಕ್ತಮುಸೃಜಃ ಕಂಡರಾ ಸಿರಾಃ ॥
ಮಾಂಸಾದ್ವಸಾತ್ವಚಃ ಷಟ್ ಚ ಮೇದಸಃಸ್ನಾಯುಸಂಧಯಃ॥
(ಚರಕ॥ ಚಿಕಿತ್ಸಾ. ಸ್ಥಾ. ಅ. ೧೫ ಶ್ಲೋ. ೧೭)

ರಸಧಾತುವಿನಿಂದ ಸ್ತನ್ಯವು (ಮೊಲೆಹಾಲು), ರಜಸ್ಸಿನ ರಕ್ತವು, ಉಂಟಾಗುತ್ತವೆ. ರಕ್ತದಿಂದ ಕಂಡರಾ (ಸ್ಥೂಲಸ್ನಾಯು) ಸಿರಗಳುತ್ಪನ್ನವಾಗುತ್ತವೆ. ಮಾಂಸದಿಂದ ವಸಾ (ಚರಬಿ) ಆರು ತ್ವಚೆಗಳು ಹುಟ್ಟುತ್ತವೆ ಮೇದಸ್ಸಿನಿಂದ ಸ್ನಾಯುಗಳು ಹುಟ್ಟುತ್ತವೆ. "**ಸ್ನಾಯುಸಂಧಯಃ**" ಎಂದು ಹೇಳಿರುವದರಿಂದ ಸ್ನಾಯುಗಳಿಗೆ ಅಂಟಿಕೊಂಡಿರುವ ಸೂಕ್ಷ್ಮ ಸ್ನಾಯುಗಳೂ ಸಹ ಉತ್ಪನ್ನವಾಗುತ್ತವೆಂದು ತಿಳಿಯಬೇಕು ಅಥವಾ ಸೂಕ್ಷ್ಮವಾದ ಸ್ನಾಯುಗಳು ಮೇದಸ್ಸಿನಿಂದ ರಕ್ಷಿತವಾಗುತ್ತವೆಂದು ಗ್ರಹಿಸಬೇಕು.

ಸಿರಾ ಸ್ನಾಯುರಜಃಸ್ತನ್ಯ ತ್ವಚೋಗತಿ ವಿವರ್ಜಿತಾಃ ॥
ಧಾತುಭ್ಯಶ್ಚೋಪಜಾಯಂತೇ ತಸ್ಮಾತ್ತೇ ಉಪಧಾತವಃ ॥

(ಭೋಜತಂತ್ರೆ)

ರಸಾದಿ ಧಾತುಗಳಿಂದ ಉಪಧಾತುಗಳಾದ ೧ ಸಿರಾ ೨ ಸ್ನಾಯು ೩ ರಜಸ್ಸು ೪ ಸ್ತನ್ಯ ೫ ತ್ವಚೆಗಳು, ಉತ್ಪನ್ನವಾಗುತ್ತವೆ. ಧಾತುಗಳಿಂದ ಹುಟ್ಟಿದವುಗಳಾಗಿಯೂ, ಗತಿರಹಿತವಾದವುಗಳಾಗಿಯೂ ಇರುವದರಿಂದ ಇವುಗಳಿಗೆ ಉಪಧಾತುಗಳೆಂದು ಹೇಳುತ್ತಾರೆ. ಶರೀರ ಪೋಷಣೆಯು ಸಾಮಾನ್ಯತಃ ಇವುಗಳಿಂದ ಆಗುವದರಿಂದ ಉಪಧಾತುಗಳೆಂದೂ, ಧಾತುಗಳಿಂದ ಮುಖ್ಯವಾಗಿ ಪೋಷಣೆಯಾಗುವದರಿಂದ ಧಾತುಗಳೆಂದೂ, ಆನ್ನುತ್ತಾರೆ

ಸಪ್ತೋಪ ಧಾತುಗಳು

ಶಾರ್ಙ್ಗಧರ ಮತವು:— ಸಪ್ತ ಉಪಧಾತುಗಳು ರಸಾದಿ ಧಾತುಗಳಿಂದ ಸಂಭವಿಸುತ್ತವೆಂದು ಹೇಳಿರುತ್ತಾರೆ. ಅವು ರಸಾದಿ ಧಾತುಗಳಿಂದ ಹುಟ್ಟಿರುವದರಿಂದ ಉಪಧಾತುಗಳೆಂದು ಹೇಳುತ್ತಾರೆ.

ಸ್ತನ್ಯಂ ರಜಶ್ಚ ನಾರೀಣಾಂ ಕಾಲೇಭವತಿ ಗರ್ಭಿಣಿ ॥
ಶುದ್ಧ ಮಾಂಸಭವಸ್ನೆಹಃ ಸಾವಸಾಪರಿ ಕೀರ್ತಿತಾ ॥೧೬॥

ಸ್ವೇದೋದಂತಾಸ್ಥಾಕೇಶಾಸ್ತಥೈವೋಜಶ್ಚ ಸಪ್ತಮಂ ॥
ಇತಿ ಧಾತುಭವಾಜ್ಞೇಯಾ ಏತೇ ಸಪ್ತೋಪಧಾತವಃ ॥೧೬॥

ಸ್ತ್ರೀಯರಿಗೆ ಸ್ತನ್ಯವು ಮತ್ತು ರಜಸ್ಸು ಯೋಗ್ಯಕಾಲದಲ್ಲಿ ಉತ್ಪನ್ನವಾಗುತ್ತವೆ ಪುನಃ ಹೋಗುತ್ತವೆ ಶುದ್ಧವಾದ ಮಾಂಸದಿಂದುತ್ಪನ್ನವಾಗುವ ಸ್ನೇಹಕ್ಕೆ ವಸಾಎಂದು ಹೇಳುತ್ತಾರೆ ಸ್ವೇದ ದಂತ ಕೇಶ ಓಜಸ್ಸು, ಮೇದಸ್ಸು ಅಸ್ಥಿ ಶುಕ್ರ ಧಾತುಗಳಿಂದ ಉತ್ಪನ್ನವಾಗಿರುತ್ತವೆ. ಇವುಗಳಿಗೆ ಸಪ್ತ ಉಪ ಧಾತುಗಳೆಂದು ಹೇಳುತ್ತಾರೆ.

೧ ಸ್ತನ್ಯ ೨ ರಜಸ್ಸು ೩ ವಸಾ ೪ ಸ್ವೇದ ೫ ದಂತ ೬ ಕೇಶ ೭ ಓಜಸ್ಸು ಇವುಗಳು ಸಪ್ತ ಉಪಧಾತುಗಳು.

ಉಪಧಾತುಗಳ ವಿಷಯದಲ್ಲಿ ಚರಕ ಮತದಂತೆ ರಸ ಧಾತುವಿನಿಂದ ಸ್ತನ್ಯರಕ್ತಗಳು (ರಜಸ್ಸು) ಉತ್ಪನ್ನವಾಗುವನೆಂದು ಹೇಳಿದ್ದಾರೆ. ಶಾರ್ಙ್ಗಧರದಲ್ಲಿ ರಕ್ತದಿಂದ ರಜೋತ್ಪತ್ತಿಯನ್ನು ಹೇಳಿದ್ದಾರೆ. ಮತ್ತು ಚರಕದಲ್ಲಿಹೇಳಿದ ಆರು ತ್ವಚೆಗಳನ್ನೂ ಕಂಡರಾ ಸಿರಾ ಸ್ನಾಯು ಸೂಕ್ಷ್ಮ ಸ್ನಾಯುಗಳನ್ನು ಉಪಧಾತುಗಳೆಂದು ಶಾರ್ಙ್ಗಧರಾದಿಗಳಲ್ಲಿ ಗ್ರಹಿಸಿರುವದಿಲ್ಲ.

(೨೨) ಮಲಗಳು

ಪುರೀಷ ಮೂತ್ರ ಸ್ವೇದಾಃ ಮಲಾಃ ॥

"**ಪುರೀಷ**" ಆಹಾರದ ಸ್ಥೂಲಭಾಗವಾದ ಕಿಟ್ಟ ಇದಕ್ಕೆ ಮಲವೆಂದು ಅನ್ನುತ್ತಾರೆ.

"**ಮೂತ್ರ**" ಆಹಾರ ರಸಾದಿಗಳಲ್ಲಿಯವಿಶೇಷ ಹೆಚ್ಚಾದ ಮಲಿನ ಜಲ ಭಾಗವು. ಬಸ್ತಿಯಲ್ಲಿ ಸಂಗ್ರಹವಾಗಿ ಮೂತ್ರರೂಪದಿಂದ ಹೊರಗೆ ಬರುತ್ತದೆ.

"**ಸ್ವೇದ**" ಬೆವರು. ಶರೀರದ ರೋಮ ರಂಧ್ರಗಳಿಂದ ಹೊರಗೆ ಬರುವ ಜಲವು.

ಸಪ್ತಧಾತುಗಳ ಮಲಗಳು

ಜಿಹ್ವಾನೇತ್ರ ಕಫೋಲಾನಾಂ ಜಲಂ ಪಿತ್ತಂ ಚ ರಂಜಕಂ ॥
ಕರ್ಣವಿಡ್ ರಸನಾ ದಂತಕಕ್ಷ್ಮಾಮೇಢ್ರಾದಿಜಂ ಮಲಂ ॥೧೩॥

ನಖನೇತ್ರಮಲಂ ವಕ್ತ್ರೇಸ್ನಿಗ್ಧತ್ವಂ ಪಿಟಿಕಾಸ್ತಥಾ ॥
ಜಾಯೆಂತೇಸಪ್ತಧಾತೂನಾಂ ಮಲಾನ್ಯೇತಾನ್ಯನುಕ್ರಮಾತ್॥

(ಶಾರ್ಙಧರ॥ ಪ್ರ. ಖ. ೮ ಅ)

ನಾಲಿಗೆಯಲ್ಲಿ ಬರುವ ಜೊಲ್ಲು, ನೀರು, ಕಣ್ಣೀರು, ಮುಖದಲ್ಲಿಯ ನೀರು, ಇವು ರಸ "ಧಾತುವಿನ" ಮಲಗಳು. "ರಂಜಕ" ವೆಂಬ ಪಿತ್ತವು ಶರೀರಕ್ಕೆ ಕಾಂತಿಯನ್ನು ಉಂಟುಮಾಡುವದಾಗಿದ್ದು "ರಕ್ತಧಾತುವಿನ" ಮಲವಾಗಿರುತ್ತದೆ. ಕಿವಿಯಲ್ಲಿಯ ಮಲವು (ಕೂಗಣಿ) "ಮಾಂಸದ" ಮಲವಾಗಿದೆ. ನಾಲಿಗೆ, ಹಲ್ಲು, ಬಗಲು, ಶಿಶ್ನ, ಮೊದಲಾದವುಗಳಲ್ಲಿಯ ಮಲಗಳು, ಬೆವರು, "ಮೆದೋಧಾತುವಿನ" ಮಲವಾಗಿರುತ್ತವೆ. ನಖ, ನೇತ್ರಗಳ ಮಲವು, ಅಸ್ಥಿ ಮಜ್ಜಾಧಾತುವಿನಿಂದುಂಟಾಗಿರುತ್ತವೆ. ಮೋರೆಯ ಮೇಲಿನ ಸ್ನಿಗ್ಧತೆ ಮತ್ತೂ ಮಡಿಬಕ್ಕೆಗಳುಶುಕ್ರಮಲವೆನ್ನಿಸಿಕೊಳ್ಳುತ್ತವೆ

ಕಫಃ ಪಿತ್ತಂ ಮಲಃ ಖೇಷುಪ್ರಸ್ವೇದೋನಖರೋಮಚ ॥
ನೇತ್ರವಿಟ್ತ್ವಕ್ಷು ಚಸ್ನೇಹೋಧಾತೂನಾಂಕ್ರಮಶೋಮಲಾಃ॥

(ಶಾರ್ಙಧರ॥ ಪ್ರ. ಖ. ಅ. ೫ ಶ್ಲೋ ೧೫)

೧ ಕಫ ೨ ಪಿತ್ತ ೩ ರಂಧ್ರಗಳಲ್ಲಿಯ ಮಲ ೪ ಸ್ವೇದ ೫ ನಖ ರೋಮಗಳು ೬ ನೇತ್ರ ಮಲ ೭ ಚರ್ಮಗಳಲ್ಲಿಯ ಸ್ನಿಗ್ಧತೆಯು, ಇವುಗಳು ಸಪ್ತಧಾತುವಿನ ಮಲಗಳು.

(೨೩) ದೋಷಗಳು

ವಾಯುಃ ಪಿತ್ತಂ ಕಫೋದೋಷಾಧಾತವಶ್ಚ ಮಲಾಮತಾಃ ॥
ತತ್ರಾಪಿ ಸಂಚಧಾಖ್ಯಾತಾಪ್ರತ್ಯೇಕಂದೇಹಧಾರಣಾತ್ ॥
(ಶಾರ್ಙ್ಗಧರ॥ ಪ್ರ. ಖ. ಅ ೫ ಶ್ಲೋ ೨೩)

ವಾಯು, ಪಿತ್ತ, ಕಫಗಳು, ತ್ರಿದೋಷಗಳೆಂದೂ, ತ್ರಿಧಾತುಗಳೆಂದೂ, ತ್ರಿಮಲಗಳೆಂದೂ, ಹೇಳಲ್ಪಡುತ್ತವೆ. ದೇಹಧಾರಣಾಕ್ರಮದಿಂದ ಇವು ಪ್ರತಿಯೊಂದೂ ಐದು ವಿಧವಾಗಿರುತ್ತವೆ.

ದೋಷಗಳ ಅನ್ವರ್ಥಕ ಹೆಸರು

ಶರೀರದೂಷಣಾದ್ದೋಷಾಧಾತವೋದೇಹಧಾರಣಾತ್ ॥
ವಾತಪಿತ್ತಕಫಾಜ್ಞೇಯಾಮಲಿನೀಕರಣಾತ್ ಮಲಾಃ ॥
(ಶಾರ್ಙ್ಗಧರ॥ ಪ್ರ. ಖ. ಅ ೫ ಶ್ಲೋ ೨೪)

ಶರೀರವನ್ನು ದೂಷಿಸುವದರಿಂದ, ಅರ್ಥಾತ್ ಪ್ರಕೋಪ ಮೊದಲಾದ ವುಗಳಿಂದ ಶರೀರದಲ್ಲಿ ರೋಗೋತ್ಪನ್ನ ಮಾಡುವ ಕಾರಣ; ಇವುಗಳಿಗೆ "ದೋಷಗಳೆಂದು" ಹೆಸರು. ಸಮಪ್ರಮಾಣದಲ್ಲಿದ್ದಾಗ ಶರೀರವನ್ನು ಯೋಗ್ಯ ನಿರೋಗ ಸ್ಥಿತಿಯಲ್ಲಿಡುವದರಿಂದ, "ಧಾತುಗಳೆಂದು" ಅನ್ನುತ್ತಾರೆ. ವಿಕೃತಿಯನ್ನು ಹೊಂದಿದಾಗ ದೇಹವನ್ನು ಮಲಿನ ಮಾಡುವದರಿಂದ "ಮಲವೆಂದು" ಹೇಳುತ್ತಾರೆ. ವಸ್ತುತಃ ತ್ರಿದೋಷಕ್ಕೆ ಅವಾವ ಸ್ಥಿತಿಯಲ್ಲಿ ದೋಷ, ಧಾತು, ಮಲವೆಂದು ಅನ್ನುತ್ತಾರೆ. ಇವು ತ್ರಿದೋಷಗಳ ಅವಾವ ಸ್ಥಿತಿಯಲ್ಲಿಯ ಅನ್ವರ್ಥಕನಾಮಗಳಾಗುತ್ತವೆ.

ಯಕೃತ್ ಪ್ಲೀಹಾದಿಗಳು

ತದ್ವಾಮೇಪುಫ್ಫುಸಪ್ಲೀಹೌದಕ್ಷಿಣಾಂಗೇಯಕೃನ್ಮತಂ ॥
(ಶಾರ್ಙ್ಗಧರ)

ಎದೆಯ ಕೆಳಗೆ ಎಡಗಡೆಯಲ್ಲಿ "ಪ್ಲೀಹವು" ಇರುತ್ತದೆ. ಬಲಗಡೆಯ ಭಾಗದಲ್ಲಿ "**ಯಕೃತ್**" ಇರುತ್ತದೆ. ಎದೆಯ ಒಲಗಡೆ ಮತ್ತು ಎಡಗಡೆಗಳಲ್ಲಿ "**ಪುಪ್ಪುಸಗಳು**" ಇರುತ್ತವೆ. ಪುಪ್ಪುಸವು ಎಡಗಡೆಯಲ್ಲಿರುತ್ತದೆಂದು ಹೇಳಿದ್ದಾರೆ. ಆದರೆ ಎರಡೂ ಕಡೆಯಲ್ಲಿರುತ್ತದೆಂದು ನಿರ್ಣಯವಿರುವದರಿಂದ ಹಾಗೆಯೇ ಸ್ಪಷ್ಟಪಡಿಸಿದ್ದಾಗಿದೆ.

ಪುಪ್ಪುಸಗಳು

ಉದಾನವಾಯೋರಾಧಾರಃ ಪುಷ್ಪುಸಃಪ್ರೋಚ್ಯತೆಬುಧೈಃ ॥
ಯಕೃದ್ರಂಜಕಪಿತ್ತಸ್ಯಸ್ಥಾನಂ ರಕ್ತಸ್ಯಸಂಶ್ರಯಃ ॥

(ಶಾರ್ಙಧರ॥ ಪ್ರ ಖಂ. ೞ ೫ ಶ್ಲೋ ೪೪)

"**ಪುಪ್ಪುಸಗಳು**" ಉದಾನವಾಯುವಿಗೆ ಆಧಾರವಾಗಿರುತ್ತವೆ ಮತ್ತು ಯಾವಾಗಲು ಶ್ವಾಸೋಚ್ಛ್ವಾಸವಾಗಬೇಕಾದರೆ, ಪುಪ್ಪುಸಗಳ ಆಕುಂಚನ ಪ್ರಸಾರಣವಾಗುತ್ತದೆ. ಇವುಗಳ ಆಕುಂಚನ ಪ್ರಸಾರಣಗಳಿಂದ ತಿದಿಹೊಡೆದಂತೆ ವಾಯುವಿನ ಆಗಮನ ನಿರ್ಗಮನಗಳಾಗುತ್ತವೆ ಹೀಗಿರುವದರಿಂದಲೇ ಕಂಠದೇಶದಲ್ಲಿರುವ (ಸಂಚರಿಸುವ) ಉದಾನವಾಯುವಿಗೆ ಆಧಾರ ಸ್ಥಾನವೆಂದು ಹೇಳಿದ್ದಾರೆ.

(೨೪) ಯಕೃತ್

"**ಯಕೃತ್**" ರಂಜಕ ಪಿತ್ತವು ಯಕೃತ್ತಿನಿಂದಲೇ ಹುಟ್ಟುತ್ತದೆ ರಂಜಕ ಪಿತ್ತವೆಂದರೆ, ಆಹಾರ ರಸದಲ್ಲಿ ಯುಕ್ತವಾಗಿಅದಕ್ಕೆ ಕೆಂಪು ಬಂಣ ಬರುವಂತೆ ಮಾಡುತ್ತದೆ ಹೀಗೆ ಬಂಣವನ್ನುಂಟು ಮಾಡುತ್ತದೆಯಾದ್ದರಿಂದ ಇದಕ್ಕೆ ರಂಜಕಪಿತ್ತವೆಂಬ ಹೆಸರು. ರಂಜಕಪಿತ್ತದ ಯೋಗದಿಂದಲೇ ಅನ್ನ ರಸವು ರಕ್ತವಾಗಿ ಪರಿಣಮಿಸುತ್ತದೆ. ಈ ರಂಜಕ ಪಿತ್ತೋತ್ಪತ್ತಿಗೆ ಯಕೃತ್ತೇ ಸ್ಥಾನವು. ಇದನ್ನು ಆಶ್ರಯಿಸಿ ರಸವು ಕೆಂಪು ಬಣ್ಣವನ್ನು ಹೊಂದಿ ರಕ್ತ

ವಾಗುತ್ತದೆಯಾದ್ದರಿಂದ, ರಕ್ತಕ್ಕೆ (ರಕ್ತವಾಗಲಿಕ್ಕೆ) ಮೂಲ ಕಾರಣವಾದ್ದರಿಂದ ರಕ್ತವು ಯಕೃತ್ತನ್ನು ಆಶ್ರಯಿಸುತ್ತದೆಯೆಂದು ಹೇಳಿದ್ದಾರೆ. ರಕ್ತಾಶಯವು ಬೇರೆ ಇರುವದರಿಂದ ಯಕೃತ್ ರಕ್ತವಿರುವ ಸ್ಥಾನವೆಂದು ತಿಳಿಯಬಾರದು ರಸವು ರಕ್ತವಾಗುವಪರ್ಯಂತ ಆಶ್ರಯಿಸಿರುವದರಿಂದಲೂ, ಇಲ್ಲಿಯೇ ರಕ್ತವಾಗಿ ಪರಿಣಮಿಸುವದರಿಂದಲೂ, ರಕ್ತಕ್ಕೆ ಸಂಶ್ರಯ ಸ್ಥಾನವೆಂದು ಹೇಳಿರುವರೇವಿನಾ, ಮುಖ್ಯವಾದ ರಕ್ತಸಂಶ್ರಯಸ್ಥಾನವು ರಕ್ತಾಶಯದ ಹೊರತು ಮತ್ತಾವದೂ ಇರುವದಿಲ್ಲ. ಯಕೃತ್ತಿನಲ್ಲಿ ಪಿತ್ತರಸವು ಉತ್ಪನ್ನವಾಗುತ್ತದೆ ನಂತರ ಅದು ಪಿತ್ತಾಶಯದಲ್ಲಿ ಸಂಚಯವಾಗುತ್ತದೆ. ಆಹಾರಜೀರ್ಣ ಕ್ರಮದಲ್ಲಿ ಪಿತ್ತರಸವು ಕೂಡಿಕೊಂಡು ಆಹಾರವನ್ನು ಪಚನ ಮಾಡುತ್ತದೆ

(೨೫) ಪ್ಲೀಹಾ

ರಕ್ತವಾಹಿಸಿರಾಮೂಲಂ ಪ್ಲೀಹಾಖ್ಯಾತಂ ಮಹರ್ಷಿಭಿಃ ॥

(ಶಾರ್ಙ್ಗಧರ)

ರಕ್ತವು ಯಕೃದ್ರಸದಿಂದ ಆಗುವಂತೆ ಪ್ಲೀಹೋತ್ಪನ್ನ ರಸದಿಂದಲೂ ಆಗುತ್ತದೆ. ಆದ್ದರಿಂದ ಪ್ಲೀಹವೂ ಕೂಡ ರಕ್ತವಾಗಲಿಕ್ಕೆ ಮೂಲ ಕಾರಣವು. ಆದ್ದರಿಂದ ರಕ್ತವಾಹಿ ಸಿರಗಳಿಗೆ ಮೂಲಕಾರಣವೆಂದು ಹೇಳಿದ್ದಾರೆ. ಮಹರ್ಷಿಗಳು ಮುಖ್ಯವಾಗಿ ಇಲ್ಲಿ ರಕ್ತ ತಯಾರಾಗುವ ಮೂಲ ಕಾರಣವನ್ನು ವಲೋಕಿಸಿ, ಹೀಗೆ ರಕ್ತವಾಹಿಗಳಾದ ಸಿರಗಳಿಕೆ ಪ್ಲೀಹವು ಮೂಲವೆಂದು ನಿರ್ಣಯಿಸಿದ್ದಾರೆ

(೨೬) ಕ್ಲೋಮ (ತಿಲ) ಗಳು

ಜಲವಾಹಿಸಿರಾಮೂಲಂ ತೃಷ್ಣಾಚ್ಛಾದನಕಂತಿಲಂ ॥

(ಶಾರ್ಙ್ಗಧರ॥ ಪ್ರ. ಖ. ಅ ೫ ಶ್ಲೋ. ೪೪)

ತಿಲಕವೂ(ಕ್ಲೋಮ)ಕೂಡ ಎದೆಯಲ್ಲಿ ಉಭಯ:(ಎಡಬಲ)ಸ್ಥಾನಗಳಲ್ಲಿ ಇರುತ್ತವೆ. ಪ್ರಮಾದವಶಾತ್ ಬಲಗಡೆಯಲ್ಲಿ ಎಂದು ಹೇಳಿದ್ದಾರೆ. ಆದ್ದರಿಂದ ಎರಡೂ ಕಡೆಯಲ್ಲಿ ಎಂದು ಗ್ರಹಿಸುವದು ಯೋಗ್ಯವು. ತಿಲಕಂ, ತಿಲಂ, ಕ್ಲೋಮಗಳೆಂಬ ಹೆಸರುಗಳಿರುತ್ತವೆ ಜಲವನ್ನು ವಹಿಸುವ (ಒಯ್ಯುವ) ಸಿರಾಗಳ ಮೂಲದಲ್ಲಿರುತ್ತವೆ ವಿಶೇಷವಾಗಿ ನೀರಡಿಕೆ (ತೃಷ್ಣಾ) ಉಂಟು ಮಾಡುತ್ತವೆ ಆಲ್ಲಿ ಯೋಗ್ಯಸಾಕಷ್ಟು ಜಲ (ನ್ರವ) ವಿರುವವರೆಗೆ ತೃಷ್ಣೆಯನ್ನು ತಡೆಯುತ್ತವೆ "ಆಚ್ಛಾದಕ" ವೆಂದರೆ ತೃಷ್ಣೆಯನ್ನು ಆರ್ದ್ರತೆ ಇರುವ ವರೆಗೆ ತಡೆದುಹಿಡಿಯುತ್ತವೆಂದೂ, ಮಾಂಸಗೋಲಕಗಳಾದ್ದರಿಂದ ಹೃದಯಕ್ಕೆ ಬಲಬರುವಂತೆ ಆಚ್ಛಾದಕವೆಂದೂ ಅರ್ಥ ಮಾಡುತ್ತಾರೆ. ಇವೆರಡೂ ಯುಕ್ತಿಸಂಮತವಾದವುಗಳೇಇರುತ್ತವೆ. ಕ್ಲೋಮವೆಂದರೆ ಮಾಂಸಗೋಲಕಗಳು.

(೨೭) ವೃಕ್ಕಗಳು

ವೃಕ್ಕೌ ಪುಷ್ಟಿಕರೌ ಪ್ರೋಕ್ತಾ ಜಠರಸ್ಥಸ್ಯ ಮೇದಸಃ ॥

(ಶಾರ್ಙ್ಗಧರ)

"ವೃಕ್ಕವೆಂದರೆ" ಹೊಟ್ಟೆಯ ಪ್ರದೇಶಗಳಲ್ಲಿರುವ ಮಾಂಸ ಗೋಲಕಗಳು. ಜಠರದಲ್ಲಿ ಮೇದಸ್ಸಿನ ಪುಷ್ಟಿಯನ್ನು ಮಾಡುತ್ತವೆ. ಮೇದಸ್ಸನ್ನು ಒಯ್ಯುವ ಸ್ರೋತಸ್ಸಿನ ಮೂಲಗಳು ವೃಕ್ಕಗಳು. ಮೇದೋವಹ ಸ್ರೋತಸ್ಸುಗಳು ವೃಕ್ಕಗಳಿಂದ ಹೊರಟಿರುತ್ತವೆಂಬರ್ಥವು.

(೨೮) ವೃಷಣ (ಬೀಜಕೋಶ)ಗಳು

ವೀರ್ಯವಾಹಿ ಸಿರಾಧಾರೌ ವೃಷಣೌ ಪೌರುಷಾವಹೌ ॥

(ಶಾರ್ಙ್ಗಧರ॥ ಪ್ರ. ಖ. ಅ. ೫ ಶ್ಲೋ. ೪೬)

ಪುರುಷರ ಶುಕ್ರವನ್ನು ಅತ್ತಿತ್ತ ಚಲನಮಾಡಿಸತಕ್ಕ ಧಮನಿಗಳಿಗೆ ಆಶ್ರಯವಾಗಿಯೂ, ಮುಖ್ಯವಾಗಿ ಪುರುಷತ್ವಕ್ಕೆ ಗುರುತಾಗಿಯೂ, ಇರುವ ಅಂಗಕ್ಕೆ ವೃಷಣಗಳೆಂಬ ಹೆಸರು. ಶುಕ್ರವಾಹಿ ಸ್ರೋತಸ್ಸುಗಳಿಗೆ ವೃಷಣವು ಅಂಟಿಕೊಂಡಿರುತ್ತವೆ. ವೃಷಣಗಳ ಪ್ರಸರಣಗಳಿಂದ ಶುಕ್ರ ನಿರ್ಗಮನವಾಗುತ್ತದೆ. ಅರ್ಥಾತ್ ಶುಕ್ರಪ್ರಚ್ಯವನಕ್ಕೆ ಪ್ರೇರಕವಾಗಿರುವದರಿಂದ "**ವೀರ್ಯವಾಹಿಸಿರಾಧಾರೌ**" ವೀರ್ಯವಾಹಿ ಸಿರಗಳಿಗೆ ಆಶ್ರಯವೆಂದು ಹೇಳಿದ್ದಾರೆ. ಮುಖ್ಯವಾಗಿ ಶುಕ್ರ ವಿಸರ್ಜನೆಗೆ ಮೂಲವಾಗಿರುವದರಿಂದಲೇ ವೃಷಣಗಳು ಸಿರಗಳಿಗೆ ಆಧಾರವೇ ಹೊರತು, ವೃಷಣಗಳಿಂದ ಸಿರಾ ಉತ್ಪನ್ನವಾಗಿರುತ್ತವೆಂದು ತಿಳಿಯಬಾರದು.

(೨೯) ಲಿಂಗವು

ಗರ್ಭಾಧಾನಕರಂ ಲಿಂಗಮುಯನಂ ವೀರ್ಯ ಮೂತ್ರಯೋಃ॥

(ಶಾರ್ಙ್ಗಧರ)

ಲಿಂಗವೆಂದರೆ ಪುರುಷ ಜನನೇಂದ್ರಿಯವು. **ಮೇಢ್ರ, ಮೇಹನ, ಶೇಫಃ, ಶಿಶ್ನ,** ಲಿಂಗವೆಂದು ಪರ್ಯಾಯ ನಾಮಗಳಿರುತ್ತವೆ. ಲಿಂಗವು ಪುರುಷನ ಶುಕ್ರ (ವೀರ್ಯ) ವನ್ನು ಗರ್ಭಾಧಾನಕ್ಕಾಗಿ ಯೋನಿಯಲ್ಲಿ ಸ್ಖಲಿಸುತ್ತದೆ. ಮೂತ್ರವನ್ನು ಹೊರಗೆ ಹಾಕುತ್ತದೆ. ಸ್ವಾಭಾವಿಕವಾಗಿ ಮೂತ್ರವನ್ನೂ, ಶುಕ್ರವನ್ನೂ, ಹೊರಗೆಹಾಕುವ ಕಾರ್ಯವನ್ನುಮಾಡುತ್ತದೆಂದಭಿಪ್ರಾಯವು. ವೀರ್ಯ ಮೂತ್ರಗಳು ಹೊರಬರುವ ದ್ವಾರವಾಗಿರುತ್ತದೆ. ಗರ್ಭಾರಂಭ ಕ್ರಮದಲ್ಲಿ ಯೋನಿಯಲ್ಲಿ ಪ್ರಚ್ಯುತವಾದ ಶುಕ್ರ ಮತ್ತು ಆರ್ತವಗಳು ಯುಕ್ತವಾಗಿ, ಗರ್ಭಾಶಯವನ್ನು ಪ್ರವೇಶಿಸಿ ಅಲ್ಲಿ ಗರ್ಭವಾಗಿ ಅಭಿವೃದ್ಧಿಯನ್ನು ಕ್ರಮವಾಗಿಹೊಂದುತ್ತದೆ. ಆದ್ದರಿಂದ ಲಿಂಗವು ಗರ್ಭಾಧಾನಕರವೆಂದು ಹೇಳಿದ್ದಾರೆ

(೩೦) ಉಂಡುಕ

ಪಂಚಮೀಪುರೀಷಧರಾ, ಸಾಹ್ಯಂತ್ರಾಮಪಕ್ವಾಶಯಾತ್ಕ್ರಯಾ,
ತತ್ರೋಂಡುಕಸ್ಥಂ ಮಲಂ ವಿಭಜತಿ ॥ (ವೃದ್ಧವಾಗ್ಭಟ)

(ಚರಕ) ಪುರೀಷಾಧಾರಶಬ್ದೇನ ಉಂಡುಕಃ ಪ್ರತಿಪಾದಿತಃ ॥
ಅತ ಏವ ಪುರೀಷಧರೇತಿ ನಾಮಾಸ್ಯಾಃ ॥ ಮಲಂ ವಿಭಜತೇ
ಮೂತ್ರ ಪುರೀಷ ರೂಪತಯಾ ವಿಭಾಗಂ ಕರೋತಿ ॥

ಕರಳು, ಅಮಾಶಯ, ಪಕ್ವಾಶಯಗಳಲ್ಲಿ "ಉಂಡುಕದಲ್ಲಿ" ಪುರೀಷ ಧರಾಕಲಾ ಇರುತ್ತದೆ. ಮಲವನ್ನು ವಿಭಾಗಿಸುತ್ತದೆ. ವೃದ್ಧ ವಾಗ್ಭಟ ಮತವು ಇಂತಿರುತ್ತದೆ.

ಚರಕ ಮತವು:— ಪುರೀಷಾಧಾರ ಶಬ್ದದಿಂದ "**ಉಂಡುಕವು**" ಪ್ರತಿಪಾದಿತವಾಗಿರುತ್ತದೆ. ಆದ್ದರಿಂದಲೇ ಅದಕ್ಕೆ ಪುರೀಷಧರಾ ಎಂಬ ಹೆಸರು ಬಂದಿರುತ್ತದೆ. ಮೂತ್ರ ಪುರೀಷರೂಪದಿಂದ ಮಲವನ್ನು ವಿಭಾಗಿಸುತ್ತದೆ. ಎಂದು ಹೇಳಿದ್ದರಿಂದ ಗುದ ಪರ್ಯಂತವಾದ ಸಮಸ್ತಕೋಷ್ಠಾಶ್ರಯವಾಗಿ, ಉಂಡುಕವಿರುತ್ತದೆಂದು ಚರಕಾಚಾರ್ಯರ ಮತವು.

ದೇಹದಲ್ಲಿರುವ ಅಗ್ನಿ, ವಾಯುಗಳು ರಸಮೂತ್ರಪುರೀಷಗಳನ್ನು ಬೇರೆ ಮಾಡುತ್ತವೆಂದುಹೇಳಿದುವದರಿಂದ, ಪಕ್ವಾಶಯದಲ್ಲಿಯ ಮಲವನ್ನುಹೊರಗೆ ಹಾಕುವ ಕೆಲಸವನ್ನು ಉಂಡುಕಮಾಡುತ್ತದೆಂದು ಕೆಲವರ ಮತವು ಕೋಷ್ಠ ವ್ಯಾಪಿಯಾಗಿದ್ದು ಪಕ್ವಾಶಯದಲ್ಲಿ ಉಂಡುಕ ಸ್ಥಿತಿಯು ವಿಶೇಷವಾಗಿರುತ್ತದೆಂದೂ, ಪಕ್ವಾಶಯದಲ್ಲಿ ಮಲಸ್ಥಾನವಾದ್ದರಿಂದ ಮಲವನ್ನು ಹೊರಗೆ ಹಾಕುವ ಸ್ವಾಭಾವಿಕ ಸ್ಥಿತಿಯು ಇದ್ದೇ ಇರುತ್ತದೆಯಾದ್ದರಿಂದ; ಪಕ್ವಾಶಯದ ಮೇಲ್ಭಾಗದಲ್ಲಿ "ಉಂಡುಕ" ವಿದ್ದು ಸ್ಥೂಲಮಲದ ವಿಭಾಗವನ್ನು ಮಾಡುತ್ತದೆಂದೂ ಅನೇಕ ಮತಗಳಿರುತ್ತವೆ. ಪ್ರತ್ಯಕ್ಷ ಶವ ವಿಚ್ಛೇದನ ರೂಪದಿಂದ ಶರೀರವನ್ನು ಜ್ಞಾನಮಾಡಿಕೊಳ್ಳುವ ಪದ್ಧತಿಯು ಆಯುರ್ವೇದ

ದಲ್ಲಿ ಬರುವವರೆಗೂ, ವಿವಾದಾಸ್ಪದ ಸಂಗತಿಗಳು ನಿಶ್ಚಯವಾಗಲಾರವು. ಇದರಂತೆ ಅನೇಕ ದ್ರವ್ಯಗಳ ಸ್ಥಾನಾಶ್ರಯ ಸ್ಥಿತಿ ಆಕಾರ ಸ್ವರೂಪಗಳ ವಿಷಯದಲ್ಲಿ ಭಿನ್ನಾಭಿಪ್ರಾಯ ಇದ್ದೇ ಇರುತ್ತವೆ.

(೩೧) ಹೃದಯ ವಿಜ್ಞಾನವು

ಹೃದಯವನ್ನು ಆಯುರ್ವೇದದ ದೃಷ್ಟಿಯಿಂದ ವಿಚಾರಿಸಿದರೆ ಅನೇಕ ವಿರೋಧ ಸಂಶಯಗಳುಂಟಾಗುತ್ತವೆ. ಇದರಿಂದ ಆಯುರ್ವೇದದ ದೃಷ್ಟಿಯಿಂದ ಹೃದಯ ಸಿಸ್ಟ್ಯೂರ್ಸೆಯು ಅಸಂಗತವೆಂದು ಅನ್ನಿಸುವಷ್ಟು ಸಂದಿಗ್ಧವಾಗಿರುತ್ತದೆ. ಇಲ್ಲಿ ಹೃದಯವಿರುವ ಸ್ಥಾನ ಮತ್ತು ಹೃದಯಗಳನ್ನು ಭಿನ್ನ ಮಾಡಿ ಹೇಳದಿರುವದೇ ಬಹುಮತ ವಿರೋಧಗಳಿಗೆ ಆಸ್ಪದವಾಗಿದೆ.

ಆತ್ಮ, ಬುದ್ಧಿ, ಮನಸ್ಸು, ಚೇತನೆಗಳಿಗೆ ಹೃದಯವೇ ಆಶ್ರಯವೆಂದು ಹೇಳಿದ್ದಾರೆ. ಕಮಲದಂತೆ ಆಕಾರವುಳ್ಳದ್ದಾಗಿ ಅಧೋಮುಖವಾದದ್ದೆಂದೂ, ಎಚ್ಚತ್ತಾಗಅರಳಿಕೊಂಡೂ ನಿದ್ರಿಸಿದಾಗ ಮುಚ್ಚಿದಸ್ಥಿತಿಯನ್ನು(ಸಂಕೋಚ) ಹೊಂದಿಯೂ ಇರುತ್ತದೆಂದು ಹೇಳಿದ್ದಾರೆ. ಇದರಿಂದಲೇ ದೇಹದ ಸರ್ವ ಕ್ರಿಯಾ ನಡೆಯುವದರಿಂದ "**ಹೃದಯವು**" ಮುಖ್ಯವಾದದ್ದೆಂದು ಹೇಳಿರುವರು. ಹೃದಯವಿರುವ ಆಶ್ರಯಸ್ಥಾನಕ್ಕೂ ಹೃದಯವೆಂದು ಹೇಳಿದ್ದಾರೆ.

ಉದಾಹರಣೆ:– ಪ್ರಾಣರಸಾದಿಗಳನ್ನು ಒಯ್ಯುವ ಧಮನಿಗಳು ಹೃದಯದಿಂದ ಹೊರಟಿರುತ್ತವೆ. ಆದ್ದರಿಂದ ಅವುಗಳಿಗೆ ಹೃದಯವು ಆಶ್ರಯ ಸ್ಥಾನವಾಗಿರುತ್ತದೆ.

॥ರಸವಹಾನಾಂಸ್ರೋತಸಾಂ ಹೃದಯಂ ಮೂಲಂ ॥

(ಚರಕ ವಿಮಾನ)

॥ ಸ್ರಾಣವಹಾನಾಂ ಸ್ರೋತಸಾಂ ಹೃದಂಯಮೂಲಂ ॥

(ಚರಕ ವಿಮಾನ)

ರಸವಾಹಿನೀ ಸ್ರೋತಸ್ಸು (ಧಮನಿ) ಗಳಿಗೆ ಹೃದಯವು ಸ್ಥಾನವಾಗಿರುತ್ತದೆ ಇದರಂತೆ ಪ್ರಾಣವಾಹಿನೀ ಸ್ರೋತಸ್ಸುಗಳು ಸಹ ಹೃದಯದಿಂದ ಹೊರಟಿರುತ್ತವೆಂದು, ಚರಕ ಸುಶ್ರುತಗಳಲ್ಲಿ ಹೇಳಿರುವದರಿಂದ, ಕಮಲದ ಆಕಾರವುಳ್ಳ ಹೃದಯದಿಂದ ಧವ ನ್ಯಾದಿಗಳು ಹೊರಟಿರುತ್ತವೆಯೇ ಎಂದು ಅನಿಸುತ್ತದೆ. ಇಲ್ಲಿ ಕಮಲದ ಆಕಾರವಿರುವ ಸಾಕ್ಷಾತ್ ಹೃದಯದಿಂದ ಧಮನಿಗಳು ಹೊರಟಿರದೆ, ಹೃದಯದ ಸಮೀಪ ಸ್ಥಾನದಿಂದ ಹೊರಟಿವೆಯೆಂದು ತಿಳಿಯಬೇಕು. ಇದರಿಂದ ಹೃದಯವಿರುವ ಸಮೀಪ ಸ್ಥಾನಕ್ಕೂ ಲಕ್ಷಣ ಮಾಡಿ, ಹೃದಯವೆಂದು ಗ್ರಹಿಸಿದ್ದಾರೆನ್ನುವದು ಸಿದ್ಧವಾಯಿತು ಸಾಕ್ಷಾತ್ ಹೃದಯ, ಲಕ್ಷಣದಿಂದ ಗ್ರಹಿಸಿದ ಆಶ್ರಯಸ್ಥಾನ ರೂಪ ಹೃದಯವೆಂದೂ, ಸಾಮಿಪ್ಯ ರೀತಿಯ ಭಿನ್ನತೆಯನ್ನು ಗ್ರಹಿಸಿದರೆ ಹೃದಯವು ಯಾವದೆಂದು ನಿಶ್ಚಯವಾಗುತ್ತದೆ.

★ಹೃದಯ ಸ್ಥಾನ

ಉರೋಮಧ್ಯಗತಃ ಕೋಷ್ಠಃ ಲವಲೀ ಫಲವರ್ತುಲಃ ॥
ರಕ್ತಾಧಾರಶ್ಚತುರ್ಗರ್ಭ ಆವರಣ್ಯಾ ಸಮಾವೃತಃ ॥೧॥

ತಿರ್ಯಕ್ಸ್ರೋಧಮನೀಭೂಮಿಃ ಫುಫ್ಫುಸದ್ವ್ಯಂಶೇರ್ಷಕಃ॥
ಸ್ಪೀತ್ಯಾsಕುಂಚನಶೀಲೋsಸೌ ಹೃತ್ಕೋಷ್ಠ ಇತಿಕೀರ್ತಿತಃ ॥೨॥

ಅನಿಶಂಸ್ಫಾಯತೇಕೋಷ್ಠಃ ಪ್ರಕೃತ್ಯಾಸಂಕುಚತ್ಯಪಿ ॥
ಆಭೂಮಿಸ್ಪರ್ಶನಾದ್ಯಾವತ್ ನೃತ್ಯುಃ ಸರ್ವಸ್ಯದೇಹಿನಃ॥೩॥

ತದಾಕುಂಚನತೋರಕ್ತಂ ಮಹತಾಖಲುರಂಹಸಾ ॥
ಪ್ರವಿಶೇದ್ಧಮನೀಮೂಲಂ ತತೋಭ್ರಮತಿ ವಿಗ್ರಹಂ ॥೪॥

ಸ್ಫಾಯನಾಕುಂಚನತೇತಸ್ಯ ವಿರಮೇತಾಂಕ್ಷಣಂಯದಿ ॥
ಸಹಸೈವಭವೇನ್ಮೃತ್ಯುರ್ನಾಸ್ತಿಕೋಪ್ಯತ್ರ ಸಂಶಯಃ ॥೫॥

ಎದೆಯ ಮಧ್ಯ ಭಾಗದಲ್ಲಿ ರಾಯನೆಲ್ಲೀಕಾಯಿಯ (**ಲವಲೀಫಲ**) ಆಕಾರದಂತೆ ವರ್ತುಲವಾಗಿ ಹೃತ್ಕೋಷ್ಠವು (ಹೃದಯ) ಇರುತ್ತದೆ. ರಕ್ತಾಶಯದ ನಾಲ್ಕನೇ ವಿಭಾಗದಲ್ಲಿ ಆವರಣೆಯಿಂದ ಆವೃತವಾಗಿರುತ್ತದೆ. ಅಥವಾ ರಕ್ತಾಧಾರವೆಂದರೆ ಮಾಂಸವಾಗಿರುತ್ತದೆ. ಮಾಂಸ ಪರದೆಯು ನಾಲ್ಕನೇ ಆವರಣ ಮಧ್ಯದಲ್ಲಿ (ಗರ್ಭ) ಆಚ್ಛಾದಿಸಲ್ಪಟ್ಟಿರುತ್ತದೆ. ಈ ರೀತಿಯನ್ನನುಸರಿಸಿ ವಕ್ಷಸ್ಥಲ ಮಧ್ಯದಲ್ಲಿ ಹೃದಯವಿರುತ್ತದೆಂದು ಕೆಲವರು ಅನ್ನುತ್ತಾರೆ. "**ರಕ್ತಾಧಾರ**"ವೆನ್ನುವ ಶಬ್ದಕ್ಕೆ ರಕ್ತಾಶಯವೆಂದು ಅರ್ಥ ಮಾಡಿ, ರಕ್ತಾಶಯದ ನಾಲ್ಕನೇ ಭಾಗದಲ್ಲಿ ಆವೃತವಾಗಿ ಹೃದಯವಿರುತ್ತದೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಆಯುರ್ವೇದ ಸಿದ್ಧಾಂತದಲ್ಲಿ ಹೃದಯ ಮತ್ತು ರಕ್ತಾಶಯಗಳನ್ನು ಭಿನ್ನವಾಗಿ ಹೇಳಿದ್ದಾರೆ. ಇಷ್ಟೇಅಲ್ಲ ರಕ್ತನಾಹಿನೀ ಧಮನಿಗಳಿಗೆ ಯಕೃತ್‌ಪ್ಲೀಹಗಳು ಮೂಲವೆಂದು ವಿವರಿಸಿದ್ದಾರೆ. ಆದ್ದರಿಂದ ಇಲ್ಲಿ ರಕ್ತಾಧಾರವೆಂದರೆ ರಕ್ತಾಶಯವಲ್ಲದೆ, ರಕ್ತಕ್ಕೆ ಆಶ್ರಯವಾದದ್ದು "**ಮಾಂಸ**"ವೆಂದು ಅರ್ಥಮಾಡಬೇಕಾಗುತ್ತದೆ. ಹೀಗೆ ಅರ್ಥ ಮಾಡಿದರೆ ಮಾಂಸ ಪರದೆಗಳಿಂದ ಆವೃತವಾಗಿ ಹೃದಯವಿರುತ್ತದೆಂದು ಸ್ಪಷ್ಟವಾಗುತ್ತದೆ. ಅಂದರೆ ರಕ್ತಾಶಯ ಭಿನ್ನವಾಗಿ ಹೃದಯವಿರುತ್ತದೆಂದು ಸಿದ್ಧವಾಗುತ್ತದೆ. ಅಥವಾ ತಂತ್ರಾಂತರ ಸಿದ್ಧಾಂತವಿರುವದರಿಂದ ವಿವಿಧ ಮತವೂ ಇರುವದು ಸ್ವಾಭಾವಿಕವಿರುತ್ತದೆ ಅಡ್ಡವಾಗಿ ಬಂದ ಧಮನಿಗಳು ಇರುವ ಆಶ್ರಯಸ್ಥಾನದ ಸಮೀಪವಾಗಿಯೂ, ಎರಡೂ ಪುಪ್ಪುಸಗಳ ಮಧ್ಯದ ಮೇಲ್ಭಾಗದಲ್ಲಿ ಹೃದಯವು ಇರುತ್ತದೆ. ತೆರೆಯುವ ಮುಚ್ಚುವ ಅಥವಾ ವಿಕಸನಸಂಕೋಚಶೀಲವುಳ್ಳದ್ದು ಇರುತ್ತದೆ. ಯಾವಾಗಲೂ ಆಕುಂಚನ ಪ್ರಸರಣವಾಗುತ್ತಿರುತ್ತದೆಂಬ ಅಭಿಪ್ರಾಯವು. ಆದ್ದರಿಂದ ಇದಕ್ಕೆ ಹೃತ್ಕೋಷ್ಠ ಹೃದಯವೆಂಬ (ಕೋಣೆ) ಸ್ಥಾನವೆಂದು ಹೇಳುತ್ತಾರೆ.

ಹೃದಯದ ವಿಕಾಸದಿಂದ ಎಚ್ಚರವೂ ಮುಚ್ಚುವಿಕೆಯಿಂದ ನಿದ್ರೆಯೂ ಆವರಿಸುತ್ತದೆಯೆಂದು ಹೇಳಿದ್ದರಿಂದ, ಯಾವಾಗಲೂ ಹೃದಯದಲ್ಲಿ ಇವುಗಳು ನಡೆಯುತ್ತಲೇ ಇರುತ್ತವೆಯಾದ್ದರಿಂದ, ಒಂದುಕ್ಷಣ ನಿದ್ರೆ ಮತ್ತು ಎಚ್ಚರಗಳುಂಟಾಗಬೇಕೆಂಬ ಆಕ್ಷೇಪಬರುತ್ತದೆ. ಇಲ್ಲಿ ಒಂದು ವಿಶೇಷವೇನಂದರೆ ಯಾವಾಗಲೂ ನಡೆಯುತ್ತಿರುವ ಸಂಕೋಚ ವಿಕೋಚನೆಗಳು, ಸ್ಫುರಣರೂಪ

ವಾದ ಹೃದಯದ ಕ್ರಿಯೆಯೆಂದು ತಿಳಿಯಬೇಕು. ಅದು ನಿದ್ರೆಯಲ್ಲಿಯೂ ಸಹ ಇದ್ದೇ ಇರುತ್ತದೆ. ಸ್ಥೂಲರೂಪವಾದ ಅರಳುವಿಕೆ ಮುಚ್ಚುವಿಕೆ ಬೇರೆ, ಕ್ರಿಯಾರೂಪ ಸ್ಪುರಣೆಯು ಬೇರೆ ಇರುತ್ತದೆ. ಸ್ಥೂಲರೂಪದ ಮುಚ್ಚುವಿಕೆಯಿಂದ ಇಂದ್ರಿಯಾರ್ಥ ಸನ್ನಿಕರ್ಷ ಜ್ಞಾನವಾಗುವದಿಲ್ಲ. ಇಂದ್ರಿಯಗಳು ವಿಶ್ರಾಂತಿಯನ್ನುಹೊಂದಿರುತ್ತವೆ. ಸ್ಪುರಣರೂಪವಾದ ಹೃದಯಕ್ರಿಯೆಯು ಅನವರತ ಬಿಡದೇ ನಡೆಯುತ್ತಲೇ ಇರುತ್ತದೆ. ಅದರ ಗತಿ ನಿಂತಿತೆಂದರೆ ಮರಣ ಸಂಭವಿಸಿದೆಯೆಂದು ತಿಳಿಯಬೇಕು. ಚೇತನಾವಸ್ಥಿತ ಪ್ರೇರಕ ಆತ್ಮನ ಸಂಯೋಗ ಭಿನ್ನವಾದಕೂಡಲೇ, ಹೃದಯದ ಸ್ಪುರಣರೂಪಕ್ರಿಯೆಯು ಇಲ್ಲದಂತಾಗುತ್ತದೆ ಹೃದಯದ ಸಂಕೋಚ ವಿಕಾಸಗಳು ಸದಾ ಆಗುತ್ತಿರುವದು ಸ್ವಾಭಾವಿಕವೆಂದು ಹೇಳಿದ್ದಾರೆ ಸರ್ವಜೀವಿಗಳ ಉತ್ಪತ್ತಿ ಮೊದಲುಗೊಂಡು ಮೃತ್ಯುಬರುವ ಪರ್ಯಂತರವೂ ಹೃದಯಕ್ರಿಯೆಯು ಸತತ ನಡದೇ ಇರುತ್ತದೆ. ಆದ್ದರಿರದಲೇ ಜೀವಿತಮರಣ ನಿಶ್ಚಯ ವಿಷಯದಲ್ಲಿ ಹೃದಯವನ್ನೇ ಅವಲೋಕಿಸುತ್ತಾರೆ ಹೃದಯದ ಆಕುಂಚನೆಯಿಂದ ಪ್ರೇರಿಸಲ್ಪಟ್ಟದ್ದಾಗಿ, ರಕ್ತಾಶಯದಿಂದ ರಕ್ತವು ಬಹು ವೇಗದಿಂದ (ಬಹುರಂಹಸಾ) ಧಮನೀ ಮೂಲವನ್ನು ಪ್ರವೇಶಿಸುತ್ತದೆ. ನಂತರ ಸಮಗ್ರದೇಹವನ್ನು ಸಂಚರಿಸುತ್ತದೆ

"ಹೃದಯದ" ವಿಕಸನ (ಸ್ಫಾಯನ) ಆಕುಂಚನಗಳು ಒಂದುಕ್ಷಣ ತಡೆಯಿತೆಂದರೆ ಕೂಡಲೇ ಮರಣ ಸಂಭವಿಸುತ್ತದೆ. ಇದರಲ್ಲೇನೂ ವಿಚಾರ ಮಾಡುವ ಕಾರಣವೇ ಇರುವದಿಲ್ಲ. ಮರಣ ಸಂಭವಿಸಿದ ಕೂಡಲೇ ಹೃದಯ ಕ್ರಿಯೆಯೂ ಬಂದಾಗುತ್ತದೆ.

ಹೃದಯ ವಿಷಯದಲ್ಲಿ ಮುತಾಂತರ

ಸ್ಥಾನಮೇಕಾಂಗುಲಂ ವಾಮಚೂಚುಕಾಧಃ ಉರಃ ಫಲೇ ।
ಹೃದಯಾಗ್ರಮುಖಂವಾಮಾತ್ ಪಂಚಮೇಪರ್ಯಂತರೇ॥೧೦॥
ಪುರಸ್ತಾದ್ವಾಮತಃ ಪ್ರಾಯೋಹೃಚ್ಚತಿರ್ಯಗವಸ್ಥಿತವತ್ ॥
ಅತ್ರೈವದರ್ಶನ ಸ್ಪರ್ಶೈಃ ಸ್ಪಂದನಂಚಾನುಭೂಯತೇ ॥
(ತಂತ್ರಾಂತರೆ)

ವಕ್ಷಸ್ಥಲದಲ್ಲಿ (ಎದೆಯಲ್ಲಿ) ಎಡಗಡೆಯ ಸ್ತನದ ಒಂದಂಗುಲ ಕೆಳಭಾಗದಲ್ಲಿ ಹೃದಯವಿರುವ ಸ್ಥಾನವಾಗಿರುತ್ತದೆ. ಹೃದಯದ ಅಗ್ರಮುಖ ಭಾಗವು (ಮುಖ್ಯಭಾಗ) ಎದೆಯ ಎಡಗಡೇ (೫) ನೇಎಲುಬಿನ ಪಟ್ಟಿಯ ವರೆಗಿನ ಸ್ಥಾನದಲ್ಲಿರುತ್ತದೆ ವಕ್ಷಸ್ಥಲದ ಎದುರು ವಿಶೇಷವಾಗಿ ಎಡಗಡೆಯಲ್ಲಿ ಹೃದಯವು ಅಡ್ಡವಾಗಿರುತ್ತದೆ. ಅಲ್ಲಿಯೇ ಕೇಳುವಿಕೆ (ಧ್ವನಿ) ಯಿಂದ ಅಥವಾ ಸ್ಪರ್ಶನದಿಂದ ಹೃದಯಸ್ಪಂದನಜ್ಞಾನವಾಗುತ್ತದೆ. ಎಡಗಡೆಯ ಸ್ತನದ ಒಂದಂಗುಲ ಕೆಳಭಾಗದಲ್ಲಿ ಹೃದಯಸ್ಪಂದನ ಧ್ವನಿಗಳನ್ನು ಅವಲೋಕಿಸಬೇಕು.

ಹೃದಯದ ಸುತ್ತಲಿನ ಪ್ರದೇಶ

ತಿಷ್ಠತಿಹೃದಯಂದೇಹೇವಾಮಪಾರ್ಶ್ವೇತು ವಕ್ಷಸಃ॥
ಪರ್ಯಂಕಾಃ ಸಂಮುಖೇನಾಮೇದ್ವಿತ್ರಿಕಚತುಃ ಪಂಚಮಾಃ॥
ಅಸ್ಯೈವದಕ್ಷಿಣೇನಾಮೇಸ್ಪುಫ್ಫುಸೌತಿಷ್ಠತಃ ಕ್ರಮಾತ್॥
ಪಶ್ಚಾದನ್ನನಲೀಚಾಸ್ಯಧಮನೀಪೃಷ್ಠವಂಶಕಮ್॥
ಮಹಾಪ್ರಾಚೀರಾಸ್ಯಪೃಷ್ಠೇಪೇಶೀಚಹೃದಯಾಶ್ರಯಾ॥
ಉದರೇಪೇಶ್ಯಧೋವಾಮೇಪ್ಲೀಹಾಚದಕ್ಷಿಣೇಯಕೃತ್॥
ತಯೋರೂರ್ಧ್ವಂ ಮಹಾಸ್ರೋತೋರಕ್ತಸ್ಯಸರ್ವದೇಹಗಮ್॥
ಫುಫ್ಫುಸಗಾಚರಕ್ತಸ್ಯಸಿರಾಚಫುಫ್ಫುಸಸ್ಮೃತಾ॥
ಪ್ರಾಣದಾಪ್ರಾಣವಾಹಿನ್ಯೋಹೃದಿಬದ್ಧಾಭವಂತಿಹಿ॥
ಸ್ವಸಂಕೋಚವಿಕಾಶಾಭ್ಯಾಂ ಸೃಜತ್ಯಸ್ರಂಚಜೀವನಂ॥
ಸಜೀವಾಯಾಂತಿದೇಹೇಽಸ್ರಕ್ಷೇಪೇಣಪರಮಾಣವಃ॥
ಹೃದಯಸ್ಯಚಸೀಮಾಂತಾಃ ಕಾರ್ಯಂ ಸ್ಥಾನಂಚವರ್ಣಿತಂ॥
(ತಂತ್ರಾಂತರೆ)

ದೇಹದಲ್ಲಿ ಎದೆಯ ಎಡಗಡೇ ಭಾಗದಲ್ಲಿ "ಹೃದಯವು" ಇರುತ್ತದೆ. ಪಾರ್ಶ್ವಸ್ಥಿದಬ್ಬೆಗಳ ಸ್ಥಾನದಲ್ಲಿ ಎರಡನೇದರಿಂದಾರಂಭಿಸಿಐದನೇದರ(ದಬ್ಬೇ ಎಲಬು) ಪರ್ಯಂತರ ಎಡಗಡೆಗೆ ಸಂಮುಖವಾಗಿ (ಎದುರಿಗೆ) ಹೃದಯ

ಸ್ಥಾನವು. ಹೃದಯದ ಎಡಬಲಭಾಗಗಳಲ್ಲಿ "ಪುಪ್ಪುಸಗಳು" ಇರುತ್ತವೆ. ಹೃದಯದ ಹಿಂದೆ ಅನ್ನನಲಿಕೆ, ಮತ್ತು ಮಹಾ ಧಮನಿಗಳು ಇರುತ್ತವೆ. ಇವುಗಳ ಹಿಂದೆ ಕಸೇರುಕಾರಜ್ಜು (ಪೃಷ್ಠಾಸ್ಥಿ) ಇರುತ್ತದೆ. ಹೃದಯಕ್ಕೆ ಹತ್ತಿಕೊಂಡು ಹಿಂದು ಬದಿಯಲ್ಲಿ "ಮಹಾಪ್ರಾಚೀರ" ವೆಂಬ ಪೇಶಿಯು ಇರುತ್ತದೆ. ಅದರ ಮೇಲೆ ಅದನ್ನು ಆಶ್ರಯಿಸಿ, ಹೃದಯವು ಇರುತ್ತದೆ. ಮಹಾಪ್ರಾಚೀರದ ಕೆಳಗೆ ಉದರ ಗುಹಾದಲ್ಲಿ ಹೃದಯದ ಬಲಭಾಗದಲ್ಲಿ ಯಕೃತ್, ಎಡಭಾಗದಲ್ಲಿ ಪ್ಲೀಹಾ ಇರುತ್ತವೆ. ಇವುಗಳ ಮೇಲ್ಭಾಗಗಳಲ್ಲಿ ಸಮಗ್ರ ಶರೀರದಲ್ಲಿ ರಕ್ತವನ್ನು ಒಯ್ಯುವ ಧಮನೀ(ಮಹಾಸ್ರೋತಸ್ಸು) ಹೊರಟಿರುತ್ತವೆ. "ಪುಪ್ಪುಸಗಳಲ್ಲಿ" ರಕ್ತವಾಹಿ ಸಿರಗಳು ಮೇಲೆ ಕೆಳಗೆ ಇರುತ್ತಿದ್ದು ಪುಪ್ಪುಸಗಳಿಂದ ಹೊರಟಂಥವುಗಳು ಸಹ ಇರುತ್ತವೆ. ಪ್ರಾಣಧಾರಣೇಮಾಡುವ ಪ್ರಾಣವಾಹಿನೀ ಧಮನಿಗಳು ಹೃದಯ ಸ್ಥಾನದಲ್ಲಿ ಬದ್ಧವಾಗಿರುತ್ತವೆ ಹೃದಯವು ಸಂಕೋಚ ವಿಕೋಚಗಳಿಂದ ದೇಹದಲ್ಲಿ ಜೀವನವಾದ ರಕ್ತವನ್ನು ಚಲಿಸುವಂತೆ ಮಾಡುತ್ತದೆ. ಹೀಗೆ ಸಂಚಲಿತ ರಕ್ತದ ಪರಮಾಣುಗಳು ಸಜೀವವಾಗಿ ದೇಹದಲ್ಲಿ ಸಂಚರಿಸುತ್ತವೆ. ಹೀಗೆ ವಿಸ್ತಾರವಾಗಿ ಹೃದಯ ಮತ್ತು ಸುತ್ತಲಿರುವ ಬೇರೆ ವಿಭಾಗಗಳ ಸ್ಥಾನಕಾರ್ಯಗಳು ವರ್ಣಿಸಲ್ಪಟ್ಟಿರುತ್ತವೆ. ಹೃದಯ ಮತ್ತು ಪ್ರದೇಶಗಳ ಸ್ಥಾನಕ್ರಿಯಾದಿಗಳು ತಂತ್ರಾಂತರದಲ್ಲಿ ವರ್ಣಿತವಾಗಿರುತ್ತವೆ. ಇವು ಸಾಮಾನ್ಯತಃ ನವೀನ ಮತವನ್ನನುಸರಿಸಿಯೇ ಇರುತ್ತವೆ. ಇದರಿಂದ ಹೃದಯ ಮತ್ತು ಸುತ್ತಲಿನ ವಿಭಾಗಗಳು ತಿಳಿಯುತ್ತವೆ.

ಆಮಾಶಯಃ ಸಮೀಪೇಹಿ ಹೃದಯಸ್ಯೈವತಿಷ್ಠತಿ ॥

(ತಂತ್ರಾಂತರೆ)

ಹೃದಯದ ಸಮೀಪದಲ್ಲಿಯೇ ಆಮಾಶಯವು ಇರುತ್ತದೆ. "ಆಮ" ವೆಂದರೆ ಅಪಕ್ವವಾದ ಅನ್ನರಸವು. ಅಪಕ್ವ ಅನ್ನರಸವು ಇರುವ ಸ್ಥಾನ (ಆಶ್ರಯ) ವಾದ್ದರಿಂದ ಆಮಾಶಯವೆಂದು ಅನ್ನುತ್ತಾರೆ.

ಸ್ವವೀರ್ಯಾತ್ಸ ತ್ರಿಕಸ್ಯೈವ ಶ್ಲೇಷ್ಮೋರಸ್ಥೋsವಲಂಬಕಃ॥
ಹೃದಯುಸ್ಯಾನ್ನವೀರ್ಯಾಚ್ಚ ತತ್‌ಸ್ಥ ಏವಾಂಬು ಕರ್ಮಣಾ॥

ಕಫಧಾಮ್ನಾಂಚ ಶೇಷಾಣಾಂ ಯತ್ಕರೋತ್ಯವಲಂಬನಮ್ ॥

(ತಂತ್ರಾಂತರೆ)

ವಕ್ಷಸ್ಥಲದಲ್ಲಿ (ಉರಸಿ) ಅವಲಂಬಕವೆಂಬ ಕಫಾಶಯ (ಶ್ಲೇಷ್ಮ ಸ್ಥಾನ) ವಿರುತ್ತದೆ. ಅದು ತನ್ನ ಪ್ರಭಾವದಿಂದ ಶ್ಲೇಷ್ಮಪ್ರದೇಶ ಹೃದಯಗಳನ್ನು, ತನ್ನ ಸ್ಥಾನದಲ್ಲಿಯೇ ಇದ್ದುಕೊಂಡು, ಅನ್ನಸತ್ವದಿಂದಲೂ ಮತ್ತು ಅರ್ದತೆಯನ್ನುಂಟುಮಾಡುವದರಿಂದಲೂ ಧಾರಣೆಯನ್ನು (ಅವಲಂಬನೆ) ಮಾಡುತ್ತದೆ ದೇಹದಲ್ಲಿಯ ಉಳಿದ ಕಫಸ್ಥಾನಗಳನ್ನು ಸಹ ಧಾರಣಮಾಡುತ್ತದೆ.

ಹೃದಯವೆಂದರೆ ರಕ್ತಾಶಯವೋ?

ಸ್ಥಾನಂತು ಹೃದಯಂಕೇಚಿತ್ ಅಭೇದಾತ್ ರಸರಕ್ತಯೋಃ॥
ನಾಶೇತೇರಸಾದ್ಯಂ ಚ ವ್ರಜತ್ಯೇವತನೌ ತತಃ ॥
ಶುದ್ಧ್ಯರ್ಥಂ ಹೃದಯಂ ರಕ್ತಪ್ರೇರಕಂ ಪೋಷಣಾಯ ಚ ॥
ನಾಸೌ ರಕ್ತಾಶಯಃ ಪ್ರೋಕ್ತಃ ಪ್ರತ್ಯಕ್ಷಸ್ಯ ವಿರೋಧತಃ ॥

ರಸರಕ್ತಗಳ ಅಭೇದದಿಂದ (ರಸವೇ ಪರಿವರ್ತನೆಯಾಗಿ ರಕ್ತವಾಗುವದರಿಂದ) ಕೆಲವರು ರಸರಕ್ತಗಳೆರಡೂ ಹೃದಯಾಶ್ರಯವಾಗಿರುತ್ತವೆಂದು ಹೇಳುತ್ತಾರೆ. ಆದರೆ ಹೃದಯವು ರಸರಕ್ತಾದಿಗಳ ಆಶಯವಾಗಿರುವದಿಲ್ಲ ರಸರಕ್ತಾದಿಗಳು ಹೃದಯದಿಂದ ಪ್ರೇರಿತವಾಗಿ ದೇಹದಲ್ಲಿ ಸಂಚರಿಸುತ್ತವೆಯೇ ವಿನಾ; ಹೃದಯವು ಅವುಗಳ ಆಶಯವಲ್ಲ. ದೇಹದಪೋಷಣೆಗಾಗಿಯೂ ರಕ್ತ ಶುದ್ಧಿಗಾಗಿಯೂ ರಕ್ತವನ್ನು ಪ್ರೇರಿಸುವದು ಹೃದಯವಾಗಿರುತ್ತದೆ. ಪ್ರತ್ಯಕ್ಷಕ್ಕೆ ವಿರೋಧವಾಗುವದರಿಂದ ಹೃದಯವೆಂದರೆ, ರಕ್ತಾಶಯವೆಂದು ಹೇಳಲ್ಪಟ್ಟಿರುವದಿಲ್ಲ

ಅರ್ಥಾತ್, ಹೃದಯವು ರಕ್ತಶುದ್ಧಿಗೂ, ರಕ್ತವು ದೇಹದಲ್ಲಿ ಪೋಷಣೆಗಾಗಿ ಸಂಚರಿಸುವದಕ್ಕೂ, ಪ್ರೇರಕವಾಗಿರುತ್ತದೆ ಆದ್ದರಿಂದ ರಕ್ತವು ಆಶ್ರಯಿಸಿ ಇರುವ, ರಕ್ತಾಶಯವು ಹೃದಯವಾಗಿರುವದಿಲ್ಲ. ರಕ್ತಾಶಯವು ಹೃದ

ಯವೆಂದು ಹೇಳುವದು ಪ್ರತ್ಯಕ್ಷಕ್ಕೆ ವಿರೋಧವಾಗಿರುತ್ತದೆ. **ಆಶೇತೇ, ಇತ್ಯಾಶಯಃ** ಆಶ್ರಯಿಸಿಕೊಂಡು ಇರುತ್ತದಾದ್ದರಿಂದ ಆಶಯ (ಆಧಾರ) ವೆಂದು ಹೇಳುತ್ತಾರೆ. ಇಲ್ಲಿ "**ನಾಶೇತೇ**" ಎಂದು ಹೇಳಿರುವದರಿಂದ ಆಶಯ ವಲ್ಲೆಂದು ತಿಳಿಯಬೇಕು.

ಪುಂಡರೀಕೇಣಸದೃಶಂ ಹೃದಯಂಸ್ಯಾದಧೋಮುಖಂ ॥
ಜಾಗ್ರತಸ್ತದ್ವಿಕಸತಿ ಸ್ವಪತಶ್ಚನಿಮೀಲತಿ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೩೨)

"**ಹೃದಯವು**" ಕಮಲದಂತೆ ಇರುತ್ತದೆ. ಅದು ಕೆಳಗಡೆ ಮುಖ ವುಳ್ಳದ್ದಾಗಿಯೂ ಎಚ್ಚರಿರುವಾಗ ಅರಳುವಂಥದೂ, ನಿದ್ರೆಯಲ್ಲಿರುವಾಗ ಮುಚ್ಚಿಕೊಳ್ಳುವದಾಗಿಯೂ, ಇರುತ್ತದೆ.

ಅರ್ಥೇದಶಮೂಲಾಃ ಸವಾಸಕ್ತಾ ಮಹಾಫಲಾಃ ॥
ಮಹಚ್ಚಾರ್ಥಶ್ಚ ಹೃದಯಂ ಪರ್ಯಾಯೈರುಚ್ಯತೇಬುಧೈಃ॥

(ಚರಕ॥ ಸೂ. ಸ್ಥಾ. ಅ. ೩೦ ಶ್ಲೋ. ೩)

ಹೃದಯದಲ್ಲಿ ಮಹಾಮೂಲವಾದ ಹತ್ತು ಧಮನಿಗಳು, ಅತ್ಯಂತವಾಗಿ ಜೀವನಕ್ಕೆ ಪ್ರಾಮುಖ್ಯವಾದವುಗಳು, ಇರುತ್ತವೆ. ಆದ್ದರಿಂದಲೇ "**ಮಹಾ ಫಲಾಃ**" ಮಹತ್ವವುಳ್ಳದ್ದು, ಅಥವಾ ಮಹತ್ ಅಂದರೇ ಹೃದಯವು, ಅದೇ ಧಮನಿಗಳ ಕಾರ್ಯವಿಷಯದಲ್ಲಿ ಮುಖ್ಯವಾದ್ದರಿಂದ; ಮಹಾ (ಹೃದ ಯವೇ) ಫಲದಾಯಕ ಧಮನಿಗಳಿಗೆ ಆಶ್ರಯವಾಗಿರುತ್ತದೆ. ಆ ಹೃದಯವೇ ಮೂಲ ಆಶ್ರಯಸ್ಥಾನವಾಗಿರುವದರಿಂದ ಧಮನಿಗಳಿಗೆ "**ಮಹಾಮೂಲ**" ವೆಂದು ಹೇಳುತ್ತಾರೆ. ಪಂಡಿತರು ಹೃದಯವು ಮಹತ್ವವುಳ್ಳದ್ದಿದ್ದು, ಅತ್ಯಂತ ಪ್ರಾಮುಖ್ಯವಾದ್ದರಿಂದ "**ಮಹತ್**" ಎಂದು ಅನ್ನುತ್ತಾರೆ. ಮುಖ್ಯವಾಗಿ ಆತ್ಮಾದಿ ಚೇತನೆಗಳಿಗೆ ಆಶ್ರಯವಾದ್ದರಿಂದಲೂ ಬದುಕುವಿಕೆ ದೃಷ್ಟಿಯಿಂದ ಹೃದಯವು ಅಭಿಪ್ರೇತವಾಗಿ ಅರ್ಥಿಸಲ್ಪಡುವದರಿಂದ "**ಅರ್ಥಃ**" ಎಂದು

ಪರ್ಯಾಯ ಪದದಿಂದ ಹೇಳುತ್ತಾರೆ. ಹೃದಯವಾಚಕಶಬ್ದಗಳು :— ಮನಸ್, ಅರ್ಥಃ, ಹೃದಯಂ, ಎಂದು ಇರುತ್ತವೆ.

ಷಡಂಗಮಂಗಂವಿಜ್ಞಾನಮಿಂದ್ರಿಯಾಣ್ಯರ್ಥಪಂಚಕಂ ॥
ಆತ್ಮಾಚಸಗುಣಶ್ಚೇತಶ್ಚಿಂತ್ಯಂಚಹೃದಿಸಂಶ್ರಿತಂ ॥
(ಚ॥ ಸೂ. ಸ್ಥಾ. ಅ. ೩೦ ಶ್ಲೋ. ೪)

ಆರೂ ಅಂಗಗಳಲ್ಲಿ ಪ್ರಾಧಾನ್ಯವಾಗಿರುವದರಿಂದ ಹೃದಯವು ಮುಖ್ಯವಾದ ಅಂಗವು. ಅರ್ಥಾತ್ ಆಶ್ರಯಸ್ಥಾನಭೂತಮುಖ್ಯಾಂಗವೆಂದರ್ಥವು. ವಿಜ್ಞಾನ(ಶಾಸ್ತ್ರಾದಿಜ್ಞಾನ)ಬುದ್ಧ್ಯಾದಿ ಇಂದ್ರಿಯಗಳು, ವಿಷಯಗ್ರಹಣತ್ವವು, ಅಥವಾ ಯಾವದರಿಂದ ವಿಷಯಿಗಳು ಬೋಧವಾಗಿ ವಿಷಯಗಳೆಂದು ಅನ್ವರ್ಥಕವಾಗುತ್ತವೆಯೋ, ಅಂಥ ಇಂದ್ರಿಯ ಮೊದಲಾದವುಗಳಿಗೆ ಸ್ಥಾನವು. ಸುಖದುಃಖಗಳನ್ನು ಭೋಗಿಸುವ ಜೀವನಿಗೆ ಆಶ್ರಯವು. "ಮನಸ್ಸು" ಇಂದ್ರಿಯ ವಿಷಯ ಸನ್ನಿಕರ್ಷಗಳಿಂದ, ಜ್ಞಾನ ಮತ್ತು ಸ್ವೀಕಾರ ಮಾಡಿಸುವದರಿಂದ ಹೃದಯದಲ್ಲಿ ಇವೆಲ್ಲ ಇರುತ್ತವೆಂದು ಸ್ಪಷ್ಟವಾಗುತ್ತದೆ. ಇಲ್ಲವೇ ಸಂಕಲ್ಪವಿಕಲ್ಪಾತ್ಮಕವಾದ್ದರಿಂದ "ಚಿಂತ್ಯ" ವಿಚಾರಿಸತಕ್ಕ ಗುಣದಿಂದ, ತಿಳಿಯಲ್ಪಡತಕ್ಕ ಮನಸ್ಸು ಹೃದಯದಲ್ಲಿರುತ್ತದೆಂದು ಧ್ವನಿತವಾಗುತ್ತದೆ ಅಥವಾ ಮನಸ್ಸಿನಿಂದ ಚಿಂತ್ಯವಾದದ್ದು, ಹೃದಯಾಶ್ರಯವೆಂದು ಲಕ್ಷಣ ಮಾಡಿ ಹೇಳಿದ್ದಾರೆ. ಇವೆಲ್ಲವುಗಳ ಸಮುದಾಯಾಶ್ರಯ ಭೂತವಾದದ್ದು ಹೃದಯವಾದ್ದರಿಂದ ಮುಖ್ಯವೆಂದು ನಿರ್ದೇಶಿಸಿದ್ದು ಆಶ್ಚರ್ಯವೇನಿಲ್ಲ.

ಪ್ರತಿಷ್ಠಾರ್ಥಂಹಿಭಾವಾನಾಂ ವಿಷಾಂ ಹೃದಯಮಿಷ್ಯತೆ॥
ಗೋಪಾನಸೀನಾವಾಗಾವಾಗಾರಕರ್ಣಿಕೇವಾರ್ಥಚಿಂತಕೈಃ॥
ತಸ್ಯೋಪಘಾತಾನ್ಮೂರ್ಛಾಯಂ ಭೇದಾನ್ಮರಣಮೃಚ್ಛತಿ॥
(ಚರಕ॥ ಸೂ. ಸ್ಥಾ. ಅ ೩೦ ಶ್ಲೋ ೫)

ಷಡಂಗಾದಿಗಳು ಮತ್ತು ಹಿಂದೆ ಹೇಳಿದ ಭಾವಗಳಿಗೆ ಹೃದಯವು ಮುಖ್ಯವಾಗಿರುವದರಿಂದ, ಹೃದಯವು ಆಶ್ರಯವೆಂದು ಹೇಳಿದ್ದಾರೆ. ಮೇಲ್ಕ

ನೆಯ ಹೊದಿಕೆಗೆ ಸಾಧನಾಶ್ರಯವಾದ, ಆಗಾರಕರ್ಣಿ (ಮನೆಯ ಆಚ್ಛಾದನ
ಗಳಿಗೆ ಮಧ್ಯದಲ್ಲಿ ಕೂಡಿಸುವ ಬಂಧನವಾದ ಮರದ ತೊಲೆ) ಯಂತೆ, ಹೃದ
ಯವು ದೇಹದಲ್ಲಿ ಮಹತ್ವವಾದ ಆಧಾರವೆಂದುಹೇಳುತ್ತಾರೆ ಹೀಗೆ ಹೇಳುವದ
ರಿಂದ ಎರಡಂಗುಲ ಪ್ರಮಾಣದಷ್ಟಿರುವ ಹೃದಯವು, ಎಲ್ಲ ಅಂಗಾದಿಗಳಿ
ಹೇಗೆ ಆಶ್ರಯವಾಗುತ್ತದೆಂದು ಆಶ್ಚರ್ಯವಾಗುತ್ತದೆ ಹೃದಯವು ಸಾಮ್ಯ
ಸ್ಥಿತಿಯಲ್ಲಿದ್ದರೆ, ಎಲ್ಲ ದೇಹಾವಯವಗಳೂ, ಮನಸ್ಸು, ಆತ್ಮಾ
ಸಕಲದೇಹ ಸ್ಥಿತಿ, ಕ್ರಿಯಾದಿಗಳು ಯೋಗ್ಯ ನಡೆಯುತ್ತವೆ. ಇಲ್ಲವಾದರೆ
ಯೋಗ್ಯವಿರುವದಿಲ್ಲ ಹೀಗಿರುವದರಿಂದ ಎಲ್ಲವುಗಳ ಸ್ಥಿತಿಗೆ ಹೃದಯವು
ಮುಖ್ಯವಾಗಿರುತ್ತದೆ ಈ ಸ್ಥಿತಿ ದೃಷ್ಟಿಯಿಂದಲೇ ಹೃದಯವು ಆಶ್ರಯಸ್ಥಾನ
ವೆಂದು ಪ್ರತಿಪಾದಿಸಿದ್ದಾರೆ ಹೀಗೆ ಮುಖ್ಯ ಪ್ರಯೋಜನವನ್ನು ಅವಲೋಕಿ
ಸುವದರಿಂದ, ಹೃದಯವು ಮಹತ್ವ ಸ್ಥಾನವೆಂದು ಹೇಳಲ್ಪಟ್ಟಿರುತ್ತದೆ ಹೃದ
ಯಾಪಘಾತಾದಿಗಳಿಂದ ಮೂರ್ಛೆಯೂ, ಭೇದನದಿಂದ ಮರಣವೂವುಂಟಾಗು
ತ್ತದೆ. ಹೀಗಿರುವದರಿಂದ ಹೃದಯದಲ್ಲಿಯೇ ಜೀವಾಶ್ರಯವೆಂದು ಸ್ಪಷ್ಟ
ವಾಗುತ್ತದೆ.

ಯದ್ಧಿತತ್ ಸ್ಪರ್ಶವಿಜ್ಞಾನಂ ಧಾರಿತತ್ತತ್ರ ಸಂಶ್ರಿತಂ ॥
ತತ್ ಪರಸ್ಯೌಜಸಃ ಸ್ಥಾನಂ ತತ್ರಚೈತನ್ಯ ಸಂಗ್ರಹಃ ॥
ಹೃದಯಂ ಮಹದರ್ಥಶ್ಚ ತಸ್ಮಾದುಕ್ತಂಚಿಕಿತ್ಸಕೈಃ ॥

(ಚರಕ ॥ ಸೂ. ಸಾ ಅ ೩೦ ಶ್ಲೋ ೭)

ಯಾವದುಸ್ಪರ್ಶ ಮೊದಲಾದವುಗಳನ್ನು ತಿಳಿಯುತ್ತದೆಯೋ, ಶರೀರ, ಇಂದ್ರಿಯ, ಚೇತನಾ, ಆತ್ಮ, ಸಂಯೋಗವನ್ನು ಧಾರಣ ಮಾಡುವದೋ ಅದೇ ಹೃದಯವು, ಇವೆಲ್ಲವುಗಳಿಗೆ ಆಧಾರವಾಗಿರುತ್ತದೆ. ಅತ್ಯಂತ ಜೀವ ನಕ್ಕೆ ಅವಶ್ಯವಾದ ಓಜಸ್ಸಿನ ಸ್ಥಾನ, ಮನಸ್ಸು ಚೈತನ್ಯಾದಿಗಳ ಸಂಗ್ರಹ ಸ್ಥಿತಿಯೂ, ಇಲ್ಲಿರುತ್ತವೆ. ಆದ್ದರಿಂದ ಚಿಕಿತ್ಸೆಯಲ್ಲಿಯ ಪ್ರಾಧಾನ್ಯವನ್ನರಿತ ಚಿಕಿತ್ಸಕರಿಂದ "ಹೃದಯಂ" "ಮಹದರ್ಥಃ" ಎಲ್ಲಕ್ಕೂ ಮುಖ್ಯವಾದದ್ದು, ಮಹತ್ವವಾದ ಪ್ರಯೋಜನವುಳ್ಳದ್ದೆಂದು ಹೇಳಲ್ಪಟ್ಟಿರುತ್ತದೆ.

ವಿಶೇಷಾರ್ಥ:— ಯಾವದು ಸ್ಪರ್ಶನಿಂದ (ಸ್ಪಂದನದಿಂದ) ದೇಹ ತತ್ವಗಳಿಲ್ಲದರ ಸಮುದಾಯವನ್ನು ಧರಿಸುವ ಜೀವದ ಜ್ಞಾನ ಮಾಡಿಕೊಡುತ್ತದೆಯೋ, ಅದೇ ಹೃದಯವು. ಹೀಗೆ ಅರ್ಥ ಮಾಡುವದರಿಂದ "**ಹೃದಯ ವೀಕ್ಷಣ ಕ್ರಮವು**" ಆಯುರ್ವೇದದಿಂದಲೇ ಪ್ರತಿಪಾದಿತವಾಗಿದೆಯೆಂದು ನಿಸ್ಸಂಶಯವಾಗಿ ಹೇಳಬಹುದು. ದೇಹಧಾರಣೆಗೆ ಅವಶ್ಯವಾಗಿರುವ ತತ್ವಗಳು ಹೃದಯವನ್ನೇ ಆಶ್ರಯಿಸುತ್ತವೆಂತಲೂ, ಹೃದಯಕ್ಕೆ ಆಘಾತವಾದರೆ ಬಹಳೇ ದುಃಖವಾಗುವದೆಂದೂ, ಅದರ ವಿಭಾಗವಾದರೆ ದೇಹ ನಾಶವೆಂದೂ ವ್ಯಾಮ ಖ್ಯವಾಗಿ ಬೋಧಿಸಿರುವರು ಅವರು ಜೀವನ ಸ್ಥಿತಿ ನಿರೀಕ್ಷಣೆಯಲ್ಲಿ "**ಹೃದಯ ಪರೀಕ್ಷೆಯನ್ನು**" ಅನುಸರಿಸಿದ್ದಾರೆನ್ನುವದು ಮಹರ್ಷಿಗಳ ಅಲೌಕಿಕ ವಿಜ್ಞಾನ ದೃಷ್ಟಿಯಿಂದ ಇಂಥಾದ್ದು ಸಾಮಾನ್ಯ ಸಂಗತಿಯೆಂದರೆ ಇದರಲ್ಲಿ ಅತಿಶಯವೇನೂ ಇಲ್ಲ. ಆಮೂಲಾಗ್ರವಾಗಿ ಇದಕ್ಕೂ ಹೆಚ್ಚು ಹೃದಯ ಮಹತ್ವವನ್ನು ನಿರ್ವಚನ ಮಾಡುತ್ತಾರೆ.

ತೇನ ಮೂಲೇನ ಮಹತಾ ಮಹಾನ್ಮೂಲಾ ಮತಾದಶ ॥
ಓಜೋವಹಾಃ ಶರೀರೇಽಸ್ಮಿನ್ವಿಧಮ್ಯಂತೇ ಸಮಂತತಃ ॥

(ಚರಕ॥ ಸೂ ಸ್ಥಾ. ಅ ೩೦ ಶ್ಲೋ. ೮)

ಹೃದಯ ಯುಕ್ತವಾದ ಅಥವಾ ಹೃದಯದಲ್ಲಿಯೇ ಆಶ್ರಯಸ್ಥಾನವುಳ್ಳದ್ದಾಗಿ, ಮುಂದೆ ಹೊರಟ ಧಮನಿಗಳಿಗೆ ಹೃದಯವೇ ಮೂಲವು. ಆದ್ದರಿಂದ ಮಹಾಮೂಲವೆಂದು ಹೇಳುತ್ತಾರೆ. ಓಜೋ ವಹನ ಮಾಡತಕ್ಕ ಹತ್ತು ಧಮನಿಗಳು ದೇಹದಲ್ಲಿ ಎಲ್ಲ ಕಡೆಯಲ್ಲಿಯೂ ಪಸರಿಸಿರುತ್ತವೆ. ಈ ಧಮನಿಗಳು ಬಾಹ್ಯವಾದ ಧಾತುಗಳಿಂದ ತುಂಬಲ್ಪಡುತ್ತವೆ. ಯಾಕಂದರೆ ಓಜಸ್ಸು ಅತಿಸೂಕ್ಷ್ಮಪ್ರಮಾಣದಲ್ಲಿರುವದರಿಂದ, ಅನ್ಯಧಾತುಗಳನ್ನಾಕರ್ಷಿಸಿ ತುಂಬಿಕೊಳ್ಳುತ್ತದೆನ್ನುವದು ಯೋಗ್ಯವಿರುತ್ತದೆ.

ಯೇನೌಜಸಾವರ್ತಯಂತಿ ಪ್ರೀಣಿತಾಃ ಸರ್ವದೇಹಿನಃ ॥
ಯದೃತೆ ಸರ್ವ ಭೂತಾನಾಂ ಜೀವಿತಂ ನಾವತಿಷ್ಠತೆ ॥೯॥

ಯತ್ ಸಾರಮೂದೌಗರ್ಭಸ್ಯ ಯತ್ತದ್ಗರ್ಭರಸಾದ್ರಸಃ ॥
ಸಂವರ್ತಮಾನಂ ಹೃದಯಂ ಸಮೂಪಿಶತಿಯತ್ಪುರಾ ॥

(ಚರಕ ॥ ಸೂ. ಸ್ಥಾ ಅ ೩೦ ಶ್ಲೋ ೧೦)

ಓಜಸ್ಸಿನಿಂದ ಯುಕ್ತವಾಗಿ ಸರ್ವ ದೇಹಿಗಳು ತೃಪ್ತಿಹೊಂದಿ, ಶರೀರ ಧಾರಣೆಯನ್ನು ಮಾಡಿಕೊಂಡಿರುತ್ತವೆ. ಅರ್ಥಾತ್ ಓಜಸ್ಸಿನಿಂದ ಎಲ್ಲ ದೇಹ ಕ್ರಿಯೆಗಳು ನಡಿಸಲ್ಪಡುತ್ತವೆ. ಪರಮ ಸೂಕ್ಷ್ಮವಾದ ಎಂಟು ಬಿಂದು ಓಜ ಸ್ಸೆಂದೂ ಹಿಂದೆ ಹೇಳಿರುತ್ತದೆ. ಅದು ಹೃದಯದಲ್ಲಿರುತ್ತಿನ್ದು ಸರ್ವ ದೇಹ ಧಾರಣೆಗೆ ಪ್ರೇರಕವಾಗಿರುತ್ತದೆ ಸ್ಥೂಲಭೂತವಾದ ಓಜಸ್ಸು ಧಮನಿಗಳಲ್ಲಿ ಸಂಚರಿಸುತ್ತದೆಂದು ತಿಳಿಯಬೇಕು. ಇದರ ಹೊರತಾಗಿ ಸರ್ವ ಪ್ರಾಣಿಗಳ ಜೀವಿತವು ನಡೆಯಲಾರದು. ಇದಿಲ್ಲದಿರುವಾಗ ಪ್ರಾಣಿಗಳು ನಾಶಹೊಂದುತ್ತವೆ. ಯಾವ ಸಾರವು ಗರ್ಭಕ್ಕೆ ಕಾರಣವಾಗಿರುತ್ತದೆಯೋ ಮತ್ತು ಗರ್ಭಕ್ಕೆ ಮೂಲವಾದ ರಸದ (ಶುಕ್ರದ)ಸಾರರೂಪವಾದ ಸತ್ವವೋ, ಅದು ಹೃದಯವನ್ನುತ್ಪನ್ನಮಾಡತಕ್ಕದ್ದಾಗಿರುವದು ಹೃದಯೋತ್ಪತ್ತಿಯಾದ ಮೇಲೆ ಓಜೋ ರೂಪದಿಂದ ಹೃದಯದಲ್ಲೆರುತ್ತದೆ ಅರ್ಥಾತ್ ಶುಕ್ರ ರೂಪ ಸಾರವಾದ ಓಜಸ್ಸು, ಗರ್ಭಾರಂಭವಲ್ಲಿ ಶುಕ್ರ ಶೋಣಿತಗಳ ಸಾರರೂಪವಾಗಿರುತ್ತದೆ. ಕಲಲಾವಸ್ಥೆಯಲ್ಲಿ ರಸ ಸಾರರೂಪದಿಂದಿರುತ್ತದೆ. ಅವಯವ ಮತ್ತು ಹೃದಯೋತ್ಪನ್ನವಾದಮೇಲೆ ಓಜೋರೂಪದಿಂದಿರುತ್ತದೆ. ಹೀಗೆ ದೇಹದ ಆರಂಭದಿಂದಲೂ ಸರ್ವಾವಸ್ಥೆಗಳಲ್ಲಿಯೂ ಇರುವದರಿಂದ ವ್ಯಾಪಕತ್ವದಿಂದ ಓಜಸ್ಸಿನ ಮಹತ್ವ ವೆಷ್ಟೆಂಬುವದು ಸ್ಪಷ್ಟವಾಗುವದು.

ಯಸ್ಯನಾಶಾತ್ತುನಾಶೋಽಸ್ತಿಧಾರಿಯದ್ಧೃದಯಾಶ್ರಿತಂ ॥
ಯಚ್ಛರೀರ ರಸಸ್ನೇಹಃ ಪ್ರಾಣಾಯತ್ರ ಪ್ರತಿಷ್ಠಿತಾಃ ॥೧೧॥
ತತ್ಫಲಾ ಬಹುಧಾವಾತಾಃ ಫಲಂತೀತಿ ಮಹಾಫಲಾಃ ॥
ಧ್ಮಾನಾದ್ಧಮನ್ಯಃ ಸ್ರವಣಾತ್ಸ್ರೋತಾಂಸಿ ಸರಣಾತ್ ಸಿರಾಃ॥

(ಚರಕ॥ ಸೂ ಸ್ಥಾ ಅ. ೩೦ ಶ್ಲೋ ೧೨)

ಶರೀರ, ಇಂದ್ರಿಯ, ಸತ್ವ, ಆತ್ಮಸಂಯೋಗವನ್ನು, ಧಾರಣೇ ಮಾಡುವದರಿಂದ "ಧಾರಿ" ಎಂದು "ಓಜಸ್ಸಿನ"ಹೆಸರು ಅನ್ವರ್ಥಕವಾದದ್ದಿರುತ್ತದೆ. ಹೃದಯಾಶ್ರಿತವಾದ "ಧಾರಿ" ಓಜಸ್ಸಿನ ನಾಶದಿಂದ ಮರಣವಾಗುತ್ತದೆ. ರಸಾದಿ ಧಾತುಗಳು ಇರುತ್ತಿದ್ದರೂ ಓಜಸ್ಸಿನಲ್ಲಿ ಆಘಾತ ವಿಭಾಗಗಳುಂಟಾದರೆ, ನಾಶ ಸಂಭವಿಸುವದರಿಂದ ಓಜಸ್ಸೇ ಮುಖ್ಯವೆಂದೂ ಅದೇ ದೇಹ ಧಾರಣೇಮಾಡುತ್ತದೆಂದು ನಿಶ್ಚಿತಸಿದ್ಧಾಂತವಾಗಿರುತ್ತದೆ. ಶರೀರದಲ್ಲಿ ಉತ್ಪನ್ನವಾಗುವ ರಸಾದಿಗಳು ಶರೀರ ಪೋಷಕವಾಗಿದ್ದರಿಂದ, ಶರೀರ ಸಾರವಾಗಿರುತ್ತವೆ. ಶರೀರ ಸಾರವೆಂದರೆ ರಸಾದಿ ಧಾತುಗಳು ಅಂಥ ಶರೀರಧಾರಕ ರಸಾದಿಗಳ ಸಾರವೇ "ಓಜಸ್ಸು" ಎಂದು ಹೇಳುತ್ತಾರೆ. ಹೀಗೆ "ಶರೀರರಸ ಸ್ನೇಹಃ" "ಶರೀರ ಸಾರ ಸಾರಂ" "ಧಾತುಸಾರ" ಶಬ್ದಗಳಿಂದ ದೇಹ ಧಾರಣೆಯು ವಿಷಯದಲ್ಲಿ ಪ್ರಾಮುಖ್ಯತೆ ಇರುವದನ್ನು ಸ್ಪಷ್ಟಪಡಿಸಿರುತ್ತಾರೆ. ಎಲ್ಲಿ ಪ್ರಾಣಗಳೂ, ಓಜಸ್ಸೂ ಯಾವದನ್ನುಆಶ್ರಯಿಸಿ ಜೀವಧಾರಕವಾಗಿರುತ್ತನೆಯೋ, ಅದು,ಹೃದಯವು. ಹೃದಯದಿಂದಲೇಓಜಸ್ಸು,ಪ್ರಾಣಗಳು,ಸಂಚರಿಸುವ ಧಮನಿಗಳು ಹೊರಟಿರುತ್ತವೆ. ಅವು ಸಮಗ್ರದೇಹವನ್ನುವ್ಯಾಪಿಸಿ ಸಂಚರಿಸುವ ಪ್ರಾಣಾದಿಗಳಿಗೆ ಮಾರ್ಗವಾಗಿರುತ್ತವೆ. ಜೀವಧಾರಣೆಯ ಕಾರ್ಯವು ಇವುಗಳಿಂದ ಫಲಿಸುವದರಿಂದ "ಮಹಾಫಲ"ವುಳ್ಳವುಗಳೆಂದು ಅನ್ನುತ್ತಾರೆ. ಅಥವಾ "ಮಹತ್" ಅಂದರೆ ಹೃದಯವು ಅದರಿಂದ ಹೊರಟಿರುವದರಿಂದ ಅದನ್ನೇಆಶ್ರಯಿಸಿದ್ದರಿಂದಮಹಾಫಲವೆಂದೂಅನ್ನಬಹುದು. ಹೀಗೆ ಏಕಸಮುಯಾವಚ್ಛೇದೇನ ಉಭಯಾರ್ಥಗಳನ್ನೂಸಮನ್ವಯಮಾಡಬಹುದು. ಮುಖ್ಯ ಪ್ರಯೋಜನಕಾರಿ (ಮಹಾಫಲಾಃ) ಯಾಗಿರುವ, ಧಮನೀ ಪ್ರಭೇದಗಳು ಅಸಂಖ್ಯವಾಗಿ(ಬಹುಧಾ) ದೇಹವನ್ನುವ್ಯಾಪಿಸಿರುತ್ತವೆ ರಸಾದಿಗಳನ್ನುಶರೀರದಲ್ಲಿ ತುಂಬಿಸುವದರಿಂದ"ಧಮನಿ"ಗಳೆಂದು ಹೆಸರು. "ಧ್ಮಾನಾದ್ಧಮನ್ಯಃ" ಎಂದು ಹೇಳಿದ್ದಾರೆ. ಪೋಷಕವಾದ ರಸಾದಿಗಳನ್ನು ಶರೀರದ ಅವಾವ ಸ್ಥಾನಗಳಲ್ಲಿ ಉಪಯೋಗಾನುಸಾರವಾಗಿ ಸ್ರವಿಸುವದರಿಂದ "ಸ್ರೋತಸ್ಸಿಂದು" ಅನ್ನುತ್ತಾರೆ. "ಸ್ರವಣಾತ್ ಸ್ರೋತಾಂಸಿ" ಹೀಗೆಂದು ನಿರೂಪಿಸಿದ್ದಾರೆ. ಸೂಕ್ಷ್ಮವಾಗಿ ಎಲ್ಲ ಪ್ರದೇಶಗಳಿಗೂ ರಸಾದಿಗಳನ್ನು ಒಯ್ದು ಸುಟ್ಟಿಸುವದರಿಂದ "ಸಿರಾ" ಎಂದು ಹೇಳುತ್ತಾರೆ. "ಸರಣಾತ್ ಸಿರಾಃ" ಈ

ರೀತಿಯಿಂದ ಕ್ರಿಯಾ ವೈಶಿಷ್ಟ್ಯಗಳಿಂದಲೂ ಸ್ಥೂಲ, ಸೂಕ್ಷ್ಮ, ಶ್ರವಣ ಯೋಗ್ಯ ಆಕೃತಿ, ಮೊದಲಾದವುಗಳ ಭಿನ್ನತೆಯಿಂದ, ಧಮನೀ ಮುಂತಾದ ಅನ್ವರ್ಥಕ ಹೆಸರುಗಳಾಗಿರುತ್ತವೆ.

ತನ್ಮಹತ್ತಾ ಮಹಾಮೂಲಾಃ ತಚ್ಚೌಜಃ ಪರಿರಕ್ಷಣಾ ॥
ಪರಿಹಾರ್ಯಾ ವಿಶೇಷೇಣ ಮನಸೋ ದುಃಖಹೇತವಃ ॥೧೩॥

ಹೃದ್ಯಂಯತ್ ಸ್ಯಾದ್ಯದೌಜಸ್ಯಂ ಸ್ರೋತಸಾಂಯತ್ಪ್ರಸಾದನಂ॥
ತತ್ತತ್ ಸೇವ್ಯಂ ಪ್ರಯತ್ನೇನ ಪ್ರಶಮೋ ಜ್ಞಾನಮೇವ ಚ ॥

(ಚ॥ ಸೂ ಸ್ಥಾ. ಅ. ೩೦ ಶ್ಲೋ. ೧೪)

ಹೃದಯವನ್ನೂ, ಹೃದಯವೇ ಮೂಲವಾದ ಧಮನಿಯನ್ನೂ, ಓಜಸ್ಸನ್ನೂ ರಕ್ಷಿಸಬೇಕೆನ್ನುವವನು ಮನಸ್ಸಿಗೆ ದುಃಖಕಾರಕವಾದವುಗಳಿಲ್ಲವನ್ನೂ ಬಡಬೇಕು. ಮನಸ್ಸು ಹೃದಯದಲ್ಲಿರುವದರಿಂದ ಮನೋ ದುಃಖದಿಂದ ತೇಜೋವಹ ಧಮನಿಗಳಿಗೆ ಆಘಾತವಾಗುತ್ತದೆ ಇದರಿಂದ ಹೃದಯಭೇದವಾಗಲೂಬಹುದು. ಮನೋದುಃಖ ಆಘಾತಾದಿಗಳಿಂದ ಮರಣಹೊಂದಿದ ಉದಾಹರಣೆಗಳಲ್ಲಿ ಮನೋವ್ಯಗ್ರತೆಯಿಂದ, ಹೃದಯಭೇದವಾದದ್ದು ಕಂಡು ಬಂದಿರುತ್ತದೆ ಆದ್ದರಿಂದ ಮಹತ್ವವಾದ ಜೀವ ರಕ್ಷಣೆಯಲ್ಲಿ ದೈಹಿಕವಾದ ಹೃದಯದಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಮನಸ್ಸಿನ ಪ್ರಾಧಾನ್ಯತೆ ಇರುತ್ತದೆ. ಮನಸ್ಸಿನ ಚಿಂತೆ ಮೊದಲಾದವುಗಳಿಂದುತ್ಪನ್ನವಾದ ರೋಗಗಳು ದೇಹವನ್ನು ನಾಶಪಡಿಸುವವೂ, ದೇಹದಲ್ಲಿಯ ದೀರ್ಘರೋಗಾದಿಗಳನ್ನುಂಟು ಮಾಡುವದೂ, ಮನಸ್ಸಿಗೆ ತೀವ್ರದುಃಖಕಾರಕವಾಗಿರುವ ಉದಾಹರಣೆಯೂ, ಅನುಭವ ವಿಷಯವೇ ಆಗಿರುತ್ತದೆ ಹೀಗಿರುವದರಿಂದ ಮನಸ್ಸೂ, ದೇಹವೂ ವಿಭಾಗಿಸಲು ಬಾರದ ಪರಸ್ಪರ ತಾದಾತ್ಮ್ಯವುಳ್ಳದ್ದಿರುತ್ತವೆ ಹೃದಯ ಜೀವನವೇ ಆದ ದೇಹವನ್ನು ರಕ್ಷಿಸಬೇಕಾದರೆ ಮನಸ್ಸಿಗೆ ವಿಘಾತವನ್ನುಂಟು ಮಾಡತಕ್ಕವುಗಳನ್ನು ತ್ಯಜಿಸಬೇಕೆಂದಭಿಪ್ರಾಯವು ಯಾವದು ಮನಸ್ಸಿಗೆ ಆಹ್ಲಾದದಾಯಕವೋ ಮತ್ತು ಹೃದಯಕ್ಕೆ ಹಿತ (ಹೃದ್ಯಂ) ವಾಗಿರುವದೋ ಅಂಥಾದ್ದನ್ನೇ ಸೇವಿಸಬೇಕು. ಓಜಸ್ಕರ, ಸ್ರೋತಸ್ಸಿಗೆ ಪ್ರಸನ್ನತೆಯು

ನ್ನುಂಟು ಮಾಡುವ ಆಹಾರಾದಿಗಳನ್ನೂ, ಮನಸ್ಸಿಗೆ ಹಿತವಾಗುವ ಶಾಂತಿ, ತತ್ವಜ್ಞಾನ ಮೊದಲಾದವುಗಳನ್ನೂ, ಪ್ರಯತ್ನಪೂರ್ವಕವಾಗಿ ಹಿತದೃಷ್ಟಿಯುಳ್ಳವನು ಅನುಸರಿಸಬೇಕು.

ಜೀವಧಾರಣ, ಓಜಸ್ಸು, ಮನೋಹೃದಯಗಳ ಮಹತ್ವವು

"ಧಾರಿ" ಜೀವನಿಗೆ ಸುಖ ದುಃಖಗಳನ್ನು ಪಡೆಯುವ, ಪಂಚಭೂತ, ವಿಕಾರಾತ್ಮಕವಾದ ಆಶ್ರಯ ಸ್ಥಿತಿ ಸಾಧನವು ದೇಹವಾಗಿರುವದು **ಚಕ್ಷು** (ಕಣ್ಣು) ಮೊದಲಾದ ಇಂದ್ರಿಯಗಳು, ಇವೆಲ್ಲ ಇಂದ್ರಿಯಗಳಲ್ಲಿಯೂ ಸಂಚರಿಸುವ ಪ್ರಧಾನವಾಗಿರುವದು ಮನಸ್ಸು, ಇದಕ್ಕೆ "ಸತ್ವ" ವೆಂದು ಹೇಳುತ್ತಾರೆ "ಆತ್ಮ" ವೆಂದರೆ ಇವೆಲ್ಲಕ್ಕೂ (ದೇಹಕ್ಕೆ) ಚೈತನ್ಯ ಕೊಡುವವನೂ ಜ್ಞಾನವನ್ನುಂಟು ಮಾಡುವವನೂ ಆಗಿರುವನು ಇವುಗಳ ಸಂಯೋಗದಿಂದ ಚೈತನ್ಯವು ಸ್ಫುಟವಾಗುತ್ತದೆ. ಇಷ್ಟೇಅಲ್ಲ ಜೀವವು ಜಡವಾದದೇಹ ಅವಯವಾದಿಗಳನ್ನು ವ್ಯಾಪಿಸಿ, ಚೈತನ್ಯಉಳ್ಳವುಗಳನ್ನಾಗಿಮಾಡುತ್ತದೆ. ಇದರಿಂದ ದೇಹವೇಚೈತನ್ಯವೆನ್ನುವ ಭ್ರಾಂತಿಬರುವಷ್ಟು ತಾದಾತ್ಮ್ಯವುಳ್ಳದ್ದಾಗುತ್ತದೆ ಈ ಸಮುದಾಯಗಳ ಸಂಯೋಗ ಸ್ಥಾನವೆಂದರೆ ಹೃದಯವು ಹೃದಯದಲ್ಲಿಯೇ ಇವುಗಳ ವಾಸವಿರುವದರಿಂದ "ಹೃದಯವೇ" ಇವೆಲ್ಲವುಗಳಿಗೂ ಆಶ್ರಯವೆಂದು ಹೇಳುತ್ತಾರೆ. ಇದರಿಂದ"ಧಾರಿ"ಯೆಂದರೆಜೀವಧಾರಣೆ, ಬದುಕುವಿಕೆಯೆನ್ನುವದು ನಿಶ್ಚಿತವಾದಂತಾಯಿತು.

"ಧಾರೀತಿಜೀವಾಧಿಷ್ಠಿತಂ ಲಿಂಗಶರೀರಂ" ತದೇವ ಶರೀರಧಾರಕತ್ವಾತ್ಧಾರಿಶಬ್ದೇನೋಚ್ಯತೇ; ಕಂವಾ, ಜೀವಿತಧಾರಕತ್ವಾದೋಜವಿವಧಾರೀತ್ಯುಚ್ಯತೆ, ಅಥವಾ ಮನೋಜೀವಿತಾಶ್ರಯತ್ವೇನಹೃದಯಮೇವಧಾರೀತ್ಯುಕ್ತಂ; ನಿಖಿಲಪದಾರ್ಥಜ್ಞಾನ ಹೇತುಭೂತಂಮನೋಹೃದಿಸಂಶ್ರಿತಂತಿಷ್ಠತಿ, ತಸ್ಮಿನ್ನುಪಘಾತಭೇದಾಭ್ಯಾಂ ಮನೋಜೀವಿತಯೋರಪಿಉಪಘಾತಭೇದಸಂಭವಾತ್ಮೂರ್ಛಾಮರಣಂ ಚೋಪಪನ್ನಂ ಅತೋಧ್ವನ್ಯತೇ ಮನೋಪಿಧಾರೀತಿ"

ಜೀವಕ್ಕೆ ದೇಹವನ್ನು ಪಡೆಯಲು ಕಾರಣವಾದ ಆವರಣವು "**ಲಿಂಗ ಶರೀರವು**" ಆದ್ದರಿಂದ ದೇಹವನ್ನು ಧರಿಸುವದರಿಂದ ಲಿಂಗ ಶರೀರವೇ ಧಾರಿಯೆಂದು ಹೇಳುತ್ತಾರೆ. ಅಥವಾ **ಮನಸ್ಸಿಗೂ** ಲಿಂಗ ಶರೀರವೆನ್ನುವರು. ದ್ರವರೂಪದಿಂದಶರೀರಕ್ಕೆ ಕಾಂತಿಯನ್ನುಂಟುಮಾಡಿ ಸರ್ವಗತವಾಗಿ, ದೇಹವನ್ನು ರಕ್ಷಿಸುವದರಿಂದ "**ಓಜಸ್ಸೂ**" ಸಹ ಧಾರಿಯೆಂದನ್ನುವರು. ಇದರಂತೆ ಇವೆಲ್ಲವುಗಳಿಗೆ ಆಶ್ರಯಸ್ಥಾನವಾದ "**ಹೃದಯಕ್ಕೂ**" ಧಾರಿಯೆನ್ನುವರು. ವಸ್ತುತಃ **ಜೀವಧಾರಣೆ, ಓಜಸ್ಸು, ಮನಸ್ಸು, ಹೃದಯ**ಗಳು ಜೀವಿಸಲಿಕ್ಕೆ ಮಹತ್ವವಾದವುಗಳೂ ಅವಶ್ಯವಾದವುಗಳೂ ಇರುವದರಿಂದ ಇವೆಲ್ಲವುಗಳಿಗೂ ಧಾರಿಯೆಂದು ಹೇಳಿದ್ದಾರೆ. ಜೀವಧಾರಣೇ ವಿಷಯದಲ್ಲಿ ಇವುಗಳ ಹಿರಿಮೆ ಎಷ್ಟಿದೆಎನ್ನುವದು ಇದರಿಂದ ಸ್ಪಷ್ಟವಾಗುವದು

(೩೨) ಮನೋವಿಜ್ಞಾನವು

ಮನಸ್ಸನ್ನು ಕುರಿತು ವಿಚಾರಿಸಬೇಕಾದರೆ ಮೊದಲು ಮನಸ್ಸೆಂದರೇನು? ದೇಹದಲ್ಲಿ ಅದರ ಆಶ್ರಯವೆಲ್ಲಿ? ಅದರ ಸ್ವರೂಪವೇನು? ಅದರಿಂದ ಯಾವ ಕ್ರಿಯೆಯು ಸಂಭವಿಸುತ್ತದೆ? ಶರೀರದಲ್ಲಿ ಅದರ ಮಹತ್ವವೇನು? ಎನ್ನುವದನ್ನು ತಿಳಿದುಕೊಳ್ಳದೆ ಮನಸ್ಸನ್ನು ಗುರುತಿಸಲಾರೆವು. ಯಾವುದನ್ನು ನಾವು ಗುರುತಿಸಿಲ್ಲವೊ ಅದನ್ನು ವಿಮರ್ಶಿಸುವದು ಪ್ರಯೋಜನಕಾರಿಯಲ್ಲ. ಆದ್ದರಿಂದ ಮನೋವಿಜ್ಞಾನ ವಿಷಯದಲ್ಲಿ ಶಾರೀರಕ್ಕೆ ಸಮ್ಬಂಧಿಸಿದುದೆಂದರೆ ಮನಸ್ಸು, ಅದರ ಸ್ಥಿತಿ, ಆಶ್ರಯ, ಕ್ರಿಯಾ, ಮತ್ತು ಮಹತ್ವ ಇವುಗಳೇ ಮುಖ್ಯವಾಗಿರುತ್ತವೆ. ಇದರ ವಿನಹ ಮನಸ್ಸಿನ ಬಾಹ್ಯಾಂಭ್ಯಂತರ ಸ್ವತಂತ್ರ ಪ್ರವೃತ್ತಿ, ಅಲೌಕಿಕ ವ್ಯಾಪಕತೆ, ಸೂಕ್ಷ್ಮತ್ವ, ವೇಗ, ತೀವ್ರತೆ ಮೊದಲಾದವುಗಳನ್ನು; ಎಷ್ಟೋ ಮನೋವಿಜ್ಞಾನಿಗಳು ಮನಮುಟ್ಟಿ ರೂಪಿಸಲು ಯತ್ನಿಸಿದ್ದಾರೆ. ಭಾರತೀಯ ಪಾಶ್ಚಾತ್ಯನೊದಲಾದ ವಿಚಾರಸರಣಿಯು, ಮನೋವಿಜ್ಞಾನದಲ್ಲಿಯೂ ತಾಂಡವಾಡದೇ ಇರಲಿಲ್ಲ. ಭಾರತೀಯ ಶಾಸ್ತ್ರಗಳಲ್ಲಿ ಮನಸ್ಸಿನವಿಷಯಕ್ಕೆ ಅಮೂಲಾಗ್ರವಿಮರ್ಶೆಇರುವದಿಲ್ಲವೆಂದೂ, ಆ ವಿಷಯದಲ್ಲಿ ಪ್ರಮಾಣ ಸಿದ್ಧಾಂತವನ್ನು ಭಾರತೀಯರು ಮುಟ್ಟಿಲ್ಲ

ವೆಂದೂ, ಆಧುನಿಕ ಮನೋವಿಜ್ಞಾನಪ್ರತೀತಿಯಾಗಿದೆ. ಆದರೆ ಭಾರತೀಯರು ಕಂಡುಹಿಡಿದಮನಸ್ಸಿನವ್ಯಾಪಕತೆ, ವೇಗ, ಸ್ವತಂತ್ರತೆ, ನಿತ್ಯತ್ವ, ಆತ್ಮನನ್ನೇ ಆಶ್ರಯಿಸಿ ಇರೋಣ, ದೇಹಾತ್ಮ ಸಂಯೋಗವಿಯೋಗಗಳಲ್ಲಿಯೂ ಕ್ರಿಯಾಕರಣಸಂಗ್ರಹಗಳೂ, ದೇಹನಾಶವಾದಮೇಲೂ ದೇಹದ ಸಂಸ್ಕಾರ ಗ್ರಹೀತತ್ವ ಮೊದಲಾದ ಮನೋ ವಿಷಯಗಳೆದ್ದರೂ ಅವನ್ನು ವಿಮರ್ಶಿಸಿ ಸಿದ್ಧಾಂತಪಡಿಸಲಾರದೆ, ಭಾರತೀಯದರ್ಶನಗಳ ಮೇಲೆ ವಾಕ್ಪ್ರಹಾರಮಾಡಿ ಸಮಾಧಾನ ಮಾಡಿಕೊಂಡಿದ್ದಾರೆ ಇದು ವಿಮರ್ಶಕರ ದೌರ್ಬಲ್ಯ ಪ್ರತೀಕವೇ ಹೊರತು ಸತ್ಯವಿಮರ್ಶೆ ಅಲ್ಲವೇಅಲ್ಲ.

ಸುಖಾದ್ಯುಪಲಬ್ಧಿಸಾಧನಮಿಂದ್ರಿಯಂ ಮನಃ ॥
ತಚ್ಚ ಪ್ರತ್ಯಾತ್ಮನಿಯತತ್ವಾದನಂತಂ ಪರಮಾಣುರೂಪಂ ನಿತ್ಯಂಚ ॥ (ತರ್ಕ ಸಂಗ್ರಹ)

ಸುಖದುಃಖಗಳನ್ನು ಪರಿಗ್ರಹಿಸುವ ಸಾಧನವಾದ ಇಂದ್ರಿಯವೇ ಮನಸ್ಸು. ಅದು ಪ್ರತಿಯೊಂದು ಜೀವದಲ್ಲಿಯೂ ಪ್ರತ್ಯೇಕವಾಗಿರುವದರಿಂದ ಅಸಂಖ್ಯವಾದದ್ದೂ ಪರಮಾಣು ರೂಪವುಳ್ಳದ್ದೂ ನಿತ್ಯವಾಗಿರುವದೂ ಇರುತ್ತದೆ.

ಮನಸ್ಸಿನ ಲಕ್ಷಣಗಳು

ಸುಖದುಃಖಾದಿ ಸಾಕ್ಷಾತ್ಕಾರಕಾರಣತ್ವೇಸತಿ ಇಂದ್ರಿಯತ್ವಂ ಮನಸೋಲಕ್ಷಣಂ॥ ಆತ್ಮನಸ್ತು ಸುಖಾದಿಕಂಪ್ರತಿಸಮವಾಯಿಕಾರಣತ್ವಂ॥ ನತುಸಾಧನತ್ವೇನ ಕಾರಣಂ॥

ಸುಖ ದುಃಖ ಮೊದಲಾದವುಗಳನ್ನು ಪ್ರತ್ಯಕ್ಷಪಡಿಸುವ ವಿಷಯದಲ್ಲಿ (ಸ್ವೀಕಾರದಲ್ಲಿ) ಕಾರಣ (ಸಾಧನರೂಪವಾದಕಾರಣ) ವಾಗಿಯೂ ಇಂದ್ರಿಯವಾಗಿಯೂ ಯಾವದು ಇರುತ್ತದೆಯೋ ಅದು ಮನಸ್ಸಾಗಿರುವದು. ಆತ್ಮನು (ಜೀವನು) ಸುಖವನ್ನಾಗಲೀ ದುಃಖವನ್ನಾಗಲೀ ನಿತ್ಯದಲ್ಲಿಯೂ ಹೊಂದಲೇಬೇಕಾದ್ದರಿಂದ, ದುಃಖ ಸುಖಕ್ಕೂ ಆತ್ಮನಿಗೂ ಸಂಬಂಧರೂಪವೇ ಹೊರತು ಸಾಧನರೂಪವಾದ ಕಾರಣವಿಲ್ಲ. ಹೀಗಿರುವದರಿಂದ ಸಾಧನರೂಪ ಮನೋ

ಯೋಗದಿಂದಲೇ ದುಃಖ ನಿವಾರಣೆಯೂ, ಸದಾ ಗ್ರಹಣಾಪೇಕ್ಷೆಯಿಂದ ಸುಖ ಪ್ರಾಪ್ತಿಯೂ, ಆಗುತ್ತದೆಂದು ಅಭಿಪ್ರಾಯವು. ಇಲ್ಲಿ ವಿಶೇಷವೇನೆಂದರೆ ಮೋಕ್ಷರೂಪ ಸುಖಕ್ಕೂ ಸಹ ಸಾಕ್ಷಾತ್ಕಾರ (ಸ್ವೀಕಾರ) ವಾಗಲಿಕ್ಕೆ ಮನಸ್ಸಿರಲೇಬೇಕೆಂಬ ಆಕ್ಷೇಪ ಬರಬಹುದು. ಮೋಕ್ಷವು ಇಂದ್ರಿಯಜನ್ಯ ಸುಖ ವಿಷಯವಾಗಿದ್ದರೆ ಇದು ಯೋಗ್ಯವು. ಆದರೆ ಮೋಕ್ಷವು ಇಂದ್ರಿಯಜನ್ಯ ಸುಖವಿಷಯ ಭಿನ್ನವಾದ್ದರಿಂದ, ಸ್ವಭಾವಸಿದ್ಧ ಸುಖಸ್ವರೂಪವೇ ಇದ್ದದ್ದರಿಂದ ಸ್ವೀಕಾರ ಪ್ರಸಂಗವೇ ಬರುವದಿಲ್ಲ ಜೀವಕ್ಕೆ ಮಾತ್ರ ಸುಖದುಃಖಗಳು ಇಂದ್ರಿಯಜನ್ಯವಿರುವದರಿಂದಲೂ, ಮನಸ್ಸಿನ ಸಂಯೋಗದಿಂದಲೇ ಸುಖಾದಿಗಳ ಸಾಕ್ಷಾತ್ಕಾರವು ಆಗಬೇಕಾದ್ದರಿಂದಲೂ ಮನೋಯೋಗವು ಅವಶ್ಯವಾಗಿರ ಬೇಕಾಗುತ್ತದೆ. ದೇಹದಲ್ಲಿ ಜೀವಕ್ಕೆ ವಿಷಯ ಗ್ರಹಣದಲ್ಲಿ ಮನಸ್ಸು ಇರಲೇಬೇಕಾದ್ದರಿಂದ, ಜೀವ ಮನಸ್ಸುಗಳಿಗಿರುವ ಅತ್ಯಂತ ಸಂಬಂಧವು ವಿಭಾಗಿಸಲಿಕ್ಕೆ ಬರದಷ್ಟು ಐಕ್ಯವಾದದ್ದಿರುತ್ತದೆ. ಪರಮಾಣುರೂಪವಾದ "ಮನಸ್ಸು" ಇಂದ್ರಿಯವಾದ್ದರಿಂದಇಂದ್ರಿಯ ದೃಷ್ಟಿಯಿಂದ ವಿಚಾರಮಾಡುತ್ತಾರೆ. (ಅದು ಕ್ರಮಶಃ ಮುಂದೆ ಬರುತ್ತದೆ)

ಪಂಚೇಂದ್ರಿಯಗಳು

ಇಹಖಲು ಪಂಚೇಂದ್ರಿಯಾಣಿ, ಪಂಚೇಂದ್ರಿಯ ದ್ರವ್ಯಾಣಿ, ಪಂಚೇಂದ್ರಿಯಾಧಿಷ್ಠಾನಾನಿ, ಪಂಚೇಂದ್ರಿಯಾರ್ಥಾಃ, ಪಂಚೇಂದ್ರಿಯ ಬುದ್ಧಯೋ ಭವಂತಿ ಇತ್ಯುಕ್ತವಿಂದ್ರಿಯಾಧಿಕಾರೆ॥ (ಚರಕ॥ ಸೂ ಸ್ಥಾ. ಅ ೮ ಸೂ ೩)

ಆಯುರ್ವೇದ ಶಾಸ್ತ್ರದಲ್ಲಿ ಐದು ಇಂದ್ರಿಯಗಳು, **ಶ್ರವಣ, ಚಕ್ಷು, ಘ್ರಾಣ, ಸ್ಪರ್ಶ, ರಸನೇಂದ್ರಿಯಗಳು** ಹೇಳಲ್ಪಟ್ಟಿರುತ್ತವೆ. ಇದರಂತೆಯೇ ಪಂಚೇಂದ್ರಿಯ ದ್ರವ್ಯಗಳು. ಪಂಚೇಂದ್ರಿಯಗಳ ಆಶ್ರಯಸ್ಥಾನ. ಪಂಚೇಂದ್ರಿಯಗಳಿಂದ ಸ್ವೀಕರಿಸಲ್ಪಡುವ ವಿಷಯಗಳು. ಪಂಚೇಂದ್ರಿಯ ಬುದ್ಧಿಗಳು. ಇವುಗಳು ಇಂದ್ರಿಯ ವಿಷಯ ವಿಮರ್ಶೆಯ ಅಧ್ಯಾಯದಲ್ಲುಕ್ತವಾಗಿರುತ್ತವೆ. ಇಲ್ಲಿ ಇಂದ್ರಿಯಗಳಲ್ಲಿ ಮನಸ್ಸನ್ನುಗ್ರಹಿಸಿಲ್ಲವಾದ್ದರಿಂದ, ಮನಸ್ಸು ಇಂದ್ರಿಯ

ವಲ್ಲವೆಂದು ಯಾರೂತಿಳಿಯಬಾರದು. ಮತ್ತು ವೈಶೇಷಿಕ ಸಾಂಖ್ಯಾದಿದರ್ಶನ ಗಳ ಮತಕ್ಕೆವಿರುದ್ಧವಾಗಿ, ಆಯುರ್ವೇದದಲ್ಲಿಮನಸ್ಸು ಇಂದ್ರಿಯವಲ್ಲವೆಂದು ಹೇಳಿರುವರೆಂದು ಭಾವಿಸಬಾರದು. ವೈಶೇಷಿಕಮತದಿಂದ ಮನಸ್ಸುಇಂದ್ರಿಯ ವೆಂದುಗ್ರಹಿಸಲ್ಪಟ್ಟಿದೆ. ಆಯುರ್ವೇದಶಾಸ್ತ್ರದಲ್ಲಿಯೂ,ಮಧುರರಸ ವಿವೇಚನೆ ಯಲ್ಲಿ"ಷಡಿಂದ್ರಿಯಪ್ರಸಾದನಃ" ಆರುಇಂದ್ರಿಯಗಳಿಗೂಪ್ರಸನ್ನತೆಯನ್ನುಂ ಟುಮಾಡುವಂಥದು, ಎಂದು ಹೇಳಿರುವದರಿಂದ ಮನಸ್ಸನ್ನುಇಂದ್ರಿಯವೆಂದು ಗ್ರಹಿಸಿರುವದು ಸ್ಪಷ್ಟವದೆ ಚಕ್ಷುರಾದಿಗಳಿಂದ ಗ್ರಹಿಸಲ್ಪಡುವ ವಿಷಯಾದಿ ಗಳು, ಮತ್ತು ಇಂದ್ರಿಯಗಳ ಧರ್ಮ (ಸ್ವತ್ವ) ವಿಶೇಷಗಳಿಂದ ಮನಸ್ಸನ್ನು ಇಂದ್ರಿಯನೆಂದು ಸ್ವೀಕರಿಸಿಲ್ಲ. ಇಂದ್ರಿಯಾರ್ಥಿಗಳು (ಚಕ್ಷುಸ್ಸು ಮೊದಲಾದ ವುಗಳು) ತಮ್ಮಿಂದ ತಾನೇ ರೂಪಾದಿಗ್ರಹಣದಿಂದಲೂ, ಸ್ಪಷ್ಟಗೋಚರತ್ವ ಕ್ರಿಯಾದರ್ಶನವಾಗುವದರಿಂದಲೂ, ಪ್ರತ್ಯಕ್ಷವಿರುವದರಿಂದ ಬಾಹ್ಯವಾಗಿ ವಿಭಾಗಹೊಂದಿ ವಿವೇಚಿಸಲ್ಪಡುತ್ತವೆ. ಮನಸ್ಸು ಅತೀಂದ್ರಿಯವಾದ್ದರಿಂದ ಸ್ಥೂಲಭೂತ ಇಂದ್ರಿಯಗಳಲ್ಲಿ ಸಮಾವೇಶವಾಗುವದಿಲ್ಲ

ಅತೀಂದ್ರಿಯ ಲಕ್ಷಣದಿಂದ ಮನಸ್ಸಿನ ವಿವರಣೆಯು:—

ಅತೀಂದ್ರಿಯಂ ಪುನರ್ಮನಃ ಸತ್ವಸಂಜ್ಞಕಂ ಚೇತಇತ್ಯಾಹು ರೇಕೇ, ತದರ್ಥ ಆತ್ಮಸಂಪದಾಯತ್ತಚೇಷ್ಟಂ ಚೇಷ್ಟಾ ಪ್ರತ್ಯ ಯಭೂತಮಿಂದ್ರಿಯಾಣಾಂ ॥
(ಚರಕ॥ ಸೂ. ಸ್ಥಾ. ಅ. ೮ ಸೂ. ೪)

ಮನಸ್ಸು ಅತೀಂದ್ರಿಯವೆಂದೂ, ಕೆಲವರು ಸತ್ವಸಂಜ್ಞಕಚೇತಸ್ಸೆಂದೂ ಅನ್ನುತ್ತಾರೆ. "ಚಕ್ಷುರಾದೀಂದ್ರಿಯಾಗ್ರಾಹ್ಯಂ" ಕಣ್ಣು ಮೊದಲಾದ ವಿಷಯ ಪ್ರತ್ಯಕ್ಷೀಕರಿಸುವ ಇಂದ್ರಿಯಗಳಿಂದ ಗ್ರಹೀತವಾಗದಿರುವದು. ಆದ್ದ ರಿಂದಲೇ ಅತೀಂದ್ರಿಯವೆಂದು ಹೇಳಲ್ಪಡುವದು. ಅನುಮಾನಗ್ರಾಹ್ಯವೆಂದು ಸ್ಪಷ್ಟಾರ್ಥವು.

ಸತ್ವಸಂಜ್ಞಕವುಳ್ಳ ಚೇತಸ್ಸೆಂದು ಹೇಳುವದರಿಂದ ಆತ್ಮಕ್ಕೆ (ಜೀವ ನಿಗೆ) ಸ್ವಾನುಕೂಲ, ಇಷ್ಟವಾಗಿರುವ ವಿಷಯದಲ್ಲಿ, ಮನಸ್ಸಿನಿಂದಲೇ

ಪ್ರವೃತ್ತಿ ಪ್ರೇರಕವಾಗಿಯೂ ಇರುತ್ತದೆಂದು ಹೇಳುತ್ತಾರೆ ಹೀಗೆ ಚಕ್ಷುರಾದಿ ಇಂದ್ರಿಯಗಳ ವ್ಯಾಪಾರಸ್ಥಿತಿ ಮೊದಲಾದವುಗಳಿಂದ ಭಿನ್ನವಾದ, ವಿಶೇಷ ಧರ್ಮಗಳಿಂದ ಮನಸ್ಸಿನ ಸ್ವರೂಪವನ್ನು ವಿಶದೀಕರಿಸಿದ್ದಾರೆ. **"ಅತಿಕ್ರಾಂತ ಮಿಂದ್ರಿಯೇಭ್ಯಃಅತೀಂದ್ರಿಯಂ"**ಚಕ್ಷುರಾದಿ ಇಂದ್ರಿಯಗಳಲ್ಲಿರುವಬಾಹ್ಯ ವಿಷಯವನ್ನೇ ಗ್ರಹಣಮಾಡುವ ಧರ್ಮವನ್ನು, ಮೀರಿರುವದರಿಂದ ಅತೀಂದ್ರಿಯವೆಂದು ಹೇಳುತ್ತಾರೆ. ಸತ್ವವೆಂಬಸಂಜ್ಞೆಯುಯಾವದಕ್ಕಿರುತ್ತದೆಯೋ ಆ ಕಾರಣದಿಂದ ಸತ್ವವು. ಅರ್ಥಾತ್ ಮನಸ್ಸಿನಿಂದಲೇ ಸರ್ವಕಾರ್ಯ ಪ್ರತಿಪತ್ತಿ ಇರುವದರಿಂದ "ಸತ್ವ"ವೆಂದರೆ ಸಾರ, ಮುಖ್ಯವೆಂದು ಅರ್ಥವು. ಪರ ಮತಸಂಮತಿದರ್ಶನಕ್ಕಾಗಿ ಚೇತಸ್ಸೆಂದು ಗ್ರಹಿಸಿದ್ದಾರೆ. ಪರ್ಯಾಯವಾಚಕ ಶಬ್ದಗಳು ಶಾಸ್ತ್ರ ವ್ಯವಹಾರಕ್ಕಾಗಿ ಹೇಳಲ್ಪಟ್ಟಿರುತ್ತವೆ.

ವಿಶೇಷ

ಮನಸ್ಸಿಗೆ ಇಷ್ಟವಾಗಿರುವದು ಸುಖಾದಿ ಮತ್ತು ಚಿಂತ್ಯವಿಚಾರ್ಯಾದಿಗಳು, ಆತ್ಮನೆಂದರೆ **"ಚೇತನಾ"** ಉಂಟುಮಾಡತಕ್ಕವನು, ಆತ್ಮ ಮತ್ತು ಚೇತನೆಗಳು ಸುಖಾದಿಗಳನ್ನು ಪಡೆಯಲು ಮನಸ್ಸೇ ಸಾಧನವಾಗಿರುತ್ತದೆ **"ಆತ್ಮಸಂಪತ್"** ಆತ್ಮನಿಗೆ ಅವಶ್ಯವಾಗಿ ಬೇಕಾಗಿರುವದು, ಆ ವಿಷಯದಲ್ಲಿ ಪ್ರಯತ್ನಕಾರಿಯಾಗಿ ಮನಸ್ಸು ಸುಖಾದಿಗಳ ಸ್ವೀಕಾರವನ್ನೂ, ಯಾವದರಲ್ಲಿ ಇಚ್ಛೆಯುಂಟಾಗುತ್ತದೆಯೋ ಆದರ ದರ್ಶನ ಅಥವಾ ಸಾಮೀಪ್ಯವನ್ನೂ, ಮಾಡಿಸುತ್ತದೆ. ಆದ್ದರಿಂದ **"ತದಾರ್ಥಾತ್ಮ ಸಂಪದಾಯತ್ತ ಚೇಷ್ಟಂ"** ಎಂದು ಹೇಳಿದ್ದಾರೆ.

ಚಕ್ಷುರಾದಿ ಇಂದ್ರಿಯಗಳಿಗೆ ತಮ್ಮಿಂದ ಗ್ರಹಿಸತಕ್ಕವುಗಳಾದ, ರೂಪಾದಿಜ್ಞಾನ ಸ್ವೀಕಾರ ವಿಷಯಗಳಲ್ಲಿ; ಮನಸ್ಸು ಕಾರಣವಾಗುತ್ತದೆ. ಹೀಗಿರುವದರಿಂದ **"ಚೇಷ್ಟಾ ಪ್ರತ್ಯಯ ಭೂತಮಿಂದ್ರಿಯಾಣಾಂ"** ಎಂದು ಸ್ಪಷ್ಟಪಡಿಸಿದ್ದಾರೆ ಈ ವಿಷಯದಲ್ಲಿ ವಿವೇಚನೆಮಾಡಿರುವ ವಾಕ್ಯಗಳನ್ನು ಅಭ್ಯಾಸಿಗಳ ಸ್ಪಷ್ಟಜ್ಞಾನಕ್ಕಾಗಿ ದರ್ಶನಮಾಡುತ್ತಾರೆ.

ಮನಃ ಚೇಷ್ಟಾ ಚ ಸುಖಾದಿಜ್ಞಾನಂ ಚಿಂತ್ಯಚಿಂತನಾದಿ ತಥಾ ಚಕ್ಷುರಾದಿಂದ್ರೀಯ ಪ್ರೇರಣಂ ಚ॥ಇಂದ್ರಿಯಾಣಾಂ ಚಕ್ಷುರಾದೀನಾಂ ಯಾ ಚೇಷ್ಟಾ ಸ್ವವಿಷಯ ರೂಪಾದಿ ಜ್ಞಾನ ಲಕ್ಷಣಾ ॥ ತತ್ರ ಪ್ರತ್ಯಯಭೂತಂ ಕಾರಣಂ ಮನ ಇತಿ ಮಂತವ್ಯಂ ॥ (ಚರಕ ಸೂ ಸ್ಥಾ ಅ ೮)

ತದೇವ ವಿಶದೀಕರೋತಿ

ಯದಾ ಸುಖಾದಯಶ್ಚಿಂತ್ಯಾದಯೋಽಪಿ ವಿಷಯಾ ಭವಂತಿ ಆತ್ಮಾ ಚ ಪ್ರಯತ್ನವಾನ್ ಭವತಿ॥ ತದಾಮನಃ ಸ್ವವಿಷಯೇ ಪ್ರವರ್ತತೆ, ಇಂದ್ರಿಯಾಣಿ ಚ ಅಧಿತಿಷ್ಠತಿ, ಇಂದ್ರಿಯಾಣಿ ಚ ಮನೋಽಧಿಷ್ಠಿತಾನ್ಯೇವ ಸ್ವವಿಷಯಜ್ಞಾನೇ ಪ್ರವರ್ತಂತೆ ॥
(ಮನೋವಿಷಯೇ ಸರ್ವಂ ವಿವೇಚಿತಂ ಪುನರನಪೇಕ್ಷ್ಯಂ)
(ಚರಕಟೀಕಾ)

ಮನಸ್ಸು ಒಂದೇ ಪುರುಷನಲ್ಲಿ ಉಪಾಧಿಭೇದದಿಂದ ಅನೇಕವಾಗಿರುವಂತೆ ಕಲ್ಪನೆಯಾಗುತ್ತಿದ್ದರೂ,ಪರಮಾರ್ಥತಃ ಒಂದೇ ಎನ್ನುವದನ್ನು ಸಿದ್ಧ ಮಾಡುತ್ತಾರೆ:—

ಸ್ವಾರ್ಥೇಂದ್ರಿಯಾರ್ಥಸಂಕಲ್ಪ ವ್ಯಭಿಚರಣಾಚ್ಚಾನೇಕಮೇಕಸ್ಮಿನ್ ಪುರುಷೇ ಸತ್ವಂ ರಜಸ್ತಮಃ ಸತ್ವಗುಣಯೋಗಾಚ್ಚ; ನ ಚಾನೇಕತ್ವಂ ಹ್ಯೇಕಂ ಹ್ಯೇಕ ಕಾಲಮನೇಕೇಷು ಪ್ರವರ್ತತೆ; ತಸ್ಮಾನ್ನೈಕ ಕಾಲಾ ಸರ್ವೇಂದ್ರಿಯ ಪ್ರವೃತ್ತಿಃ ॥
(ಚರಕ॥ ಸೂ. ಸ್ಥಾ. ಅ. ೮ ಸೂ. ೫)

ಮನಸ್ಸು ಗ್ರಹಿಸಿರುವ ಒಂದು ಇಂದ್ರಿಯಾರ್ಥವನ್ನು ತ್ಯಜಿಸಿ ಮತ್ತೊಂದನ್ನು ಗ್ರಹಿಸುವದರಿಂದ ಅಥವಾ ಒಂದು ಸಂಕಲ್ಪವನ್ನು ತ್ಯಜಿಸಿ ಅನ್ಯತ್ರ ವಿಚಾರಪ್ರವರ್ತಕವಾಗುವದರಿಂದ ಒಂದೇ ಪುರುಷನಲ್ಲಿ ಅನೇಕ ಮನಸ್ಸಿರುವದೆಂಬ ಭ್ರಾಂತಿ ಬರುತ್ತದೆ. ಹಾಗೆ ಅನಿಸುತ್ತದೆಯೇ ವಿನಾ

ಅನೇಕ ಮನಸ್ಸಿರುವದು ಸತ್ಯವಾದದ್ದಲ್ಲ. ಸತ್ವಗುಣಯೋಗದಿಂದ ಸತ್ವಗುಣ ಯುಕ್ತವೂ, ಇದರಂತೆ ರಜೋಗುಣ, ತಮೋಗುಣ, ಯುಕ್ತವಾಗುವದರಿಂದ ಅವಾವ ಗುಣವುಳ್ಳದ್ದು ಅವಾವ ಸ್ಥಿತಿಯಲ್ಲಿ ಒಂದೇ ಮನಸ್ಸು ಪ್ರವರ್ತಕವಾಗುತ್ತದೆಯೇ ವಿನಾ ಮನಸ್ಸು ಅನೇಕತ್ವವುಳ್ಳದ್ದಿರುವದಿಲ್ಲ ಒಂದೇ ಮನಸ್ಸು ಅನೇಕಾರ್ಥಗಳಲ್ಲಿ ಏಕಕಾಲದಲ್ಲಿ ಪ್ರವರ್ತಕವಾಗುವದಿಲ್ಲ. ಆದ್ದರಿಂದ ಸರ್ವ ಇಂದ್ರಿಯಗಳು ಏಕಕಾಲಾವಚ್ಛೇದೇನ ಸ್ವವಿಷಯಗ್ರಾಪಕವಾಗಲಾರವು.

ಮನಸ್ಸಿನ ಗುಣವು

ಅಣುತ್ವಮಥಚೈಕತ್ವಂ ದ್ವೌಗುಣೌಮನಸಃ ಸ್ಮೃತೌ ॥
(ಚರಕ॥ ಶಾರೀರ॥ ಅ ೧ ಶ್ಲೋ ೧೯)

ಒಂದು ದೀರ್ಘವಾದ ವಸ್ತುವಿನ ವಿಷಯದಲ್ಲಿ (ಚಷ್ಮುಲಿಯಲ್ಲಿ) ಕಣ್ಣು, ನಾಲಿಗೆ, ಗಂಧೇಂದ್ರಿಯಗಳು ಗ್ರಹಣ ವಿಷಯದಲ್ಲಿ (ಸ್ವೀಕರಿಸುವ ದರಲ್ಲಿ) ಪ್ರವೃತ್ತವಾದರೆ ಏಕಕಾಲದಲ್ಲಿ ರೂಪ, ರಸ, ಗಂಧ ಜ್ಞಾನವಾಗುವ ದಿಲ್ಲವಾದ್ದರಿಂದ ಮನಸ್ಸು **"ಮಹತ್ವ ಪರಿಮಾಣ"**ವುಳ್ಳದ್ದಿರುವದಿಲ್ಲೆಂದು ಸಿದ್ಧವಾಗುತ್ತದೆ. **"ಮಹತ್ವ ಪರಿಮಾಣ"**ವಿದ್ದರೆ ಸಕಲೇಂದ್ರಿಯಗಳ ಪ್ರವೃತ್ತಿಯಾಗಿ ಒಮ್ಮೆಲೇ ಸರ್ವೇಂದ್ರಿಯ ವಿಷಯಗಳೂ ಗ್ರಹಿಸಲ್ಪಡುತ್ತಿದ್ದವು. ಹಾಗೆ ಗ್ರಹಿಸಲ್ಪಡದಿರುವದರಿಂದ ಮನಸ್ಸು "ಅಣುರೂಪ" ವಾಗಿರುವದೆಂದು ಸಿದ್ಧವಾಗುತ್ತದೆ ಅನೇಕ ಇಂದ್ರಿಯಗಳಲ್ಲಿ ಏಕಕಾಲದಲ್ಲಿಯೇ ಪ್ರವರ್ತನೆಯಾಗುವದಿಲ್ಲವಾದ್ದರಿಂದ ಮನಸ್ಸು ಒಂದೇ ಎಂದು ನಿಶ್ಚಯವು.

ಮನೋವಿಷಯಗಳು

ಚಿಂತ್ಯಂ ವಿಚಾರಮೂಹ್ಯಂಚಧ್ಯೇಯಂ ಸಂಕಲ್ಪನೀವಚ॥
ಯತ್ಕಿಂಚಿತ್ಮನಸೋಜ್ಞೇಯಂತತ್ಸರ್ವಂಹ್ಯರ್ಥಸಂಜ್ಞಕಂ॥
(ಚರಕ॥ ಶಾರೀರ॥ ಅ ೧ ಶ್ಲೋ ೨೦)

ಯಾವದು ಮನಸ್ಸಿನಿಂದ ವಿಚಾರಿಸಲ್ಪಡುತ್ತದೆಯೋ (ಚಿಂತ್ಯಂ) ಅದು ಮನಸ್ಸಿನ ವಿಷಯವು. ಕಾರ್ಯತಃ ಆಗಲಿ **ಕೇವಲ** ಸಂಕಲ್ಪದಿಂದಲೇ ಆಗಲಿ ಮನಸ್ಸಿನಿಂದ ಚಿಂತಿಸಲ್ಪಡತಕ್ಕದ್ದಿದೆಯೋ ಅದಕ್ಕೆ "**ಚಿಂತ್ಯ**"ನೆಂಬ ಹೆಸರು. ಯೋಗ್ಯಾಯೋಗ್ಯ ಪ್ರಾಪ್ತ್ಯಪ್ರಾಪ್ತಿ ದೃಷ್ಟಿಯಿಂದ ಯಾವದು ವಿಮರ್ಶಿಸಲ್ಪಡುತ್ತದೆಯೋ ಅದು "**ವಿಚಾರ್ಯ**" ವೆಂದು ಹೇಳಲ್ಪಡುತ್ತದೆ. ಇದು ಹೀಗೆ ಆಗಬಹುದೆಂದು ಸಂಭಾವನಾ ದೃಷ್ಟಿಯಿಂದ ಊಹಿಸಲ್ಪಡುತ್ತದೆಯೋ ಅದು "**ಊಹ್ಯವು**" "ಏವಮೇತದ್ಭವಿಷ್ಯತೀತಿ" ಹೀಗೆ ಇದು ಆಗುವದು; ಇತ್ಯಾದಿ ವಿಚಾರಕ್ಕೆ ಊಹೆಯೆಂದು ಅನ್ನುತ್ತಾರೆ. ಭಾವನೆಯಲ್ಲಿಯ ಜ್ಞಾನ ವಿಷಯಕ್ಕೆ " **ಧ್ಯೇಯ** " ವೆಂಬ ಹೆಸರು ಅನುಭೂತಾನನುಭೂತ ವಿಷಯಗಳಲ್ಲಿ ಮನುಷ್ಯನ ವಿಚಾರವು ಸ್ಥಿರತೆಯನ್ನು ಹೊಂದುವದಿದೆಯೋ ಅದಕ್ಕೆ "**ಭಾವನೆ**"ಯೆಂಬ ಹೆಸರು. ಆ ಭಾವನೆಗೆ ಜ್ಞಾನ ವಿಷಯವಾಗಿರುವದೇ "**ಧ್ಯೇಯವು**". ಅಥವಾ ಯಾವದನ್ನು ಕುರಿತು ಧ್ಯಾಸಿಸುತ್ತಾನೆಯೋ (ಆ ವಿಷಯದಲ್ಲಿ ಬದ್ಧಭಾವವುಳ್ಳವನಾಗುವನೋ) ಅದಕ್ಕೆ "**ಧ್ಯೇಯ**"ವೆಂಬ ಹೆಸರು. ಗುಣದಿಂದಾಗಲೀ ದೋಷದಿಂದಾಗಲೀ ಮುಂದೆ ನಿಶ್ಚಯವಾಗತಕ್ಕ ವಿಷಯವು "**ಸಂಕಲ್ಪವು**". ಮನಸ್ಸಿನ ಕರ್ಮಕ್ಕೆ ಸಾಮಾನ್ಯವಾಗಿ ಸಂಕಲ್ಪ ವೆಂಬ ಅರ್ಥವಿದೆ. ಆದರೆ ಇಲ್ಲಿ ವಿಷಯಾನ್ವಯವಾಗಿ ಹೇಳಿರುವದರಿಂದ, ನಿರ್ಧರಿಸಲ್ಪಡತಕ್ಕ ವಿಷಯವೆಂದು ತಿಳಿಯಬೇಕು. ಅಥವಾ ಯಾವದೇ ಒಂದು ಮನೋ ವಿಷಯದ ತಿಳಿಯತಕ್ಕದ್ದಿರುವದೋ ಅದೆಲ್ಲ "**ಅರ್ಥ**" ವೆಂದು ಹೇಳಲ್ಪಡುತ್ತದೆ ಅದೆಲ್ಲಮನಸ್ಸಿಗೆ ವಿಷಯವಾದದ್ದೆಂದಭಿಪ್ರಾಯವು. "**ಮನಸಾಜ್ಞೇಯಂ**" ಎಂದು ಹೇಳದೆ ಷಷ್ಠ್ಯಭಿಧಾನ ವಾಕ್ಯದಿಂದ, ಇಂದ್ರಿಯ ಸಾಧನರಹಿತವಾಗಿ ಮನಸ್ಸಿನ ಸ್ವತಂತ್ರ ಗ್ರಹಣ ಸಾಮರ್ಥ್ಯವನ್ನು ತೋರಿಸಲು ಹೀಗೆ ವಾಕ್ಯವನ್ನಿಟ್ಟಿದ್ದಾರೆ ಆದ್ದರಿಂದ ಭಾರತೀಯದರ್ಶನದಲ್ಲಿ ಇಂದ್ರಿಯಗಳ ಸಾನ್ನಿಧ್ಯನಿರಪೇಕ್ಷತ್ವೇನ ಮನೋಗ್ರಾಹ್ಯವಾದದ್ದಿರುವದರಿಂದ ಮನಸ್ಸು "ಸ್ವತಂತ್ರವೂ" ಪರಮಾಣುರೂಪವುಳ್ಳದ್ದೂ, ನಿತ್ಯವೂ, ಅನಂತವೂ, ಪ್ರತಿ ಶರೀರ ಭಿನ್ನವೂ, ಚಕ್ಷುರಾದಿಂದ್ರಿಯಗಳಿಗೆ ವಿಷಯ ಗ್ರಹಣದಲ್ಲಿ ಮನೋಽಧಿಷ್ಠಾನವೂ, ಮುಂತಾಗಿ ಮನಸ್ಸಿನ ವಿಮರ್ಶೆಯು ಅಮೂಲಾಗ್ರವಾಗಿ ಗ್ರಹಿಸಿ ವಿಮರ್ಶಿಸಲ್ಪಟ್ಟಿರುತ್ತದೆ

ಮನಸ್ಸಿನ ಕರ್ಮ

ಇಂದ್ರಿಯಾಭಿಗ್ರಹಃ ಕರ್ಮ ಮನಸಃ ಸ್ವಸ್ಯನಿಗ್ರಹಃ ॥
ಊಹೋವಿಚಾರಶ್ಚ, ತತಃ ಪರಂ ಬುದ್ಧಿಃ ಪ್ರವರ್ತತಿ ॥

ಚಕ್ಷುರಾದಿ ಇಂದ್ರಿಯಗಳ ವಿಷಯಗ್ರಹಣದಲ್ಲಿರುವದು, ಯೋಗ್ಯವಾದ್ದರಲ್ಲಿಯೇ ಪ್ರವೃತ್ತಿಯಾಗುವಂತೆ ತನ್ನನ್ನು ತಾನೇ ನಿಗ್ರಹಿಸಿಕೊಳ್ಳುವದು, ಊಹಿಸೋಣ, ವಿಚಾರಮಾಡೋಣ, ಇವು ಮನಸ್ಸಿನಕರ್ಮಗಳು ಊಹವಿಚಾರಗಳ ನಂತರ ಬುದ್ಧಿಯು ಕಾರ್ಯಮಾಡತಕ್ಕದ್ದಾಗುತ್ತದೆ. ಆದ್ದರಿಂದನಿಶ್ಚಯಾತ್ಮಕವಾಗಿರುವದುಬುದ್ಧಿಯೆಂದೂ,ಸಂಶಯಾತ್ಮಕವಾಗಿರುವದುವ-ನಸ್ಸೆಂದೂ, ಹೇಳುತ್ತಾರೆ. ಸಂಕಲ್ಪ ವಿಕಲ್ಪಾತ್ಮಕವಾದ ಮನಸ್ಸಿನಿಂದ ಪ್ರವರ್ತನೆಯಾದ ಮೇಲೆ (ಮನೋವಿಚಾರಾ ನಂತರ) ಅಧ್ಯವಸಾಯಿಯು (ನಿಶ್ಚಯವಾಡುವದು) ಬುದ್ಧಿ ಯಾಗುತ್ತದೆ ಅರ್ಥಾತ್ ಮನಸ್ಸಿನಿಂದ ಸಂಕಲ್ಪಿಸಿದ್ದನ್ನು ಬುದ್ಧಿಯು ನಿಶ್ಚಯಿಸುತ್ತದೆಂದಭಿಪ್ರಾಯವು. ಮನಸ್ಸು ಅಹಂಕಾರದಿಂದ ಯುಕ್ತವಾಗಿ ಬುದ್ಧಿಯು, ಮನಸ್ಸಿನಿಂದ ಸಂಕಲ್ಪಿತವಾಗಿರುವದನ್ನು; ನಿರ್ಧಾರ, ಸ್ವೀಕಾರ, ಅಸ್ವೀಕಾರ,ನಿರ್ಣಯಗಳನ್ನು ಬುದ್ಧಿಯುಮಾಡುತ್ತದೆ. ಎಲ್ಲ ಇಂದ್ರಿಯ ವ್ಯಾಪಾರಗಳು ಬುದ್ಧಿಯಲ್ಲಿ ಅರ್ಪಿಸಲ್ಪಡತಕ್ಕದ್ದಾಗುತ್ತವೆ. ಮನಸ್ಸಿನ ಕರ್ಮಗಳು ಬುದ್ಧಿಯಲ್ಲಿ ಅರ್ಪಣವಾಗುವದು, ಕಪೋಲ ಕಲ್ಪಿತವಾದ ಅಸಂಭವವೆಂದು ತೋರಬಹುದು ಹೀಗೆ ಅನಿಸುವದು ಸ್ವಾಭಾವಿಕವು. ಯಾಕಂದರೆ ಸೂಕ್ಷ್ಮ ಅತೀಂದ್ರಿಯವಾದವುಗಳ ನಿರ್ಣಯವು ಗಹನವಾಗಿರುತ್ತವೆ. ಬುದ್ಧಿಯಲ್ಲಿ ಇಂದ್ರಿಯಗಳ ವ್ಯಾಪಾರವು ಅರ್ಪಿಸಲ್ಪಡುತ್ತದೆನ್ನುವದು ನಿಶ್ಚಯವಾದದ್ದೇ ಇರುತ್ತದೆ. ಆದನ್ನು ವಿಭಾಗಿಸಿ ವಿಮರ್ಶಿಸಿದರೆ ತಿಳಿಯುತ್ತದೆ. ಈ ಹಿಂದೆ ಮನಸ್ಸು ಒಂದೇ ವೇಳೆಯಲ್ಲಿ ಅನೇಕ ವಿಷಯಗಳನ್ನು ಗ್ರಹಿಸುವದಿಲ್ಲೆಂದೂ ಹೇಳಿರುತ್ತದೆ. ಪ್ರತಿಕ್ಷಣವೂ ಬೇರೆಬೇರೆ ವಿಷಯಗಳನ್ನು ಗ್ರಹಿಸುವ ಮನಸ್ಸು, ಗ್ರಹಿಸಿದ್ದೆಲ್ಲವನ್ನೂ ತನ್ನಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ಗ್ರಹಿಸಿದ್ದೆಲ್ಲಕ್ಕೂ ಮನಸ್ಸೇ ಆಧಾರವಾಗುತ್ತಿದ್ದರೆ, ಒಂದನ್ನು ಗ್ರಹಿಸಬೇಕಾದರೆ ಮತ್ತೊಂದು ಯಾಕೆ ಒರಬಾರದು ಹಾಗಾಗುವದಿಲ್ಲವಾದ್ದರಿಂದ ಮನ

ಸ್ಸಿನಿಂದ ಗ್ರಹೀತವಾದವುಗಳಿಗೆ ಮತ್ತೊಂದು ಆಶ್ರಯವಿದೆ ಎನ್ನುವದು ಸಿದ್ಧ. ವಾಗುತ್ತದೆ

ಉದಾಹರಣೆ:— ಬಾಯಲ್ಲಿ ನಾವು ಆಹಾರವನ್ನು ಗ್ರಹಿಸುತ್ತೇವೆ. ಗ್ರಹಿಸಿದ ಆಹಾರಕ್ಕೆ ಬೇರೆ ಆಶ್ರಯವಿರುವದರಿಂದ ಬಾಯಿಂದ ಪುನಃಪುನಃ ಗ್ರಹಿಸಲು ಅನುಕೂಲವಾಗುತ್ತದೆ. ಬಾಯೇ ಆಶ್ರಯವಾಗಿದ್ದರೆ ಅನೇಕ ವಸ್ತುಗಳ ಸಂಸರ್ಗದಿಂದ ಎಲ್ಲವುಗಳ ರುಚಿಯೂ ಕೂಡಿ ಯಾವ ವಸ್ತುವಿನ ರುಚಿ ಯಾವದೆಂದು ತಿಳಿಯುತ್ತಿದ್ದಿಲ್ಲ. ಇದು ಸ್ಥೂಲೋದಾಹರಣೆಯಾ ಯಿತು. ಮನಸ್ಸಿನಲ್ಲಿ ಅನೇಕ ವಿಚಾರಗಳ ಆಶ್ರಯ ಸುಖಾದಿಗ್ರಹಣ ವೊದ ಲಾದವುಗಳಿರುತ್ತಿದ್ದರೆ. ಒಂದರಲ್ಲೊಂದು ಸೇರಿ ಅವ್ಯವಸ್ಥೆಯಾಗುವದೆಂದು ಇದರಿಂದ ತಿಳಿಯಬೇಕು.

ಏತೇಪ್ರದೀಪಕಲ್ಪಾಃ ಪರಸ್ಪರ ವಿಲಕ್ಷಣಾಃ ಗುಣವಿಶೇಷಾಃ ॥
ಕೃತ್ಸ್ನಂ ಪುರುಷಾರ್ಥಂ ಪ್ರಕಾಶ್ಯಬುದ್ಧೌ ಪ್ರಯಚ್ಛಂತಿ ॥
(ಸಾಂಖ್ಯಕಾರಿಕಾ)

ಮನಸ್ಸು ಇಂದ್ರಿಯ ಬುದ್ಧಿ ಇವುಗಳು ಪರಸ್ಪರವಾಗಿ ವಿಲಕ್ಷಣ ಗುಣ ವುಳ್ಳವುಗಳೂ, ಇವುಗಳ ಆತ್ಯಂತಿಕವಾದ ಸನ್ನಿಧಿಯಲ್ಲಿ ಗುಣವೈಶಿಷ್ಟ್ಯವುಳ್ಳ ವುಗಳೂ ಆಗುತ್ತವೆ. ಆದ್ದರಿಂದ ಇವುಗಳಿಗೆ ದೀಪದ ಉದಾಹರಣೆಯನ್ನು ಕೊಟ್ಟಿದ್ದಾರೆ. ದೀಪದಲ್ಲಿ ಬತ್ತಿ ತೈಲ ಅಗ್ನಿ ಇವುಗಳ ಸಮಯೋಚಿತ ಸಂಯೋಗವಿರುತ್ತದೆ. ಅದು ಕತ್ತಲೆಯನ್ನು ಹೋಗಲಾಡಿಸುವ ಶಿಖಾರೂಪ ವಾದ ಜ್ವಾಲೆಯಲ್ಲಿ ಪರ್ಯವಸಾನವಾಗುತ್ತದೆ. ಬೆಳಕನ್ನು ಕೊಡುವ ಜ್ವಾಲೆ ಯನ್ನು ವಿಭಾಗಿಸಿ ಬತ್ತಿ ತೈಲ ಅಗ್ನಿ ಸಂಯೋಗಗಳಲ್ಲಿಯ ಪರಸ್ಪರ ಗುಣ ವೈಶಿಷ್ಟ್ಯವನ್ನು ಕಂಡುಹಿಡಿಯುಬಹುದೋ? ಊಹಿಸಬಹುದೇ ವಿನಾ ವಿಭಾಗಿ ಸಲು ಬರುವದಿಲ್ಲ ಆದ್ದರಿಂದ **"ಪರಸ್ಪರ ವಿಲಕ್ಷಣಾಃ"** ಎಂದು ಹೇಳಿ ದ್ದಾರೆ. ಹೇಗೆ ದೀಪ ಜ್ವಾಲೆಗೆ ಬತ್ತಿ ತೈಲ ಅಗ್ನಿಗಳು ಅನುವರ್ತಿಗಳಾಗುತ್ತ ವೆಯೋ ಅದರಂತೆ, ಜೀವಕ್ಕೆ ಇಚ್ಛಿತವಾದವುಗಳೆಲ್ಲವನ್ನೂ ಗ್ರಹಿಸಲು ಬಹಿ ರಿಂದ್ರಿಯ ಮನಸ್ಸುಗಳೊಂದಾಗಿ ಅಹಂಕಾರವನ್ನು ಕೂಡಿಕೊಳ್ಳುತ್ತವೆ

ಅಹಂಕಾರವು ಇವೆಲ್ಲವುಗಳಿಂದ ಯುಕ್ತವಾಗಿ, ಬುದ್ಧಿಯಲ್ಲಿ ಸಮರ್ಪಿಸುತ್ತದೆ. ಪರಸ್ಪರ ಯುಕ್ತವಾದ ಸ್ವಕರ್ತವ್ಯ ಪರಿಮಿತಿಯುಳ್ಳ ಇಂದ್ರಿಯಗಳಿಂದಲೇ ಬುದ್ಧಿಯು ಜೀವಕ್ಕೆ (ಪುರುಷನಿಗೆ) ವಿಷಯ ಸ್ವೀಕಾರಮಾಡಲಿಕ್ಕೆ ಅನುವಾಗುತ್ತದೆ.

ವಿಷಯ ಸ್ವೀಕಾರ ಕ್ರಮ

ಇಂದ್ರಿಯೇಣೇಂದ್ರಿಯಾರ್ಥೋಽಹಿಸಮನಸ್ಕೇನ ಗೃಹ್ಯತೆ ॥
ಕಲ್ಪ್ಯತೇಮನಸಾತೂರ್ಧ್ವಂ ಗುಣತೋ ದೋಷತೋಽಥವಾ ॥
ಜಾಯತೇ ವಿಷಯೇ ತತ್ರಯಾ ಬುದ್ಧಿರ್ನಿಶ್ಚಯಾತ್ಮಿಕಾ ॥
ವ್ಯವಸ್ಯತಿ ತಥಾವಕ್ತುಂ ಕರ್ತುಂವಾ ಬುದ್ಧಿಪೂರ್ವಕಂ ॥
(ಚರಕ॥ ಶಾರೀರ॥ ಅ ೧ ಶ್ಲೋ ೨೩)

ಇಂದ್ರಿಯಗಳಿಗೆ ಅಭೀಷ್ಟವಾಗಿರುವಂಥಾದ್ದು, ಮನೋಯುಕ್ತವಾದ ಜೀವನಿಂದ ಊಹಿಸಲ್ಪಡುತ್ತದೆ ಮುಂದೆ ಗುಣ ದೋಷಗಳಿಂದ ವಿಚಾರಿಸಲ್ಪಡುತ್ತದೆಂದು ಹೇಳಿರುವದರಿಂದ ಇಲ್ಲಿ **"ಗೃಹ್ಯತೆ"** ಎನ್ನುವದಕ್ಕೆ ಊಹಿಸಲ್ಪಡುತ್ತದೆಂದು ಅರ್ಥ ಮಾಡಿದ್ದಾರೆ. ಆಮೇಲೆ ಗುಣದೋಷಗಳ ದೃಷ್ಟಿಯಿಂದ ವಿಚಾರವು ಮನಸ್ಸಿನಿಂದ ಮಾಡಲ್ಪಡುತ್ತದೆ. ಹೀಗೆ ವಿಚಾರ ನಡೆದಿರಲು ನಿಶ್ಚಯಮಾಡತಕ್ಕ ಬುದ್ಧಿಯು ಸ್ವಕರ್ತವ್ಯವನ್ನು ಮಾಡಿ ನಿರ್ಣಯಿಸುತ್ತದೆ. ಆಮೇಲೆ ಬುದ್ಧಿಯುಕ್ತನಾಗಿ ಎಲ್ಲ ಸಾಧನೇಂದ್ರಿಯಗಳಿಂದ ಮಾತಾಡಲೂ, ಯಾವದನ್ನೂ ಮಾಡಲು ಸ್ವೀಕರಿಸಲು ಅವನು ಉದ್ಯುಕ್ತನಾಗುತ್ತಾನೆ. ಜೀವನು ಬುದ್ಧಿಪುರಸ್ಸರನಾಗಿ ಮನೋಯುಕ್ತ ಇಂದ್ರಿಯಗಳಿಂದ ವಿಷಯ ಸ್ವೀಕಾರ ಮಾಡುತ್ತಾನೆಂದು ಅಭಿಪ್ರಾಯವು. ಈ ಶ್ಲೋಕದಲ್ಲಿ ಕ್ಲಿಷ್ಟಾಭಿಪ್ರಾಯವಾಗುತ್ತದೆ. ಅರ್ಥ ನಿರ್ವಹಣೆಯಲ್ಲಿ ಸಂದರ್ಭಾನುಸಾರ ಸಂಕುಚಿತಾರ್ಥ ಗ್ರಹಣ ಮಾಡುತ್ತಾರೆ. ಶಾಸ್ತ್ರವಚನದಲ್ಲಿಯ ಸಂದರ್ಭವು ಅನುಸರಿಸಲೇ ಬೇಕಾಗಿರುತ್ತದೆ. ಮನಸ್ಸಿನ ಆಶ್ರಯ ಸ್ಥಾನವು ಹೃದಯವೆಂದು ಹಿಂದೆ ನಿರೂಪಿಸಿದ್ದೇನೆ.

ಬಾಹ್ಯೇಂದ್ರಿಯಗಳು

ಏಕೈಕಾಧಿಕಯುಕ್ತಾನಿ ಖಾದೀನಾಮಿಂದ್ರಿಯಾಣಿತು ॥
ಪಂಚ ಕರ್ಮಾಸುಮೇಯಾನಿಯೇಭ್ಯೋ ಬುದ್ಧಿಃಪ್ರವರ್ತತೆ॥
(ಚರಕ॥ ಶಾರೀರ॥ ಅ ೧ ಶ್ಲೋ ೨೪)

ಆಕಾಶಾದಿ ಪಂಚ ಭೂತಗಳಲ್ಲಿ ಒಂದೊಂದು ಭೌತಿಕಾಧಿಕ್ಯದಿಂದ, ಆವಾವ ಭೂತಾತ್ಮಕ ಇಂದ್ರಿಯಗಳು ಉಂಟಾಗಿರುತ್ತವೆ. ಹೀಗೆ ಭೌತಿಕವಾದ ಶ್ರೋತ್ರಾದಿ ಐದು ಇಂದ್ರಿಯಗಳಿರುತ್ತವೆ. ಅವುಗಳ ಕರ್ಮಗಳಿಂದ ಆವಾವ ಭೂತಗಳಿಂದುತ್ಪನ್ನವಾಗಿವೆಯೆಂದು ತಿಳಿಯಬೇಕು ಶಬ್ದವನ್ನು ಗ್ರಹಿಸುವ ಶ್ರೋತ್ರೇಂದ್ರಿಯವು, ಶಬ್ದವು ಆಕಾಶಗುಣವಾದ್ದರಿಂದ; ಆಕಾಶೀಯವಾಗಿರುತ್ತದೆ ಇದರಂತೆ ಎಲ್ಲ ಇಂದ್ರಿಯಗಳನ್ನೂ ತಿಳಿಯಬೇಕು. ಈ ಇಂದ್ರಿಯಗಳಿಗೆ ವಿಷಯ ಗ್ರಹಣೆಯಲ್ಲಿ ಪಂಚೇಂದ್ರಿಯ ಬುದ್ಧಿಗಳು ಅನುವರ್ತಿಸುತ್ತವೆ.

ಇಹಖಲು ಪಂಚೇಂದ್ರಿಯಾಣಿ, ಪಂಚೇಂದ್ರಿಯದ್ರವ್ಯಾಣಿ, ಪಂಚೇಂದ್ರಿಯಾಧಿಷ್ಠಾನಾನಿ, ಪಂಚೇಂದ್ರಿಯಾರ್ಥಾಃಪಂಚೇಂದ್ರಿಯ ಬುದ್ಧಯೋಭವಂತಿ, ಇತ್ಯುಕ್ತಮಿಂದ್ರಿಯಾಧಿಕಾರೇ ॥
(ಚರಕ॥ ಇಂದ್ರಿಯೋಪಕ್ರಮಣೀಯೆ)

ಬಾಹ್ಯೇಂದ್ರಿಯಗಳ ವಿವರಣೆಯಲ್ಲಿ ಶ್ರೋತ್ರಾದಿ ಐದು ಇಂದ್ರಿಯಗಳು, ಪಂಚೇಂದ್ರಿಯ ದ್ರವ್ಯಗಳು, ಪಂಚೇಂದ್ರಿಯಗಳ ಆಶ್ರಯಸ್ಥಾನ, ಪಂಚೇಂದ್ರಿಯಗಳಿಂದ ಗ್ರಹಿಸಲ್ಪಡುವ ವಿಷಯಗಳು, ಪಂಚೇಂದ್ರಿಯ ಬುದ್ಧಿಗಳು, ಇವುಗಳು ಇಂದ್ರಿಯ ಸಂಬಂಧದಿಂದ ಇಂದ್ರಿಯೋಪಕ್ರಮಣೀಯಾಧ್ಯಾಯದಲ್ಲಿ ಉಕ್ತವಾಗಿರುತ್ತವೆ. ಇಲ್ಲಿ ಪಂಚೇಂದ್ರಿಯಗಳೆಂದರೆ ಜ್ಞಾನೇಂದ್ರಿಯಗಳು.

ಕರ್ಮೇಂದ್ರಿಯಗಳು

ಕರ್ಮೇಂದ್ರಿಯಾಣಿ:- ವಾಕ್ ಹಸ್ತೋಪಸ್ಥಪಾಯುಪಾದಂ ॥
(ಸುಶ್ರುತ॥ ಶಾರೀರ॥ ಅ ೧ ಸೂ ೪)

(೧) ವಾಗಿಂದ್ರಿಯ (೨) ಹಸ್ತ (೩) ಜನನೇಂದ್ರಿಯ (೪) ಗುದ (೫) ಪಾದ ಇವು, ಪಂಚಕರ್ಮೇಂದ್ರಿಯಗಳು. ಕರ್ಮವನ್ನೇ ಪ್ರಧಾನವಾಗಿ ಮಾಡುವದರಿಂದ ಕರ್ಮೇಂದ್ರಿಯಗಳೆಂದು ಹೆಸರು. ಕರ್ಮೇಂದ್ರಿಯಗಳು ಕಾರ್ಯ ಮಾಡುತ್ತಿರುವಾಗ ಮನಸ್ಸು ಆಶ್ರಯಿಸುತ್ತದೆ. ಮನೋಽಧಿಷ್ಠಿತ ವಾಗಿಯೇ ಕರ್ಮೇಂದ್ರಿಯಗಳು ಕಾರ್ಯವನ್ನು ಮಾಡುತ್ತವೆ.

ಕರ್ಮೇಂದ್ರಿಯಗಳ ಕೆಲಸಗಳು

ಕರ್ಮೇಂದ್ರಿಯಾಣಾಂ ಯಥಾಸಂಖ್ಯಂವಚನಾದಾನಾ‌ಽನಂದ ವಿಸರ್ಗವಿಹರಣಾನಿ ॥ (ಸುಶ್ರುತ॥ ಶಾರೀರ॥ ಅ ೧ ಸೂ ೫)

ಕರ್ಮೇಂದ್ರಿಯಗಳಿಗೆ ವಚನಾದಿಗಳು ಕರ್ಮವಾಗಿರುತ್ತವೆ ಅರ್ಥಾತ್ ವಚನಾದಿ ಕರ್ಮಗಳನ್ನು ಕರ್ಮೇಂದ್ರಿಯಗಳು ಮಾಡುತ್ತವೆ.

(೧) "**ವಾಗಿಂದ್ರಿಯವು**" ಮಾತಾಡುವದು ಒದರುವದು ಮೊದಲಾದ ಕರ್ಮಗಳನ್ನು ಮಾಡುತ್ತದೆ.

(೨) "**ಹಸ್ತವು**" ತೆಗೆದುಕೊಳ್ಳುವ ಮೊದಲಾದ ಕೆಲಸವನ್ನು ಮಾಡುತ್ತದೆ.

(೩) "**ಜನನೇಂದ್ರಿಯ**" ಇಂದ್ರಿಯಗಳ ಸಂಯೋಗ ಕರ್ಮದಿಂದ ಆನಂದವನ್ನುಂಟು ಮಾಡುತ್ತದೆ.

(೪) "**ಗುದವು**" ಮಲವಿಸರ್ಜನೆಯನ್ನು ಮಾಡುತ್ತದೆ

(೫) "**ಪಾದವು**" ಗಮನಾದಿ ಕರ್ಮಗಳನ್ನು ಮಾಡುತ್ತದೆ.

ಜ್ಞಾನೇಂದ್ರಿಯಗಳು

ತತ್ರಚಕ್ಷುಃ ಶ್ರೋತ್ರಂ ಘ್ರಾಣಂರಸನಂ ಸ್ಪರ್ಶನಮಿತಿಪಂಚೇಂದ್ರಿಯಾಣಿ ॥ (ಚರಕ॥ ಇಂ ಅ ೮)

(೧) "**ಚಕ್ಷುಃ**" ಚಷ್ಟೇ ರೂಪಂರೂಪವಂತಂಚಪ್ರಕಾಶಯತೀತಿ ಚಕ್ಷುಃ॥ ರೂಪವನ್ನೂ ರೂಪಉಳ್ಳದ್ದನ್ನೂ ಗ್ರಹಿಸಿ ವ್ಯಕ್ತಪಡಿಸುತ್ತದೆ.

ಆದ್ದರಿಂದ "**ಚಕ್ಷುಃ**" ಎಂದು ಹೇಳುತ್ತಾರೆ. ಎರಡೂ ನೇತ್ರ ಗೋಲಕ ಗಳಲ್ಲಿರುವ ರೂಪಗ್ರಾಹಕ ಚಕ್ಷುರಿಂದ್ರಿಯಗಳನ್ನು,ಅವಿಶೇಷ ಧರ್ಮವಿರುವದ ರಿಂದ ಒಂದೇ ಎಂದು ಗ್ರಹಿಸಿದ್ದಾರೆ ಇದರಂತೇ ಶ್ರೋತ್ರ, ಘ್ರಾಣಗಳನ್ನೂ ತಿಳಿಯಬೇಕು. ಸ್ವರೂಪದಿಂದ ಚಕ್ಷುರಾದಿಗಳು ಒಂದೇ ಇದ್ದರೂ ಪರಸ್ಪರ ಭಿನ್ನವಾಗಿಯೇ ಇರುತ್ತವೆ ಹಾಗಿಲ್ಲವಾದರೆ ಒಂದು ಕಣ್ಣು ಕುರುಡಾದರೆ, ಒಂದು ಕಿವಿ ಕೇಳಿಸದಿದ್ದರೆ, ಮತ್ತೊಂದು ಕಾಣದಂತೆ, ಕೇಳಿಸದಂತೆ ಆಗ ಬೇಕಾಗುತ್ತಿತ್ತು. ಹೀಗಾಗುವದಿಲ್ಲವಾದ್ದರಿಂದ ಭಿನ್ನವಾಗಿರುತ್ತವೆಂದು ಸ್ಪಷ್ಟವಾಗುತ್ತದೆ.

"**ಶ್ರೋತ್ರ**" "ಶೃಣೋತ್ಯನೇನೇತಿ ಶ್ರೋತ್ರಂ" ಶಬ್ದಗಳನ್ನು ಯಾವ ಇಂದ್ರಿಯಗಳಿಂದ ನಾವು ಕೇಳುತ್ತೇವೆಯೋ, ಅವುಗಳಿಗೆ ಶ್ರೋತ್ರವೆಂಬ ಹೆಸರು. ಶ್ರೋತ್ರವೆಂದರೆ ಶಬ್ದವನ್ನು ಗ್ರಹಿಸುವ ಕಿವಿಗಳು.

"**ಘ್ರಾಣ**" "ಜಿಘ್ರತ್ಯನೇನೇತಿ ಘ್ರಾಣಂ" ಯಾವ ಇಂದ್ರಿಯದಿಂದ ನಾವು ವಾಸನೆಯನ್ನು ತೆಗೆದುಕೊಳ್ಳುತ್ತೇವೆಯೋ, ಅದಕ್ಕೆ ಘ್ರಾಣವೆಂಬ ಹೆಸರು. ಘ್ರಾಣವೆಂದರೆ ವಾಸನೆಯನ್ನು ಗ್ರಹಿಸುವ ಇಂದ್ರಿಯ, ಮೂಗು ಆಗಿರುತ್ತದೆ.

"**ರಸನ**" ರಸತ್ಯಾಸ್ವಾದಯತ್ಯನೇನೇತಿರಸನಂ ॥ ಯಾವದರಿಂದ ಮಧುರಾದಿ ರಸವು ಗ್ರಹಿಸಲ್ಪಡುತ್ತದೆಯೋ ಅಥವಾ ಮಧುರಾದಿಗಳು ನಿರ್ಣ ಯಿಸಿ ಸ್ಪಷ್ಟಪಡಿಸಲ್ಪಡುತ್ತವೆಯೋ, ಇಲ್ಲವೇ ಮಧುರಾದಿ ಸ್ವೀಕಾರದಲ್ಲಿ ಪ್ರೇರಿಸುತ್ತ ಸ್ವೀಕಾರ ಮಾಡುತ್ತದೆಯೋ ಅದೇ ರಸನೇಂದ್ರಿಯವು. ರಸ ನೇಂದ್ರಿಯವೆಂದರೆ ನಾಲಿಗೆಯು.

"**ಸ್ಪರ್ಶನೇಂದ್ರಿಯ**" ಸ್ಪೃಶತ್ಯನೇನೇತಿ ಸ್ಪರ್ಶನಂ। ಯಾವಇಂದ್ರಿ ಯವು ಸ್ಪರ್ಶದಿಂದ ವಸ್ತುವಿನ ಸ್ಪರ್ಶಗ್ರಾಹ್ಯ ಜ್ಞಾನವನ್ನು ಮಾಡುತ್ತ ದೆಯೋ, ಅದಕ್ಕೆ ಸ್ಪರ್ಶೇಂದ್ರಿಯ ಅಥವಾ ಸ್ಪರ್ಶನವೆಂದು ಹೇಳುತ್ತಾರೆ. ಸ್ಪರ್ಶನೇಂದ್ರಿಯವೆಂದರೆ ಸ್ಪರ್ಶಜ್ಞಾನವನ್ನಾಡಿಕೊಡುವ ಇಂದ್ರಿಯವು. ಚರ್ಮ (ತ್ವಕ್) ವನ್ನು ಆಶ್ರಯಿಸಿರುತ್ತದೆ

ಪಂಚೇಂದ್ರಿಯದ್ರವ್ಯಗಳು

ಪಂಚೇಂದ್ರಿಯ ದ್ರವ್ಯಾಣಿ:—

ಖಂವಾಯುಜ್ಯೋತಿರಾಪೋಭೂರಿತಿ॥

೧ ಆಕಾಶ ೨ ವಾಯು ೩ ತೇಜಸ್ಸು ೪ ಜಲ ೫ ಪೃಥಿವಿ ಇವುಗಳು ಂಚೇಂದ್ರಿಯ ದ್ರವ್ಯಗಳು. ಯಾವ ಇಂದ್ರಿಯವು ಯಾವ ಪಂಚಭೂತಾ ಕ ದ್ರವ್ಯದ ಆಧಿಕ್ಯದಿಂದ ಉಂಟಾಗಿರುತ್ತದೆಯೋ, ಆ ಇಂದ್ರಿಯಕ್ಕೆ ಆ ೂತವು ದ್ರವ್ಯವಾಗಿರುತ್ತದೆ.

ಉದಾಹರಣೆ. — ತೇಜಸ್ಸಿನಾಧಿಕ್ಯವುಳ್ಳ ಚಕ್ಷುಂದ್ರಿಯಕ್ಕೆ ತೇಜಸ್ಸು ವ್ಯವಾಗಿರುತ್ತದೆ ಇದರಂತೆ ಉಳಿದವುಗಳನ್ನು ತಿಳಿಯಬೇಕು.

ಪಂಚೇಂದ್ರಿಯಗಳ ಆಶ್ರಯಗಳು

ಪಂಚೇಂದ್ರಿಯಾಧಿಷ್ಠಾನಾನಿ:-

ಅಕ್ಷಿಣೀ ಕರ್ಣೌ ನಾಶಿಕೆ ಜಿಹ್ವಾತ್ವಕ್ ಚೇತಿ ॥

೧ "ಚಕ್ಷುರಿಂದ್ರಿಯಕ್ಕೆ" ೧ ಕಣ್ಣುಗಳು ಆಶ್ರಯವಾಗಿರುತ್ತವೆ. ೂಪವನ್ನು ಗ್ರಹಿಸುವ ಇಂದ್ರಿಯವು ಕಣ್ಣೆಂದು ವಾಡಿಕೆಯಾಗಿರುತ್ತದೆ. ಣ್ಣುಗಳ ಕರೀ ಗುಡ್ಡೆಗಳಲ್ಲಿರುವ ತೇಜೋವಿಶಿಷ್ಟವಾದ ಇಂದ್ರಿಯವೇ, ೂಪವನ್ನು ಗ್ರಹಿಸುವದೇ ವಿನಾ ಕೇವಲ ಕಣ್ಣು ಗುಡ್ಡೆಗಳಲ್ಲ. ಯಾಕಂದರೆ ಷ್ಟೋ ಕುರುಡರಿಗೆ ಕಣ್ಣುಗುಡ್ಡೆಗಳಿದ್ದು ಕಣ್ಣು ಕಾಣಿಸುವದಿಲ್ಲವಾದ್ದರಿಂದ ೂಪಗ್ರಾಹಕ ಇಂದ್ರಿಯವು ಕಣ್ಣುಗುಡ್ಡೆಗಳಲ್ಲಿ ಇರುತ್ತದೆಯೇ ವಿನಾ, ಕಣ್ಣು ಡ್ಡೆಗಳೇ ರೂಪಗ್ರಾಹಕ ಇಂದ್ರಿಯವಲ್ಲೆಂದು ಸಿದ್ಧವಾಗುತ್ತದೆ ಇದನ್ನೇ ರ್ಕಸಂಗ್ರಹದಲ್ಲಿ ಹೀಗೆ ನಿರೂಪಿಸಿದ್ದಾರೆ. "ಇಂದ್ರಿಯಂರೂಪಗ್ರಾಹಕಂ ಕ್ಷುಃ ಕೃಷ್ಣತಾರಾಗ್ರವರ್ತಿ".

ತೇಜಸ್ಸಿನ ಸಂಬಂಧಿಯಾದ ಇಂದ್ರಿಯವು ರೂಪವನ್ನು ಗ್ರಹಿಸುವ ತಕ್ಷುಃ" ಅದು ಕಣ್ಣುಗುಡ್ಡೆಗಳ ಕಪ್ಪು ಭಾಗಗಳಲ್ಲಿರುವ "ಚಿಕ್ಕೆಗಳಲ್ಲಿ'

ಇರುತ್ತದೆ. ಇದರಂತೆ ಸ್ಥೂಲವಾಗಿ ಕಾಣುವ ನಾಸಿಕಾದಿಗಳು, ಘ್ರಾಣಾದಿ ಇಂದ್ರಿಯಗಳಿಗೆ ಆಶ್ರಯಸ್ಥಾನವಾಗಿರುತ್ತವೆ. ಇದರಂತೆ ಎಲ್ಲವುಗಳನ್ನೂ ತಿಳಿಯಬೇಕು.

"ಶ್ರೋತ್ರೇಂದ್ರಿಯಕ್ಕೆ" ಕಿವಿಗಳು ಆಶ್ರಯಸ್ಥಾನವಾಗಿರುತ್ತವೆ. ಆಕಾಶವು ಶರೀರ ಇಂದ್ರಿಯ ವಿಷಯಾದಿಗಳ ಅಭಾವವುಳ್ಳದ್ದರಿಂದ, ಶಬ್ದಗ್ರಾಹಿ ಇಂದ್ರಿಯವು ಆಕಾಶೀಯವಾಗಿರುವದು ಹೇಗೆಂದು ನಿರೂಪಿಸುತ್ತಾರೆ.

ಇಂದ್ರಿಯಂತುಭವೇತ್ ಶ್ರೋತ್ರಮೇಕಃ ಸನ್ನಪ್ಯುಪಾಧಿತಃ ॥
ನಿತ್ಯತ್ವೇನನಿರವಯವತ್ವೇನಚತತ್ರ ಶರೀರವಿಷಯಯೋರಭಾವಾದಿಂದ್ರಿಯಮಾಹ:– "ಶ್ರೋತ್ರೇಂದ್ರಿಯಂ" ಕರ್ಣವಿವರ ಸಂಜ್ಞಕಂನಭಃ ॥ ಕರ್ಣಶಷ್ಕುಲಿಭೇದಾತ್ ಶ್ರೋತ್ರಂ ಪುರುಷ ಭೇದೇನಭಿನ್ನಂ ಅನೇಕತ್ವಂ ಭವತಿ ॥ (ಮುಕ್ತಾವಲೀ)

ಆಕಾಶವು ಒಂದೇ ಇದ್ದರೂ ಉಪಾಧಿಯಿಂದ ಭಿನ್ನವಾದದ್ದಾಗಿ, ಶ್ರೋತ್ರೇಂದ್ರಿಯವೆಂದು ಹೇಳಲ್ಪಡುತ್ತದೆ. ಶ್ರೋತ್ರೇಂದ್ರಿಯವು (ಕರ್ಣವು) ಶಬ್ದವನ್ನು ಗ್ರಹಿಸಿ ಜ್ಞಾನ ಮಾಡಿಕೊಡುತ್ತದೆ.

ಶ್ರೋತ್ರೇಂದ್ರಿಯ ವಿಷಯದಲ್ಲಿ ವಿಶೇಷ ನಿರೂಪಣೆ:–

ಆಕಾಶವು ನಿತ್ಯವೂ ನಿರವಯವವೂ ಶರೀರ ವಿಷಯಾದಿ ರಹಿತವೂ ಇರುವದರಿಂದ, ಶಬ್ದೇಂದ್ರಿಯವೆಂದರೆ "ಆಕಾಶವೇ ಆಗಿರುತ್ತದೆ" ಕಿವಿ ರಂಧ್ರಗಳಲ್ಲಿರುತ್ತದೆಂಬ ಸಂಜ್ಞೆಯುಳ್ಳ ಆಕಾಶವು. ಅರ್ಥಾತ್ ಕರ್ಣ ರಂಧ್ರಗಳಲ್ಲಿಯ ಪೊಳ್ಳು ಭಾಗವೇ ಶ್ರೋತ್ರೇಂದ್ರಿಯವು ಮನುಷ್ಯ ಭೇದದಿಂದಲೂ ಬೇರೆಬೇರೆ ಕರ್ಣಗಳಿರುವದರಿಂದಲೂ ಅನೇಕವಾಗಿ, ಉಪಾಧಿ (ಆಶ್ರಯ, ಆವರಣ)ಭೇದವುಳ್ಳದ್ದಾಗಿರುತ್ತದೆ. ಆಕಾಶವೂ ಒಂದೇಇದ್ದರೂ ಮಠಾಕಾಶ ಘಟಾಕಾಶಗಳಂತೆ ಭಿನ್ನವೂ ಮತ್ತು ಶಬ್ದಗ್ರಾಹಕ ಇಂದ್ರಿಯ ಧರ್ಮಗಳುಳ್ಳದ್ದರಿಂದ, ಪ್ರತಿಯೊಂದು ದೇಹದಲ್ಲಿಯೂ ಇರುವದರಿಂದ ಅನೇಕವೂ ಆಗಿರುತ್ತದೆ ಇಲ್ಲಿ ಇನ್ನೊಂದು ಆಕ್ಷೇಪಬರುತ್ತದೆ. ಹ್ಯಾಗಂದರೆ:– ಆಕಾಶವೇ ಶಬ್ದಗ್ರಾಹಕ ಇಂದ್ರಿಯವಾದರೆ ಅದು ದುರ್ಬಲವೂ ಕೇಳದೇಇರುವದು

ಯಾಕಾಗಬೇಕು. ಆಕಾಶವೆಂದರೆ ಪೊಳ್ಳು ಭಾಗವು, ಏನೂ ಇರುವದಿಲ್ಲ ವೆಂದು ಹೇಳುತ್ತಾರೆ. ಅಂಥಾದ್ದರ ದೌರ್ಬಲ್ಯ ಹೇಗಾಗುತ್ತದೆ ಶಾಸ್ತ್ರದಲ್ಲಿ ಬಧಿರತ್ವವು, (ಕಿವುಡತನ) ಆವರಣ (ಉಪಾಧಿ) ದೌರ್ಬಲ್ಯದಿಂದಾಗುತ್ತ ದೆಂದು ಹೇಳಿದ್ದಾರೆ.

೩ "**ಘ್ರಾಣೇಂದ್ರಿಯಕ್ಕೆ**" ಮೂಗು ಆಶ್ರಯಸ್ಥಾನವಾಗಿರುತ್ತದೆ ಪೃಥ್ವಿಯ ಸಂಬಂಧಿಯಾದ ಘ್ರಾಣೇಂದ್ರಿಯವು ಗಂಧವನ್ನು ಗ್ರಹಿಸುತ್ತದೆ.

ಇಂದ್ರಿಯಂಗಂಧಗ್ರಾಹಕಂ ಘ್ರಾಣಂ ನಾಸಾಗ್ರವರ್ತಿ ॥

(ತರ್ಕ ಸಂಗ್ರಹ)

ಗಂಧವನ್ನು ಗ್ರಹಿಸುವ ಇಂದ್ರಿಯವು ಘ್ರಾಣೇಂದ್ರಿಯವು. ಅದು ನಾಸಿಕಾಗ್ರ ಭಾಗದಲ್ಲಿರುತ್ತದೆ.

೪ "**ರಸನೇಂದ್ರಿಯಕ್ಕೆ**" ನಾಲಿಗೆಯು ಆಶ್ರಯ ಸ್ಥಾನವಾಗಿರುತ್ತದೆ ಜಲಸಂಬಂಧಿಯಾದ ರಸನೇಂದ್ರಿಯವು ಮಧುರಾದಿ ರಸಗಳನ್ನು ಗ್ರಹಿಸಿ ಜ್ಞಾನ ಮಾಡಿಕೊಡುತ್ತದೆ.

"ಇಂದ್ರಿಯಂ ರಸಗ್ರಾಹಕಂ ರಸನಂ ಜಿಹ್ವಾಗ್ರವರ್ತಿ"

(ತರ್ಕ ಸಂಗ್ರಹ)

ರಸವನ್ನು ಗ್ರಹಿಸುವ ರಸನೇಂದ್ರಿಯವು ಜಿಹ್ವೆಯ (ನಾಲಿಗೆಯ) ಅಗ್ರ ಭಾಗದಲ್ಲಿರುತ್ತದೆ.

೫ "**ಸ್ಪರ್ಶನೇಂದ್ರಿಯ**" ಯಾವದರಿಂದ ನಮಗೆ ಸ್ಪರ್ಶಜ್ಞಾನವಾಗು ತ್ತದೆಯೋ ಆದಕ್ಕೆ ಸ್ಪರ್ಶನೇಂದ್ರಿಯವೆಂಬ ಹೆಸರು. ಅದು ಚರ್ಮದಲ್ಲಿರು ತ್ತದೆ ಅದು ಇರುವದರಿಂದಲೇ ಚರ್ಮಕ್ಕೆ ಯಾವದೇ ವಸ್ತುತಾಗಿದಕೂಡಲೆ ಸ್ಪರ್ಶದಿಂದ ಜ್ಞಾನವಾಗುತ್ತದೆ.

"ಇಂದ್ರಿಯಂ ಸ್ಪರ್ಶಗ್ರಾಹಕಂ ತ್ವಕ್‌ಸರ್ವಶರೀರವರ್ತಿ"

(ತರ್ಕ ಸಂಗ್ರಹ)

ಸ್ಪರ್ಶವನ್ನು ಗ್ರಹಿಸುವ ತ್ವಗಿಂದ್ರಿಯವು ಸಂಪೂರ್ಣ ಶರೀರವನ್ನು ವ್ಯಾಪಿಸಿರುತ್ತದೆ. ದೇಹದಲ್ಲಿಯ ಆವರಣರೂಪವಾದ ಹೊದಿಕೆಗೆ, ತ್ವಕ್, ಚರ್ಮವೆಂಬ ಹೆಸರು. ಆದ್ದರಿಂದ ಸ್ಪರ್ಶವನ್ನು ಗ್ರಹಿಸುವ ಇಂದ್ರಿಯವು ಚರ್ಮದಲ್ಲಿರುತ್ತದೆಂದು ಸ್ಪಷ್ಟಾರ್ಥವು.

ಪಂಚೇಂದ್ರಿಯವಿಷಯಗಳು

ಪಂಚೇಂದ್ರಿಯಾರ್ಥಾಃ; ಶಬ್ದಸ್ಪರ್ಶ ರೂಪ ರಸಗಂಧಾಃ ॥
(ಚರಕ॥ ಇಂ. ೮ ೮)

ಪಂಚೇಂದ್ರಿಯಗಳು ಗ್ರಹಿಸತಕ್ಕ ವಿಷಯಗಳಿಗೆ ಪಂಚೇಂದ್ರಿಯಾರ್ಥ ವೆಂಬ ಹೆಸರು. ಶಬ್ದಾದಿಗಳನ್ನು ಶ್ರೋತ್ರಾದಿ ಇಂದ್ರಿಯಗಳು ಗ್ರಹಿಸು ತ್ತವೆ. "**ಪಂಚ ಚ ತಾನೀಂದ್ರಿಯಾಣಿಚ, ಪಂಚೇಂದ್ರಿಯಾಣಿ; ತೈರ ರ್ಥಂತೆ ಇತಿ, ಪಂಚೇಂದ್ರಿಯಾರ್ಥಾಃ**" ಪಂಚೇಂದ್ರಿಯಗಳಿಂದ ಅಭಿ ಪ್ರೇತವಾಗಿ (ಇಷ್ಟವಾಗಿ) ಗ್ರಹಿಸಲ್ಪಡುತ್ತಿರುವದಕ್ಕೆ ಪಂಚೇಂದ್ರಿಯ ವಿಷಯ ವೆಂದನ್ನುತ್ತಾರೆ.

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಪಂಚೇಂದ್ರಿಯ(ಪಂಚೇಂ ದ್ರಿಯಾರ್ಥಾಃ) ವಿಷಯಗಳು.

ಇಂದ್ರಿಯಗಳ ಭೌತಿಕ ವಿಶೇಷ

ತತ್ರಾನುಮಾನಗಮ್ಯಾನಾಂ ಪಂಚಮಹಾಭೂತವಿಕಾರ ಸಮು ದಾಯಾತ್ಮಕಾನಾಮಪಿ ಸತಾಮಿಂದ್ರಿಯಾಣಾಂ ತೇಜಶ್ಚ ಕ್ಷುಷಿ, ಖಂಶ್ರೋತ್ರೇ, ಘ್ರಾಣೇಕ್ಷಿತಿಃ, ಆಪೋರಸನೆ, ಸ್ಪರ್ಶನೆ ಅನಿಲೋ ವಿಶೇಷೇಣೋಪಪದ್ಯತೆ, ತತ್ರಯದ್ಯದಾತ್ಮಕಮಿಂ ದ್ರಿಯಂ ವಿಶೇಷಾತ್ತತ್ತದಾತ್ಮಕಮೇವಾರ್ಥಮನುಗೃಹ್ಣಾತಿ, ತತ್ಸ್ವಭಾವಾತ್ ವಿಭುತ್ವಾಚ್ಚ ॥ (ಚರಕ ॥ ಇಂ. ೮)

ಇಂದ್ರಿಯಗಳ ವಿಷಯದಲ್ಲಿ ಪಂಚಮಹಾಭೂತಗಳ ವಿಕಾರಗಳ ಸಮು ದಾಯಾತ್ಮಕಗಳೆಂದು ಅನುಮಾನ ಸಿದ್ಧವಿದ್ದರೂ, ಆವಾವ ಇಂದ್ರಿಯಗಳ ಲ್ಲಿಯ ಆಧಿಕ್ಯವಾದ ಭೂತ ವಿಶೇಷಗಳಿಂದ, ಆವಾವ ಭೂತಾತ್ಮಕ ಇಂದ್ರಿಯ ಗಳೆಂದು ಹೇಳಲ್ಪಡುತ್ತವೆ. ಅದನ್ನು ಯಾವ ಇಂದ್ರಿಯಗಳಲ್ಲಿ ಯಾವ ಭೂತಾಧಿಕ್ಯವೆನ್ನುವದನ್ನು ಹೇಳುತ್ತಾರೆ.

ತೇಜಸ್ಸು ಕಣ್ಣಿನಲ್ಲಿ; ಆಕಾಶವು ಶ್ರೋತ್ರೇಂದ್ರಿಯದಲ್ಲಿ; ನಾಸಿಕದಲ್ಲಿ ಪೃಥಿವಿಯು; ಜಲವು ರಸನೇಂದ್ರಿಯದಲ್ಲಿ; ಸ್ಪರ್ಶೇಂದ್ರಿಯದಲ್ಲಿ ವಾಯುವು ಅಧಿಕವಾಗಿರುತ್ತವೆ. ಯಾವ ಭೂತಾತ್ಮಕವಾದ ಇಂದ್ರಿಯಗಳಿರುತ್ತವೆಯೋ ಅವು, ಆ ಭೂತಾತ್ಮಕವಾದ ವಿಷಯವನ್ನು ಸ್ವೀಕರಿಸುತ್ತವೆ. ಇಂದ್ರಿಯಗಳ ಸ್ವಭಾವ ಸಾಮರ್ಥ್ಯಗಳು ಹೀಗೆಯೇ ಇರುವದರಿಂದ. ತಾವು ಗ್ರಹಿಸತಕ್ಕವುಗಳನ್ನೇ ಗ್ರಹಿಸುತ್ತವೆ. ಚಕ್ಷುರಾದಿಗಳು ಸ್ವಕೀಯವಾದ ತೇಜಸ್ಸಾದಿಗಳನ್ನೇ ಗ್ರಹಿಸುತ್ತವೆಂದು ನಿಶ್ಚಿತಾರ್ಥವು.

ಪಂಚೇಂದ್ರಿಯಬುದ್ಧಿಗಳು

ಪಂಚೇಂದ್ರಿಯ ಬುದ್ಧಯಃ– ಚಕ್ಷುರ್ಬುದ್ಧ್ಯಾದಿಕಾಃ ತಾಃ ಪುನರಿಂದ್ರಿಯೇಂದ್ರಿಯಾರ್ಥಸತ್ವಾತ್ಮಸನ್ನಿಕರ್ಷಜಾಃ ಕ್ಷಣಿಕಾ, ನಿಶ್ಚಯಾತ್ಮಿಕಾಶ್ಚ, ಇತ್ಯೇತತ್ ಪಂಚಪಂಚಕಮ್
(ಚರಕ।। ಇಂ ೪ ೮)

ಚಕ್ಷುರಾದಿ ಇಂದ್ರಿಯಗಳಿಗೆ ಪ್ರತ್ಯೇಕವಾಗಿ ಬುದ್ಧಿಗಳಿರುತ್ತವೆ. ಅವಕ್ಕೆ ಪಂಚೇಂದ್ರಿಯ ಬುದ್ಧಿ, ಚಕ್ಷುರ್ಬುದ್ಧಿ, ಶ್ರೋತ್ರಬುದ್ಧಿ, ಘ್ರಾಣಬುದ್ಧಿ, ರಸನೇಂದ್ರಿಯ ಬುದ್ಧಿ, ಸ್ಪರ್ಶನೇಂದ್ರಿಯ ಬುದ್ಧಿ, ಮುಂತಾಗಿ ಹೇಳುತ್ತಾರೆ. ಪಂಚೇಂದ್ರಿಯ ಬುದ್ಧಿಗಳು, ಚಕ್ಷುರಾದಿ ಇಂದ್ರಿಯ, ಇಂದ್ರಿಯ ವಿಷಯ, ಮನಸ್ಸು, ಆತ್ಮ (ಜೀವ) ಇವುಗಳ ಸನ್ನಿಕರ್ಷ (ವಿಷಯ ಗ್ರಹಣದಲ್ಲಿಯ ಪರಸ್ಪರ ಸಾನ್ನಿಧ್ಯ) ದಿಂದ ಉತ್ಪನ್ನವಾಗುತ್ತವೆ. ಅವು ಕ್ಷಣಿಕವಾದವುಗಳು, ಆದ್ದರಿಂದ ಕೂಡಲೇ ನಾಶ ಹೊಂದುತ್ತವೆ. ನಿಶ್ಚಯಾತ್ಮಕವಾಗಿ ಯಾವದು ಏನೆಂಬುವದನ್ನು ನಿರ್ಣಯಿಸತಕ್ಕವು. ರೂಪಾದಿಗಳನ್ನು ಗ್ರಹಿಸಿ ನಿರ್ಣಯ ಮಾಡುತ್ತವೆಂದರ್ಥವು. ಹೀಗೆ ಐದು ಇಂದ್ರಿಯಗಳಲ್ಲಿ, ಐದು ಇಂದ್ರಿಯ ಬುದ್ಧಿಗಳಿರುತ್ತವೆ.

"ತೇನಚಕ್ಷುರ್ಬುದ್ಧ್ಯಾದಾವಾತ್ಮಾಮನಸಾಸಂಯುಜ್ಯತೆ,ಮನ ಇಂದ್ರಿಯೇಣ, ಇಂದ್ರಿಯಮರ್ಥೇನ, ತೇಷಾಂಸನ್ನಿಕರ್ಷಃ

ಸಂಬಂಧಃ, ಸಚಕ್ಷುಚಿತ್‌ಸಂಯೋಗಃ, ಕ್ವಚಿತ್ಸಮವಾಯಃ॥ ಅಸಾಧಾರಣೇನಕಾರಣೇನಇಂದ್ರಿಯೇಣಾನ್ಯಪದಿಷ್ಟಾಬುದ್ಧಯಃ ಇಂದ್ರಿಯಬುದ್ಧಯಃ ॥ ಚಕ್ಷುಷಾsಸಾಧಾರಣೇನಕಾರಣೇನ ಜನಿತಾಬುದ್ಧಿಶ್ಚಕ್ಷುರ್ಬುದ್ಧಿಃ ॥ ನಿಶ್ಚಯಾತ್ಮಿಕಾವಸ್ತುಸ್ವರೂಪವಿಚ್ಛೇದಾತ್ಮಿಕಾ, ಕ್ಷಣಿಕತ್ವೇsಪಿವಸ್ತುಪರಿಚ್ಛೇದಕತ್ವಂಪ್ರದೀಪಾರ್ಚಿರ್ಜ್ವಲನವದ್ಬುದ್ಧೀನಾಮವಿರುದ್ಧಮ್ ॥
(ಚರಕ ಟೀಕಾ)

ಅಸಾಧಾರಣಕಾರಣಾದಿಲಕ್ಷಣಂ

ಪಾರ ಮಾಡಲು ಯೋಗ್ಯವಾಗಲೆಂದು ಲಕ್ಷಣವನ್ನು ನಿರೂಪಿಸಿದ್ದೇನೆ ಶಾಸ್ತ್ರೀಯವಿರುವದರಿಂದ ಅರ್ಥವನ್ನಷ್ಟೇ ಹೇಳಿದ್ದೇನೆ. ಗುರುಮುಖದಿಂದ ವಿಶೇಷವಾಗಿತಿಳಿಯಿರಿ:–

೧ ಅಸಾಧಾರಣತ್ವಂಚ॥ ಕಾರ್ಯತ್ವಾತಿರಿಕ್ತಧರ್ಮಾವಚ್ಛಿನ್ನಕಾರ್ಯತಾನಿರೂಪಿತಕಾರಣತಾಶಾಲಿತ್ವಂ ॥

೨ ಕಾರಣತ್ವಂನಾಮ॥ ಕಾರ್ಯಂ ಪ್ರತಿನಿಯತತ್ವೇಸತಿಪೂರ್ವವೃತ್ತಿತ್ವಂ ॥

೩ ಸಮವಾಯಿಕಾರಣತ್ವಂ॥ ಸಮವಾಯಸಂಬಂಧಾವಚ್ಛಿನ್ನಕಾರ್ಯತಾನಿರೂಪಿತತಾದಾತ್ಮ್ಯ ಸಂಬಂಧಾವಚ್ಛಿನ್ನ ಕಾರಣತ್ವಂ ಸಮವಾಯಿಕಾರಣತ್ವಂ॥ ಯತ್ಸಮವೇತಂ ಕಾರ್ಯಮುತ್ಪದ್ಯತೆ ತತ್ಸಮವಾಯಿಕಾರಣಂ ॥ (ತರ್ಕ ಸಂಗ್ರಹ)

ರೂಪಾದಿಗಳನ್ನು ಗ್ರಹಿಸಿ ನಿಶ್ಚಯಿಸುವ ಚಕ್ಷುರಾದಿ ಇಂದ್ರಿಯ ಬುದ್ಧಿಗಳು, ಮನಸ್ಸು, ಚಕ್ಷುರಾದಿ ಇಂದ್ರಿಯಗ್ರಾಹ್ಯ (ಅರ್ಥ), ಇವುಗಳ ಸನ್ನಿಕರ್ಷ (ರೂಪಾದಿಗ್ರಹಣ ಯೋಗ್ಯಸಂಬಂಧ) ದಿಂದ ಉಂಟಾಗುತ್ತವೆ. ಮನೋಯುಕ್ತ ಇಂದ್ರಿಯಗಳಿಂದ ಗ್ರಹಿತವಾದದ್ದನ್ನು ಬುದ್ಧಿಯು ನಿಶ್ಚಯಿ

ಸುತ್ತದೆ. ಯಾಕಂದರೆ ಮನಸ್ಸಿನಲ್ಲಿ ನಿಶ್ಚಯಾತ್ಮಕ ಧರ್ಮವಿರುವದಿಲ್ಲ. ವಸ್ತುತಃ "**ಅಯಂಶ್ವೇತಃ, ಕೃಷ್ಣತ್ವಾದಿಧರ್ಮಭಿನ್ನತ್ವಾತ್**" ಎಂಬ ನಿರ್ಣಯವಾಗೇಆಗುವದರಿಂದ ಚಕ್ಷುರಾದಿ ಬುದ್ಧಿ ಇರುತ್ತವೆಯೆಂದು ಸ್ಪಷ್ಟವಾಗುತ್ತದೆ. ಶ್ವೇತತ್ವ ಗ್ರಹಣವು ಮನಇಂದ್ರಿಯಾರ್ಥ ಸನ್ನಿಕರ್ಷಕವಾದದ್ದೇ ಇರುತ್ತದೆ. ಆದರೆ ಇಲ್ಲಿ ನಿರ್ಣಯ ವಿಷಯದಲ್ಲಿ ಇದು ಶ್ವೇತತ್ವ ಧರ್ಮವು ಳ್ಳದ್ದು ನಿಶ್ಚಯ. ಯಾಕಂದರೆ, ಕೃಷ್ಣತ್ವಾದಿ ಧರ್ಮಕ್ಕಿಂತಲೂ ಭಿನ್ನವಾದ್ರಿಂದ" ಹೀಗೆ ವಸ್ತುರೂಪವಿಚ್ಛೇದಾತ್ಮಕನಿರ್ಣಯವುಆಗಿರುತ್ತದೆ. ಅದು ಬುದ್ಧಿಯ ಕಾರ್ಯವಿರುವದರಿಂದ ಬುದ್ಧಿಯು ನಿರ್ಣಯ ವಿಷಯದಲ್ಲಿರುತ್ತದೆಂದು ಸಿದ್ಧಮಾಡಿರುತ್ತಾರೆ. ಆ ಬುದ್ಧಿಯು ಸದಾ ಇದ್ದರೆ:- ಪ್ರತಿಯೊಂದು ಇಂದ್ರಿಯಗಳು ಅನವರತ ಗ್ರಹಿಸುತ್ತಲೂ, ಬುದ್ಧಿಗಳು ನಿರ್ಣಯಿಸುತ್ತಲೂ, ಇರಬೇಕಾಗುತ್ತಿತ್ತು. ಮನಸ್ಸು ಏಕಕಾಲದಲ್ಲಿ ಏಕೇಂದ್ರಿಯ ಗ್ರಾಹ್ಯವಿಷಯದಲ್ಲಿ ಕಾರ್ಯನಿಯತವಿರುವದರಿಂದ, ಅನೇಕ ಬುದ್ಧಿಗಳ ಸಕೃದಾಗಮನೋಪಯೋಗಿತ್ವ, ಮನಸ್ಸಿನ ಸರ್ವೇಂದ್ರಿಯ ಅಸಹಾಧಿಷ್ಠಾನತ್ವಗಳಿಂದಲೂ ಅನವಸ್ಥಾಸಂಭವವಾಗುತ್ತದೆಂದು ಅನಿಸಬಹುದು. ಆದರೆ ಹಾಗಾಗುವದಿಲ್ಲ. ಯಾಕಂದರೆ ಚಕ್ಷುರಾದಿ ಬುದ್ಧಿಗಳು ಯಾವಾಗಲೂ ನಿತ್ಯವಾಗಿರುವದಿಲ್ಲ. ರೂಪಾದಿ ಸ್ವೀಕಾರ ನಿರ್ಣಯದಲ್ಲಿ ಇಂದ್ರಿಯಾದಿ ಸನ್ನಿಕರ್ಷೋತ್ಪನ್ನವಾಗಿ, ನಿರ್ಣಯಿಸಿದ ನಂತರ ಇರುವದಿಲ್ಲ. ಆದ್ದರಿಂದ ಕ್ಷಣಿಕವಾದದ್ದೆಂದು ನಿರ್ಣಯಿಸಿದ್ದಾರೆ ಪ್ರದೀಪದಂತೆ ಅಥವಾ ತೇಜಸ್ಸಿನಂತೆ ಅರ್ಥ ಪ್ರಕಾಶ ವಿಷಯದಲ್ಲಿ ಪರಿಚ್ಛೇದಕ ವಿಭಾಗಾತ್ಮಕವಾಗಿ ಬುದ್ಧಿಯು ಕಾರ್ಯ ಮಾಡುವದರಿಂದ ಬುದ್ಧಿಗೆ ವಿರುದ್ಧವೇನಿಲ್ಲ ಹೀಗೆ ಸಮಂಜಸವಿರುವದರಿಂದ ಅನವಸ್ಥಾನಾದಿಗಳ ಸಂಭವವೇಇಲ್ಲ.

ಚಕ್ಷುರ್ಬುದ್ಧ್ಯಾದಿಗಳ ಸನ್ನಿಕರ್ಷಕ್ರಮ

ಚಕ್ಷುರ್ಬುದ್ಧ್ಯಾದಿಗಳ ಸನ್ನಿಕರ್ಷದಲ್ಲಿ, ಆತ್ಮವು (ಜೀವವು) ಮನಸ್ಸಿನಿಂದ ಯುಕ್ತವಾಗುತ್ತದೆ. ಮನಸ್ಸು ಇಂದ್ರಿಯದಿಂದಲೂ, ಇಂದ್ರಿಯವು, ಅರ್ಥ (ಗ್ರಾಹ್ಯ) ದಿಂದಲೂ ಯುಕ್ತವಾಗುವದು. ಹೀಗೆ ಆತ್ಮ ಮನ

ಇಂದ್ರಿಯಗಳ ಪರಸ್ಪರ ಸಂಬಂಧಕ್ಕೆ ಸನ್ನಿಕರ್ಷವೆಂದು ಹೆಸರು. ಈ ಸನ್ನಿಕರ್ಷದಿಂದ ರೂಪಾದಿಗಳ ನಿರ್ಣಯಪರ್ಯಂತ, ಇಂದ್ರಿಯ ಬುದ್ಧಿ ಉತ್ಪನ್ನವಾಗುತ್ತದೆ. ನಿರ್ಣಯ ಪರ್ಯಂತರವೇ ಇರುವದರಿಂದ ಅದಕ್ಕೆ ಕ್ಷಣಿಕವೆಂದು ಅನ್ನುತ್ತಾರೆ. ಕೆಲವು ಸಂದರ್ಭದಲ್ಲಿ ಸನ್ನಿಕರ್ಷ ಸಂಬಂಧಾತ್ಮಕವಾಗಿ ಇಂದ್ರಿಯ ಬುದ್ಧಿಗಳು ಇರುತ್ತವೆ. ಕೆಲವು ವೇಳೆ ಸಮವಾಯ ಸಂಬಂಧದಿಂದಿರುತ್ತವೆ. ರಸಗ್ರಾಹಕ ಜಿಹ್ವೆಯಿಂದ ರಸ ಸ್ವೀಕಾರ ವಿಷಯದಲ್ಲಿ ಇಂದ್ರಿಯು ಮನಸ್ಸುಗಳ ಸಂಯೋಗವು, ರಸನೇಂದ್ರಿಯ ಬುದ್ಧಿಯಲ್ಲಿ ಸಮವಾಯ ಸಂಬಂಧದಿಂದಿರುತ್ತವೆ

" **ಕಾರಣವೆಂದರೆ** " ಕಾರ್ಯಕ್ಕಿಂತ ಪೂರ್ವದಲ್ಲಿ ನಿಶ್ಚಯವಾಗಿ ಯಾವದಿರುತ್ತದೆಯೋ ಅದಕ್ಕೆ ಕಾರಣವೆಂದನ್ನುತ್ತಾರೆ.

" **ಅಸಾಧಾರಣ ಕಾರಣವೆಂದರೆ** " ಕಾರ್ಯದಿಂದ ಭಿನ್ನವಿದ್ದು ಕಾರ್ಯಬೋಧಕವಾದ ಕಾರಣವಾಗಿರುವದೇ, ಅಸಾಧಾರಣ ಕಾರಣವು. ಈ ಅಸಾಧಾರಣ ಕಾರಣವುಳ್ಳ ಇಂದ್ರಿಯದಿಂಗ (ಇಂದ್ರಿಯಗಳನ್ನುದ್ದೇಶಿಸಿ) ಉತ್ಪನ್ನವಾದ ಬುದ್ಧಿಯೇ ಇಂದ್ರಿಯ ಬುದ್ಧಿಯು. ಚಕ್ಷುಸ್ಸಿನಿಂದ ಅಸಾಧಾರಣ ಕಾರಣೋತ್ಪನ್ನವಾದ ಬುದ್ಧಿಯು **ಚಕ್ಷುರಿಂದ್ರಿಯ** ಬುದ್ಧಿಯು. ಅದು ವಸ್ತುವಿನ ರೂಪವನ್ನು ಗ್ರಹಿಸಿ ಇತರ ಭಿನ್ನತ್ವದಿಂದ (ಸ್ವರೂಪ ವಿಜ್ಞೇದನದಿಂದ) ನಿಶ್ಚಯ ನಿರ್ಣಯವನ್ನು ನಿರೂಪಿಸುತ್ತದೆ ಚಕ್ಷುರ್ಬುದ್ಧ್ಯಾದಿಗಳಂತೆ ಶ್ರೋತ್ರೇಂದ್ರಿಯ ಬುದ್ಧ್ಯಾದಿಗಳನ್ನು ಯೋಜಿಸಿಕೊಳ್ಳಬೇಕು

ಮನಃ ಪುರಸ್ಸರಾಣೀಂದ್ರಿಯಾಣ್ಯರ್ಥಗ್ರಹಣಸಮರ್ಥಾನಿ ಭವಂತಿ ॥ (ಚರಕ॥ ಇಂದ್ರಿಯ, ಸ್ಥಾ. ಅ. ೮)

ಮನಸ್ಸಿನಿಂದ ಯುಕ್ತವಾದ ಇಂದ್ರಿಯಗಳು ಗ್ರಾಹ್ಯ (ಅರ್ಥ)ವಾದದ್ದನ್ನು ಗ್ರಹಿಸಲು ಸಮರ್ಥವಾಗುತ್ತವೆ. ಅರ್ಥೋತ್ ರೂಪಾದಿಗಳನ್ನು ಗ್ರಹಿಸಲು ಚಕ್ಷುರಾದಿ ಇಂದ್ರಿಯಗಳಲ್ಲಿ ಮನೋಽಧಿಷ್ಠಾನವು ಅವಶ್ಯವೆಂದು ಸಿದ್ಧವಾಗುತ್ತದೆ. ಇದನ್ನೇ ಹಿಂದೆ "**ಮನಶ್ಚೇಷ್ಟಾಪ್ರತ್ಯಯಭೂತಮಿಂದ್ರಿಯಾಣಾಂ**" ಎಂದು ಹೇಳಿದ್ದಾರೆ.

ಮನೋಬುದ್ಧಿಯ ವಿವರಣೆಯು

ಚಕ್ಷುರಾದಿ ಇಂದ್ರಿಯ ಬುದ್ಧಿಗಳಂತೆ ಮನಸ್ಸಿಗೂ **"ಮನೋಬುದ್ಧಿ"** ಇರುತ್ತದೆ. **"ಮನೋಬುದ್ಧಿಯು"** ಇಂದ್ರಿಯ ಅರ್ಥಗಳ (ಗ್ರಾಹ್ಯ) ಸನ್ನಿಕರ್ಷವಿಲ್ಲದೇ ಸಹ ಉತ್ಪನ್ನವಾಗುತ್ತದೆ. ಅರ್ಥಾತ್ ಮನಸ್ಸಿನ ಚಿಂತ್ಯಾದಿ (ಅರ್ಥ)ಗಳ ನಿರ್ಣಯವು ಮನೋಬುದ್ಧಿಯಿಂದಾಗುತ್ತದೆ. ಮನಸ್ಸಿಗೆ ಗ್ರಾಹ್ಯ (ಅರ್ಥ) ವಿಷಯದಲ್ಲಿ ಚಕ್ಷುರಾದಿ ಇಂದ್ರಿಯಗಳ ಸಾನ್ನಿಧ್ಯದ ಅವಶ್ಯಕತೆಯಿಲ್ಲ. ಆದ್ದರಿಂದ ಮನಸ್ಸು ಸ್ವತಂತ್ರವೆಂದೂ, ಒಂದು ಕ್ಷಣದಲ್ಲಿ ಚಿಂತ್ಯ ವಿಷಯವನ್ನು ಎಷ್ಟೇ ದೂರವಿದ್ದರೂ ಗ್ರಹಿಸುವುದರಿಂದ; ವಿಷಯ ಸನ್ನಿಕರ್ಷಾಭಾವದಲ್ಲಿಯೂ ಮನಸ್ಸಿನ ವರ್ತನವಿರುವುದರಿಂದ **"ಅತೀಂದ್ರಿಯ"**ವೆಂದೂ ಅನ್ನುತ್ತಾರೆ. ಜೀವಕ್ಕೆ ಸೂಕ್ಷ್ಮವಾಗಿ ಆವರಿಸಿರುವುದರಿಂದ ಲಿಂಗಶರೀರವೆಂದೂ, ದೇಹಪಡೆಯಲು ಈ ಲಿಂಗಶರೀರ ಸ್ವರೂಪವಾದ ಮನಸ್ಸಿನ ಆವರಣೆಯೇ ಮುಖ್ಯವಾದ್ದರಿಂದ ಧಾರಿಯೆಂದೂ, ಅಥವಾ ದೇಹವು ಮನಸ್ಸಿನಿಂದಲೇ ಧರಿಸಲ್ಪಡುವದರಿಂದ ದೇಹಧಾರಣೆಯ ವಿಷಯದಲ್ಲಿ ಪ್ರಾಮುಖ್ಯವೆಂದು ಸಿದ್ಧವಾಗಿರುತ್ತದೆಂದೂ, ನಿರ್ಣಯಿಸಿದ್ದಾರೆ. ಸುಖ ದುಃಖಾದಿಗಳು ಅತೀಂದ್ರಿಯವಾಗಿರುತ್ತವೆ. ಅವುಗಳನ್ನು ಮನಸ್ಸು ಗ್ರಹಿಸಿ ಸ್ವೀಕಾರಮಾಡಿಸುತ್ತದಾದ್ದರಿಂದಅತೀಂದ್ರಿಯವೆಂದು ಸಿದ್ಧವಾಗಿದೆ ಮನೋಗ್ರಹೀತವಾಗಿರುವದರ ನಿರ್ಣಯವಾಗುವದರಿಂದ, ಮನೋಬುದ್ಧಿಯು ಇರುತ್ತದೆಂದು ಹೇಳಿದ್ದಾರೆ. ಮನಸ್ಸು ಮನೋಬುದ್ಧಿಗಳಿಗೆ ಮನೋಽರ್ಥದ ಸಮಯೋಗ, ಅತಿಯೋಗ, ಹೀನಯೋಗ, ಮಿಥ್ಯಾಯೋಗಗಳು, ಯೋಗ್ಯ ಸಮಾನವಾದ ಪ್ರಕೃತಿ ಸ್ಥಿತಿಯಲ್ಲಿಡಲಿಕ್ಕೂ, ವಿಕೃತಿ ಸ್ಥಿತಿ ಹೊಂದಿಸಲಿಕ್ಕೂ ಕಾರಣವಾಗುತ್ತವೆ. ಸಮಾನ ಸ್ಥಿತಿಯಿಂದ ಆರೋಗ್ಯವೂ ವಿಕೃತಿಯಿಂದ ಅನಾರೋಗ್ಯವೂ ಪ್ರಾಪ್ತವಾಗುವದರಿಂದ, ಮಾನಸಿಕ ಸ್ವಾಸ್ಥ್ಯ ಮಾನಸಿಕ ರೋಗಗಳ ವಿಷಯದಲ್ಲಿ ಅವಶ್ಯವಿರುವದರಿಂದ ಪ್ರತಿಪಾದಿಸಿದ್ದಾರೆ. ರೋಗ ವಿಭಾಗದಲ್ಲಿ ಮನಸ್ಸನ್ನಾಶ್ರಯಿಸಿ ಉತ್ಪನ್ನವಾಗುವ ರೋಗಗಳಿರುವದರಿಂದ ಮನಸ್ಸನ್ನು ಆಮೂಲಾಗ್ರವಾಗಿ ತಿಳಿಯುವದು ಅವಶ್ಯವೆಂದು, ರೋಗಾಧಿಷ್ಠಾನ ವಿಷಯದಲ್ಲಿ ವಿವರಿಸಿದ್ದಾರೆ. ಮನಸ್ಸನ್ನು ಆಶ್ರಯಿಸಿಉತ್ಪನ್ನವಾಗುವ

ರೋಗಗಳಿಗೆ "ಮಾನಸಾಃ" ಮಾನಸಿಕಾಃ, ಮನೋಽಧಿಷ್ಠಾನಾಃ, ಮುಂತಾಗಿ ಹೇಳಿದ್ದಾರೆ ಮಾನಸಿಕ ರೋಗಗಳಿಗೆ ಕಾಮಕ್ರೋಧಲೋಭಾದಿಗಳು, ಉತ್ಪನ್ನವಾಗಲಿಕ್ಕೆ ಕಾರಣವು. ಮಾನಸಿಕ ರೋಗಿಯ ರೋಗವನ್ನು ದೈಹಿಕ ರೋಗ ಚಿಕಿತ್ಸೆಯಂತೆ ನಡೆಸಿದರೆ, ರೋಗನಿವಾರಣೆಯಾಗಲಾರದು. ಮೂಲ ಕಾರಣವನ್ನು ತಿಳಿದುಮನೋಽಪಘಾತವಾಗಿದ್ದರೆ ಪ್ರತಿಕ್ರಿಯೆಯನ್ನು ಯೋಜಿಸಿದರೆ, ರೋಗ ನಿವಾರಣೆಯಾಗಿದ್ದರ ಉದಾಹರಣೆ ಅನೇಕ ಇವೆ. ಇದನ್ನು ವಿವರಿಸಲಿಕ್ಕಾಗಿಯೇ ಆಯುರ್ವೇದದಲ್ಲಿ ಮನೋ ವಿಷಯವನ್ನು ವಿಶದವಾಗಿ ವಿವರಿಸಿದ್ದಾರೆ. ಮನಸ್ಸಿಗೆ ಸ್ವಾಧೀನವಾದ ಹೃದಯ ವಿಷಯದಲ್ಲಿ ಹಿಂದೆ ವಿವರಿಸಿದಂತೆ, ಮನಸ್ಸಿನ ಆಘಾತವು ಹೃದಯದ ಮೇಲೆ ಪರಿಣಾಮವಾಗುವದು.

ಮನಸಸ್ತು ಚಿಂತ್ಯಮರ್ಥಃ॥ ತತ್ರಮನಸೋಮನೋಬುದ್ಧೀಶ್ಚ ತವಿಮನಸಮಾನಾತಿಹೀನಮಿಥ್ಯಾಯೋಗಾಃಪ್ರಕೃತಿವಿಕೃತಿಹೇತವೋಭವಂತಿ॥ ಇಂದ್ರಿಯನಿರಪೇಕ್ಷಂಮನೋಯದ್ಗೃಹ್ಣಾತಿತಚ್ಚಿಂತ್ಯಂ॥ ಯದಿವಾ,ಇಂದ್ರಿಯಗೃಹೀತಮೇವಾರ್ಥಂಯತ್ಪುನರಿಂದ್ರಿಯನಿರಪೇಕ್ಷಂ ಮನೋಗೃಹ್ಣಾತಿತಚ್ಚಿಂತ್ಯಮ್॥
(ಚರಕ॥ ಇಂ, ಸ್ಥಾ, ಅ ೮)

ಮನಸ್ಸಿಗೆ ಗ್ರಾಹ್ಯವಾದದ್ದು (ಚಿಂತ್ಯವಾಗಿರುವದು) ಅರ್ಥವು. ಚಕ್ಷುರಾದಿ ಇಂದ್ರಿಯ ನಿರಪೇಕ್ಷೆಯಿಂದ ಮನಸ್ಸುಯಾವದನ್ನು ಗ್ರಹಿಸುತ್ತದೆಯೋ ಅದು ಚಿಂತ್ಯವು. ಅಥವಾ ಮೊದಲು ಇಂದ್ರಿಯ ಸಾನ್ನಿಧ್ಯದಿಂದ ಗ್ರಹಿಸಿರುವದನ್ನು, ತಿರುಗಿ ಇಂದ್ರಿಯನಿರಪೇಕ್ಷೆಯಿಂದ ಮನಸ್ಸು ಸ್ವಯಂ ಗ್ರಹಿಸುವದು ಸಹಚಿಂತ್ಯವು. ಅರ್ಥಾತ್ ಮನಸ್ಸು ಮನೋ ವಿಷಯವನ್ನು ಸ್ವತಂತ್ರವಾಗಿ ಗ್ರಹಿಸುತ್ತದೆಂದು ನಿಶ್ಚಯಾರ್ಥವು. ಮನಸ್ಸಿನಿಂದ ಗ್ರಹೀತವಾದ ಅರ್ಥದ ನಿರ್ಣಯವು, ಮನೋಬುದ್ಧಿಯಿಂದ ಮಾಡಲ್ಪಡುತ್ತದೆ. ಮನೋಗ್ರಹೀತದ ಅರ್ಥ ಸಮಹೀನ ಅತಿಮಿಥ್ಯಾ ಯೋಗಗಳು, ಮನಸ್ಸು ಮತ್ತು ಮನೋಬುದ್ಧಿಯು ಯೋಗ್ಯ ಇರಲಿಕ್ಕೂ, ವಿಕೃತಿ ಹೊಂದಲಿಕ್ಕೂ ಕಾರಣವಾಗುತ್ತವೆ. ಇದರಿಂದ ಪಂಚೇಂದ್ರಿಯ ಬುದ್ಧಿಗಳಂತೇ ಮನೋಬುದ್ಧಿಯು ಇರುತ್ತದೆಂದು ನಿಶ್ಚಯವಾಗುತ್ತದೆ

ಇಂದ್ರಿಯ ಬುದ್ಧಿಗಳ ವಿವರಣೆಯು

ಯೋಯದಿಂದ್ರಿಯ ಮಾಶ್ರಿತ್ಯ ಜಂತೋರ್ಬುದ್ಧಿಃ ಪ್ರವರ್ತತೆ॥
ಯಾತಿಸಾತೀನ ನಿರ್ದೇಶಂ ಮನಸಾಚ ಮನೋಭವಾ ॥೩೨॥
ಭೇದಾತ್ ಕಾರ್ಯೇಂದ್ರಿಯಾರ್ಥಾನಾಂ ಬಹ್ವ್ಯೋವೈಬುದ್ಧ
ಯಃಸ್ಮೃತಾಃ ॥ ಆತ್ಮೇಂದ್ರಿಯ ಮನೋರ್ಥಾನಾಂ ಏಕೈಕಾ
ಸನ್ನಿಕರ್ಷಜಾ ॥ (ಚರಕ॥ ಶಾರೀರ॥ ೨ ೧ ಶ್ಲೊ ೩೩)

ಯಾವ ಇಂದ್ರಿಯವನ್ನು ಆಶ್ರಯಿಸಿ ಬುದ್ಧಿಯು ಉತ್ಪನ್ನವಾಗುತ್ತದೆಯೋ, ಆ ಬುದ್ಧಿಯು ಆ ಇಂದ್ರಿಯ ಹೆಸರಿನಿಂದ ನಿರ್ದೇಶ ಮಾಡಿ ಹೇಳಲ್ಪಟ್ಟಿರುತ್ತದೆ ಚಕ್ಷುರಾದಿ ಬುದ್ಧಿಗಳು ಆಶ್ರಯೇಂದ್ರಿಯ ಹೆಸರಿನಿಂದಲೇ ಹೇಳಲ್ಪಟ್ಟಿರುತ್ತವೆ ಚಕ್ಷುರ್ಬುದ್ಧಿಃ ಶ್ರೋತ್ರಬುದ್ಧಿಃರಸನಬುದ್ಧಿಃ ಘ್ರಾಣೇಂದ್ರಿಯ ಬುದ್ಧಿಃ ಸ್ಪರ್ಶೇಂದ್ರಿಯ ಬುದ್ಧಿಃ ಹೀಗೆ ಇಂದ್ರಿಯ ಬುದ್ಧಿಗಳು ಐದು ಇರುತ್ತವೆ. ಮನಸ್ಸಿನಿಂದುತ್ಪನ್ನವಾದ ಬುದ್ಧಿಯು ಮನೋಬುದ್ಧಿಯು. ಗ್ರಾಹ್ಯ (ಕಾರ್ಯ) ಇಂದ್ರಿಯಗಳ ಭೇದದಿಂದ, ಬಹು ಬುದ್ಧಿಗಳಾಗುತ್ತವೆ·

ಇಂದ್ರಿಯ, ಅರ್ಥ, (ಗ್ರಾಹ್ಯ) ಕಾರ್ಯ ಇವುಗಳ ಭೇದಗಳಿಂದ, ಬಹು ಬುದ್ಧಿಗಳಿರುತ್ತವೆಂದು ಹೇಳಲ್ಪಟ್ಟಿರುತ್ತವೆ. ಆತ್ಮ, ಇಂದ್ರಿಯ, ಮನಸ್ಸು, ಅರ್ಥಗಳ ಸನ್ನಿಕರ್ಷದಿಂದ, ಒಂದೊಂದು ಇಂದ್ರಿಯಕ್ಕೆ ಒಂದೊಂದು ಬುದ್ಧಿಯುತ್ಪನ್ನವಾಗುತ್ತದೆ. ಇಲ್ಲಿ ಕಾರ್ಯವೆಂದರೆ ಇಂದ್ರಿಯ ಗ್ರಾಹ್ಯ ಅರ್ಥವೆಂದು ತಿಳಿಯಬಾರದು. ಸುಖ ದುಃಖಾದಿ ಪ್ರಭೇದಗಳಿಂದ ಅಥವಾ ಸುಖಾದಿ ಸಮುದಾಯಾತ್ಮಕದಲ್ಲಿಯ ಕಾರ್ಯದಿಂದ, ಕಾರಣವಾದ ಬುದ್ಧಿಯೂ ಅನೇಕವಾಗುತ್ತವೆ. ದುಃಖದಲ್ಲಿಯ ದ್ವೇಷಾತ್ಮಕವಾಗಿ ಇಷ್ಟವಲ್ಲವೆಂಬುವ ಬುದ್ಧಿಯೂ, ಸುಖದಲ್ಲಿ ಇನ್ನೂ ಬೇಕೆಂಬಬುದ್ಧಿಯೂ ಉತ್ಪನ್ನವಾಗುವದರಿಂದ; ಬುದ್ಧಿ ಬೇಧಗಳೂ ಸುಖದುಃಖಾನುಸಾರ ಭಿನ್ನವಾಗಿರುತ್ತವೆಂದು ಸೂಚಿತವಾಗುತ್ತವೆ. ಕಾರ್ಯವೆಂದರೆ ಸುಖ ದುಃಖಾದಿ ಅನೇಕ ಪ್ರಭೇದವುಳ್ಳವುಗಳು. ಇವಕ್ಕೆ ಕಾರಣವಾದ ಬುದ್ಧಿಗಳು ಬಹಳವಿರುವದ

ರಿಂದ, ಬಹು ಬುದ್ಧಿಗಳಿರುತ್ತವೆಂದು ಹೇಳುತ್ತಾರೆ. ಚಕ್ಷುರಾದೀಂದ್ರಿಯ ಬುದ್ಧಿಗಳು (೫), ಮನೋಬುದ್ಧಿ (೧), ಸುಖ ದುಃಖಾದಿ ಪ್ರಭೇದದಿಂದ ಮನೋಬುದ್ಧಿಯು ಅನೇಕ ಪ್ರಭೇದವುಳ್ಳದ್ದಾಗುತ್ತದೆ ಮುಖ್ಯವಾಗಿ (೬) ಬುದ್ಧಿಗಳೆಂದು ಸಾಮಾನ್ಯ ನಿರ್ವಚನ ಮಾಡಿದ್ದಾರೆ.

ಮನೋ ಮನೋಽರ್ಥೋಬುದ್ಧಿರಾತ್ಮಾ ಚೇತ್ಯಧ್ಯಾತ್ಮದ್ರವ್ಯಗುಣಸಂಗ್ರಹಃಶುಭಾಶುಭಪ್ರವೃತ್ತಿನಿವೃತ್ತಿಹೇತುಶ್ಚ,ದ್ರವ್ಯಾಶ್ರಿತಂ ಕರ್ಮ ಯದುಚ್ಯತೇ ಸಾಕ್ರಿಯೇತಿ ॥
(ಚರಕ॥ ಇಂ. ಅ ೮)

ಮನಸ್ಸು, ಮನೋಽರ್ಥ (ಸುಖಾದಿಗಳು ಮತ್ತು ಗ್ರಾಹ್ಯವಾದವುಗಳು), ಮನೋಬುದ್ಧಿ (ಮನೋಗ್ರಹಿತವಾದದ್ದನ್ನು ನಿರ್ಣಯಿಸುವದು), ಆತ್ಮಾ (ಜೀವನು), ಇವುಗಳು ಆತ್ಮವನ್ನುದ್ದೇಶಿಸಿ ವಿಶದೀಕರಿಸಿದ ದ್ರವ್ಯ ಗುಣಗಳು ಚಕ್ಷುರಾದೀಂದ್ರಿಯ ಬುದ್ಧಿ, ಮನೋಬುದ್ಧಿಗಳು, ಗುಣಗಳು, ಉಳಿದವು ದ್ರವ್ಯಗಳು ಹೀಗೆ ಆತ್ಮನ ಸಂಬಂಧಿಯಾದ ದ್ರವ್ಯಗುಣ ಸಂಗ್ರಹವನ್ನು ಹೇಳಿದ್ದಾರೆ

" ಆತ್ಮಾನಮ್ ಅಧಿಕೃತ್ಯೇತಿ ಅಧ್ಯಾತ್ಮಂ " ಆತ್ಮನಿಗೆ ದ್ರವ್ಯ ಗುಣಾದಿ ಸಂಗ್ರಹಗಳು, ಉಪಕಾರಕ ಉಪಕಾರಕವಾದವುಗಳೂ ಆಗುತ್ತವೆ. ಈ ಸಂಗ್ರಹಗಳು ಶುಭವಾದದ್ದು ಧರ್ಮ ಸುಖಕ್ಕೆ ಕಾರಣವಾದರೆ, ಅಶುಭ ಅಧರ್ಮ ರೂಪ ದುಃಖ ನಿವೃತ್ತಿಯಾಗುತ್ತದೆ ಆದ್ದರಿಂದ ಶುಭಾಶುಭವಾದ ಪ್ರವೃತ್ತಿ ನಿವೃತ್ತಿಗಳಿಗೆ ಕಾರಣವಾದದ್ದು, ಅಧ್ಯಾತ್ಮ ದ್ರವ್ಯಗುಣ ಸಂಗ್ರಹವೆಂದು ಹೇಳಿದ್ದಾರೆ. ಈಗ ಹೇಳಿದ ಶುಭವಾಗಿರುವ ದ್ರವ್ಯಗುಣ ಸಂಗ್ರಹಗಳು ಮೋಕ್ಷಕ್ಕೂ, ತದ್ಭಿನ್ನವಾದ ಅಧರ್ಮವು ದುಃಖವುಳ್ಳ ಸಂಸಾರಕ್ಕೆ ಕಾರಣವಾಗುತ್ತದೆ. ಆದ್ದರಿಂದ ದ್ರವ್ಯಾಶ್ರಿತವಾದ ಯಾವ ಕರ್ಮ ವಿದೆಯೋ, ಅದಕ್ಕೆ ಕ್ರಿಯಾ ಎಂದು ಹೇಳಿದ್ದಾರೆ. ಸುಖ ಪ್ರಾಪ್ತಿಯನ್ನು ಧರ್ಮದಿಂದ ಪಡೆಯುವಕ್ರಿಯಾ, ಅದರಂತೆ ದುಃಖಕ್ಕೆ ಕಾರಣವಾದ ಅಧರ್ಮವನ್ನು ನಿವಾರಿಸುವ ಕ್ರಿಯಾ ಇವು, ಯೋಗ್ಯವಾದ ದ್ರವ್ಯ ಕ್ರಿಯೆಯು ಇರ

ತ್ತವೆ. ಇಲ್ಲಿ ಕೇವಲ ಕರ್ಮ ಪದವನ್ನಿಟ್ಟರೆ ವಮನಾದಿಗಳಲ್ಲಿ ಅತಿ ವ್ಯಾಪ್ತಿ ಸಂಭವವಾಗುವದರಿಂದ, ದ್ರವ್ಯವೆನ್ನುವ ಪದವನ್ನು ಇಟ್ಟಿದ್ದಾರೆ ಕರ್ಮ ವೆಂದರೆ "ಧರ್ಮಾಧರ್ಮೌ ಜನ್ಮಾಂತರ ಕರ್ಮವಾಚಿನೌ" ಎಂದು ಹೇಳಿರುವದರಿಂದ ಧರ್ಮಾಧರ್ಮಗಳಲ್ಲಿ ಅತಿವ್ಯಾಪ್ತಿ ಸಮಾವೇಶವಾಗುವದ ರಿಂದ, ಕ್ರಿಯಾ ಎಂಬ ಪದವನ್ನಿಟ್ಟಿದ್ದಾರೆ. ಇದು ಕೇವಲ ಶಾಸ್ತ್ರೀಯ ಪದ ವಾದ್ದರಿಂದ ಶಾಸ್ತ್ರಾಭ್ಯಾಸ ಮಾಡಿದವರೇ, ಅನಯವಾರ್ಥ ಮಾಡಬೇಕು. ಅಭಿಪ್ರಾಯಾರ್ಥವು ಸರ್ವರಿಗೂ ಗೋಚರಿಸುವಂತೆಯೇ ಇದೆ.

ವಿವರಣೆ

ದ್ರವ್ಯಾಶ್ರಿತ ಕ್ರಿಯೆಯ ಹೀನಾತಿಯೋಗ ಮಿಥ್ಯಾ ಯೋಗಗಳಿಂದ ವಿಕೃತಿಯೂ, ಸಮಯೋಗದಿಂದ ಪ್ರಕೃತಿಯೂ, ಎಂದು ದರ್ಶಿಸಿದ್ದಾರೆ. ಇಲ್ಲಿ ಅಧ್ಯಾತ್ಮದ್ರವ್ಯ ಗುಣಗಳಸಂಗ್ರಹವನ್ನು ಹೇಳಿರುವದರಿಂದ, ಆ ಸಂಗ್ರಹದಲ್ಲಿ ವಿಕೃತಿಯಾಗಲಿಕ್ಕೆ ಕಾರಣವೆಂದು ತಿಳಿಯಬೇಕು.

ಹೀನಾತಿಯೋಗಾದಿಗಳ ವಿವರಣೆಯು

ತದರ್ಥಾತಿ ಯೋಗಾಯೋಗಮಿಥ್ಯಾಯೋಗಾತ್ ಸಮನಸ್ಯ ಮಿಂದ್ರಿಯಂವಿಕೃತಿನಾಪದ್ಯಮಾನಂ ಯಥಾಸ್ವಂಬುಧ್ಯಾಪ ಘಾತಾಯಸಂಪದ್ಯತೆ, ಸಮಯೋಗಾತ್ಪುನಃ ಪ್ರಕೃತಿಮಾ ಪದ್ಯಮಾನಂ ಯಥಾಸ್ವಂ ಬುದ್ಧಿಮಾಪ್ಯಾಯಯತಿ ॥
(ಇಂದ್ರಿಯ॥ ಸ್ಥಾ. ಅ ೮)

"**ತದರ್ಥ**"ವೆಂದರೇ ಇಂದ್ರಿಯಾರ್ಥವಾದ ರೂಪಾದಿಗಳು. "**ಅತಿ ಯೋಗ**" ರೂಪಾದಿಗಳನ್ನು ಅತಿಶಯವಾಗಿ ನೋಡುತ್ತಿರುವದು. "**ಅಯೋಗ**" ಸ್ವಲ್ಪಪ್ರಮಾಣದಿಂದ ಅಥವಾ ಅರೆಗಣ್ಣಿನಿಂದನೋಡುವದು, ಹೀನ ಪ್ರಮಾಣರೂಪಾದಿಗಳನ್ನು ಗ್ರಹಿಸುವದು. ಇಲ್ಲವೇ ಎಲ್ಲಿಡೆಯಲ್ಲಿಯೂ ರೂಪಾದಿ ದರ್ಶನವಾಗದೇ ಇರುವದಕ್ಕೂ, ಈ ಯೋಗವೆಂದು ಹೇಳುತ್ತಾರೆ "**ಅಯೋಗ**" ಹೀನಯೋಗ, ಯೋಗವಿಲ್ಲದೇ ಇರುವಿಕೆಗಳು. "**ಮಿಥ್ಯಾ**

ಯೋಗ" ವಿಕೃತ ಬೀಭತ್ಸ ಭಯಾನಕ ದೃಶ್ಯಾದಿಗಳನ್ನು ನೋಡುವದು, ಅತಿಯೋಗಾದಿಗಳಿಂದ ಮನೋಯುಕ್ತ ಚಕ್ಷುರಾದಿ ಇಂದ್ರಿಯಗಳು; ವಿಕೃತಿಯನ್ನು ಹೊಂದತಕ್ಕುವುಗಳಾಗಿ, ತಮ್ಮ ಬುದ್ಧಿಗಳಿಗೆ ವೇದನೆಯನ್ನುಂಟು ಮಾಡುತ್ತವೆ. ಹೀಗೆ ಹೀನಾದಿಯೋಗಗಳಿಂದಾಗುವ ವಿಕೃತಿಯನ್ನು ದರ್ಶಿಸುತ್ತಾರೆ. ಪುನಃ "**ಸಮಯೋಗದಿಂದ**" ಇಷ್ಟವಾದ ಯೋಗ್ಯ ವರ್ತನೆಯಿಂದ ಪೂರ್ವದ ಪ್ರಕೃತಿ ಸ್ಥಿತಿಯನ್ನು ಹೊಂದಿದ ಸಮನಸ್ಕ ಇಂದ್ರಿಯಗಳು, ಸ್ವಕೀಯೆ ಬುದ್ಧಿಗಳನ್ನು ಸಾಮ್ಯ ಸ್ಥಿತಿಯಲ್ಲಿರುವಂತೆ ಮಾಡುತ್ತವೆ. ಅಥವಾ ಯೋಗ್ಯಕರ್ತವ್ಯವನ್ನು ಬುದ್ಧಿಯುನಿರ್ವಹಿಸುವಂತೇಮಾಡುತ್ತವೆಂಬರ್ಥವು ಮಾನಸಿಕ ರೋಗಗಳು ಮನಸ್ಸು ಇಂದ್ರಿಯಗಳಿಗೆ ಉಪತಾಪಕವಾಗಿ ದೇಹವನ್ನೂ ಆಶ್ರಯಿಸುತ್ತವೆ. ಆದ್ದರಿಂದ ಶಾರೀರಿಕವಾದ "**ವಾತ ಪಿತ್ತ ಕಫ ಶೋಣಿತ ಸಂನಿಪಾತ ವೈಷಮ್ಯನಿಮಿತ್ತ**"ದಿಂದುತ್ಪನ್ನವಾದ ರೋಗಗಳೋ? ಮಾನಸಿಕವೋ? ಎಂದು ತಿಳಿಯುವದು ದುರ್ಜ್ಞೇಯವಾದ ವಿಷಯವಾದ್ದರಿಂದ ಅವುಗಳ ತಿಳುವಳಿಕೆಗಾಗಿ, ವಿಶದವಾಗಿ ಮನೋಧಿಷ್ಠಿತ ಇಂದ್ರಿಯ ಬುದ್ಧ್ಯಾದಿಗಳನ್ನು ವಿವರಿಸಿದ್ದಾರೆ. ವಿಕೃತಿಗೆ ಕಾರಣವಾದ ಹೀನಾತಿಯೋಗಗಳನ್ನೂ, ಪ್ರಕೃತಿಗೆ ಕಾರಣವಾದ ಸಮಯೋಗವನ್ನೂ ದರ್ಶಿಸಿದ್ದಾರೆ. ಶಾರೀರದಲ್ಲಿಯ ಈ ಲಕ್ಷಣದಿಂದ ಮಾನಸಿಕ ರೋಗ ಚಿಕಿತ್ಸೆಗೆ ಅನುಕೂಲವಾಗುತ್ತದೆ.

ಮನಸ್ಸಿನ ಸ್ಥಿತಿ

ಅಚೇತನಂ ಕ್ರಿಯಾವಚ್ಚ ಮನಶ್ಚೇತಯಿತಾಪರಃ ॥
ಯುಕ್ತಸ್ಯಮನಸಾತಸ್ಯನಿರ್ದಿಶ್ಯಂತೆವಿಭೋಃಕ್ರಿಯಾಃ ॥೭೫॥
ಚೇತನಾವಾನ್ ಯತಶ್ಚಾತ್ಮಾತತಃ ಕರ್ತಾನಿರುಚ್ಯತೆ ॥
ಅಚೇತನತ್ವಾಚ್ಚ ಮನಃ ಕ್ರಿಯಾವದಪಿನೋಚ್ಯತೆ ॥
(ಚರಕ॥ ಶಾರೀರ॥ ಅ ೧)

ಮನಸ್ಸು ಚೇತನಾರಹಿತವೂ ಕ್ರಿಯಾಉಳ್ಳದ್ದೂ ಇರುತ್ತದೆ. ಇಂಥ ಮನಸ್ಸನ್ನು ಪ್ರೇರಿಸುವವನು (ಚೇತನೆಯನ್ನುಂಟು ಮಾಡುವವನು)ಆತ್ಮನು.

ಮನಸ್ಸಿನಿಂದ ಯುಕ್ತವಾದ ಆತ್ಮನ ಕ್ರಿಯೆಗಳಿಗೆ, ವಿಭುವಿನ (ಆತ್ಮನ) ಕ್ರಿಯಾ ಎಂದು ಹೇಳುತ್ತಾರೆ. ವಸ್ತುತಃ ಕ್ರಿಯೆಗಳು ಮನಸ್ಸಿನದೇ ಇರುತ್ತವೆ. ಅಚೇತನವಾದ ಮನಸ್ಸಿಗೆ ಆತ್ಮನು ಚೇತನೆಯನ್ನುಂಟು ಮಾಡುವದರಿಂದ ಆತ್ಮನಿಂದಲೇ ಮನಸ್ಸಿನ ಕ್ರಿಯಾರಂಭವಾಗುವದು ಹೀಗಿರುವದರಿಂದ ಆತ್ಮ ಚೇತನಾ ವಿಶಿಷ್ಟವಾದ ಮನಸ್ಸಿನ ಕ್ರಿಯೆಯು, ಆತ್ಮ ಕ್ರಿಯೆಯೆನ್ನುವದು ಉಪಚಾರೋಕ್ತಿಯೆಂದು ಹೇಳಿದ್ದಾರೆ ಇದರಿಂದ ಮನಸ್ಸು ಅಚೇತನವೆಂದೂ ಆತ್ಮನನ್ನಾಶ್ರಯಿಸಿ ಚೇತನಾ ಯುಕ್ತವಾಗಿ, ಕ್ರಿಯಾ ಮಾಡುತ್ತದೆಂದೂ ಸಿದ್ಧವಾಗುತ್ತದೆ ಆತ್ಮನು (ಜೀವನು) ಕ್ರಿಯಾರಹಿತನಿದ್ದು ಮನೋಯೋಗದಿಂದ ಮನಸ್ಸನ್ನು ಪ್ರೇರಿಸಿ ಕ್ರಿಯಾ ಮಾಡಿಸುತ್ತಾನೆಂದು ಹೇಳಿದ್ದಾರೆ ಚೇತಕನಾದ ಆತ್ಮನಿಂದ ಆಶ್ರಯ (ಆತ್ಮಾಧಿಷ್ಠಿತ) ವಾದ ಮನಸ್ಸು ಕ್ರಿಯಾ ಪ್ರವೃತ್ತವಾಗುತ್ತದೆ ಆತ್ಮನು ಮನಸ್ಸನ್ನುಕೊಡದಿದ್ದರೆ, ಮನಸ್ಸಿನಿಂದ ಕ್ರಿಯಾಸ್ಪರ್ತನೆಯಾಗಲಾರದು. "ಕ್ರಿಯಾವತ್" ಮನಸ್ಸು ಕ್ರಿಯಾವುಳ್ಳದ್ದೆಂದು ತಿಳಿಯಬೇಕೇವಿನಾ, ಮನಸ್ಸು ಸ್ವಯಂಕರ್ತೃತ್ವವುಳ್ಳದ್ದೆಂದು ತಿಳಿಯಬಾರದು ಆದ್ದರಿಂದಲೆ ಆತ್ಮನ ಕ್ರಿಯೆ ಯೆಂದು ಹೇಳಿದ್ದಾರೆ. ಅಚೇತನ ಪರಾಧೀನವಾದ ಮನಸ್ಸಿನ ಕ್ರಿಯೆಯ ಸಂಭವವು ಆತ್ಮ ಸಕಾಶದಿಂದ ಆಗುವಗರಿಂದ, ಸ್ವಯಂ ಕರ್ತೃತ್ವವುಮನಸ್ಸಿಗೆ ಇರುವದಿಲ್ಲ ಆತ್ಮನು ಚೇತಕನು (ಚೇತನೆಯುಳ್ಳವನು) ಆಗಿರುವದರಿಂದ, ಕರ್ತೃವೆಂದು ಹೇಳಲ್ಪಡುತ್ತಾನೆ ಮನಸ್ಸು ಅಚೇತನ (ಚೇತನಾ ರಹಿತ) ವಾದ್ದರಿಂದ ಕ್ರಿಯಾವುಳ್ಳದ್ದಿದ್ದರೂ, ಕರ್ತೃವೆಂದು ಗ್ರಹಿಸಲ್ಪಡುವದಿಲ್ಲ. ಯಾಕಂದರೆ ಆತ್ಮನಿಂದ ಚೇತನೆಯನ್ನು ಪಡೆಯುವದರಿಂದ, ಮನಸ್ಸು ಸ್ವಚೇತನೇ ಇಲ್ಲದ್ದಿರುತ್ತದೆ

ಜೀವದ ವಿಷಯದಲ್ಲಿಯ ವಿಶೇಷ

ಬುದ್ಧಿ, ಮನಸ್ಸು ಮೊದಲಾದವುಗಳು ಜೀವಾಧಿಷ್ಠಿತ ದೇಹದಲ್ಲಿ ಜೀವ (ಆತ್ಮ) ನಿಂದ ಯುಕ್ತವಾಗಿ, ಸರ್ವ ಕ್ರಿಯಾ ಸಾಧಕವಾಗಿರುತ್ತವೆಂದು ಹಿಂದೆ ವಿವರಿಸಿದ್ದೇನೆ. ಇವೆಲ್ಲವುಗಳ ಮತ್ತು ದೇಹದ ಯೋಗ್ಯ ಸಂಯೋಗ ಧಾರಣೆಗೆ ಜೀವನವೆಂಬ ಹೆಸರು. ಸಂಯೋಗ ಧಾರಣೆಯು ಜೀವನವಿರು

ವದರಿಂದ, ಸಂಯೋಗ ಭೇದವೇ ಮರಣವು. ಮರಣದಲ್ಲಿ ಯಾವ ವಿಧವಾದ ಕ್ರಿಯಾಚೈತನ್ಯಾದಿಗಳಿರದೇ ಕೇವಲಭೂತಾತ್ಮಕವಿರುವದರಿಂದ, ಭೌತಿಕಭಿನ್ನವಾಗಿರುವದೆಲ್ಲವೂ ದೇಹದಲ್ಲಿ ಆತ್ಮಾದಿಗಳಸಂಬಂಧವಾದದ್ದೆಂದುಹೇಳಿದ್ದಾರೆ ಪರಿಶೇಷ ನ್ಯಾಯದಿಂದ ಹೀಗೆ ನಿರ್ಣಯ ಮಾಡಿರುವದರಿಂದ, ಜೀವಿತ ಜೀವರಹಿತಲಕ್ಷಣವೂ ಕ್ರಿಯಾಕ್ರಮಾದಿಗಳಪರಿಚ್ಛೇದವೂ ಸಿದ್ಧವಾದಂತಾಯಿತು.

ಪ್ರಾಣಾಪಾನೌನಿಮೇಷಾದ್ಯಾ ಜೀವನಂಮನಸೋಗತಿಃ ॥
ಇಂದ್ರಿಯಾಂತರ ಸಂಚಾರಃ ಪ್ರೇರಣಂ ಧಾರಣಂ ಚಯತ್ ॥
ದೇಶಾಂತರಗತಿಃ ಸ್ವಪ್ನೇ ಪಂಚತ್ವಗ್ರಹಣಂ ತಥಾ ॥
ದೃಷ್ಟಸ್ಯ ದಕ್ಷಿಣೇನಾಕ್ಷ್ಣಾಸವ್ಯೇನಾವಗಮಸ್ತಥಾ ॥
ಇಚ್ಛಾದ್ವೇಷಃ ಸುಖಂ ದುಃಖಂ ಪ್ರಯತ್ನಶ್ಚೇತನಾಧೃತಿಃ ॥
ಬುದ್ಧಿಸ್ಮೃತಿರಹಂಕಾರೋ ಲಿಂಗಾನಿ ಪರಮಾತ್ಮನಃ ॥
(ಚರಕ॥ ಶಾರೀರ॥ ಅ ೧ ಶ್ಲೋ ೭೨)

ಪ್ರಾಣಾಪಾನಗಳು, ಉಚ್ಛ್ವಾಸನಿಃಶ್ವಾಸ, ನಿಮೇಷೋನ್ಮೇಷಗಳೂ, ಮತ್ತು ಜೀವಿಸುವಂತೇ ಮಾಡುವದೂ, ಅಚೇತನವಾದ ಮನಸ್ಸಿಗೆ ಚೇತನೆಯನ್ನುಂಟು ಮಾಡುವದರಿಂದ ಮನೋಗತಿಯೂ, ಆತ್ಮನದಾಗಿರುತ್ತದೆ.

ಮನಸ್ಸಿನ ಕರ್ಮವಾದ ಚಕ್ಷುರಾದೀಂದ್ರಿಯಗಳಲ್ಲಿಯ ಸಂಚಾರವು, ಪ್ರೇರಣೆಧಾರಣೆಗಳು, ಸ್ವಪ್ನದಲ್ಲಿ ದೇಶಾಂತರಗತಿಯು, ಮೃತವಾದ ಲಕ್ಷಣವನ್ನು ತಿಳಿಯುವದು, ಇವೆಲ್ಲವುಗಳೂ ಆತ್ಮಾಶ್ರಯ ಮನೋ ವ್ಯಾಪಾರಗಳು. ಚಕ್ಷುರಾದಿ ಇಂದ್ರಿಯಗಳಲ್ಲಿಯ ವ್ಯಾಪಾರವು ಮನಸ್ಸಿನಿಂದ ನಡೆಯುತ್ತದೆನ್ನುವದು ಹೇಗೆಂದರೆ:- ಬಲಗಣ್ಣಿನಿಂದ ಗ್ರಹಿಸಿದ ರೂಪವನ್ನೂ ಎಡಗಣ್ಣುಸಹ ಜ್ಞಾನಮಾಡಿಕೊಂಡು, ಮತ್ತೊಮ್ಮೆ ಗ್ರಹಿಸಬೇಕಾದಾಗ ಯೋಗ್ಯವಾಗಿ ತಾನೇ ಗ್ರಹಿಸುವದರಿಂದ, ಇಂದ್ರಿಯಾಧಿಷ್ಠಿತ ಮನಸ್ಸು ಚಕ್ಷುರ್ದ್ವಯಗಳಲ್ಲಿರುತ್ತದೆಯೆನ್ನುವದು ನಿಶ್ಚಿತವು. ಇದರಿಂದ ಇಂದ್ರಿಯಗಳಲ್ಲಿ ವಿಷಯಗ್ರಾಹಕವು, ಮನಸ್ಸೆನ್ನುವದು ನಿರ್ಣಯವಾದಂತಾಯಿತು.

ಆತ್ಮನಲಕ್ಷಣಗಳು

"ಇಚ್ಛಾ" ತನಗೆಬೇಕೆಂದೆನಿಸುವದು. "ದ್ವೇಷ" ಬೇಡೆಂದೆನಿಸುವದು. ಅಥವಾ ಅನಿಷ್ಟವಾದ ವಿಷಯದಲ್ಲಿಯ ವೈರವು. "ಸುಖ" ಗ್ರಾಹ್ಯವಾಗಿ ಆನಂದವೆನಿಸುವದು "ದುಃಖ" ಅಗ್ರಾಹ್ಯವಾದದ್ದು ಗ್ರಹಣದಿಂದ ವೇದನೆ ಯಾಗುವದು. "ಪ್ರಯತ್ನ" ಇಷ್ಟಪ್ರಾಪ್ತಿ ಅನಿಷ್ಟನಿವೃತ್ತಿಗಳಲ್ಲಿ ಪ್ರವರ್ತ ನೆಯನ್ನುಂಟು ಮಾಡುವದು ಬುದ್ಧಿ ಗ್ರಹಣದಿಂದ, ಇಲ್ಲಿ ಆಯುರ್ವೇದ ಶಾಸ್ತ್ರದಲ್ಲಿ ಚೇತನಾ, ಧೃತಿ, ಸ್ಮೃತಿ, ಅಹಂಕಾರಗಳು, ಬುದ್ಧಿಯಲ್ಲಿ ಪ್ರಕಾ ಶವಾಗುವದರಿಂದ ಬುದ್ಧಿ ಪ್ರಕಾಶವೆಂದು ಹೇಳಿದ್ದಾರೆ.

"ಬುದ್ಧಿ" ಊಹಾಪೋಹಗಳಲ್ಲಿಯ ನಿರ್ಣಯವನ್ನು ಆತ್ಮನಿಗೆ ಸಾಕ್ಷಾ ತ್ಕರಿಸುವದು.

"ಧೃತಿ" ನಿಯಮನವುಳ್ಳದ್ದು ನಿಯಂತ್ರಕನಾದ ಆತ್ಮನಿಗೆ ನಿಯಮನ ಸಾಕ್ಷಾತ್ಕಾರ ಮಾಡುತ್ತದೆ. ಅರ್ಥಾತ್ ಆತ್ಮಾಧಿಷ್ಠಿತವಾಗಿ ನಿಯಮನ ವುಳ್ಳದ್ದಾಗುತ್ತದೆ.

"ಸ್ಮೃತಿ" ಪೂರ್ವದಲ್ಲಿ ಗ್ರಹಿಸಿರುವದನ್ನು ಆತ್ಮನಿಗೆ ನೆನಪು ಮಾಡಿ ಸಾಕ್ಷಾತ್ಕರಿಸುತ್ತದೆ.

"ಅಹಂಕಾರ" ನಾನು ಎನ್ನುವ ಅಭಿಮಾನವನ್ನು ಆತ್ಮನಲ್ಲುಂಟು ಮಾಡುವದು. ಇವುಗಳು ಆತ್ಮನ ಲಕ್ಷಣಗಳು ದೇಹದಲ್ಲಿ ಈ ಲಕ್ಷಣಗಳು ತೋರುತ್ತವೆ. ಪಂಚಭೂತಾತ್ಮಕವಾದ ಮೃತ ದೇಹದಲ್ಲಿ ಈ ಲಕ್ಷಣ ಇರದೇ ಇರುವದರಿಂದ, ಇವುಗಳು ಆತ್ಮನದೇ ಆಗಿರುತ್ತವೆಂದು ನಿರ್ಣಯಿಸಿದ್ದಾರೆ.

ಯಸ್ಮಾತ್ಸಮುಪಲಭ್ಯಂತೆ ಲಿಂಗಾನ್ಯೇತಾನಿಜೀವತಃ ॥
ನಮೃತಸ್ಯಾತ್ಮಲಿಂಗಾನಿ ತಸ್ಮಾದಾಹುರ್ಮಹರ್ಷಯಃ ॥೭೭॥
ಶರೀರಂಹಿಗತೇ ತಸ್ಮಿನ್ ಶೂನ್ಯಾಗಾರಮುಚೇತನಂ ॥
ಪಂಚಭೂತಾವಶೇಷತ್ವಾತ್ ಪಂಚತ್ವಂಗತಮುಚ್ಯತೆ ॥
(ಚರಕ॥ ಶಾರೀರ॥ ಅ ೧ ಶ್ಲೋ. ೭೪)

ಪೂರ್ವೋಕ್ತವಾದ ಲಕ್ಷಣಗಳು ಜೀವಂತವಿರುವಾಗಲೇ ದೊರೆಯುವ ದರಿಂದಲೂ ಮೃತ ದೇಹದಲ್ಲಿರದೇ ಇರುವದರಿಂದಲೂ, ಇವುಗಳು ಆತ್ಮನ ಲಕ್ಷಣಗಳೇ ಇರುತ್ತವೆಂದು ಮಹರ್ಷಿಗಳು ನಿರ್ಣಯಿಸಿದ್ದಾರೆ ಈ ಲಕ್ಷಣವುಳ್ಳ ಆತ್ಮನು ಹೊರಟುಹೋದನಂತರ ಶರೀರವುನಿರ್ಜನವಾದ ಮನೆಯಂತೇ ಆಗುತ್ತದೆ. ಅರ್ಥಾತ್ ಚೇತನಾ ರಹಿತವಾದ್ದರಿಂದ ನಿರುಪಯೋಗವಾಗುತ್ತದೆ ಆತ್ಮವು ಹೋದ ನಂತರ ಪಂಚಭೂತಗಳ ಅವಶೇಷ ಮಾತ್ರ ಉಳಿಯುವದರಿಂದ, ಪಂಚತ್ವವನ್ನು ಹೊಂದಿವದೆಂದು ಹೇಳುತ್ತಾರೆ. ಪಡ್ಡಾತುಕನಾದ ಪುರುಷನು ಆರನೇಯವನಾದ್ದರಿಂದ ಚೇತನೆಯನ್ನುಂಟು ಮಾಡುತ್ತಾನೆ ಅವನು (ಆತ್ಮನು) ಹೊರಟುಹೋದ ಮೇಲೆ ಪಂಚಭೂತಾವಶೇಷ ಮಾತ್ರ ಉಳಿಯುವದರಿಂದ, ಪಂಚತ್ವವನ್ನುಹೊಂದಿವದೆನ್ನುವದು ಯೋಗ್ಯವಾಗಿರುತ್ತದೆ. ಆರನೇಯವನಾದ ಆತ್ಮನಿದ್ದಾಗ ಷಟ್ತ್ವವಿರುತ್ತದೆಯೇವಿನಾ ಪಂಚತ್ವವಿರುವದಿಲ್ಲ. ಆದ್ದರಿಂದ ಶಾಸ್ತ್ರೀಯ ಸಂಜ್ಞೆಯೆಂದು ಹೀಗೆ ನಿರ್ದೇಶಿಸಿದ್ದಾರೆ.

ಇಂದ್ರಿಯಾದಿಗಳಿಂದ ಜೀವಾತ್ಮನಿಗೆ ಜ್ಞಾನವು

ಆತ್ಮಾಜ್ಞಃ ಕರಣೈರ್ಯೋಗಾತ್ ಜ್ಞಾನಂತ್ವಸ್ಯ ಪ್ರವರ್ತತೆ ॥
ಕರಣಾನಾಮವೈಮಲ್ಯಾದಯೋಗಾದ್ವಾನವರ್ತತೆ ॥೬೪॥
ಪಶ್ಯತೋಽಪಿಯಥಾದರ್ಶೇಸಂಕ್ಲಿಷ್ಟೇನಾಸ್ತಿದರ್ಶನಂ ॥
ತದ್ವಜ್ಜಲೇವಾಕಲುಷೇಚೇತಸ್ಯುಪಹತೇತಥಾ ॥
(ಚರಕ॥ ಶಾರೀರ॥ ಅ ೧ ಶ್ಲೋ ೫೫)

ಆತ್ಮಾ , ಜ್ಞಃ, ಜೀವ, ಪುರುಷ, ಮೊದಲಾದವುಗಳುಜೀವನ ಹೆಸರುಗಳು. ಚಕ್ಷುರಾದಿ ಇಂದ್ರಿಯಗಳ ಮನಸ್ಸಿನ ಸಮ್ಯಗ್ಯೋಗದಿಂದ ಜೀವನಿಗೆ ಜ್ಞಾನವಾಗುತ್ತದೆ. ಕರಣಗಳು (ಇಂದ್ರಿಯ) ಯೋಗ್ಯ ಸ್ಥಿತಿಯಲ್ಲಿರದಿದ್ದರೂ ಅಥವಾ ಅವುಗಳ ಯೋಗ ರಹಿತವಾಗಿದ್ದಾಗಲೂ ಜ್ಞಾನವುಂಟಾಗುವದಿಲ್ಲ.

ಉದಾ:— ಮಲಿನವಾದ ಕನ್ನಡಿಯಲ್ಲಿ ಎಷ್ಟೇ ಚನ್ನಾಗಿ ನೋಡಿದರೂ ಪ್ರತಿಬಿಂಬ ಕಾಣುವದಿಲ್ಲ. ಅದರಂತೇ ರಾಡಿ ಜಲದಲ್ಲಿಯೂ ಪ್ರತಿಬಿಂಬವು ಚನ್ನಾಗಿ ಮೂಡುವದಿಲ್ಲ. ಹಾಗೆಯೇ ಮನಸ್ಸು ಉದ್ವಿಗ್ನವಾದಾಗ ಅಥವಾ ಇಂದ್ರಿಯಗಳಲ್ಲಿ ಮನೋಯೋಗ ಇಲ್ಲದಿರುವಾಗ, ಕಲುಷಿತ ಜಲ ಕನ್ನಡಿಗಳಲ್ಲಿಯ ಪ್ರತಿಬಿಂಬವುಕಾಣದಿರುವಂತೆ ಜ್ಞಾನವೂಸಹ ಆಗಲಾರದು.

ಆತ್ಮನಜ್ಞಾನಕರ್ಮಗಳು

ಕರಣಾನಿಮನೋಬುದ್ಧಿಃ ಬುದ್ಧಿಃ ಕರ್ಮೇಂದ್ರಿಯಾಣಿಚ ॥
ಕರ್ತುಃ ಸಂಯೋಗಜಂ ಕರ್ಮವೇದನಾಬುದ್ಧಿರೇವಚ ॥೫೭॥
ನೈಕಃ ಪ್ರವರ್ತತೇಕರ್ತುಂ ಭೂತಾತ್ಮಾನಾಶ್ನುತೇಫಲಂ ॥
ಸಂಯೋಗಾದ್ವರ್ತತೇಸರ್ವಂ ತಂಋತೇನಾಸ್ತಿ ಕಿಂಚನ ॥
(ಚರಕ॥ ಶಾರೀರ॥ ಅ ೧ ಶ್ಲೋ ೫೭)

ಕರಣಗಳು (ಚಕ್ಷುರಾದೀಂದ್ರಿಯಗಳು), ಮನೋಬುದ್ಧಿ, ಬುದ್ಧಿ, ಕರ್ಮೇಂದ್ರಿಯಗಳು, ಕರ್ತೃವಿನ (ಜೀವನ) ಸಂಯೋಗದಿಂದಲೇ ಕರ್ಮವನ್ನು ಗ್ರಹಿಸುತ್ತವೆ. ಆರ್ಥಾತ್ ಆತ್ಮನು ಕರಣಾದಿಗಳಿಂದ ಯುಕ್ತನಾಗಿ ಕರ್ಮಾದಿಗಳನ್ನು ಗ್ರಹಿಸುತ್ತಾನೆಂಬರ್ಥವು. ಇಂದ್ರಿಯಾದಿಗಳ ಸಂಯೋಗವುಳ್ಳ ಆತ್ಮನಿಗೆಜ್ಞಾನ, ಕರ್ಮ, ವೇದನೆಗಳು, ಗ್ರಹೀತವಾಗುತ್ತವೆ. ಜೀವನು ಯಾವದನ್ನೂ ಒಬ್ಬನೇ ಸ್ವತಂತ್ರನಾಗಿ ಮಾಡುವದಿಲ್ಲ. ಯಾವ ಫಲವನ್ನೂ ಒಬ್ಬನೇ ಸ್ವೀಕರಿಸುವದಿಲ್ಲ. ಮನಸ್ಸು ಮೊದಲಾದ ಇಂದ್ರಿಯಗಳೆಲ್ಲವೂ ಆತ್ಮಯುಕ್ತವಾಗಿ ಫಲಗ್ರಾಹಿಗಳಾಗುತ್ತವೆ. ಕರಣ ಮೊದಲಾದವುಗಳು ಆತ್ಮನ ಸಂಯೋಗದಿಂದಲೇ ಎಲ್ಲವೂ ನಡೆಯುತ್ತವೆ. ಈ ಸಂಯೋಗದ ಹೊರತಾಗಿ ಏನೂ ನಡೆಯಲಾರದು.

(೩೩) ನಿದ್ರಾಸ್ಥಿತಿಯ ವರ್ಣನೆಯು

ಹೃದಯಂ ಚೇತನಾಸ್ಥಾನಮುಕ್ತಂ ಸುಶ್ರುತದೇಹಿನಾಂ ॥
ತಮೋಭಿಭೂತೇತಸ್ಮಿಂಸ್ತು ನಿದ್ರಾವಿಶತಿದೇಹಿನಾಂ ॥೩೪॥

ನಿದ್ರಾಹೇತುಸ್ತಮಃ, ಸತ್ವಂಬೋಧನೇಹೇತುರುಚ್ಯತೆ ॥
ಸ್ವಭಾವನಿರ್ವಾಹೇತುರ್ಗರೀಯಾನ್ ಪರಿಕೀರ್ತ್ಯತೆ ॥
(ಚರಕ॥ ಶಾರೀರ॥ ಅ ೪ ಶ್ಲೋ ೩೫)

ಸುಶ್ರುತರಿಗೆ ಗುರುಗಳಾದ ಧನ್ವಂತರಿಯು ನಿದ್ರಾ ವಿಷಯದಲ್ಲಿ ಉಪದೇಶವು. ಸುಶ್ರುತನೇ, ಶರೀರಗಳಿಗೆ ಹೃದಯವು ಚೇತನಾ (ಪ್ರಜ್ಞಾ) ಸ್ಥಾನವೆಂದು ಹೇಳಲ್ಪಟ್ಟಿರುತ್ತದೆ ಪೂರ್ವೋಕ್ತ ಚೇತನಾ ಸ್ಥಾನವಾದ ಹೃದಯದಲ್ಲಿ ತಮಸ್ಸು ಆವರಿಸಿತೆಂದರೆ, ದೇಹಿಗಳಿಗೆ ನಿದ್ರೆಯು ಬರುತ್ತದೆ. ತಮಸ್ಸು ನಿದ್ರೆಗೆ ಕಾರಣವಾಗಿರುತ್ತದೆ ಸತ್ವವು ಎಚ್ಚರಿಕೆಗೆ (ಎಚ್ಚರವಾಗಲಿಕ್ಕೆ) ಕಾರಣವೆಂದು ಹೇಳಲ್ಪಡುತ್ತದೆ ಎಚ್ಚರಿಕೆ ಮತ್ತು ನಿದ್ರೆಗಳು ಪ್ರಾಣಿಗಳಲ್ಲಿ, ವಿರುದ್ಧ ಗುಣವುಳ್ಳವುಳಾಗಿರುತ್ತವೆ ಸತ್ವಾದಿಗಳ ಸದಾ ಸಾನ್ನಿಧ್ಯವಿರುವದರಿಂದ, ಸ್ವಾಪ ಮತ್ತು ಆವಬೋಧಗಳ ಸಂಭವವಾಗಲೇ ಬಾರದೆಂಬ ಆಕ್ಷೇಪ ಬರುತ್ತದೆ. ಇದಕ್ಕೆ ಶಾಸ್ತ್ರಕಾರರು ನಿದ್ರೆಯು ಸ್ವಾಭಾವಿಕವಾದದ್ದೇ, ಎಂದು ಹೇಳುತ್ತಾರೆ ಮತ್ತು ನಿದ್ರೆ ಬರುವದು ಎಚ್ಚರವಾಗುವದು ಈ ವಿಷಯಗಳಲ್ಲಿ, ಸ್ವಾಭಾವಿಕವೇ ಮುಖ್ಯ ಕಾರಣವೆಂದು ನಿರ್ಧರಿಸಿದ್ದಾರೆ.

ನಿದ್ರಾಂತುವೈಷ್ಣವೀಂಸಾಸ್ಮಾನಮುಪದಿಶಂತಿ, ಸಾಸ್ವಭಾವತ ಏವಸರ್ವಪ್ರಾಣಿನೋಽಭಿಸ್ಪೃಶತಿ॥ ತತ್ರಯದಾಸಂಜ್ಞಾವಹಾನಿಸ್ರೋತಾಂಸಿತಮೋಭೂಯಿಷ್ಠಃಶ್ಲೇಷ್ಮಾಪ್ರತಿಪದ್ಯತೇ ತದಾತಾಮಸೀನಾಮನಿದ್ರಾಸಂಭವತ್ಯನವಬೋಧಿನೀ, ಸಾಪ್ರಲಯಕಾಲೇ; ತಮೋಭೂಯಿಷ್ಠಾನಾಮಹಸ್ಸುನಿಶಾಸುಚ ಭವತಿ, ರಜೋಭೂಯಿಷ್ಠಾನಾಮನಿಮಿತ್ತಂ, ಸತ್ವಭೂಯಿಷ್ಠಾನಾಮರ್ಧರಾತ್ರೇ; ಕ್ಷೀಣಶ್ಲೇಷ್ಮಣಾಮನಿಲಬಹುಲಾನಾಂಮನಃಶರೀರಾಭಿತಾಪವತಾಂಚನೈವ, ಸಾವೈಕಾರಿಕೀಭವತಿ ॥
(ಸುಶ್ರುತ॥ ಶಾರೀರ॥ ಅ ೪ ಸೂ ೫೩)

ತಂತ್ರಾಂತರಗಳಲ್ಲಿ (೭) ವಿಧವಾದ ನಿದ್ರೆಗಳನ್ನು ಹೇಳುತ್ತಾರೆ ಆದರೆ ಸುಶ್ರುತ ತಂತ್ರದಲ್ಲಿ ೧ ತಾಮಸೀ ೨ ಸ್ವಾಭಾವಿಕೀ ೩ ವೈಕಾರಿಕೀಗಳೆಂಬ

ಮೂರು ವಿಧವಾದ ನಿದ್ರೆಗಳನ್ನು ಹೇಳುತ್ತಾರೆ ನಿದ್ರೆಯನ್ನು ವಿಷ್ಣುವಿನ ಮಾಯೆಯೆಂದು ಹೇಳುತ್ತಾರೆ. "ವಿಷ್ಣೋಃ ಇಯಂ ವೈಷ್ಣವೀ" ಇಲ್ಲವೇ ಪಾಪವುಳ್ಳದ್ದು ನಿದ್ರೆಯೆಂದು ಹೇಳುತ್ತಾರೆ. ಯಾಕಂದರೆ ಎಲ್ಲ ಶುಭ ವ್ಯಾಪಾರಗಳನ್ನು ನಿರೋಧಮಾಡುವದರಿಂದ ಪಾಪಯುಕ್ತವಾದದ್ದೆಂದು ತಿಳಿಸಿದ್ದಾರೆ. ನಿದ್ರೆಯು ಸ್ವಾಭಾವಿಕವಾಗಿ ಸರ್ವ ಪ್ರಾಣಿಗಳನ್ನು ವ್ಯಾಪಿಸುತ್ತದೆ.

೧ "ತಾಮಸೀನಿದ್ರೆ" ದೇಹದಲ್ಲಿ ಸಂಜ್ಞಾವಾಹಿಗಳಾದ ಸ್ರೋತಸ್ಸುಗಳನ್ನು, ಕೇವಲ ತಮಸ್ಸಿನ ಹೆಚ್ಚುವಿಕೆಯಿಂದಕೂಡಿದ ಶ್ಲೇಷ್ಮವುವ್ಯಾಪಿಸಿಗರೆ; ಅಥವಾ ಪ್ರವೇಶಿಸಿದರೆ ಆಗ ತಾಮಸೀ ಎನ್ನುವ ನಿದ್ರೆಯು ಸಂಭವಿಸುತ್ತದೆ. ಅದು ಎಚ್ಚರವಾಗದ ಕಠಿಣತರವಾದ ನಿದ್ರೆಯು, ಅದು ಪ್ರಾಣಿಗಳ ಪ್ರಲಯ ಕಾಲದಲ್ಲಿಯ ನಿದ್ರೆಯು, ಎಚ್ಚರರಹಿತವಾದ, ಅತ್ಯಂತಿಕವು ರಣಕಾಲ ಪೂರ್ವದಲ್ಲಿಯ ನಿದ್ರೆಯೆಂದು ತಿಳಿಯಬೇಕು

೨ "ಸ್ವಾಭಾವಿಕೀನಿದ್ರೆ" ತಮಸ್ಸು ಅಧಿಕವಾದವರಿಗೆ ಹಗಲು ರಾತ್ರಿಗಳಲ್ಲಿಯೂ ಸಹ ನಿದ್ರೆ ಬರುತ್ತದೆ. ರಜೋಗುಣಾಧಿಕವಾದವರಿಗೆ ಏನೂ ಕಾರಣವಿಲ್ಲದೆ ಅಕಸ್ಮಾತ್ ನಿದ್ರೆಯು ಬರುತ್ತದೆ. ಸತ್ವಗುಣಾಧಿಕ್ಯವುಳ್ಳವರಿಗೆ ಅರ್ಧ ರಾತ್ರೆಯಲ್ಲಿ ನಿದ್ರೆಯು ಬರುತ್ತದೆ

೩ "ವೈಕಾರಿಕೀ ನಿದ್ರೆ" ಕ್ಷೀಣ ಶ್ಲೇಷ್ಮವುಳ್ಳವರಿಗೆ ವಾತ ಬಹಳವಾದವರಿಗೆ, ಮನಸ್ಸು ಶರೀರಗಳಲ್ಲಿ ಚಿಂತೆ ವೇದನಾವುಳ್ಳವರಿಗೂ ಕೂಡ ನಿದ್ರೆಯು ಬರುವದಿಲ್ಲ. ಬಂದರೂ ಸಹ ಚನ್ನಾಗಿ ಗಾಢನಿದ್ರೆಯು ಇರುವದಿಲ್ಲವಾದ್ದರಿಂದ "ವೈಕಾರಿಕೀ" ನಿದ್ರೆಯೆಂದು ಹೇಳುತ್ತಾರೆ.

ನಿದ್ರೆಯ ವಿಷಯದಲ್ಲಿ ವಿಶೇಷ

ಕ್ಷೀಣ ಶ್ಲೇಷ್ಮವುಳ್ಳವರಿಗೆ, ವಾತ ಬಹಳವಾದವರಿಗೆ, ನಿದ್ರೆಯು ಬರುವದಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ವಿರುದ್ಧವಾಗಿ ಶ್ರಮದಿಂದ ಬಳಲಿದವರಿಗೆ ನಿದ್ರೆಯು ಬರುತ್ತದೆ. ಯಾಕಂದರೆ ಲಂಘನಶ್ರಮಾದಿಗಳಿಂದ ವಾಯುವು ವೃದ್ಧಿಹೊಂದುತ್ತದೆ. ಮತ್ತು ಶ್ಲೇಷ್ಮವು ಕ್ಷೀಣವಾಗುತ್ತದೆ. ಇಂಥವರಿಗೆ

ನಿದ್ರೆಯು ಯಾಕೆ ಬರುತ್ತದೆಂದರೆ ಶ್ರಮಕಾರ್ಯದಿಂದ ಬಳಲಿರುವದರಿಂದ, ವಿಷಯಗಳಲ್ಲಿ ಮನಸ್ಸು ಇಂದ್ರಿಯಗಳು ನಿವರ್ತನೆಯನ್ನು ಹೊಂದುತ್ತವೆ. ಮನಸ್ಸು ಸಹಿತವಾದ ಇಂದ್ರಿಯಗಳು ನಿವರ್ತನೆಯನ್ನು ಹೊಂದುವದರಿಂದ ಮನುಷ್ಯನು ನಿದ್ರಿಸುತ್ತಾನೆ.

ಯದಾತುಮನಸಿಕ್ಲಾಂತೇ ಕರ್ಮಾತ್ಮಾನಃ ಕ್ಲಮಾನ್ವಿತಾಃ ॥
ವಿಷಯೇಭ್ಯೋನಿವರ್ತಂತೇ ತದಾಸ್ವಪಿತಿ ಮಾನವಃ ॥
(ಚರಕ॥ ಸೂ ಸ್ಥಾ. ಅ ೨೧ ಶ್ಲೋ. ೩೫)

ಯಾವಾಗಮನಸ್ಸು ಬಳಲುತ್ತದೆಯೋ ಆಗ ಕರ್ಮ ಪುರುಷನಾದ ಜೀವನೂ ಇಂದ್ರಿಯಗಳೂ ಸಹ ಬಳಲುತ್ತವೆ. ಮನಸ್ಸು, ಇಂದ್ರಿಯಗಳು, ಕರ್ಮಾತ್ಮನಾದ ಪುರುಷ, ಇವೆಲ್ಲವುಗಳಿಗೂ ಶ್ರಮವಾಗಿರುವದರಿಂದ ವಿಶ್ರಾಂತಿ ಹೊಂದುತ್ತವೆ. ಎಲ್ಲ ವಿಷಯಗಳಿಂದಲೂ ನಿವರ್ತನೆಯಾಗುವದರಿಂದ ಮನುಷ್ಯನು ನಿದ್ರಿಸುತ್ತಾನೆ. ಇದು ಶ್ರಮಜನ್ಯವಾದ ವಿಶ್ರಾಂತಿ ರೂಪವಾದ ನಿದ್ರೆಯೆಂದು ಹೇಳತ್ತಾರೆ.

ಚರಕ ಮತದಂತೆನಿದ್ರೆಯಕಾರಣವು

ತಮೋಭವಾ ಶ್ಲೇಷ್ಮಸಮುದ್ಭವಾ ಚ –
ಮನಃ ಶರೀರ ಶ್ರಮಸಂಭವಾ ಚ ॥
ಆಗಂತುಕೀ ವ್ಯಾಧ್ಯನುವರ್ತನೀ ಚ –
ರಾತ್ರಿ ಸ್ವಭಾವ ಪ್ರಭವಾ ಚ ನಿದ್ರಾ ॥
(ಚರಕ॥ ಸೂ. ಸ್ಥಾ. ಅ. ೨೧ ಶ್ಲೋ. ೫೮)

(೧) **"ತಮೋಭವಾ"** ನಿದ್ರೆಯು ತಮಸ್ಸಿನ ಆಧಿಕ್ಯದಿಂದ ಉಂಟಾಗುತ್ತದೆ. ಇಲ್ಲಿ ತಮೋಧಿಕ್ಯವಿರುವದೇ ವಿನಾ ತಮಸ್ಸೇ ಇರುವದಿಲ್ಲ. ಆದ್ದರಿಂದ ಮರಣಕಾಲ ಪೂರ್ವದ **"ತಾಮಸೀ"** ನಿದ್ರೆಯೆಂದು ತಿಳಿಯಬಾರದು.

(೨) **"ಶ್ಲೇಷ್ಮ ಸಮುದ್ಭವಾ"** ಕಫಾಧಿಕ್ಯದಿಂದುಂಟಾಗುವನಿದ್ರೆಯು ಅಥವಾ ಶ್ಲೇಷ್ಮದಿಂದ ಸಂಭವಿಸುವನಿದ್ರೆಯೆಂದು ಹೇಳುತ್ತಾರೆ.

(೩) **"ಶ್ರಮಸಂಭವಾ"** ಮನಸ್ಸಿನ ಅಥವಾ ಶರೀರಗಳ ಶ್ರಮದಿಂದ ಬರುವ ನಿದ್ರೆಯು.

(೪) **"ಆಗಂತುಕೀ"** ನಿದ್ರೆಯು ವ್ಯಾಧಿಯ ಆಧಿಕ್ಯದಿಂದ ಬರುತ್ತದೆ. ವ್ಯಾಧಿಯ ತೀವ್ರತೆಯಿಂದ ಮನಸ್ಸು ಕಾದು ಬಳಲಿ ನಿದ್ರೆಯುಂಟಾಗುವದು. ಸನ್ನಿಪಾತಾದಿ ಜ್ವರಗಳಲ್ಲಿ **"ಆಗಂತುಕೀ"** ನಿದ್ರೆಯು ಬರುತ್ತದೆ. ಅದಕ್ಕೆ ಅರಿಷ್ಟ ಲಕ್ಷಣ ಯುಕ್ತವಾದದ್ದೆಂದು ಹೇಳುತ್ತಾರೆ ಸನ್ನಿಪಾತಾದಿಗಳಲ್ಲಿ ಎಚ್ಚರವಿಲ್ಲದ ನಿದ್ರೆಆರಂಭವಾಯಿತೆಂದರೆ ಕಷ್ಟಸಾಧ್ಯವೆಂದು ತಿಳಿಯುತ್ತಾರೆ.

(೫) **"ಸ್ವಭಾವ ಪ್ರಭವಾ"** ಪ್ರತಿದಿನ ರಾತ್ರಿ ಕಾಲದಲ್ಲಿ ಬರುವ ನಿದ್ರೆಗೆ, ಸ್ವಾಭಾವಿಕವಾದ ನಿದ್ರೆಯೆಂದು ಹೇಳುತ್ತಾರೆ. ಇದು ಪ್ರಾಣಿ ಮಾತ್ರಗಳಿಗೆ ಹಿತಕರವೆಂದು ಶಾಸ್ತ್ರಕಾರರು ಹೇಳುತ್ತಾರೆ.

ರಾತ್ರಿಸ್ವಭಾವಪ್ರಭವಾಮತಾಯಾಂ
ತಾಂಭೂತಧಾತ್ರೀಂ ಪ್ರವದಂತಿತಜ್ಞಾಃ ॥
ತನೋಭವಾನಾಮಾಹುರಘಸ್ಯಮೂಲಂ
ಶೇಷಾಃ ಪುನರ್ವ್ಯಾಧಿಷುನಿರ್ದಿಶಂತಿ॥
(ಚರಕ॥ ಸೂ. ಸ್ಥಾ. ೨೧ ಶ್ಲೋ ೫೯)

ರಾತ್ರಿಯಲ್ಲಿ ಪ್ರಾಣಿಗಳಿಗೆ ಸ್ವಾಭಾವಿಕವಾಗಿ ಬರುವ ಅಥವಾ ಪ್ರಾಣಿಗಳ ಸತ್ವಾದಿ ಗುಣಕ್ಕನುಸರಿಸಿ ಸ್ವಾಭಾವಿಕವಾಗಿರುವ ಯಾವನಿದ್ರೆಯಿರುತ್ತದೆಯೋ, ಅದು ಪ್ರಾಣಿಗಳನ್ನು ಪೋಷಿಸುವದರಿಂದ ಅದಕ್ಕೆ ಭೂತಧಾತ್ರಿಯೆಂದು ತಜ್ಞರು ಹೇಳುತ್ತಾರೆ. ಅಥವಾ ಹಾಲನ್ನುಕೊಟ್ಟು ಧಾತ್ರಿಯು (ದಾದಿಯು) ರಕ್ಷಿಸುವಂತೆ ದೇಹ ರಕ್ಷಣೆ ಮಾಡುವದರಿಂದ, ಪ್ರಾಣಿಗಳಿಗೆ ಧಾತ್ರೀ (ದಾದಿ) ಯಂತಿರುವ ನಿದ್ರೆಯೆಂದು ಹೇಳುತ್ತಾರೆ. **"ಭೂತಾನಿ ದಧಾತೀತಿ ಭೂತಧಾತ್ರೀ"** ಅಥವಾ **ಭೂತಾನಾಂ ಧಾತ್ರೀವ ಧಾತ್ರೀ ಭೂತಧಾತ್ರೀ"**

ನಿದ್ರೆಯು ಪ್ರಾಣಿಗಳಿಗೆ ಅವಶ್ಯವಾಗಿರುವದರಿಂದ ಪೋಷಣೆ ಧಾರಣೆಗಳು ಅದರಿಂದ ನಡೆಯುವದರಿಂದ, ಹೀಗೆ ಅದನ್ನು ಹೊಗಳಿ ಹೇಳುತ್ತಾರೆ.

"ತಮಸ್ಸಿನಿಂದ ಉತ್ಪನ್ನವಾಗುವ ನಿದ್ರೆಯನ್ನು" ಪಾಪಕ್ಕೆ ಮೂಲ (ಕಾರಣ) ವೆಂದು ಹೇಳುತ್ತಾರೆ. ತಮೋಭವ ನಿದ್ರೆಯು ಪಾಪಕ್ಕೆ ಕಾರಣವು ಯಾಕೆಂಬುವದನ್ನು ಹೇಳುತ್ತಾರೆ ಸದಾ ನಿದ್ರೆಯಲ್ಲಿಯೇ ಇರುವದರಿಂದ ಮನುಷ್ಯನು ಮಾಡಬೇಕಾದ ಸತ್ಕರ್ಮಗಳನ್ನು ಮಾಡಲಾರನು. ಮಾಡತಕ್ಕ ಕರ್ತವ್ಯಗಳನ್ನೂ ಸತ್ಕಾರ್ಯಗಳನ್ನೂ ಮಾಡದಿರುವದರಿಂದ ಅಧರ್ಮವುಂಟಾಗುತ್ತದೆ ಅಧರ್ಮದಿಂದ ಪಾಪವು ಸಂಭವಿಸುತ್ತದೆ. ಹೀಗೆ ಪರಸ್ಪರವಾಗಿ ಪಾಪಕ್ಕೆ, ಸದಾಬರುತ್ತಿರುವ ನಿದ್ರೆಯೇ ಕಾರಣವೆಂದು ನಿರ್ಧರಿಸಿ "ಅಘಸ್ಯಮೂಲಂ" ಎಂದು ನಿರ್ಧರಿಸಿ ಹೇಳಿದ್ದಾರೆ .

ಇವುಗಳ ಹೊರತಾಗಿ ಉಳಿದ ನಿದ್ರೆಯು ವ್ಯಾಧಿಗಳಲ್ಲಿ ಬರತಕ್ಕ ಆಗಂತುಕವಾದ ನಿದ್ರೆಯೆಂದು ತಿಳಿಯಬೇಕು.

ನಿದ್ರಾಯತ್ತಂ ಸುಖಂ ದುಃಖಂ ಪುಷ್ಟಿಃಕಾರ್ಶ್ಯಂ ಬಲಾಬಲಂ
ವೃಷತಾಕ್ಲೀಬತಾ ಜ್ಞಾನಮಜ್ಞಾನಂ ಜೀವಿತಂನಚ ॥೩೬॥
ಅಕಾಲೇಽತಿಪ್ರಸಂಗಾಚ್ಚ ನಚನಿದ್ರಾನಿಷೇವಿತಾ ॥
ಸುಖಾಯುಷೀ ನಿರಾಕುರ್ಯಾತ್ ಕಾಲರಾತ್ರಿರಿವಾಗತಾ ॥
(ಚರಕ॥ ಸೂ. ಸ್ಥಾ. ಅ ೨೧ ಶ್ಲೊ ೩೭)

ಸುಖದುಃಖಗಳು, ಪುಷ್ಟಿ ಮತ್ತು ಕೃಶತೆಗಳು, ಬಲ ದುರ್ಬಲತೆಗಳು, ವೃಷ್ಯತ್ವ ನಪುಂಸಕತ್ವಗಳು, ಜ್ಞಾನ ಅಜ್ಞಾನಗಳು, ಬದುಕುವಿಕೆ ಬದುಕದೇ ಇರೋಣ ಇನೆಲ್ಲವುಗಳು, ನಿದ್ರಾಯತ್ತ (ನಿದ್ರಾಽಧೀನ) ವಾಗಿರುತ್ತವೆ. ಆದ್ದರಿಂದ ಜೀವನದಲ್ಲಿ ಅತ್ಯಂತ ಪ್ರಾಮುಖ್ಯವಾಗಿರುವನಿದ್ರೆಯನ್ನು, ದೇಹಕ್ಕೆ ಅನುಕೂಲವಾಗುವಂತೆ ಸೇವಿಸಬೇಕು. ಯೋಗ್ಯಾಽಯೋಗ್ಯ ನಿದ್ರೆಗಳಿಂದುದ್ಭವಿಸುವ ಸುಖದುಃಖಾದಿಗಳನ್ನು ಹೇಳಿರುತ್ತಾರೆ

ಅಕಾಲದಲ್ಲಿ ನಿದ್ರೆಯನ್ನುಮಾಡುವದರಿಂದಲೂ ಅತಿನಿದ್ರೆಯಿಂದಲೂ ಇಲ್ಲವೇ ನಿದ್ರೆಯನ್ನೇ ಬಿಟ್ಟುಬಿಡುವದರಿಂದಲೂ ಸುಖ ಆಯುಸ್ಸನ್ನೂ; ಎರಡನೇಯದಾದ ಮೃತ್ಯುವಿನ ತಮಸ್ಸಿನಂತೇ (ಕಾಲರಾತ್ರಿಯಂತೆ) ನಾಶ ಪಡಿಸುತ್ತದೆ.

ಸೈವಯುಕ್ತಾಪುನರ್ಯುಂಗ್ತೇನಿದ್ರಾದೇಹಂ ಸುಖಾಯುಷಾ॥
ಪುರುಷಂ ಯೋಗಿನಂ ಸಿದ್ಧಾಃ ಸತ್ಯಾಬುದ್ಧಿರಿವಾಗತಾ ॥
(ಚರಕ॥ ಸೂ. ಸ್ಥಾ. ೨೧ ಶ್ಲೋ ೩೮)

ಯೋಗ್ಯ ಕಾಲದಲ್ಲಿ ಯುಕ್ತವಾಗಿ ಸೇವಿಸಿದ ನಿದ್ರೆಯು ದೇಹವನ್ನು ಸುಖ ಮತ್ತು ದೀರ್ಘಾಯು ಉಳ್ಳದ್ದನ್ನಾಗಿಮಾಡುತ್ತದೆ. ಸಿದ್ಧಿಯಿಂದ ಯುಕ್ತನಾಗುವಂತೆ ಯೋಗೀಪುರುಷನನ್ನು, ತತ್ವಜ್ಞಾನವು (ಸತ್ಯಾಬುದ್ಧಿಃ) ಮಾಡುವದು ಇದರಂತೆ ಯೋಗ್ಯ ನಿದ್ರೆಯು ದೇಹಕ್ಕೆ ಸುಖಾಯುಷ್ಯವನ್ನು ಕೊಡುತ್ತದೆಂಬರ್ಥವು. ಸತ್ಯಾಬುದ್ಧಿಯು (ಸ್ಥಿರಬುದ್ಧಿಯುಳ್ಳ ತತ್ವಜ್ಞಾನವು) ಯೋಗಿಗೆ ಸಿದ್ಧಿಯನ್ನು(ಆತ್ಮಜ್ಞಾನಾದಿಗಳನ್ನು) ಉಂಟುಮಾಡುತ್ತದೆಯೋ, ಅದರಂತೆ ಯೋಗ್ಯ ನಿದ್ರೆಯು ಮನುಷ್ಯನಿಗೆ ಸುಖಾಯುಷ್ಯಗಳನ್ನು ಕೊಡುತ್ತದೆ. ಚನ್ನಾಗಿ ಯೋಗ್ಯವಾದ ನಿದ್ರೆಯು ಆರೋಗ್ಯದಾಯಕವಾಗಿರುವದು. ಆರೋಗ್ಯದಿಂದ ಆಯುಷ್ಯಾಭಿವೃದ್ಧಿಯಾಗುತ್ತದೆ.

ನಿದ್ರೆಯ ಪ್ರಭಾವ

ಕರಣಾನಾಂತುವೈಗುಣ್ಯೇತಮಸ್ಯಾಭಿಪ್ರವರ್ಧಿತೆ ॥
ಅಸ್ವಪನ್ನಪಿಭೂತಾತ್ಮಾಪ್ರಸುಪ್ತಇವಚೋಚ್ಯತೆ ॥
(ಸುಶ್ರುತ॥ ಶಾರೀರ॥ ಅ ೪ ಶ್ಲೋ ೩೭)

ಇಂದ್ರಿಯಗಳು ವಿಗುಣ(ವಿಕಾರವನ್ನು ಹೊಂದಿದ)ವಾಗಿರಲು ಬಾಹ್ಯ ಆಂತರೇಂದ್ರಿಯಗಳಲ್ಲಿ ತಮಸ್ಸು ಗಾಢವಾಗಿ ವ್ಯಾಪಿಸಿದರೆ, ಆತ್ಮನು (ಜೀವ) ನಿರ್ವಿಕಾರನಿದ್ದರೂ ಗಾಢನಿದ್ದೆ ಹೊಂದಿದವನಂತೇ ಇರುತ್ತಾನೆ. ಅಥವಾ ಅತ್ಯಂತವಾಗಿ ತಮಸ್ಸು ಬಾಹ್ಯಾಭ್ಯಂತರಗಳಲ್ಲಿ ವ್ಯಾಪಿಸುವದರಿಂದ, ಇಂದ್ರಿಯಗಳು ಕರ್ತವ್ಯಶೂನ್ಯವಾಗಿ ವಿಗುಣತೆಯನ್ನು ಹೊಂದುತ್ತವೆ. ಮನಸ್ಸು ಇಂದ್ರಿಯಗಳು ನಿಷ್ಕ್ರಿಯವಾಗುವದರಿಂದ, ಯಾವ ಜ್ಞಾನವೂ ಉಂಟಾಗುವದಿಲ್ಲ. ಇಂದ್ರಿಯ ವೈಗುಣ್ಯ (ವೈಕಲ್ಯ)ದಿಂದ ಆತ್ಮನೂ ಸಹ ಗಾಢವಾಗಿ ನಿದ್ರಿತನಂತೇ ತೋರುವದರಿಂದ, ಪ್ರಸುಪ್ತನೆಂದು ಹೇಳಲ್ಪಡುತ್ತಾನೆ.

ಅರ್ಥಾತ್ ತಮೋವ್ಯತಿನಿದ್ರೆಯಿಂದ, ಮನುಷ್ಯನು ನಿಷ್ಕ್ರಿಯನಾಗುತ್ತಾನೆ. ಅವನ ಜೀವವು ಸಹ ಯಾವಕರ್ತವ್ಯವಿಲ್ಲದೆ ಪ್ರಗಾಢ ನಿದ್ರೆ ಆವರಿಸಿದಂತೆ ತೋರುತ್ತದೆ. ಆತ್ಮನು ಇಂದ್ರಿಯಗಳಿಂದಲೇ ಕರ್ತವ್ಯ ಮಾಡಿಸುವದರಿಂದ ಇಂದ್ರಿಯವಿಗುಣತೆ ಉತ್ಪನ್ನವಾಗಲು,ಆತ್ಮನಯಾವದೇಇಂದ್ರಿಯಗಳಿಂದಾಗ ಬೇಕಾದಕ್ರಿಯೆಯೂ ನಡೆಯುವದಿಲ್ಲ.

ಸ್ವಪ್ನದರ್ಶನ

ಶಾಸ್ತ್ರೀಯ ದೃಷ್ಟಿಯಿಂದ ಸ್ವಪ್ನ ವಿಚಾರಮಾಡುವದಿದ್ದರೆ, ಗಾಢನಿದ್ದೆಯಲ್ಲಿದ್ದಾಗ ಸ್ವಪ್ನದರ್ಶನವಾಗುವದಿಲ್ಲ. ಯಾಕಂದರೆ ತಮಸ್ಸ್ನವ್ಯಾಪಿಸಿದಾಗ ಗಾಢನಿದ್ರೆಯಿರುತ್ತದೆ. ಆಗಮನಸ್ಸೂಸಹ ತಮೋವ್ಯಾಪ್ತವಾಗಿ ವಿಶ್ರಾಂತಿಯನ್ನನುಭವಿಸುತ್ತದೆ. ಸ್ವಲ್ಪ ತಮಸ್ಸಿದ್ದ ರಜೋಗುಣಾಧಿಕ್ಯವಾದಾಗಮನಸ್ಸು, ಶುಭಾಶುಭರೂಪವಾದ ವಿಷಯದರ್ಶನವನ್ನು ಪಡೆಯುತ್ತದೆ. ಕೆಲವೊಂದು ವಿಷಯಗಳಲ್ಲಿ ಸುಖದುಃಖಾದಿಗಳನ್ನು ಸಹ ಸ್ವಪ್ನದಲ್ಲಿ ಅನುಭವಿಸುತ್ತಾನೆ. ಎಚ್ಚರವಿಲ್ಲದಿರುವ ಸ್ಥಿತಿಯೇ ನಿದ್ರೆಯು. ನಿದ್ರೆಯ ಅಭಾವವೇ ಎಚ್ಚರವು. ಹೀಗಿರುವಾಗ ನಿದ್ರೆಯಲ್ಲಿದ್ದಾಗ ಅರ್ಥವನ್ನು (ವಿಷಯವನ್ನು) ಗ್ರಹಿಸುವ ಬೋಧ ಹೇಗಾಗುತ್ತದೆಂದೂ, ಜ್ಞಾನಸಹಿತವಾಗಿದ್ದರೆ ನಿದ್ರೆ ಇಲ್ಲದೆ ಎಚ್ಚರವಾಗಿಯೇ ಇರಬೇಕೆಂಬ ಆಕ್ಷೇಪಬರುತ್ತದೆ. ಯಾವ ವಿಷಯವನ್ನೇ ಆದರೂ ಸ್ವಪ್ನದಲ್ಲಿ ದರ್ಶನರೂಪಗ್ರಹಣಮಾಡುತ್ತೇವೆಯೋ, ಅದು ಬಾಹ್ಯವಿಷಯವೇ ಇರುತ್ತದೆ. ನಿದ್ರೆಯ ವೇಳೆಯಲ್ಲಿ ಬಾಹ್ಯವಿಷಯಗಳ ಸಂಬಂಧವೇ ಇರುವದಿಲ್ಲವಾದ್ದರಿಂದ ಸ್ವಪ್ನದಲ್ಲಿ ಹೇಗೆ ಸಂಬಂಧಬರುತ್ತದೆ. ಮತ್ತು ವಿಷಯಜ್ಞಾನವಾದರೂ ಆಗುವದರಿಂದ, ಇದಕ್ಕೆಕಾರಣವೇನೆಂದುಅನಿಸುವದು. ಇವೆಲ್ಲಕ್ಕೂ ಪೂರ್ವದಲ್ಲಿ ಅನುಭವಿಸಿದ ವಿಷಯಜ್ಞಾನವೇ ಕಾರಣವೆಂದು ಹೇಳುತ್ತಾರೆ. ನಿದ್ರೆಯ ಪೂರ್ವದಲ್ಲಿ ನೋಡಿದ ಸ್ವೀಕರಿಸಿದ ವಿಷಯಗಳಲ್ಲಿಯೆ, ಜ್ಞಾನರೂಪವಾದ ಸೃಷ್ಟಿಯು ಉಂಟಾಗುತ್ತದೆ. ಇದರಿಂದ ಮನೋಯುಕ್ತನಾದ ಜೀವನು ಸ್ವಪ್ನದಲ್ಲಿ ಪೂರ್ವ ಗ್ರಹೀತ ವಿಷಯದರ್ಶನವನ್ನುಹೊಂದುತ್ತಾನೆ. ಅಥವಾ ಜನ್ಮಾಂತರದಲ್ಲಿ ಗ್ರಹಿಸಿದ ವಿಷಯವನ್ನೂ ಇಲ್ಲವೇ ನಿದ್ರೆಗಿಂತ

ಪೂರ್ವದಲ್ಲಿ ಗ್ರಹಿಸಿರುವ ವಿಷಯವನ್ನೂ ಸ್ವಪ್ನದಲ್ಲಿ ಕಾಣುತ್ತಾನೆ. ಹೀಗೆ ಸ್ವಪ್ನವಿಷಯದಲ್ಲಿ ನಿರ್ದೇಶಿಸಿದ್ದಾರೆ.

ಪೂರ್ವದೇಹಾನುಭೂತಾಂಸ್ತು ಭೂತಾತ್ಮಾ ಸ್ವಪತಃ ಪ್ರಭುಃ ॥
ರಜೋಯುಕ್ತೇನಮನಸಾಗೃಹ್ಣಾತ್ಯರ್ಥಾನ್ ಶುಭಾಂಶುಭಾನ್ ॥

(ಸುಶ್ರುತ॥ ಶಾರೀರ॥ ಅ. ೪ ಶ್ಲೋ ೩೬)

ನಿದ್ರಿಸಿದ ಶರೀರದ ಒಡೆಯನಾದ ದೇಹನನ್ನುಹೊಂದಿದ ಆತ್ಮನು (ಭೂತಾತ್ಮಾ), ಪೂರ್ವಜನ್ಮದ ದೇಹದಲ್ಲಿ ಅನುಭವಿಸಿದ ಅಥವಾ ನಿದ್ರೆಯ ಪೂರ್ವದಲ್ಲಿಅನುಭವಿಸಿದ ಶುಭಾಶುಭಅರ್ಥಗಳನ್ನು, ರಜೋಗುಣಯುಕ್ತವಾದ ಮನಸ್ಸಿನಿಂದ ಕೂಡಿದವನಾಗಿ ಗ್ರಹಿಸುತ್ತಾನೆ. ಮನಸ್ಸು ತಮೋಯುಕ್ತವಾಗುವದರಿಂದ ನಿದ್ರೆಬರುತ್ತದೆಂದು ಪ್ರತಿಪಾದಿಸಿದ್ದಾರೆ. ತಮೋಯೋಗವುಳ್ಳ ಮನಸ್ಸು ನಿದ್ರೆಯಲ್ಲಿ ಶುಭಾಶುಭರೂಪವಾದ ಸ್ವಪ್ನದರ್ಶನವನ್ನು ಹೇಗೆ ಪಡೆಯುತ್ತದೆಂದು ಅನಿಸಬಹುದು ಅದಕ್ಕೆ ಶಾಸ್ತ್ರಕಾರರ ಮತವೆಂದರೆ, ಕೇವಲ ತಮೋಯೋಗವಿದ್ದಾಗ್ಯೆ ನಿದ್ರೆಯೂ, ರಜೋಗುಣ ಸಂಸರ್ಗದಿಂದ ಸ್ವಪ್ನದರ್ಶನವೂ, ಆಗುವದೆಂದು ಹೇಳಿದ್ದಾರೆ. ಗಾಢವಾದ ನಿದ್ರೆಯಲ್ಲಿ "ಸ್ವಪ್ನದರ್ಶನ"ವಾಗುವದಿಲ್ಲ. ಅರನಿದ್ದೆಯಿರುವಾಗಲೇ ಆಗುವದರಿಂದ ಸ್ವಪ್ನದಲ್ಲಿಯ ವಿಷಯಗ್ರಹಣದ ಮಟ್ಟಿಗೆ ಬೋಧೆಯಿರುತ್ತದೆ.

ದಿವಾಸ್ವಾಪರಾತ್ರಿ ಜಾಗರಣೆಗಳ ನಿಷೇಧ

ಸರ್ವರ್ತುಷು ದಿವಾಸ್ವಾಪಃ ಪ್ರತಿಷಿದ್ಧೋಽನ್ಯತ್ರಗೀಷ್ಮಾತ್,
ಪ್ರತಿಷಿದ್ಧೇಷ್ವಪಿತು ಬಾಲ ವೃದ್ಧಸ್ತ್ರೀಕರ್ಶಿತಕ್ಷತಕ್ಷೀಣಮದ್ಯ
ನಿತ್ಯಯಾನವಾಹನಾಧ್ವ ಕರ್ಮಪರಿಶ್ರಾಂ ನಾ ನಾಮುಭುಕ್ತ
ವತಾಂ ಮೇದಃ ಸ್ವೇದ ಕಫ ರಸ ರಕ್ತ ಕ್ಷೀಣಾನಾಮಜೀರ್ಣ
ನಾಂ ಚ ಮುಹೂರ್ತಂ ದಿವಾಸ್ವಪನಮುಪ್ರತಿಷಿದ್ಧಂ ॥ ರಾತ್ರಾ
ವಪಿ ಜಾಗರಿತವತಾಂ ಜಾಗರಿತಕಾಲಾದರ್ಧಮಿಷ್ಯತೇ ದಿವಾ
ಸ್ವಪನಂ॥ ವಿಕೃತಿರ್ಹಿ ದಿವಾಸ್ವಪ್ನೋ ನಾಮ; ತತ್ರ ಸ್ವಪತಾಮು

ಧರ್ಮಃ ಸರ್ವದೋಷ ಪ್ರಕೋಪಶ್ಚ, ತತ್ಪ್ರಕೋಪಾಚ್ಚ ಕಾಸ ಶ್ವಾಸ ಪ್ರತಿಶ್ಯಾಯ ಶಿರೋಗೌರವಾಂಗಮರ್ದಾರೋಚಕಜ್ವರಾಗ್ನಿದೌರ್ಬಲ್ಯಾನಿಭವಂತಿ; ರಾತ್ರಾವಪಿ ಜಾಗರಿತವತಾಂ ವಾತ ಪಿತ್ತ ನಿಮಿತ್ತಾಸ್ತ ಏವೋಪದ್ರವಾ ಭವಂತಿ ॥

(ಸುಶ್ರುತ॥ ಶಾರೀರ॥ ಅ. ೪ ಶ್ಲೋ. ೩೮)

ಗ್ರೀಷ್ಮ ಋತುವನ್ನು ಬಿಟ್ಟು (ಜ್ಯೇಷ್ಠ ಆಷಾಢ) ಉಳಿದ ಋತುಗಳಲ್ಲಿ ಹಗಲು ನಿದ್ರಿಸುವದು (ದಿವಾಸ್ವಾಪಃ) ನಿಷಿದ್ಧವಾಗಿರುತ್ತದೆ. ದಿವಾಸ್ವಾಪ ನಿಷಿದ್ಧವಿರುವ ಋತುಗಳಲ್ಲಿಯೂ ಕೂಡಾ, ಬಾಲಕರು, ಮುದುಕರು, ವಿಶೇಷವಂಗಿ ಸ್ತ್ರೀ ಸೇವನೆಮಾಡುವವರು, ಘಾಯಾದಿಗಳುಳ್ಳವರು, ಕ್ಷೀಣರು, ಅಥವಾ ಕ್ಷತದಿಂದ ಕ್ಷೀಣವಾದವರು, ಮದ್ಯಸೇವನೆಮಾಡುವವರು, ನಿತ್ಯದಲ್ಲಿಯೂ ಯಾನಾರೋಹಣಮಾಡುವವರು, ವಾಹನಾದಿಗಳನ್ನು ನಡೆಸುವವರು, ಅಥವಾ ಒಜ್ಜೆ ಹೊರುವವರು, ಮಾರ್ಗಕ್ರಮಣಮಾಡುವವರು, ಕೆಲಸಮ್ಮಾಡಿ ಬಳಲಿದಂತವರು, ಭೋಜನಮಾಡದವರು, ಮುಂತಾದವರಿಗೆ ಹಗಲು ನಿದ್ರೆಯು ನಿಷಿದ್ಧವಿಲ್ಲವು. ಮತ್ತು ಮೇದಸ್ಸು, ಸ್ವೇದ, ಕಫ, ರಸ, ರಕ್ತಗಳು ಕ್ಷೀಣವಾದಂಧವರೂ, ಅಜೀರ್ಣವಾದವರೂ, ನಿದ್ರೆಯನ್ನು ಒಂದುಮುಹೂರ್ತ ನಷ್ಟು ಹೊತ್ತು (೪೮ ನಿಮಿಟು) ಮಾಡಬಹುದು. ಈ ಪೂರ್ವೋಕ್ತವಾದವರಿಗೆ ಹಗಲುನಿದ್ರೆಯನ್ನು ಒಂದು ಮುಹೂರ್ತದಷ್ಟು ಹೊತ್ತು ತೆಗೆದುಕೊಳ್ಳುವದು ನಿಷಿದ್ಧವಾಗಲಾರದು. ರಾತ್ರಿಯಲ್ಲಿ ಜಾಗರಮಾಡಿದವರಿಗೆ ಜಾಗರದ ಅರ್ಧದಷ್ಟು ಹೊತ್ತು ಹಗಲು ನಿದ್ರೆಯು ನಿಷಿದ್ಧವಲ್ಲ ಜಾಗರದ ಅರ್ಧದಷ್ಟು ಕಾಲ ನಿದ್ರೆಮಾಡಬಹುದೆಂಬರ್ಥವು ಹಗಲು ನಿದ್ರೆಯನ್ನುಮಾಡುವದು ದೋಷಪ್ರಕೋಪಕ್ಕೆ (ವಿಕೃತಿಗೆ) ಕಾರಣವಾಗಿರುತ್ತದೆ. ಹಗಲಿನಲ್ಲಿ ನಿದ್ರಿಸುವವರಿಗೆ ಅಧರ್ಮಪ್ರಾಪ್ತಿಯಾಗುತ್ತದೆ. ಮತ್ತು ವಾತಾದಿ ಸರ್ವದೋಷಗಳೂ ಪ್ರಕುಪಿತವಾಗುತ್ತವೆ. ದೋಷಪ್ರಕೋಪದಿಂದ ಕೆಮ್ಮು, ನೆಗಡಿ, ತಲೆ ಭಾರವಾಗುವದು, ಮೈ ಕೈ ನೋವು, ಅರೋಚಕ, ಜ್ವರ, ಅಗ್ನಿದೌರ್ಬಲ್ಯ (ಅಗ್ನಿಮಾಂದ್ಯ) ಮೊದಲಾದವುಗಳುತ್ಪನ್ನವಾಗುತ್ತವೆ. ಇದರಂತೆ ರಾತ್ರಿಯಲ್ಲಿ ಜಾಗರಣೆಮಾಡುವದರಿಂದ ವಾತಾದಿದೋಷಗಳು ಪ್ರಕುಪಿತವಾಗಿ

ಪೂರ್ವೋಕ್ತವಾದವಿಕಾರಗಳು ಸಂಭವಿಸುತ್ತವೆ. ಆದ್ದರಿಂದ ದಿವಾಸ್ವಾಪವೂ, ರಾತ್ರಿ ಜಾಗರಣೆಯೂ, ಆರೋಗ್ಯಕ್ಕೆ ಯೋಗ್ಯವಾದದ್ದಲ್ಲ ವಿಶೇಷವಾದ ಕಾರಣ ನಿಮಿತ್ತದಿಂದಾಗಿ, ಸ್ವಲ್ಪ ದಿವಾಸ್ವಾಪವನ್ನು ಅವಶ್ಯವಿದ್ದರೆ ಮಾಡ ಬಹುದೆಂದು ಹೇಳಿದ್ದಾರೆ.

ತಸ್ಮಾನ್ನ ಜಾಗೃಯಾದ್ರಾತ್ರೌ ದಿವಾಸ್ವಪ್ನಂ ಚ ವರ್ಜಯೇತ್ ॥
ಜ್ಞಾತ್ವಾ ದೋಷಕರಾವೇತೌ ಬುಧಃ ಸ್ವಪ್ನಂ ಮಿತಂ ಚರೇತ್ ॥
ಅರೋಗಃ ಸುಮನಾ ಹ್ಯೇವಂ ಬಲವರ್ಣಾನ್ವಿತೋ ವ್ಯಷಃ ॥
ನಾತಿಸ್ಥೂಲಕೃಶಃ ಶ್ರೀಮಾನ್ ನರೋ ಜೀವೇತ್ ಸಮಾಃ ಶತಂ॥
(ಸುಶ್ರುತ॥ ಶಾರೀರ॥ ಅ ೪ ಶ್ಲೋ ೪೦)

ದೋಷಪ್ರಕೋಪವಿಕೃತಿ ಉಪದ್ರವಗಳುತ್ಪನ್ನವಾಗುವದರಿಂದ, ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬಾರದು. ಇದರಂತೆ ಹಗಲು ನಿದ್ರೆಯನ್ನು ಸಹ ವರ್ಜಿಸಬೇಕು. ತಿಳುವಳಿಕೆಯುಳ್ಳವನು, ಹಗಲು ನಿದ್ರಿಸುವದೂ ರಾತ್ರಿ ಜಾಗರಣೆಯೂ ಯೋಗ್ಯವಲ್ಲವೆಂದು ತಿಳಿದು, ನಿದ್ರೆಯನ್ನು ಯೋಗ್ಯಮಿತವಾಗಿ ಸೇವಿಸಬೇಕು. ಯೋಗ್ಯ ಕಾಲವನ್ನರಿತು ನಿದ್ರೆಯನ್ನುಸೇವಿಸುವವನು, ರೋಗವಿಲ್ಲದವನೂ, ಹರ್ಷಿತನಾದವನಾಗಿಯೂ(ಸುಮನಾಃ),ಶಕ್ತಿ, ಕಾಂತಿ, ಪ್ರಜ್ಞೋತ್ಪಾದನೆ ಶಕ್ತಿಯುಳ್ಳ (ವ್ಯಷಃ) ವನೂ, ಆಗುತ್ತಾನೆ. ಅತಿಸ್ಥೂಲ ಕೃಶತೆಗಳಿಲ್ಲದೆ ಮಧ್ಯದೇಹವುಳ್ಳವನಾಗಿಯೂ, ಆರೋಗ್ಯಾದಿಗಳಿಂದ ದೃಢ ಶರೀರವುಳ್ಳವನಾಗಿ; ಮನುಷ್ಯನು ಒಂದು ನೂರು ವರುಷ ಬದುಕುತ್ತಾನೆ. ಆದ್ದರಿಂದ ನಿದ್ರೆಯನ್ನು ಯೋಗ್ಯ ಕಾಲದಲ್ಲಿ ಹಿತವನ್ನರಿತು ಸೇವಿಸಬೇಕೆಂದು ಶಾಸ್ತ್ರಕಾರರು ವಿಧಿಸಿದ್ದಾರೆ.

ನಿದ್ರೆಯ ವಿಷಯದಲ್ಲಿ ವಿಶೇಷ

ನಿದ್ರಾಸಾತ್ಮ್ಯೀಕೃತಾಯೈಸ್ತು ರಾತ್ರೌ ಚ ಯದಿವಾದಿವಾ ॥
ದಿವಾರಾತ್ರೌ ಚ ಯೇನಿತ್ಯಂ ಸ್ವಪ್ನಜಾಗರಣೋಚಿತಾಃ ॥
ನತೇಷಾಂ ಸ್ವಪತಾಂದೋಷೋ ಜಾಗ್ರತಾಂ ವಾಽಪಿ ಜಾಯತೆ ॥
(ಸುಶ್ರುತ॥ ಶಾರೀರ॥ ಅ ೪ ಶ್ಲೋ ೪೧)

ಹಗಲು ರಾತ್ರಿಗಳಲ್ಲಿ ಸಮಯವರಿತು ನಿದ್ರಿಸುವದು ಯಾರಿಗೆ ಆರೋಗ್ಯಕರ (ಸಾತ್ಮ್ಯ) ವಾಗಿರುವದೋ, ಅವರು ಅದರಂತೆ ವರ್ತಿಸಿದರೆ ಬಾಧಕವಲ್ಲವು. ನಿತ್ಯವೂ ಹಗಲು ರಾತ್ರಿಗಳಲ್ಲಿ ನಿದ್ರೆ ಜಾಗರಣೆಗಳು ಯಾರಿಗೆ ಸ್ವಾತ್ಮವಾಗಿರುತ್ತವೆಯೋ, ಅವರು ಹಗಲು ನಿದ್ರಿಸುವದರಿಂದಲೂ ರಾತ್ರಿಯಲ್ಲಿ ಜಾಗರಣೆ ಮಾಡುವದರಿಂದಲೂ ದೋಷ ಪ್ರಕೋಪವಾಗಲಾರದು. ಅರ್ಥಾತ್ ಹಗಲು ನಿದ್ರೆಯು ಯಾರಿಗೆ ಆರೋಗ್ಯಕಾರಕವಾಗಿದೆಯೋ, ಅವರು ನಿದ್ರಿಸಬಹುದು. ರಾತ್ರಿಯಲ್ಲಿ ಸ್ವಲ್ಪ ತಡೆದು ಮಲಗುವ ಅಭ್ಯಾಸವಿದ್ದು ಆರೋಗ್ಯಕ್ಕೆ ಯೋಗ್ಯವೆನಿಸುವವರು ಅದರಂತೆಯೇ ನಡೆಯಬಹುದು.

ನಿದ್ರಾನಾಶವಾದರೆ ಉಪಚಾರ

ನಿದ್ರಾನಾಶೋ೭ನಿಲಾತ್ ಪಿತ್ತಾತ್ಮನಸ್ತಾಪಾತ್ ಕ್ಷಯಾದಪಿ ॥
ಸಂಭವತ್ಯಭಿಘಾತಾಚ್ಚ ಪ್ರತ್ಯನೀಕೈಃ ಪ್ರಶಾನ್ಯತಿ ॥೪೨॥

ನಿದ್ರಾನಾಶೋ೭ಭ್ಯಂಗಯೋಗೋಮೂರ್ಧ್ನಿತೈಲನಿಷೇವಣಂ ॥
ಗಾತ್ರಸ್ಯೋದ್ವರ್ತನಂಚೈವಹಿತಂ ಸಂವಾಹನಾನಿಚ ॥೪೩॥

ಶಾಲಿಗೋಧೂಮ ಪಿಷ್ಟಾನ್ನಭಕ್ಷ್ಯೈರ್ಭೈಕ್ಷವಸಂಸ್ಕೃತೈಃ ॥
ಭೋಜನಂಮಧುರಂ ಸ್ನಿಗ್ಧಂ ಕ್ಷೀರಮಾಂಸ ರಸಾದಿಭಿಃ ॥೪೪॥

ರಸೈರ್ಬಿಲೇಶಯಾನಾಂಚ ವಿಷ್ಕಿರಾಣಾಂತಥೈವಚ ॥
ದ್ರಾಕ್ಷಾಸಿತೇಕ್ಷುದ್ರವ್ಯಾಣಾಮುಪಯೋಗೋಭವೇನ್ನಿಶಿ॥೪೫॥

ಶಯನಾಸನಯಾನಾನಿ ಮನೋಜ್ಞಾನಿಮೃದೂನಿಚ ॥
ನಿದ್ರಾನಾಶೇತುಕುರ್ವೀತತಥಾ೭ನ್ಯಾನ್ಯಪಿ ಬುದ್ಧಿಮಾನ್ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೊ ೪೬)

ವಾತಾಧಿಕ್ಯದಿಂದಲೂ, ಪಿತ್ತದಿಂದ, ಮನಸ್ಸಿನ ಚಿಂತೆ ಮೊದಲಾದವುಗಳಿಂದ, ಕ್ಷಯದಿಂದ ಅಥವಾ ಶರೀರದಲ್ಲಿಯ ರಸಾದಿ ಧಾತುಗಳ ಕ್ಷೀಣತೆ

ಯಿಂದ, ದೈಹಿಕ ಮಾನಸಿಕ ಆಘಾತಗಳಿಂದಲೂ, ನಿದ್ರಾನಾಶವು ಸಂಭವಿಸ
ತ್ತದೆ. ನಿದ್ರಾನಾಶವು ಯಾವ ಕಾರಣಗಳಿಂದ ಸಂಭವಿಸಿರುತ್ತದೆಂಬು
ದನ್ನು ತಿಳಿದುಕೊಂಡು, ಅವುಗಳ ಪ್ರತೀಕಾರ ರೂಪವಾದ ಚಿಕಿತ್ಸೆಗಳನ್ನು
ಮಾಡಬೇಕು.

ನಿದ್ರಾ ನಾಶದಲ್ಲಿ ಮಾಡಬೇಕಾದ ಚಿಕಿತ್ಸೆಯು

ತಲೆಗೆ ಎಣ್ಣೆಯನ್ನುಣಿಸಬೇಕು (ತೈಲನಿವೇಷಣ), ಮೈಗೆ ತೈಲಾ
ಗಳನ್ನು ಹಚ್ಚಿಕೊಳ್ಳುವದು, ಅಥವಾ ಅಂಗಾಂಗಗಳಿಗೆ ತೈಲವನ್ನು ಪಚ
ಮರ್ದಿಸುವದು, ಹಿತವಾಗುವಂತೆದೇಹಕ್ಕೆ ಮೃದುಮರ್ದನೆಯನ್ನುಮಾಡೋಣ
ಅಭ್ಯಂಗಸ್ನಾನ ವೊದಲಾದವುಗಳ., ನಿದ್ರಾನಾಶದಲ್ಲಿಯೋಗ್ಯವಾಗಿರುತ್ತವೆ
ಅಕ್ಕಿ ಗೋದಿಯ ಹಿಟ್ಟು ಇವುಗಳಲ್ಲಿ ಕಬ್ಬಿನ ಹಾಲನ್ನು ಕೂಡಿಸಿ ಮಾಡಿ
ಭಕ್ಷ್ಯವು, ಯೋಗ್ಯ ಪರಿಷ್ಕೃತವಾದ ಅನ್ನ, ಹಾಲು, ಮಾಂಸ ರಸಯುಕ್ತ
ವಾದ, ಸತ್ವವುಳ್ಳ ಮಧುರ ಪೌಷ್ಟಿಕ ಆಹಾರವನ್ನು ಉಪಯೋಗಿಸಬೇಕು
ಮಧುರವಾದ ರಸಯುಕ್ತ ಆಹಾರಗಳ ಸಂಗಡ ಭೂಮಿಯ ಹೋರಿನ
ವಾಸಮಾಡುವ ಪ್ರಾಣಿಯ ಮಾಂಸ, ಪಕ್ಷಿಗಳ ಮಾಂಸಗಳನ್ನುಪಯೋಗಿ
ಬೇಕು. ರಾತ್ರಿಯ ಸಮಯದಲ್ಲಿ ದ್ರಾಕ್ಷಿ, ಸಕ್ಕರೆ, ಕಬ್ಬಿನ ರಸ ಮೊ
ಲಾದವುಗಳಿಂದ ಕೂಡಿದ ಪದಾರ್ಥಗಳ ಉಪಯೋಗವನ್ನು ಮಾಡಬೇಕ
ಅಥವಾ ದ್ರಾಕ್ಷೆಯನ್ನೂ, ಬಿಳೀ ಕಬ್ಬಿನ ರಸ ಮಿಶ್ರಿತ ದ್ರವ್ಯಗಳನ್ನೂ ಸೇ
ಸಬೇಕು ಹಾಸಿಗೆ, ಆಸನ, ಯಾನಗಳು ಮನೋಹರವೂ, ಒರಟಾಗಿ ಮೈ
ನೋವನ್ನುಂಟುಮಾಡದಿರುವವೂ,ಮೃದುವಾಗಿಯೂ ಸ್ವರ್ಯಾನುಕೂಲಹಿತಕ
ವಾದವುಗಳನ್ನು ಯೋಜಿಸಬೇಕು. ಇವೆಲ್ಲ ಉಪಾಯಗಳನ್ನು ದೋಷಾ
ಗಳನ್ನನುಲಕ್ಷಿಸಿಯೋಜಿಸಬೇಕು ಇದರಿಂದ ನಿದ್ರೆಯು ಚನ್ನಾಗಿ ಬ
ತ್ತದೆ. ನಿದ್ರಾನಾಶದಲ್ಲಿ ವೈದ್ಯನು ಸಮಯಕ್ಕನುಗುಣವಾಗಿ ಸ್ವಬುದ್ಧಿಯಿಂ
ವಿಚಾರಿಸಿ,ನಿದ್ರಾಕಾರಕವಾದ ಆಹಾರೋಪಚಾರಗಳನ್ನು ಯೋಜಿಸಬಹುದು

ಅತಿನಿದ್ರೆಯ ನಿವಾರಣೋಪಾಯ
ನಿದ್ರಾತಿಯೋಗೇವಮನಂ ಹಿತಂ ಸಂಶೋಧನಾನಿಚ ॥

ಲಂಘನಂ ರಕ್ಷಣೋಕ್ಷಣಮನೋವ್ಯಾಕುಲನಾನಿಚ ॥
(ಸುಶ್ರುತ॥ ಶಾರೀರ॥ ಅ ಳ ಶ್ಲೋ ೪೭)

ನಿದ್ರೆಯು ಹೆಚ್ಚಾದರೆ ವಮನ (ವಾಂತಿ ಮಾಡಿಸೋಣ) ಸಂಶೋಧನ ಔಷಧೋಪಚಾರಗಳನ್ನು ಯೋಜಿಸಬೇಕು. ಲಂಘನ (ಉಪವಾಸ) ರಕ್ತ ಮೋಕ್ಷಣ, ಮನಸ್ಸಿಗೆ ದುಃಖವನ್ನುತ್ಪನ್ನ ಮಾಡೋಣದರಿಂದಲೂ ಅತಿ ನಿದ್ರೆಯು ಕಡಿಮೆಯಾಗುತ್ತದೆ. ನಿದ್ರೆಯುಕ್ಷೀಣತೆಯಾದರೆ ನಿದ್ರೆ ಬರುವಂತೆಯೂ, ಅತಿಯಾದರೆ ಕಡಿಮೆಯಾಗುವಂತೆಯೂ ಉಪಚಾರಗಳನ್ನು ಹೇಳಿದ್ದಾರೆ. ಇದರಿಂದ ಹಿಂದೆ ನಿದ್ರೆಯನ್ನು ಹೊಗಳಿ ನಿದ್ರೆಯಿಂದಲೇ ಸುಖ ದುಃಖ ಬದುಕುವಿಕೆ ಮೊದಲಾದವುಗಳೆಂದು ಹೇಳಿರುವದು, ಸಮವಾದ ನಿದ್ರೆಯನ್ನು ಕುರಿತು ಹೇಳಿದ್ದಾರೆಂದು ತಿಳಿಯಬೇಕು. ಸಮನಿದ್ರೆಯು ಆರೋಗ್ಯದಾಯಕವಾಗಿರುತ್ತದೆ ಅದೇ ನಿದ್ರೆಯ ಅತಿಯೋಗ ಅಯೋಗಗಳು ದೋಷಯುಕ್ತವೇ ಆಗಿರುತ್ತವೆ.

ರಾತ್ರಿ ಜಾಗರಣೆಗೆಯೋಗ್ಯರು

ಕಫಮೇದೋವಿಷಾರ್ತಾನಾಂ ರಾತ್ರೌಜಾಗರಣಂ ಹಿತಂ ॥
(ಸುಶ್ರುತ॥ ಶಾರೀರ॥)

ಕಫ ಮತ್ತು ಮೇದೋವೃದ್ಧಿಗಳಿಂದ ನರಳುವವರು, ಹಾಗೂ ವಿಷಭಾಧೆಯುಳ್ಳವರು, ರಾತ್ರಿಯಲ್ಲಿ ಜಾಗರಣೆಮಾಡುವದು ಹಿತಕರವಾಗಿದೆ.

ಹಗಲು ನಿದ್ರೆಗೆ ಯೋಗ್ಯರು

ದಿವಾಸ್ವಪ್ನಶ್ಚ ತೃಟ್ ಶೂಲಹಿಕ್ಕಾSಜೀರ್ಣSತಿಸಾರಿಣಾಂ ॥
(ಸುಶ್ರುತ॥ ಶಾರೀರ॥ ಅ. ಳ ಶ್ಲೋ ೪೮)

ಹಗಲು ನಿದ್ರೆಯು ನಿಷಿದ್ಧವಾಗಿದ್ದರೂ ರೋಗಾವಸ್ಥೆಗನುಗುಣವಾಗಿ ಹಿತಕರವೂ ಆಗಿರುತ್ತದೆ. ಅಂತೆಯೇ ತೃಷ್ಣಾ (ನೀರಡಿಕೆ), ಶೂಲೆ, ಬಿಕ್ಕು

(ಹಿಕ್ಕ್ಕಾ), ಅಜೀರ್ಣ, ಮತ್ತೂ ಅತಿಸಾರ ರೋಗಗಳಿಂದ ನರಳುವವರಿಗೆ ಹಗಲು ನಿದ್ರೆಯು ಹಿತಕರವಾಗಿದೆ. ರಾತ್ರಿಯಲ್ಲಿ ಜಾಗರಣೆಯೂ, ಹಗಲು ನಿದ್ರಿಸುವದೂ, ಆರೋಗ್ಯಕ್ಕೆ ಹಾನಿಕರವಾದದ್ದೆಂದು ನಿಷೇಧಿಸಿದ್ದರೂ ಸಹ ಕೆಲವೊಂದು ರೋಗಗಳಲ್ಲಿ; ದೋಷಪ್ರತೀಕಾರರೂಪ ಚಿಕಿತ್ಸೆಗಾಗಿ ಹಿತಕರವೆಂದು ಯೋಜಿಸಿದ್ದಾರೆ. ಆದ್ದರಿಂದ ಈ ರೋಗಿಗಳ ಹೊರತಾದವರಿಗೆ ನಿಷಿದ್ಧವೆಂದೂ ದೋಷಪ್ರಕೋಪಕಾರಕವೆಂದೂ ತಿಳಿಯಬೇಕು.

ಮಬ್ಬಿನ (ತಂದ್ರಾ) ಲಕ್ಷಣ

ಇಂದ್ರಿಯಾರ್ಥೇಷ್ವಸಂಪ್ರಾಪ್ತಿರ್ಗೌರವಂ ಜೃಂಭಣಂ ಕ್ಲಮಃ॥
ವಿದ್ಯಾತ್ತಂದ್ರ್ಯಸ್ಯೇವಯಸ್ಯೇಹಾತಸ್ಯ ತಂದ್ರಾಂ ವಿನಿರ್ದಿಶೇತ್ ॥

(ಸುಶ್ರುತ॥ ಶಾರೀರ॥ ಅ. ೪ ಶ್ಲೋ. ೪೯)

ತಮಸ್ಸಿಂದುತ್ಪನ್ನವಾಗುವ ಮೋಹ (ಆವರಣ) ರೂಪವಾದ ನಿದ್ರೆಯ ಅನುಸರಣೆಯನ್ನುಮಾಡುವ (ನಿದ್ರೆಯಂತಿರುವ), ತಂದ್ರಾ ಸ್ವರೂಪವನ್ನು ಹೇಳುತ್ತಾರೆ. ಇಂದ್ರಿಯಕ್ಕೆ ವಿಷಯಗಳಾದ ಶಬ್ದಾದಿಗಳನ್ನು ಗ್ರಹಿಸಲಿಕ್ಕೆ ಬಾರದೇ ಇರೋಣ, ದೇಹೇಂದ್ರಿಯಾದಿಗಳಲ್ಲಿ ಜಡತ್ವ ಉಂಟಾಗುವದು, ಆಕಳಿಕೆ, ಬಳಲುವಿಕೆ, ಮೊದಲಾದವುಗಳುಂಟಾಗುತ್ತವೆ. ನಿದ್ರೆಯಿಂದ ಯಾವನಿಗೆ ಬಾಧಿಸಲ್ಪಡುವಂತೆ ಅನಿಸುತ್ತದೆಯೋ, ಅವನಿಗೆ ತಂದಾ (ಮಬ್ಬು) ಉತ್ಪನ್ನವಾಗಿದೆಯೆಂದು ತಿಳಿಯಬೇಕು. ನಿದ್ರೆಯಲ್ಲಿಯೂ ಸಹ ಇಂದ್ರಿಯ ವಿಷಯಗಳ ಗ್ರಹಣವಿರುವದಿಲ್ಲವಾದ್ದರಿಂದ, ನಿದ್ರೆ ತಂದ್ರಾಗಳಲ್ಲಿ ಭೇದವೇ ಇರುವದಿಲ್ಲೆಂದು ಅನಿಸುವದು. ವಸ್ತುತಃ ಭೇದವಿದ್ದೇ ಇರುತ್ತದೆ. ಹೇಗಂದರೆ:— ನಿದ್ರೆಯಲ್ಲಿ ಎಚ್ಚರವಾದ ನಂತರ ಬಳಲಿಕೆ ಇರುವದಿಲ್ಲ. ತಂದ್ರಾದಲ್ಲಿ (ಮಬ್ಬಿನಲ್ಲಿ) ಎಚ್ಚರವಿದ್ದರೂ ಸಹ ಬಳಲುವಿಕೆ ಇರುತ್ತದೆ. ಇದೇ ನಿದ್ರೆ ಮಬ್ಬುಗಳಲ್ಲಿಯ ವಿಶೇಷ ಭೇದವು. ಇದರಿಂದ ನಿದ್ರಾ ತಂದ್ರಾ ಒಂದೇ ಅಲ್ಲವೆಂದು ಸಿದ್ಧವಾಗುತ್ತದೆ.

ಆಕಳಿಕೆಯು (ಜೃಂಭಾ) ಲಕ್ಷಣ

ಪೀತ್ವೈಕಮನಿಲೋಚ್ಛ್ವಾಸಮುದ್ವೇಷ್ಟನ್ ವಿವೃತಾನನಃ ॥
ಯಂ ಮುಂಚತಿಸನೇತ್ಯಾಸ್ಯಂ ಸಜೃಂಭ ಇತಿ ಸಂಜ್ಞಿತಃ ॥

(ಸುಶ್ರುತ॥ ಶಾರೀರ॥ ಅ. ೪ ಶ್ಲೋ. ೫೦)

ಬಾಯಿಯನ್ನು ತೆರೆದವನಾಗಿ ದೊಡ್ಡದಾದ ಶ್ವಾಸವನ್ನು ಗ್ರಹಿಸಿ ಉದ್ವೇಗದಿಂದ ಕಣ್ಣೀರಿನಿಂದ ಸಹಿತವಾದ ಶ್ವಾಸವನ್ನು ಬಿಡುತ್ತಾನೆಯೋ, ಅದಕ್ಕೆ ಆಕಳಿಕೆ (ಜೃಂಭ) ಎಂದು ಅನ್ನುತ್ತಾರೆ ಆಕಳಿಕೆ ಬರುವಾಗ ಮೊದಲು ಬಾಯಿ ತೆರೆದು ಹೆಚ್ಚು ಶ್ವಾಸವನ್ನು ಗ್ರಹಿಸುತ್ತಾನೆ ನಂತರ ಶ್ವಾಸವನ್ನು ಕೆಲವು ಹೊತ್ತು ಬಾಯಲ್ಲಿಯೇ ಇಟ್ಟುಕೊಂಡು ಉದ್ವೇಗ ಹೊಂದಿದವನಾಗಿ ಆಕಳಿಸಿ, ಶ್ವಾಸವನ್ನೂ ಕಣ್ಣೀರನ್ನೂ ಬಿಡುತ್ತಾನೆ ಹೀಗೆ ಆಕಳಿಕೆ ಬರಲಿಕ್ಕೆಹತ್ತಿತೆಂದರೆ ವಾಡಿಕೆಯಲ್ಲಿ ಬೇಸರ ಬಂದಿದೆಯೆಂದು ಹೇಳುತ್ತಾರೆ. ಇದು ಸಮಂಜಸವಲ್ಲ. ಯಾಕಂದರೆ, ನಿದ್ರೆಯು ಪೂರ್ವದಲ್ಲಿ ಇಂದ್ರಿಯಗಳು ಕೆಲಸಮಾಡದ ಸ್ಥಿತಿಯಲ್ಲಿರುತ್ತವೆಯಾದ್ದರಿಂದ ಹೀಗಾಗುತ್ತದೆ. ನಿದ್ರೆಯು ಬರುತ್ತದೆ ಎನ್ನುವದರ ಪೂರ್ವ ಲಕ್ಷಣವಾದ್ದರಿಂದ ನಿದ್ರೆಗೆ ಸಂಬಂಧಪಟ್ಟುಹೇಳಿದ್ದಾರೆ. ಆದ್ದರಿಂದ ಆಕಳಿಕೆಗೆ ಬೇಸರವೇ ಕಾರಣವಲ್ಲದೆ, ನಿದ್ರೆಯೂ ಕಾರಣವಾಗಿರುತ್ತದೆಂದು ತಿಳಿಯಬೇಕು. ಅನುಷಂಗಿಕವಾಗಿ ಬೇಸರವು ಇರುತ್ತದೆ. ಬೇಸರವೆಂದರೆ ನಿದ್ರೆಯು ಬರುವ ಪೂರ್ವದಲ್ಲಿ ಇಂದ್ರಿಯಗಳು ಕೆಲಸಮಾಡಲಾರದ ಉದಾಸೀನ ಸ್ಥಿತಿಯಾಗಿರುತ್ತದೆ.

ಶೀನುವದರ ಲಕ್ಷಣ

ಪ್ರಾಣೋದಾನೌ ಸಮೌಸ್ಯಾತಾಂ ಮೂರ್ಧ್ನಿಸ್ರೋತಃಪಥಿಸ್ಥಿತೌ॥ ನಸ್ತಃ ಪ್ರವರ್ತತೇಶಬ್ದಃ ಕ್ಷವಥುಂತಂವಿನಿರ್ದಿಶೇತ್ ॥

(ಸುಶ್ರುತ ಟೀಕಾ)

ಪ್ರಾಣಉದಾನವಾಯುಗಳು ಸಮಪ್ರಮಾಣವುಳ್ಳವುಗಳಾಗಿ ತಲೆಯಲ್ಲಿ ಸ್ರೋತೋ ಮಾರ್ಗದಲ್ಲಿ ನಿಂತವುಗಳಾಗುತ್ತವೆ ನಂತರ "ನಸ್ಯಃ" ಎಂಬ ಶಬ್ದವು ಉತ್ಪನ್ನವಾಗಿ ವಾಯುವಿನಿಂದ ಕೂಡಿ ಹೊರಗೆ ಬರುತ್ತದೆ. ಇದನ್ನು ಶೀನು (ಕ್ಷವಥು) ಎಂದು ತಿಳಿಯಬೇಕು. ಮೂಗಿನಲ್ಲಿ ನಸ್ಯಾದಿಗಳನ್ನು ಏರಿಸಿದಾಗಲೂ, ಅಥವಾ ಮೇಲಕ್ಕೆ ಮೋರೆಮಾಡಿ ಸೂರ್ಯನ ಕಿರಣವು ಮೂಗಿನಲ್ಲಿ ಬರುವಂತೆ ಮಾಡಿದಾಗಲೂ, ಇಲ್ಲವೇ ವಸ್ತ್ರದ ಚುಂಗನ್ನು ಮೂಗಿನಲ್ಲಿ ಅಡಿಸಿದಾಗಲೂ ಶೀನು ಬರುತ್ತದೆ

ಕ್ಲಮಸ್ಯ ಲಕ್ಷಣಂ

ಯೋಽನಾಯಾಸಶ್ರಮೋದೇಹೇಪ್ರವೃದ್ಧಃ ಶ್ವಾಸವರ್ಜಿತಃ ॥
ಕ್ಲಮಃ ಸಇತಿವಿಜ್ಞೇಯಃ ಇಂದ್ರಿಯಾರ್ಥಪ್ರಬಾಧಕಃ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೫೧)

ಆಯಾಸವಾಗುವಂಥ ಕೆಲಸವನ್ನು ಮಾಡದೆ ದೇಹದಲ್ಲಿ ಶ್ರಮವು ಹೆಚ್ಚಿಗೆಯಾಗೋಣ, ಶ್ರಮವಾದಾಗಿನಂತೆ ಶ್ವಾಸದ ಹೆಚ್ಚುವಿಕೆ ಇಲ್ಲದಿರುವದು "ಕ್ಲಮವೆಂದು" ತಿಳಿಯಬೇಕು. ಕ್ಲಮವಾದಾಗಲೂಸಹ ಇಂದ್ರಿಯಗಳು ವಿಷಯ ಸ್ವೀಕಾರ ಮಾಡಲು ಸಮರ್ಥವಾಗುವದಿಲ್ಲ. ಆದ್ದರಿಂದ ಇಂದ್ರಿಯಗಳ ಅರ್ಥಗ್ರಹಣದಲ್ಲಿ ಭಾಧಕವಾಗಿರುತ್ತದೆಂದು ಹೇಳಿದ್ದಾರೆ.

ಉತ್ಕ್ಲೇಶ ಲಕ್ಷಣವು

ಉತ್ಕ್ಲೇಶ್ಯಾನ್ನಂ ನನಿರ್ಗಚ್ಛೇತ್ಪ್ರಸೇಕಷ್ಠೀವನೇರಿತಂ ॥
ಹೃದಯಂ ಪೀಡ್ಯತೇಚಾಸ್ಯತಮುತ್ಕ್ಲೇಶಂ ವಿನಿರ್ದಿಶೇತ್ ॥

(ಸುಶ್ರುತ॥ ಶಾರೀರ॥ ಅ ೩ ಶ್ಲೋ ೫೩)

ಅತ್ಯಂತ ಪ್ರಬಲವಾದ ಕಫದ ಹೆಚ್ಚುವಿಕೆಯಿಂದ ಪ್ರೇರಿತವಾದ, ಅಥವಾ ಪ್ರಾಣವಾಯು ಕೋಷ್ಠಗತವಾದ ವಾಯುಗಳಿಂದ ನೂಕಲ್ಪಡಕ್ಕ ದ್ದಾಗಿ, ಅನ್ನವು ಕ್ಲೇಶವುಳ್ಳದ್ದಾಗಿ ಹೊರಗೆ ಸಹ ಬರದೆ ತಡೆದು ನಿಲ್ಲುತ್ತದೆ. ಹೀಗೆ ತಡೆದು ನಿಂತ ಅನ್ನವು ಹೃದಯ ಪ್ರದೇಶದಲ್ಲಿ ಪೀಡೆಯನ್ನುತ್ಪನ್ನ ಮಾಡುತ್ತದೆ. ಅದನ್ನು ಉತ್ಕ್ಲೇಶವೆಂದು ತಿಳಿಯಬೇಕು.

ಗ್ಲಾನಿಯ ಲಕ್ಷಣ

ವಕ್ತ್ರೇಮಧುರತಾತಂದ್ರಾಹೃದಯೋದ್ವೇಷ್ಟನಂಭ್ರಮಃ ॥
ನಚಾನ್ನಮಭಿಕಾಙ್ಕ್ಷೇಂತಗ್ಲಾನಿಂತಸ್ಯವಿನಿರ್ದಿಶೇತ್ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೋ ೫೪)

ಬಾಯಲ್ಲಿ ಮಧುರತೆ ಉತ್ಪನ್ನವಾಗುವಿಕೆ, ಮಬ್ಬು, ಎದೆಯಲ್ಲಿ ನೋವಾಗುವದು, ತಲೆತಿರುಗೋಣ, ಅನ್ನೇಚ್ಛೆ ಇಲ್ಲದೇಇರುವಿಕೆಯು ಮೊದ ಲಾದವುಗಳದ್ದವನಿಗೆ, ಗ್ಲಾನಿಯೆಂದು ತಿಳಿಯಬೇಕು.

ಜಡತೆಯ ಲಕ್ಷಣ

ಆರ್ದ್ರಚರ್ಮಾsವನದ್ಧಂವಾಯೋಗಾತ್ರಂಮನ್ಯತೇನರಃ ॥
ತಥಾಗುರುಶಿರೋsತ್ಯರ್ಥಂ ಗೌರವಂತದ್ವಿನಿರ್ದಿಶೇತ್ ॥

(ಸುಶ್ರುತ॥ ಶಾರೀರ॥ ಅ ೪ ಶ್ಲೊ ೫೫)

ಹಸಿಯದಾದ ಚರ್ಮವನ್ನು ಸುತ್ತಿಕೊಂಡಂತೆ ಯಾವನ ಅವಯವವು ಭಾರವಾಗಿರುತ್ತದೆಯೋ ಹಾಗೂ ಭಾರವಾಗಿರುವಂತೆ ಯಾವ ಮನುಷ್ಯನು ತಿಳಿಯುತ್ತಾನೆಯೋ, ಮತ್ತು ಯಾವನತಲೆಯು ಅತಿಭಾರವಾಗಿರುತ್ತದೆಯೋ ಅದಕ್ಕೆ ಗುರುತ್ವ, ಗೌರವನೆಂದು ಹೇಳಬೇಕು.

ಮೂರ್ಚ್ಛಾದಿಗಳಲ್ಲಿಯು ದೋಷಪ್ರಕೋಪ

ಮೂರ್ಚ್ಛಾಪಿತ್ತತಮಃಪ್ರಾಯಾ, ರಜಃಪಿತ್ತಾsನಿಲಾದ್ಭ್ರಮಃ॥
ತಮೋವಾತಕಫಾತ್ತಂದ್ರಾ, ನಿದ್ರಾಶ್ಲೇಷ್ಮತಮೋಭವಾ ॥
(ಸುಶ್ರುತ॥ ಶಾರೀರ॥ ಅ. ೪ ಶ್ಲೋ. ೫೬)

ಪಿತ್ತ ಮತ್ತು ತಮೋsಧಿಕ್ಯದಿಂದ ವಿಶೇಷವಾಗಿ **"ಮೂರ್ಚ್ಛೆ"** ಉತ್ಪನ್ನವಾಗುತ್ತದೆ ರಜೋಗುಣ, ಪಿತ್ತ, ವಾಯುಗಳಾಧಿಕ್ಯದಿಂದ **"ಭ್ರಮೆಯು"** ಉಂಟಾಗುತ್ತದೆ ತಮಸ್ಸು ವಾತ ಕಫಗಳಿಂದ "ತಂದ್ರಾ" ಉತ್ಪನ್ನವಾಗುತ್ತದೆ ಕಫ ಮತ್ತು ತಮೋsಧಿಕ್ಯದಿಂದ **"ನಿದ್ರೆಯು"** ಉಂಟಾಗುತ್ತದೆ. ಹೀಗೆ ಯಾವ ದೋಷಾದಿಗಳ ಆಧಿಕ್ಯದಿಂದ ಮೂರ್ಚ್ಛಾದಿಗಳು ಉತ್ಪನ್ನವಾಗುತ್ತವೆಂಬುವದನ್ನು ವಿವರಿಸಿದ್ದಾರೆ. ಅತ್ಯಂತ ಮಹತ್ವವೂ ಜಟಿಲವೂ ಆದ ಹೃದಯ, ಮನಸ್ಸು, ಜ್ಞಾನೇಂದ್ರಿಯ, ಬುದ್ಧಿ, ಆತ್ಮ, ಮೊದಲಾದವುಗಳನ್ನು ವಿವರಿಸಿ ಹೇಳಿದ್ದಾಯಿತು. ಸದ್ಯಃ ಕ್ರಮಪ್ರಾಪ್ತವಾದ ಆಶಯಾದಿಗಳ ವಿವರಣೆಯು ಮುಂದುವರೆಯುತ್ತದೆ.

(೩೪) ಆಶಯ ವಿವರಣೆಯು

ದೇಹದಲ್ಲಿಯ ದ್ರವ ರೂಪ ಪದಾರ್ಥ ಮತ್ತು ದ್ರವ್ಯಗಳನ್ನು ತುಂಬಿಡಲಿಕ್ಕಾಗಿ ಬೇರೆಬೇರೆ ಸ್ಥಾನಗಳಿರುತ್ತವೆ, ನಾವು ಪಾತ್ರೆಗಳಲ್ಲಿ ಉಪಯುಕ್ತ ಪದಾರ್ಥಗಳನ್ನು ವ್ಯವಸ್ಥಿತವಾಗಿಡುವಂತೆ, ದೇಹದಲ್ಲಿಯು **"ಆಶಯಗಳಲ್ಲಿ"** ಜೀವನೋಪಯೋಗ ದ್ರವ್ಯಗಳು ಇರುತ್ತವೆ. ಆಶಯಗಳೆಂದರೆ ಮಾಂಸದಿಂದ ನಿರ್ಮಿತವಾದ ಚೀಲಗಳು ಅವುಗಳ ಒಳಗೆ ಪೊಳ್ಳುಭಾಗಗಳಲ್ಲಿ ಶರೀರದ ಸಂಬಂಧಿಯಾದ ಪದಾರ್ಥಗಳಿರುತ್ತವೆ **ಆಶಯಗಳ ಆಕೃತಿ, ವರ್ಣ, ಸ್ಥಿತಿ, ಕ್ರಿಯಾ, ಸ್ಥಾನಾದಿಗಳು** ದೇಹಕ್ಕನುಸರಿಸಿಯೇ ಇರುತ್ತವೆ ದೇಹದಲ್ಲಿಯ ಸ್ಥಾನ ಸನ್ನಿವೇಶಗಳಿಗನುಗುಣವಾಗಿ ವರ್ತುಲ, ದೀರ್ಘ, ಹ್ರಸ್ವ, ಸ್ಥೂಲ, ಮುಂತಾದ ಆಕಾರಗಳೂ, ಆವಾವ ದ್ರವ್ಯಗಳಿಗನುಗುಣವಾದ ವರ್ಣಗಳೂ, ದೇಹ ವ್ಯಾಪಾರಕ್ಕನುಗುಣವಾಗಿ ದಪ್ಪ ಅಥವಾ ಮೃದು

ವಾಗಿಯೂ, ಆಕುಂಚನಪ್ರಸಾರಣ ಕ್ರಿಯೆಗಳಿಂದ ರಸಾದಿಗಳ ಸಂಗ್ರಹ ಮತ್ತೂ ಧಮನೀಮಾರ್ಗವಾಗಿ ಸಂಚರಣೆಗಳನ್ನುಮಾಡಿಸತಕ್ಕವುಗಳಾಗಿಯೂ, ಆವಾವ ದ್ರವ್ಯಗಳಿಗೆ ಸ್ಥಾನಗಳಾಗಿಯೂ ಇರುತ್ತವೆ. "**ಆಸಮಂತಾಂತ್ ಶೇತೇಅಸ್ಮಿನ್ ಇತಿಆಶಯಃ**" ಆವಾವ ಪದಾರ್ಥಗಳು ಅದರಲ್ಲಿ ತುಂಬಿರುವದರಿಂದ "**ಆಶಯ**" ವೆಂಬ ಹೆಸರು ಬಂದಿರುತ್ತದೆ

ಆಶಯಗಳು

ಆಶಯಾಸ್ತು:— ವಾತಾಶಯಃ, ಪಿತ್ತಾಶಯಃ, ಶ್ಲೇಷ್ಮಾಶಯೋ, ರಕ್ತಾಶಯ, ಆಮಾಶಯಃ, ಪಕ್ವಾಶಯೋ, ಮೂತ್ರಾಶಯಃ, ಸ್ತ್ರೀಣಾಂಗರ್ಭಾಶಯೋಽಷ್ಟಮಇತಿ ॥

(ಸುಶ್ರುತ॥ ಶಾರೀರ॥ ಅ ೫ ಶ್ಲೋ ೮)

(೧) **ವಾತಾಶಯ** (೨) **ಪಿತ್ತಾಶಯ** (೩) **ಶ್ಲೇಷ್ಮಾಶಯ** (೪) **ರಕ್ತಾಶಯ** (೫) **ಆಮಾಶಯ** (೬) **ಮಲಾಶಯ** (೭) **ಮೂತ್ರಾಶಯಗಳೆಂಬ**" ಏಳು ಆಶಯಗಳು ಇರುತ್ತವೆ. ಇದು ಸುಶ್ರುತಾಚಾರ್ಯರ ಮತವಾಗಿರುತ್ತದೆ.

ಸ್ತ್ರೀಯರಿಗೆ "ಗರ್ಭಾಶಯವು" ಅಧಿಕವಾದ ಎಂಟನೇ ಆಶಯವಾಗಿರುತ್ತದೆ "ಶಾರ್ಙ್ಗಧರ ಮತದಂತೆ" ಸ್ತ್ರೀಯರಿಗೆ "**ಸ್ತನ್ಯಾಶಯೌ**" ಹಾಲಿನ ಸ್ಥಾನವಾದ ಮೊಲೆಗಳೆರಡೂ ಆಶಯಗಳೆಂದು ಗ್ರಹಿಸಿದ್ದಾರೆ. ಹೀಗಿರುವದರಿಂದ ಪುರುಷರಿಗೆ (೭) ಆಶಯಗಳೂ, ಸ್ತ್ರೀಯರಿಗೆ (೧೦) ಆಶಯಗಳೂ ಇರುತ್ತವೆ.

ಆಶಯಗಳ ಸ್ಥಾನಗಳು

ಶ್ಲೇಷ್ಮಾಶಯಃ ಸ್ಯಾದುರಸಿತಸ್ಮಾದಾಮಾಶಯಸ್ತ್ವಧಃ ॥
ಊರ್ಧ್ವಮುಗ್ಗ್ಯಾಶಯೋನಾಭೇರ್ವಾನುಭಾಗೇವ್ಯವಸ್ಥಿತಃ ॥
ತಸ್ಯೋಪರಿತಿಲಂಜ್ಞೇಯಂತದಧಃ ಪವನಾಶಯಃ ॥೮॥

ಮುಲಾಶಯಸ್ತ್ವಧಸ್ತಸ್ಮಾದ್ಬಸ್ತಿರ್ಮೂತ್ರಾಶಯಸ್ತ್ವಧಃ ॥
ರಕ್ತಾಶಯಃ ಸ್ಯಾದುರಸಿಜ್ಞೇಯಾಃ ಸಪ್ತಾಶಯಾಸ್ತ್ವಮೀ ॥

(ಶಾರ್ಙ್ಗಧರ॥ ಪ್ರ. ಖ. ೫ ಶ್ಲೋ ೭)

ಸ್ತ್ರೀಯರ ಅಧಿಕಾಶಯಗಳು (೩)

ಪುರುಷೇಭ್ಯೋಽಧಿಕಾಶಾನ್ಯೇನಾರೀಣಾಮಾಶಯಾಸ್ತ್ರಯಃ ॥
ಧರಾಗರ್ಭಾಶಯಃಪ್ರೋಕ್ತಃ ಸ್ತನೌಸ್ತನ್ಯಾಶಯೌಮತೌ॥೧೦॥

ಎದೆಯಲ್ಲಿ "ಶ್ಲೇಷ್ಮಾಶಯವು" ಇರುತ್ತದೆ ಇದರಲ್ಲಿ ಕಫವು ಆಶ್ರಿತವಾಗಿರುತ್ತದೆ. ದೇಹದಲ್ಲಿ ಸೌಮ್ಯಗುಣದಿಂದ ಆರ್ದ್ರತೆಯನ್ನೂ ಸಂದುಗಳಲ್ಲಿದ್ದುಕೊಂಡು ಚಲನವಲನಕ್ಕೆ ಸುಗಮತೆಯನ್ನೂ ಉಂಟುಮಾಡುವ ಕಫದ ಮುಖ್ಯ ಸ್ಥಾನವಾಗಿರುತ್ತದೆ.

"**ಆಮಾಶಯ**" ಊಟಮಾಡಿದ ಅಪಕ್ವವಾದ ಆಹಾರ ರಸವು ಇರುವ ಸ್ಥಾನವಾಗಿರುತ್ತದೆ. ಈ ಆಮಾಶಯವು ಶ್ಲೇಷ್ಮಾಶಯದ ಕೆಳಭಾಗದಲ್ಲಿರುತ್ತದೆ. ಊಟ ಮಾಡಿದ ಪಕ್ವವಾಗದಿರುವ ಆಹಾರ ರಸವು ಮೊದಲು ಆಮಾಶಯಕ್ಕೆ ಹೋಗುತ್ತದೆ. ಅಲ್ಲಿ ಆಮಾಶಯದ ಆಕುಂಚನ ಪ್ರಸರಣಗಳಿಂದ ಸಾಮಾನ್ಯತಃ ಪಕ್ವವಾಗುತ್ತದೆ ನಂತರ ಕರಳಿನಲ್ಲಿ ಹೋಗುತ್ತದೆ ಆಗ ಪಿತ್ತಾಶಯದಿಂದ ಪಿತ್ತರಸವು ಹೊರಬಿದ್ದು ಬಂದು ಕೂಡಿಕೊಳ್ಳುತ್ತದೆ. ಆಹಾರದಲ್ಲಿಯ ಸ್ನಿಗ್ಧ ಭಾಗವೂ ಜೀರ್ಣವಾಗದ ಕರಿಣ ಭಾಗವೂ ಕರಳಿನ ಹಿಚುಕುವಿಕೆಗಳಿಂದ ಪಚನವಾಗುತ್ತದೆ.

"**ಪಿತ್ತಾಶಯ**" ನಾಭಿಯ ಮೇಲ್ಭಾಗದಲ್ಲಿ ಎಡಗಡೆಯಲ್ಲಿ ಅಗ್ನ್ಯಾಶಯವಿರುತ್ತದೆ. ಪಿತ್ತಾಶಯಕ್ಕೆ ಅಗ್ನ್ಯಾಶಯವೆಂದು ಹೇಳಿದ್ದಾರೆ. ವಸ್ತುತಃ ಪಿತ್ತಾಶಯವು ಬಲಗಡೆಯಲ್ಲಿರುತ್ತದೆ. ಇಲ್ಲಿ ಪ್ರಮಾದದಿಂದ ಹೀಗಾಗಿರಬಹುದೆಂದು ಅನಿಸುತ್ತದೆ. ಯಕೃತ್ತಿನಲ್ಲಿ ತಯಾರಾದ ಪಿತ್ತ ರಸವು ಪಿತ್ತಾಶಯದಲ್ಲಿ ಸಂಗ್ರಹವಾಗಿರುತ್ತದೆ. ಆಹಾರ ಪಚನ ವೇಳೆಯಲ್ಲಿ ಪಿತ್ತರಸವು

ಸಣ್ಣ ಕರುಳಲ್ಲಿಯ ಆಹಾರದಲ್ಲಿ ಬಂದು ಕೂಡಿಕೊಳ್ಳುತ್ತದೆ ಇದರಿಂದ ಆಹಾರವು ಜೀರ್ಣವಾಗುತ್ತದೆ ಪಿತ್ತರಸಕ್ಕೆ ಅಗ್ನಿಯೆಂದು ಹೇಳಿದ್ದಾರೆ. ಇದರಿಂದ ಪಿತ್ತಾಶಯವೇ ಅಗ್ನ್ಯಾಶಯವೆಂದು ಗ್ರಹಿಸಬೇಕು. ಪಿತ್ತಾಶಯದ ಮೇಲ್ಗಡೆಯಲ್ಲಿ "ತಿಲ" ಎಂಬಪಿಪಾಸಾ ಸ್ಥಾನವಿರುತ್ತದೆ.

"**ವಾತಾಶಯ**" ವಾಯುವಿಗೆ ಆಶ್ರಯವಾದ ಸ್ಥಾನಕ್ಕೆ ವಾತಾಶಯವೆಂಬ ಹೆಸರು. ಪಿತ್ತಾಶಯದ ಅಧೋಭಾಗದಲ್ಲಿರುತ್ತದೆ. ನಾಭಿಯ ಕೆಳಭಾಗದಲ್ಲಿ ವಾತಾಶಯವಿದೆಯೆಂದು "**ವಾಗ್ಭಟದಲ್ಲಿಯ ವಾತಸ್ಥಾನ**" ನಿರ್ದೇಶವಿರುತ್ತದೆ. ದೇಹದಲ್ಲಿಯ ಮುಖ್ಯವಾದ ವಾತಸ್ಥಾನವು ವಾತಾಶಯವಾಗಿರುತ್ತದೆ. ಪ್ರಾಣಾಪಾನಾದಿ ಭೇದಗಳಿಂದ ಐದು ಪ್ರಕಾರವಾದ ವಾಯುಗಳು ಸಮಗ್ರದೇಹಗಳಲ್ಲಿಯ ಆವಾವ ಸ್ಥಾನಗಳಲ್ಲಿವ್ದು ಕ್ರಿಯಾಕಾರಿಗಳಾಗಿರುತ್ತವೆ

"**ಮಲಾಶಯ**" ಆಹಾರದ ಕಿಟ್ಟ ಭಾಗವಾದ ಮಲವು ಸಂಚಯವಾಗುವ ಸ್ಥಾನವು ಇಲ್ಲಿ ಸಂಚಿತವಾದ ಮಲವು ಗುದದ್ವಾರದಿಂದ ಹೊರಬಿದ್ದು ಹೋಗುತ್ತದೆ. ಮಲಾಶಯಕ್ಕೆ ಪಕ್ವಾಶಯವೆಂದೂ ಅನ್ನುತ್ತಾರೆ. ಒಸ್ತಿಯ ಮೇಲ್ಗಡೆ ವಾತಾಶಯಕ್ಕಿಂತಲೂ ಕೆಳಭಾಗದಲ್ಲಿ ಮಲಾಶಯವಿರುತ್ತದೆ.

"**ಮೂತ್ರಾಶಯ**" ದೇಹದಲ್ಲಿಯ ಮಲಿನವಾದ ಜಲಭಾಗವು ಸಂಚಿತವಾಗುವ ಸ್ಥಾನಕ್ಕೆ ಮೂತ್ರಾಶಯ ಅಥವಾ ಬಸ್ತಿಯೆಂದು ಅನ್ನುತ್ತಾರೆ. ಮೂತ್ರಾಶಯದಲ್ಲಿ ಸಂಚಿತವಾದ ಮಲಿನ ಜಲಕ್ಕೆ ಮೂತ್ರವೆಂದು ಹೆಸರು. ಅದು ಜನನೇಂದ್ರಿಯ ದ್ವಾರದಿಂದ ಹೊರಗೆ ಹೋಗುತ್ತದೆ. ಮಲಾಶಯದ ಕೆಳಭಾಗದಲ್ಲಿ ಮೂತ್ರಾಶಯವಿರುವ ಸ್ಥಾನವಾಗಿರುತ್ತದೆ.

"**ರಕ್ತಾಶಯ**" ಬದುಕಲಿಕ್ಕೆ ಅತ್ಯವಶ್ಯವಾದ ಜೀವರಕ್ತದ ಸ್ಥಾನವಾಗಿರುತ್ತದೆ ರಕ್ತಾಶಯದಲ್ಲಿ ರಕ್ತವು ಸಂಚಿತವಾಗಿರುತ್ತದೆ. ರಕ್ತಾಶಯದಿಂದ ಹೊರಟ ಧಮನಿಗಳಿಂದ ಸಮಗ್ರ ಶರೀರದಲ್ಲಿಯೂ ರಕ್ತವು ಸಂಚರಿಸುತ್ತದೆ. ಎದೆಯಲ್ಲಿ ರಕ್ತಾಶಯವು ಇರುತ್ತದೆ. ಹೀಗೆ ಶೇಷಾಶಯಾದಿ

(೭) ಆಶಯಗಳು ಇರುತ್ತವೆ. ಸ್ತ್ರೀಯರಿಗೆ (೩) ಆಶಯಗಳು ಹೆಚ್ಚಿಗೆ ಇರುತ್ತವೆ.

"ಗರ್ಭಾಶಯ" ಶುಕ್ರ ಆರ್ತವ ಸಂಯೋಗದಿಂದ ಗರ್ಭೋತ್ಪತ್ತಿಯಾಗುವ ಸ್ಥಾನವು. ಇಲ್ಲಿಯೇ ಗರ್ಭವು ಉತ್ಪನ್ನವಾಗಿ ಬೆಳೆಯುತ್ತದೆ. ಗರ್ಭವಿರುವ ಸ್ಥಾನವಾದ್ದರಿಂದ ಇದಕ್ಕೆ **"ಗರ್ಭಾಶಯ"** ವೆಂಬ ಹೆಸರು

"ಸ್ತನ್ಯಾಶಯ" ಹಾಲು ಉತ್ಪನ್ನವಾಗುವ ಸ್ಥಾನವು. ಶಿಶುವಿನ ಪೋಷಕವಾದ ಹಾಲು ಇಲ್ಲಿಯೇ ಸಂಗ್ರಹವಾಗುವದರಿಂದ ಇದಕ್ಕೆ ಸ್ತನ್ಯಾಶಯವೆಂದು ಹೇಳುತ್ತಾರೆ. ಸ್ತನಗಳು (೨) ಇರುತ್ತವೆ. ಗರ್ಭಾಶಯ(೧) ಒಟ್ಟು (೩) ಆಶಯಗಳು ಸ್ತ್ರೀಯರಿಗೆ ಅಧಿಕವಾಗಿರುತ್ತವೆ

ಆಶಯವೆಂದರೆ **"ಅಧಿಷ್ಠಾನವು"** ಆಶ್ರಯಸ್ಥಾನವಾಗಿರುತ್ತದೆ. ರಕ್ತಾಶಯವು ಮೊದಲಿರುತ್ತದೆ, ಅದರ ನಂತರ ಬೇರೇ ಆಶಯಗಳಿರುತ್ತವೆಂದು ವಾಗ್ಭಟ ಮತವು.

ರಕ್ತಸ್ಯಾದ್ಯಃಕ್ರಮಾತ್ಪರೇ ॥
ಕಫಾಮಪಿತ್ತ ಪಕ್ವಾನಾಂ ವಾಯೋರ್ಮೂತ್ರಸ್ಯ ಚ ಕ್ರಮಾತ್॥

(ವಾಗ್ಭಟ॥ ಶಾರೀರ॥ ಅ. ೩)

ರಕ್ತಾಶಯದ ಕೆಳಗಡೆಗೆ ಕ್ರಮವಾಗಿ ಉಳಿದ ಎಲ್ಲ ಆಶಯಗಳು ಇರುತ್ತವೆ. ಅರ್ಥಾತ್ ಮೊದಲನೇದು ರಕ್ತಾಶಯವೆಂದಭಿಪ್ರಾಯವಾಗಿರುತ್ತದೆ ನಂತರ ಕ್ರಮವಾಗಿ ಒಂದಾದ ಕೂಡಲೇ ಮತ್ತೊಂದರಂತೆ ಆಶಯಗಳು ಇರುತ್ತವೆ. ಅವುಗಳ ಕ್ರಮವು:— ಕಫಾಶಯ, ಪಿತ್ತಾಶಯ, ಮಲಾಶಯ, ವಾತಾಶಯ, ಮೂತ್ರಾಶಯ ಇವು (೬) ಆಶಯಗಳು ರಕ್ತಾಶಯದ ಕೆಳಗೆ ಕ್ರಮವಾಗಿರುತ್ತವೆ. ಇದು ವಾಗ್ಭಟ ಮತದಂತೆ ವಿವರಣೆಯಾಗಿರುತ್ತದೆ.

(೩೫) ಕರುಳುಗಳು

ನಾವು ಊಟಮಾಡಿದ ಆಹಾರವು ಜೀರ್ಣವಾಗುವ ಕಾರ್ಯವು ವಿಶೇಷವಾಗಿ ಕರುಳಿನಲ್ಲಿ ನಡೆಯುತ್ತದೆ. ಇದಕ್ಕೆ "ಅಂತ್ರ"ವೆಂದು ಅನ್ನುತ್ತಾರೆ ಕರುಳಿನಲ್ಲಿ ದೊಡ್ಡ ಕರುಳು ಸಣ್ಣ ಕರುಳುಗಳೆಂದು ಎರಡು ವಿಭಾಗವನ್ನು ಮಾಡಿರುತ್ತಾರೆ. ಸಣ್ಣ ಕರುಳಿಗೆ "**ಕ್ಷುದ್ರಾಂತ್ರ**"ವೆಂದೂ ದೊಡ್ಡ ಕರುಳಿಗೆ "**ಬೃಹದಂತ್ರ**"ವೆಂದೂ ಅನ್ನುತ್ತಾರೆ. ಕ್ಷುದ್ರಾಂತ್ರವು ಹಗ್ಗದಂತೆ ಸುರಳೀ ಸುತ್ತಿಕೊಂಡಿರುತ್ತದೆ. ಅದರ ಮೇಲ್ಬಾಗ ಮತ್ತು ಎಡಬಲಕ್ಕೆ ಸ್ಥೂಲಾಂತ್ರವು ಸುತ್ತಲೂ ಇದ್ದು ಮಧ್ಯದಲ್ಲಿ ಕ್ಷುದ್ರಾಂತ್ರವಿರುತ್ತದೆ ಸ್ಥೂಲಾಂತ್ರಕ್ಕೆ ಅಂಟಿಕೊಂಡು ಮೇಲ್ಬಾಗದಿಂದಹೊರಟು, ಕ್ಷುದ್ರಾಂತ್ರದ ತುದಿಯು, ಸ್ಥೂಲಾಂತ್ರದ ಕೆಳಗಡೆಗೆ ಬಲಭಾಗದಲ್ಲಿ ಪುನಃ ಸಂಧಿತವಾಗುತ್ತದೆ. ಅರ್ಥಾತ್ ಹಗ್ಗದಂತೇ ಸುರಳೀ ಸುತ್ತಿಕೊಂಡಿರುವ ಕ್ಷುದ್ರಾಂತ್ರದ ಸೂತ್ತಲೂ ಸ್ಥೂಲಾಂತ್ರವಿದ್ದು, ಮಧ್ಯದಲ್ಲಿ ಸುರಳಿಯಾಗಿರುವ ಸಣ್ಣ ಕರುಳಿನ ಗುಂಪು ಇರುತ್ತದೆ. ಕ್ಷುದ್ರಾಂತ್ರದ ಮೇಲ್ಬಾಗ ಮತ್ತು ತುದಿ. ಸ್ಥೂಲಾಂತ್ರಕ್ಕೆ ಕೂಡಿಕೊಂಡಿರುತ್ತವೆ. ಆಮಾಶಯದಲ್ಲಿಯ ಅಪಕ್ವ ಆಹಾರ ಭಾಗವು ಕ್ಷುದ್ರಾಂತ್ರದಲ್ಲಿ ಬರುತ್ತದೆ. ಕ್ಷುದ್ರಾಂತ್ರದ ಆಕುಂಚನಪ್ರಸಾರಣ ಕ್ರಿಯೆಗಳಿಂದಲೂ ಚನ್ನಾಗಿ ಹಿಚುಕುವದರಿಂದಲೂ ಆಹಾರವು ವಿಶೇಷವಾಗಿ ಪಚನವಾಗುತ್ತದೆ. ಪಚನವಾಗಿ ಉಳಿದ ಕೆಟ್ಟ ಭಾಗವು ಕ್ಷುದ್ರಾಂತ್ರಾಂತದಿಂದ, ಸ್ಥೂಲಾಂತ್ರಕ್ಕೆ ಹೋಗುತ್ತದೆ. ಅಲ್ಲಿ ಆಹಾರದ ಸ್ಥೂಲ ಭಾಗವು ಪಚನವಾಗುತ್ತಾಗುತ್ತ ಸ್ಥೂಲಾಂತ್ರದ ಕೊನೆಯ ಭಾಗದಲ್ಲಿರುವ "**ಮಲಾಶಯಕ್ಕೆ**" ಬರುತ್ತದೆ. ಮಲಾಶಯಕ್ಕೆ ಅಂಟಿಕೊಂಡ ನಳಿಗೆಯಂತಿರುವ ಗುದದ್ವಾರದಿಂದ ಆಹಾರದ ಕೆಟ್ಟ ಭಾಗವಾದ ಮಲವು (ಪುರೀಷ) ಹೊರಗೆ ಬರುತ್ತದೆ. ಸ್ಥೂಲಾಂತ್ರದಲ್ಲಿ ಎಡಭಾಗದ ಕೊನೆಗೆ ಮಲಾಶಯವಿರುತ್ತದೆ. ಮಲಾಶಯದಿಂದ ಮಲವು ಗುದ ಮಾರ್ಗವಾಗಿ ಹೊರಗೆ ಬರುತ್ತದೆ. ಇದರಂತೆ ಮಲದಲ್ಲಿಯ ಮತ್ತು ರಸ ರಕ್ತ ಧಾತುಗಳಮಲಿನವಾದ ಜಲಭಾಗವು ಮೂತ್ರಾಶಯದಲ್ಲಿ (ಬಸ್ತಿ) ಸಂಚಿತವಾಗಿಮೂತ್ರ ರೂಪದಿಂದ ಹೊರಬೀಳುತ್ತದೆ.

ಸಾರ್ಧತ್ರಿವ್ಯಾಮಾನ್ಯಂತ್ರಾಣಿಪುಂಸಾಂ ಸ್ತ್ರೀಣಾಮುರ್ಧವ್ಯಾಮ ಹೀನಾನಿ ॥ (ಸುಶ್ರುತ॥ ಶಾರೀರ॥ ಅ. ೫ ಸೂ. ೯)

ಸ್ಥೂಲಾಂತ್ರ ಕ್ಷುದ್ರಾಂತ್ರಗಳುಕೂಡಿ (೩॥) ವ್ಯಾಮದಷ್ಟು ಪ್ರಮಾಣ ಉದ್ದವಾಗಿರುತ್ತವೆ ಇದು ಪುರುಷರ ಕರುಳಿನ ಉದ್ದದ ಪ್ರಮಾಣವನ್ನು ಹೇಳಿದ್ದಾರೆ. ಸ್ತ್ರೀಯರ ಕರುಳಿನ ಪ್ರಮಾಣವು ಪುರುಷರಿಗಿಂತ ಅರ್ಧ ವ್ಯಾಮ ಕಡಿಮೆ ಅಂದರೆ (೩) ವ್ಯಾಮದಷ್ಟು ಉದ್ದವಾಗಿರುತ್ತದೆ.

"**ವ್ಯಾಮ**"ವೆಂದರೆ ಎರಡೂ ಕೈಗಳನ್ನು ಪಾರ್ಶ್ವಗಳಲ್ಲಿ ವಿಸ್ತಾರ ಮಾಡಿದರೆ ಆಗುವ ಅಳತೆಯು. ಇದಕ್ಕೆ ವ್ಯವಹಾರದಲ್ಲಿ "**ಮಾರು**" ಎನ್ನುವ ವಾಡಿಕೆಯಿದೆ.

(೩೬) ದೇಹದಲ್ಲಿಯಬಾಹ್ಯದ್ವಾರಗಳು

ದೇಹದ ಬಹಿರ್ಭಾಗಗಳಲ್ಲಿ ಕಾಣುವ ಆವಾವ ಕಾರ್ಯಗಳನ್ನು ಮಾಡ ತಕ್ಕ "**ಸ್ರೋತಸ್ಸು**"ಗಳಿರುತ್ತವೆ ಇಂಥ ಸ್ರೋತಸ್ಸುಗಳ ರಂಧ್ರವು ಬಹಿರ್ಮುಖವಾಗಿಯೇ ಇರುತ್ತವೆ. ಅಂತರ್ಮುಖವಾದ ಸ್ರೋತಸ್ಸುಗಳನ್ನು ಧಮನೀ ವಿವರಯಣೆಯಲ್ಲಿ ಹೇಳುತ್ತಾರೆ.

"**ಚರಕ ಸಂಹಿತೆಯಲ್ಲಿ**" ಬಹಿರ್ಮುಖವಾದ ಸ್ರೋತಸ್ಸುಗಳಿಗೆ "**ದೊಡ್ಡ ಛಿದ್ರ**"ಗಳೆಂದು ಹೇಳಿದ್ದಾರೆ. ತಲೆಯ ಭಾಗದಲ್ಲಿ (೭), ದೇಹದ ಕೆಳಗಿನ ಭಾಗದಲ್ಲಿ (೨), ಒಟ್ಟು (೯) ಮಹಾ ಛಿದ್ರಗಳಿರುತ್ತವೆಂದು ಹೇಳಿದ್ದಾರೆ. (ಚರಕ॥ ಶಾರೀರ॥ ಅ ೭ ಸೂ ೧೩)

"**ಶಾರ್ಙ್ಗಧರದಲ್ಲಿ**" ನವರಂಧ್ರಗಳನ್ನು ಹೇಳಿ ನೆತ್ತಿಯ ಮೇಲೆ "**ಬ್ರಹ್ಮರಂಧ್ರ**" ವಿರುವದೆಂದು ಹೇಳಿದ್ದಾರೆ ಶಾರ್ಙ್ಗಧರ ಮತದಂತೆ ಬ್ರಹ್ಮರಂಧ್ರವನ್ನು ಹಿಡಿದು (೧೦) ರಂಧ್ರಗಳಾಗುತ್ತವೆ.

ಶ್ರವಣನಯನವದನಘ್ರಾಣಗುದಮೇಢ್ರಾಣಿನವಸ್ರೋತಾಂಸಿ ನರಾಣಾಂ ಬಹಿರ್ಮುಖಾನಿ, ಏತಾನ್ಯೇವಸ್ತ್ರೀಣಾಮುಪರಾಣಿ ಚ ತ್ರೀಣಿದ್ವೇಸ್ತನಯೋರಧಸ್ತಾದ್ರಕ್ತವಹಂಚ ॥

(ಸುಶ್ರುತ॥ ಶಾರೀರ॥ ೬ ೫ ಸೂ ೧೦)

(೨) **ಶ್ರವಣ** (ಕಿವಿ), (೨) **ನಯನ** (ಕಣ್ಣು), (೨) **ಘ್ರಾಣ** (ಮೂಗು), (೧) **ವದನ** (ಬಾಯಿ), (೧) **ಗುದ** (ಮಲದ್ವಾರ), (೧) **ಮೇಢ್ರ** (ಜನನೇಂದ್ರಿಯ), ಒಟ್ಟು ದೇಹದಲ್ಲಿ (೯) ರಂಧ್ರಗಳು ಇರುತ್ತವೆ ಇವು ಬಹಿರ್ಮುಖವಾಗಿರುವ ಸ್ರೋತಸ್ಸುಗಳು.

"**ಸ್ತ್ರಿಯರಲ್ಲಿ**" ಮೇಲೆ ಹೇಳಿದ ರಂಧ್ರಗಳ ಹೊರತಾಗಿ ಹೊಸತಾಗಿ (೩) ರಂಧ್ರಗಳು ಹೆಚ್ಚಿಗೆ ಇರುತ್ತವೆ ಸ್ತನಗಳಲ್ಲಿ (೨), ಕೆಳಗಡೆಗೆಮಾಸಿಕ ಸ್ರಾವವಾಗುವ ದ್ವಾರ (೧), ಒಟ್ಟು (೩) ರಂಧ್ರಗಳು ಸ್ತ್ರೀಯರಿಗೆ ಹೆಚ್ಚು ಇರುತ್ತವೆ. ಮೊದಲು ಹೇಳಿದ (೯) ಹೆಚ್ಚಿನ ರಂಧ್ರಗಳು (೩), ಒಟ್ಟು (೧೨) ರಂಧ್ರಗಳು ಸ್ತ್ರೀಯರಲ್ಲಿರುತ್ತವೆ ಬ್ರಹ್ಮರಂಧ್ರವನ್ನು ಹಿಡಿದರೆ (೧೩) ರಂಧ್ರಗಳಾಗುತ್ತವೆ. "**ಪುರುಷರಲ್ಲಿ**" (೧೦) ರಂಧ್ರಗಳು. ಹೀಗೆ ರಂಧ್ರಗಳ ವಿವರಣೆಯನ್ನು ಮಾಡಿರುತ್ತಾರೆ

(೩೭) ಕಂಡರಗಳು

"**ಕಂಡರಾ**" ಅಂದರೆ ಮಹಾ ಸ್ನಾಯು. ದೇಹದಲ್ಲಿರುವ ದೊಡ್ಡದಾದ ಸ್ನಾಯುಗಳಿಗೆ ಕಂಡರಾ ಎಂದು ಹೇಳುತ್ತಾರೆ ದೇಹದಲ್ಲಿರುವ ಮಾಂಸ ಪಿಂಡಗಳನ್ನು ಆವಾವ ಸ್ಥಾನಗಳಲ್ಲಿ ಬಿಗಿಯಾಗಿ ಬಂಧಿಸುವ ಪಟ್ಟಕ್ಕೆ ಸ್ನಾಯುವೆಂಬ ಹೆಸರು. ಸ್ನಾಯುಗಳಲ್ಲಿ ಮಹಾಸ್ನಾಯುಗಳು (೧೬) ಇರುತ್ತವೆ ಇವುಗಳಿಗೆ "**ಕಂಡರಾ**"ಗಳೆಂದು ಹೇಳುತ್ತಾರೆ.

ಷೋಡಶಕಂಡರಾ:— ತಾಸಾಂಚತಸ್ರಃ ಪಾದಯೋಃ, ತಾವ ತ್ಯೋರ್ಹಸ್ತಗ್ರೀವಾಪೃಷ್ಠೇಷು; ತತ್ರಹಸ್ತಪಾದಗತಾನಾಂ ಕಂಡ

ರಾಣಾಂನಖಾಅಗ್ರಪ್ರರೋಹಾಃ ಗ್ರೀವಾಹೃದಯನಿಬಂಧಿನೀ ನಾಮಧೋಭಾಗತಾನಾಂ ಮೇಢ್ರಂ, ಶ್ರೋಣಿಪೃಷ್ಠನಿಬಂಧಿನೀನಾಮಧೋಭಾಗಗತಾನಾಂಬಿಂಬಂ, ಮೂರ್ಧೋರುನಷ್ಠೀವಂಸಪಿಂಡಾದೀನಾಂ ಚ ॥

(ಸುಶ್ರುತ॥ಶಾರೀರ॥ ಅಃ ಸೂ ೧೧)

ಕಂಡರಗಳು ಎರಡೂ **ಕಾಲುಗಳಲ್ಲಿ** ಕೂಡಿ (೪) ಇರುತ್ತವೆ. ಇದರಂತೆ **ಕೈಗಳಲ್ಲಿ** (೪), **ಕುತ್ತಿಗೆಯಲ್ಲಿ**(೪), **ಬೆನ್ನಿನ ಪ್ರದೇಶಗಳಲ್ಲಿ** (೪). ಒಟ್ಟು ಕಾಲು, ಕೈ, ಕುತ್ತಿಗೆ, ಬೆನ್ನುಗಳಲ್ಲಿ ಕೂಡಿಕೊಂಡು (೧೬) ಕಂಡರ (ಮಹಾಸ್ನಾಯು)ಗಳು ಇರುತ್ತವೆ

ಹಸ್ತ ಪಾದಗಳಲ್ಲಿಯ ಕಂಡರಗಳ ತುದಿ ಭಾಗಗಳಲ್ಲಿ ಉಗುರು (ನಖ)ಗಳು ಹುಟ್ಟಿ ಬೆಳೆದಿರುತ್ತವೆ. ಹಸ್ತ ಪಾದಾದಿಗಳಲ್ಲಿರುವ ಕಂಡರಗಳು ಬೆರಳಿನ ತುದಿಗಳವರೆಗೆ ಇರುತ್ತವೆ. ಬೆರಳಿನ ತುದಿಯಭಾಗಗಳಲ್ಲಿ ಉಗುರುಗಳಿರುತ್ತವೆ "**ಜೇಜ್ಜಟಾಚಾರ್ಯರು**" ಕೈಕಾಲುಗಳಲ್ಲಿರುವ ಕಂಡರಗಳ ಮತ್ತು ಅಸ್ಥಿಗಳ ಕೊನೆಯ ಭಾಗಗಳಲ್ಲಿ ಉಗುರುಗಳು ಹುಟ್ಟಿ ಬೆಳೆದಿರುತ್ತವೆಂದು ಹೇಳಿದ್ದಾರೆ.

"ಹಸ್ತ ಪಾದಗತಾನಾಂ ಕಂಡರಾಣಾಮು
ಸ್ಥ್ನಾಂ ಚ ನಖಾ ಅಗ್ರ ಪ್ರರೋಹಾಃ"

ಉಗುರುಗಳು ಎಲುಬುಗಳಿಂದ ಹುಟ್ಟಿರುತ್ತವೆಂದುಹೇಳಿರುವದರಿಂದ, ಕಂಡರ ಮತ್ತು ಅಸ್ಥಿಗಳ ತುದಿ ಭಾಗಗಳಲ್ಲಿ ಉಗುರುಗಳು ಇರುತ್ತವೆನ್ನುವದು ಯೋಗ್ಯವಾಗಿರುತ್ತದೆ.

ಕುತ್ತಿಗೆ ಹೃದಯ ನಿಬಂಧನ ಕಂಡರಗಳ ಅಧೋಭಾಗದಲ್ಲಿ ಮೇಢ್ರವು (ಶಿಶ್ನ) ಇರುತ್ತದೆ ಅರ್ಥಾತ್ ಕುತ್ತಿಗೆ ಹೃದಯಬಂಧನವಾದ ಕಂಡರಗಳು ಕೆಳಭಾಗದ ವರೆಗೂ ಬಂದಿರುತ್ತವೆ. ಅವುಗಳ ಸಾನ್ನಿಧ್ಯದಲ್ಲಿ ಶಿಶ್ನ (ಪುರುಷರ ಜನನೇಂದ್ರಿಯ) ಇರುತ್ತದೆಂದು ಅಭಿಪ್ರಾಯವು.

ಶ್ರೋಣಿ (ಕಟಿಪ್ರದೇಶ, ಟೊಂಕ), ಪೃಷ್ಠ (ಬೆನ್ನು) ಗಳ ನಿಬಂಧನಗಳಾದ ಕೆಳಭಾಗದಲ್ಲಿ ಬಂದಿರುವ ಕಂಡರಗಳ ತುದಿ ಭಾಗಗಳಲ್ಲಿ, ಬಿಂಬ (ನಿತಂಬ) ವಿರುತ್ತದೆ ನಿತಂಬವೆಂದರೆ ಕಟಿಯ ಹಿಂದು ಬದಿಯಲ್ಲಿರುವ ಮಾಂಸ ಪಿಂಡಗಳು. ಇದಕ್ಕೆ ವ್ಯವಹಾರ ಭಾಷೆಯಲ್ಲಿ (**ತಿಕ**) ವೆಂದು **ಹೇಳುತ್ತಾರೆ.** ಇವುಗಳಂತೆ, **ತಲೆ** (ಮೂರ್ಧಾ), **ಊರು** (**ತೊಡೆ**), **ವಕ್ಷ** (ಎದೆ), **ಅಂಸ** (ಭುಜ), ಇವುಗಳ ನಿಬಂಧನ ಕಂಡರಗಳ ಸಾನ್ನಿಧ್ಯಗಳಲ್ಲಿಯ ಮಾಂಸಪಿಂಡ (ಬಿಂಬ)ಗಳು ಇರುತ್ತವೆ ಅರ್ಥಾತ್, ತತ್ತತ್‌ಸ್ಥಾನ ನಿಬಂಧ ಮಹಾ ಸ್ನಾಯುಗಳ ಸಾನ್ನಿಧ್ಯದಲ್ಲಿ, ಆವಾವ ಮಾಂಸ ಪಿಂಡಗಳು ಇರುತ್ತವೆಂಬರ್ಥವು. "**ಚೆ**" ಎಂದು ಸಮುಚ್ಚಯಾರ್ಥ ಶಬ್ದವನ್ನಿಟ್ಟು ಹೇಳಿದ್ದರಿಂದ "**ಸ್ತನಮಂಡಲ**"ವನ್ನೂ ಗ್ರಹಣವಾಡುತ್ತಾರೆ ಆದ್ದರಿಂದ ಸ್ತನಗಳೆರಡೂ ವಕ್ಷೋಮಂಡಲ ನಿಬಂಧಕ ಸ್ನಾಯುಗಳ ಸಾನ್ನಿಧ್ಯದಲ್ಲಿರುತ್ತವೆಂದು ಧ್ವನಿತವಾಗುತ್ತವೆ. ಕೈಕಾಲುಗಳಲ್ಲಿರುವ ಮಾಂಸಪಿಂಡಗಳೆಲ್ಲವುಗಳನ್ನೂ "**ಚೆ**"ಕಾರ ಸಮುಚ್ಚಯದಿಂದ ಗ್ರಹಿಸಿ, ಮೊಣಕಾಲು ಮೊಣಕೈ ತೋಳುಗಳಲ್ಲಿರುವ ಬಿಂಬಗಳನ್ನು ಸಹ ಹೇಳಿರುತ್ತಾರೆ. ಹೀಗೆ ಗ್ರಹಿಸುವದು ಸಮಂಜಸವಾದದ್ದೇ ಇರುತ್ತದೆ. ಹೀಗೆ ಹದಿನಾರು ಕಂಡರ ಮಹಾಸ್ನಾಯುಗಳ ಸಾನ್ನಿಧ್ಯದಲ್ಲಿರುವ ಬಿಂಬಾದಿ ವಿಶೇಷಗಳನ್ನು ವಿವರಿಸಿದ್ದಾರೆ.

(೩೮) ಜಾಲ (ಬಲೆ) ಗಳು

ಬಲೆಗಳಲ್ಲಿ ಹೇಗೆ ತಂತುಗಳು ಒಂದಕ್ಕೊಂದು ಕೂಡಿಕೊಂಡಿರುತ್ತವೆಯೋ, ಅವರಂತೇ, ದೇಹದಲ್ಲಿ "**ಮಾಂಸ ಸಿರಾ ಸ್ನಾಯು ಅಸ್ಥಿಗಳು**" ಪ್ರತ್ಯೇಕ ಒಂದಕ್ಕೊಂದು ಯುಕ್ತವಾಗಿ ಬಲೆಯಂತೇ ಇರುತ್ತವೆ. ಆದ್ದರಿಂದ ಅವುಗಳಿಗೆ "**ಜಾಲಗಳೆಂದು**" ಅನ್ನುತ್ತಾರೆ. ಬಲೆಯ ಮಧ್ಯಗಳಲ್ಲಿ ಒಂದರಲ್ಲೊಂದು ಕೂಡಿ ಹೇಗೆ ರಂಧ್ರಗಳಿರುತ್ತವೆಯೋ, ದೇಹದಲ್ಲಿಯ ಜಾಲಗಳಲ್ಲಿಯೂ ಸಹ ಅದರಂತೇ ಇರುತ್ತವೆ. ಜಾಲಾದಿಗಳಿಂದವ್ಯಾಪ್ತವಾದ ದೇಹವು ಸುತ್ತಲೂ ಒಲೆಗಳನ್ನು ಹೆಣೆದಂತೆ ಕಾಣುತ್ತದೆ ಹೀಗಿರುವದರಿಂದ ದೇಹವು ಜಾಳಿಗೆಯಾಕಾರ ರಂಧ್ರಗಳ ಸಮೂಹದಿಂದ ಯುಕ್ತವಾಗಿದೆಯೋಎಂದು ಅನಿಸುತ್ತದೆ.

ಮಾಂಸಸಿರಾಸ್ನಾಯ್ವಸ್ಥಿಜಾಲಾನಿ ಪ್ರತ್ಯೇಕಂ ಚತ್ವಾರಿ; ತಾನಿ ಮಣಿಬಂಧಗುಲ್ಫಸಂಶ್ರಿತಾನಿಪರಸ್ಪರ ನಿಬದ್ಧಾನಿಪರಸ್ಪರಗವಾಕ್ಷಿತಾನಿಚೇತಿ, ಯೈರ್ಗವಾಕ್ಷಿತಮಿದಂ ಶರೀರಂ॥

(ಸುಶ್ರುತ॥ ಶಾರೀರ॥ ಅ. ೫ ಸೂ ೧೨)

ಜಾಲಗಳು:— (೧) ಮಾಂಸಜಾಲ (೨) ಸಿರಾಜಾಲ (೩) ಸ್ನಾಯುಜಾಲ (೪) ಅಸ್ಥಿಜಾಲಗಳೆಂದು ಪ್ರತ್ಯೇಕ ನಾಲ್ಕು ಜಾಳಿಗೆ (ಬಲೆ) ಗಳು ಇರುತ್ತವೆ "ಮಣಿಬಂಧ" (ಅಂಗೈ ಮತ್ತು ಮೊಳಕೈ ಮಧ್ಯದ ಸಂಧಿ), "ಗುಲ್ಫ"(ಪಾದ ಪಾರ್ಶ್ವಗಳಲ್ಲಿರುವಗಂಟು), ಇವುಗಳಲ್ಲಿ ಮಾಂಸಾದಿ ಜಾಲಗಳು ಇರುತ್ತವೆ ಮಾಂಸಾದಿ ಜಾಲಗಳು ಪರಸ್ಪರ ನಿಬದ್ಧವಾದವುಗಳು ಮತ್ತು ಒಂದಕ್ಕೊಂದು ಹೊಂದಿಕೊಂಡಂಥವುಗಳೂ ಇರುತ್ತವೆ ಒಂದರ ಮೇಲೊಂದು ಹೊದಿಸಲ್ಪಟ್ಟಂಥವಾಗಿಯೂ ಇರುತ್ತವೆ ಈ ಜಾಳಿಗೆಗಳಿಂದ ಶರೀರವು ವ್ಯಾಪಿಸಲ್ಪಟ್ಟಿರುತ್ತದೆ.

(೩೯) ಕುಂಚ (ಕೂರ್ಚಾ) ಗಳು

ಮಾಂಸ ಸಿರಾ ಸ್ನಾಯು ಅಸ್ಥಿಗಳ ಎಳೆ (ತಂತು) ಗಳಿಂದ ರಚಿತವಾಗಿರುತ್ತವೆ. ಇವುಗಳ ಆಕೃತಿ ವಿಶೇಷವು ಕುಂಚದಂತಿರುವದರಿಂದ "ಕೂರ್ಚಾ" ಎಂದು ಹೇಳಿದ್ದಾರೆ. ಅರ್ಥಾತ್ ಕುಂಚವನ್ನು ಮಾಡಬೇಕಾದರೆ ಅನೇಕ ತಂತು (ಎಳೆ) ಗಳನ್ನು ಕೂಡಿಸಿ ಬುಡದ ಭಾಗದಲ್ಲಿ ಹೇಗೆ ಕಟ್ಟುತ್ತೇವೆಯೋ ಅದರಂತೆ ಇರುತ್ತದೆ ಮಾಂಸ ಸಿರಾ ಸ್ನಾಯು ಅಸ್ಥಿಗಳಿಂದ ನಿರ್ಮಿತವಾದ ಕುಂಚಗಳು ದೇಹದಲ್ಲಿರುತ್ತವೆ. ಅವುಗಳು ಎಲ್ಲಿರುತ್ತವೆ ಅವುಗಳ ಸ್ಥಾನಾದಿಗಳನ್ನು ಹೇಳುತ್ತಾರೆ.

ಷಟ್ ಕೂರ್ಚಾಃ, ತೇ ಹಸ್ತಪಾದಗ್ರೀವಾಮೇಢ್ರೇಷು; ಹಸ್ತಯೋರ್ದ್ವೌ, ಪಾದಯೋರ್ದ್ವೌ, ಗ್ರೀವಾಮೇಢ್ರಯೋರೇಕೈಕಃ ॥ (ಸುಶ್ರುತ॥ ಶಾರೀರ॥ ಅ ೫ ಸೂ ೧೩)

ಆರು ಕೂರ್ಚಾ (ಕುಂಚ)ಗಳು ಇರುತ್ತವೆ ಅವುಗಳು ಹಸ್ತಪಾದ ಕುತ್ತಿಗೆ ಮೇಢ್ರ (ಪುರುಷ ಜನನೇಂದ್ರಿಯ)ಗಳಲ್ಲಿ ಇರುತ್ತವೆ. **ಹಸ್ತಗಳಲ್ಲಿ** (೨), **ಪಾದಗಳಲ್ಲಿ** (೨), **ಕುತ್ತಿಗೆಯಲ್ಲಿ** (೧), **ಮೇಢ್ರದಲ್ಲಿ** (೧), ಒಟ್ಟು ಆರು ಕೂರ್ಚಾಗಳು ದೇಹದಲ್ಲಿರುತ್ತವೆ. ಹಿಂದೆ ಹೇಳಿದ ಜಾಲಗಳ ಸಮುದಾಯಗಳಿಂದ ಕೂರ್ಚಾಗಳಾಗಿರುತ್ತವೆ. ನಾವು ಹಸ್ತವನ್ನು ಕೆಳಗೆ ನೂಡಿದರೆ ಅಸ್ಥಿ ಸ್ನಾಯುಮಾಂಸಗಳಿಂದ ಯುಕ್ತವಾದ ಬೆರಳುಸಹಿತವಾದ, ಮಣಿಬಂಧವು ಒಂದು ಕುಂಚದಂತೇ ಕಾಣುತ್ತದೆ. ಆದ್ದರಿಂದ ಕೂರ್ಚಾ ಎಂದು ಹೇಳಿದ್ದಾರೆ ಇವರಂತೇ ಉಳಿದವುಗಳನ್ನು ತಿಳಿದುಕೊಳ್ಳಬೇಕು.

(೪೦) ದೊಡ್ಡ ಮಾಂಸರಜ್ಜುಗಳು

ದೊಡ್ಡದಾಗಿ ಹಗ್ಗದಂತಿರುವ ಮಾಂಸರಜ್ಜುಗಳು ನಾಲ್ಕು ಇರುತ್ತವೆ. ಬೆನ್ನುಹುರಿಯ ಎರಡೂ ಬದಿಯ ಪಾರ್ಶ್ವಗಳಲ್ಲಿ ಪೇಶೀ (ಮಾಂಸ ಜೀಲ) ಗಳಿಗೆ ಆಧಾರವಾಗಿರುತ್ತವೆ. ಒಳಗೆ ಮತ್ತು ಬಾಹ್ಯ ಭಾಗಗಳಲ್ಲಿ ಎರಡೆರಡ ರಂತೆ (೪) ಇರುತ್ತವೆ ಹೇಗೆ ದಾರಕ್ಕೆ ಅಂಟಿಕೊಂಡು ಕಟ್ಟಿದ (ಹೆಣೆದ) ಹೂವುಗಳು ಭದ್ರವಾಗಿ ನಿಲ್ಲುತ್ತವೆಯೋ, ಅದರಂತೆ ಮಾಂಸರಜ್ಜುಗಳಿಗೆ ಅಂಟಿಕೊಂಡು ಪೇಶೀಗಳು ಸ್ಥಿರವಾಗಿ ನಿಲ್ಲುತ್ತವೆ. ಅರ್ಥಾತ್ ದಾರದಿಂದ ಕಟ್ಟಿದ ಹೂವಿನ ಮಾಲೆಯಂತೆ, ಪೇಶೀಗಳು ರಜ್ಜುಗಳಲ್ಲಿ ಕಟ್ಟಲ್ಪಟ್ಟು ಅಂಟಿಕೊಂಡು) ಭದ್ರವಾಗಿ ನಿಂತಿರುತ್ತವೆ

"ಗಯೀಆಚಾರ್ಯರು" ಬೆನ್ನುಹುರಿಯ ಪಾರ್ಶ್ವಗಳಲ್ಲಿ ಹೊರಗೆ ಳ), ಒಳಗಡೆಯಲ್ಲಿ(ಳ), ಒಟ್ಟು (ಲ), ಮಾಂಸರಜ್ಜುಗಳೆಂದು ಹೇಳಿದ್ದಾರೆ.

ಮುಹಶ್ಚೋನಮಾಂಸರಜ್ಜವಶ್ಚತಸ್ರಃ, ಪೃಷ್ಠವಂಶಮುಭಯತಃ
ಪೇಶೀನಿಬಂಧನಾರ್ಥಂ ದ್ವೇಬಾಹ್ಯೇ, ಆಭ್ಯಂತರಂಚದ್ವೇ ॥

(ಸುಶ್ರುತ॥ ಶಾರೀರ॥ ಅ ೫ ಸೂ ೧೩)

ಮಹಾಮಾಂಸರಜ್ಜುಗಳು (೪) ಇರುತ್ತವೆ. ಪೇಶೀ ನಿಬಂಧನಕ್ಕಾಗಿ ಬೆನ್ನುಹುರಿಯ ಉಭಯ ಭಾಗಗಳಲ್ಲಿ ಬಾಹ್ಯವಾದ ಎರಡು ರಜ್ಜುಗಳು, ಒಳಗಡೆಗೆ ಎರಡು, ಒಟ್ಟು ನಾಲ್ಕು ಇರುತ್ತವೆ.

(೪೧) ಏಳು ಸೇವನಿಗಳು

"ಸೇವನೀ"ಯೆಂದರೆ ಹೊಲಿಗೆಯು. ಮಾಂಸಚರ್ಮಾದಿಗಳು ಕೂಡಿದ ಮಧ್ಯಭಾಗಗಳಲ್ಲಿ ಹೊಲಿಗೆಯಂತೆ ಇರುತ್ತವೆ ಎರಡು ವಸ್ತ್ರಗಳನ್ನು ಕೂಡಿಸಿ ಹೊಲಿದರೆ ಮಧ್ಯದಲ್ಲಿ ಹೊಲಿದ ಗುರುತಿನ ಸಂಧಿ ಇರುತ್ತದೆಯೋ ಅದರಂತೇ ಸೇವನಿಗಳಿರುತ್ತವೆ.

ಸಪ್ತ ಸೇವನ್ಯಃ; ಸಿರಸಿವಿಭಕ್ತಾಃ ಪಂಚ; ಜಿಹ್ವಾಶೇಫಸೋರೇಕೈಕಾ; ತಾಃ ಪರಿಹರ್ತವ್ಯಾಃ ಶಸ್ತ್ರೇಣ ॥

(ಸುಶ್ರುತ॥ ಶಾರೀರ॥ ಅ. ೫ ಸೂ ೧೫)

"ಸೇವನೀ" ಹೊಲಿಗೆಗಳು (೭) ಇರುತ್ತವೆ. ತಲೆಯಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಕೂಡಿ (೫) ಇರುತ್ತವೆ. ನಾಲಿಗೆಯ ಕೆಳಭಾಗದಲ್ಲಿ (೧) ಇರುತ್ತದೆ ಪುರುಷರ ಲಿಂಗ ಮತ್ತು ಅಂಡಕೋಶಗಳ ಮಧ್ಯದಲ್ಲಿಯ ಹೊಲಿಗೆ (೧) ಇರುತ್ತದೆ ಒಟ್ಟು ಸೇವನೀಗಳು (೭) ಇರುತ್ತವೆ ನಾಲಿಗೆ ಮತ್ತು ಮೇಢ್ರಗಳನ್ನು ಮೇಲೆತ್ತಿದಾಗ ಅವುಗಳ ಬುಡದಲ್ಲಿ ಹೊಲಿಗೆಯು ಸ್ಪಷ್ಟ ಕಾಣುತ್ತದೆ ಶಸ್ತ್ರಕರ್ಮ ಮಾಡಬೇಕಾದರೆ ಇವುಗಳನ್ನು ಬಿಡಬೇಕು. ಅರ್ಥಾತ್ ಇವುಗಳನ್ನು ಛೇದಿಸಬಾರದು. ಯಾಕಂದರೆ ಎರಡೂ ಸಂಯೋಜನೆಯ ಮಧ್ಯ ಭಾಗವು ಸೇವನೀ ಇರುವದರಿಂದ, ಅದರ ಛೇದನೆಯಿಂದ ಸಂಬಂಧವು ತಪ್ಪಿ ಬೇರೆಯಾಗುತ್ತವೆ. ಇಷ್ಟೇ ಅಲ್ಲ ತಿರುಗಿ ಕೂಡುವದಿಲ್ಲ ಆದ್ದರಿಂದ ಸೇವನೀಗಳನ್ನು ಬಿಟ್ಟು ಶಸ್ತ್ರಕರ್ಮವೆಸಗಬೇಕೆಂದು ಹೇಳಿದ್ದಾರೆ ಅರ್ಥಾತ್ ಸೇವನೀಗಳನ್ನು ಛೇದಿಸಬಾರದೆಂಬುವದೇ ಸ್ಪಷ್ಟಾಭಿಪ್ರಾಯವಾಗಿರುತ್ತದೆ.

(೪೨) ಅಸ್ಥಿಸಂಘಾತಗಳು

ಅಸ್ಥಿಗಳ ಗುಂಪಿಗೆ "**ಸಂಘಾತ**"ವೆಂದು ಹೇಳುತ್ತಾರೆ. ಎರಡು ಅಸ್ಥಿಗಳ ಕೂಡುವಿಕೆಗೆ ಸಂಧಿಯೆಂದು ಹೇಳುತ್ತಾರೆ ಎರಡಕ್ಕಿಂತ ಹೆಚ್ಚು ಅಸ್ಥಿಗಳು ಒಂದೇ ಸ್ಥಳದಲ್ಲಿ ಸಂಧಿತವಾಗುವದಕ್ಕೆ "**ಸಂಘಾತ**"ವೆಂದು ಹೇಳುತ್ತಾರೆ.

"**ಸುಶ್ರುತಾಚಾರ್ಯರು**" ಅಸ್ಥಿಸಂಘಾತಗಳು (೧೪) ಇರುತ್ತವೆಂದು ಹೇಳಿದ್ದಾರೆ.

"**ಅನ್ಯ ಕೆಲವು ಆಚಾರ್ಯರು**" ಅಸ್ಥಿಸಂಘಾತ (೧೮) ಇರುತ್ತವೆಂದು ಹೇಳುತ್ತಾರೆ ಸುಶ್ರುತದಲ್ಲಿ ಇವೆರಡೂ ಮತಗಳನ್ನು ಯೋಗ್ಯವೆಂದು ಗ್ರಹಿಸುತ್ತಾರೆ ಅಸ್ಥಿ ಸಂಘಾತಗಳು ಹೆಚ್ಚಿರುತ್ತವೆನ್ನುವದರ ಉದಾಹರಣೆ ವಿವರಗಳನ್ನು ಇಲ್ಲಿಯೇ ಮುಂದಿನ "**ಸೀವುಂತ**" ವಿಷಯದಲ್ಲಿ ಹೇಳುತ್ತಾರೆ.

ಚತುರ್ದಶಾಽಸ್ಥ್ನಾಂಸಂಘಾತಾಃ ತೇಷಾಂತ್ರಯೋಗುಲ್ಫಜಾನು ವಂಕ್ಷಣೇಷು, ಏತೇನೇತರಸಕ್ಥಿಬಾಹೂಚವ್ಯಾಖ್ಯಾತೌ ತ್ರಿಕ ಶಿರಸೋರೇಕೈಕಃ ॥ (ಸುಶ್ರುತ॥ ಶಾರೀರ॥ ಅ ೫ ಸೂ ೧೬)

ಅಸ್ಥಿಗಳ ಸಂಘಾತಗಳು (೧೪) ಇರುತ್ತವೆ. ಅವುಗಳಲ್ಲಿ "**ಗುಲ್ಫ**" ಪಾದದ ಪಾರ್ಶ್ವಗಳಲ್ಲಿರುವಗಂಟು), "**ಜಾನು**" (ಮೊಣಕಾಲಿನ ಮೇಲ್ಭಾಗ ನಲ್ಲಿಯ ಸಂದು), "**ವಂಕ್ಷಣ**" (ತೊಡೆಯ ಎಲುಬಿನ ಮೇಲಿನ ಸಂಧಿ), ಇವುಗಳಲ್ಲಿ ಒಂದೊಂದರಲ್ಲಿ ಒಂದರಂತೆ (೩) ಸಂಘಾತಗಳಿರುತ್ತವೆ. ಇದರಂತೆ ತೊಂದು ಕಾಲು, ಬಾಹುಗಳಿರಡರಲ್ಲಿಯೂ, ಮೂರು ಮೂರು ಸಂಘಾತ ಗಳಂತೆ (೯) ಇರುತ್ತವೆ. ಒಟ್ಟು ಕಾಲು ಕೈಗಳಲ್ಲಿ ಕೂಡಿ (೧೨) ಸಂಘಾತ ಗಳಿರುತ್ತವೆಂದು ಹೇಳಿದ್ದಾರೆ.

"**ತ್ರಿಕ**" (ಭುಜ ಕುತ್ತಿಗೆಗಳ ಮೂರು ಅಸ್ಥಿಗಳು ಕೂಡಿದ ಸ್ಥಳ) **ಶಿರಸ್ಸು**"ಇವುಗಳಲ್ಲಿಪ್ರತಿಯೊಂದರಲ್ಲಿಒಂದರಂತೆ (೨) ಸಂಘಾತಗಳಿರುತ್ತವೆ.

ಇವೆಲ್ಲವುಗಳು ಕೂಡಿ "**ದೇಹದಲ್ಲಿಯ**" ಸಂಘಾತವೆಂದರೆ (೧೪) ಇರುತ್ತವೆ ಟೊಂಕದಲ್ಲಿಯ (ಶ್ರೋಣಿಕಾಂಡಭಾಗ) ಮೂರು ಅಸ್ಥಿಗಳು ಕೂಡಿದ ಭಾಗಕ್ಕೆ "**ತ್ರಿಕ**" ವೆಂದನ್ನುವದು ಪ್ರಸಿದ್ಧವಾಗಿರುತ್ತದೆ ಆದರೆ ಇಲ್ಲಿ ಸಂಘಾತ ಗಣನೆಯ ವಿಷಯದಲ್ಲಿ ಭುಜಕುತ್ತಿಗೆಗಳ (ಬಾಹುಗ್ರೀವಸಂಧಾನೆ) ಮೂರು ಅಸ್ಥಿಗಳ ಸಂಘಾತಕ್ಕೆ ತ್ರಿಕವೆಂದು ಹೆಸರು.

(೪೩) ಸೀಮಂತಗಳು

ಸಂಘಾತಗಳು ಒಂದಕ್ಕೊಂದು ಹೊಲಿದಂತೆ ಕೂಡಿರುವದಕ್ಕೆ 'ಸೀಮಂತ" ವೆಂದು ಹೇಳುತ್ತಾರೆ ಇವುಗಳನ್ನು ಮುಂದೆ ಹೇಳಿದ ಅಸ್ಥಿ ಸಂಘಾತದಂತೇ, ಆವಾವ ಸ್ಥಾನಗಳಲ್ಲಿರುತ್ತವೆಂದು ತಿಳಿಯಬೇಕೆಂದು ಹೇಳಿದ್ದಾರೆ. ಅರ್ಥಾತ್ ಅಸ್ಥಿ ಸಂಘಾತಗಳಿರುವ ಸ್ಥಳಗಳಲ್ಲಿಯೇ ಇವುಗಳು ಇರುತ್ತವೆಂದು ತಿಳಿಯಬೇಕು. "**ಸೀಮಂತವೆಂದರೆ**" ತಲೆಯಲ್ಲಿಯ ಜೈತಲೆಯು. ಇದರಂತೇ ವಿಭಾಗಗಳು ಕೂಡಿದ ಮಧ್ಯಭಾಗಗಳಿರುವದರಿಂದ ಸೀಮಂತವೆಂದು ಹೇಳಿದ್ದಾರೆ

ಚತುರ್ದಶೈವ ಸೀಮಂತಾಃ ತೇಚಾಸ್ಥಿ ಸಂಘಾತವದ್ಗಣನೀಯಾಃ, ಯತಸ್ತೈರ್ಯುಕ್ತಾ ಅಸ್ಥಿಸಂಘಾತಾಃ, ಯೇಭ್ಯುಕ್ತಾಃ ಸಂಘಾತಾಸ್ತೇಖಲ್ವಷ್ಟಾದಶೈಕೇಷಾಂ ॥

(ಸುಶ್ರುತ॥ ಶಾರೀರ॥ ಅ ೫ ಸೂ ೧೭)

"**ಸೀಮಂತಗಳು**" ಹದಿನಾಲ್ಕೇ ಇರುತ್ತವೆ. ಅಸ್ಥಿ ಸಂಘಾತಗಳಂತೇ ಇವುಗಳನ್ನು ಎಣಿಸಬೇಕು. ಅರ್ಥಾತ್ ಅಸ್ಥಿ ಸಂಘಾತಗಳ ಸ್ಥಾನಗಳಲ್ಲಿಯೇ ಇವುಗಳು ಇರುತ್ತವೆಂದು ತಿಳಿಯಬೇಕು. **ಯಾಕಂದರೆ "ಸೀಮಂತ"** ಗಳಿಂದ ಅಸ್ಥಿ ಸಂಘಾತಗಳು ಕೂಡಿದಂಥವುಗಳು ಇರುತ್ತವೆ ಹಿಂದೆ ಹೇಳಲ್ಪಟ್ಟ ಅಸ್ಥಿ ಸಂಘಾತಗಳನ್ನು ಕೆಲವರು (೧೪), ಎಂದು ಹೇಳುತ್ತಾರೆ. **ಸುಶ್ರುತ ಮತದಂತೆ** (೧೪) ಅಸ್ಥಿ ಸಂಘಾತಗಳೆಂದು ತಿಳಿಯಬೇಕು

ಯಾಕಂದರೆ "**ಚತುರ್ದಶೈವ**" ಎಂದು ಹೇಳಿರುವದರಿಂದ ಹೆಚ್ಚೆಂದು ಹೇಳಿರುವದು, ಸುಶ್ರುತರ ಮತವಲ್ಲೆಂದು ತಿಳಿಸಲು ಹೀಗೆ ಹೇಳಿದ್ದಾರೆ.

ಸಂಘಾತಾಃ ಸೀವಿತಾಯೈಸ್ತು ಸೀಮುಂತಾಂಸ್ತಾನ್ ಪ್ರಚಕ್ಷ್ಮಹೆ ॥ (ಭೋಜತಂತ್ರೆ)

ಸಂಘಾತಗಳು ಎಲ್ಲಿ ಹೊಲಿದಂತೆ ಕೂಡಿರುತ್ತವೆಯೋ, ಅವಕ್ಕೆ "ಸೀವುಂತ" ಗಳಂದು ಅನ್ನುತ್ತಾರೆ. ಅರ್ಥಾತ್ ಅಸ್ಥಿಗಳ ಕೂಡುವಿಕೆಗಳಲ್ಲಿಯ ಸಂದುಗಳನ್ನು ಸೀಮುಂತವೆಂದು ಹೇಳುತ್ತಾರೆ.

ಸೀಮುಂತಗಳ ಗಣನೆ

ಗುಲ್ಫಜಾನುವಂಕ್ಷಣಮಣಿಬಂಧಕೂರ್ಪರಕಕ್ಷಾಸು ಏಕೈಕಃ, ತ್ರಿಕೇ ಏಕಃ, ಪಂಚಶಿರಸಿ; ॥ (ವೃದ್ಧವಾಗ್ಭಟ॥)

ಗುಲ್ಫ, ಜಾನು, ವಂಕ್ಷಣ, ಮಣಿಬಂಧ, ಕೂರ್ಪರ (ಮೊಳಕೈಮೇಲ್ಭಾಗದ ಸಂಧಿ), ಕಕ್ಷಾ (ಬಗಲು), ಇವುಗಳಲ್ಲಿ ಒಂದೊಂದರಂತೆ ಒಟ್ಟು (೧೨), ತ್ರಿಕ ಪ್ರದೇಶದಲ್ಲಿ (೧), ತಲೆಯಲ್ಲಿ (೫), ಎಲ್ಲ ಪ್ರದೇಶಗಳಲ್ಲಿಯ ಸೀಮುಂತಗಳು ಕೂಡಿ (೧೮) ಇರುತ್ತವೆ

ಅಷ್ಟಾದಶ ಸಂಘಾತಗಳು

ಪೂರ್ವೋಕ್ತಾಃ ಚತುರ್ದಶ, ಶ್ರೋಣಿಕಾಂಡಮುಪರಿ ಏಕಃ, ವಕ್ಷ್ಣಉಪರಿ ಏಕ, ಉದರೋರಸೋಃಸಂಧಾನೇ ಏಕಃ, ಅಂಸಕೂಟಮುಪರಿ ಏಕಃ, ಏವಮುಷ್ಟಾದಶ ॥ (ಸುಶ್ರುತ ಟೀಕಾ)

ಮೊದಲು ಹೇಳಿದ ಸಂಘಾತಗಳು (೧೪), ಶ್ರೋಣಿಕಾಂಡಾಸ್ಥಿ ದಂಡಗಳ ಮೇಲ್ಭಾಗದಲ್ಲಿ (೧), ಎದೆಯ ಮೇಲ್ಭಾಗದಲ್ಲಿ (೧), ಹೊಟ್ಟೆ ಎದೆಗಳ ಸಂಧಾನ ಭಾಗದಲ್ಲಿ (೧), ಅಂಸಕೂಟದ ಮೇಲ್ಭಾಗದಲ್ಲಿ (೧), ಒಟ್ಟು ಸಂಘಾತಗಳು (೧೮) ಇರುತ್ತವೆ ಕೆಲವರು ಆಚಾರ್ಯರು ಅಷ್ಟಾದಶ ಅಸ್ಥಿ ಸಂಘಾತಗಳನ್ನುಹೇಳಿದ್ದಾರೆ. ಅವರಮತವನ್ನುಗ್ರಹಿಸಿ ಇಲ್ಲಿ ವಿವರಿಸಲಾಗಿದೆ.

(೪೪) ದಶಪ್ರಾಣಾಯತನವು

ದಶಪ್ರಾಣಾಯತನಾನಿ; ತದ್ಯಥಾ:– ಮೂರ್ಧಾ, ಕಂಠೋ, ಹೃದಯಂ, ನಾಭಿಃ, ಗುದಂ, ಬಸ್ತಿಃ, ಓಜಃ, ಶುಕ್ರಂ, ಶೋಣಿತಂ, ಮಾಂಸಮಿತಿ॥ ತೇಷುಷಟ್ ಪೂರ್ವಾಣಿ ಮರ್ಮ ಸಂಖ್ಯಾತಾನಿ ॥ (ಚರಕ॥ ಶಾರೀರ॥ ೮ ೭ ಸೂ. ೯)

ಪ್ರಾಣಗಳಿರುವ ಹತ್ತು ಸ್ಥಾನಗಳು.— (೧) **ಮೂರ್ಧಾ** (ತಲೆ), (೨) **ಕಂಠ** (ಕುತ್ತಿಗೆ), (೩) **ಹೃದಯ,** (೪) **ನಾಭಿ** (ಹೊಕ್ಕಳು), (೫) **ಗುದ** (ಮಲನಿರ್ಗಮನ ದ್ವಾರ), (೬) **ಬಸ್ತಿ** (ಮೂತ್ರಾಶಯ), (೭) **ಓಜಸ್ಸು** (ರಸಾದಿ ಸಪ್ತಧಾತುಗಳ ಸತ್ವ), (೮) **ಶುಕ್ರ,** (೯) **ಶೋಣಿತ** (ರಕ್ತ), (೧೦) ಮಾಂಸ, ಇವುಗಳು ಪ್ರಾಣಾಯತನಗಳೆಂದು ಹೇಳಿದ್ದಾರೆ ಇವುಗಳಲ್ಲಿ ವಿಶೇಷವಾಗಿ ಪ್ರಾಣಗಳಿರುತ್ತವೆಯಾದ್ದರಿಂದ, ಇಲ್ಲಿ ಆಘಾತಾದಿಗಳು ಸಂಭವಿಸಿದರೆ ಮಾರಕವಾಗಿರುತ್ತದೆ ಮೂರ್ಧಾದಿಂದ ಪ್ರಾರಂಭಿಸಲುಮಾಡಿಕೊಂಡು (೬) ಮರ್ಮಗಳೆಂದು ಹೇಳಿದ್ದಾರೆ

ದಶೈವಾಯತನ್ಯಾಹುಃ ಪ್ರಾಣಾಯೇಷುಪ್ರತಿಷ್ಠಿತಾಃ ॥
ಶಂಖೌಮರ್ಮತ್ರಯಂ ಕಂಠೋರಕ್ತಂಶುಕ್ರೌಜಸೀಗುದಂ ॥

(ಚರಕ॥ ಸೂ ಸ್ಥಾ. ೮ ೨೯ ಸೂ. ೩)

ಪ್ರಾಣಗಳು ಎಲ್ಲಿ ವಿಶೇಷವಾಗಿರುತ್ತವೆಯೋ ಅವಕ್ಕೆ ಪ್ರಾಣಾಯತನವೆಂದನ್ನುತ್ತಾರೆ. ಪ್ರಾಣಗಳು ವಿಶೇಷ ಸ್ಥಿತಿ ಮಾಡಿಕೊಂಡಿರುವ (೧೦) ಆಯತನಗಳನ್ನು ಹೇಳುತ್ತಾರೆ.

ಶಂಖಗಳು (ಕಣ್ಣು ಹುಬ್ಬುಗಳ ಕೊನೆಯ ಮೇಲ್ಭಾಗಗಳಲ್ಲಿ ಕಿವಿ ಹಣೆಗಳ ಮಧ್ಯ ಪ್ರದೇಶ (೨), **ಮರ್ಮತ್ರಯ** (ಹೃದಯ ತಲೆ ಬಸ್ತಿಗಳು) (೩), **ಕಂಠ** (೧), **ರಕ್ತ** (೧), **ಶುಕ್ರ** (೧), **ಓಜಸ್ಸು** (೧), **ಗುದ** (೧), ಇವು ಹತ್ತು ಪ್ರಾಣಾಯತನಗಳೆಂದು ಹೇಳಿರುತ್ತಾರೆ.

(೪೫) ಕೋಷ್ಠಾಂಗಗಳು

ಪಂಚದಶಕೋಷ್ಠಾಂಗಾನಿ; ತದ್ಯಥಾ:— ನಾಭಿಶ್ಚ, ಹೃದಯಂಚ, ಕ್ಲೋಮಚ, ಯಕೃಚ್ಚ, ಪ್ಲೀಹಾಚ, ವೃಕ್ಕೌಚ, ಬಸ್ತಿಶ್ಚ, ಪುರೀಷಾಧಾರಶ್ಚ, ಆಮಾಶಯಶ್ಚ, ಪಕ್ವಾಶಯಶ್ಚ, ಉತ್ತರಗುದಂ, ಅಧರಗುದಂಚ, ಕ್ಷುದ್ರಾಂತ್ರಂ, ಸ್ಥೂಲಾಂತ್ರಂಚ, ವಪಾವಹನಂಚೇತಿ॥ (ಚರಕ॥ಶಾರೀರ॥ ೪ ಸ್ಥಾ ೧೦).

ಮೇಲಿನವಲ್ಲಿ "**ಕೋಷ್ಠ ವಿಭಾಗಗಳು**" ಯಾವವೆಂದು ಹೇಳುತ್ತಾರೆ. ಈ ಕೆಳಗೆ ಹೇಳಿದ (೧೫) ವಿಭಾಗಗಳಿಂದಯುಕ್ತವಾದ ಸ್ಥಾನಕ್ಕೆ "**ಕೋಷ್ಠ**" ವೆಂದು ಹೇಳುತ್ತಾರೆ

ಕೋಷ್ಠಾಂಗಗಳು -[೧] **ನಾಭಿ** [೨] **ಹೃದಯ** [೩] **ಕ್ಲೋಮ** [೪] **ಯಕೃತ್** [೫] **ಪ್ಲೀಹ** [೬] **ವೃಕ್ಕಗಳು** [೭] **ಬಸ್ತಿ** [೮] **ಪುರೀಷಾಧಾರ** [೯] **ಆಮಾಶಯ** [೧೦] **ಪಕ್ವಾಶಯ** [೧೧]**ಉತ್ತರಗುದ** [ಮಲವು ತಡೆಮನಿಲ್ಲುವ ಸ್ಥಳ] [೧೨] **ಅಧರಗುದ** [ಮಲ ನಿರ್ಗಮನ ದ್ವಾರ] [೧೩] **ಕ್ಷುದ್ರಾಂತ್ರ** [೧೪] **ಸ್ಥೂಲಾಂತ್ರ** [೧೫] **ವಪಾವಹನ** [ತಲವರ್ತಿಕಾ] ಇವು ಪುನರ್ಜನ್ಮದ ಅಂಗವಿಭಾಗಗಳಿಗೆ ಕೋಷ್ಠಾಂಗಗಳೆಂದು ಹೇಳುತ್ತಾರೆ

[೪೬] ಸಿರಾ ಧಮನಿಗಳ ಸೂಕ್ಷ್ಮ ವಿಭಾಗ

ಸಿರಾಧಮನೀನಾಂಚಾಣುಶೋ ವಿಭಜ್ಯ ಮಾನಾನಾಮ್ ಏಕೋನ ತ್ರಿಂಶತ್ ಶತಸಹಸ್ರಾಣಿನವ ಚ ಶತಾನಿಷಟ್ ಪಂಚ ಶತ್ಯಾನಿ ಭವಂತಿ ॥ ತಾಭಿರಿದಂ ಶರೀರಂ ಗವಾಕ್ಷಿತಂ ಪಿನದ್ಧ ಮಾತತಂ ಚ॥ ತಾವಂತಿಚಕೇಶಶ್ಮಶ್ರುಲೋಮಾನಿ॥ ತಾಸಾಂ ಹಿಮುಖಾನಿತತ್ಪ್ರತಿಬದ್ಧಾನಿ॥ ಅತಸ್ತಾನಿತಾಭಿರಾಪ್ಯಾಯ್ಯಂತೆ॥ ತೈಶ್ಚತಾಃ ಸ್ವೇದವಮಭಿವಹಂತಿ॥ ತಥಾsಭ್ಯಂಗಾಲೇಪಾದಿವೀ

ರ್ಯಂತ್ವಚಿವಿಪಕ್ವಮಂತರ್ನಯಂತಿ॥ ಸ್ಪರ್ಶಂಚಗೃಣ್ಹಂತಿ॥ ಸ್ರೋತಾಂಸಿಪುನರಸಂಖ್ಯೇಯಾನ್ಯೇವ ॥
(ಅಷ್ಟಾಂಗ॥ ಸಂ॥ ಶಾ॥ ಅ. ೫)

ಸಿರಾ ಧಮನಿಗಳನ್ನು ವಿಭಾಗಮಾಡುತ್ತಾ ಬಹುಸೂಕ್ಷ್ಮಕೂದಲು ನಷ್ಟು ಪ್ರಮಾಣವಾಗಿ, ದೇಹದಲ್ಲಿ ಪಸರಿಸಿರುವ ಪರ್ಯಂತದ ವರೆಗೆ ಗಣನೇ ಮಾಡಿರುತ್ತಾರೆ. ಹೀಗೆ ಅಣುಶಃ ಸಿರಾಧಮನಿಗಳ ಗಣನೆಯು (ಅನಂತ) ಇರುತ್ತದೆ.

ಸಿರಾಧಮನಿಗಳ ಈ ಸೂಕ್ಷ್ಮತಂತುಗಳಿಂದ ಶರೀರವು ಹೆಣೆದಂತೆಯೂ, ಎಲ್ಲ ಕಡೆಗಳಲ್ಲಿ ಸುತ್ತಲ್ಪಟ್ಟಂತೆಯೂ ಇರುತ್ತದೆ. ಈ ಸಂಖ್ಯೆಗಳಷ್ಟೇ ಕೂದಲು ಶ್ಮಶ್ರು ರೋಮಗಳಿರುತ್ತವೆ. ಧಮನೀ ಸಿರಗಳಲ್ಲಿ ಕೂದಲುಗಳ ಆದಿಭಾಗಗಳು ಅಂಟಿಕೊಂಡಿರುತ್ತವೆ. ಆದ್ದರಿಂದ ಕೂದಲುಗಳು ಧಮನೀ ಸಿರಗಳಿಂದ ಪೋಷಿಸಲ್ಪಡುತ್ತವೆ ಕೂದಲು (ರೋಮಕೂಪ) ಗಳಿಂದ ಸಿರಾದಿಗಳು ಸ್ವೇದ ವಹನ ಕಾರ್ಯವನ್ನುಮಾಡುತ್ತವೆ ಇದರಂತೆ ಚರ್ಮದಲ್ಲಿಯ ಅಭ್ಯಂಗ ಆಲೇಪಾದಿಗಳ ವಿಪಕ್ವ (ಚನ್ನಾಗಿ ಪಕ್ವವಾಗಿರುವ) ಸತ್ವವನ್ನು ಒಳಗೆ ಒಯ್ಯುತ್ತವೆ. ಸ್ಪರ್ಶಜ್ಞಾನವನ್ನುಮಾಡಿಕೊಡುತ್ತವೆ ಇವು ಸಿರಾಧಮನಿಗಳ ಸೂಕ್ಷ್ಮವಾದ ಅಣುಪರ್ಯಂತವಾಗಿರುವವುಗಳ ಪರಿಚಯಕಾರ್ಯ ಸಂಖ್ಯಾದಿಗಳಾಗಿರುತ್ತವೆ

"**ಸ್ರೋತಸ್ಸುಗಳು**" ಅಸಂಖ್ಯವಾಗಿ ಎಣಿಸಲುಬಾರದಂತೆ ಇರುತ್ತವೆ

(೬೭) ದೇಹದಲ್ಲಿಯ ರೋಮಗಳು

ಅನ್ಯೇತ್ವಾಹುಃ, ಶರೀರೇ ರೋಮ್ಣಾಂದ್ವಾಸಪ್ತತಿಃ ಕೋಟ್ಯೋ ಭವಂತಿ॥ (ಅನ್ಯಮತ)

ಬೇರೆ ಕೆಲವು ಆಚಾರ್ಯರು ದೇಹದಲ್ಲಿ ಕೂದಲುಗಳು (೭೨) ಕೋಟಿಯಷ್ಟು ಇರುತ್ತವೆಂದು ಹೇಳುತ್ತಾರೆ.

(೪೮) ಶರೀರದಲ್ಲಿಯದ್ರವಾದಿ ಪ್ರಮಾಣಗಳು

ಶರೀರದಲ್ಲಿರುವ ದ್ರವ ರೂಪವಾದ ರಸ ರಕ್ತಾದಿಗಳನ್ನು, ಅಂಜಲಿ (ಜೊಗಸೆ) ಪ್ರಮಾಣಗಳಿಂದ ಅಳತೆಯನ್ನು ಹೇಳುತ್ತಾರೆ. ಸ್ಥೂಲ ಕರಿಣ ಸ್ಥಿರವಾಗಿ ಎಣಿಸಲು ಬರುವಂಥ ಅಸ್ಥಿ ಸ್ನಾಯು ಮೊದಲಾದವುಗಳನ್ನು, ಗಣನೇಮಾಡಿ ಸಂಖ್ಯಾನಿರ್ದೇಶನಮಾಡಿದ್ದಾರೆ. ನಂತರ ಸ್ಥಿರವಲ್ಲದ ದ್ರವ ದ್ರವ್ಯಗಳನ್ನು ಜೊಗಸೆಯ ಪ್ರಮಾಣದಿಂದ ನಿರ್ದೇಶಿಸಿ ಹೇಳುತ್ತಾರೆ.

ಯತ್ಪುಂಜಲಿಸಂಖ್ಯೇಯಂ ತದುಪದೇಕ್ಷ್ಯಾನುಃ, ತತ್ ಪರಂ ಪ್ರಮಾಣಮುಭಿಜ್ಞೇಯಂ, ತಚ್ಚವೃದ್ಧಿಹ್ರಾಸಯೋಗಿ, ತರ್ಕ್ಯ ಮೇವ ॥ ತದ್ಯಥಾ:— ದಶೋದಕಸ್ಯಾಂ ಜಲಯುಃ ಶರೀರೇ ಸ್ವೇನಾಂಜಲಿಪ್ರಮಾಣೇನ, ಯತ್ತು ಪ್ರಚ್ಯವಮಾನಂ ಪುರೀಷ ಮನುಬಧ್ನಾತ್ಯತಿಯೋಗೇನ ತಥಾಮೂತ್ರಂ ರುಧಿರಮನ್ಯಾಂ ಶ್ಚ ಶರೀರಧಾತೂನ್, ಯತ್ತು ಸರ್ವಶರೀರಚರಂ ಬಾಹ್ಯಾತ್ವ ಗ್ಭಿಭರ್ತಿ,ಯತ್ತು ತ್ವಗಂತರೇವ್ರಣಗತಂ ಲಸೀಕಾಶಬ್ದಂಲಭತೆ, ಯಚ್ಚೋಷ್ಮಣ್ಯಾನುಬದ್ಧಂ ಲೋಮಕೂಪೇಭ್ಯೋನಿಷ್ಪತತ್ ಸ್ವೇದಶಬ್ದಮವಾಪ್ನೋತಿ,ತದುದಕಂದಶಾಂಜಲಿಪ್ರಮಾಣಂ॥

(ಚರಕ॥ ಶಾರೀರ॥ ಅ ೭ ಸೂ ೧೫)

ಯಾವದು ಅಂಜಲಿಯಿಂದ ಅಳೆಯಲ್ಪಡತಕ್ಕದ್ದಿರುವದೋ ಅದನ್ನು ಹೇಳುತ್ತೇವೆ. ಅದು (ಅಳತೆಯು) ಯೋಗ್ಯಪ್ರಮಾಣದ್ದೆಂದು ತಿಳಿಯಬೇಕು ವೇಹದಲ್ಲಿ ಆವಾವ ದ್ರವದ್ರವ್ಯಗಳ ವೃದ್ಧಿ ಅಥವಾ ಹ್ರಾಸವಾದಾಗ, ಪ್ರಮಾ ಣಗಳನ್ನು ತರ್ಕಿಸಿ ತಿಳಕೊಳ್ಳಬೇಕು ಇಲ್ಲಿ ಹೇಳಿರುವ ಪ್ರಮಾಣವು ಸಮ ಸ್ಥಿತಿಯಲ್ಲಿರುವ ದ್ರವದ್ರವ್ಯಪ್ರಮಾಣವಾಗಿರುತ್ತದೆ.

ಅಳತೆಯು ಹೇಗಂದರೆ:— ಪ್ರತಿಯೊಬ್ಬರ ತಮ್ಮ ಬೊಗಸೆಯ (ಅಂಜಲಿ) ಪ್ರಮಾಣದಿಂದ ಉದಕವು, ಹತ್ತು (೧೦) ಬೊಗಸೆಯಷ್ಟು ಇರುತ್ತದೆ. ನೀರು ಹೆಚ್ಚಾಗರೆ ಎಲ್ಲ ಕಡೆಯಲ್ಲಿಯೂ ಹರಿಯತಕ್ಕದ್ದಾಗಿ (ಪ್ರಚ್ಯವಮಾನಂ) ಮಲವನ್ನು ಕೂಡಿಕೊಳ್ಳುತ್ತದೆ. ಇದರಂತೆಯೇ ಮೂತ್ರ, ರುಧಿರ (ರಕ್ತ), ಉಳಿದ ಶರೀರ ಧಾತುಗಳನ್ನೂ, ಅನುಸರಿಸುತ್ತದೆ. ಸರ್ವ ಶರೀರ ಸಂಚಾರಿಯಾದ ಜಲಭಾಗವನ್ನು ಬಾಹ್ಯ (ಹೊರಗಡೆಯ) ಚರ್ಮವು ಧಾರಣೇಮಾಡುತ್ತದೆ ಚರ್ಮದ ಒಳಭಾಗದ ವ್ರಣದಲ್ಲಿಯಜಲದ್ರವ್ಯವು, ಲಸಿಕಾ (ರಸಿಗೆ) ಯೆಂದು ಹೇಳಲ್ಪಡುತ್ತದೆ ಶರೀರದ ಉಷ್ಣತೆಯಿಂದಕೂಡಿ ಲೋಮರಂಧ್ರಗಳಿಂದ ಹೊರಬೀಳುವ ಜಲದ್ರವ್ಯಕ್ಕೆ, ಸ್ವೇದ(ಬೆವರು)ವೆಂದು ಹೇಳುತ್ತಾರೆ ಪೂರ್ವೋಕ್ತ ಸರ್ವವಿಧ ಸಂಚಾರ ಸಂಶ್ರಯಗಳನ್ನು ಹೊಂದಿದ, ಬೆವರು ಮೊದಲಾದ ರೂಪವ ಜಲಪ್ರಮಾಣವು (೧೦) ಅಂಜಲಿಯಷ್ಟು ಇರುತ್ತದೆ. ಮೊದಲು ಉದಕದ ಅಂಜಲಿ ಪ್ರಮಾಣವನ್ನು ಹೇಳಿಪುನಃ ಹತ್ತು ಅಂಜಲಿಯೆಂದು ಹೇಳಿದ್ದಾರೆ. ಅಥವಾ ಸ್ವೇದಪ್ರಮಾಣವನ್ನು ಹೇಳಿದ್ದಾರೋ? ಉದಕ ಪ್ರಮಾಣ ಹೇಳಿದ್ದನ್ನು ಪುನಃ ಯಾಕೆ ಹೇಳುತ್ತಾರೆಂಬ ಆಕ್ಷೇಪಬರುತ್ತದೆ.

ಇದಕ್ಕೆ ಸಮಂಜಸ ಉತ್ತರವೇನೆಂದರೆ:— ಪೂರ್ವೋಕ್ತ ಉದಕ ಪ್ರಮಾಣ ವಿವರಣೆಯ ನಂತರದಲ್ಲಿ ಹೇಳಿದ, ಪುರೀಶ ರಕ್ತಾದಿಗಳಲ್ಲಿ ಪ್ರಸರಣೆಯಿಂದ ಸೇರಿದ ಜಲಭಾಗ ಮತ್ತೂ ಬೆವರು ಮೊದಲಾದವುಗಳು, ಉದಕ ಭಿನ್ನವಾದವುಗಳಲ್ಲವೆಂದು ತಿಳಿಸಲು ಹೀಗೆ ಹೇಳಿದ್ದಾರೆ ಆದ್ದರಿಂದ ಪೂರ್ವೋಕ್ತ ಉದಕ ಪ್ರಮಾಣವನ್ನು ಬೆವರಿನ ವಿವರಣೆಯ ನಂತರ ಹೇಳಿರುತ್ತಾರೆ

ನವಾಂಜಲಯಃ ಪೂರ್ವಸ್ಯಾಹಾರ ಪರಿಣಾಮಧಾತೋಃಯಂ ರಸಇತ್ಯಾಚಕ್ಷತೆ; ಅಷ್ಟೌಶೋಣಿತಸ್ಯ, ಸಪ್ತ ಪುರೀಷಸ್ಯ, ಷಟ್ ಶ್ಲೇಷ್ಮಣಃ, ಪಂಚಪಿತ್ತಸ್ಯ, ಚತ್ವಾರೋಮೂತ್ರಸ್ಯ, ತ್ರಯೋ ವಸಾಯಾಃ, ದ್ವೌಮೇದಸಃ, ಏಕೋಮಜ್ಜಾಯಾಃ, ಮುಸ್ತಿಷ್ಕಸ್ಯ ಅರ್ಧಾಂಜಲಿಃ, ಶುಕ್ರಸ್ಯತಾವದೇವಪ್ರಮಾಣಂ, ತಾವ

ದೇವ ಶ್ಲೇಷ್ಮಣಶ್ಚೌಜಸಇತಿ ॥ ಸ್ತ್ರೀಣಾಮಾರ್ತವಸ್ಯಚತ್ವಾ ರೋಂsಜಲಯಃ ॥ ಏತಚ್ಛರೀರ ತತ್ವಮುಕ್ತಮ್ ॥
(ಚರಕ॥ ಶಾರೀರ॥ ಅ ೭ ಸೂ ೧೫)

ಪೂರ್ವದಲ್ಲಿಯ ಆಹಾರ ಪರಿಣತವಾದ **"ರಸಧಾತುವಿನ"** ಪ್ರಮಾಣವು (೯) ಅಂಜಲಿಯಷ್ಟು ಇರುತ್ತದೆ."**ರಕ್ತ**"(೮) ಅಂಜಲಿ, (೩) "**ಮಲ**" (೭) ಅಂಜಲಿ, "**ಕಫ**" (೬) ಅಂಜಲಿ. "**ಪಿತ್ತ**" (೫) ಅಂಜಲಿ, "**ಮೂತ್ರ**" (೪) ಅಂಜಲಿ, "**ವಸಾ**" (೩) ಅಂಜಲಿ, "**ಮೇದಸ್ಸು**" (೨) ಅಂಜಲಿ, "**ಮಜ್ಜಾ**" (೧) ಅಂಜಲಿ, "**ಮುಸ್ತಿಷ್ಕ**" (ತಲೆಯ ಒಳಗಿರುವ ವೆ ೇಂದ.) (॥) ಅಂಜಲಿ, "**ಶುಕ್ರ**" (॥) ಅಂಜಲಿ, "**ಶ್ಲೇಷ್ಮೋಜಸ್ಸು**" (.॥) ಅಂಜಲಿ, "**ಪರನೋಜಸ್ಸು**" (೮) ಬಿಂದು ಪ್ರಮಾಣವಿರುತ್ತದೆ.

ಸ್ತ್ರೀಯರ "**ಆರ್ತವ**" (೪) ಅಂಜಲಿ, ಈ ಪ್ರಕಾರವಾಗಿ ಶರೀರದಲ್ಲಿಯ ದ್ರವಧಾತುಗಳ ಅಂಜಲಿ ಪ್ರಮಾಣವನ್ನು ನಿರ್ದೇಶಿಸಿದ್ದಾರೆ.

[೪೯] ದೇಹದ ಪಂಚಭೂತ ವಿಭಾಗ

ದೇಹದಲ್ಲಿಯ ಪಂಚಭೂತಾತ್ಮಕವಾದ ವಿಭಾಗಗಳನ್ನು ಹಿಂದೆ ಹೇಳಿದ್ದಾರೆ. ಆದರೂ ಪುನಃ ವಿಭಾಗ ದೃಷ್ಟಿಯಿಂದ ವಿಸ್ತಾರವಾಗಿ ಹೇಳುತ್ತಾರೆ.

ತತ್ರಯದ್ವಿಶೇಷತಃ ಸ್ಥೂಲಂ ಸ್ಥಿರಂಮೂರ್ತಿಮ್ ಮದ್ಗುರು ಖರ ಕಠಿನಮುಂಗಂ ನಖಾಸ್ಥಿದಂತ ಮಾಂಸ ಚರ್ಮ ವರ್ಜಃ ಕೇಶ ಸ್ಮಶ್ರುಲೋಮಕಂಡರಾದಿ ತತ್ಪಾರ್ಥಿವಂ ಗಂಧೋ ಘ್ರಾಣಂಚ॥ [ಚರಕ॥ ಶಾರೀರ॥ ಅ ೭ ಸೂ ೮೬]

(೧) ಪಾರ್ಥಿವ ದ್ರವ್ಯಗಳು

ದೇಹದಲ್ಲಿ ಯಾವದು ವಿಶೇಷವಾಗಿ **ಸ್ಥೂಲ**[ದೊಡ್ಡದಾದದ್ದು], **ಸ್ಥಿರ** [ಒಂದೇ ಕಡೆಗೆ ಇರುವಂಥ ಅಥವಾ ದ್ರವವಲ್ಲದ್ದು], **ಮೂರ್ತಿಮತ್**

[ಆಕಾರವುಳ್ಳದ್ದು] "**ಗುರು**" [ಭಾರವುಳ್ಳದ್ದು], "**ಖರ**" [ಕರ್ಕಶ], 'ಕಠಿಣ" [ಘಟ್ಟಿಯುಳ್ಳ], ಈ ಗುಣಲಕ್ಷಣವುಳ್ಳ ಅವಯವವಿರುತ್ತದೆಯೋ ಅದು ಪೃಥ್ವಿಯ [ಪಾರ್ಥಿವ] ದೆಂದು ತಿಳಿಯಬೇಕು ಮತ್ತು "**ಸಮ**" [ಉಗುರು], "**ಅಸ್ಥಿ**" [**ಎಲಬು**], "**ದಂತ**" [ಹಲ್ಲು], '**ನಾಂಸ, ಚರ್ಮ, ವರ್ಚಸ್**" [ಮಲ], "**ಕೇಶ**" [ತಲೆಯಲ್ಲಿಯ ಕೂದಲು], "**ಶ್ಮಶ್ರು**" [ಮೋರೆಯಲ್ಲಿಯ ಕೂದಲು], ಲೋಮ [ಉಳಿದ ಭಾಗದಲ್ಲಿಯ ರೋಮ], ಕಂಡರ, ಸಿರಾ, ದಮನೀ, ಜೀಶೀ, ಮೊದಲಾದವುಗಳು "**ಪಾರ್ಥಿವ**"ವಾಗಿರುತ್ತವೆ. ಇದರಂತೆ "**ಗಂಧ**" [ವಾಸನೆಯು], **ಘ್ರಾಣೇಂದ್ರಿಯ**ಗಳು ಪೃಥ್ವೀ ಸಂಬಂಧದ್ದಾಗಿರುತ್ತವೆ.

(೨) ಜಲೀಯ ವಿಭಾಗಗಳು

ಯದ್ರವಸರಮಂಸ್ನಿಗ್ಧಮ್ಮೃದುಪಿಚ್ಛಿಲಂ ರಸರುಧಿರವಸಾ ಕಫ ಪಿತ್ತ ಮೂತ್ರ ಸ್ವೇದಾದಿ ತದಾಪ್ಯಂ ರಸೋರಸನಂ ಚ; ॥
(ಚರಕ॥ ಶಾರೀರ॥ ಅ. ೭ ಸೂ. ೧೬)

ದ್ರವ (ನೀರಿನಂತೆ ಇರುವಂಥಾದ್ದು), **ಸರ** (ಸ್ವಲ್ಪ ಗತಿಯುಳ್ಳದ್ದು), **ಮಂದ** (ತೀಕ್ಷ್ಣವಲ್ಲದ್ದ), **ಸ್ನಿಗ್ಧ** (ಸ್ನೇಹ ಗುಣವುಳ್ಳದ್ದು), **ಮೃದು** (ಕಠಿಣವಲ್ಲದ್ದು), "**ಪಿಚ್ಛಿಲಂ**" (ರಾಡಿಯಂತೆ ಇದ್ದದ್ದು), ಇವುಗಳು ಜಲೀಯ ಗುಣಲಕ್ಷಣವೆಂದು ತಿಳಿಯಬೇಕು **ರಸ, ರಕ್ತ, ವಸಾ** (ಶುದ್ಧ ಮಾಂಸದ ಸ್ನೇಹವು), **ಕಫ, ಪಿತ್ತ, ಮೂತ್ರ, ಸ್ವೇದ,** ಮೊದಲಾದವುಗಳೂ **ರಸ ಮತ್ತು ರಸನೇಂದ್ರಿಯಗಳು** ಆಪ್ಯ (ಜಲೀಯ) ವಿಭಾಗಗಳೆಂದು ತಿಳಿಯಬೇಕು ಅರ್ಥಾತ್, ಜಲಸಂಬಂಧವಾದವುಗಳೆಂದು ತಿಳಿಯಬೇಕು.

(೩) ಆಗ್ನೇಯ ವಿಭಾಗಗಳು

ಯತ್ ಪಿತ್ತಮೂಷ್ಮಾಚಯೋಯಾಚಭಾಃ ಶರೀರೇತತ್ ಸರ್ವ ಮಾಗ್ನೇಯಂ ರೂಪಂದರ್ಶನಂಚ; ॥
(ಚರಕ॥ ಶಾರೀರ॥ ಅ ೭ ಸೂ ೧೬)

ಪಿತ್ತವು, ಊಷ್ಮಾ (ಉಷ್ಣತೆಯು) ಯುಕ್ತವಾದದ್ದು ಶರೀರದಲ್ಲಿ ಯಾವದೋ ಅದು, ಯಾವದು "ಭಾಃ" (ಪ್ರಕಾಶವು) ಉಳ್ಳದ್ದೋ ಅದು, ಇವೆಲ್ಲ ಸರ್ವವೂ ಆಗ್ನೇಯವಾಗಿರುತ್ತವೆ **ರೂಪ ರೂಪೇಂದ್ರಿಯಗಳು** ಆಗ್ನೇಯವಾಗಿರುತ್ತವೆ.

(೪) ವಾಯವೀಯವಿಭಾಗ

ಯದುಚ್ಛ್ವಾಸಪ್ರಶ್ವಾಸೋನ್ಮೇಷನಿಮೇಷಾಕುಂಚನಪ್ರಸಾರಣಗಮನಪ್ರೇರಣಧಾರಣಾದಿತದ್ವಾಯವೀಯಂ ಸ್ಪರ್ಶಃ ಸ್ಪರ್ಶನಂಚ ॥ (ಚರಕ॥ ಶಾರೀರ॥ ಅ ೭ ಸೂ ೧೬)

ಶ್ವಾಸೋಚ್ಛ್ವಾಸಗಳು, **ಪ್ರಶ್ವಾಸ** (ದೊಡ್ಡದಾದಶ್ವಾಸ), **ಉನ್ಮೇಷ** (ಕಣ್ಣು ತೆರೆಯುವಿಕ), **ನಿಮೇಷ** (ಕಣ್ಣು ಮುಚ್ಚುವಿಕೆ), **ಆಕುಂಚನ** (ಮುದುಡಿಕೊಳ್ಳುವದು), **ಪ್ರಸಾರಣ**(ವಿಸ್ತಾರವಾಗುವದು), **ಗಮನ** (ನಡೆಯುವದು), **ಪ್ರೇರಣ** (ಇಂದ್ರಿಯಗಳ ಪ್ರೇರಣೆ), **ಧಾರಣ** (ದೇಹ ಧಾರಣೆಯು), ಮೊದಲಾದವುಗಳು ವಾಯುವಿನ ಕೆಲಸಗಳಾಗಿರುತ್ತವೆ. **ಸ್ಪರ್ಶ** ಮತ್ತು **ಸ್ಪರ್ಶೇಂದ್ರಿಯಗಳು** ವಾಯವೀಯಗಳಾಗಿರುತ್ತವೆ.

(೫) ಆಕಾಶೀಯ ವಿಭಾಗ

ಯದ್ವಿವಿಕ್ತಂ ಯದುಚ್ಯತೇ ಮಹಾಂತಿಚಾಣೂನಿಸ್ರೋತಾಂಸಿತದಾಂತರೀಕ್ಷ್ಯಂ ಶಬ್ದಃ ಶ್ರೋತ್ರಂಚ॥ ಇತಿಶರೀರಾವಯವಸಂಖ್ಯಾಯಥಾಸ್ಥೂಲಭೇದೇನಾವಯವಾನಾಂ ನಿರ್ದಿಷ್ಟಾ ॥ (ಚರಕ॥ ಶಾರೀರ॥ ಅ ೭ ಸೂ ೧೬)

ಯಾವದು ಪೊಳ್ಳಾಯುಕ್ತವಾಗಿರುತ್ತದೆಂದು ಹೇಳಲ್ಪಡುತ್ತದೆಯೋ ಅಂಥದು, ದೊಡ್ಡದಾದ ಅಧವಾ ಸೂಕ್ಷ್ಮವಾದಂಥ ಸ್ರೋತಸ್ಸುಗಳು, ಅಂತರೀಕ್ಷ ಸಂಬಂಧಿಯಾದವುಗಳು. **ಶಬ್ದ** (ಶರೀರದ ಒಳಗಡೆಯಲ್ಲಿಯ ಶಬ್ದ), **ಶ್ರವಣೇಂದ್ರಿಯಗಳು** ಆಕಾಶ ಸಂಬಂಧೀಯವಾಗಿರುತ್ತವೆ. ಪೃಥಿವ್ಯಾದಿ

ಆಕಾಶಪರ್ಯಂತವಾದ ದೇಹದಲ್ಲಿಯ ಭೂತಾತ್ಮಕ ವಿಭಾಗಗಳನ್ನು ವಿವರಿಸಿದ್ದಾರೆ. ನಂತರ ಜಡವಾದ ಪಾಂಚಭೌತಿಕದೇಹದಲ್ಲಿಯ ಚೇತನಾ ವಿಭಾಗವನ್ನು ಹೇಳುತ್ತಾರೆ ಹೀಗೆ ಶರೀರಾವಯವ ಸಂಖ್ಯೆಯು ಸ್ಥೂಲ ದೃಷ್ಟಿಯಿಂದ ವಿವರಿಸಲ್ಪಟ್ಟಿರುತ್ತದೆ

(೫೦) ಪ್ರಧಾನ ವಿವರಣೆಯು

ಯತ್ಪ್ರೇಯೋಕ್ತೃತತ್ ಪ್ರಧಾನಂ ಬುದ್ಧಿರ್ಮನಶ್ಚ ॥
(ಚರಕ॥ ಶಾರೀರ॥ ೮ ೭ ಸೂ ೧೬)

ಶರೀರಾದಿಗಳಿಗೆ ಚೇತನೆಯನ್ನುಂಟು ಮಾಡುವವನಿಗೆ "ಪ್ರಧಾನಂ" ಎಂದು ಹೇಳುತ್ತಾರೆ. ಮತ್ತು **ಬುದ್ಧಿ ಮನಸ್ಸು**ಗಳಿಗೆ ಸಹ ಪ್ರಧಾನವೆಂದು ಹೆಸರು ಅರ್ಥಾತ್ ಆತ್ಮನ ಸಹಯೋಗದಿಂದ ದೇಹವು ಚೈತನ್ಯವನ್ನು ಪಡೆಯುವದರಿಂದ, ಪ್ರಯೋಕ್ತೃ (ಪ್ರೇರಕ) ಎಂದೂ, ಆತ್ಮನಹೊರತು ಹೇಹವು ನಿಶ್ಚೇಷ್ಟಿತ (ಜಡ) ವಾಗುವದರಿಂದ; ಆತ್ಮನೇ ಪ್ರಧಾನ (ಮುಖ್ಯ) ವೆಂದೂ ಹೇಳಿದ್ದಾರೆ **ಬುದ್ಧಿ ಮತ್ತು ಮನಸ್ಸುಗಳು** ಸುಖಾದಿ ಉಪಲಬ್ಧಿ ವಿಷಯ ಜ್ಞಾನಗಳನ್ನು ಆತ್ಮನಿಗೆ ಹೊಂದಿಸುವ ಸಾಧನಗಳಾಗಿರುತ್ತವೆ ದೇಹದಲ್ಲಿಯ ಜೀವನಿಗೆ ಸರ್ವ ಕ್ರಿಯಾಸ್ವೀಕಾರಾದಿಗಳು ಇವುಗಳಿಂದ ನಡೆಯುವದರಿಂದ ಇವಕ್ಕೂ ಪ್ರಧಾನವೆಂದು ಹೇಳಿರುತ್ತಾರೆ.

ಪ್ರಧಾನಂ ಪ್ರಕೃತೌಬುದ್ಧೌ ಉತ್ತಮೇ ಪರಮಾತ್ಮನಿ ॥
(ಹೈನ.ಕೋಶ)

ಪ್ರಕೃತಿ, ಬುದ್ಧಿ, ಶ್ರೇಷ್ಠ, ಪರಮಾತ್ಮ ಇವುವಳಿಗೆ "**ಪ್ರಧಾನ**" ವೆಂದು ಹೇಳುತ್ತಾರೆ ಹಿಂದೆ ವಿವರಣೆಯಲ್ಲಿ "**ಪ್ರಧಾನ**" ವೆಂದರೆ ಆತ್ಮನೆಂದೂ, "**ಅವ್ಯಕ್ತ**" ವೆಂದರೆ ಪ್ರಕೃತಿ ಮತ್ತು ಪರಮಾತ್ಮನೆಂದು ಗ್ರಹಣ ಮಾಡಿರುತ್ತದೆ.

ಅವ್ಯಕ್ತಃ ಶಂಕರೇವಿಷ್ಣೌ ಅವ್ಯಕ್ತಂ ಮಹದಾದಿಕೇ ॥ ಆತ್ಮನ್ಯಪಿಸ್ಯಾದವ್ಯಕ್ತ ಮಸ್ಫುಟೇತ್ವಭಿಧೇಯವತ್॥ (ವಿಶ್ವಕೋಶಃ)

ಶಂಕರ, ವಿಷ್ಣು, ಮಹದಾದಿಗಳು, ಆತ್ಮ, ಪ್ರತ್ಯಕ್ಷವಾಗಿ ಕಾಣದಿರುವುದು, ಇವೆಲ್ಲವುಗಳಿಗೂ ಅವ್ಯಕ್ತವೆಂದು ಹೇಳುತ್ತಾರೆ. ಆದ್ದರಿಂದ ಮಹದಾದಿ ಪ್ರಕೃತಿ, ಆತ್ಮ ಇವುಗಳಿಗೆ ಅವ್ಯಕ್ತವೆನ್ನುವದು ಯೋಗ್ಯವಾಗಿರುತ್ತದೆ.

"ಪ್ರಧಾನ ವಿವರಣೆ" ದೇಹಾದಿ ಉತ್ಪತ್ತಿ ಮೊದಲುಗೊಂಡು "ಶುಕ್ರ ಶೋಣಿತಗಳಲ್ಲಿ" ಆತ್ಮನು (ಜೀವ) ಯುಕ್ತವಾಗಿಯೇ ಇರುತ್ತದೆ. ಆದ್ದರಿಂದಲೇ ಬೆಳೆದು ಗರ್ಭವಾಗುತ್ತದೆ. ದೇಹದ ಸರ್ವ ಕರ್ಮಕ್ಕೂ ಪ್ರೇರಕನು ಆತ್ಮನಾಗಿರುತ್ತಾನೆ ಯಾಕಂದರೆ ಜೀವ (ಆತ್ಮ) ಹೊರಟು ಹೋದ ಮೇಲೆ ದೇಹವು ನಿಶ್ಚೇಷ್ಟಿತವಾಗುವದರಿಂದ, ದೇಹದಲ್ಲಿಯ ಚೈತನ್ಯವು ಆತ್ಮನಿಷ್ಠವೆಂದು ಸಿದ್ಧವಾಗುತ್ತದೆ. ಮುಖ್ಯವಾಗಿ ದೇಹದಲ್ಲಿ ಚೇತನೆಯನ್ನುಂಟು ಮಾಡುನವನೂ, ಪ್ರೇರಕನೂಆದ್ದರಿಂದ ಆತ್ಮನಿಗೆ"ಪ್ರಧಾನಪ್ರಯೋಕ್ತೃ" ಎಂದು ಹೇಳಿದ್ದಾರೆ

ದೇಹದಲ್ಲಿರುವ ಜೀವನ ಕರ್ತವ್ಯವು "ಬುದ್ಧಿ" "ಮನಸ್ಸುಗಳಿಂದ" ನಡೆಯುವದರಿಂದ ಇವುಗಳಿಗೂ ಪ್ರಧಾನವೆಂದು " ಚರಕಾಚಾರ್ಯರು " ವಿವರಿಸಿದ್ದಾರೆ

ಏಕತ್ವಪೃಥಕ್ತ್ವಭಾವನೆಯಿಂದ ಸಂಗನಿವೃತ್ತಿಗಳು:—

ಪೂರ್ವೋಕ್ತ ಅನೇಕ ಪ್ರಕಾರಭಿನ್ನರೀತಿ ವಿಭಾಗಗಳುಳ್ಳ ಶರೀರವು, ಅನೇಕ (ಅಸಂಖ್ಯಾತ) ಅವಯವ ಸಂಘಾತವಾಗಿರುತ್ತದೆ. ಹೀಗೆ ಭಿನ್ನವಾದ ಅನೇಕ ವಿಭಾಗವುಳ್ಳ ಅವಯವಗಳು ಇದ್ದರೂ ಅಜ್ಞಾನದಿಂದ ಒಂದೇ ಎಂದು ತಿಳಿಯುವದೇ ಸಂಗವು. ಅರ್ಥಾತ್ ಅನೇಕ ಸಂಯುಕ್ತ ಸಂಘಾತವನ್ನು ಒಂದೇ ಎಂದು ತಿಳಿದು ಅದಕ್ಕೇ ಮಹತ್ವ ಕೊಟ್ಟು ಅದರ ವಿಷಯದಲ್ಲಿ ಆಸಕ್ತಿ ಹೊಂದುವದೇ ಸಂಗವು (ಸಂಸಾರ) ಎಂದು ವಿವರಣೆಯು.

ಶರೀರವನ್ನು ಏಕತ್ವದಿಂದ ಭಾವಿಸಿ ಅದರ ಉಪಕಾರ (ಕಾರ್ಯ)ದಲ್ಲಿಯೇ ನಿರತರಾದರೆ, ರಾಗ ದ್ವೇಷಗಳಿಂದ ವ್ಯಾಪ್ತನಾದವನಾಗುತ್ತಾನೆ. ರಾಗ ದ್ವೇಷಗಳು ದೃಢವಾಗಿ ಜನ್ಮ ಪ್ರಾಪ್ತಿಗೆ ಕಾರಣವಾಗುತ್ತವೆ. ಆದ್ದ

ರಿಂದ ಏಕತ್ವ ಭಾವನೆಯು ಸಂಗಕ್ಕೆ (ಸಂಸಾರ) ಕಾರಣವಾಗಿರುತ್ತದೆಂದು ಹೇಳಿದ್ದಾರೆ. ಇದರಂತೆ ಪೃಥಕ್ತ್ವ (ಭೇದ) ಭಾವನೆಯು ಮೋಕ್ಷಕ್ಕೆ ಕಾರಣವಾಗಿದೆ

ತದೇತಚ್ಛರೀರಂ ಸಂಖ್ಯಾತಮನೇಕಾವಯವಂ ದೃಷ್ಟಮೇಕ ತ್ವೇನಸಂಗಃ,ಪೃಥಕ್ತ್ವೇನಾಪವರ್ಗಃ॥ ತತ್ರ ಪ್ರಧಾನಮಸಕ್ತಂ ಸರ್ವಸತ್ತಾ ನಿವೃತ್ತೌ ನಿವರ್ತತೆ ಇತಿ ॥

(ಚರಕ॥ ಶಾರೀರ॥ ಅ ೭ ಸೂ ೧೮)

ಬಹುವಿಧ ಭೇದ ಬಹಳಾವಯವಗಳುಳ್ಳ ದೇಹವನ್ನು ಒಂದೇ ಎಂದು ತಿಳಿಕೊಳ್ಳುವದು ಸಂಸಾರಕ್ಕೆ (ಜನ್ಮ) ಕಾರಣವು ಬೇರೆ ಬೇರೆ ಎಂದು ತಿಳಿಯುವದೇ ಮೋಕ್ಷವು ದೇಹದಲ್ಲಿಯ ಆತ್ಮವು (ಪ್ರಧಾನ) ಪೃಥಕ್ತ್ವ ಭಾವನೆಯಿಂದ ಅಸಕ್ತ (ಆಸ್ಥಾ ರಹಿತ) ನಾಗಿ ಸರ್ವಸತ್ತಾ(ಆಸಕ್ತಿ)ನಿವೃತ್ತಿ ಹೊಂದುತ್ತಾನೆ. ಸರ್ವಸತ್ತಾ ನಿವೃತ್ತಿಯೇ ಆತ್ಮನಿಗೆ ಮೋಕ್ಷವಾಗಿರುತ್ತದೆ. ಪುನಃ ಜನ್ಮವಿರುವದಿಲ್ಲವಾದ್ದರಿಂದ ಮುಕ್ತನೆಂದು ಅನ್ನುತ್ತಾರೆ.

(೫೧) ಮಸ್ತಿಷ್ಕ ವಿವರಣೆ

ತಂತ್ರಾಂತರದಲ್ಲಿಯಮತವು

ತಲೆಯ ಒಳಗಡೆಯಲ್ಲಿರುವ ಘೃತಪಿಂಡದಂಥ ಮೆತ್ತಗಿನ ಭಾಗಕ್ಕೆ "**ಮಸ್ತಿಷ್ಕ**"ವೆಂದು ಹೇಳುತ್ತಾರೆ ಅದು ಬಹಳ ಮೃದುವಾಗಿದ್ದು ಮಡಿಕೆ (ನೆರಿಗೆ) ಯಾಗಿ ಗುಂಪುಗಟ್ಟಿಕೊಂಡು ಇರುತ್ತದೆ. ಮಸ್ತಿಷ್ಕದಿಂದ ಹೊರಟ ಜ್ಞಾನ (ಮಜ್ಜಾ) ತಂತುಗಳು ಸಮಗ್ರ ದೇಹದಲ್ಲಿ ಪಸರಿಸಿಕೊಂಡಿರುತ್ತವೆ ಜ್ಞಾನೇಂದ್ರಿಯಗಳಲ್ಲಿಯ ಚಕ್ಷುರಾದಿ ನಾಲ್ಕು ಇಂದ್ರಿಯಗಳು ಶಿರೋಭಾಗದಲ್ಲಿಯೆ ಇರುತ್ತವೆ. ಸ್ಪರ್ಶೇಂದ್ರಿಯಕ್ಕೆ ಮೂಲವಾದ ಜ್ಞಾನತಂತುಗಳು ಇಲ್ಲಿಂದಲೇ ಹೊರಟಿರುವದರಿಂದ, ಜ್ಞಾನೇಂದ್ರಿಯಗಳಿಗೆ ಆಶ್ರಯಸ್ಥಾನವೆಂದೂ ಅನ್ನುತ್ತಾರೆ. **ಆಯುರ್ವೇದ ಮತದಂತೆ** ಅರ್ಧಾಂಜಲಿ (ಅರ್ಧಬೊಗಸೆ)

ಪ್ರಮಾಣ ಮಸ್ತಿಷ್ಕವಿರುತ್ತದೆಂದು ಹೇಳಿದ್ದಾರೆ. ಆತ್ಮಾ ಬುದ್ಧಿವ ನಸ್ಸುಗಳಿಗೆ ಸ್ಥಾನವಾದ್ದರಿಂದ "**ಹೃದಯವೇ**" ಚೇತನಾಸ್ಥಾನವು ಮುಖ್ಯವಾಗಿರುತ್ತದೆ ಜ್ಞಾನತಂತುಗಳು ಸ್ಪರ್ಶಾದಿ ಜ್ಞಾನಕ್ಕೆ ಸಾಧನವಾಗಿರುತ್ತವೆ ಆತ್ಮಪ್ರಭಾ ಭೂಷಿತವಾಗಿ ಅವನ ಪ್ರೇರಣೆಯಿಂದಲೇ ನಡೆಯುತ್ತದೆಂದು ತಿಳಿಯಬೇಕು **ನವೀನರು** ಜ್ಞಾನತಂತುಗಳೇ ಜ್ಞಾನಕ್ಕೆ ಪ್ರಕೃಷ್ಟ ಸಾಧನವೆಂದು ಹೇಳುತ್ತಾರೆ ಇದು ಕೇವಲ ಭೌತಿಕವಾದವಾಗಿದೆ, ಯಾಕಂದರೆ ಕ್ರಿಯೆಯು ಯಾವಾಗಲೂ ಪ್ರತ್ಯಕ್ಷವಾಗಿರುವದಿಲ್ಲ ಕ್ರಿಯಾಫಲದಿಂದ ಕ್ರಿಯೆಯನ್ನು ಊಹಿಸಿ ತಿಳಕೊಳ್ಳಬೇಕಾಗುತ್ತದೆ ಜಡವಾದ ಭೌತಿಕಗಳಲ್ಲಿಯ ಚೇತನೆ ಕ್ರಿಯೆಗಳು ಆತ್ಮನದೇ ಆಗಿರುತ್ತವೆ ಆದ್ದರಿಂದ ಆತ್ಮಾಶ್ರಯವುಳ್ಳ ಸ್ಥಾನವೇ ಜ್ಞಾನವಿಜ್ಞಾನಸಂಶ್ರಯವೆಂದು ನಮ್ಮ **ಆಚಾರ್ಯರ ಮತವು** ಉಳಿದವುಗ ಕೆಷ್ಟೇ ಇದ್ದರೂ ಚಿತ್ಸಾಸಿಗೆ ಸಾಧನಗಳಾಗಿಯೂ ಅವನ ಸಕಾಶದಿಂದಲೇ ಚೈತನ್ಯಹೊಂದಿ ಪ್ರೇರಿತವಾಗಿ ನಡೆಯುತ್ತವೆ

* ಮಸ್ತಿಷ್ಕ ಸ್ಥಾನವಾದ ಶಿರಸ್ಸು

ಪ್ರಾಣಾಃ ಪ್ರಾಣಭೃತಾಂಯತ್ರಶ್ರಿತಾಃ ಸರ್ವೇಂದ್ರಿಯಾಣಿ ಚ॥
ತದುತ್ತಮಾಂಗಮುಂಗಾನಾಂ ಶಿರಸ್ತದಭೀಧೀಯತೇ ॥೧೦೧॥
ಜ್ಞಾನತಂತು ಪ್ರಕೋಷ್ಠಾಖ್ಯಂ ಮಸ್ತಿಷ್ಕಂತು ಶಿರೋಧೃತಂ॥
ನಜ್ಞಾನಾಧಿಕರಣಸ್ಯಾಸ್ಯ ವಿಜ್ಞಾತುರಂತರಾತ್ಮನಃ ॥

(ತಂತ್ರಾಂತರೆ)

ದೇಹಿಗಳ ಮುಖ್ಯವಾದ ಸರ್ವ ಇಂದ್ರಿಯಗಳು ಯಾವದನ್ನು ಆಶ್ರಯಿಸಿ ಇರುತ್ತವೆಯೋ, ಅದು ಅಂಗಗಳಲ್ಲಿ ಶ್ರೇಷ್ಠವಾದ ಅಂಗವಾಗಿರುತ್ತದೆ ಆದ್ದರಿಂದ "**ಶಿರಸ್ಸು**" ಉತ್ತಮಾಂಗವೆಂದು ಹೇಳಲ್ಪಡುತ್ತದೆ. ಜ್ಞಾನತಂತುಗಳಿಗೆ ಸ್ಥಾನವಾದ ಮಸ್ತಿಷ್ಕವು ಶಿರಸ್ಸಿನಲ್ಲಿ ಧಾರಣ ಮಾಡಲ್ಪಟ್ಟಿರುತ್ತದೆ ಜ್ಞಾನದಾಯಕನೂ ಪ್ರೇರಕನೂ ಆದ ಅಂತರಾತ್ಮನ (ಜೀವದ) ಆಶ್ರಯ ಸ್ಥಾನವು ಶಿರಸ್ಸಾಗಿರುವದಿಲ್ಲ ಅರ್ಥಾತ್, ದೇಹವ್ಯಾಪಿಯಾದ

ಅಂತರಾತ್ಮನ ಮುಖ್ಯಸ್ಥಾನವು ಹೃದಯವೆಂದು **ಸುಶ್ರುತ, ಚರಕ, ವಾಗ್ಭಟ ಶಾರ್ಙ್ಗಧರ, ಭಾವಪ್ರಕಾಶಕಾರ,** ಮೊದಲಾದವರ ಮತವಾಗಿರುತ್ತದೆ.

* ಮಸ್ತಿಷ್ಕ ಅಧಿಷ್ಠಿತ ಕಾರ್ಯಗಳು

ಬುದ್ಧೀಂದ್ರಿಯಾಣಾಂ ಸರ್ವೇಷಾಮಧಿಷ್ಠಾನಂ ವಿಶೇಷತಃ ॥
ಕಾರ್ಯಸಾಧನಮಸ್ತಿಷ್ಕಂ ಹೃದಯಸ್ಯಸಕಾಶತಃ ॥
ಪುನರ್ಮಸ್ತಿಷ್ಕೇನೇಂದ್ರಿಯೇಣ ಸರ್ವಕೃತ್ಯಂಭವೇತ್ತನೌ ॥
ಮಸ್ತಿಷ್ಕೇಹೃದಯಂಕೇಚಿತ್‌ಮನ್ಯಂತೇತನ್ನಶೋಭನಂ ॥

(ಭೇಡ ಮತ)

ಶಿರಸ್ಸು (ಮಸ್ತಿಷ್ಕ) ಚಕ್ಷುರಾದಿ ಪಂಚಬುದ್ಧೀಂದ್ರಿಯಗಳಿಗೆ ವಿಶೇಷವಾಗಿ ಆಶ್ರಯಸ್ಥಾನವಾಗಿರುತ್ತದೆ. ಅರ್ಥಾತ್ ಬುದ್ಧೀಂದ್ರಿಯಗಳು ಶಿರಸ್ಸಿನಲ್ಲಿರುತ್ತವೆಂಬರ್ಥವು.

"ಬುದ್ಧೀಂದ್ರಿಯಗಳಿಗೆ" ಆಶ್ರಯಸ್ಥಾನವೆಂದು ಹೇಳಿದ್ದರಿಂದಲೂ ಮನಸ್ಸನ್ನು ಗ್ರಹಿಸದೇ ಇರುವದರಿಂದಲೂ ಮನಸ್ಸಿಗೆ ಹೃದಯವೇ ಆಶ್ರಯಸ್ಥಾನವೆಂದು ತಿಳಿಯಬೇಕು. ಹೃದಯ (ಮನಸ್ಸಿನ) ಸಹಯೋಗದಿಂದ ಮಸ್ತಿಷ್ಕವು ಕಾರ್ಯಸಾಧನವಾಗುತ್ತದೆ. ಅರ್ಥಾತ್ ಮನೋಯೋಗದಿಂದ ಮಸ್ತಿಷ್ಕವು ಜ್ಞಾನೇಂದ್ರಿಯಗಳಿಂದ, ಕಾರ್ಯಮಾಡಿಸುತ್ತದೆಂಬರ್ಥವು ಮಸ್ತಿಷ್ಕದಲ್ಲಿರುವ ಜ್ಞಾನೇಂದ್ರಿಯದಿಂದ, ಶರೀರದಲ್ಲಿಯ ಸರ್ವಕಾರ್ಯಗಳೂ ನಡೆಯುತ್ತವೆ ಮಸ್ತಿಷ್ಕದಲ್ಲಿ ಹೃದಯ (ಮನಸ್ಸು) ಇರುತ್ತದೆಂದು ಕೆಲವರು ಹೇಳುತ್ತಾರೆ. ಅದು ಯೋಗ್ಯವಲ್ಲ. ಯಾಕಂದರೆ ಮನಸ್ಸಿನಆಘಾತಾದಿಗಳಿಂದ ಹೃದ್ರೋಗವಾಗುತ್ತದೆ. ಅದುಹೃದಯದಲ್ಲಿ ಆಗುವದರಿಂದ ಮನಸ್ಸಿನ ಸ್ಥಾನವು ಹೃದಯವೆಂದು ನಿರ್ಧರಿಸಿದ್ದಾರೆ.

ಆತ್ಮಬುದ್ಧಿಮನೋಯತ್ರಚೈತನ್ಯಂ ಧಾರಿತಿಷ್ಠತಿ ॥
ಹೃದಯಂ ಚಾತ್ರವಕ್ಷ್ಯಸ್ಥಮಾಯುರ್ವೇದವಿದೋವಿದುಃ ॥

ಮುಸ್ತಿಷ್ಕಂ ಹೃದಯಂ ಕ್ವಾಽಪಿನೋಕ್ತಂ ಪರ್ಯಾಯವಾಚಕಂ ॥
ಸ್ಥಾನಾರ್ಹಯಂ ಶಿರಸ್ಯೇವಮುಸ್ತಿಷ್ಕಸ್ಯೋದಿತಂ ಪುರಾ ॥
ಹೃತ್ಕಾರ್ಯಭೂಮಿರ್ಭೀಲೇನಮುಖ್ಯಾಚಾತ್ರಪ್ರಕಾಶಿತಾ ॥

(ಭೇಡಮತ)

ಆತ್ಮ, ಬುದ್ಧಿ, ಮನಸ್ಸು, ಚೈತನ್ಯ, ಜೀವಧಾರಣೆಯು, ಹೃದಯದ ಸ್ಥಿತಿಯೇ ಇರುತ್ತದೆ ಇಂಥ ಹೃದಯವು ವಕ್ಷಸ್ಥಳ (ಎದೆ) ಎಂಬಲ್ಲಿ ಇರುತ್ತದೆಂದು ಆಯುರ್ವೇದಾಚಾರ್ಯರು ಕಂಡುಹಿಡಿದಿದ್ದಾರೆ ಮತ್ತು ಎಲ್ಲಿಯೂ ಆಯುರ್ವೇದ ಅಥವಾ ಕಿಂಬಹುನಾ ಯಾವದೇ ಭಾರತೀಯ ವಾಙ್ಮಯದಲ್ಲಿ ಮುಸ್ತಿಷ್ಕಕ್ಕೆ ಹೃದಯವೆಂಬ ಪರ್ಯಾಯವಾಚಕವಿರುವದಿಲ್ಲ ಅರ್ಥಾತ್ ಮುಸ್ತಿಷ್ಕವನ್ನು ಹೃದಯವೆಂದು ತಿಳಿಯುವದೊತ್ತಟ್ಟಿಗಿರಲಿ ಹೃದಯಪರ್ಯಾಯವಾಚಕವೆಂದು ಸಹ ಹೇಳಿರುವದಿಲ್ಲ. ಮುಸ್ತಿಷ್ಕವು ಶಿರಸ್ಸಿನಲ್ಲಿರುತ್ತದೆಂದು ಮೊದಲೇ ವಿವರಿಸಿದ್ದಾಗಿದೆ ಹೃದಯದಕಾರ್ಯಭೂಮಿಯು ಮುಸ್ತಿಷ್ಕವೆಂದು "ಭೇಡಾಚಾರ್ಯರಿಂದ" ಹೇಳಲ್ಪಟ್ಟಿರುತ್ತದೆ

(೫೨) ದೇಹದಲ್ಲಿಯಮಜ್ಜಾತಂತುಗಳು

ತಲೆಯಿಂದ ಹೊರಟ ಮಜ್ಜಾರಜ್ಜು (ಜ್ಞಾನತಂತು) ಪೃಷ್ಠಕಶೇರುಕಾಸ್ಥಿಯ ರಂಧ್ರದಲ್ಲಿ ಹಾಯ್ದು ಸನಗ್ನ ದೇಹವನ್ನು ವ್ಯಾಪಿಸಿರುತ್ತದೆ. ಇದರಿಂದ ಸ್ಪರ್ಶಜ್ಞಾನವಾಗುತ್ತಿದೆಯಾದ್ದರಿಂದ ಇದಕ್ಕೆ ಜ್ಞಾನತಂತುವೆಂದು ಪ್ರತಿಪಾದಿಸಿದ್ದಾರೆ. ಮನಸ್ಸಿನ ಯೋಗದಿಂದ ಜ್ಞಾನವಾಗುತ್ತದೆಂದು ತಿಳಿಯಬೇಕು. ಜ್ಞಾನಕ್ಕೆ ಮಜ್ಜಾತಂತು ಸಾಧನವಾಗಿ ಮನೋಯೋಗದಿಂದ ಜ್ಞಾನ ಮಾಡಿಕೊಡುತ್ತದೆ. ಮನೋಯೋಗವಿಲ್ಲದೇ ಸ್ವತಂತ್ರಜ್ಞಾನಮಾಡಿಕೊಡಲಾರದು. ಸ್ಪರ್ಶನೇಂದ್ರಿಯ ಭೂಮಿಯೆಂದೂ ತಿಳ್ದಿಯಿಲ್ಲ. **'ಭೌತಿಕ ಸ್ಪಾತ್ಯಸ್ಪವಾದಿಗಳು"** ಅಲ್ಲಲ್ಲಿಯ ಸ್ಥೂಲಾವಯವಗಳೇ ಜ್ಞಾನೇಂದ್ರಿಯಗಳೆಂದು ಪ್ರತಿಪಾದಿಸುತ್ತಾರೆ. ಅವರ ಮತವನ್ನು ದರ್ಶನಮಾಡಿದ್ದೇವೆಯೇ ವಿನಾ

ಅದೇ ಸತ್ಯವೆಂದು ತಿಳಿಯಬಾರದು. ಕೇವಲ ಭೌತಿಕ ಸ್ಥೂಲ ವಿಭಾಗ ಜ್ಞಾನಾಕ್ಷತೆಯಿಂದ ಸೂಕ್ಷ್ಮವೂ ಅತೀಂದ್ರಿಯವಾದ ಕ್ರಿಯಾಜ್ಞೈತನ್ಯ ಪರಿಚಯ ವಿಭಾಗವಾಗಲಾರದು ಆದ್ದರಿಂದ ಸ್ಥೂಲಭೂತ ವಿಭಾಗಗಳ ಕ್ರಿಯೆಯಲ್ಲಿ, ಮನಸ್ಸು ಆಶ್ರಯಿಸಿ ಕಾರ್ಯಮಾಡುತ್ತದೆಂದು ತಿಳಿಯಬೇಕು. ಅರ್ಥಾತ್ ಜ್ಞಾನವಿಷಯದಲ್ಲಿ ಮನಸ್ಸಿಗೆ ಸ್ಥೂಲಭೂತ ಇಂದ್ರಿಯಗಳು ಸಾಧನವಾಗುತ್ತವೆ ವಿವರಣೆಯಲ್ಲಿ ಸತ್ಯ ಸಿದ್ಧಾಂತವಾದ ಆಯುರ್ವೇದ ತತ್ವಕ್ಕೆ ಕ್ಷತಿಯುಂಟಾಗಬಾರದೆಂದು, ಮೇಲಿಂದ ಮೇಲೆ ವಿಸ್ತಾರವಾಗಿ ಹೇಳಿದೆ

ವಿವರಣೆಯು:— ಆಯುರ್ವೇದಾಚಾರ್ಯರು ದೇಹವನ್ನು ಸೂಕ್ಷ್ಮ (ಅತೀಂದ್ರಿಯ), ಸ್ಥೂಲಗಳೆಂಬ ವಿಭಾಗ ದೃಷ್ಟಿಯಿಂದ ವಿಮರ್ಶಿಸಿದ್ದಾರೆ ದೇಹವು ಜ್ಞೈತನ್ಯಯುಕ್ತವಾಗಿರುವದರಿಂದಲೇ ಅದರಿಂದ ಕ್ರಿಯಾ ನಡೆಯುತ್ತದೆ ಜ್ಞೈತನ್ಯರಹಿತ ಶರೀರದಲ್ಲಿ ಕ್ರಿಯಾ ಇರುವದಿಲ್ಲವಾದ್ದರಿಂದ ಪ್ರೇರಕನೊಬ್ಬನು, ಸರ್ವ ವ್ಯಾಪಾರವನ್ನೂ ನಡೆಸುತ್ತಾನೆಂದು ಆಯುರ್ವೇದ ಸಿದ್ಧಾಂತದಲ್ಲಿ ಹೇಳಿದೆ. ಜ್ಞೈತನ್ಯರಹಿತ ದೇಹಸ್ಥಿತಿಯೇ ಜಡವು (ಅಚೇತನ) ಅದರಲ್ಲಿ ಯಾವ ಕ್ರಿಯೆಯೂ ಇರುವದಿಲ್ಲ ಅದರಲ್ಲಿ ಮೊದಲು ಕ್ರಿಯಾ ನಡೆಯುತ್ತಿದ್ದದ್ದು ಜ್ಞೈತನ್ಯದಾಯಕನಾದ ಆತ್ಮನದಾಗಿರುತ್ತದೆ ದೇಹವು ಜಡ (ನಿಶ್ಚೇಷ್ಟಿತ) ವಾಗಿದ್ದರೂ ಚೇತನಾಧಿಷ್ಠಾನವಿರುವ ವರೆಗೆ ಸಾಧನವಾಗಿ ಕರ್ತವ್ಯವನ್ನು ನಿರ್ವಹಿಸುತ್ತದೆ ಆತ್ಮನು ಅತೀಂದ್ರಿಯನಾದ್ದರಿಂದ ಎಲ್ಲ ಚೇತನೆಯೂ ದೇಹದ್ದೆಂದೇ ಅನಿಸುತ್ತದೆ ಆತ್ಮನು ಹೊರಟುಹೋದ ಮೇಲೆ ದೇಹದಲ್ಲಿ ಭಿನ್ನವಾದ ಜ್ಞೈತನ್ಯವಿದೆಯೆಂದು ತಿಳಿಯುತ್ತದೆ ಆಗ ದೇಹವು ಜಡವಿರುವದರಿಂದ ಪರಿಶೇಷ ನ್ಯಾಯದಿಂದ ಜ್ಞೈತನ್ಯ ವಿಭಾಗ ವಿಮರ್ಶೆಯಾಗಿ, ಜಡ ದೇಹಕ್ಕೆ ಪ್ರೇರಕವಾದದ್ದೊಂದು ಇರುತ್ತದೆಂದು ಸಿದ್ಧಾಂತವಾಗಿರುತ್ತದೆ.

ಸ್ನಾಯವಃ ಸೂತ್ರವತ್ಸೂಕ್ಷ್ಮಾಃ ಶುಭ್ರಾ ನಿಖಿಲದೇಹಗಾಃ ॥
ಕರಣಾನಿಚೇತನಾನಾಂ ಸದಾ ಜ್ಞೈತನ್ಯ ಸಾಧನೇ ॥೧॥

ಸುಖದುಃಖಾವಬೋಧೇಚ ಪ್ರವೃತ್ತೌಚ ವಿವರ್ತತೇ ॥
ರೂಪಗಂಧರಸಸ್ಪರ್ಶಶಬ್ದಜ್ಞಾನೇಚ ಹೇತವಃ ॥೨॥
ನಿಖಿಲಾಸ್ತಾಶ್ಚ ಸಂಜಾತಾ ಮಸ್ತಿಷ್ಕಾ ಪೃಷ್ಠಮಜ್ಜತಃ ॥
ಶಿರೋಮಂಡಲ ಮೇವಾದ್ಯಾಃ ಶೇಷಾ ಶೇಷಾಂಗಮಾಶ್ರಿತಾಃ

ಮಜ್ಜಾತಂತುವಿನ ಸ್ನಾಯುಗಳು ನೂಲಿನಂತೆ ಸೂಕ್ಷ್ಮವಾಗಿಯೂ ಬಿಳೇವರ್ಣವುಳ್ಳದ್ದಾಗಿಯೂ ದೇಹದ ತುಂಬೆಲ್ಲ ವ್ಯಾಪಿಸಿಕೊಂಡಿರುತ್ತವೆ ದೇಹದಲ್ಲಿ ಚೈತನ್ಯವುಂಟು ಮಾಡುವ ವಿಷಯದಲ್ಲಿ ಆತ್ಮ (ಜೀವ) ನಿಗೆ ಸಾಧನವು. ಸದಾಚೈತನ್ಯಕ್ಕೆ ಸಾಧನಗಳಾಗುತ್ತವೆ ಸುಖದುಃಖ ಜ್ಞಾನವಾಗಲಿಕ್ಕೂ ವಿಷಯ ಪ್ರವೃತ್ತಿಯಲ್ಲಿಯೂ ವಿಶೇಷವಾಗಿರುತ್ತವೆ ರೂಪ, ಗಂಧ, ರಸ, ಸ್ಪರ್ಶ, ಶಬ್ದಜ್ಞಾನಗಳಲ್ಲಿಯೂ ಸಾಧನವಾದ ಕಾರಣವಾಗಿರುತ್ತವೆ. ಎಲ್ಲಾ ಮಜ್ಜಾತಂತ. (ಸ್ನಾಯು) ಗಳು ಮಸ್ತಿಷ್ಕದಲ್ಲಿ ಹುಟ್ಟಿದ ಮಜ್ಜೆಯಿಂದ ಹೊರಟಿರುತ್ತವೆ ತಲೆಯಿಂದಲೇ ಮೊದಲು ಹೊರಟು ನಂತರ ಉಳಿದ ಸರ್ವಾಂಗಗಳನ್ನು ವ್ಯಾಪಿಸಿರುತ್ತವೆ ತಲೆಯಿಂದ ಹೊರಟ ಮಜ್ಜಾತಂತುಗಳು ಪೃಷ್ಠದಲ್ಲಿರುವ ಕಶೇರುಕಾರಜ್ಜುಗಳ ಪೊಳ್ಳು ಭಾಗಗಳಿಂದ ಸರ್ವ ದೇಹದಲ್ಲಿಯೂ ಪಸರಿಸಿರುತ್ತವೆ

ತೇಷುತೇಷುಚ ಭಾವೇಷು ದೇಹಮಾಪ್ತೇಷುವಸ್ನಸಾಃ ॥
ಕಂಪಮಾನಾಃ ಕಂಪಯಂತೇವಸ್ತುಲುಂಗಂಚತತ್‌ಕ್ಷಣಾತ್
ತಸ್ಯಪ್ರಕಂಪ ಭೇದೇನ ಜ್ಞಾನಭೇದೋಭವೇದ್ಬಹುಃ ।
ಅತೋವಸ್ತಿಷ್ಕಮೇವೈಕಂ ಜ್ಞಾನಹೇತು ಪ್ರಕೀರ್ತಿತಂ ॥
ಸ್ನಾಯುನಾಶೋಭವೇದ್ಯಸ್ಮಿನ್ನಂಗೇತತ್ಸ್ನಾಯ್ವಶೋಪಮಮ್
ಪಕ್ಷಾಘಾತಾದಿ ರೋಗೇಷು ಕಾರಣಂ ತದ್ವಿಧಂಮತಂ ॥
(ತಂತ್ರಾಂತ್ರರೆ)

ದೇಹದಲ್ಲಿ ಭಿನ್ನಭಿನ್ನಕರ್ತವ್ಯಮಾಡುವ ವ್ಯಾಪಕವಾದ ಸ್ನಾಯುಗಳು ಮಜ್ಜಾತಂತು) ನಡಗುವಂಧವುಗಳಾಗಿ ಆ ಕ್ಷಣದಲ್ಲಿಯೇ ಮಿದುಳನ್ನು ಮಸ್ತುಲುಂಗ) ನಡಗಿಸ ತ್ತವೆ ಈ ಕಂಪಭೇದಗಳನ್ನು ಅವಲೋಕಿಸಿದರೆ

(ಕಂಪಭೇದಗಳಿಂದ) ಅನೇಕ ರೀತಿ ಜ್ಞಾನವಾಗುತ್ತದೆ ಅರ್ಥಾತ್ ದೇಹದಲ್ಲಿ ಜ್ಞಾನತಂತುಗಳು ಪ್ರಸ್ಫುರಿಸುತ್ತಿರಲು ಅವುಗಳಿಂದ ಮಿದುಳು ಆವಾವ ಜ್ಞಾನವನ್ನು ಮಾಡಿಕೊಳ್ಳುತ್ತದೆಂದು ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಮಸ್ತಿಷ್ಕವು (ಮಿದುಳು) ಜ್ಞಾನಕ್ಕೆ ಕಾರಣವೆಂದು ಹೇಳಲ್ಪಟ್ಟಿದ ಯಾವ ಅಂಗದಲ್ಲಿ ಸ್ನಾಯುನಾಶವಾಗುತ್ತಪೆಯೋ ಆ ಅವಯವವು ಸತ್ತಂತೇ (ಸ್ಪರ್ಶಶೂನ್ಯ) ಆಗುತ್ತದೆ. ಹೀಗಿರುವದರಿಂದ ಮಜ್ಜಾತಂತುಗಳು ದೇಹದಲ್ಲಿ ಸ್ಪರ್ಶಾದಿ ಜ್ಞಾನವನ್ನುಂಟುಮಾಡಿಕೊಡುವ ಸಾಧನಗಳಾಗಿರುತ್ತವೆಂದು ಹೇಳಿದ್ದಾರೆ. ಸ್ನಾಯುಗಳು ಸ್ಪರ್ಶಶೂನ್ಯವಾಗುವದೇ ಪಕ್ಷಾಘಾತಾದಿ ರೋಗಗಳಿಗೆ ಕಾರಣವಾಗಿರುತ್ತದೆ

(೫೩) ದೇಹದಲ್ಲಿ ಆಹಾರಕ್ರಮಣ ಪರಿಪಾಕಗಳು

ದೇಹ ರಕ್ಷಣೆಗಾಗಿ ಸ್ವೀಕರಿಸಿದ ಆಹಾರವು ಪ್ರಾಣವಾಯುವಿನಿಂದ ಕೋಷ್ಠದಲ್ಲಿ ಒಯ್ಯಲ್ಪಡುತ್ತದೆ. ಕೋಷ್ಠದಲ್ಲಿ ಹೋಗುವದರೊಳಗೂ ನಂತರದಲ್ಲಿಯೂ ಆಹಾರವು, ಕುಡಿದ ಜಲರೂಪ ದ್ರವಾದಿಗಳಿಂದಲೂ, ಬಾಯಿಮೊದಲಾದವುಗಳಲ್ಲುಂಟಾದಗುವ ಸ್ವಾದು ರಸದಿಂದಲೂ ತೊಯಿದು, ಅವುಗಳಿಂದ ಸಂಯುಕ್ತವಾಗುತ್ತದೆ. ಹೀಗೆ ದ್ರವರಸಾದಿಗಳ ಯೋಗದಿಂದ ಘನೀಭೂತ (ಘಟ್ಟಿಯಾದ) ಆಹಾರ ಮುದ್ದೆಯು, ಒಡೆದುವಿರಲಾವಯವವುಳ್ಳದ್ದಾಗಿಯೂ ಸ್ನೇಹ ಸ್ವಾದುರಸಾದಿಗಳಿಂದ ಮಾರ್ದವವುಳ್ಳದ್ದಾಗಿಯೂ ಆಗುತ್ತದೆ. ಘನವಾದ ಆಹಾರವು ಹೀಗೆ ಮೃದುವಾಗಿ (ಮೆತ್ತಗೆ) ದ್ರವದಿಂದ ಕೂಡುವದರಿಂದ ಪಚನವಾಗಲು ಸುಗಮವಾಗುತ್ತದೆ.

ಪ್ರಾಣಿಗಳ ಜೀವಧಾರಣೆಗೆ ಆಹಾರವು (ಅನ್ನ) ಅವಶ್ಯವಾಗಿರುತ್ತದೆ. ಅನ್ನಕ್ಕಾಗಿಯೇ ಜಗತ್ತು (ಜನ) ಬಹು ಪ್ರಯತ್ನಮಾಡುತ್ತದೆ ಆಹಾರದಿಂದಲೇ ಪ್ರಾಣಧಾರಣೆಯಾಗುವದರಿಂದ ಅನ್ನವೇ ಪ್ರಾಣವೆಂದು ಹೇಳಿದ್ದಾರೆ. ಯಾಕಂದರೆ ಅನ್ನವಿಲ್ಲದಿದ್ದರೆ ದೇಹದಿಂದ ಪ್ರಾಣವು ಹೊರಟು

ಹೋಗ ತ್ತದೆ. ಸಕಲ ಪ್ರಾಣಿ ವರ್ಗವೂ ಅನ್ನವನ್ನು ಇಚ್ಛಿಸುತ್ತವೆ, ಮತ್ತು ಅದರಿಂದಿಲೇ ಜೀವಿಸುತ್ತವೆನ್ನುವುದೂ ಸ್ಪಷ್ಟಗೋಚರವಾದ ವಿಷಯವೇ ಆಗಿರುತ್ತದೆ ಹೀಗೆ ಅತಿಮುಖ್ಯವೂ ಜೀವಧಾರಣೆ ಪೋಷಣೆಗಳಿಗೆಯೋಗ್ಯವೂ ಆದ ಅನ್ನವನ್ನು **ಚರಕಾಚಾರ್ಯರು** ಪ್ರಾಣದಷ್ಟೇ ಮಹತ್ವಕೊಟ್ಟು ಪ್ರಾಣವೆಂದೇ ಹೇಳಿದ್ದಾರೆ. ಇಷ್ಟೇಅಲ್ಲ**"ಸರ್ವಮನ್ನೇಪ್ರತಿಷ್ಠಿತಂ"** ಎಲ್ಲವೂ (ಸರ್ವ ಜೀವಿಗಳ ಅಸ್ತಿತ್ವ ತೃಪ್ತಿ ಸರ್ವ ಫಲಸ್ವರೂಪವಾದದ್ದು) ಅನ್ನ ದಿಂದಲೇ ಉಂಟಾಗುವದರಿಂದ, ಸರ್ವವೂ ಅನ್ನವನ್ನವಲಂಬಿಸಿರುತ್ತದೆಂದು ವಿವರಿಸಿದ್ದಾರೆ. ಇಂಥ ಮಹತ್ವಪೂರಿತವಾದ ಅನ್ನವನ್ನು ಯೋಗ್ಯವಾಗಿಯೂ ಹಿತಮಿತದಿಂದ ಸಕಾಲದಲ್ಲಿ ಶುಚಿಯಾಗಿ ಉಪಯೋಗಿಸಿದ್ದಾದರೆ, ಪ್ರತ್ಯಕ್ಷ ಮತ್ತು ಪಾರಲೌಕಿಕವಾದ ಮಹಾಫಲವು ಲಭಿಸುತ್ತದೆ.

ಪ್ರಾಣಾಃ ಪ್ರಾಣಭೃತಾಮನ್ನಂ ಅನ್ನಂ ಲೋಕೋಽಭಿಧಾವತಿ॥
ವರ್ಣಃ ಪ್ರಸಾದಃ ಸೌಸ್ವರ್ಯಂ ಜೀವಿತಂ ಪ್ರತಿಭಾಸುಖಮ್॥
ತುಷ್ಟಿಃ ಪುಷ್ಟಿರ್ಬಲಂ ಮೇಧಾಸರ್ವಮನ್ನೇಪ್ರತಿಷ್ಠಿತಂ॥
ಲೌಕಿಕಂ ಕರ್ಮಯದ್ವೃತ್ತೌ ಸ್ವರ್ಗತೌಯಚ್ಚ ವೈದಿಕಮ್॥
ಕರ್ಮಾಪವರ್ಗೇಯಚ್ಚೋಕ್ತಂ ತಚ್ಚಾಪ್ಯನ್ನೇಪ್ರತಿಷ್ಠಿತಮ್॥
(ಚರಕ॥ ಸೂ. ಸ್ಥಾ. ಅ ೨೮ ಶ್ಲೋ ೩೫೧)

ಪ್ರಾಣಿಗಳಿಗೆ ಅನ್ನವು ಪ್ರಾಣವಾಗಿರುತ್ತದೆ. ಜೀವಿಲೋಕವು ಅನ್ನವನ್ನಿಚ್ಛಿಸುತ್ತದೆ ದೇಹಕ್ಕೆ ವರ್ಣಕರವಾದ, ಪ್ರಸನ್ನತೆಯೂ, ಒಳ್ಳೇ ಸ್ವರ, ಅಭಿವೃದ್ಧಿ, ಬದುಕುವಿಕೆ, ಪ್ರಜ್ಞಾ, ಸುಖ, ತೃಪ್ತಿ, ಪೋಷಣೆ, ಬಲ (ಶಕ್ತಿ), ಧಾರಣಾ, ಬುದ್ಧಿ, ಮುಂತಾದವುಗಳು ಅನ್ನವನ್ನಾಶ್ರಯಿಸಿಯೇಇರುತ್ತವೆ ಅನ್ನ ದಿಂದಲೇ ದೇಹಧಾರಣೆಯಾಗುವದರಿಂದ, ಅನ್ನಪೋಷಿತದೇಹವು ಸರ್ವ ಕರ್ತವ್ಯವನ್ನು ಮಾಡುತ್ತದೆ. ಈ ಕಾರಣದಿಂದ ಎಲ್ಲ ದೇಹ ಸಂಭವ ವೈಶಿಷ್ಟ್ಯಗಳು ಪೋಷಕ ಧಾರಕ ವರ್ಧಕ ಕೆಂಬಹುನಾ ಪ್ರಾಣವೇ ಆಗಿರುವ ಅನ್ನವನ್ನವಲಂಬಿಸಿರುತ್ತವೆ ಇದಕ್ಕಾಗಿಯೇ **"ಅನ್ನೇ ಸರ್ವಂ ಪ್ರತಿಷ್ಠಿತಂ"** ಎಂದು ಹೇಳಿದ್ದಾರೆ. ಇಷ್ಟು ಮಹತ್ವವುಳ್ಳ ಅನ್ನವನ್ನುವಿಚಾರರಹಿತರಾದವರು ತಾತ್ಕಾಲಿಕ ಭೌತಿಕ ಹಿತದೃಷ್ಟಿಯಿಂದಷ್ಟೇ ಅವಲೋಕಿಸುತ್ತಾರೆ.

ಆದರೆ ತಾತ್ವಿಕ ವಿಚಾರವುಳ್ಳವರು ವರ್ತಮಾನ ಸಾಧ್ಯ ಕೃಷ್ಯಾದಿ ಕರ್ಮಗಳಲ್ಲಿ, ಸ್ವರ್ಗ (ಪರಲೋಕ) ದಲ್ಲಿ, ವೈದಿಕಕರ್ಮವಾದ ಯಜ್ಞ ಯಾಗಾದಿಗಳಲ್ಲಿ, ಮೋಕ್ಷ ಸಾಧನವಾದ ವ್ರತಬ್ರಹ್ಮಚರ್ಯಾದಿಗಳಲ್ಲಿ, ಅನ್ನವೇ ಮೂಲ ಕಾರಣವಾಗಿರುತ್ತದೆಂದು ಹೇಳಿದ್ದಾರೆ ಆದ್ದರಿಂದ ಇವೆ ಲ್ಲವುಗಳೂ ಅನ್ನವನ್ನಾಶ್ರಯಿಸಿ ಇರುತ್ತವೆಯಾದ್ದರಿಂದ **"ಅನ್ನೇ ಸರ್ವಂ ಪ್ರತಿಷ್ಠಿತಂ"** ಎಂದು ಪುನಃ ಹೇಳರುತ್ತಾರೆ. ಕೇವಲ ಬದುಕಲಿಕ್ಕಷ್ಟೇ ಅನ್ನವು ಕಾರಣವಲ್ಲವೇ, ಆತ್ಮೋನ್ನತಿಯನ್ನು ಕುರಿತು ಸಹ ಪ್ರಧಾನಸಾಧನ ವೆಂದು ಸ್ಪಷ್ಟಪಡಿಸಿದ್ದಾರೆ

ಅನುಪಾನ

ಆಹಾರ ಸೇವನೆಯ ವೇಳೆಯಲ್ಲಿ ಸಂಗಡ ಯೋಗ್ಯವಾದ ದ್ರವದ್ರವ್ಯ ಅಥವಾ ಜಲವನ್ನು ಪಾನ ಮಾಡುವದಕ್ಕೆ **"ಅನುಪಾನ"** ವೆಂದು ಹೆಸರು ಅನುಪಾನದಿಂದ ಮುದ್ದೆಯಾದ ಘನೀಭೂತ ಆಹಾರವು, ದ್ರವವಾಗಿ ಅನ್ನಾ ಶಯಕ್ಕೆ ಹೋಗಲು ಸುಲಭವಾಗುತ್ತದೆ. ಅನ್ನವು ಸುಖವಾಗಿ ಪಚನವಾಗು ತ್ತದೆ. ದ್ರವದ್ರವ್ಯ ಅನುಪಾನದಿಂದ ಯುಕ್ತ ಆಹಾರವು ತೃಪ್ತಿಯನ್ನುಂಟು ಮಾಡುತ್ತದೆ.

ಅನುಪಾನಹಿತಂ ಯುಕ್ತಂ ತರ್ಪಯತ್ಯಾಶು ಮಾನವಂ ॥
ಸುಖಂ ಪಚತಿಚಾಹಾರಮಾಯುಷೇ ಚ ಬಲಾಯ ಚ ॥

(ಚರಕ॥ ಸೂ. ಸ್ಥಾ. ಅ ೨೭ ಶ್ಲೋ. ೩೨೬)

ಹಿತಕರವಾದ ಅನುಪಾನಯುಕ್ತ ಆಹಾರವು ಮನುಷ್ಯನಿಗೆ, ಸದ್ಯದ ಲ್ಲಿಯೇ ಸಂತೋಷ ತೃಪ್ತಿಗಳನ್ನುಂಟುಮಾಡುತ್ತವೆ. ಸೇವಿಸಿದ ಅನ್ನವನ್ನು ಅನಾಯಾಸದಿಂದ ಪಚನಮಾಡುತ್ತದೆ. ಇಂಥ ಅನುಪಾನಸಹಿತವಾದ ಆಹಾ ರದಿಂದ ಆಯುರಾರೋಗ್ಯ ಬಲಗಳು ಲಭಿಸುತ್ತವೆ ಆದ್ದರಿಂದ ಆಹಾರದ ಸಂಗಡ ಅನುಪಾನಯೋಜನೆಯು ಅವಶ್ಯವೂ ಯೋಗ್ಯವಾದದ್ದೂ ಇರುತ್ತದೆ

ನರಾಗಾನ್ನಾಹ್ಯವಿಜ್ಞಾನಾದಾಹಾರಾನುಪಯೋಜಯೇತ್ ॥
ಪರೀಕ್ಷ್ಯಹಿತಮುಶ್ನೀಯಾದ್ದೇಹೋಹ್ಯಾಹಾರ ಸಂಭವಃ ॥

(ಚರಕ॥ ಸೂ. ಸ್ಥಾ ಅ ೨೯ ಶ್ಲೋ. ೪೧)

ಅಹಿತವಾದದ್ದರಲ್ಲಿ ಆಸಕ್ತಿ ಇದ್ದರೂ ಮತ್ತು ಅಜ್ಞಾನದಿಂದ ಆಹಾರದ ಲ್ಲಿಯ ಹಿತಾಹಿತಗಳನ್ನರಿಯದೆಯೂ, ಎಂದೂ ಆಹಾರವನ್ನು ಉಪಯೋಗಿಸ ಬಾರದು. ಅರ್ಥಾತ್ ಆಹಾರದ್ರವ್ಯಗಳಹಿತಾಹಿತಗಳನ್ನು ವಿಚಾರಿಸಿ,ಅಹಿತಕರ ವಾದದ್ದನ್ನು ಅದರಲ್ಲೆ ಪ್ರೀತಿಯಿದ್ದರೂತ್ಯಜಿಸಿ, ಯೋಗ್ಯವಾದದ್ದನ್ನೇಸೇವಿಸ ಬೇಕೆಂಬಭಿಪ್ರಾಯವು. ಹಿತವಾದ ಪದಾರ್ಥವನ್ನೇಸೇವಿಸಬೇಕು. ಇದರಂತೇ ಅಪಥ್ಯಕರವಾಗಿರುವದನ್ನು ಬಿಡಬೇಕು ಯಾಕಂದರೆ ದೇಹವು ಆಹಾರ ರಸ ದಿಂದಲೇಹುಟ್ಟಿ ಅದರಿಂದಲೇ ಬದುಕುವದರಿಂದ, ಜೀವನಯಾತ್ರೆಯು ಪ್ರಸ ನ್ನವಾಗಬೇಕಾದರೆ ಯೋಗ್ಯ ಆಹಾರವನ್ನೇ ಸೇವಿಸಬೇಕು.

ಅನ್ನೇನಕುಕ್ಷೇರ್ದ್ವಾವಂಶೌಪಾನೇನೈಕಂಪ್ರಪೂರಯೇತ್ ॥
ಆಶ್ರಯಂ ಪವನಾದೀನಾಂ ಚತುರ್ಥಮವಶೇಷಯೇತ್ ॥

(ವಾಗ್ಭಟ॥ ಸೂ. ಸ್ಥಾ ಅ. ೮ ಶ್ಲೋ. ೪೬)

ಅನ್ನದಿಂದ ಹೊಟ್ಟೆಯ ಎರಡು ಭಾಗವನ್ನೂ ಪಾನದಿಂದ ಒಂದು ಭಾಗವನ್ನೂ ತುಂಬಿಸಬೇಕು. ಉಳಿದ ಒಂದು ಭಾಗವನ್ನು ವಾಯುವಿಗೆ ಆಶ್ರಯವಾಗಿಯೂ ಸುಲಭ ಸಂಚಾರಕ್ಕಾಗಿಯೂ ಉಳಿಸಬೇಕು. ಇದು ಬಹು ಯೋಗ್ಯವಾದ ಪ್ರಮಾಣವಾಗಿರುತ್ತದೆ ಇಲ್ಲಿ ವಿಶೇಷವೇನಂದರೆ:— ಆಹಾರಕ್ಕಾಗಿ ಎರಡು ಭಾಗದಷ್ಟು ಪ್ರಮಾಣವನ್ನು ಹೇಳಿರುವದರಿಂದ ಸರ್ವ ವನ್ನು ಆಹಾರದಿಂದಲೇ ತುಂಬಿಸಬಾರದೆಂದೂ, ಪಾನದಿಂದ ಒಂದು ಭಾಗದ ಗ್ರಹಣದಿಂದ, ಅತಿಜಲಪಾನ ಪೂರ್ಣಜಲಾಹಾರ ನಿಷೇಧವನ್ನೂಮಾಡಿದ್ದಾರೆ. ಒಂದು ವಿಭಾಗ ಬರಿದಾಗಿಡುವದರಿಂದ ಆಹಾರಗ್ರಹಣ ನಂತರದಲ್ಲಿ ಹೆಗುರಾ ಗಿರುತ್ತದೆ ಮತ್ತು ಸುಖಜೀರ್ಣವಾಗುವದರಿಂದ ಆಹಾರವು ಆರೋಗ್ಯಕ್ಕೆ ಯೋಗ್ಯವಾಗುತ್ತದೆ ಆದ್ದರಿಂದ ನಾಲ್ಕುಭಾಗಮಾಡಿ, ಆಹಾರಕ್ಕಾಗಿ ಎರಡು

ಭಾಗವನ್ನೂ ಪಾನಕ್ಕಾಗಿ ಒಂದು ಭಾಗವನ್ನೂ ವಾಯುಸಂಚಾರಕ್ಕೆ ಉಳಿದ ಒಂದು ಭಾಗವನ್ನೂ ಯೋಜನೇಮಾಡಿದ್ದಾರೆ. ಇದರಂತೆಯೇ ಆಹಾರ ಪದ್ಧತಿಯು ಪರಮೋತ್ತಮ ಪ್ರಮಾಣವುಳ್ಳದ್ದೆಂದು ತಿಳಿಯಬೇಕು.

ಸುಖಮುಚ್ಚೈಃ ಸಮಾಸೀನಃ ಸಮುದೇಹೋನ್ನತತ್ವರಃ ॥
ಕಾಲೇಸಾತ್ಮ್ಯಂ ಲಘುಸ್ನಿಗ್ಧಮುಷ್ಣಂಕ್ಷಿಪ್ರಂದ್ರವೋತ್ತರಂ ॥
ಬುಭುಕ್ಷಿತೋsನ್ನಮಶ್ನೀಯಾತ್ ಮಾತ್ರಾವದ್ವಿದಿತಾಗಮಃ ॥

(ಸುಶ್ರುತ॥ ಸೂ ಸ್ಥಾ. ಅ ೪೬ ಶ್ಲೋ ೪೬೫)

ಸುಖವಾಗಿ ಸಮಾಧಾನದಿಂದ ಸರಿಯಾಗಿ ಕುಳಿತುಕೊಂಡು ಅನ್ನದಲ್ಲಿಯೇ ತತ್ಪರತೆಯಿದ್ದವನಾಗಿ, ಆಹಾರ ಸೇವನೆಯನ್ನು ಮಾಡಬೇಕು. ಗಾಬರಿಯಿಂದ ಉದ್ವಿಗ್ನನಾಗಿ ಹೇಗಾದರೂ ಕುಳಿತು ವಿಧಿಯಿಲ್ಲದೆ ಅಕಾಲದಲ್ಲಿ ಯದ್ವಾತದ್ವಾ ಆಹಾರವನ್ನು ಭುಂಜಿಸಕೂಡದೆಂದು ಅಭಿಪ್ರಾಯವು ಯೋಗ್ಯವಾದ ಆಹಾರ ತೆಗೆದುಕೊಳ್ಳುವ ವೇಳೆಯಲ್ಲಿ ಮತ್ತು ಆವಾವ ಕಾಲದಲ್ಲಿಯ ದೋಷಪ್ರಕೋಪ ಮೊದಲಾದವುಗಳನ್ನು ಲಕ್ಷಿಸಿಹೇಳಿದ ಕಾಲಿಕವಾದ ಆಹಾರವನ್ನನುಸರಿಸಿ, ಹಿತಕರ (ಸಾತ್ಮ್ಯ)ವಾದ ಅನ್ನವನ್ನು ಭುಂಜಿಸಬೇಕು. ಅದು ಆರೋಗ್ಯಕ್ಕೆ ಯೋಗ್ಯವಾಗಿಯೂ, ಲಘು (ಜಡವಿಲ್ಲದೆ ಸ್ವಲ್ಪ ವೇಳೆಯಲ್ಲಿ ಜೀರ್ಣವಾಗುವಂಥಾದ್ದು), ಸ್ನಿಗ್ಧ (ರೂಕ್ಷವಿರದೆ ಸ್ನೇಹ ಗುಣಯುಕ್ತವಾದ), ಉಷ್ಣ (ಬಿಸಿಯುಳ್ಳ ಸದ್ಯೋನಿರ್ಮಿತವಾದ), ದ್ರವೋತ್ತರಂ (ಆಹಾರ ಸ್ವೀಕಾರದಕಡೆಯ ಭಾಗದಲ್ಲಿ, ದ್ರವರೂಪ, ಅಥವಾ ದ್ರವಯುಕ್ತವಾದ), ಅನ್ನವನ್ನು ಭುಂಜಿಸಬೇಕು. ಕಾಲ (ಋತು ಅನ್ನಕಾಲ ಆಹಾರ ಪಚನಕಾಲಾದಿಗಳು), ಸಾತ್ಮ್ಯ (ದೋಷಕ್ಕನುಗುಣ ತನ್ನ ಆರೋಗ್ಯಕ್ಕೆ ಹಿತವನ್ನುಂಟು ಮಾಡುವಂಥ) ಆಹಾರವನ್ನು ಚನ್ನಾಗಿ ಹಸಿವೆಯಾದನಂತರ ಹಿತಮಿತವಾಗಿಯೂ (ಮಾತ್ರಾವತ್), ಶಾಸ್ತ್ರದಲ್ಲಿಯ ಭೋಜನ ವಿಧಾನ ಪದಾರ್ಥಗಳ ಗುಣದೋಷ ಯೋಜನೆ ತಿಳಿದವನಾಗಿಯೂ, ಪದ್ಧತಿಯಂತೆಯೇ ಸೇವಿಸಬೇಕು. ಇದರಿಂದ ತೃಪ್ತಿಯಾಗುವದಲ್ಲದೆ ಆರೋಗ್ಯವು ಲಭಿಸುತ್ತದೆ

ಅನಿಯಮಿತಆಹಾರದೋಷಗಳು

ನಾಪ್ರಾಪ್ತಾತೀತಕಾಲಂ ವಾಹೀನಾನ್ಯಧಿಕಮುಥಾಪಿವಾ ॥
ಅಪ್ರಾಪ್ತ ಕಾಲಂ ಭುಂಜಾನಃ ಶರೀರೇ್ಯಲಘೌನರಃ ॥
ತಾಂಸ್ತಾನ್ ವ್ಯಾಧೀನವಾಪ್ನೋತಿ ಮರಣಂ ವಾನಿಯಚ್ಛತಿ ॥
(ಸುಶ್ರುತ॥ ಸೂ. ಸ್ಥಾ. ಅ ೪೬ ಶ್ಲೋ ೪೭)

ಮನುಷ್ಯನು ಚನ್ನಾಗಿ ಹಸಿವಾಗದೇ ಇರ ವಾಗಲೂ ಹಸಿವಿನ ಕಾಲವನ್ನು ಮೀರಿಯೂ, ಆಹಾರವನ್ನು ತೆಗೆದುಕೊಳ್ಳಬಾರದು. ಊಟ ಮಾಡಿದ ಆಹಾರ ಪೂರ್ಣ ಜೀರ್ಣವಾಗುವದರೊಳಗೆ ಆಹಾರಸೇವನೆ, ಮತ್ತು ಅತಿ ಹಸಿವೆಯಾದರೂ ತಡೆದು ಆಹಾರ ತಕ್ಕೊಳ್ಳುವದೂ, ಆರೋಗ್ಯಕ್ಕೆ ಹಿತಕರವಾಗಿರುವದಿಲ್ಲ. ಇದರಂತೆಯೇ ತೃಪ್ತಿಯಾಗದಷ್ಟು ಅತಿ ಕಡಿಮೆ ಆಹಾರ ತಕ್ಕೊಳ್ಳುವದೂ, ಅಧಿಕಾಹಾರಸೇವನೆಯೂ, ನಿಷಿದ್ಧವಾದದ್ದಿರುತ್ತದೆ. ಹಸಿವೆಯಾಗದೇ ಮೇಲಿಂದಮೇಲೆ ಆಹಾರ ಸೇವಿಸುವಂಥವನೂ, ನಿಯಮವಿಧಿ, ದೋಷಾದೋಷ, ಗುಣಾಗುಣಯೋಗ್ಯ ಕಾಲಾದಿಗಳ ಜ್ಞಾನವಿಲ್ಲದೆ ಭುಂಜಿಸುವವನೂ, ದೇಹದಲ್ಲಿ ಜಡತ್ವವುಳ್ಳವನಾಗಿ ಅವಿಧಿಭೋಜನಜನ್ಯವಾದ ರೋಗಗಳನ್ನುಹೊಂದುತ್ತಾನೆ ಇಷ್ಟೇ ಅಲ್ಲ ಆರೋಗ್ಯಕ್ಕೆ ಯೋಗ್ಯವಲ್ಲದ ರೀತಿಯ ವರ್ತನೆಯಿಂದ ವ್ಯಾಧಿಗೆ ಆಶ್ರಯಸ್ಥಾನವಾಗಿ, ಅಲ್ಪಾಯುಷ್ಯದಿಂದ ಮೃತ್ಯುವನ್ನು ಪಡೆಯುತ್ತಾನೆ.

ತಸ್ಮಾತ್ ಸುಸಂಸ್ಕೃತಂ ಯುಕ್ತ್ಯಾದೋಷೈಃಸರ್ವೈಃವಿವರ್ಜಿತಂ॥
ಯಥೋಕ್ತಗುಣಸಂಪನ್ನಮುಪಸೇವೇತಭೋಜನಂ॥
ವಿಭಜ್ಯದೋಷಕಾಲಾದೀನ್ ಕಾಲಯೋರುಭಯೋರಪಿ॥
(ಸುಶ್ರುತ॥ ಸೂ. ಸ್ಥಾ ಅ. ೪೬ ಶ್ಲೋ ೪೭)

ಆಹಾರದ ಯೋಗ್ಯೋಪಯೋಗದಿಂದ ಆರೋಗ್ಯ(ಸ್ವಾಸ್ಥ್ಯ), ಅನಿಯಮಿತೋಪಯೋಗದಿಂದ ರೋಗೋತ್ಪತ್ತಿಯನ್ನು ಸೂಚಿಸಿ, ಯೋಗ್ಯವಾದ ಆಹಾರವಿಧಿಯನ್ನು ನಿಯಮಿಸಿರುತ್ತಾರೆ. ಇಂಥ ಯೋಗ್ಯವಾದ ಆಹಾರ

ವಿಧಿ ವಿಯಮಕ್ಕೆ:- ವಿಧಿ, ನಿಯಮ , ಯುಕ್ತಿ, ಮಾತ್ರಾ, ಪ್ರಮಾಣ, ಪರಿಮಿತಿ,ಗಳೆಂಬ ಪರ್ಯಾಯವಾಚಕ ಹೆಸರುಗಳಿರುತ್ತವೆ ಮನುಷ್ಯನು ಭೋಜನ ವಿಷಯದಲ್ಲಿ ಆಹಾರ ವಿಧಿಗನುಗುಣವಾಗಿ (ಯುಕ್ತ್ಯಾ), ಸರ್ವ ದೋಷ ರಹಿತ ಯೋಗ್ಯಗುಣವುಳ್ಳ ಆಹಾರವನ್ನು ಸೇವಿಸಬೇಕು **ದೋಷ, ದೂಷ್ಯ, ದೇಶ, ಕಾಲ, ವಯಸ್ಸು, ಆಹಾರ ಪದಾರ್ಥಗಳ ದೋಷ ಗುಣಗಳನ್ನು** ತಿಳಿದು, ಸಾಯಂಪ್ರಾತಕಾಲಗಳಲ್ಲಿ, ಎರಡು ಹೊತ್ತು ಆಹಾರವನ್ನು ತಕ್ಕೊಳ್ಳಬೇಕು. ಹೀಗೆ ಸಾತ್ಮ್ಯಕಾರಕ ಆಹಾರ ವಿಧಿಯನ್ನು ಸುಶ್ರುತಾದಿ ಮಹರ್ಷಿಗಳು ಆಯುರ್ಹಿತಾರ್ಥವಾಗಿ ವಿಶದೀಕರಿಸಿದ್ದಾರೆ

ತ್ಯಾಜ್ಯಾಹಾರಗಳು

ಅಚೋಕ್ಷಂ ದುಷ್ಟಮುತ್ಸೃಷ್ಟಂ ಪಾಷಾಣತೃಣಲೋಷ್ಟವತ್ ॥ ದ್ವಿಷ್ಟಂವ್ಯುಷಿತಮುಸ್ವಾದುಪೂತಿಚಾನ್ನಂವಿವರ್ಜಯೇತ್॥ಚಿರಸಿದ್ಧಂ ಸ್ಥಿರಂ ಶೀತಮುಷ್ಣೀಕೃತಂಪುನಃ ॥ ಅಶಾಂತಮುಪದಗ್ಧಂಚ ತಥಾಸ್ವಾದು ನಲಕ್ಷ್ಯತೇ ॥

(ಸುಶ್ರುತ॥ ಸೂ. ಸ್ಥಾ. ಅ ೪೬ ಶ್ಲೋ ೪೭೮॥)

ಯೋಗ್ಯ ಸೇವನೆಗೆ ವಿಧಿಸಿದ ಆಹಾರವನ್ನು ಹೇಳಿ ತ್ಯಾಜ್ಯವಾದಂಥ ವುಗಳನ್ನು ಹೇಳುತ್ತಾರೆ. **ಅಚೋಕ್ಷ** (ಅಪವಿತ್ರ ಮಲಿನವಾದದ್ದು), **ದುಷ್ಟ** (ದೋಷ ಪ್ರಕೋಪಕರ ಅಥವಾ ವಿಷಾದಿಗಳಿಂದ ಯುಕ್ತವಾದ), **ಉತ್ಸೃಷ್ಟ** (ಉಂಡುಳಿದ ಎಂಜಲನ್ನ), ಮತ್ತು ಕಲ್ಲಿನಪುಡಿ, ಉಸುಬು, ಹುಲ್ಲು, ಕಸ, ಕೂದಲು, ಮಣ್ಣು ಮುಂತಾದವುಗಳಿಂದ ಯುಕ್ತವಾದದ್ದು, **ದ್ವಿಷ್ಟ** (ತನಗೆ ಸೇರದಂಥಾದ್ದು), **ವ್ಯುಷಿತ** (ಹಳಸಿದ್ದು), **ಅಸ್ವಾದು** (ರುಚಿ ಇಲ್ಲದಿರುವ), **ಪೂತಿ** (ದುರ್ಗಂಧವುಳ್ಳ ಅಥವಾ ಕೊಳೆತಂಥ), **ಚಿರಸಿದ್ಧ** (ತಯಾರಾಗಿ ಬಹುದಿನ ಕಳೆದ), **ಸ್ಥಿರ** (ಕಠಿಣವಾದ ದುರ್ಜರವಾದ), **ಶೀತ** (ಮೊದಲು ಬಿಸಿಯಿದ್ದು ನಂತರ ಬಹಳ ತಂಪಾದ), **ಉಷ್ಣೀಕೃತ** (ಒಮ್ಮೆ ಬೇಯಿಸಿ ಆರಿದ ಮೇಲೆ ಪುನಃ ಬಿಸಿ ಮಾಡಿದ), ಅಥವಾ "**ಶೀತ**

ಮುನ್ನಂ ಉಷ್ಣೀಕೃತಂ ಪುನಃ (ಮೊದಲು ಬೇಯಿಸಿದಆಹಾರವು ಕಾಲಾಂತರದಲ್ಲಿ ಶೀತವಾದದ್ದನ್ನು ಪುನಃ ಬಿಸಿಮಾಡಿದ್ದು), **ಅಶಾಂತ** (ಪೂರ್ಣ ಪಚನ ಕ್ರಿಯೆ ಮುಗಿಯದ), **ಉಪದಗ್ಧ** (ಬಹಳ ಬೆಂದು ಹೊತ್ತಿ ಕತ್ತಿ ಹೋದಂಥ) "**ಚ**" ಕಾರ ಸಮುಚ್ಚಯದಿಂದ ಹೊಗೆವಾಸನೆಯಾದ ಅಥವಾ ಯದ್ವಾತದ್ವಾ ಬೆಂದಿರುವಂಥ, "**ಸ್ವಾದುನಲಕ್ಷ್ಯತೆ**" (ಮಾಧುರ್ಯವಿಲ್ಲದಿರುವ ಅಥವಾ ರುಚ ಸುಟ್ಟು ಹೋದ, ಇಲ್ಲವೇ ಅಪೂರ್ಣ ಪಾಕದಿಂದ ರುಚಿ ಬಾರದಿರುವ), ಈ ನೊದಲಾದ ಯೋಗ್ಯವಲ್ಲದ್ದೆಂದು ನಿಷೇಧಿಸಿರುವ ಆಹಾರಗಳನ್ನು ಸೇವಿಸಬಾರದು "**ಇನ್ನು ಚಕಾರ ಸಮುಚ್ಚಯದಿಂದ**" ಬಾಹ್ಯ ಕರ್ಮದೂಷಿತವಾದ ಆಹಾರವನ್ನು ನಿಷಿದ್ಧವೆಂದು ಹೇಳಿದ್ದಾರೆ. ವೈರಿಯ ಅನ್ನ, ವೇಶ್ಯಾ, ಪಾತಕಿ, ಕೃತಘ್ನ, ವಿಧಿನಿಷೇಧವಿಲ್ಲದೇ ಕುಡುಕರ ಸಂಘದಲ್ಲಿಯ ಅನ್ನವು ಅಯೋಗ್ಯವೆಂದು ಹೇಳಿದ್ದಾರೆ ಅರ್ಥಾತ್ ಇವು ಬಾಹ್ಯ ಕರ್ಮದೂಷಿತ ಕರ್ಮ ಚಾಂಡಾಲರ ಆಹಾರವಾಗಿರುತ್ತವೆ ಇಂಥ ಆಹಾರ ಸೇವನೆಯಿಂದ ಆಹಾರ ಸದೃಶಬುದ್ಧಿಯು ಉತ್ಪನ್ನವಾಗುವದೆಂದು, ಸ್ಮೃತ್ಯಾದಿಗಳಲ್ಲಿ ವಿವರಿಸಲ್ಪಟ್ಟಿರುತ್ತದೆ ಆದ್ದರಿಂದ ನಿಷಿದ್ಧವೆಂದು ಹೇಳಿದ್ದಾರೆ

ಅಶಿತಶ್ಚೋದಕಂ ಯುಕ್ತ್ಯಾ ಭುಂಜಾನಶ್ಚಾಂತರಾಪಿಬೇತ್ ॥
(ಸುಶ್ರುತ॥)

ಊಟ ಮಾಡಿದ ನಂತರದಲ್ಲಿ ಪ್ರಮಾಣವನ್ನು ಮೀರದೆ ಮಿತವಾಗಿ ನೀರನ್ನು ಕುಡಿಯಬೇಕು. ಅಥವಾ ಭೋಜನ ಮಧ್ಯದಲ್ಲಿ ಸ್ವಲ್ಪ ಸ್ವಲ್ಪವಾಗಿ ಕುಡಿಯಬೇಕು. ಭೋಜನಾಂತ್ಯ ಮಧ್ಯದಲ್ಲಿ ನೀರನ್ನು ಕುಡಿಯಬೇಕೆಂದು ವಿಧಾನ ಮಾಡಿದ್ದರಿಂದ, ಊಟದ ಮೊದಲು ನೀರನ್ನು ಕುಡಿಯಬಾರದೆಂದು ತಿಳಿಯಬೇಕು **ಸುಶ್ರುತದಲ್ಲಿ**, ಭೋಜನಾದಿಯಲ್ಲಿ ನೀರನ್ನು ಕುಡಿಯಬಾರದೆಂದು ನಿಷೇಧವನ್ನು ಸಹ ಮಾಡಿದ್ದಾರೆ.

ಯದನ್ನಂದೇಹಧಾತ್ವೋಜೋ ಬಲವರ್ಣಾದಿ ಪೋಷಣಂ ॥
ತತ್ಪಾಗ್ನಿರ್ಹೇತುರಾಹಾರಾನ್ನಹ್ಯಪಕ್ವಾದ್ರಸಾದಯಃ ॥
(ವಾಗ್ಭಟ॥ ಶಾರೀರ॥ ಅ ೩ ಶ್ಲೊ ೫೪॥)

ಯಾವ ಅನ್ನವು ದೇಹಧಾತು ಓಜಸ್ಸು ಬಲವರ್ಣಗಳಿಗೆ ಪೋಷಕವಾಗಿರುತ್ತದೆಯೋ, ಅದು ರಸಾದಿಗಳಾಗಲಿಕ್ಕೆ ಅಗ್ನಿಯೇ (ಜಠರಾಗ್ನಿ), ಕಾರಣವಾಗಿರುತ್ತದೆ ಅಪಕ್ವಾನ್ನದಿಂದ ರಸಾದಿಗಳಾಗಲಾರವು ಅರ್ಥಾತ್ ಆಹಾರವು ದೇಹಪೋಷಕವಾಗಬೇಕಾದರೆ ಜಠರಾಗ್ನಿಯಿಂದ ಪಕ್ವವಾಗಿ ರಸವಾಗಬೇಕಾಗುತ್ತದೆ ಆಹಾರವು ಪಚನವಾಗಿ ರಸಾದಿಗಳಾಗುವದಕ್ಕೆ, ಆಹಾರ ಪರಿಪಾಕಕ್ರಮವೆಂದು ಹೇಳುತ್ತಾರೆ

ಅನ್ನಂಕಾಲೇ್ಽಭ್ಯವಹೃತಂ ಕೋಷ್ಠೇಪ್ರಾಣಾನಿಲಾಹೃತಂ ॥
ದ್ರವೈರ್ವಿಭಿನ್ನಸಂಘಾತಂ ನೀತಂಸ್ನೇಹೇಸಮಾರ್ದವಂ ॥
(ವಾಗ್ಭಟ॥ ಪರೀಕ್ಷಿತ॥ ಅ ೩ ಶ್ಲೋ ೫೫)

ಪ್ರಾಣವಾಯುವಿನಿಂದ ಊಟ ಮಾಡಿದ ಆಹಾರವು, ಕೋಷ್ಠಕ್ಕೆ ಒಯ್ಯಲ್ಪಡುತ್ತದೆ ಹಿಂದೆ ಕಾಲವಿಧಿಗಳನ್ನು ನಿಯಮಿಸಿದ್ದರಿಂದ ಯೋಗ್ಯ ಕಾಲದಲ್ಲಿ ವಿಧಿಸಿಯಮಕ್ಕನುಸಾರ ಯೋಜಿಸಿದ ಆಹಾರವು ಸುಲಭ ಜೀರ್ಣವಾಗುವದೆಂದು ಸೂಚಿಸಲು **"ಕಾಲೇಅಭ್ಯವಹೃತಂ"** ಎಂಬ ವಾಕ್ಯವನ್ನಿಟ್ಟಿದ್ದಾರೆ ಇದರಿಂದ ವಿಧಿಯುಕ್ತವಾಗಿಯೇ ಆಹಾರವನ್ನು ತಕ್ಕೊಳ್ಳಬೇಕೆಂದು ವಿಶೇಷ ನಿಯಮನಕ್ಕಾಗಿ ಪುನಃ ಹೇಳಿದ್ದಾರೆಂದು ತಿಳಿಯಬೇಕು.

ಕಂರ ಮಾರ್ಗವಾಗಿ ಅನ್ನವಾಹೀ ಸ್ರೋತೋಮಾರ್ಗದಿಂದ, ಪ್ರಾಣವಾಯು ಪ್ರೇರಣದಿಂದ ಕೋಷ್ಠದಲ್ಲಿ ಹೋಗುತ್ತದೆ. ಅಲ್ಲಿಗೆ ಹೋಗುವದರೊಳಗೆ ಮತ್ತು ನಂತರದಲ್ಲಿ ಜಲಾದಿದ್ರವ ಪದಾರ್ಥ ಸ್ವಾದುರಸಯುಕ್ತವಾಗುವದರಿಂದ ಘನೀಭೂತ ಆಹಾರ ಮುದ್ದೆಯು, ತೊಯ್ದು ವಿರಲಾವಯವವುಳ್ಳದ್ದೂ ಸ್ನೇಹಾದಿಗಳಿಂದ ಮೃದುವೂ ಆಗುತ್ತದೆ.

ಯಾತ್ಯಾಮಾಶಯಮಾಹಾರಃ ಪೂರ್ವಂ ಪ್ರಾಣಾನಿಲೇರಿತಃ॥
ಮಾಧುರ್ಯಂ ಫೇನಭಾವಂಚ ಷಡ್ರಸೋ್ಽಪಿಲಭೇತಸಃ॥
(ಶಾರ್ಙಧರ॥ ಪ್ರ. ಖ ಅ. ೬ ಶ್ಲೋ ೧)

ಭುಕ್ತಾನ್ನವು ಪ್ರಾಣವಾಯುವಿನ ಸಹಯೋಗದಿಂದ ಮೊದಲು "ಆಮಾಶಯಕ್ಕೆ" ಹೋಗುತ್ತದೆ. **ಆಮವೆಂದರೆ** ಅಪಕ್ವವಾದ ಆಹಾರವು

ಆಶಯವೆಂದರೆ ಆಶ್ರಯಸ್ಥಾನ, ಅಪಕ್ವವಾದಆಹಾರವು ಮೊದಲು ಹೋಗಿ ಆಶ್ರಯಿಸುವ ಸ್ಥಾನವು ಅದಕ್ಕೆ **"ಆಮಾಶಯ" "ಅನ್ನಾಶಯ"** ವೆಂದು ಹೇಳುತ್ತಾರೆ ಇದು ಕೋಷ್ಠದಲ್ಲಿರುವದರಿಂದ ವಾಗ್ಭಟಾಚಾರ್ಯರು ಆಹಾರವು ಕೋಷ್ಠದಲ್ಲಿ ಹೋಗುತ್ತದೆಂದು ಹೇಳಿದ್ದಾರೆ. ಆಮಾಶಯದಲ್ಲಿ ಸರ್ವ ಆಹಾರವೂ (ಷಡ್ರಸಯುಕ್ತ) ಮಧುರ ದ್ರವಸ್ವರೂಪವನ್ನು ಹೊಂದುತ್ತದೆ

ವಿಶೇಷ ವಿಚಾರ

ಎದೆಯ ಭಾಗದಲ್ಲಿ ಆಮಾಶಯ(ಅನ್ನಾಶಯ)ವಿರುತ್ತದೆಂದು ಶಾರ್ಙ್ಗಧರ, ವಾಗ್ಭಟ, ಮತವಾಗಿರುತ್ತದೆ **ಚರಕದಲ್ಲಿ** ನಾಭಿಯಿಂದ ಸ್ತನ ಪರ್ಯಂತರ ಭಾಗಕ್ಕೆ ಆಮಾಶಯವೆಂದು ಹೇಳಿದ್ದಾರೆ

ನಾಭಿಸ್ತನಾಂತರಂಜಂತೋರಾಮಾಶಯಇತಿಸ್ಮೃತಃ ॥
(ಚರಕ॥ ವಿಮಾನ॥ ಅ ೨ ಶ್ಲೋ ೧೭)

"ವಾಗ್ಭಟದಲ್ಲಿ' ಆಮಾಶಯ ಕೆಳಭಾಗದಲ್ಲಿಯ ಕೋಷ್ಠಕ್ಕೆ "**ಗ್ರಹಿಣೀ ಸ್ಥಾನ**" ವೆಂದು ಹೇಳುತ್ತಾರೆ. ಇಲ್ಲಿ ವಿಶೇಷವಾಗಿ ಆಹಾರವು ಪಚನವಾಗುತ್ತದೆ

"ಸುಶ್ರುತದಲ್ಲಿ" ಧನ್ವಂತರಿಯ ಮತದಂತೆ **"ಪಿತ್ತಧರಾಕಲಾ"** ಎಂದು ಹೇಳುತ್ತಾರೆ. ಇದಕ್ಕೆ ಪಚ್ಯಮಾನನ್ನಾಶ್ರಯವೆಂದು ವಿವರಿಸಿದ್ದಾರೆ. ಅನೇಕ ಮತದಿಂದ ಸ್ಥಾನ ಹೆಸರು ಭಿನ್ನವಾಗಿದ್ದರೂ ಎಲ್ಲರೂ **"ಕ್ರಿಯೆಯನ್ನು"** ಭಿನ್ನವಾಗಿ ಹೇಳಿರುವದಿಲ್ಲ. ಆಹಾರವು ಪಚನವಾಗುವ ಸ್ಥಾನವೆಂದುಹೇಳಿದ್ದಾರೆ. ಆದ್ದರಿಂದ ಭಿನ್ನಮತಗಳು ಸ್ಥಾನಾಶ್ರಯಗಳನ್ನುಕುರಿತು ಹೇಳಿರುವದು ಇಲ್ಲಿ ಬಾಧಕವೂ ಪ್ರಯೋಜನಭಿನ್ನತೆಯೂ ಆಗುವದಿಲ್ಲವಾದ್ದರಿಂದ ಸಮಂಜಸವಾಗಿರುತ್ತದೆ. ಗ್ರಹಿಣೀ ರೋಗದಲ್ಲಿಯೂ, ಪಿತ್ತ ವಿಷಯದಲ್ಲಿ ರೇಚನ ಕರ್ಮವಿಷಯದಲ್ಲಿಯೂ ಭಿನ್ನವಾದ ಸ್ಥಾನಾಶ್ರಯ ಹೇಳಿದ್ದರ ಪ್ರಯೋಜನವಾಗಿರುತ್ತದೆ. ಆದ್ದರಿಂದ ಆಪ್ರಾಮಾಣಿಕ ಅನುಪಯೋಗ ಭೇದಕಲ್ಪನೆಯೆಂದು ಭಾವಿಸದೆ, ಶಾಸ್ತ್ರೀಯ ವಿಜ್ಞಾನಯುತಭೇದ ಪ್ರಯೋ

ಜನ ಅದೆಯೆಂದು ತಿಳಿಯಬೇಕು. ಚರಕ, ಸುಶ್ರುತ, ವಾಗ್ಭಟಗಳನ್ನವ ಲೋಕಿಸಿದರೆ ಭೇದ ಪ್ರಯೋಜನದ ಅರಿವಾಗುತ್ತದೆ ಭೇದಮಾಡಿರುವದು ಯೋಗ್ಯವೆಂದೇ ಅನಿಸುತ್ತದೆ

ಅಥಪಾಚಕಪಿತ್ತೇನವಿದಗ್ಧಾನ್ನಂ ವ್ರಜೇತ್ ॥
ತತಃ ಸಮಾನಮರುತಾಗ್ರಹಿಣೀಮಭಿನೀಯತೇ ॥
(ಶಾರ್ಙ್ಗಧರ॥ ಪ್ರ ಖ ಅ ೬ ಶ್ಲೋ. ೨)

ಪಾಚಕ ಪಿತ್ತದಿಂದ ಯುಕ್ತವಾಗಿ ವಿದಗ್ಧವಾದ ಬುರುಗಿನಂತಿರುವ (ನೊರೆ) ಆಹಾರವು ಹುಳಿಯಾಗುತ್ತದೆ. ನಂತರ ಸಮಾನ ವಾಯುವಿನಿಂದ ಪ್ರೇರಿತವಾಗಿ ಗ್ರಹಿಣೀ ಸ್ಥಾನದಲ್ಲಿ ಒಯ್ಯಲ್ಪಡುತ್ತದೆ

ಗ್ರಹಿಣೀಸ್ಥಾನವೆಂದರೆ:— ಕರುಳೆಂದು ತಿಳಿಯಬೇಕು ದೊಡ್ಡ ಕರುಳಿನಲ್ಲಿ ಆಹಾರದ ಅಪಕ್ವ ಭಾಗವು ಸಾಮಾನ್ಯತಃ ಪಚನಹೊಂದುತ್ತದೆ. ಆದ್ದರಿಂದ ಎಲ್ಲ ಕರುಳುಗಳನ್ನು ಗ್ರಹಿಸಿರುತ್ತದೆ. ಹೆಚ್ಚಿಗೇ ವಿಶೇಷವಾಗಿ ಸಣ್ಣ ಕರಳಿನಲ್ಲಿಯೇ ಆಹಾರ ಪಚನವಾಗುತ್ತದೆ ನಂತರ ದೊಡ್ಡ ಕರುಳಿನಲ್ಲಿ ಸ್ಥೂಲಭಾಗವು ವಿಭಾಜಿತವಾಗಿಹೋಗುತ್ತದೆ

ಆಹಾರವು ಆಮಾಶಯದಿಂದ ಗ್ರಹಿಣೀಸ್ಥಾನಕ್ಕೆ ಬರಬೇಕಾದರೆ ಪಿತ್ತಾಶಯದಿಂದ ಪಿತ್ತವು ಬಂದು ಕೂಡಿಕೊಳ್ಳುತ್ತದೆ ಪಿತ್ತರಸ ಸಂಯೋಗದಿಂದ ಆಹಾರವು ವಿದಗ್ಧವಾಗಿ ಹುಳಿಯೂ ಬುರುಗುಳ್ಳದ್ದಾಗಿಯೂ ಆಗುತ್ತದೆ. ನಂತರ ಗ್ರಹಿಣೀಸ್ಥಾನವೆಂದು ಹೇಳುವ ಕರುಳಿನಲ್ಲಿ ಬರುತ್ತದೆ. ಅಲ್ಲಿ ಬಂದ ನಂತರ ಕರುಳಿನ ಆಕುಂಚನಪ್ರಸರಣಾತ್ಮಕವಾದ ಕ್ರಿಯೆಯಿಂದಲೂ ಹಿಚುಕುವಿಕೆಯಿಂದಲೂ ಆಹಾರವು ಚನ್ನಾಗಿಪಚನವಾಗುತ್ತದೆ ಪಚನವಾಗಿ ಉಳಿದದ್ರವವಲ್ಲದ ಸ್ಥೂಲಭಾಗವು ಸಣ್ಣ ಕರುಳಿನ ಮಾರ್ಗವಾಗಿ ಸ್ಥೂಲಾಂತ್ರದಲ್ಲಿ ಬರುತ್ತದೆ ಬಲಪಾರ್ಶ್ವದ ಕೊನೆಯ ಭಾಗದ ಸ್ಥೂಲಾಂತ್ರದಲ್ಲಿ ಸಣ್ಣ ಕರುಳು ಸಂಧಿತವಾಗಿ ಕೂಡಿರುತ್ತದೆ. ದೊಡ್ಡ ಕರುಳಿನಲ್ಲಿ ಬಂದ ಆಹಾರದ ಸ್ಥೂಲ (ಸ್ಥಿರ) ಭಾಗವು ಪಕ್ವವಾಗುತ್ತಾಗುತ್ತ ನಿಃಸ್ಸಾರವಾದ ಕಿಟ್ಟ (ಮಲ) ಭಾಗವು, ದೊಡ್ಡಕರುಳಿನ ಎಡಭಾಗದಲ್ಲಿಯ ಕೊನೆಯ ಭಾಗವಾದ ಮಲಾಶಯದಲ್ಲಿ ಬರುತ್ತದೆ ನಂತರ ಅಲ್ಲಿಂದ ಹೊರಬೀಳುತ್ತದೆ.

ಷಷ್ಠೀಪಿತ್ತಧರಾನಾಮಯಾಕಲಾಪರಿಕೀರ್ತಿತಾ ॥
ಪಕ್ವಾಮಾಶಯಮಧ್ಯಸ್ಥಾ ಗ್ರಹಿಣೀತ್ಯಭಿಧೀಯತೇ ॥
(ಶಾರ್ಙ್ಗಧರ॥ ಪ್ರ ಖ ಅ. ೬ ಶ್ಲೋ. ೩)
ತದಧಿಷ್ಠಾನಮನ್ನಸ್ಯಗ್ರಹಣಾದ್ಗ್ರಹಣೀಮತಾ ॥
ಸೈವಧನ್ವಂತರಿಮತೇಕಲಾಪಿತ್ತಧರಾಹ್ವಯಾ ॥
(ವಾಗ್ಭಟ॥ ಶಾರೀರ॥ ಅ. ೩ ಶ್ಲೋ. ೫೧)
ಆಯುರಾರೋಗ್ಯವೀರ್ಯೌಜೋಭೂತಧಾತ್ವಗ್ನಿಪುಷ್ಟಯೇ॥
ಸ್ಥಿತಾಪಕ್ವಾಶಯದ್ವಾರಿಭುಕ್ತಮಾರ್ಗಾರ್ಗಲೇವಸಾ ॥
(ವಾಗ್ಭಟ॥ ಶ್ಲೋ. ೫೧)

ಪಕ್ವಾಶಯ (ಮಲಾಶಯ) ಆಮಾಶಯಗಳಮಧ್ಯಭಾಗಕ್ಕೆ **ಗ್ರಹಣೀ, ಗ್ರಹಿಣೀ,** ಎಂದು ಅನ್ನುತ್ತಾರೆ **ಧನ್ವಂತರಿಮತದಂತೆ** ಪಿತ್ತಧರಾ ಎಂಬ ಹೆಸರೇ ಕಲಾಭಾಗವಾಗಿರುತ್ತದೆ. ಆಮಾಶಯದಿಂದ ಹೊರಬಿದ್ದ ಅಪಕ್ವ ಅನ್ನವನ್ನು ಧಾರಣಾಮಾಡಿ ಪಚನಮಾಡುತ್ತದೆ. ಆದ್ದರಿಂದ ಗ್ರಹಿಣೀ ಸ್ಥಾನವು ಅಪಕ್ವಾಹಾರಕ್ಕೆ ಆಶ್ರಯವು. ತನ್ನ ಸ್ಥಾನದಲ್ಲಿ ಆಹಾರವನ್ನು ಗ್ರಹಣಮಾಡಿಟ್ಟುಕೊಳ್ಳುವದರಿಂದ, **"ಗ್ರಹಣಾತ್ ಗ್ರಹಣೀಮತಾ"** ಗ್ರಹಣೀ ಎಂದು ಹೇಳುತ್ತಾರೆ. **ಪಕ್ವಾಶಯ** ದ್ವಾರದಲ್ಲಿ ಅರ್ಗಲ (ಅಗಳಿ) ಇರುವಂತೆ ಗ್ರಹಣೀಸ್ಥಾನವಿರುತ್ತದೆ ಯಾಕಂದರೆ ಆಹಾರವನ್ನು ತಡೆದು ಚನ್ನಾಗಿ ಪಚನಮಾಡಿ ಕಿಟ್ಟಭಾಗವನ್ನು ಮಲಾಶಯಕ್ಕೆ ಬಿಡುತ್ತದೆ ಗ್ರಹಣಿಯು ತಡೆಯದಿದ್ದರೆ ಅಪಕ್ವವೇ ಮಲಾಶಯದಲ್ಲಿ ಹೋಗುತ್ತಿತ್ತು, ತಡೆಹಿಡಿಯುವದರಿಂದಪಕ್ವವಾಗಿಹೋಗುತ್ತದೆ. ಗ್ರಹಣೀದೋಷವಿದ್ದಲ್ಲಿ, ಆಮವೇ ಹೋಗುವ ಕಾರಣವೇ ಇದಾಗಿರುತ್ತದೆ ಯಾಕಂದರೆ ಗ್ರಹಣೀಸ್ಥಾನ ದುರ್ಬಲವಿರುವದರಿಂದ ತಡೆಹಿಡಿದು ಪಚನಮಾಡುವ ಶಕ್ತಿಯು ಚನ್ನಾಗಿರದೇ ಹೀಗಾಗುತ್ತದೆ.

ಹೀಗೆ ಆಹಾರವನ್ನು ಪಚನಮಾಡುವದರಿಂದ ಆಯುರಾರೋಗ್ಯಾದಿಗಳ ಪುಷ್ಟಿಗೆ (ಅಭಿವೃದ್ಧಿಗೆ) ಕಾರಣವೆಂದು ಹೇಳಿದ್ದಾರೆ **ಆಯುಃ**:— ಶರೀರೇಂದ್ರಿಯ ಸತ್ವಾತ್ಮ ಸಂಯೋಗ ವಿಶೇಷಃ॥, **ಆರೋಗ್ಯಂ**:— ಧಾತ್ವಸಾ

ಮ್ಯಮ್॥, ವೀರ್ಯಂ·— ಶಕ್ತಿಃ, ಕರ್ಮಣಿ ಸಾಮರ್ಥ್ಯಂ॥, ಓಜಃ:— ರಸಾದಿ ಸರ್ವಧಾತುಪ್ರಸಾದಜಾತಂ ಪರಂ ಸತ್ವರೂಪಂ॥, ಭೂತಧಾತು:— ಪಂಚಭೂತಾತ್ಮಕ ಶರೀರ ಧಾತವಃ॥, ಚೆ.— ವಾತ ಪಿತ್ತ ಕಫಾಃ॥. ಅಗ್ನಿ.— ಧಾತೂನಾಮೂಷ್ಮಾಧಾತ್ವಗ್ನಿರಿತಿ॥, ವಾ:— ಶರೀರಸ್ಥ ವಾಚ ಕಾಗ್ನಿರ್ಜಾರರಃ॥.

ಅನ್ನ ರಸದ ಕ್ರಮಣವು

ವ್ಯಾನೇನ ರಸಧಾತುರ್ಹಿ ವಿಕ್ಷೇಪೋಚಿತ ಕರ್ಮಣಾ ॥
ಯುಗಪತ್ ಸರ್ವತೋಜಸ್ಯಂದೇಹೇವಿಕ್ಷಿಪ್ಯತೇ ಸದಾ ॥

(ಚರಕ॥ ಚಿಕಿತ್ಸಾ॥ ಅ ೧೫ ಶ್ಲೋ. ೩೬)

ದೇಹದಲ್ಲಿ ಆಹಾರದ ಅಪಕ್ವ ಭಾಗಕ್ಕೆ "ಆಮ" ವೆಂಬ ಹೆಸರು ಅದು ಗ್ರಹಿಣೀ ಸ್ಥಾನದಲ್ಲಿ ಪಕ್ವವಾಗಿ "ರಸ" ವಾಗುತ್ತದೆ ಇದಕ್ಕೆ ಸರ್ವಧಾತು ದೇಹವನ್ನು ಪೋಷಿಸುವ "ರಸಧಾತು" ಎಂದು ಅನ್ನುತ್ತಾರೆ. ರಸಧಾತುವು ಏಕ ಕಾಲದಲ್ಲಿ (ಯುಗಪತ್) ಸರ್ವ ಶರೀರದಲ್ಲಿಯೂ ಒಯ್ಯಲ್ಪಡುವ ಶಕ್ತಿಯುಳ್ಳ ವ್ಯಾನವಾಯುನಿಂದ ಒಯ್ಯಲ್ಪಡುತ್ತದೆ. ವಿಕ್ಷೇಪ ಕರ್ಮಕಾರಿಯಾದ ವ್ಯಾನವಾಯುವಿನಿಂದ ಒಮ್ಮೆಲೇ ಸಮಗ್ರ ದೇಹದಲ್ಲಿಯೂ, "ರಸಧಾತು" ಕಳಿಸಲ್ಪಡುತ್ತದೆ. ಅರ್ಥಾತ್ ಸಮಗ್ರ ದೇಹ ಸಂಚಾರಿಯಾದ ವ್ಯಾನ ವಾಯುವಿನ ಯೋಗದಿಂದ ಸಂಪೂರ್ಣ ದೇಹದಲ್ಲಿ ಒಮ್ಮೆಲೇ ಸಂಚರಿಸುತ್ತದೆಂದು ಅಭಿಪ್ರಾಯವು.

ಅನ್ನಸ್ಯ ಪಕ್ತಾಪಿತ್ತಂತು ಪಾಚಕಾಖ್ಯಂ ಪುರೇರಿತಂ ॥
ದೋಷಧಾತು ಮಲಾದೀನಾಮೂಷ್ಮೇತ್ಯಾತ್ರೇಯ ಶಾಸನಂ॥

(ವಾಗ್ಭಟ॥ ಶಾರೀರ॥ ಅ ೩ ಶ್ಲೋ ೪೯)

ಅನ್ನವನ್ನು ಪಚನ ಮಾಡುವ ಪಿತ್ತವು "ಪಾಚಕಾಗ್ನಿ" ಯೆಂದು ಹಿಂದೆ ವಿವರಿಸಲ್ಪಟ್ಟಿರುತ್ತದೆ. ಅದು ಪಕ್ವಾಶಯ ಆಮಾಶಯಗಳ ಮಧ

ಭಾಗದಲ್ಲಿರುತ್ತದೆ. "**ಪಕ್ವಾಮಾಶಯೆ ಮಧ್ಯಸ್ಥಂ**" ಎಂದು ಹೇಳಿದ್ದಾರೆ. "**ಆತ್ರೇಯರು**" ದೋಷಧಾತು ಮಲಾದಿಗಳ ಉಷ್ಣತೆಯೇ ಆಹಾರವನ್ನು ಪಚನನಮಾಡುತ್ತದೆಂದು, ಪ್ರತಿಜ್ಞಾಪೂರ್ವಕವಾಗಿ ಹೇಳಿದ್ದಾರೆ. ಅವರ ಮತದಂತೆ ಪಿತ್ತವು (ಪಾಚಕಾಗ್ನಿಯೆಂದು ಹೆಸರುಳ್ಳದ್ದು) ಆಹಾರವನ್ನು **ಪಚನ** ಮಾಡುವದಿಲ್ಲೆಂದು ಹೇಳಿರುತ್ತಾರೆಂದು ತಿಳಿಯಬೇಕು. ಚರಕದಲ್ಲಿ ಧಾತ್ವಗ್ನಿ (೭), ಭೌತಿಕಾಗ್ನಿ (೫), ಒಟ್ಟು (೧೨) ಅಗ್ನಿಗಳಿರುತ್ತವೆಂದು ಹೇಳಿದ್ದಾರೆ **ಸುಶ್ರುತಾಚಾರ್ಯರು** ಪಿತ್ತವೇ ಅಗ್ನಿಯಾಗಿರುತ್ತದೆಂದೂ, ದೇಹದಲ್ಲಿ ಪಿತ್ತದ ಹೊರತಾಗಿ ಅನ್ಯ ಅಗ್ನಿಯು ಲಭ್ಯವಿಲ್ಲೆಂದೂ ಹೇಳಿದ್ದಾರೆ ಆಹಾರವನ್ನು ಪಚನ ಮಾಡುವ ಪಿತ್ತಕ್ಕೇ ಪಾಚಕಾಗ್ನಿಯೆಂದು ಹೇಳಿದ್ದಾರೆ

ವಾಮುಪಾರ್ಶ್ವಾಶ್ರಿತಂ ನಾಭೇಃ ಕಂಚಿತ್ ಸೂರ್ಯಸ್ಯಮುಂಡಲಂ॥
ತನ್ಮಧ್ಯೇ ಮುಂಡಲಂ ಸೌಮ್ಯಂತನ್ಮಧ್ಯೇಽಗ್ನಿರ್ವ್ಯವಸ್ಥಿತಃ ॥
ಜರಾಯು ಮಾತ್ರ ಪ್ರಚ್ಛನ್ನಃ ಕಾಚಕೋಶಸ್ಥ ದೀಪವತ್ ॥

(ವಾಗ್ಭಟ)

ನಾಭಿಯ ಎಡಗಡೆ ಸ್ವಲ್ಪಮೇಲ್ಭಾಗದಲ್ಲಿ ಸೂರ್ಯಮಂಡಲವಿರುತ್ತದೆ. ಸೂರ್ಯಮಂಡಲ ಮತ್ತು ನಾಭಿಯಮಧ್ಯದಲ್ಲಿ, ಸೋಮಮಂಡಲವು ಇರುತ್ತದೆ ಅವುಗಳ ಮಧ್ಯದಲ್ಲಿ ಅಗ್ನಿಯು ಇರುತ್ತದೆ. ಸೋಮಮಂಡಲ ಮಧ್ಯದಲ್ಲಿ ಅಗ್ನಿ ಇರುವದರಿಂದ, ಕಾಜಿನಬುರುಡೆಯ ಒಳಗೆ ದೀಪವಿರುವಂತೆ ಇರುತ್ತದೆ. ಜರರಾಗ್ನಿಯ ಸುತ್ತಲೂ ಜರಾಯು (ಮಾಂಸದ ತೆಳ್ಳಗಿನ ಪರದೆ) ವ್ಯಾಪಿಸಿರುವದರಿಂದ ಕಾಜಿನ ಒಳಗಡೆ ಇರುವ ದೀಪದಸಾದೃಶ್ಯವನ್ನು ಕೊಟ್ಟಿದ್ದಾರೆ. ಇದು ಪಾಚಕಾಗ್ನಿಯಾಗಿದ್ದು ಆಹಾರವನ್ನು ಪಚನ ಮಾಡುತ್ತದೆ.

ಆಹಾರಪಾಕವಿಷಯದಲ್ಲಿ ವಿಶೇಷ

ಆಹಾರಪರಿಪಾಕದಲ್ಲಿ ರಸದಿಂದಲೇ ಎಲ್ಲ ಧಾತು ದೋಷಾದಿಗಳು ಹುಟ್ಟುತ್ತವೆಂದು ಹೇಳಿದ್ದಾರೆ. ಅನ್ನರಸದಿಂದಲೇ ಉತ್ಪನ್ನವಾಗತಕ್ಕ ಇವುಗಳು ಹೇಗಾಗುತ್ತವೆಂದು ಕ್ರಮವನ್ನುಸೂಚಿಸುತ್ತಾರೆ ಆಹಾರವನ್ನುಸೇವಿಸಿದ

ಕೂಡಲೇ ಮೊದಲು ಷಡ್ರಸಯುಕ್ತವಾದ ಅನ್ನವು ಮಧುರವಾಗುತ್ತದೆಂದು ಹೇಳಿದ್ದಾರೆ. ಫೇನದಂತೆಯೂ ಮಧುರವೂ ಆದ ಆಹಾರ ಪರಿಣಾಮದಿಂದ ಮೊದಲು ಕಫವು ಉತ್ಪನ್ನವಾಗುತ್ತದೆ. ಮಧುರ ರಸದಿಂದ ಕಫೋತ್ಪತ್ತಿಯನ್ನು ಹೇಳಿ, ಈಗ ಷಡ್ರಸವೂ ಸಹ ಮಾಧುರ್ಯಹೊಂದಿದ ಕಫವಾಗುತ್ತವೆಂದು ಹೇಳುವದರಿಂದ; "ಪೂರ್ವೋಕ್ತನಿರಸನ"ವಾಗುತ್ತದೆಂದು ಅನಿಸುತ್ತದೆ. ಆದರೆ ಇಲ್ಲಿ ಆಹಾರದಲ್ಲಿಯ ಮಧುರರಸವಿಶೇಷದಿಂದ ಕಫವಾಗುತ್ತದೆ. ಉಳಿದ ರಸವಿಭಾಗಗಳ ಅಂಶವು ಕಫವಾಗುವದಿಲ್ಲ ಆಮಾಶಯದಿಂದ ಹೊರ ಹೊರಟ ನಂತರ ಗ್ರಹಿಣೀಸ್ಥಾನದಲ್ಲಿ ಪಾಚಕಾಗ್ನಿಯ ಸಹಾಯದಿಂದ ಪಚನವಾಗಬೇಕಾದರೆ, ಆಹಾರದಲ್ಲಿ ಪಿತ್ತರಸವು ಕೂಡಿ ವಿಪಕ್ವವಾಗಲು ಆದರಿಂದ ಪಿತ್ತೋತ್ಪತ್ತಿಯಾಗುತ್ತದೆ. ಆಮೇಲೆ ಪಕ್ವಾಶಯಕ್ಕೆ ಆಹಾರ ಹೋದನಂತರ ವಾಯುವಿನಿಂದ ಶೋಷಿಸಲ್ಪಟ್ಟು ಕಟುಭಾವವನ್ನುಹೊಂದಿ, ವಾಯುವನ್ನು ಹೆಚ್ಚಿಸುತ್ತದೆ ಇದು ತ್ರಿದೋಷವನ್ನು ಅನ್ನವು ಉತ್ಪನ್ನವಾಡುವ ಕ್ರಮವಾಗಿರುತ್ತದೆ. ಇನ್ನು ರಸಾದಿಧಾತುಗಳಧಾತ್ವಗ್ನಿಗಳಿಂದ, ರಸದಿಂದ ಶುಕ್ರಪರ್ಯಂತವಾದಧಾತುಗಳು "ಪ್ರಸಾದಜವಾಗಿ" ಉತ್ಪನ್ನವಾಗುತ್ತವೆ. ರಸಾಗ್ನಿಯಿಂದ ಆಹಾರ ರಸವು ಪಾಕಹೊಂದಿ ಶರೀರಧಾರಕ ರಸದ ಸಂಗಡ ಕೂಡಿಕೊಳ್ಳುವದಕ್ಕೆ ಧಾತ್ವಗ್ನಿಪಾಕವೆಂದು ಹೆಸರು. ಅದೇ ಪ್ರಸಾದಜ ರಸವು.

ಸಂಧುಕ್ಷಿತಃ ಸಮಾನೇನಪಚತ್ಯಾಮಾಶಯಸ್ಥಿತಂ ॥
ಔದರ್ಯೋಗ್ನಿರ್ಯಥಾಬಾಹ್ಯಃ ಸ್ಥಾಲೀಸ್ಥಂತೋಯತಂಡುಲಂ॥
(ವಾಗ್ಭಟ॥ ಶಾರೀರ॥ ಅ. ೩ ಶ್ಲೋ ೫೬)

ಹೇಗೆ ಪಾತ್ರೆಯಲ್ಲಿಯ ಅಕ್ಕಿನೀರನ್ನು, ಹೊರಗೆ ಅಗ್ನಿಯಿದ್ದು ಪಾತ್ರೆಯ ಸಂಯೋಗದಿಂದ ಪಚನಮಾಡುತ್ತದೆಯೋ, ಅದರಂತೇ ಆಮಾಶಯದಲ್ಲಿಯ ಅಪಕ್ವ ಅನ್ನವನ್ನು ಜಠರಾಗ್ನಿಯು ವ್ಯಾನವಾಯುವಿನಿಂದ ಉದ್ದೀಪನ (ಸಂಧುಕ್ಷಿತ) ವಾಗಿ ಪಚನಮಾಡುತ್ತದೆ

ಆದೌಷಡ್ರಸಮನ್ನಂ ಮಧುರೀಭೂತಮೀರಯೇತ್ ॥
ಫೇನೀಭೂತಂ ಕಫಂ, ಯಾತಂ ವಿದಾಹಾದವ್ಲತಾಂ ತತಃ॥೫೭॥

ಪಿತ್ತಮಾಮಾಶಯಾತ್ ಕುರ್ಯಾತ್ ಚ್ಯವಮಾನಂ, ಚ್ಯುತಂ ಪುನಃ ॥
ಅಗ್ನಿನಾಶೋಷಿತಂ ಪಕ್ವಂ ಪಿಂಡಿತಂ ಕಟುಮಾರುತಂ ॥

(ವಾಗ್ಭಟ॥ ಶಾರೀರ॥ ಅ. ೩ ಶ್ಲೋ ೫೮)

ಷಡ್ರಸೋಪೇತವಾದರೂ ಅನ್ನವು ಮೊದಲು ಮಧುರವೂ ಬುರುಗಿನಂತೆಯೂ ಆಗುತ್ತವೆ ಇದರಿಂದ ಮೊದಲನೇ ಅವಸ್ಥೆಯಲ್ಲಿ ಆಹಾರದ (ಫೇನೀ ಭೂತ) ಬುರುಗಿನಿಂದ ಕಫವಾಗುತ್ತದೆ ಆಮಾಶಯದಿಂದ ಹೊರಟ ನಂತರ ನಿರೇಷ ಪಚನದಿಂದ ಆಮ್ಲವಾಗಿ ಪಿತ್ತ ಉತ್ಪನ್ನವಾಗುತ್ತದೆ ಇದು ಆಹಾರ ಪಚನವು ಎರಡನೇ ಅವಸ್ಥೆಯಾಗಿರುತ್ತದೆ. ಗ್ರಹಣೀಸ್ಥಾನದಲ್ಲಿ ಪಚನವಾಗುತ್ತಿರಲು ಅದರಿಂದ ಪಿತ್ತೋತ್ಪತ್ತಿಯಾಗುತ್ತದೆ. ನಂತರ ಪುಲಾಶಯಕ್ಕೆ ಹೋಗಲಾಗಿ ವಾಯುವಿನಿಂದ ಶೋಷಿಸಲ್ಪಟ್ಟು ಪಿಂಡದಂತೆ (ಘಟ್ಟಿ) ಆಗುತ್ತದೆ. ಆಗ ಕಟುತ್ವ ಬರುವದರಿಂದ ವಾಯುವು ಅಧಿಕವಾಗುತ್ತದೆ. ಹೀಗೆ ಆಹಾರದಿಂದ **ಕಫ ಪಿತ್ತ ವಾತಗಳು** ಆಹಾರ ತೆಗೆದುಕೊಂಡ ನಂತರ ಪಚನಾವಸ್ಥೆಯ **ಆದಿ ಮಧ್ಯ ಅಂತ್ಯ ಸಮಯಗಳಲ್ಲಿ** ಉಂಟಾಗುತ್ತವೆ. ಇದು ಸಮಂಜಸ ವಿಚಾರವೇ ಆಗಿರುತ್ತದೆ

ಯಾಕಂದರೆ:— ಯುಕ್ತಿವಾದಪ್ರತ್ಯಕ್ಷಗಳಿಂದ ಇದು ಸಿದ್ಧಮಾಡಲ್ಪಬರುವಂತಿದೆ. ಮಧುರ ಆಮ್ಲ ಲವಣಾದಿಗಳಿಂದ ಕೂಡಿದ ಆಹಾರವನ್ನು ನಾವು ಭುಂಜಿಸುತ್ತೇವಾದ್ದರಿಂದ, ಅದರಿಂದುಂಟಾದ ರಸವು ಮಧುರವೂ ಸೌಮ್ಯಗುಣವುಳ್ಳದ್ದೂ ಯಾಕಾಗಬೇಕು? ನಾವು ಸೇವಿಸಿದ ಅನ್ನದಂತೆಯೇ ಉದ್ಭೂತ (ಪ್ರಖರ, ಸ್ಪಷ್ಟವಾದ) ಗುಣವುಳ್ಳ, ಆಮ್ಲ ಕಟುಲವಣ ಉಷ್ಣ ವೀರ್ಯಗಳಿಂದಕೂಡಿದ "**ರಸವು**" ಆಗಲೇಬೇಕು. ಹೀಗಾಗುವದಿಲ್ಲವಾದ್ದರಿಂದ ರಸದಲ್ಲಿರದ ಅನ್ಯಗುಣವುಳ್ಳ ವಿಭಾಗ ಅಂಶಗಳು, ಅನ್ಯತ್ರ ಮಿಲಿತವಾಗುತ್ತವೆನ್ನುವದು ಯುಕ್ತಿಸಿದ್ಧಾಂತವು ಹೀಗೆ ಆಹಾರದಿಂದ ಆವಾವ ರಸ ವಿಭಾಗಗಳಿಂದ ಕಫಾದಿಗಳುತ್ಪನ್ನವಾಗುವವರಿಂದ, ನಂತರ ತಯಾರಾದ ಪರಿಪಕ್ವ "**ರಸದಲ್ಲಿ**" ನಾವು ಊಟಮಾಡಬೇಕಾದರೆ ಇದ್ದಂಥ ಪ್ರಖರವಾದ ರಸವಿರು

ವದಿಲ್ಲ. ಅವ್ಯಕ್ತ ಮಧುರವೆಂದರೂ ಅಡ್ಡಿಯಿಲ್ಲ. ಇಂಥ ರಸ, ಸೌಮ್ಯಗುಣ, ಯುಕ್ತವಾದ "ರಸ"ವಾಗಿರುತ್ತದೆ ಹೀಗೆ ತಯಾರಾದ ರಸವು ದೇಹದಲ್ಲಿಯ ರಸಾದಿ ಅಗ್ನಿಗಳಿಂದ ಪಚನವಾಗುತ್ತ, ಆವಾವ ಧಾತುಸ್ಥಿತಿಯನ್ನು ಹೊಂದಿ ಅವುಗಳಲ್ಲಿ ಕೂಡಿಕೊಳ್ಳುತ್ತದೆ.

ಹೀಗೆ ಧಾತ್ವಗ್ನಿಗಳಿಂದ ಪಚನವಾಗಬೇಕಾದರೆ ದ್ವಿಪ್ರಕಾರಕ ಭೇದವುಳ್ಳ ಪಾಕವಾಗುತ್ತದೆ ಪ್ರಸಾದ (ಸಾರ), ಕಿಟ್ಟಗಳೆಂಬ ಭೇದದ್ವಯೋಪೇತವಾಗ ಪಾಕವಾಗುತ್ತದೆ. ರಸದ ಪಾಕವು ರಸಧಾತ್ವಗ್ನಿಯಿಂದ ನಡೆಯುತ್ತಿದ್ದಾಗ, ಪ್ರಸಾದ (ಸಾರ) ಭೂತವಾಗಿ ರಕ್ತವು ಉತ್ಪನ್ನವಾಗುತ್ತದೆ. ಮಲ(ಕಿಟ್ಟ)ಭೂತವಾದಕಫವುಸಂಭವಿಸುತ್ತದೆ. ಇದರಂತೆರಕ್ತಪ್ರಸಾದದಿಂದ ಮಾಂಸವೂ ಮಲರೂಪ ಪಿತ್ತವೂ ಉಂಟಾಗುತ್ತವೆ ಪೂರ್ವದಲ್ಲಿ ಜಠರಾಗ್ನಿಯಲ್ಲಿ ಪಾಕವಾಗುವಆಹಾರದಿಂದ ಕಫ ಪಿತ್ತವಾಯು ಉತ್ಪನ್ನವಾಗುವಂತೇ, ಧಾತ್ವಗ್ನಿಪಾಕದಲ್ಲಿಯೂ ರಸದಿಂದ ಕಫ, ರಕ್ತದಿಂದ ಪಿತ್ತ, ಮಲರೂಪವಾಗಿ ಸಂಭವಿಸುತ್ತವೆ. ಧಾತ್ವಾದಿ ವಾಕದಲ್ಲಿ ವಾಯುವನ್ನು ಗ್ರಹಿಸಿರುವದಿಲ್ಲ. ಮಾಂಸಪಾಕದಿಂದ ಪ್ರಸಾದರೂಪ ಮೇದಸ್ಸೂ ಮಲರೂಪವಾದ ರಂಧ್ರಗಳಲ್ಲಿಯ (ಕಿವಿ ನೇತ್ರ ನಾಸಿಕಾ ಬಾಯಿ ಜನನೇಂದ್ರಿಯಗಳಲ್ಲೆಯ) ಮಲಗಳು ಉತ್ಪನ್ನವಾಗುತ್ತವೆ. ಮೇದಸ್ಸಿನ ಪಾಕದಿಂದ ಪ್ರಸಾದ ರೂಪವಾದ ಅಸ್ಥಿಗಳೂ ಮಲರೂಪವಾದ ಬೆವರೂ ಉತ್ಪನ್ನವಾಗುತ್ತವೆ. ಅಸ್ಥಿ ಪಾಕದಿಂದ ಸಾರಭೂತವಾದ ಮಜ್ಜೆಯೂ ಮಲರೂಪವಾದ ಕೇಶ ರೋಮ ನಖಗಳೂ ಉಂಟಾಗುತ್ತವೆ. ಮಜ್ಜಾಪಾಕದಿಂದ ಸಾರಭೂತವಾದ ಶುಕ್ರವೂ ಮಲಭೂತವಾದ ಕಣ್ಣಿನಮಲದಲ್ಲೆಯ ಮತ್ತು ಚರ್ಮಗಳಲ್ಲಿಯ ಸ್ನೇಹ (ಸ್ನಿಗ್ಧತೆ) ಉಂಟಾಗುತ್ತವೆ ಶುಕ್ರವು ಎಷ್ಟೇ ಪಚನವಾದರೂ ಮಲ ಉಂಟಾಗುವದಿಲ್ಲ ಸ್ನೇಹ ಭಾಗವಾದ ಸೂಕ್ಷ್ಮತೇಜೋಭೂತ (ಸಾರ) ವಾದ ಓಜಸ್ಸು ಉಂಟಾಗುತ್ತದೆ. ಆದ್ದರಿಂದ ಶುಕ್ರವು ನಿರ್ಮಲವಾಗಿರುತ್ತದೆಂದೂ ಪುನಃ ಪುನಃ ಪಾಕ ಹೊಂದುವದಿಲ್ಲೆಂದು ಹೇಳಿದ್ದಾರೆ ಧಾತುಗಳನ್ನು ಪ್ರಸಾದ ಜನ್ಯ (ಸಾರ) ವೆಂದು ಹೇಳಿ, ಉಪಧಾತುಗಳನ್ನು ಹೇಳಿದ್ದಾರೆ ಉಪ ಧಾತುಗಳೂ ಸಹ ಸಾರಜನ್ಯವೇ ಆಗಿರುತ್ತವೆಂದು ಸಮ್ಮತಿಸಿದ್ದಾರೆ.

ಪೂರ್ವೋಕ್ತ ಅನ್ನಪಾಕಾದಿ ವಿಷಯ ವಿವರಣೆಯು:—

ಆಹಾರವನ್ನು ಪಚನಮಾಡುವ ಅಗ್ನಿಯು (ಪಿತ್ತ), ಪಾಚಕಾಗ್ನಿಯೆಂದು ಸುಶ್ರುತ ವಾಗ್ಭಟರ ಮತವು ಭೂತಧಾತ್ವಗ್ನಿಗಳೆಂದು ಆತ್ರೇಯರ ಮತವಾಗಿರುತ್ತದೆ. ಪಂಚಭೂತಗಳಅಗ್ನಿ (೫), ಧಾತ್ವಗ್ನಿ (೭), ಒಟ್ಟು (೧೭) ಅಗ್ನಿಗಳಿಂದ ಆಹಾರವು ಪಚನವಾಗುತ್ತದೆ. ಉಭಯ ಮತವನ್ನೂ ಸಂಮತಿಸಿದರೆ ಪಿತ್ತಾಗ್ನಿ (೫), ಕೂಡಿದರೆ ಹದಿನೇಳು ಅಗ್ನಿಗಳಾಗುತ್ತವೆ. ಆಹಾರ ಪಚನ ಮಾಡುವ ಅಗ್ನಿಗಳು (೧೭) ಇರುತ್ತವೆ. ಆಹಾರಮಲವು ಪುರೀಷ ಮೂತ್ರವಾಗಿರುತ್ತವೆ ಆಹಾರವು ಜಠರಾಗ್ನಿಯಿಂದ ಪಚನವಾಗಿ ರಸವಾಗುತ್ತದೆ ನಂತರಪುನಃ ಧಾತುಪಾಕವಾಗುವದರಿಂದ ದ್ವಿವಿಧಪಾಕವೆಂದು ಕೆಲವರು ಹೇಳುತ್ತಾರೆ. ಇದು ಯೋಗ್ಯವಲ್ಲ, ಯಾಕಂದರೆ ರಸದ ನಂತರ ಧಾತುಗಳ ಪಾಕದಲ್ಲಿ ಪುನಃ ಪುನಃ ಏಳು ಪಾಕಗಳು ಸಂಭವಿಸುವದರಿಂದ, ಪಾಕದ್ವಯವೆನ್ನುವದು ಸಮಂಜಸವಾಗಿರುವದಿಲ್ಲ. ಪಾಚಕಾಗ್ನಿಯಿಂದ ಸ್ಥೂಲಾಹಾರಪಚನವಾಗುವದಕ್ಕೆ ಅವಸ್ಥಾಪಾಕವೆಂದು ಅನ್ನುತ್ತಾರೆ. ಅವಸ್ಥಾಪಾಕವೆಂದರೆ ಊಟ ಮಾಡಿದ ನಂತರ ಪ್ರಥಮ ಮಧ್ಯಮ ಅಂತ್ಯವೆಂಬ ಪಚನಕ್ರಿಯೆ ಪೂರ್ಣವಾಗುವ ವರೆಗಿನ ಸ್ಥಿತಿಯಾಗಿರುತ್ತದೆ. ಈ ಅವಸ್ಥಾಪಾಕಜರಸವು ಧಾತ್ವಗ್ನಿಗಳಿಂದ ಪಚನವಾಗುವದಕ್ಕೆ ನಿಷ್ಠಾಪಾಕವೆಂದು ಹೇಳುತ್ತಾರೆ. ನಿಷ್ಠಾಪಾಕವೆಂದರೆ ನಿಯತವಾದ ಅಥವಾ ಕಡೆಯದ್ದಾದ ಪಚನರೀತಿಯೆಂದು ತಿಳಿಯಬೇಕು. ಇದರಿಂದ ಆದಿಯ ಪಚನಕ್ರಿಯೆಯು ಅವಸ್ಥಾಪಾಕವೆಂದೂ ನಂತರನಿಷ್ಠಾಪಾಕವೆಂದೂ ಹೇಳುವದರಿಂದ, ಎರಡು ಪಾಕವೆನ್ನುವದಕ್ಕೆ ಸ್ಥಾನವೇಇರುವದಿಲ್ಲ. ರಸದಲ್ಲಿಯಾದರೂ ಧಾತ್ವಗ್ನಿಯುಳ್ಳ ರಸವು, ಅದರಿಂದ ಪಕ್ವವಾಗುವ ರಸ ಹೀಗೆ ಎರಡು ರಸಗಳೆಂದು ಅನಿಸಬಹುದು. ಇಲ್ಲಿಯೂ ಸಹ ಪೋಷ್ಯ ಪೋಷಕ ಅಥವಾ ಸ್ಥಾಯೀ ಪೋಷಕರಸಗಳೆಂದು ಎರಡು ವಿಧರಸಗಳೆಂದು ಆಕ್ಷೇಪ ಬರುತ್ತದೆ. ಆಹಾರಜ ರಸವು ಧಾತ್ವಾದಿ ಪೋಷಕವಾದ್ದರಿಂದ ಪೋಷಕ ರಸವೆಂದೂ, ಧಾತ್ವಗ್ನಿಯುಳ್ಳ ರಸವು ಆಹಾರಜ ರಸವನ್ನು ಪಚನ ಮಾಡುವದರಿಂದ ಸ್ಥಾಯೀ ರಸವೆಂದೂ ಹೇಳುತ್ತಾರೆ. ಪರಸ್ಪರಾನುಗ್ರಹ ಕ್ರಿಯಾ ವಿಶೇಷ

ಗಳಿಂದಲೂ ಸಪ್ತಧಾತು ನಿರ್ದೇಶದಿಂದಲೂರಸದ್ವಯಸಿದ್ಧಾಂತವು ಸಮಂಜಸವಾಗುವದಿಲ್ಲ ಮತ್ತು ಗುಣಧರ್ಮಾದಿಗಳಿಂದ ಭೇದವುಉಪಪನ್ನವಾಗಿರುವದಿಲ್ಲ. ಆದ್ದರಿಂದ ದ್ವಿವಿಧ ರಸವನ್ನು ಹೇಳಿಲ್ಲ

ಅನ್ಯಮತಗಳು.— ಧಾತುಗಳು ತ್ರಿವಿಧವಾಗಿವಾಕವೈಶಿಷ್ಟ್ಯದಿಂದ, ನಿಷ್ಪನ್ನವಾಗುತ್ತವೆಂದು . ಕೆಲವರು ಹೇಳುತ್ತಾರೆ **ಸ್ಥೂಲ, ಸೂಕ್ಷ್ಮ (ಅಣು), ಮಲ,** ಭೇದಗಳಿಂದ ಧಾತುಗಳು ಮೂರು ಪ್ರಕಾರವಾಗುತ್ತವೆಂದು ಹೇಳಿದ್ದಾರೆ

ಅನ್ನವು ಪಚನವಾಗುತ್ತಿರಲು ಅದರಿಂದ, ಪುರೀಷಮೂತ್ರಗಳು ಮಲರೂಪವಾಗಿ ಸಂಭವಿಸುತ್ತವೆ. ಸಾರಭಾಗವು ರಸವಾಗಿರುತ್ತದೆ ಅಲ್ಲಿ ಅವಸ್ಥಾರೂಪದಿಂದ ಕಫ ಪಿತ್ತ ವಾಯುಗಳುಂಟಾಗುತ್ತವೆ ಧಾತ್ವಗ್ನಿಯಿಂದ ರಸವು ಪಾಕವಾಗುತ್ತಿರಲು ಸ್ಥೂಲ ಭಾಗವು ರಸವು, ಸೂಕ್ಷ್ಮ ಭಾಗವು ರಕ್ತವು. ಮಲಭಾಗವು ಕಫವಾಗಿರುತ್ತದೆ ರಕ್ತದ ಪಾಕವಾಗುತ್ತಿರಲು ಸ್ಥೂಲ ಭಾಗವು ರಕ್ತವು, ಸೂಕ್ಷ್ಮ (ಅಣು) ಭಾಗವು ಮಾಂಸವು, ಮಲಭಾಗವು ಪಿತ್ತವಾಗಿರುತ್ತದೆ. ಇದರಂತೆ ಮುಂದಿನ ಧಾತುಗಳನ್ನು ತಿಳಿಯಬೇಕು ಹೀಗೆ ಮೂರು ವಿಧವಾಗಿ ಪಾಕದಿಂದ ಧಾತು ನಿಷ್ಪತ್ತಿಯೆಂದು ಹೇಳಿದ್ದಾರೆ

ಸ್ಥೂಲಾಣ್ವಂಶಮಲೈಃ ಸರ್ವೇಭಿದ್ಯಂತೆಧಾತವಸ್ತ್ರೀಧಾ ॥
ಸ್ವಃ ಸ್ಥೂಲೋಽಂಶಃ ಪರಂಸೂಕ್ಷ್ಮಃ ತನ್ಮಲಂಯಾತಿತನ್ಮಲಃ॥
ಸ್ವಾಗ್ನಿಭಿಃ ಪಚ್ಯಮಾನೇಷುಮಲಃ ಷಟ್ಸುರಸಾದಿಷು ॥
ನಶುಕ್ರೇಪಚ್ಯಮಾನೇಽಪಿಹೇಮನೀವಾಕ್ಷಯೇ ಮಲಃ ॥

(ತಂತ್ರಾಂತರೆ)

ರಸಾದಿ ಧಾತುಗಳು ಸ್ಥೂಲ ಅಣು (ಸೂಕ್ಷ್ಮ) ಮಲ ಭೇದಗಳಿಂದ ಮೂರು ಪ್ರಕಾರವಾಗಿರುತ್ತವೆ ತಾನು ಸ್ಥೂಲವಾದದ್ದು, ಅದರಿಂದುತ್ಪನ್ನವಾಗುವ ಧಾತು ಸೂಕ್ಷ್ಮವು, ಅದರಿಂದುಂಟಾಗುವ ಮಲ, ಹೀಗೆ ಧಾತುಗಳಲ್ಲಿ ಮೂರು ವಿಭಾಗಗಳೆಂದು ಹೇಳಿದ್ದಾರೆ. ಸ್ವಧಾತ್ವಗ್ನಿಗಳಿಂದ ರಸಾದಿ

ಗಳು ಪಾಕವಾಗುತ್ತಿರಲು ರಸಾದಿ ಷಡ್ಧಾತುಗಳಿಂದಲೂ ಮಲವು ಉಂಟಾಗುತ್ತವೆ. ಶುಕ್ರವು ಪಾಕವಾಗಲು ಅಗ್ನಿಯಿಂದ ಭಂಗಾರವನ್ನು ಎಷ್ಟೇಕಾಸಿ ಕಾಗಿಸಿದರೂ ಮಲವಿಲ್ಲದೇ ನಿರ್ಮಲವಿರುತ್ತದೆಯೋ, ಅದರಂತೇ ಮಲ ಉತ್ಪನ್ನವಾಗದೆ ಶುಕ್ರವು ನಿರ್ಮಲವಾಗಿರುತ್ತದೆ ಶುಕ್ರದಿಂದ ಮಲವು ಉತ್ಪನ್ನವಾಗುವದಿಲ್ಲೆಂಬರ್ಥವು ಶುಕ್ರಪಾಕವು ಆಗುತ್ತಿರಲು ಸಾರಭೂತ ಅಣುಅಂಶ ಓಜಸ್ಸು ಉತ್ಪನ್ನವಾಗುತ್ತವೆ ಚರಕಾಚಾರ್ಯರು ಗರ್ಭವೂ ಸಹ ಶುಕ್ರದ ಸಾರಾಂಶವೆಂದು ಹೇಳುತ್ತಾರೆ

ರಸಾದಿಗಳಿಂದ ಉಪಧಾತುಗಳುಂಟಾಗುತ್ತವೆ ಸ್ತನ್ಯರಜಸ್ಸು ಮೊದ ಲಾದವುಗಳುಸ್ವಾಭಾವಿಕವಾಗಿಉತ್ಪನ್ನವಾಗುತ್ತವೆ. ಅಸ್ವಾಭಾವಿಕಧಾತುಗಳಿಂದ ಉತ್ಪನ್ನವಾಗುವದಿಲ್ಲ. ಉಪಧಾತುಗಳು ಯಾವವೆಂದು ಹಿಂದೆ ವಿವರಿಸಲ್ಪಟ್ಟಿರುತ್ತವೆ.

ವಿಪಾಕವಿಶೇಷದಿಂದ ಮೂರು ವಿಧರಸಗಳು

ಮಧುರೋಹೃದಯಾದೂರ್ಧ್ವಂ ರಸಃ ಕೋಷ್ಠೇವ್ಯವಸ್ಥಿತಃ ॥
ತತಃ ಸಂವರ್ಧತೇಶ್ಲೇಷ್ಮಾ ಶರೀರಬಲವರ್ಧನಃ ॥೧॥

ನಾಭೀಹೃದಯಮಧ್ಯೇಚರಸಸ್ತ್ವಮ್ಲೋವ್ಯವಸ್ಥಿತಃ ॥
ಸ್ವಭಾವೇನಮನುಷ್ಯಾಣಾಂ ತತಃ ಪಿತ್ತಂ ವಿವರ್ಧತೇ ॥೨॥

ಅಧೋನಾಭ್ಯಾಸ್ತು ಖಲ್ವೇಕಃ ಕಟುಕೋವ್ಯವಸ್ಥಿತೋರಸಃ ॥
ಪ್ರಾಯಃ ಶ್ರೇಷ್ಠತಮಸ್ತತ್ರ ಪ್ರಾಣಿನಾಂ ವರ್ಧತೇನಿಲಃ ॥೩॥

(ತಂತ್ರಾಂತರೆ)

ಹೃದಯದ ಮೇಲ್ಭಾಗದ ಕೋಷ್ಠದಲ್ಲಿ ಮಧುರ ರಸವು ಇರುತ್ತದೆ ಅದರಿಂದ ಶರೀರ ಬಲವನ್ನು ವರ್ಧನೇ ಮಾಡುವ ಕಫವು ಉತ್ಪನ್ನವಾಗುತ್ತದೆ. ಹೃದಯ ನಾಭಿಗಳ ಮಧ್ಯ ಪ್ರದೇಶದಲ್ಲಿ, ಚಲಿಸುತ್ತಿರುವ ಅಮ್ಲ (ಹುಳಿ) ರಸವು ಇರುತ್ತದೆ ಸ್ವಾಭಾವಿಕವಾಗಿ ಅಮ್ಲರಸದಿಂದ ಪಿತ್ತವು

ಉತ್ಪನ್ನವಾಗುತ್ತದೆ. ನಾಭಿಯ ಕೆಳಭಾಗದಲ್ಲಿ ಕಟು (ಖಾರ) ರಸವು ಇರುತ್ತದೆ ಬಹುಶಃ ಶ್ರೇಷ್ಠವಾದ ವಾಯುವು ಅಲ್ಲಿಂದಲೇ ಉಂಟಾಗುತ್ತದೆ. ಹೀಗೆ ತ್ರಿವಿಧವಾದ ಕೋಷ್ಠ ಸ್ಥಾನದಲ್ಲಿರುವ ರಸಗಳನ್ನು ತಂತ್ರಾಂತರದಲ್ಲಿ ಹೇಳಿದ್ದಾರೆ.

ದೇಹದಲ್ಲಿಯಭೌತಿಕಾಗ್ನಿಯಭೇದಗಳು

ಪಂಚಭೂತಾತ್ಮಕ ಅಗ್ನಿಗಳು

ಭೌಮಾಪ್ಯಾಗ್ನೇಯವಾಯವ್ಯಾಃಪಂಚೋಷ್ಮಾಣಃ ಸನಾಭಸಾಃ॥
ಪಂಚಾಹಾರಗುಣಾನ್ ಸ್ವಾನ್ ಸ್ವಾನ್ ಪಾರ್ಥಿವಾದೀನ್ ಪಚಂತಿಹಿ ॥ (ಚರಕ॥ ಚಿಕಿತ್ಸಾ॥ ಅ. ೧೫ ಶ್ಲೋ. ೧೩)

ಪೃಥವೀ ಆಪ್ಯ ಆಗ್ನೇಯ ವಾಯವ್ಯ ಆಕಾಶೀಯವಾದ ಪಂಚ ಅಗ್ನಿಗಳು, ಪೃಥಿವ್ಯಾದಿಗುಣವುಳ್ಳ ಪಾಂಚಭೌತಿಕ ಆಹಾರ ದ್ರವ್ಯಗಳನ್ನು ಪಚನ ಮಾಡುತ್ತವೆ ದೇಹದಲ್ಲಿರುವ ಪೃಥಿವ್ಯಾದಿ ಪಾಂಚಭೌತಿಕ ವಿಭಾಗಗಳಲ್ಲಿ ಭೂತಾತ್ಮಕ ಅಗ್ನಿಗಳು ಇರುತ್ತವೆ.

ಭೌತಿಕಾಹಾರಗುಣ

ಯಥಾ ಸ್ವಂಸ್ವಂ ಚ ಪುಷ್ಣಂತಿದೇಹೇದ್ರವ್ಯಗುಣಾಃ ಪೃಥಕ್ ॥
ಪಾರ್ಥಿವಾಃ ಪಾರ್ಥಿವಾನೇವಶೇಷಾಃ ಶೇಷಾಂಶ್ಚ ಕೃತ್ಸ್ನಶಃ ॥
(ಚರಕ॥ ಚಿಕಿತ್ಸಾ॥ ಅ ೧೫ ಶ್ಲೋ. ೧೪)

ದೇಹದಲ್ಲಿರುವ ಸ್ವಕೀಯವಾದ ದ್ರವ್ಯಗುಣಗಳುಳ್ಳ ಭೌತಿಕ ಪದಾರ್ಥಗಳನ್ನು, ಆಹಾರದಲ್ಲಿರುವ ಭೌತಿಕದ್ರವ್ಯಗಳು ಪೋಷಣೆಯನ್ನುಮಾಡುತ್ತವೆ ಅರ್ಥಾತ್, ಸಜಾತೀಯ ದ್ರವ್ಯಗುಣಗಳು ದೇಹದಲ್ಲಿಯ ಸಜಾತೀಯ ದ್ರವ್ಯಗುಣಗಳನ್ನು ಪೋಷಿಸುತ್ತವೆ. ಪಾರ್ಥಿವ ದ್ರವ್ಯಗುಣಗಳು ಪಾರ್ಥಿವ ದ್ರವ್ಯಗುಣಗಳನ್ನು ಪೋಷಿಸುತ್ತವೆ. ಉಳಿದ ಭೌತಿಕವಾದ ದ್ರವ್ಯಗುಣಗಳು ಸ್ವಕೀಯ ದ್ರವ್ಯಗುಣಗಳನ್ನು ಪೋಷಿಸುತ್ತವೆ.

ಧಾತ್ವಗ್ನಿಗಳು

ಸಪ್ತಭಿರ್ದೇಹಧಾತಾರೋಧಾತವೋದ್ವಿವಿಧಂ ಪುನಃ ॥
ಯಥಾಸ್ವಮಗ್ನಿಭಿಃ ಪಾಕಂ ಯಾಂತಿಕಿಟ್ಟಪ್ರಸಾದವತ್ ॥

(ಚರಕ॥ ಚಿಕಿತ್ಸಾ॥ ಅ ೧೫ ಶ್ಲೋ ೧೫)

ದೇಹದಲ್ಲಿರ ವ ದೇಹಧಾರಕವಾದ ರಸಾದಿಧಾತುಗಳು, ಸ್ವಕೀಯವಾದ (೭) ಧಾತ್ವಗ್ನಿಗಳಿಂದ ಪ್ರಸಾದ (ಸಾರ) ಕಿಟ್ಟ ರೂಪವುಳ್ಳ, ಎರಡು ವಿಧ ಪಾಕವನ್ನುಹೊಂದುತ್ತವೆ ಜರರಾಗ್ನಿ ಪಾಕವಾದ ನಂತರ ರಸಧಾತುವು ಧಾತುಪಾಕವನ್ನುಹೊಂದುತ್ತದೆ. ಸ್ಥೂಲ ಸೂಕ್ಷ್ಮ (ಅಣು) ಮಲರೂಪ ಪಾಕಗಳು ಹಿಂದೆ ವಿವರಿಸಲ್ಪಟ್ಟಿರುತ್ತವೆ. ಇಲ್ಲಿ ಸಾರ (ಪ್ರಸಾದ) ಕಿಟ್ಟಗಳೆಂಬ ಎರಡು ವಿಧಗಳನ್ನೇ ಹೇಳಿದ್ದಾರೆ "ಪುನಃ" ಎನ್ನುವ ಶಬ್ದವನ್ನಿಟ್ಟಿರುವದರಿಂದ ಸಾಮಾನ್ಯತಃ ಜರರಾಗ್ನಿಪಾಕಾ ನಂತರದಲ್ಲಿಯ ಪಾಕವಾದ್ದರಿಂದ, ಎರಡು ಪಾಕವೆಂಬ ಭ್ರಮವು ಉತ್ಪನ್ನವಾಗುತ್ತದೆ ಅದು ಭ್ರಮವೇ ವಿನಾ ಸತ್ಯವಾಗಿರುವದಿಲ್ಲ. ಯಾಕೆಂದರೆ, ಅವಸ್ಥಾಪಾಕವೆಂದು ಹೇಳಿರುವದರಿಂದ ನಿಷ್ಠಾ (ನಿಯತ) ಪಾಕವಿದೆಯೆಂದೂ ಪಾಕನಿಷ್ಪತ್ತಿಆಗಿಲ್ಲವೆಂದೂ ಸಿದ್ಧವಾಗುತ್ತದೆ. ನಿಷ್ಠಾಪಾಕಾನಂತರವೇ ಪಾಕಪೂರ್ಣತೆಯನ್ನು ಹೇಳಿದ್ದಾರೆ. ಹಾಗಿಲ್ಲವಾದರೆ ಪೂರ್ವದಲ್ಲಿಯದು ಅವಸ್ಥಾಪಾಕವೆಂದು ಹೇಳದೇ ಪೂರ್ಣಪಾಕವೆಂದು ಹೇಳುತ್ತಿದ್ದರು ಆದ್ದರಿಂದ ಅನೇಕಸಲ ಪಾಕವಾಗುವ ವಿಚಾರವನ್ನು ವಿಮರ್ಶೆಯಿಂದ ಸಿದ್ಧಮಾಡಿ, ಪಾಕ ಪೂರ್ಣವಾದ ನಂತವೇ ರಸ ಸ್ಥಿತಿಯೆಂದು ಹೇಳಿದ್ದಾರೆ

ಪಾಚಕಾಗ್ನಿಪಾಕವೇಮುಖ್ಯ

ಇತಿಭೌತಿಕಧಾತ್ವನ್ನಪಕ್ತ್ರೃಣಾಂ ಕರ್ಮಭಾಷಿತಂ ॥
ಅನ್ನಸ್ಯಪಕ್ತಾ ಸರ್ವೇಷಾಂ ಪಕ್ತ್ರೃಣಾಮುಧಿಪೋಮತಃ ॥

(ಚರಕ॥ ಚಿಕಿತ್ಸಾ॥ ಅ ೧೫ ಶ್ಲೋ ೩೮)

ಭೌತಿಕ ದ್ರವ್ಯ ಧಾತು ಅನ್ನಗಳನ್ನು ಪಚನ ಮಾಡುವ ಅಗ್ನಿಗಳ ಕರ್ಮವು ವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತದೆ ಅನ್ನವನ್ನು ಪಚನಮಾಡುವ ಜಠರಾಗ್ನಿಯೇ ಸರ್ವ ಅಗ್ನಿಗಳಿಗೂ ಮುಖ್ಯ (ಅಧಿಪ) ವಾದದ್ದಿರುತ್ತದೆ. ಅರ್ಥಾತ್ ಜಠರಾಗ್ನಿಯಿಂದಲೇ ಸರ್ವಅಗ್ನಿಗಳೂ ಪ್ರಭಾವ ಹೊಂದಿ ತಮ್ಮ ಕರ್ತವ್ಯವನ್ನು ಮಾಡುತ್ತವೆ ಆದ್ದರಿಂದ ಧಾತ್ವಾದಿ ಎಲ್ಲ ಅಗ್ನಿಗಳಲ್ಲಿ ಅನ್ನ ಪಾಚಕ ಜಠರಾಗ್ನಿಯೇ ಮುಖ್ಯವಾದದ್ದೂ, ಅದರ ಪ್ರಭಾವದಿಂದಲೇ ಎಲ್ಲ ಅಗ್ನಿಗಳ ಕಾರ್ಯ ನಡೆಯುವದರಿಂದ ಅದೇ ಪ್ರಧಾನವಾಗಿರುತ್ತದೆ

ಭೌತಿಕಾಗ್ನಿ [೫], ಧಾತ್ವಗ್ನಿ [೭], ಪಿತ್ತಾಗ್ನಿ [೫], ಅನ್ನ ಪಾಚಕವಾದ ಜಠರಾಗ್ನಿ [೧], ಸರ್ವ ಅಗ್ನಿಗಳು ಕೂಡಿ [೧೮], ಅಗ್ನಿ ಗಳೆಂದು ವಿವರಣೇ ಮಾಡಿದ್ದಾರೆ

ಅನ್ಯಮತವು ಪೂರ್ವೋಕ್ತ ಈ ಅಗ್ನಿಗಳ ಹೊರತಾಗಿ, ಉಪಧಾತು ಮಲಗತ ಅಗ್ನಿಗಳು ಸಹ ಇರುತ್ತವೆ. ಇವುಗಳು ಸಹ ಪಚನ ಕ್ರಿಯೆ ಯನ್ನುಂಟು ಮಾಡುವದರಿಂದ ಗ್ರಹಿಸಬೇಕೆಂದು ಹೇಳುತ್ತಾರೆ. ಗ್ರಹಿಸಲು ತೊಂದರೆಯೇನಿಲ್ಲ, ವಿಶೇಷ ಪ್ರಾಧಾನ್ಯವಿಲ್ಲದ್ದರಿಂದಲೂ ಅಲ್ಪ ಕರ್ತವ್ಯ ಮಾಡುವದರಿಂದಲೂ ಪ್ರತ್ಯೇಕ ಹೇಳಿರುವದಿಲ್ಲ. ಈ ಪೂರ್ವೋಕ್ತ ಅಗ್ನಿ ಗಳಲ್ಲಿಯೇ ಸಮಾವೇಶವಾಗುತ್ತವೆ.

ಗುದವು

ತತ್ರಸ್ಥೂಲಾಂತ್ರಪ್ರತಿಬದ್ಧಮರ್ಧಪಂಚಾಂಗುಲಂ ಗುದವಾ ಹುಃ, ತಸ್ಮಿನ್ ವಲಯಸ್ತಿಸ್ರೋಽಧ್ಯರ್ಧಾಂಗುಲಾಂತರಸಂ ಭೂತಾಃ ಪ್ರವಾಹಣೇ ವಿಸರ್ಜನೇ ಸಂವರಣೇಚೇತಿಚತುರಂ ಗುಲಾಯತಾಃ; ಸರ್ವಾಸ್ತಿರ್ಯಗೇಕಾಂಗುಲೋಚ್ಛ್ರಿತಾಃ॥

(ಸುಶ್ರುತ॥ ನಿದಾನ॥ ಅ ೨ ಸೂ ೫)

ಸ್ಥೂಲಾಂತ್ರದಲ್ಲಿ ಪ್ರತಿಬದ್ಧವಾದ ಗುದವು (೪॥) ಅಂಗುಲ ಉದ್ದವಾದದ್ದಿರುತ್ತದೆಂದು ಹೇಳುತ್ತಾರೆ. **"ಅರ್ಧ ಪಂಚಾಂಗುಲಂ" ಅರ್ಧೇನೋನಾನಿ ಪಂಚ ಅಂಗುಲಾನಿ ಯಸ್ಯಸೌ॒ ಅರ್ಧಪಂಚಾಂಗುಲಃ॥** (ಸಾರ್ಧ ಚತುರಂಗುಲ ಇತ್ಯರ್ಥಃ) ಶಾಕ ಪಾರ್ಥಿವಾದಿತ್ವಾತ್ ಸಮಾಸಃ॥ ಏವಂ **"ಅರ್ಧ ಪಂಚಾಂಗುಲಂ"** (೪॥) ಅಂಗುಲ ಪ್ರಮಾಣಮಿತಿಸಿದ್ಧಂ॥

ಪೂರ್ವೋಕ್ತ ಪ್ರಮಾಣವುಳ್ಳ ಗುದ ನಲಿಕೆಯಲ್ಲಿ ಮೂರುವಲಿಗಳು ಇರುತ್ತವೆ [೧] **ಪ್ರವಾಹಣೀ,** [೨] **ವಿಸರ್ಜನೀ,** [೩] **ಸಂವರಣೀ** ಹೀಗೆ ಮೂರು ವಲಿಗಳು ಗುದ ಪ್ರದೇಶದಲ್ಲಿರುತ್ತವೆ. ಪ್ರತಿಯೊಂದು ವಲಿಗಳು (೧॥) ಅಂಗುಲ ಉದ್ದವಿರುತ್ತವೆ (೧-೨) ವಲಿಗಳು (೧॥) ಅಂಗುಲೀ ಪ್ರಮಾಣವುಳ್ಳವಾಗಿರುತ್ತವೆ. (೩) ನೇ ವಲಿಯು (೧) ಅಂಗುಲಪ್ರಮಾಣವುಳ್ಳದ್ದಿರುತ್ತದೆ (॥) ಅಂಗುಲ ಪ್ರಮಾಣದಷ್ಟು ಗುದದ ಓಷ್ಠ ಭಾಗವಿರುತ್ತದೆ. ಆದ್ದರಿಂದ ಕಡೆಯದಾದ ಸಂವರಣೀ ವಲಿಯು ಪ್ರಮಾಣದಲ್ಲಿ ಗುದಾಚ್ಛಾದಕ ಭಾಗವು (॥) ಅಂಗುಲವಿರುವದರಿಂದ, (೧) ಅಂಗುಲ ಪ್ರಮಾಣವುಳ್ಳ ವಲಿಯೆಂದು ತಿಳಿಯಬೇಕು.

(೧) **ಮಲಪ್ರವಹಣಾದಂತಃ "ಪ್ರವಾಹಣೀ"** ಒಳಗಡೆಯಲ್ಲಿ ಮಲವನ್ನು ಪ್ರವಹಿಸುತ್ತದೆಯಾದ್ದರಿಂದ ಪ್ರವಾಹಣಿಯೆಂದು ಹೇಳಿದ್ದಾರೆ. **"ಪ್ರವಾಹಯತೀತಿ ಪ್ರವಾಹಣೀ".**

(೨) ಪ್ರವಹತೋಮಲಸ್ಯ ಬಹಿರ್ವಿಸರ್ಜನಾತ್ **"ವಿಸರ್ಜನೀ"** ತನ್ನ ಸ್ಥಾನದಲ್ಲಿ ಬಂದಿರುವ ಮಲವನ್ನು ಹೊರಗೆ ಹಾಕುವದರಿಂದ **ವಿಸರ್ಜನೀ** ಯೆಂದು ಹೆಸರು. **"ವಿಸೃಜತೀತಿ ವಿಸರ್ಜನಿ".**

ಮಲಸ್ಯ ಸಂವರಣಾತ್ "ಸಂವರಣೀ" ಮಲವನ್ನು ಮುಚ್ಚುವದರಿಂದ **ಸಂವರಣಿ**ಯೆಂದು ಹೇಳುತ್ತಾರೆ. ಮಲನಿರ್ಗಮನ ನಂತರ ಪುನಃ ದ್ವಾರವನ್ನು ಮುಚ್ಚಿಬಿಡುತ್ತದೆಯಾದ್ದರಿಂದ ಗುದದ್ವಾರಕ್ಕೆ ಇದು **ಸಂವರಣಿ**ಯಾಗಿರುತ್ತದೆ. **"ಸಂವೃಣೋತೀತಿಸಂವರಣೀ".**

ಮೇಲ್ಗಡೆಯಲ್ಲಿ ಮೊದಲಿರುವ ವಲಿಯೆಂದರೆ "**ಪ್ರವಾಹಣಿ**"ಯಾಗಿರುತ್ತದೆ ಅದರ ನಂತರ ಮಧ್ಯದ್ದಾದ "**ವಿಸರ್ಜನೀ**" ವಲಿಯು ಬಹಿದ್ವಾರದಲ್ಲಿರುವ ಕಡೇಯದಾದ "**ಸಂವರಣೀ**" ಎಂಬ ವಲಿಯಾಗಿರುತ್ತದೆ. ಹೀಗೆ ಮೇಲಿನಿಂದ ಕೆಳವರೆಗೆ ಕೂಡಿ (೩) ವಲಿಗಳಿರುತ್ತವೆ. ಕಡೇವಲಿಯಾದ ಸಂವರಣಿಯನಂತರ ಅರ್ಧಾಂಗುಲ ಪ್ರಮಾಣ ಗುದೌಷ್ಠ್ಯವಿರುತ್ತದೆ. ಮೂಲ ವ್ಯಾಧಿ ಮೊದಲಾದ ಗುದರೋಗಗಳಲ್ಲಿ ಸ್ಥಾನ ಜ್ಞಾನವಾಗಲೆಂದು ಪ್ರಮಾಣವನ್ನು ಹೇಳಿದ್ದಾರೆ. ಮೂರು ವಲಿಗಳು ಕೂಡಿದ (೪॥) ಅಂಗುಲ ಪ್ರಮಾಣವು ಗುದವು ಸಂಕುಚಿತ ಸ್ಥಿತಿಯಲ್ಲಿದ್ದಾಗಿನ ಪ್ರಮಾಣವಾಗಿರುತ್ತದೆ ವಿಕಸನವಾದಾಗ ೫ ಅಥವಾ ೬ ಅಂಗುಲ ಪ್ರಮಾಣವಾಗಿರುತ್ತದೆ. ಆದ್ದರಿಂದ ಕರ್ಣೋಯಂತ್ರ ಪ್ರಮಾಣವನ್ನು ಇದರಂತೇ ಹೇಳಿದ್ದಾರೆ. ಬಸ್ತಿ ನಲಿಕಾ ಮೊದಲಾದವುಗಳನ್ನು ಸಹ ಈ ಪ್ರಮಾಣದಂತೇ ತಿಳಿಯಬೇಕು

(೫೪) ಅಸ್ಥಿ ವಿವರಣೆ

ಅಭ್ಯಂತರಗತೈಃ ಸಾರೈಃ ಯಥಾತಿಷ್ಠಂತಿಭೂರುಹಾಃ ॥
ಅಸ್ಥಿಸಾರೈಸ್ತಥಾದೇಹಾಧ್ರಿಯಂತೇದೇಹಿನಾಂ ಧ್ರುವಂ ॥
ಯಥಾಹಿಸಾರೋವೃಕ್ಷಸ್ಯತಿಷ್ಠತ್ಯಭ್ಯಂತರಾಶ್ರಿತಃ ॥
ಏವಮಸ್ಥೀನಿಜಂತೂನಾಂ, ಶರೀರಂಧ್ರಿಯತೇತುತೈಃ ॥
ತಸ್ಮಾಚ್ಚಿರವಿನಷ್ಟೇಷುತ್ವಙ್ಮಾಂಸೇಷುಶರೀರಿಣಾಂ ॥
ಅಸ್ಥೀನಿನವಿನಶ್ಯಂತಿಸಾರಾಣ್ಯೇತಾನಿದೇಹಿನಾಂ ॥
ಮಾಂಸಾನ್ಯತ್ರನಿಬದ್ಧಾನಿಸಿರಾಭಿಃ ಸ್ನಾಯುಭಿಸ್ತಥಾ ॥
ಅಸ್ಥೀನ್ಯಾಲಂಬನಂ ಕೃತ್ವಾನಶೀರ್ಯಂತೇಪತಂತಿವಾ ॥

(ಸುಶ್ರುತ॥ ಶಾರೀರ॥ ೫ ೫ ಶ್ಲೋ ೨೩)

ಒಳಗಡೆಯಲ್ಲಿರುವ ಘಟ್ಟಿಯುಳ್ಳ ಸಾರಭಾಗಗಳನ್ನವಲಂಬಿಸಿ ವೃಕ್ಷಗಳು ಸ್ಥಿರವಾಗಿ ನಿಲ್ಲುತ್ತವೆಯೋ, ಅದರಂತೆ ಒಳಗಡೆಯಲ್ಲಿರುವ ಅಸ್ಥಿಸಾಮರ್ಥ್ಯದಿಂದ ದೇಹವು ಧಾರಣಾವಾಡಲ್ಪಡುತ್ತದೆ. ವೃಕ್ಷವು ಸ್ಥಿರವಾಗಿ ನಿಲ್ಲ

ಲಿಕ್ಕೆ ಒಳಗಡೆಯಲ್ಲಿ ಘಟ್ಟಿಮುಟ್ಟಾದ ಸ್ಥಿರಸಾರಭಾಗಗಳಿರುತ್ತವೆ ಹಾಗೆಯೇ ದೇಹವುಸ್ಥಿರವಾಗಿ ನಿಲ್ಲಲಿಕ್ಕೆ ಒಳಗಡೆ ಕಠಿಣವಾದ ಸಾರಭೂತ ಅಸ್ಥಿಗಳು ಇರುತ್ತವೆ. ಈ ಅಸ್ಥಿಗಳಿಂದ ಶರೀರವು ಸ್ಥಿರವಾಗಿ ಧರಿಸಲ್ಪಟ್ಟಿರುತ್ತದೆ. ಹೀಗಿರುವದರಿಂದ, ದೇಹದಲ್ಲಿಯ ಸ್ಥಿರವೂ (ಕಠಿಣ) ಸಾರಭೂತವೂ ಆದ ಅಸ್ಥಿಗಳು, ಚರ್ಮ ಮಾಂಸಗಳು ಬಹಳ ಸೊರಗಿ ಕರಗಿದರೂ ಕೂಡ; ಕ್ಷೀಣವಾಗುವದಿಲ್ಲ. ಮಾಂಸಾದಿಗಳು ಸೊರಗಿ ಕರಗಿ ಹೋದರೂ ಅಸ್ಥಿಗಳು ಕ್ಷೀಣವಾಗುವದಿಲ್ಲವಾದ್ದರಿಂದ, ದೇಹದಸಾರವೇ ಅಸ್ಥಿಗಳೆಂದು ಹೇಳುತ್ತಾರೆ ದೇಹಧಾರಕವಾದ ಅಸ್ಥಿಗಳಲ್ಲಿ ಮಾಂಸವಿಭಾಗಗಳು ಸ್ನಾಯುಸಿರಾಗಳಿಂದ ಕಟ್ಟಲ್ಪಟ್ಟಿರುತ್ತವೆ. ಸ್ನಾಯುಸಿರಾಗಳಿಂದ ಪ್ರತಿಬದ್ಧವಾದ ಮಾಂಸಗಳು ಅಸ್ಥಿಗಳನ್ನವಲಂಬಿಸಿ ಸ್ಥಿರ ಧೃಡವಾಗಿರುತ್ತವೆ. ಹೀಗೆ ಯೋಗ್ಯ ಸ್ಥಾನ ಸಂನ್ನಿವೇಶೋಚಿತವಾಗಿರುವದರಿಂದ, ಆವಾವ ಸ್ಥಾನಿಕ ಮಾಂಸಾದಿಗಳ್ಳ ಬೀಳದೆ ಸ್ಥಿರವಾಗಿ ನಿಲ್ಲುತ್ತವೆ. ವಸ್ತುತಃ ದೇಹಕ್ಕೆ ಅಸ್ಥಿಗಳು ಆಧಾರಸ್ತಂಭವಾಗಿರುತ್ತವೆ. ಇಷ್ಟೇ ಅಲ್ಲದೆ ಅಸ್ಥಿಯು ಶರೀರಪೋಷಕವಾದ ಧಾತುವುಸಹ ಆಗಿರುತ್ತದೆ. ಶರೀರಪೋಷಣೆ ಧಾರಣೆಗಳೆರಡನ್ನೂ ಮಾಡುತ್ತದೆಂದು ಹೇಳಬಹುದು.

ಅಸ್ಥಿಗಳ ಸ್ವರೂಪ (ಆಕಾರ)

ಏತಾನಿಪಂಚವಿಧಾನಿಭವಂತಿ; ತದ್ಯಥಾ:— ಕಪಾಲ ರುಚಕ ತರುಣ ವಲಯು ನಲಕ ಸಂಜ್ಞಾನಿ॥ ಶೇಷಾಂಜಾನುನಿತಂಬಾಂಸಗಂಡತಾಲುಶಂಖುಶಿರಃಸು ಕಪಾಲಾನಿ, ದಶನಾಸ್ತು ರುಚಕಾನಿ, ಘ್ರಾಣಕರ್ಣಗ್ರೀವಾಕ್ಷಿಕೋಶೇಷುತರುಣಾನಿ, ಪಾರ್ಶ್ವಪೃಷ್ಠೋರಃಸು ವಲಯಾನಿ, ಶೇಷಾಣಿನಲಕಸಂಜ್ಞಾನಿ ॥

(ಸುಶ್ರುತ॥ ಶಾರೀರ॥ ಅ ೫ ಸೂ ೨೦)

ಅಸ್ಥಿಗಳು (೫) ಪ್ರಕಾರವಾಗಿರುತ್ತವೆ ೧ **ಕಪಾಲ** (ಶರಾವಾಕೃತಿ), ೨ **ರುಚಕ** (ಕೇಲಾಕೃತಿ), ೩ **ತರುಣ** (ಕೋಮಲ), ೪ **ವಲಯ** (ದಬ್ಬೆ

ಯಂತೆ ಬಗ್ಗಿದವುಗಳು), ೫ **ನಲಕ** (ನಳಿಗೆಯಂತೆ ಇದ್ದವು), ದೇಹದಲ್ಲಿ ಅಸ್ಥಿಗಳು ಬೇರೆ ಬೇರೆ ಆಕೃತಿ ಸ್ಥಿತಿಯುಳ್ಳವಗಳು ಇರುತ್ತವೆ. ಅವು ಯಾವ ವೆಂದರೆ ಕಪಾಲಾದಿಗಳು. ಆಕೃತಿಸ್ಥಿತಿಸ್ವರೂಪಗಳನ್ನವಲೋಕಿಸಿ ವಿಭಾಗ ದಿಂದ ಆವಾವ ಹೆಸರುಗಳಿಂದ ವಿವರಿಸಿದ್ದಾರೆ.

(೧) **ಕಪಾಲಾಸ್ಥಿ ಸ್ಥಾನಗಳು, ಜಾನು** (ಮೊಣಕಾಲು ಸಂಧಿ), **ನಿತಂಬ** (ಕಟಿಯ ಹಿಂಭಾಗ, ತಿಕ), **ಅಂಸ** (ಹೆಗಲಿನ ಸ್ಥಾನ), **ಗಂಡ** (ಕವ್ವೋಲಗಳು), **ತಾಲು** (ನಾಲಿಗೆಯ ಮೇಲ್ಬಾಗದ ಭಿತ್ತಿ, ಕೆಳ ಭಾಗ ವನ್ನೂ ಕೆಲವರುಗ್ರಹಿಸುತ್ತಾರೆ), **ಶಂಖಿ**(ಮೆಲಕು), **ಶಿರಃ**(ತಲೆ), ಈ ಸ್ಥಾನ ಗಳಲ್ಲಿ **ಕಪಾಲ** (ಪರಿವಾಣದಂತಿರುವ), ಆಕೃತಿಯುಳ್ಳ ಅಸ್ಥಿಗಳು ಇರುತ್ತವೆ

(೨) **ರುಚಕಾಸ್ಥಿಸ್ಥಾನ,** ಹಲ್ಲುಗಳಿಗೆ ರುಚಕಾಸ್ಥಿಗಳೆಂದು ಅನ್ನು ತ್ತಾರೆ. ಹಲ್ಲುಗಳಿರುವ ಸ್ಥಾನಗಳಿಗೆ ರುಚಕಾಸ್ಥಿಸ್ಥಾನಗಳೆಂದು ಹೇಳುತ್ತಾರೆ.

(೩) **ತರುಣಾಸ್ಥಿಸ್ಥಾನಗಳು, ಘ್ರಾಣ** (ಮೂಗು), **ಕರ್ಣ** (ಕಿವಿ), **ಗ್ರೀವಾ** (ಕುತ್ತಿಗೆ), **ಅಕ್ಷಿಕೋಷ** (ಕಣ್ಣಿನ ಸುತ್ತಲಿನ ಪ್ರದೇಶ, ಕಣ್ಣು ಗುಡ್ಡೆಗಳು), ಇವುಗಳಲ್ಲಿ ತರುಣಾಸ್ಥಿ (ಮೃದ್ವಸ್ಥಿ)ಗಳು ಇರುತ್ತವೆ

(೪) **ವಲಯಾಸ್ಥಿಸ್ಥಾನಗಳು, ಪಾರ್ಶ್ವ** (ಎಡಬಲ ಪಕ್ಕಗಳು), **ಪೃಷ್ಠ** (ಬೆನ್ನು), **ಉರಃ** (ವಕ್ಷಸ್ಥಳ, ಎದೆ), ಮೊದಲಾದ ಭಾಗಗಳಲ್ಲಿ ವಲಯ (ದಬ್ಬೆಯಂತೆವುಣಿದ) ಆಕೃತಿಯುಳ್ಳ ಅಸ್ಥಿಗಳು ಇರುತ್ತವೆ. ಉಳಿದ ಅಸ್ಥಿಗಳು ನಲಕ (ಕೊಳವೆ) ಆಕೃತಿಯುಳ್ಳವುಗಳಾಗಿರುತ್ತವೆ. ಅಸ್ಥಿಗಳು ಮುರಿದು ಒಡೆದು ಮುಂತಾಗಿ ಆದಾಗ ಅವುಗಳನ್ನು ಕೂಡಿಸಲು ಸುಲಭವಾ ಗಲೆಂದು ಆಕಾರಗಳನ್ನು ವಿವರಿಸಿದ್ದಾರೆ.

ನಲಕಾಸ್ಥಿಗಳು

ಹಸ್ತಪಾದಾಂಗುಲಿತಲೇಕೂರ್ಚೇಷುಮಣಿಬಂಧಯೋಃ ॥
ಬಾಹುಜಂಘಾದ್ವಯೇಚಾಪಿಜಾನೀಯಾನ್ನಲಕಾನಿತು ॥
(ಭೋಜತಂತ್ರೇ)

(೫) **ನಲಕಾಸ್ಥಿಸ್ಥಾನಗಳು,** ಕೈ, ಪಾದಾಂಗುಲಿ ಮತ್ತು ತಲಭಾಗಗಳು, ಕೂರ್ಚಗಳು, ಮಣಿಬಂಧಗಳು, ಬಾಹುದ್ವಯಜಂಘಾದ್ವಯಗಳು, ವೊದಲಾದವುಗಳಲ್ಲಿ ನಳಿಗೆಯಂತೇ ಇರುವ ನಲಕಾಸ್ಥಿಗಳು ಇರುತ್ತವೆ. ನಳಿಗೆಯಂತೇ ಇರುವ ಅಸ್ಥಿಗಳನ್ನು ನಲಕಾಸ್ಥಿಗಳೆಂದು ತಿಳಿಯಬೇಕು ಹೀಗೆ ನಾಮವಿಶೇಷದಿಂದ ಅವುಗಳ ರಚನೆಯು ಸಹ ಜ್ಞಾನವಾಗುತ್ತದೆ.

ಅಸ್ಥಿ ಸಂಖ್ಯೆಯು

ತ್ರೀಣಿಷಷ್ಟ್ಯಾನ್ಯಸ್ಥಿಶತಾನಿವೇದವಾದಿನೋಭಾಷಂತೇ; ಶಲ್ಯತಂತ್ರೇಷುತುತ್ರೀಣ್ಯೇವಶತಾನಿ ॥

(ಸುಶ್ರುತ॥ ಶಾರೀರ॥ ೫ ಅ ಸೂ. ೧೪)

ಆಯುರ್ವೇದಮತವಾದಿಗಳು (೩೬೦) ಅಸ್ಥಿಗಳೆಂದು ಹೇಳುತ್ತಾರೆ. ಶಲ್ಯತಂತ್ರವಾದ ಸುಶ್ರುತಾದಿತಂತ್ರಗಳಲ್ಲಿ (೩೦೦) ಅಸ್ಥಿಗಳೇ ಇರುತ್ತವೆನ್ನುವ ಮತವಾಗಿರುತ್ತದೆ ಇಲ್ಲಿ ವೇದವಾದಿಗಳ ಮತದಂತೆಯೇ ಅಧಿಕ ಸಂಖ್ಯೆಯೇ ಹೊರತು ವೇದಮತದಿಂದಾಗಿರುವದಿಲ್ಲ. ವೇದಮತವೇ ಇದ್ದರೆ ತಾರತಮ್ಯವಾದವುಗಳು ಅಪ್ರಾಮಾಣಿಕವಾಗಿರುತ್ತವೆ ಆದ್ದರಿಂದ "**ವೇದವಾದಿನೋಭಾಷಂತೆ**" ವೇದವಾದಿಗಳು ಹೇಳುತ್ತಾರೆ ವೇದದಲ್ಲಿ ಹಾಗಿರುವದಿಲ್ಲವೆಂಬ ಅರ್ಥವು.

ಚರಕ ಮತದಂತೆ ಅಸ್ಥಿಗಳು (೩೬೦)

ಸುಶ್ರುತ ವಾಗ್ಭಟ ಶಾರ್ಙ್ಗಧರ ಮತಗಳಂತೆ ಅಸ್ಥಿಗಳು (೩೦೦)

ಅಸ್ಥಿಗಳ ಸಂಖ್ಯೆಗಳನ್ನು ಒಂದೊಂದು ಗ್ರಂಥದಲ್ಲಿ ಬೇರೆ ಬೇರೆ ಹೇಳಿರುವದರಿಂದ, ಯಾವದು ಯೋಗ್ಯವಾದದ್ದು ಎನ್ನುವದು ಗೋಚರಿಸುವದಿಲ್ಲ. ದೇಹದಲ್ಲಿ ಅಸ್ಥಿಗಳು ಎಷ್ಟು ಇರಬೇಕೋ ಅಷ್ಟೇ ಇರುತ್ತವೆ, ಹೀಗಿದ್ದರೂ ಭಿನ್ನಭಿನ್ನ ಮತವಾಗಲು ಕಾರಣವೇನು? ಎಂಬ ಆಕ್ಷೇಪ ಬರುತ್ತದೆ. ಆಯು

ವೇದ ಶಾರೀರದಲ್ಲಿ ಅಸ್ಥಿಗಣನೆಯೇ ಯೊಗ್ಯವಾಗಿರುವದಿಲ್ಲ ಒಬ್ಬರ ಮತ ಕ್ಕಿಂತ ಮತ್ತೊಬ್ಬರ ಮತ ಭಿನ್ನವಾಗಿರುವದರಿಂದ ನಿಶ್ಚಯವೇ ಇಲ್ಲ ಹೀಗೆಂದು ಆಕ್ಷೇಪಿಸುವವರೂ ಇದ್ದಾರೆ. ಅಸ್ಥಿಸಂಖ್ಯೆಗಳಲ್ಲಿ ಭಿನ್ನಮತವಾಗಲು ಕಾರಣವೇನಂದರೆ, ಪ್ರತಿಯೊಂದು ಹಲ್ಲುಗಳು ಕೂಡ್ರತಕ್ಕ ರಂಧ್ರಗಳೂ ಉಗುರುಗಳನ್ನೂ ಸಹ ಅಸ್ಥಿಗಳಲ್ಲಿ ಸಮಾವೇಶಮಾಡಿದ್ದರಿಂದ, ಸಂಖ್ಯೆಯು ಅಧಿಕವಾಗಿರುತ್ತದೆಯೇ ವಿನಾ ಮತ್ತಾವ ಕಾರಣವೂ ಅನವಸ್ಥಿತಿಯೂ ಕಾಣುವದಿಲ್ಲ. ಚರಕದಲ್ಲಿ ಹೇಳಿರುವ ಅಸ್ಥಿಗಣನೆಯು ಹೆಚ್ಚಾಗಲು ಇದೇ ಕಾರಣವಾಗಿರುತ್ತದೆ ಇದರಿಂದ ಹಾನಿಯೇನೂ ಅಸಿಸುವದಿಲ್ಲ ಆರೀತಿ ಗಣ ನೆಯ ವಿಭಾಗಪರಿಚಯಮಾಡಿಕೊಳ್ಳದೇ ಅಧಿಕಸಂಖ್ಯೆಯನ್ನು ಗ್ರಹಿಸುವದು ಅವ್ಯವಸ್ಥೆಯಾಗುತ್ತದೆ. ಆವಾವ ಗ್ರಂಥಗಳಲ್ಲಿ ಹೇಳಿದ ಅಸ್ಥಿ ಸಂಖ್ಯೆಗಳನ್ನು ಅಲ್ಲಿಯ ಗಣನೆಯಂತೆಯೇ ವಿಭಾಗಿಸಿದರೆ ಯಾಕೆ ಸಂಖ್ಯಾ ಹೆಚ್ಚಾಗಿರುತ್ತದೆ ನ್ನುವದು ಸ್ಪಷ್ಟವಾಗುತ್ತದೆಯೇ ಹೊರತು ಇಲ್ಲವಾದರೆ ಆಗಲಾರದು. ಅಸ್ಥಿ ಸಂಖ್ಯೆಯ ನ್ಯೂನ್ಯಾಧಿಕತೆಯು ಆಯುರ್ವೇದದಲ್ಲಿಯ ದೋಷವೆಂದು ಯಾರೂ ತಿಳಿಯಬಾರದು.

ಅಸ್ಥಿಗಣನೆಯು

ತೇಷಾಮ್ ಶವಿಂಶಮಸ್ಥಿ ಶತಂ ಶಾಖಾಸು, ಸಪ್ತದಶೋತ್ತರಂ ಶತಂ ಶ್ರೋಣಿಪಾರ್ಶ್ವಪೃಷ್ಠೋರಃಸು, ಗ್ರೀವಾಂ ಪ್ರತ್ಯೂರ್ಧ್ವಂ ತ್ರಿಷಷ್ಟಿಃ, ಏವಮಸ್ಥ್ನಾಂ ತ್ರೀಣಿಶತಾನಿಪೂರ್ಯಂತೇ ॥

(ಸುಶ್ರುತ॥ ಶಾರೀರ॥ ಅ. ೫ ಸೂ. ೧೮)

ಶಾಖಾಗಳಲ್ಲಿ (ಕಾಲು ಕೈಗಳಲ್ಲಿ) ಒಟ್ಟು ಕೂಡಿ (೧೭೦) ಅಸ್ಥಿಗಳು ಇರುತ್ತವೆ. **ಶ್ರೋಣಿ** (ಕಟಪ್ರದೇಶ), **ಪಾರ್ಶ್ವ** (ಎಡಬಲ ಪಕ್ಕಗಳು), **ಪೃಷ್ಠ** (ಬೆನ್ನು), **ಉರಃ** (ಎದೆ), **ಕುತ್ತಿಗೆಯ ಮೇಲ್ಭಾಗಗಳಲ್ಲಿ** (೬೩) ಅಸ್ಥಿಗಳು ಇರುತ್ತವೆ.

ಶಾಖಾಗಳಲ್ಲಿ (೧೬೦), ಶ್ರೋಣ್ಯಾದಿಗಳಲ್ಲಿ (೧೧೭), ಕುತ್ತಿಗೆ ಮೇಲ್ಬಾಗಗಳಲ್ಲಿ (೬೩), ಒಟ್ಟು ಸ್ಥೂಲವಾನದ ವಿಭಾಗ ಗಣನೆಯಿಂದ (೩೦೦) ಅಸ್ಥಿಗಳು ಆಗುತ್ತವೆ

ಪ್ರತ್ಯೇಕವಿಭಾಗಶಃಗಣನೆಯು

ಏಕೈಕಸ್ಯಾಂತು ಪಾದಾಂಗುಲ್ಯಾಂ ತ್ರೀಣಿ ತ್ರೀಣಿ ತಾವಿಪಂಚ ದಶ, ತಲಕೂರ್ಚ ಗುಲ್ಫಸಂಶ್ರಿತಾನಿದಶ, ಪಾಷ್ಣ್ಯಾನೇಕಂ ಜಂಘಾಯಾಂದ್ವೇ, ಜಾನುನ್ಯೇಕಂ, ಏಕಮೂರಾವಿತಿ, ತ್ರಿಂಶ ದೇವಮೇಕಸ್ಮಿನ್ಸಕ್ಥ್ನಿಭವಂತಿ, ಏತೇನೇತರಸಕ್ಥ ಬಾಹೂಚ ವ್ಯಾಖ್ಯಾತೌ ॥ ಶ್ರೋಣ್ಯಾಂಪಂಚ, ತೇಷಾಂ ಗುದಭಗನಿತಂ ಬೇಷುಚತ್ವಾರಿ, ತ್ರಿಕಸಂಸ್ಥಿತಮೇಕಂ ಪಾರ್ಶ್ವೇಷಟ್ತ್ರಿಂಶ ದೇಕಸ್ಮಿನ್, ದ್ವಿತೀಯೇಽ ಸ್ಯೇವಂ, ಪೃಷ್ಠೇತ್ರಿಂಶತ್, ಅಷ್ಟಾ ವುರಿಸಿ, ದ್ವೇಅಂಸಫಲಕೇ ॥ ಗ್ರೀವಾಯಾಂನವ, ಕಂಠನಾ ಡ್ಯಾಂಚತ್ವಾರಿ, ದ್ವೇಹನ್ವೋಃ, ದಂತಾದ್ವಾತ್ರಿಂಶತ್, ನಾಸಾ ಯಾಂತ್ರೀಣಿ, ಏಕಂತಾಲುನಿ, ಗಂಡಕರ್ಣ ಶಂಖೇಷ್ವೇಕೈಕಂ ಷಟ್ ಶಿರಸೀತಿ॥ (ಸುಶ್ರುತ॥ ಶಾರೀರ॥ ಅ ೫ ಸೂ ೬೦॥)

ಶಾಖಾದಲ್ಲಿಯ ಅಸ್ಥಿಗಣನೆ

ಪಾದದ ಒಂದೊಂದುಬೆರಳಿನಲ್ಲಿ ಮೂರುಅಸ್ಥಿಗಳಂತೆ, ಒಂದು ಪಾದದ ಬೆರಳುಗಳಲ್ಲಿ (೧೫) ಅಸ್ಥಿಗಳು ಇರುತ್ತವೆ. **ತಲ** (ಪಾದತಲ), **ಕೂರ್ಚ** (ಕುಂಚದಂತಿರುವ ಭಾಗ), **ಗುಲ್ಫ** (ಪಾದದಪಾರ್ಶ್ವಗಳಲ್ಲಿಯ ಗಂಟುಗಳು) ಇವುಗಳಲ್ಲಿ (೧೦) ಅಸ್ಥಿಗಳು ಇರುತ್ತವೆ. **ಪಾಷ್ಣಿ** (ಪಾದದ ಹಿಂಒದಿಯಲ್ಲಿಯ ಹದಡವು) ಈ ಪ್ರದೇಶದಲ್ಲಿ (೧) ಅಸ್ಥಿಯು. **ಜಂಘಾ**(ಮೊಣಕಾಲು) ಪ್ರದೇಶದಲ್ಲಿ (೨) ಅಸ್ಥಿಗಳು ಇರುತ್ತವೆ **ಜಾನು** (ಮೊಣಕಾಲಿನ ಮೇಲಿನ ಸಂಧಿ) ಪ್ರದೇಶದಲ್ಲಿ (೧) ಅಸ್ಥಿಯು. **ಊರು** (ತೊಡೆ) ಪ್ರದೇಶದಲ್ಲಿ (೧) ಅಸ್ಥಿಯು. ಹೀಗೆ ಒಂದು ಕಾಲಿನಲ್ಲಿ (೩೦) ಅಸ್ಥಿಗಳು ಇರುತ್ತವೆ. ಇದ

ರಂತೆಯೇ ಮತ್ತೊಂದು ಕಾಲು, ಎರಡು ಬಾಹುಗಳಲ್ಲಿಯೂ ಇರುತ್ತವೆಂದು ತಿಳಿಯಬೇಕು ಒಟ್ಟು ಕೂಡಿ ಶಾಖಾಗಳಲ್ಲಿ (೧೨೦) ಅಸ್ಥಿಗಳಾಗುತ್ತವೆ

ತಲಕೂರ್ಚ ಗುಲ್ಫಸಂಶ್ರಿತಾನಿದಶ, ತೀಷುಪಾದತಲೇ ಪಂಚ ಶಲಾಕಾಃ, ತತ್ಪ್ರತಿಬಂಧನಮೇಕಾಸ್ಥಿ, ದ್ವೇದ್ವೇ ಕೂರ್ಚ ಗುಲ್ಫಯೋಃ॥ (ಸುಶ್ರುತ ಟೀಕಾಯಾಂ)

ತಲಕೂರ್ಚಾದಿಗಳಲ್ಲಿ ಹತ್ತು ಅಸ್ಥಿಗಳೆಂದು ಹೇಳಿದ್ದಾರೆ ಅವುಗಳ ಸ್ಥಾನ ವಿವರಣೆಯು:— **ಪಾದತಲ** (ಪಾದದ ಕೆಳಭಾಗ) ದಲ್ಲಿ ದಂಟಿನಂತಿರುವ (೫) ಅಸ್ಥಿಗಳಿರುತ್ತವೆ ಶಲಾಕಾದಂತಿರುವಅಸ್ಥಿಗಳಬಂಧನಕ್ಕಾಗಿ (೧) ಅಸ್ಥಿಯು. **ಕೂರ್ಚ, ಗುಲ್ಫ** (ಪಾದದ ಪಾರ್ಶ್ವಗಳಲ್ಲಿಯ ಗಂಟುಗಳು), ಇವುಗಳಲ್ಲಿ ಒಂದೊಂದರಲ್ಲಿ ಎರಡೆರಡರಂತೆ (೪) ಅಸ್ಥಿಗಳು ಒಟ್ಟು ತಲ ಕೂರ್ಚ ಗುಲ್ಫಗಳಲ್ಲಿ (೧೦) ಅಸ್ಥಿಗಳು ಇರುತ್ತವೆ.

ಕಾಲಿನ ಅಸ್ಥಿಗಣನೆಯು:— ಬೆರಳುಗಳಲ್ಲಿ (೧೫), ತಲ ಕೂರ್ಚಾದಿಗಳಲ್ಲಿ (೧೦), ಪಾಷ್ಣಿಯಲ್ಲಿ (೧), ಜಂಘಾದಲ್ಲಿ (೨), ಜಾನುದಲ್ಲಿ (೧), ತೊಡೆಯಲ್ಲಿ (೧), ಒಟ್ಟು (೩೦) ಅಸ್ಥಿಗಳು ಒಂದು ಕಾಲಿನಲ್ಲಿ (ಸಕ್ಥಿ), ಇರುತ್ತವೆ. ಇದರಂತೇ ಎರಡೂ ಕಾಲು ಕೈಗಳಲ್ಲಿ ಕೂಡಿ ಒಟ್ಟು (೧೬೦) ಅಸ್ಥಿಗಳು ಇರುತ್ತವೆ. ಹಿಂದೆ ಸ್ಥೂಲ ರೀತಿಯ ಗಣನೆಯಲ್ಲಿ "**ಶಾಖಾಗಳಲ್ಲಿ**" ಹೇಳಿರುವ ಸಂಖ್ಯೆಯೇ ಇದಾಗಿರುತ್ತದೆ

ಶ್ರೋಣ್ಯಾದಿ ಅಸ್ಥಿಗಣನೆಯು

ಶ್ರೋಣಿ (ಕಟಿ) ಅಸ್ಥಿಗಳು (೫) ಇರುತ್ತವೆ. ಅವುಗಳಲ್ಲಿ **ಗುದ** (ಮಲ ವಿಸರ್ಜನಸ್ಥಾನ) ಪ್ರದೇಶದಲ್ಲಿಯ ಅಸ್ಥಿ (೧), **ಭಗ** (ಸ್ತ್ರೀ ಜನನೇಂದ್ರಿಯ ಸ್ಥಾನ) ಪ್ರದೇಶದಲ್ಲಿಯ ಅಸ್ಥಿ (೧), **ನಿತಂಬ** (ತಿಕ, ಕಟಿಯ ಹಿಂಭಾಗ) ಸ್ಥಾನಗಳಲ್ಲಿಯ ಅಸ್ಥಿಗಳು (೨), **ತ್ರಿಕ** (ಕಾಲುಗಳ ಅಸ್ಥಿ ಪೃಷ್ಠಾಸ್ಥಿಗಳು ಕೂಡುವ ಸ್ಥಳ)ದಲ್ಲಿಯ ಅಸ್ಥಿ (೧), ಒಟ್ಟು ಶ್ರೋಣೀ (ಕಟಿ) ಪ್ರದೇಶಗಳಲ್ಲಿ (೫) ಅಸ್ಥಿಗಳು ಇರುತ್ತವೆ.

ಪಾರ್ಶ್ವ (ಪಕ್ಕ, ಎಡಬಲ ಪಾರ್ಶ್ವಗಳು) ಒಂದರಲ್ಲಿ (೩೬) ಅಸ್ಥಿಗಳು ಇರುತ್ತವೆ ಅವುಗಳ ಪ್ರತ್ಯೇಕ ವಿವರಣೆಯು ಇಂತಿರುತ್ತದೆ:—

ಪ್ರತಿಪಾರ್ಶ್ವಂ ದ್ವಾದಶಪರ್ಶುಕಾಃ, ದ್ವಾದಶಸ್ಥಾಲಕಾನಿ, ದ್ವಾದಶಸ್ಥಾಲಕಾರ್ಬುದಾನೀತಿಮಿಲಿತ್ವಾ ಷಟ್‌ತ್ರಿಂಶದಸ್ಥೀನಿಜ್ಞೇಯಾನಿ ॥ (ಸುಶ್ರುತ ಟೀಕಾಯಾಂ)

ಪ್ರತಿಯೊಂದು ಪಕ್ಕದಲ್ಲಿ (೧೨) **ಪರ್ಶುಕಾಃ** (ಪಾರ್ಶ್ವಾಸ್ಥಿಗಳು) ಇರುತ್ತವೆ **ಸ್ಥಾಲಕಾನಿ** (ಪಾರ್ಶ್ವಾಸ್ಥಿಗಳ ಮೂಲದಲ್ಲಿರುವ ಅಸ್ಥಿಗಳು) (೧೨) ಇರುತ್ತವೆ. **ಸ್ಥಾಲಕಾರ್ಬುದಾನಿ** (ಪರ್ಶುಕಾಸ್ಥಿಗಳ ಮಧ್ಯ ಭಾಗದಲ್ಲಿರುವ ಅರ್ಬುದಾಕಾರ ಅಸ್ಥಿಗಳು) ಇವುಗಳು (೧೨) ಇರುತ್ತವೆ.

ಪರ್ಶುಕಾ (೧೨), **ಸ್ಥಾಲಕಾನಿ** (೧೨), **ಸ್ಥಾಲಕಾರ್ಬುದಾನಿ** (೧೨), ಒಟ್ಟು ಒಂದು ಪಾರ್ಶ್ವದಲ್ಲಿ (೩೬) ಅಸ್ಥಿಗಳು ಇರುತ್ತವೆ. ಎರಡೂ ಪಾರ್ಶ್ವಗಳು ಕೂಡಿ (೭೨) ಇರುತ್ತವೆ

ಪೃಷ್ಠ (ಬೆನ್ನುಹುರಿ, ಕಶೇರುಕಾ, ಪೃಷ್ಠಾಸ್ಥಿಗಳೆಂಬ ಬೇರೆ ಬೇರೆ ಹೆಸರುಗಳಿರುತ್ತವೆ) ಈ ಸ್ಥಾನದಲ್ಲಿ (೩೦) ಅಸ್ಥಿಗಳು ಇರುತ್ತವೆ

ಉರಃ (ಎದೆ, ವಕ್ಷಃಸ್ಥಳ) ಸ್ಥಾನದಲ್ಲಿ (೮) ಅಸ್ಥಿಗಳು ಇರುತ್ತವೆ

ಅಷ್ಟಾವುರಸೀತಿ, ಉರಃ ಫಲಕೇಷಟ್, ಅಸ್ಸಸಂಜ್ಞೆದ್ವೇ,ಇತಿ ಮಿಲಿತ್ವಾಽಷ್ಟಾವುರಸ್ಯಸ್ಥೀನಿಜ್ಞೇಯಾನಿ॥
(ಸುಶ್ರುತ ಟೀಕಾಯಾಂ)

ವಕ್ಷಸ್ಥಳದಲ್ಲಿ [೮] ಅಸ್ಥಿಗಳನ್ನು ಹೇಳಿದ್ದಾರೆ. ಅವುಗಳನ್ನು ಪುನಃ ವಿಭಾಗಶಃ ವಿವರಿಸಿ ಹೇಳುತ್ತಾರೆ.

ಉರಃಫಲಕಾಸ್ಥಿ [ಎದೆಯಲ್ಲಿಯ ದಬ್ಬೆಗಳಂತಿರುವ ಅಸ್ಥಿಗಳು] ಒಟ್ಟು [೬] ಇರುತ್ತವೆ.

ಅಕ್ಷಸಂಜ್ಞೇ [ಜತ್ರುಸಂಧಿಯ ಪಂತರದ ಕೋಲುನಂತಿರುವ ಎಲುಬುಗಳು] ಅಕ್ಷವೆಂಬ ಹೆಸರುಳ್ಳ ಅಸ್ಥಿಗಳು [೨] ಇರುತ್ತವೆ. ಒಟ್ಟು ವಕ್ಷಃಸ್ಥಳದಲ್ಲಿ [೮] ಅಸ್ಥಿಗಳು ಇರುತ್ತವೆ

ಅಂಸಫಲಕ [ಹೆಗಲಿನಲ್ಲಿಯ ಹಲಿಗೆಯಂಥ ಎಲುಬುಗಳು] ಸ್ಥಾನಗಳಲ್ಲಿಯ ಅಸ್ಥಿಗಳು [೨], **ಶ್ರೋಣಿಯಲ್ಲಿ [೫], ಪಾರ್ಶ್ವಗಳಲ್ಲಿ [೭೨], ಪೃಷ್ಠದಲ್ಲಿ [೩೦], ಎದೆಯಭಾಗದಲ್ಲಿ [೮], ಅಂಸಫಲಕಗಳಲ್ಲಿ [೨],** ಒಟ್ಟು ಶ್ರೋಣ್ಯಾದಿಗಳಲ್ಲಿ [೧೧೭] ಅಸ್ಥಿಗಳು ಇರುತ್ತವೆ.

ಗ್ರೀವಾರಭ್ಯ ಮೇಲ್ಭಾಗದ ಅಸ್ಥಿಗಳು

ಗ್ರೀವಾ (ಕುತ್ತಿಗೆ) ಸ್ಥಾನಗಳಲ್ಲಿ (೯) ಅಸ್ಥಿಗಳು ಇರುತ್ತವೆ **ಕಂಠನಾಡೀ** (ಕುತ್ತಿಗೆಯ ನಳಿಗೆ) ಸ್ಥಾನಗಳಲ್ಲಿ (೪) ಅಸ್ಥಿಗಳು ಇರುತ್ತವೆ. **ಹನು** (ಕಪ್ಪೋಲಗಳ ಕೆಳಭಾಗಗಳು) ಇವುಗಳಲ್ಲಿ ಅಸ್ಥಿಗಳು (೨), **ದಂತ** (ಹಲ್ಲುಗಳು) ಇವುಗಳು (೩೭) ಇರುತ್ತವೆ **ನಾಸಾ** (ಮೂಗು) ಸ್ಥಾನದಲ್ಲಿ ಅಸ್ಥಿಗಳು (೩) ಇರುತ್ತವೆ. **ತಾಲು** (ನಾಲಿಗೆಯ ಮೇಲ್ಭಾಗ) ಸ್ಥಾನದಲ್ಲಿ (೧), **ಗಂಡ** (ಕಪ್ಪೋಲ) ಸ್ಥಾನಗಳಲ್ಲಿ (೨), **ಕರ್ಣ** (ಕಿವಿ) ಸ್ಥಾನಗಳಲ್ಲಿ (೨), **ಶಂಖ** (ಮೆಲಕು) ಸ್ಥಾನಗಳಲ್ಲಿ (೨) ಅಸ್ಥಿಗಳಿರುತ್ತವೆ. **ಶಿರಃ** (ತಲೆ) ಸ್ಥಾನದಲ್ಲಿ (೬) ಇರುತ್ತವೆ.

ಗ್ರೀವಾದಲ್ಲಿ (೯), **ಕಂಠನಾಡಿಯಲ್ಲಿ** (೪), **ಹನ್ವಸ್ಥಿ** (೨), **ದಂತಗಳು** (೩೨), **ನಾಸಾಸ್ಥಿ** (೩), **ತಾಲ್ವಸ್ಥಿ** (೧),**ಗಂಡೌ** (೨), **ಕರ್ಣೌ** (೨), **ಶಂಖೌ** (೨), **ಶಿರೋಸ್ಥಿಗಳು** (೬) ಇರುತ್ತವೆ ಒಟ್ಟು ಗ್ರೀವಾರಭ್ಯ ಮೇಲ್ಭಾಗಗಳಲ್ಲಿ (೭೩) ಅಸ್ಥಿಗಳು ಇರುತ್ತವೆ.

ವಿಶೇಷ

ಇವೆಲ್ಲ ಪ್ರತ್ಯೇಕ ವಿಭಾಗ ಸ್ಥಾನಗಳಲ್ಲಿಯ **ಅಸ್ಥಿಗಳು ಕೂಡಿದರೆ** (೩೦೦) ಅಸ್ಥಿಗಳಾಗುತ್ತವೆ. ಅವುಗಳ ಸ್ಥೂಲ ವಿಭಾಗ ಸಂಖ್ಯೆಗಳನ್ನು

ಮೊದಲೇ ವಿವರಿಸಿರುತ್ತದೆ ಚರಕಾದಿಗಳಲ್ಲಿ ಭಿನ್ನಭಿನ್ನ ರೀತಿಯಿಂದ ಗಣನೆಯನ್ನು ಮಾಡಿದ್ದಾರೆ. ಅವುಗಳನ್ನೂ ಕೂಡಿಸಿ ಬರೆದರೆ ಅಭ್ಯಾಸಿಗಳಿಗೆ ಅನವಶ್ಯಕ ಗೊಂದಲವಾಗಬಹುದೆಂದು ಅವುಗಳನ್ನು ಸಮಾವೇಶಮಾಡಿ ವಿವರಿಸಿಲ್ಲ. ವಿಶೇಷ ಅವಲೋಕನೇ ಮಾಡುವವರು ಚರಕದಲ್ಲಿ ನೋಡಿರಿ. (ಚರಕ॥ ಶಾರೀರ॥ ಅ ೭ ಸೂ ೬) ಇಲ್ಲಿ ಭಿನ್ನ ರೀತಿಯಿಂದ ಗಣನೆಯನ್ನು ಮಾಡಿದ್ದಾರೆ.

(೫೫) ಸಂಧಿವಿವರಣೆಯು

ದೇಹದಲ್ಲಿರುವ ಅಸ್ಥಿಗಳು ಮಡುಚಲಿಕ್ಕೆ ಬರುವಂತೆ ಅಲ್ಲಲ್ಲಿ ಸಂಧಿಗಳಿರುತ್ತವೆ. ಒಂದು ಎಲುಬಿನ ರಂಧ್ರದಲ್ಲಿ ಮತ್ತೊಂದೆಲುಬು ಕೂಡಿಕೊಂಡಿರುತ್ತದೆ. ಎಲಬುಗಳು ಕೂಡಿದ ಸಂಧಿಯ ರಂಧ್ರದಲ್ಲಿ ಮುಂದಿನ ಅಸ್ಥಿಯ ದುಂಡಾದ (ಗುಂಡಿನಂತಿರುವ) ಕೀಲು ಇರುತ್ತದೆ ಹೀಗೆ ದುಂಡಗಿರುವ (ವರ್ತುಲ) ಕೀಲು ಇರುವದರಿಂದ, ಆಕುಂಚನ ಪ್ರಸಾರಣಗಳಲ್ಲಿ ಚನ್ನಾಗಿ ಚಲನವಲನೆಯಾಗುತ್ತದೆ. ದುಂಡಗಿನ ಕೀಲುಳ್ಳ ಚೇಷ್ಟಾವಂತ (ಚಲನವಲನೆಯುಳ್ಳ) ಸಂಧಿಗಳಲ್ಲಿ ಚಲಿಸಲು ಅನುಕೂಲವಾಗುವಂತೆ ಒಳಗೆ ಕಫವು ಇರುತ್ತದೆ ಹೇಗೆ ರಥಚಕ್ರ ಪಿಂಡಿಕೆಯ ರಂಧ್ರಗಳಲ್ಲಿ ಎಣ್ಣೆಯನ್ನು ಹಾಕಿದರೆ, ರಂಧ್ರಗಳಲ್ಲಿಯ ಅಚ್ಚಿನ ದಂಡವು ಚನ್ನಾಗಿ ಚಲಿಸುತ್ತದೆಯೋ, ಅದರಂತೇ ಸಂಧಿಗಳಲ್ಲಿ ಕಫವು ಇರುವದರಿಂದ ಸಂಧಿ ರಂಧ್ರಗಳಲ್ಲಿಯ ಕೀಲುಗಳು (ಕೀಲಾಸ್ಥಿ) ಚನ್ನಾಗಿ ಚಲಿಸುತ್ತವೆ. ಸಂಧಿಗಳಲ್ಲಿ ಎರಡು ವಿಭಾಗಗಳನ್ನು ಮಾಡಿದ್ದಾರೆ (೧) ಚಲಸಂಧಿಗಳು (ಚೇಷ್ಟಾವಂತಃ), (೨) ಸ್ಥಿರ ಸಂಧಿಗಳ-(ಚಲನೆಯಿಲ್ಲದವುಗಳು), ಕೆಲವರು ಮೂರು ವಿಭಾಗಗಳೆಂದು ಅನ್ನುತ್ತಾರೆ. (೧) ಸ್ಥಿರಸಂಧಿ, (೨) ಬಹುಚಲ, (೩) ಅಲ್ಪಚಲಗಳೆಂದು ಮೂರು ವಿಧವಾಗಿ ವಿಭಾಗಿಸುತ್ತಾರೆ ಇದಾದರೂ ಸಮಂಜಸವಾದದ್ದೇ ಇರುತ್ತದೆ. ಎರಡು ಮೂರು ಅಸ್ಥಿಗಳು ಕೂಡಿದ ಸಂಧಿಗಳು ಸಹ ಇರುತ್ತವೆ. ದೇಹದಲ್ಲಿ ಅಖಂಡವಾದ ಅಸ್ಥಿಗಳಿದ್ದರೆ ಮನುಷ್ಯನಿಗೆ ಮಣಿಯಲಿಕ್ಕೂ ಆಕುಂಚನ ಪ್ರಸಾರಣ, ಗಮನ, ಚಲನವಲನಕ್ಕೂ, ಸುಲಭವಾಗುತ್ತಿದ್ದಿಲ್ಲ. ಒಂದು ವೇಳೆ ಚಲನಾದಿಗಳು ಸಾಧ್ಯವಾಗುತ್ತಿದ್ದಿಲ್ಲವೆಂದರೂ ಅಡ್ಡಿಯಿಲ್ಲ

ಅಸ್ಥಿಗಳು ಅಖಂಡವಿರದೇ ಸಂಧಿಯುತವಾಗಿರುವದರಿಂದ, ದೇಹದ ಕಾರ್ಯ ಕ್ರಮಗಳು ಬಹಳೇ ಸೌಕರ್ಯದಿಂದ ನಡೆಯುಲು ಅನುಕೂಲವಾಗುತ್ತವೆ. ಸಂಧಿಮುಕ್ತವಾಗುವದು, ಮುರಿಯುವದು, ಸರಿಯುವದು, ಮೊದಲಾದ ಅಪ ಘಾತಗಳು ಸಂಭವಿಸುತ್ತವೆ. ಆಗ ಅವುಗಳನ್ನು ಹೇಗೆಸರಿಪಡಿಸಬೇಕೆಂಬು ವದನ್ನು ತಿಳಿಸಲಿಕ್ಕಾಗಿ ಸಂಧಿಗಳ ಸ್ಥಿತಿ ಆಕಾರಗಳನ್ನು ಹೇಳುತ್ತಾರೆ. ಮತ್ತು ಯಾವ ಯಾವ ಸ್ಥಳಗಳಲ್ಲಿ ಯಾವರೀತಿ ಸಂಧಿಗಳಿರುತ್ತವೆಂದು ಹೇಳುತ್ತಾರೆ ಇದರಂತೇ ಚಲಸ್ಥಿರಸಂಧಿಗಳ ವಿವರಣೆಯನ್ನು ಚಲಸಂಧಿಗಳಲ್ಲಿ ಮುಕ್ತಾದಿ ಗಳು ಸಂಭವಿಸಿದರೆ, ಪುನಃ ಚಲಿಸಲಿಕ್ಕೆ ಅನುಕೂಲವಾಗುವಂತೆ ಕೂಡಿಸು ವಂತೆಯೂ ಸ್ಥಿರ ಸಂಧಿಗಳಲ್ಲಿ ಚಲಿಸಿದಂತೆ ಯೋಜಿಸಲೂ ಸುಲಭವಾಗುವದ ಕ್ಕಾಗಿ ಹೇಳಿದ್ದಾರೆ ಸಂಧಿಗಳು (೨೧೦) ಇರುತ್ತವೆ

ಅಸ್ಥಿಸಂಧಿಪ್ರಕಾರಗಳು

ಸಂಧಯಸ್ತು ದ್ವಿವಿಧಾಶ್ಚೇಷ್ಟಾವಂತಃ ಸ್ಥಿರಾಶ್ಚ ॥
(ಸುಶ್ರುತ॥ ಶಾರೀರ॥ ಅ ೫ ಸೂ ೨೪)

ಚೇಷ್ಟಾವಂತಃ ಸಂಧಯೋದ್ವಿವಿಧಾಃ ಬಹುಚೇಷ್ಟಾ ಅಲ್ಪ ಚೇಷ್ಟಾಶ್ಚೇತಿ ॥ (ತಂತ್ರಾಂತರೆ)

ಸಂಧಿಗಳು ಎರಡು ಪ್ರಕಾರದವುಗಳು ಇರುತ್ತವೆ. (೧) ಚಲನವಲನೆ ಯಾಗುತ್ತಿರುವ (ಚಲ, ಚೇಷ್ಟಾವಂತ) ಸಂಧಿಗಳು, (೨) ಸ್ಥಿರ (ಚಲನೆ ಇಲ್ಲದಿರುವ) ಸಂಧಿಗಳು, ಹೀಗೆ ಎರಡು ವಿಧ ಸಂಧಿಗಳೆಂದು ಸುಶ್ರುತದಲ್ಲಿಯ ಮತವಾಗಿರುತ್ತದೆ

ತಂತ್ರಾಂತರದಲ್ಲಿ ಚಲಸಂಧಿಗಳು ಎರಡು ವಿಧವಾಗಿರುತ್ತವೆಂದು ಹೇಳಿದ್ದಾರೆ. (೧) ಬಹು ಚಲಸಂಧಿಗಳು, (೨) ಅಲ್ಪ ಚಲಸಂಧಿಗಳು. ಹೀಗೆ ಚಲಸಂಧಿಯಲ್ಲಿಯ ಭೇದಗಳನ್ನು ಗ್ರಹಿಸಿದ್ದಾರೆ. ಅನಂತರ ಸ್ಥಿರ ಸಂಧಿ (೧), ಒಟ್ಟು (೩) ಸಂಧಿಗಳನ್ನು ಹೇಳಿದ್ದಾರೆ.

ಸ್ಥಿರಚಲಸಂಧಿಯುಸ್ಥಾನಗಳು

ಶಾಖಾಸುಹನ್ವೋಃ ಕಟ್ಯಾಂಚ ಚೇಷ್ಟಾವಂತಸ್ತು ಸಂಧಯಃ॥
ಶೇಷಾಸ್ತು ಸಂಧಯಃ ಸರ್ವೇ ವಿಜ್ಞೇಯಾಹಿಸ್ಥಿರಾಬುಧೈಃ ॥
(ಸುಶ್ರುತ॥ ಶಾರೀರ॥ ಅ ೫ ಶ್ಲೋ ೨೫)

ಕೈ ಮುತ್ತು ಕಾಲುಗಳಲ್ಲಿರುವ ಸಂಧಿಗಳು, ಹನುಗಳಲ್ಲಿ, **ಕಟಿ** ಪ್ರದೇಶ, ಇವುಗಳಲ್ಲಿ ಚಲಸಂಧಿಗಳು ಇರುತ್ತವೆ "ಚ" ಎಂದು ಸಮುಚ್ಚಯದಿಂದ ಹೇಳಿರುವದರಿಂದ ಗ್ರೀವಾ ಪ್ರದೇಶದಲ್ಲೆಯೂ ಚಲಸಂಧಿಗಳಿರುತ್ತವೆಂದು ತಿಳಿಯಬೇಕು. ಚಲಸಂಧಿಗಳ ಹೊರತಾಗಿ ಉಳಿದ ಸಂಧಿಗಳೆಲ್ಲವೂ ಸ್ಥಿರಸಂಧಿಗಳೆಂದು ತಿಳಿಯಬೇಕು

ಬಹುಚಲ ಅಲ್ಪಚಲ ಸಂಧಿಗಳು

ತತ್ರಶಾಖಾಸು ಅಧೋಹನುಕೋಟ್ಯೋಶ್ಚ ಬಹುಚೇಷ್ಟಾಃ,
ಪೃಷ್ಠವಂಶಾದಿಷ್ವಲ್ಪಚೇಷ್ಟಾಃ, ಅನ್ಯತ್ರಪುನರಚೇಷ್ಟಾಃ ॥
(ತಂತ್ರಾಂತ್ರರೆ)

ಕೈಕಾಲುಗಳಲ್ಲಿಯ ಸಂಧಿಗಳು, **ಹನು** (ಕಪೋಲಗಳ ಕೆಳಭಾಗ) ಗಳು ಕೂಡುವ ಸಂಧಿಗಳು, ಬಹುಚೇಷ್ಟಾವಂತ (ಹೆಚ್ಚು **ಚಲನವಲನೆ** ಯುಳ್ಳವುಗಳು) ಆಗಿರುತ್ತವೆ

ಪೃಷ್ಠವಂಶಾದಿಗಳಲ್ಲಿ (ಬೆನ್ನಹುರಿ, ಕಶೇರುಕಾ ಅಸ್ಥಿಗಳಲ್ಲಿ) ಅಲ್ಪಚೇಷ್ಟಾ ಸಂಧಿಗಳು ಇರುತ್ತವೆ ಉಳಿದ ಸಂಧಿಗಳು ಸ್ಥಿರಸಂಧಿಗಳೆಂದು ತಿಳಿಯಬೇಕು

ಸಂಧಿಗಳಲ್ಲಿಯ ಭೇದಗಳು

ತಏತೇಸಂಧಯೋಽಷ್ಟವಿಧಾಃ, ಕೋರೋಲೂಖಲಸಾಮುದ್ಗ
ಪ್ರತರ ತುನ್ನಸೇವನೀ ವಾಯಸತುಂಡ ಮುಂಡಲ ಶಂಖಾವರ್ತಾಃ॥
[ಸುಶ್ರುತ॥ ಶಾರೀರ॥ ಅ. ೫ ಸೂ ೨೭]

ಅಸ್ಥಿಸಂಧಿಗಳು ಬೇರೆಬೇರೆ ಆಕೃತಿವಿಶಿಷ್ಟವಾಗಿರುವದರಿಂದ, ಅವುಗಳ ಆಕಾರಗಳನ್ನು ಹೇಳುತ್ತಾರೆ. ಮತ್ತು ಆಕಾರಗಳ ಭೇದಗಳಿಂದ [೮] ವಿಧವಾದ ಸಂಧಿಗಳಿರುತ್ತವೆಯೆಂದು ಹೇಳಿದ್ದಾರೆ. ಅವಾವ ವಸ್ತುಗಳಿಗೆ ಹೋಲಿಸಿಯೇ ಸಂಧಿಗಳ ಹೆಸರುಗಳನ್ನಿಟ್ಟಿದ್ದಾರೆ. ಇದರಿಂದ ಹೆಸರುಗಳಿಂದಲೇ ಅಸ್ಥಿಸಂಧಿಗಳ ಆಕಾರಗಳು ತಿಳಿಯುವಂತೇ ಇರುತ್ತವೆ. ಆದ್ದರಿಂದ ಸಂಧಿಗಳ ಹೆಸರುಗಳನ್ನು ತಿಳಿದುಕೊಂಡರೆ ಆಕೃತಿಯ ಜ್ಞಾನವಾಗುತ್ತದೆ.

(೧)ಕೋರ, (೨) ಉಲೂಖಲ, (೩) ಸಾಮುದ್ಗ, (೪) ಪ್ರತರ, (೫)ತುನ್ನಸೇವನೀ, (೬)ವಾಯಸತುಂಡ, (೭)ಮುಂಡಲ, (೮)ಶಂಖ್ಯಾವರ್ತಗಳೆಂಬ ಎಂಟು ಪ್ರಕಾರವಾದ ಅಸ್ಥಿಸಂಧಿಗಳು ಇರುತ್ತವೆ

[೧] ಕೋರ [ತೆಗ್ಗು, ಹೂವಿನ ಮುಗ್ಗಿ] ಇವುಗಳಂತೆ ಇರುವ ಸಂಧಿಗಳು ಅಸ್ಥಿಗಳು ಕೂಡುವ ಪೊಳ್ಳು ಭಾಗವು ಬಹಳ ತಗ್ಗುಳ್ಳದ್ದಾಗಿರುತ್ತದೆ ಅಥವಾ ಹೂವಿನ ಮುಗ್ಗಿಯಂತೆ ಇರುತ್ತದೆ. ಇಂಥ ಸಂಧಿಗಳಿಗೆ "ಕೋರ" ಎಂದು ಅನ್ನುತ್ತಾರೆ

[೨] ಉಲೂಖಲ [ವಳ್ಳ, ವರಳು] ಇದರಂತೇ ಇರುವ ಸಂಧಿಗಳಿಗೆ "ಉಲೂಖಲ" ಸಂಧಿಗಳೆಂದು ಹೇಳುತ್ತಾರೆ.

[೩] ಸಾಮುದ್ಗ [ಸಂಪುಟ] ಆಕಾರದಂತೆ ಇರುವ ಅಸ್ಥಿಸಂಧಿಗಳು. ಇವುಗಳಿಗೆ "ಸಾಮುದ್ಗ"ವೆಂದು ಹೇಳುತ್ತಾರೆ

[೪] ಪ್ರತರ [ಸಮತಲವುಳ್ಳ] ಅಸ್ಥಿಗಳ ಸಂಧಿಗಳು ಒಂದಕ್ಕೊಂದು ಹತ್ತಿಕೊಂಡು ಸ್ವಲ್ಪೀ ಚಲನೆಯುಳ್ಳವುಗಳಿರುತ್ತವೆ. ಪ್ರತರವೆಂದರೆ ಸವ ಪ್ರದೇಶ, ಇದರಂತೇ ಇರುವ ಅಸ್ಥಿಗಳು ಕೂಡುವ ಸಂಧಿಗಳಿಗೆ "ಪ್ರತರ" ವೆಂದು ಹೇಳುತ್ತಾರೆ.

[೫[ತುನ್ನಸೇವನೀ [ಹೊಲಿಗೆಯಂತೇ ಇರುವ] ಅಸ್ಥಿಸಂಧಿಗಳು ಎರಡು ವಸ್ತ್ರಗಳನ್ನು ಕೂಡಿಸಿ ಹೊಲಿದರೆ, ಹೇಗೆ ಹೊಲಿದ ಸ್ಥಳದಲ್ಲಿ ಸಂಧಿ

ಯುಕ್ತವಾಗುತ್ತದೆಯೋ, ಇದರಂತಿರುವ ಸಂಧಿಗಳಿಗೆ "ತುನ್ನಸೇವನೀ" ಎಂದು ಹೆಸರಿಸುತ್ತಾರೆ

[೬] **ನಾಯಸತುಂಡ** [ಕಾಗೆಯಬಾಯಿ, ಚುಂಚು] ಇದರಂತೆಯೇ ಇರುವ ಅಸ್ಥಿಸಂಧಿಗಳು. ಇವುಗಳಿಗೆ "ನಾಯಸತುಂಡ" ಎಂದು ಹೇಳುತ್ತಾರೆ

[೭] **ಮುಂಡಲ** [ವರ್ತುಲ, ದುಂಡಾಗಿರುವ] ಅಸ್ಥಿಸಂಧಿಗಳು. ಇವುಗಳಿಗೆ "ಮುಂಡಲ" ಎಂದು ಹೇಳುತ್ತಾರೆ

[೮] **ಶಂಖಾವರ್ತ** [ಶಂಖದ ಮುರಿಗೆ] ಇರುವಂತೇ ಇರುವ ಅಸ್ಥಿಸಂಧಿಗಳು. ಇವುಗಳು ಒಳಗೆ ಶಂಖದ ಆವರ್ತನದಂತೆ ಮುರಿಗೆಯಿಂದ ಕೂಡಿರುತ್ತವೆ ಆದ್ದರಿಂದ ಇವುಗಳಿಗೆ "ಶಂಖಾವರ್ತ" ಎಂಬ ಹೆಸರು

ಕೋರಾದಿಸಂಧಿಗಳಸ್ಥಾನ

ತೇಷಾಮಂಗುಲಿಮಣಿಬಂಧ ಗುಲ್ಫಜಾನುಕೂರ್ಪರೇಷುಕೋರಾಃಸಂಧಯಃ॥ ಕಕ್ಷಾವಂಕ್ಷಣದಶನೇಷೂಲೂಖಲಾಃ॥ ಅಂಸಪೀಠಗುದಭಗನಿತಂಬೇಷುಸಾಮುದ್ಗಾಃ॥ ಗ್ರೀವಾಪೃಷ್ಠವಂಶಯೋಃ ಪ್ರತರಾಃ॥ ಶಿರಃ ಕಟಿಕಪಾಲೇಷುತುನ್ನಸೇವನ್ಯಃ॥ ಹನ್ವೋರುಭಯತಸ್ತು ನಾಯಸತುಂಡಾಃ॥ ಕಂಠಹೃದಯನೇತ್ರಕ್ಲೋಮನಾಡೀಷುಮುಂಡಲಾಃ। ಶ್ರೋತ್ರಶೃಂಗಾಟಕೇಷುಶಂಖಾವರ್ತಾಃ॥ ತೇಷಾಂನಾಮುಭಿರೇವಾಕೃತಯಃ ಪ್ರಾಯೇಣವ್ಯಾಖ್ಯಾತಾಃ ॥ [ಸುಶ್ರುತ॥ ಶಾರೀರ॥ ೮ ಅ ಸೂ. ೨೭]

ಅಸ್ಥಿ ಸಂಧಿಗಳಲ್ಲಿಯ ಕೋರಾದಿ ಭೇದಗಳನ್ನು ಹೇಳಿ, ಇವುಗಳಿರುವ ಸ್ಥಾನಗಳನ್ನು ಹೇಳುತ್ತಾರೆ. ಮತ್ತು ತಂತ್ರಾದಿಗಳಲ್ಲಿ ಹೇಳಿದ ಚಲಸ್ಥಿರಾದಿ ಭೇದಗಳನ್ನೂ ಸೂಚಿಸುತ್ತಾರೆ

(೧) **ಅಂಗುಲಿ** (ಬೆರಳು), **ಮಣಿಬಂಧ** (ಹಸ್ತದ ಬುಡದ ಸಂಧಿ, ಕೈಹಿದಡು), **ಗುಲ್ಫ** (ಪಾದದಪಾರ್ಶ್ವಗಂಟಿನಭಾಗದಲ್ಲಿಯ ಸಂಧಿ), **ಜಾನು**

(ಮೊಳಕಾಲ ಸಂಧಿ), **ಕೂರ್ಪರ** (ಮೊಳಕೈ ಸಂಧಿ), ಇವುಗಳಲ್ಲಿ "**ಕೋರ**" ಸಂಧಿಗಳು ಇರುತ್ತವೆ. ಕೋರ ಸಂಧಿಗಳು ಬಹುಚಲ (ಬಹುಜೇಷ್ಟ) ಸಂಧಿಗಳಾಗಿರುತ್ತವೆ

(೨) **ಕಕ್ಷ** (ಬಾಹುಮೂಲಸಂಧಿ), **ವಂಕ್ಷಣ** (ತೊಡೆಯ ಮೇಲಿನ ಸಂಧಿ), **ದಶನ** (ಹಲ್ಲುಗಳು), ಇವುಗಳಲ್ಲಿ "**ಉಲೂಖಲ**" ಸಂಧಿಗಳು ಇರುತ್ತವೆ ಸ್ಥಿರವಾದ ಹಲ್ಲುಗಳ ಸಂಧಿ ಹೊರತಾಗಿ, ಉಳಿದ ಉಲೂಖಲ ಸಂಧಿಗಳು ಬಹುಚಲ ಸಂಧಿಗಳಾಗಿರುತ್ತವೆ

(೩) **ಅಂಸಪೀಠ** (ಅಂಸಫಲಕ, ಭುಜಾಸ್ಥಿ ಕೊನೇಭಾಗ), **ಗುದ** (ಮಲನಿರ್ಗಮನ ದ್ವಾರ ಭಾಗ), **ಭಗ** (ಸ್ತ್ರೀ ಜನನೇಂದ್ರಿಯ ಸ್ಥಾನ), **ನಿತಂಬ** (ಕಟಿಯ ಹಿಂದಿನ ಭಾಗ, ತಿಕ), ಇವುಗಳಲ್ಲಿ ಸಂಪುಟಕದಂತಿರುವ "**ಸಾಮುದ್ಗ**" ಸಂಧಿಗಳಿರುತ್ತವೆ ಸಾಮುದ್ಗ ಸಂಧಿಗಳು ಅಲ್ಪಚೇಷ್ಟ ಸಂಧಿಗಳಾಗಿರುತ್ತವೆ. ತಂತ್ರಾಂತರದಲ್ಲಿ **ಪಾದದಲ್ಲಿ** ಸಹ ಸಾಮುದ್ಗ ಸಂಧಿಗಳಿರುತ್ತವೆಂದು ಹೇಳಿದ್ದಾರೆ

(೪) **ಗ್ರೀವಾ** (ಕುತ್ತಿಗೆ), **ಪೃಷ್ಠವಂಶ** (ಬೆನ್ನುಹುರಿ, ಕಶೇರುಕಾಸ್ಥಿ), ಇವುಗಳಲ್ಲಿ "**ಪ್ರತರ**" ಎಂಬ ಅಸ್ಥಿ ಸಂಧಿಗಳಿರುತ್ತವೆ. ಪ್ರತರ ಸಂಧಿಗಳು ಅಲ್ಪಚಲ ಸಂಧಿಗಳಾಗಿರುತ್ತವೆ.

(೫) **ಶಿರಃ ಕಪಾಲ** (ತಲೆ ಪರಟೆ), **ಕಟಿ ಕಪಾಲ** (ಟೊಂಕದಲ್ಲಿಯ ಎಲುಬಿನ ಪರಟೆ), ಇವುಗಳಲ್ಲಿಯ ಅಸ್ಥಿ ಸಂಧಿಗಳಿಗೆ "**ತುನ್ನಸೇವನೀ**" ಎಂದು ಹೇಳುತ್ತಾರೆ. ಇವು ಸ್ಥಿರ ಸಂಧಿಗಳಾಗಿರುತ್ತವೆ.

(೬) **ಹನು** (ಕಪೋಲಗಳಕೆಳಪ್ರದೇಶ)ಗಳಲ್ಲಿರುವ ಅಸ್ಥಿ ಸಂಧಿಗಳಿಗೆ "**ವಾಯುಸತುಂಡ**"ವೆಂದು ಹೇಳುತ್ತಾರೆ. ಹನು ಪ್ರದೇಶ ಸಂಧಿಗಳು ಬಹುಚಲವಾಗಿರುತ್ತವೆ

(೭) **ಕಂಠನಾಡೀ** (ಕುತ್ತಿಗೇನಾಳ), **ಹೃದಯನಾಡೀ** (ಹೃದಯ ಸ್ಥಾನ ಎದೆಯಲ್ಲಿ), **ಕ್ಲೋಮನಾಡೀ** (ಪಿಪಾಸಾಸ್ಥಾನ ನಾಡಿ), **ನೇತ್ರ**

(ಕಣ್ಣಿನಸ್ಥಾನ), ಇವುಗಳಲ್ಲಿ"**ಮುಂಡಲ**" ಸಂಧಿಗಳು ಇರುತ್ತವೆ. ನಾಡೀ ಶಬ್ದವನ್ನು ಕಡೆಗೆ ಇಟ್ಟಿದ್ದರಿಂದ ಪ್ರತಿಯೊಂದಕ್ಕೂ ಸಂಬಂಧವಿರುವದೆಂದು ತಿಳಿಯಬೇಕು.

(೮) **ಶ್ರೋತ್ರ** (ಕಿವಿ), **ಶೃಂಗಾಟಕಗಳಲ್ಲಿ,** ಅಸ್ಥಿ ಸಂಧಿಗಳು ಶಂಖಾವರ್ತ (ಶಂಖದ ಮುರಿಗೆಯಂತೆ) ಮುರಿಗೆಯುಳ್ಳವಾಗಿರುತ್ತವೆ. ಆದ್ದರಿಂದ ಇವುಗಳಿಗೆ "**ಶಂಖಾವರ್ತ**'ವೆಂಬ ಹೆಸರನ್ನು ಹೇಳುತ್ತಾರೆ. ಶೃಂಗಾಟಕವೆಂದರೆ ನಾಲ್ಕು ವಿಭಾಗಗಳು ಕೂಡಿದಂಥವುಗಳೆಂದು ಅರ್ಥವಾಗುತ್ತದೆ. ಇಲ್ಲಿ ನಾಲ್ಕು ವಿಭಾಗ ಕೂಡಿದ ಸ್ಥಳಗಳನ್ನು ಮುಂಡಲವೆಂದೂ ಹೇಳಿದ್ದಾರೆ. ಶೃಂಗಾಟಕವೆಂದರೆ ಮರ್ಮಸ್ಥಾನದಲ್ಲಿ ಹೇಳಲ್ಪಟ್ಟಂಥವುಗಳು. **ನಾಸಿಕಾ, ಕರ್ಣ, ನೇತ್ರ, ಜಿಹ್ವಾದಬುಡ,** ಸ್ಥಾನಗಳಾಗಿರುತ್ತವೆ. ನೇತ್ರ ಸ್ಥಾನದಲ್ಲಿ "**ಮುಂಡಲ**" ಸಂಧಿಯೆಂದು ಹಿಂದೆ ಹೇಳಿದ್ದಾರೆ. ಆದ್ದರಿಂದ "**ಕಿವಿ ನಾಸಿಕಾ**"ಗಳಲ್ಲಿಯು ಮೃದ್ವಸ್ಥಿ ಸಂಧಿಗಳು ಶಂಖಾವರ್ತಗಳೆಂದು ಪ್ರತ್ಯಕ್ಷ ಶಾರೀರದವರು ಗ್ರಹಿಸಿರುತ್ತಾರೆ. ಅಥವಾ "**ಶ್ರೋತ್ರ ಶೃಂಗಾಟಕೇಷು**" ಕಿವಿಗಳ ಸುತ್ತಲೂ ಆವರಿಸಿದ್ದರಿಂದ ಶೃಂಗಾಟಕವೆಂದು ಹೇಳಬಹುದು ಇವುಗಳಲ್ಲಿ ಶಂಖದ ಮುರಿಗೆ ಇದ್ದಂತೇ ಸಂಧಿಗಳಿರುವದರಿಂದ, ಕಿವಿಗಳಲ್ಲಿ ಶಂಖಾವರ್ತಸಂಧಿಗಳೆಂದುಹೇಳಬಹುದು. ಇಲ್ಲಿ ಎರಡು ಮತಗಳನ್ನು ಸೂಚಿಸಿದಂತೆ ಆಯಿತು. (೧)ನಾಸಿಕಾ, ಕರ್ಣ, ನೇತ್ರ, ಜಿಹ್ವಾ ಇವುಗಳಲ್ಲಿಯು ಸಿರಾ ಕೂಡುವ ಸ್ಥಾನಕ್ಕೆ ಶೃಂಗಾಟಕವೆಂದ ಮರ್ಮಸ್ಥಾನದಲ್ಲಿಗ್ರಹಿಸಿರುವದರಿಂದ, ಇವುಗಳೂ ಶೃಂಗಾಟಕ ಸಂಜ್ಞೆವುಳ್ಳವುಗಳಿರುತ್ತವೆ (೨) ನಾಲ್ಕೂ ಭಾಗಗಳು ಸುತ್ತಲೂ ಯುಕ್ತವಾಗಿರುವದರಿಂದ "**ಶ್ರೋತ್ರ ಶೃಂಗಾಟಕ**" ಕಿವಿಗಳ ಸುತ್ತಲೂ ಆವರಿಸಿದ ಭಾಗ, ಮುರಿಗೆಯಂತಿರುವದರಿಂದ ಶಂಖಾವರ್ತಗಳೆಂದು ಅನ್ನುತ್ತಾರೆ. ಇದೇ ಯೋಗ್ಯ ಮತವಾಗಿರುತ್ತದೆ. ಯಾಕಂದರೆ ಮೊದಲು ನೇತ್ರವನ್ನು **ಮುಂಡಲ** ಸಂದಿಯಲ್ಲಿ ಗ್ರಹಿಸಿದ್ದಾರೆ. **ಪ್ರತ್ಯಕ್ಷ ಶಾರೀರದಲ್ಲಿ** ನಾಸಿಕಾ ಸ್ಥಾನ ಮತ್ತು ಕರ್ಣಗಳ ಸುತ್ತಲಿರುವ ಮುರಿಗೆಯಂತಿರುವ **ಭಾಗಗಳೆಂದು** ವಿವರಿಸಿದ್ದಾರೆ. ಶೃಂಗಾಟಕ ಶಬ್ದದ ಅರ್ಥ ಸ್ಥಾನಗಳನ್ನು ಸಂಧಿಗಳಲ್ಲಿ ವಿವರಿಸಿಲ್ಲವಾದ್ದರಿಂದ, ಸಾಮಾನ್ಯತಃ ಅರ್ಥಾನು

ಸಾರ ಮರ್ಮಸ್ಥಾನದಲ್ಲಿ ಹೇಳಿದ ಶೃಂಗಾಟಕದಿಂದ, ಸ್ಥಾನಸಾಮ್ಯವನ್ನು ಗ್ರಹಿಸಿ ಹೇಳಿದ್ದೇನೆ

ಇವು ಎಂಟುವಿಧವಾದ ಅಸ್ಥಿಸಂಧಿಗಳೂ ಮತ್ತು ಅವುಗಳ ಸ್ಥಾನಗಳೂ ಆಗಿರುತ್ತವೆ. **ಬಹುಚಲ ಅಲ್ಪಚಲ** ಸಂಧಿಗಳನ್ನು ವಿವರಿಸಿದೆ. **ಉಳಿದವುಗಳು** ಸ್ಥಿರಸಂಧಿಗಳೆಂದು ತಿಳಿದುಕೊಳ್ಳಬೇಕು

ಸಂಧಿಸಂಖ್ಯೆಯ ಬಗ್ಗೆ

ಸಂಖ್ಯಾತಸ್ತು ದಶೋತ್ತರೇದ್ವೇಶತೇ ॥
[ಸುಶ್ರುತ॥ ಶಾರೀರ॥ ಅ. ೫ ಸೂ. ೨೭]
ಸಂಧೀನಾಂತು ಸಹಸ್ರೇದ್ವೇ ನಿಜಗಾದಾತ್ರಿ ನಂದನಃ ॥
[ವಾಗ್ಭಟ॥ ಶಾರೀರ॥ ಅ. ೩ ಶ್ಲೋ ೧೭]

ಸುಶ್ರುತದಲ್ಲಿ ಭಗವಾನ್ ಧನ್ವಂತರಿ ಮತದಂತೆ [೨೧೦] ಅಸ್ಥಿಸಂಧಿಗಳು ಹೇಳಲ್ಪಟ್ಟಿರುತ್ತವೆ.

ವಾಗ್ಭಟದಲ್ಲಿ ಆತ್ರೇಯ ಮತದಂತೆ [೨೦೦೦] ಅಸ್ಥಿಸಂಧಿಗಳು ಉಕ್ತವಾಗಿವೆ

ಅಸ್ಥ್ನಾಂತುಸಂಧಯೋಹ್ಯೇತೇ ಕೇವಲಾಃ ಪರಿಕೀರ್ತಿತಾಃ ॥
ಪೇಶೀಸ್ನಾಯುಸಿರಾಣಾಂತುಸಂಧಿ ಸಂಖ್ಯಾನವಿದ್ಯತೆ ॥
[ಸುಶ್ರುತ॥ ಶಾರೀರ॥ ಅ. ೫ ಶ್ಲೋ ೩೮]

ಈಗ ಹೇಳಿದ ಸಂಧಿಗಳೆಂದರೆ ಅಸ್ಥಿಸಂಧಿಗಳೆಂದು ತಿಳಿಯಬೇಕು. ಕೇವಲ ಅಸ್ಥಿಸಂಧಿಗಳಷ್ಟೇ ಹೇಳಲ್ಪಟ್ಟಿರುತ್ತವೆ. ಪೇಶೀ ಸ್ನಾಯು ಸಿರಗಳ ಸಂಧಿ ಸಂಖ್ಯೆಯು ಹೇಳಲ್ಪಟ್ಟಿರುವುದಿಲ್ಲ. ಅಥವಾ ಪೇಶ್ಯಾದಿಗಳ ಸಂಧಿ ಸಂಖ್ಯೆಯು ಅಸಂಖ್ಯಾತವಿರುತ್ತದೆಂದು ತಿಳಿಯಬೇಕು ಆದ್ದರಿಂದ ಸಂಧಿಗಳೆಂದರೆ ಅಸ್ಥಿಸಂಧಿಗಳೆಂದೇ ತಿಳಿಯಬೇಕು.

ಸಂಧಿಗಳ ಗಣನೆಯು

ತೇಷಾಮ್ ಶಾಖಾಸ್ವಷ್ಟಷಷ್ಟಿಃ, ಏಕೋನಷಷ್ಟಿಃ ಕೋಷ್ಠೇ, ಗ್ರೀವಾಂ ಪ್ರತ್ಯೂರ್ಧ್ವಂ ತ್ರ್ಯಶೀತಿಃ ॥
(ಸುಶ್ರುತ॥ ಶಾರೀ೦॥ ಅ ೫ ಸೂ ೨೬)

ಅವಾವ ಸ್ಥಾನಗಳನ್ನನುಸರಿಸಿ ಅಸ್ಥಿಸಂಧಿಗಳ ಸ್ಥೂಲವಿಭಾಗ ಸಂಖ್ಯೆಯನ್ನು ಹೇಳುತ್ತಾರೆ ಕೈ ಕಾಲುಗಳಲ್ಲಿ ಕೂಡಿ [೬೮], ಕೋಷ್ಠಸ್ಥಾನಗಳಲ್ಲಿ [೫೯], ಕುತ್ತಿಗೆಯಿಂದ ಆರಂಭಿಸಿದ ಮೇಲ್ಗಡೆಗೆ [೮೩], ಅಸ್ಥಿಸಂಧಿಗಳು ಇರುತ್ತವೆ

ಶಾಖಾಸು [೬೮], ಕೋಷ್ಠೇ [೫೯], ಗ್ರೀವೋರ್ಧ್ವಂ [೮೩], ಒಟ್ಟು ಸ್ಥೂಲವಾದ ವಿಭಾಗದಿಂದ ಅಸ್ಥಿಸಂಧಿ ಸಂಖ್ಯೆಯು [೨೧೦] ಇರುತ್ತದೆ

ಅಸ್ಥಿಸಂಧಿಗಳ ವಿಭಾಗಶಃ ಪ್ರತ್ಯೇಕ ವಿವರಣೆ

ಏಕೈಕಸ್ಯಾಂಸಾದಾಂಗುಲ್ಯಾಂತ್ರಯಸ್ತ್ರಯಃ, ದ್ವಾವಂಗುಷ್ಠೇ, ತೇಚತುರ್ದಶ; ಜಾನುಗುಲ್ಫವಂಕ್ಷಣೇಷ್ವೇಕೈಕಃ, ಏವಂ ಸಪ್ತದಶೈಕಸ್ಮಿನ್ ಸಕ್ಥ್ನಿ ಭವಂತಿ; ಏತೇನೇತರಸಕ್ಥ್ಯಬಾಹೂಚವ್ಯಾಖ್ಯಾತೌ;॥ ತ್ರಯಃ ಕಟೀಕಪಾಲೇಷು, ಚತುರ್ವಿಂಶತಿಃ ಪೃಷ್ಠವಂಶೇ, ತಾವಂತಏವಪಾರ್ಶ್ವಯೋಃ, ಉರಸ್ಯಷ್ಟೌ;॥ ತಾವಂತ ಏವ ಗ್ರೀವಾಯಾಂ, ತ್ರಯಃ ಕಂಠೇ, ನಾಡೀಷುಹೃದಯಕ್ಲೋಮನಿಬದ್ಧಾಸ್ತ್ವಷ್ಟಾದಶ, ದಂತಪರಿವೋಷ್ಠಾ ದಂತಮೂಲೇಷು, ಏಕಃ ಕಾಕಲಕೇ ನಾಸಾಯಾಂ ಚ, ದ್ವೌವರ್ತ್ಮಮಂಡಲಯೋರ್ನೇತ್ರಾಶ್ರಯೌ, ಗಂಡಕರ್ಣಶಂಖೇಷ್ವೇಕೈಕಃ, ದ್ವೌ ಹನುಸಂಧೀ, ದ್ವಾವುಪರಿಷ್ಟಾದ್ಭ್ರುವೋಃ ಶಂಖಯೋಶ್ಚ, ಪಂಚಶಿರಃ ಕಪಾಲೇಷು, ಏಕೋವಮೂರ್ಧ್ನಿ ॥
[ಸುಶ್ರುತ ಶಾರೀರ॥ ಅ. ೫ ಸೂ. ೨೬]

ಶಾಖಾಗಳಲ್ಲಿಯ ಸಂಧಿಗಳು

ಒಂದೊಂದುಪಾದದಬೆರಳಿನಲ್ಲಿ (೩) ಸಂಧಿಗಳು ಇರುತ್ತವೆ. ಅಂಗುಷ್ಠ ಬೆರಳಿನಲ್ಲಿ ಮಾತ್ರ (೨) ಸಂಧಿಗಳಿರುತ್ತವೆ. ಒಟ್ಟು ಒಂದು ಪಾದದಲ್ಲಿಯ ಬೆರಳುಗಳ ಸಂಧಿಗಳು (೧೪) ಇರುತ್ತವೆ **ಜಾನು** (ಮೊಣಕಾಲ ಮೇಲಿನ ಸಂಧಿ), **ಗುಲ್ಫ** (ಪಾದದಲ್ಲಿಯ ಪಾರ್ಶ್ವಗಂಟುಗಳಲ್ಲಿ ಸಂಧಿಗಳು), **ವಂಕ್ಷಣ** (ತೊಡೆಯ ಅಸ್ಥಿಸಂಧಿಗಳು), ಇವುಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದರಂತೆ (೩) ಸಂಧಿಗಳು. ಹೀಗೆ ಒಂದು ಕಾಲಿನಲ್ಲಿ (೧೭) ಅಸ್ಥಿಸಂಧಿಗಳು ಇರುತ್ತವೆ ಇದರಂತೇ ಮತ್ತೊಂದು ಕಾಲು ಎರಡು ಬಾಹುಗಳಲ್ಲಿಯ ಸಂಖ್ಯೆಗಳನ್ನು ತಿಳಿಯಬೇಕು. ಒಟ್ಟು (೬೮) ಅಸ್ಥಿಸಂಧಿಗಳು ಶಾಖಾಗಳಲ್ಲಿ ಇರುತ್ತವೆಂದು ಹೇಳುತ್ತಾರೆ

ಕೋಷ್ಠ ಸ್ಥಾನದಲ್ಲಿಯ ಸಂಧಿಗಳು

ಕಟಿಕಪಾಲ (ಟೊಂಕದ ಕವಾಲಾಸ್ಥಿಗಳು) ಈ ಸ್ಥಾನಗಳಲ್ಲಿ (೩) ಅಸ್ಥಿಸಂಧಿಗಳಿರುತ್ತವೆ

ಪೃಷ್ಠವಂಶೀ (ಕಶೇರುಕಾಸ್ಥಿಗಳು) ಇವುಗಳಲ್ಲಿ ಅಸ್ಥಿ ಸಂಧಿಗಳು (೨೪) ಇರುತ್ತವೆ.

ಪಾರ್ಶ್ವಗಳಲ್ಲಿ (ಎಡಬಲದ ಪಕ್ಕಗಳು) ಇವುಗಳಲ್ಲಿ (೨೪) ಸಂಧಿಗಳು ಇರುತ್ತವೆ **ಉರಸಿ** (ಎದೆಯಲ್ಲಿ) ಅಸ್ಥಿಸಂಧಿಗಳು (೮) ಇರುತ್ತವೆ.

ಕಟಿಕಪಾಲಗಳಲ್ಲಿ (೩), **ಪೃಷ್ಠವಂಶೀ** (೨೪), **ಪಾರ್ಶ್ವಗಳಲ್ಲಿ** (೨೪), **ಉರಸಿ** (೮), ಒಟ್ಟು ಕೋಷ್ಠ ಪ್ರದೇಶದಲ್ಲಿ (೫೯) ಅಸ್ಥಿಸಂಧಿಗಳಿರುತ್ತವೆ.

ಗ್ರೀವಾ (ಕುತ್ತಿಗೆ) ಸ್ಥಾನದಲ್ಲಿ ಅಸ್ಥಿ ಸಂಧಿಗಳು (೮) ಇರುತ್ತವೆ. **ಕಂಠ** (ಕಂಠನಾಡೀ) ಭಾಗದಲ್ಲಿ (೩) ಸಂಧಿಗಳಿರುತ್ತವೆ **ಹೃದಯನಾಡೀ** (ಹೃದಯಕ್ಕೆ ಅಂಟಿಕೊಂಡಿರುವ ನಾಡಿ), **ಕ್ಲೋಮನಾಡೀ** (ಪಿಪಾಸಾಸ್ಥಾನ

ನಾಡಿ) ಇವುಗಳಲ್ಲಿ (೧೪) ಸಂಧಿಗಳು **ದಂತಮೂಲೇಷು** (ಪಲ್ಲುಗಳ ಬುಡ ಗಳು) ಈ ಸ್ಥಾನಗಳಲ್ಲಿ [೩೨] ಸಂಧಿಗಳಿರುತ್ತವೆ **ಕಾಕಲಕ** [ಗಲಮಣಿ, ಕಂಠನಾಳದಲ್ಲಿಯ ಗಂಟು] ಸ್ಥಾನದಲ್ಲಿ [೧] ಸಂಧಿಯು ಇರುತ್ತದೆ **ನಾಸಾ** [ಮೂಗು] ಈ ಸ್ಥಾನದಲ್ಲಿ [೧] ಸಂಧಿಯು **ವರ್ತ್ಮಮಂಡಲ** [ಕಣ್ಣು ರೆಪ್ಪೆ ಗಳ ಸ್ಥಾನ **ಕಣ್ಣನ್ನು** ಆಶ್ರಯಿಸಿ ಇದ್ದಂಥವುಗಳು] ತರುಣಾಸ್ಥಿ ಸಂಧಿಗಳು (೨) ಇರುತ್ತವೆ. **ಗಂಡ** (ಕಪೋಲ), **ಕರ್ಣ** (ಕಿವಿ), **ಶಂಖ** ಸ್ಥಾನಗಳಲ್ಲಿ ಒಂದೊಂದರಂತೆ (೬) ಸಂಧಿಗಳಿರುತ್ತವೆ **ಹನು** (ಕಪೋಲ ಕೆಳಭಾಗ) ಸ್ಥಾನಗಳಲ್ಲಿ (೨) ಸಂಧಿಗಳು ಇರುತ್ತವೆ. **ಭ್ರೂರುಪರಿಷ್ಟಾತ್** (ಹುಬ್ಬು ಗಳ ಮೇಲ್ಭಾಗದಲ್ಲಿ) ಅಸ್ಥಿ ಸಂಧಿಗಳು (೨), **ಶಂಖಯೋಃ** (ಶಂಖಮರ್ಮ ಗಳ ಮೇಲ್ಭಾಗ) ಸ್ಥಾನಗಳಲ್ಲಿ (೨) ಸಂಧಿಗಳು, **ಶಿರಃಕಪಾಲ** (ತಲೇಪಂಟೆ) ಗಳಲ್ಲಿ (೫) ಸಂಧಿಗಳಿರುತ್ತವೆ, **ಮೂರ್ಧ್ನಿ** (ನೆತ್ತಿಯ ಸ್ಥಾನ) ಈ ಪ್ರದೇಶದಲ್ಲಿ (೧) ಅಸ್ಥಿಸಂಧಿಯು ಇರುತ್ತದೆ.

ಗ್ರೀವಾ (೮), **ಕಂಠ** (೩), **ಹೃದಯಾದಿ ನಾಡೀಗಳಲ್ಲಿ** (೧೮), **ದಂತಸ್ಥಾನ** (೩೨), **ಕಾಕಲಕ**(೧), **ನಾಸಾ**(೧), **ವರ್ತ್ಮಮಂಡಲ** (೨), **ಗಂಡಾದಿ**(೬), **ಹನು**(೨), **ಭ್ರುವೋರೂರ್ಧ್ವಂ** (೨), **ಶಂಖೋರ್ಧ್ವಂ** (೨), **ಶಿರಃಕಪಾಲ** (೫), **ನೆತ್ತಿಯಲ್ಲಿ** (೧), **ಈ** ಮೊದಲಾದ ಸ್ಥಾನಗಳ ಲ್ಲಿಯ ಅಸ್ಥಿ ಸಂಧಿಗಳು ಒಟ್ಟು ಕೂಡಿ (೮೩) ಇರುತ್ತವೆ.

ಎಲ್ಲ ಮುಖ್ಯ ಸ್ಥಾನಗಳಲ್ಲಿಯ ಅಸ್ಥಿ ಸಂಖ್ಯೆಯನ್ನು ಒಟ್ಟು ಹಿಂದೆ ಹೇಳಿರುತ್ತದೆ.

(೫೬) ಸ್ನಾಯುಗಳವಿವರಣೆಯು

ದೇಹದಲ್ಲಿರುವ ಮಾಂಸ ಮೊದಲಾದ ದ್ರವ್ಯಗಳನ್ನು ಅವಾವ ಸ್ಥಾನ ಗಳಲ್ಲಿ ಬಿಗಿದು ಕಟ್ಟಿದ ಪಟ್ಟಿಯಂತಿರುವ ಬಂಧನ ವಿಶೇಷಗಳಿಗೆ "**ಸ್ನಾಯು**" ವೆಂದು ಹೇಳುತ್ತಾರೆ. ಈ ಸ್ನಾಯು ಬಂಧನಗಳಿಂದಲೇ ಶರೀರದಲ್ಲಿರುವ ದ್ರವ್ಯಗಳು ಅಲ್ಲಲ್ಲಿ ಕದಲದೇ ಸ್ಥಿರವಾಗಿ ನಿಂತಿರುತ್ತವೆ.

ಸ್ನಾಯುಗಳು [೯೦೦] ಇರುತ್ತವೆ ದೇಹದಲ್ಲಿ ಸ್ನಾಯುಗಳು ಎವಾವ ಸ್ಥಾನಗಳಿಗೆ ಅನುಗುಣವಾಗಿ ಬೇರೆ ಬೇರೆ ಆಕಾರವುಳ್ಳವುಗಳಾಗಿರುತ್ತವೆ. ಆಕೃತಿಗಳಿಗನುಗುಣವಾಗಿ ವಿಭಾಗಿಸಿ ನಾಲ್ಕು ವಿಧವಾದ ಸ್ನಾಯುಗಳು ಇರುತ್ತವೆಂದು ಹೇಳಿದ್ದಾರೆ.

ಸ್ನಾಯೂಶ್ಚತುರ್ವಿಧಾವಿದ್ಯಾತ್ತಾಸ್ತು ಸರ್ವಾನಿಬೋಧಮೇ ॥
ಪ್ರತಾನವತ್ಯೋವೃತ್ತಾಶ್ಚ ಪೃಥ್ವ್ಯಶ್ಚ ಶುಷಿರಾಸ್ತಥಾ ॥೩೦॥
ಪ್ರತಾನವತ್ಯಃ ಶಾಖಾಸು ಸರ್ವಸಂಧಿಷು ಚಾಪ್ಯಥ ॥
ವೃತ್ತಾಸ್ತು ಕಂಡರಾಸರ್ವಾವಿಜ್ಞೇಯಾಃ ಕುಶಲೈರಿಹ ॥೩೧॥
ಆಮಪಕ್ವಾಶಯಾಂತೇಷುಬಸ್ತೌ ಚ ಶುಷಿರಾಃ ಖಲು ॥
ಪಾಶ್ವೋರಸಿತಥಾಪೃಷ್ಠೇಪೃಥುಲಾಶ್ಚ ಶಿರಸ್ಯಥ ॥
[ಸುಶ್ರುತ॥ ಶಾರೀರ॥ ಅ. ೫ ಶ್ಲೋ ೩೨]

ಸ್ನಾಯುಗಳು ನಾಲ್ಕು ಪ್ರಕಾರವುಳ್ಳಂಥವುಗಳಿರುತ್ತವೆ ಅವು ಯಾವ ದೆಂಬದನ್ನು ನಿಶ್ಚಯವಾಗಿ ನನ್ನಿಂದ ಸರ್ವವನ್ನೂ ತಿಳಿದುಕೋ, ಎಂದು ಭಗವಾನ್ ಧನ್ವಂತರಿಯು ಸುಶ್ರುತಾದಿ ಶಿಷ್ಯರಿಗೆ ಬೋಧಿಸಿದ ಉಪದೇಶವಾಗಿರುತ್ತದೆ.

[೧] **ಪ್ರತಾನವತ್ಯಃ** [ಬಳ್ಳಿಗಳಂತೇ ಇರುವಂಥವುಗಳು], [೨] **ವೃತ್ತಾಃ** [ವರ್ತುಲ], [೩] **ಪೃಥ್ವ್ಯಃ** [ದಪ್ಪವಾದ, ವಿಸ್ತಾರವಾದವುಗಳು], [೪] **ಶುಷಿರಾಃ** [ಪೊಳ್ಳಿರುವ, ರಂಧ್ರವುಳ್ಳಂಥವುಗಳು], ಹೀಗೆ ನಾಲ್ಕು ಪ್ರಕಾರವಾದ ಸ್ನಾಯುಗಳು ಇರುತ್ತವೆ

[೧] ಶಾಖಾಸು [ಕೈ ಕಾಲುಗಳಲ್ಲಿ], **ಸರ್ವಸಂಧಿಷು** [ಎಲ್ಲಾ ಅಸ್ಥಿ ಸಂಧಿಗಳಲ್ಲಿ], ಬಳ್ಳಿಯಂತಿರುವ [ಪ್ರತಾನವತೀ] ಸ್ನಾಯುಗಳು ಇರುತ್ತವೆ

[೨] ವೃತ್ತ [ವರ್ತುಲ] ಸ್ನಾಯುಗಳಿಗೆ "**ಕಂಡರಾ**" ಎಂದು ಹೇಳುತ್ತಾರೆ. ಈ ಹಿಂದೆ ಕಂಡರಗಳ ವಿವರಣೆಯು ಬಂದಿರುತ್ತದೆ ಕಂಡರಗಳೆಂದರೆ ಮಹಾಸ್ನಾಯುಗಳೆಂದು ಹೇಳಿರುತ್ತಾರೆ.

[೩] ಆಮಾಶಯ [ಅಪಕ್ವ ಅನ್ನವಿರುವ ಸ್ಥಾನ], ಪಕ್ವಾಶಯ [ಮಲಾಶಯ], ಬಸ್ತಿ [ಮೂತ್ರಾಶಯ], ಇವುಗಳಲ್ಲಿ ಸಚ್ಛಿದ್ರ [ಶುಷಿರ] ಸ್ನಾಯುಗಳು ಇರುತ್ತವೆ.

[೪] ಪಾರ್ಶ್ವ [ಎಡಬಲ ಪಕ್ಕಗಳು], ಉರಃ [ಎದೆ], ಪೃಷ್ಠ [ಬೆನ್ನು], ಶಿರಃ [ತಲೆ], ಇವುಗಳಲ್ಲಿ "ಪೃಥುಲಾ" [ದಪ್ಪವಾದ, ಅಗಲವಾಗಿರುವ] ಸ್ನಾಯುಗಳು ಇರುತ್ತವೆ.

ಹೀಗೆ ಸ್ನಾಯುಗಳ ಪ್ರಕಾರ ಮತ್ತು ಸ್ಥಾನಗಳನ್ನೂ ವಿವರಿಸಿದ್ದಾರೆ.

ಸ್ನಾಯುಬಂಧನ ದೃಷ್ಟಾಂತ

ನೌರ್ಯಥಾಫಲಕಾಸ್ತೀರ್ಣಾ ಬಂಧನೈರ್ಬಹುಭಿರ್ಯುತಾ ॥
ಭಾರಕ್ಷಮಾಭವೇದಪ್ಸು ನೃಯುಕ್ತಾ ಸುಸಮಾಹಿತಾ ॥೩೩॥
ಏವನೇವಶರೀರೇಽಸ್ಮಿನ್ ಯಾವಂತಃ ಸಂಧಯಃ ಸ್ಮೃತಾಃ ॥
ಸ್ನಾಯುಭಿರ್ಬಹುಭಿರ್ಬದ್ಧಾಸ್ತೇನಭಾರಸಹಾಸರಾಃ ॥
[ಸುಶ್ರುತ॥ ಶಾರೀರ॥ ಅ. ೫ ಶ್ಲೋ. ೩೪]

ಅನೇಕ ಹಲಿಗೆಗಳಿಂದ ಕೂಡಿದ ನೌಕೆಯು ಬಂಧನಗಳಿಂದ ಬಹು ಪ್ರಕಾರ ಬಿಗಿದು ಕಟ್ಟಿರುವದರಿಂದ, ನೀರಿನಲ್ಲಿ ಭಾರವನ್ನು ಒಯ್ಯಲಿಕ್ಕೂ ಮನುಷ್ಯರು ಕೂಡುಲಿಕ್ಕೂ ಸಮರ್ಥವೂ ಯೋಗ್ಯವಾದದ್ದೂ ಆಗುತ್ತದೆ ಇದರಂತೆ ಶರೀರದಲ್ಲಿಯೂ ಕೂಡ ಎಷ್ಟು ಸಂಧಿಗಳಿರುತ್ತವೆಯೋ ಅವುಗಳು, ಸ್ನಾಯುಗಳಿಂದ ಚನ್ನಾಗಿ ಬಿಗಿದು ಕಟ್ಟಲ್ಪಟ್ಟಿರುತ್ತವೆ ಹೀಗೆ ಚೆನ್ನಾಗಿ ಸಂಧಿಗಳಲ್ಲಿ ಸ್ನಾಯುಬಂಧನವಿರುವದರಿಂದ ಮನುಷ್ಯರು ಭಾರವನ್ನು ಸಹಿಸುತ್ತಾರೆ. ಸಂಧಿಗಳೂ ದೃಢವಾಗಿರುತ್ತವೆ ಹೇಗೆ ನೌಕೆಯ ಹಲಿಗೆಗಳು ಅನೇಕ ಬಂಧನಗಳಿಂದ ಚನ್ನಾಗಿ ಬಂಧಿತವಾಗಿ ನೌಕೆಯಾಗಿ ಕಾರ್ಯಕ್ಷಮವಾಗುತ್ತದೆಯೋ, ಅದರಂತೆ ಶರೀರ ಸಂಧಿಗಳು ಸ್ನಾಯುಗಳಿಂದ ಬಂಧಿತವಾದ್ದರಿಂದ ದೇಹವು ಕರ್ತವ್ಯ ಸಮರ್ಥವಾಗುತ್ತದೆ.

ಸ್ನಾಯುಗಳ ಮಹತ್ವವು

ನಹ್ಯಸ್ಥೀನಿನವಾಸೇಶ್ಯೋನಸಿರಾನಚಸಂಧಯಃ ॥
ವ್ಯಾಪಾದಿತಾಸ್ತಥಾಹನ್ಯುರ್ಯಥಾಸ್ನಾಯುಃ ಶರೀರಿಣಮ್ ॥
ಯಃ ಸ್ನಾಯೂಃ ಪ್ರವಿಜಾನಾತಿಬಾಹ್ಯಾಶ್ಚಾಭ್ಯಂತರಾಸ್ತಥಾ ॥
ಸಗೂಢಂಶಲ್ಯಮಾಹರ್ತುಂ ದೇಹಾತ್ ಶಕ್ನೋತಿದೇಹಿನಾಂ ॥
(ಸುಶ್ರುತ॥ ಶಾರೀರ॥ ಅ ೫ ಶ್ಲೋ ೩೬)

ದೇಹದಲ್ಲಿ ಅಸ್ಥ್ಯಾದಿ ಎಲ್ಲ ಸ್ಥಳಗಳಿಗಿಂತಲೂ ಸ್ನಾಯು ಸ್ಥಾನಗಳಲ್ಲಿ ಹೊಡತಬಿದ್ದರೆ ಮನುಷ್ಯನನ್ನು ಬಹಳದುಃಖಕ್ಕೆ ಗುರಿಮಾಡುತ್ತವೆ ಅಥವಾ ನಾಶವನ್ನೂ ಮಾಡಬಹುದು. ಅಸ್ಥಿ ಪೇಶಿ ಸಿರಾ ಸಂಧಿ ಇವುಗಳು ಆಘಾತ ಹೊಂದಿದರೆ, ಸ್ನಾಯುಗಳು ಆಘಾತ ಹೊಂದಿ ಮನುಷ್ಯನನ್ನು ನಾಶಪಡಿಸು ವಂತೇ ಉಳಿದವುಗಳು ನಾಶಪಡಿಸಲಾರವು. ಅರ್ಥಾತ್ ಸ್ನಾಯುಗಳಲ್ಲಿ ಆಘಾತ ಕಡಿತ ಹೊಡೆತಗಳುಂಟಾದರೆ ತೀವ್ರನಾಶಕವಾಗಿರುತ್ತವೆ. ಇದ ರಷ್ಟು ಇನ್ನಾವ ಸ್ಥಳದಲ್ಲಿ ಹೊಡತಾದಿಗಳು ಬಿದ್ದರೂ ಹಾನಿಯಾಗುವ ದಿಲ್ಲೆಂದು ಹೇಳಿದ್ದಾರೆ. ಯಾವ ವೈದ್ಯನು ದೇಹದ ಒಳಗಡೆ ಮತ್ತು ಹೊರಗಿರುವ ಸ್ನಾಯುಗಳನ್ನು ಅರಿತಿರುತ್ತಾನೆಯೋ, ಅವನು ದೇಹದಲ್ಲಿ ನಟ್ಟಿರುವ ಧೃಢ ಬಾಣಗಳನ್ನು ಕಿತ್ತು ಹೊರಗೆ ತೆಗಿಯಲಿಕ್ಕೆ ಸಮರ್ಥನಾಗು ತ್ತಾನೆ. "ಗೂಢ" ಶಬ್ದದಿಂದ ಅತಿ ಗಾಢವಾಗಿ ಒಳಗೆ ಪ್ರವೇಶಮಾಡಿದ ಬಾಣಾದಿಗಳನ್ನು, ಸ್ನಾಯುವನ್ನು ಹಿಂಸೆಪಡಿಸದೇ ಹೊರಗೆತೆಗೆಯಬೇಕಾಗಿರು ತ್ತದೆನ್ನುವದುಧ್ವನಿತವಾಗುತ್ತದೆ. ಇಂಥ ಪ್ರಸಂಗದಲ್ಲಿ ದೇಹದಲ್ಲಿಯ ಅಂತ ರ್ಬಾಹ್ಯ ಸ್ನಾಯುಗಳ ಸ್ಥಾನವು ಚನ್ನಾಗಿ ಪರಿಚಯವುಳ್ಳವನೇ ಸಮರ್ಥ ನಾಗುತ್ತಾನೆ. ಅಂಥವನು ಸ್ನಾಯುಗಳಿಗೆ ಹಿಂಸೆಯಾಗದಂತೇ ಬಾಣಗಳನ್ನು ಹೊರತೆಗೆಯಬಲ್ಲನು.

ಸ್ನಾಯುಗಳ ವಿವರಣೆ

ನವಸ್ನಾಯುಶತಾನಿ, ತಾಸಾಂಶಾಖಾಸುಷಟ್‌ಶತಾನಿ, ದ್ವೇಶ
ತೇತ್ರಿಂಶಚ್ಚಕೋಷ್ಠೇ, ಗ್ರೀವಾಂಪ್ರತ್ಯೂರ್ಧ್ವಂ ಸಪ್ತತಿಃ ॥
(ಸುಶ್ರುತ॥ ಶಾರೀರ ಅ ೫ ಸೂ ೨೯)

ದೇಹದಲ್ಲಿ ಸ್ನಾಯುಗಳು (೯೦೦) ಇರುತ್ತವೆ. ಅವುಗಳು ಪ್ರತ್ಯೇಕ ವಿಭಾಗಗಳಲ್ಲಿ ಎಷ್ಟಿರುತ್ತವೆಂದು ಸ್ಥೂಲವಾನದಿಂದ ಸಂಖ್ಯಾ ನಿರ್ದೇಶ ಮಾಡುತ್ತಾರೆ.

ಶಾಖಾಸು (೬೦೦), **ಕೋಷ್ಠೇ** (೨೩೦), **ಗ್ರೀವೋರ್ಧ್ವಂ** (೭೦), ಒಟ್ಟು ಸ್ನಾಯುಗಳ ಸಂಖ್ಯೆಯು (೯೦೦) ಇರುತ್ತದೆ.

ಪ್ರತ್ಯೇಕ ವಿಭಾಗಶಃ ಸ್ನಾಯುವಿವರಣೆ

ಏಕೈಕಸ್ಯಾಂಶುಪಾದಾಂಗುಲ್ಯಾಂ ಷಣ್ಣಿಚಿತಾಸ್ತಾಃ ತ್ರಿಂಶತ್, ತಾವತ್ಯ ಏವತಲಕೂರ್ಚಗುಲ್ಫೇಷು, ತಾವತ್ಯ ಏವಜಂಘಾ ಯಾಂ, ದಶಜಾನುನಿ, ಚತ್ವಾರಿಂಶದೂರೌ, ದಶವಂಕ್ಷಣೇಶತ ಮರ್ಧ್ಯರ್ಧಮೇಕಸ್ಮಿನ್ಸಕ್ಥ್ನಭವಂತಿ; ಏತೇನೇತರಸಕ್ಥ್ನಬಾಹೂ ಚವ್ಯಾಖ್ಯಾತೌ ॥ ಷಷ್ಟ್ಯಿಕಟ್ಯಾಂ, ಹೈಷ್ಟೇ್ಯಶೀತಿಃ, ಪಾರ್ಶ್ವ ಯೋಃಷಷ್ಟಿಃ,ಉರಸಿತ್ರಿಂಶತ್॥ ಷಟ್‌ತ್ರಿಂಶತ್ಗ್ರೀವಾಯಾಂ, ಮೂರ್ಧ್ನಿಚತುಸ್ತ್ರಿಂಶತ್॥ ಏವಂನವಸ್ನಾಯುಶತಾನಿವ್ಯಾಖ್ಯಾ ತಾನಿಭವಂತಿ ॥ (ಸುಶ್ರುತ॥ ಶಾರೀರ ೞ ೫ ಸೂ. ೨೯)

ಶಾಖಾದಲ್ಲಿಯ ಸ್ನಾಯುಗಳು

ಪ್ರತ್ಯೇಕ ವಿಭಾಗಶಃ ಆವಾವ ಸ್ಥಾನಗಳಲ್ಲಿರುವ ಸ್ನಾಯುಗಳ ಸಂಖ್ಯಾ ವಿವರಣೆಯು **ಪಾದಾಂಗುಲಿಗಳಲ್ಲಿ** ಪ್ರತಿಯೊಂದರಲ್ಲಿಯೂ (೬) ಸ್ನಾಯುಗಳು ಇರುತ್ತವೆ. ಒಟ್ಟು ಒಂದು ಪಾದದ ಬೆರಳುಗಳಲ್ಲಿ (೩೦) ಸ್ನಾಯುಗಳಿರುತ್ತವೆ. **ತಲ** (ಪಾದದ ಕೆಳಭಾಗ), **ಕೂರ್ಚ** (ಕುಂಚದಂತಿರುವಗುಲ್ಫಾದಿ ಪ್ರದೇಶ), **ಗುಲ್ಫ** (ಪಾದದಮೇಲ್ಭಾಗ ಪಾರ್ಶ್ವಗಳಲ್ಲಿಯ ಗಂಟುಗಳು), ಈ ಭಾಗಗಳಲ್ಲಿ (೩೦) ಸ್ನಾಯುಗಳು ಇರುತ್ತವೆ **ಜಂಘಾ** (ಮೊಣಕಾಲು) ಸ್ಥಾನದಲ್ಲಿ (೩೦) ಸ್ನಾಯುಗಳು **ಜಾನು** (ಮೊಣಕಾಲ ಸಂಧಿ ಪ್ರದೇಶ) ಭಾಗದಲ್ಲಿ (೧೦) ಸ್ನಾಯುಗಳು. **ಊರು** (ತೊಡೆಯ ಪ್ರದೇಶ) ಸ್ಥಾನದಲ್ಲಿ

(೪೦) ಸ್ನಾಯುಗಳಿರುತ್ತವೆ. **ವಕ್ಷಣ** (ತೊಡೆಯ ಅಸ್ಥಿಗಳು ಕೂಡುವ ಸಂಧಿ) ಸ್ಥಾನದಲ್ಲಿ (೧೦) ಸ್ನಾಯುಗಳಿರುತ್ತವೆ. ಒಂದು ಕಾಲಿನಲ್ಲಿ ಒಟ್ಟು (೧೫೦) ಸ್ನಾಯುಗಳಿರುತ್ತವೆ. ಒಟ್ಟು ಕೈಕಾಲುಗಳಲ್ಲಿ ಕೂಡಿ (೬೦೦) ಸ್ನಾಯುಗಳು ಶಾಖಾಪ್ರದೇಶಗಳಲ್ಲಿರುತ್ತವೆ.

ಪಾದಾಂಗುಲಿ (೩೦), **ತಲಕೂರ್ಚಾದಿ** (೩೦), **ಜಂಘಾ** (೩೦), **ಜಾನು** (೧೦), **ಊರು** (೪೦), **ವಂಕ್ಷಣ** (೧೦), ಮುಂತಾದ ಸ್ಥಾನಗಳಲ್ಲಿಯ ಸ್ನಾಯುಗಳು ಕೂಡಿ ಒಟ್ಟು ಒಂದು ಕಾಲಿನಲ್ಲಿ (೧೫೦) ಇರುತ್ತವೆ ಎರಡು ಕಾಲು ಬಂಹುಗಳಲ್ಲಿ ಕೂಡಿ (೬೦೦) ಸ್ನಾಯುಗಳಿರುತ್ತವೆ.

ಕೋಷ್ಠದಲ್ಲಿಯ ಸ್ನಾಯುಗಳು

ಕಟಿ (ಟೊಂಕ) ಪ್ರದೇಶದಲ್ಲಿ (೬೦) ಸ್ನಾಯುಗಳು ಇರುತ್ತವೆ **ಪೃಷ್ಠ** (ಬೆನ್ನು) ಭಾಗದಲ್ಲಿ (೮೦) ಸ್ನಾಯುಗಳು. **ಪಾರ್ಶ್ವ** (ಎಡಬಲ ಪಕ್ಕ) ಸ್ಥಾನಗಳಲ್ಲಿ (೬೦) ಸ್ನಾಯುಗಳಿರುತ್ತವೆ. **ಉರಃ** (ಎದೆ) ಪ್ರದೇಶದಲ್ಲಿ (೩೦) ಸ್ನಾಯುಗಳು ಇರುತ್ತವೆ ಒಟ್ಟು ಕೋಷ್ಠ ಪ್ರದೇಶದಲ್ಲಿ (೨೩೦) ಸ್ನಾಯುಗಳಿರುತ್ತವೆ

ಕಟಿ (೬೦), **ಪೃಷ್ಠ** (೮೦), **ಪಾರ್ಶ್ವ** (೬೦), **ಉರಃ** (೩೦), ಮೊದಲಾದ ವಿಭಾಗಗಳಲ್ಲಿಯ ಸ್ನಾಯುಗಳು ಕೂಡಿ ಒಟ್ಟು (೨೩೦) ಇರುತ್ತವೆ.

ಗ್ರೀವೋರ್ಧ್ವ ಸ್ನಾಯುಗಳು

ಗ್ರೀವಾ (ಕುತ್ತಿಗೆ) ಸ್ಥಾನದಲ್ಲಿ (೩೬) ಸ್ನಾಯುಗಳಿರುತ್ತವೆ **ಮೂರ್ಧಾ** (ತಲೆ) ಪ್ರದೇಶದಲ್ಲಿ (೩೪) ಸ್ನಾಯುಗಳಿರುತ್ತವೆ. ಒಟ್ಟು ಕುತ್ತಿಗೆಯಿಂದ ಹಿಡಿದು ಮೇಲ್ಭಾಗಗಳಲ್ಲಿ (೭೦) ಸ್ನಾಯುಗಳು ಇರುತ್ತವೆ. ಹೀಗೆ (೯೦೦) ಸ್ನಾಯುಗಳನ್ನು ಅವಾವ ಸ್ಥಾನಗಳಲ್ಲಿ ಪ್ರತ್ಯೇಕವಾಗಿ ವಿವರಿಸಿದ್ದಾರೆ.

(೫೭) ಪೇಶೀ ವಿವರಣೆಯು

ಪೇಶೀಗಳೆಂದರೆ ಮಾಂಸದ ಚೀಲದಂತಿರುವ ವಿಭಾಗಗಳು ಸಿರಾ ಸ್ನಾಯು ಅಸ್ಥಿಗಳ ಹೊಂದಿಕೆ (ಜೋಡಣೆ) ಯಾಗುವ ಸ್ಥಾನಗಳಲ್ಲಿದ್ದು ಅವುಗಳನ್ನು ಆಚ್ಛಾದಿಸಿ ಸ್ಥಿರವಾಗಿಯೂ ಬಲವಂತವಾಗಿ ನಿಲ್ಲುವಂತೆಯೂ ಮಾಡುತ್ತವೆ ಅಸ್ಥಿ ಸಂಧಿಗಳೂ ಕೂಡಾ ಪೇಶಿಗಳಿಂದ ಆಚ್ಛಾದಿಸಲ್ಪಟ್ಟು ದೃಢವಾಗುತ್ತವೆ. ದೇಹದಲ್ಲಿ ಪೇಶಿಗಳು ಎವಾವ ಸ್ಥಾನದಲ್ಲಿದ್ದುಕೊಂಡು ಸಿರಾಸ್ನಾಯು ಅಸ್ಥಿಸಂಧಿಗಳನ್ನು ಬಲವಾಗುವಂತೆಯೂ ಒಂದೇ ಸ್ಥಾನದಲ್ಲಿ ನಿಲ್ಲುವಂತೆಯೂ ತಮ್ಮ ಹಿಡಿತದಿಂದ ಆಚ್ಛಾದಿಸಿ ಬೇರೇ ಕಡೆಗೆ ಕದಲದಂತೆ ಮಾಡುತ್ತವೆ ಪೇಶಿಗಳು ಸ್ಥಾನಗಳಿಗನುಗುಣವಾಗಿ ಆಕಾರವುಳ್ಳವುಗಳಾಗಿರುತ್ತವೆ ದೇಹದಲ್ಲಿ (೫೦೦) ಪೇಶಿಗಳು ಇರುತ್ತವೆ

ಸಿರಾಸ್ನಾಯ್ವಸ್ಥಿ ಪರ್ವಾಣಿಸಂಧಯಶ್ಚ ಶರೀರಿಣಾಂ ॥
ಪೇಶೀಭಿಃ ಸಂವೃತಾನ್ಯತ್ರ ಬಲವಂತಿ ಭವಂತ್ಯತಃ॥
(ಸುಶ್ರುತ॥ ಶಾರೀರ॥ ೬ ಅ ಶ್ಲೋ ೩೮)

ದೇಹದಲ್ಲಿ ಸಿರಾ ಸ್ನಾಯು ಅಸ್ಥಿಗಳ ಸಂಯೋಗ ಸ್ಥಾನ ಮತ್ತು ಸಂಧಿಗಳು ಪೇಶಿಗಳಿಂದ ಸಂವೃತ (ಆಚ್ಛಾದಿತ) ವಾಗಿ ಬಲವಂತವಾಗುತ್ತವೆ.

ಪೇಶಿಗಳ ಆಕೃತಿ ಸ್ವರೂಪಗಳು

ತಾಸಾಂ ಬಹಲಪೇಲವಸ್ಥೂಲಾಣುಪೃಥುವೃತ್ತ ಹ್ರಸ್ವದೀರ್ಘ ಸ್ಥಿರಮೃದುಶ್ಲಕ್ಷ್ಣ ಕರ್ಕಶಭಾವಾಃ॥ ಸಂಧ್ಯಸ್ಥಿ ಸಿರಾಸ್ನಾಯು ಪ್ರಚ್ಛಾದಕಾಯಥಾಪ್ರದೇಶಂಸ್ವಭಾವತಏತಭವಂತಿ ॥
(ಸುಶ್ರುತ॥ ಶಾರೀರ॥ ೫ ಅ ಸೂ ೪೦)

ಪೇಶಿಗಳು ಇರತಕ್ಕ ಸ್ಥಾನಾನುಗುಣವಾಗಿರುವ ನಾನಾ ಪ್ರಕಾರವಾದ ಆಕೃತಿ ಸ್ವರೂಪಗಳನ್ನು ಹೇಳುತ್ತಾರೆ ಪೇಶಿಗಳ ಆಕೃತಿ ಸ್ವರೂಪಗಳ ವಿವರಣೆಯು.

ಬಹಲ (ದೊಡ್ಡದು), **ಪೇಲವ** (ಸಣ್ಣದು), **ಅಣು** (ಸೂಕ್ಷ್ಮ), **ಸ್ಥೂಲ** (ಧಪ್ಪ, ಸೂಕ್ಷ್ಮವಲ್ಲದ್ದು), **ಪೃಥು** (ವಿಸ್ತಾರವುಳ್ಳದ್ದು), **ವೃತ್ತ** (ವರ್ತುಲ), **ಹ್ರಸ್ವ** (ದೀರ್ಘವಲ್ಲದ್ದು), **ದೀರ್ಘ** (ಉದ್ದವಾದದ್ದು), **ಸ್ಥಿರ** (ಕರಿಣ), **ಮೃದು** (ಕೋಮಲ), **ಶ್ಲಕ್ಷ್ಣ** (ಸ್ಪರ್ಶಸುಖವುಳ್ಳದ್ದು, ಕರ್ಕಶವಲ್ಲದ್ದು), **ಕರ್ಕಶ** (ಹುರಬರಕು ಇರುವಂಥಾದ್ದು, ಸುಖಸ್ಪರ್ಶವಿಲ್ಲದ್ದು), ಈ ಪ್ರಕಾರವಾಗಿ ಪೇಶಿಗಳ **ಆಕೃತಿ** ಸ್ವಭಾವ ಗುಣಗಳು ಇರುತ್ತವೆ ಸಂಧಿ **ಅಸ್ಥಿ** ಸಿರಾ ಸ್ನಾಯುಗಳಲ್ಲಿ ಸಂವೃತ (ಆಚ್ಛಾದಿತ) ವಾಗಿರುವದರಿಂದ ಆ ಸ್ಥಾನಗಳಿಗನುಗುಣವಾಗಿ, ಮೃದು ಕರಿಣಾದಿಗುಣಗಳು ಸ್ಥೂಲಾಣು ಮೊದಲಾದ ಆಕಾರಗಳು ಸ್ವಭಾವತಃ "**ಪೇಶಿಗಳಲ್ಲಿ**"ಉಂಟಾಗಿರುತ್ತವೆ. ಅರ್ಥಾತ್ ಸಿರಾಸ್ನಾಯ್ವಾದಿಗಳ ಸ್ಥಾನಾನುಸಾರವಾಗಿ, ದೊಡ್ಡ ಸಣ್ಣ ಆಕಾರವುಳ್ಳ, ಮೃದು ಕರ್ಕಶಾದಿ ಸ್ವಭಾವಿಕ ಗುಣವುಳ್ಳವೂ ಇರುತ್ತವೆಂದಭಿಪ್ರಾಯವಾಗಿರುತ್ತದೆ.

ಪಂಚ ಪೇಶೀಶತಾನಿ ಭವಂತಿ ॥ ತಾಸಾಂ ಚತ್ವಾರಿಶತಾನಿ ಶಾಖಾಸು, ಕೋಷ್ಠೇಷ್ಟಷ್ಟಿ, ಗ್ರೀವಾಂ ಪ್ರತ್ಯೂರ್ಧ್ವಂ ಚತುಸ್ತ್ರಿಂಶತ್ ॥

(ಸುಶ್ರುತ॥ ಶಾರೀರ॥ ಅ. ೫ ಸೂ. ೩೭)

ದೇಹದಲ್ಲಿ ಪೇಶಿಗಳು (ಮಾಂಸಚೀಲಗಳು) "**ಸುಶ್ರುತ ಮತದಂತೆ**" (೫೦೦) ಇರುತ್ತವೆ. ಅವು ಯಾವ ಸ್ಥಾನಾದಿಗಳಲ್ಲಿ ಎಷ್ಟಿರುತ್ತವೆಂದು ಸ್ಥೂಲ ವಿವರಣೆ ಈ. "**ತಂತ್ರಾಂತರ ಮತದಲ್ಲಿ**" (೪೦೦) ಪೇಶಿಗಳಿರುತ್ತವೆಂದು ಹೇಳಿದ್ದಾರೆ

ಪೇಶಿಗಳ ಸ್ಥೂಲಸಂಖ್ಯಾವಿವರಣೆ

ಶಾಖಾಗಳಲ್ಲಿ [೪೦೦] ಪೇಶಿಗಳಿರುತ್ತವೆ. **ಕೋಷ್ಠದಲ್ಲಿ** [೬೬], **ಗ್ರೀವೋರ್ಧ್ವಂ** (ಕತ್ತಿಗೆಯಿಂದಾರಂಭಿಸಿ ಮೇಲ್ಗಡೆಯಲ್ಲಿ), ಪೇಶಿಗಳು [೩೪] ಇರುತ್ತವೆ. ಒಟ್ಟು ದೇಹದಲ್ಲಿ [೫೦೦] ಪೇಶಿಗಳಿರುತ್ತವೆ

ಶಾಖಾಗಳಲ್ಲಿಯ ಪೇಶಿಗಳು

ಏಕೈಕಸ್ಯಾಂ ಪಾದಾಂಗುಲ್ಯಾಂತಿಸ್ರಸ್ತಿಸ್ರಸ್ತಾಃ ಪಂಚದಶ, ದಶಸ್ವಪದೇ, ಪಾದೋಪರಿಕೂರ್ಚಸನ್ನಿವಿಷ್ಟಾಸ್ತಾವತ್ಯ ಏವ, ದಶಗುಲ್ಫತಲಯೋಃ, ಗುಲ್ಫಜಾನ್ವಂತರೇವಿಂಶತಿಃ, ಪಂಚಜಾನುನಿ, ವಿಂಶತಿರೂರೌ, ದಶವಂಕ್ಷಣೇ, ಶತಮೇವಮೇಕಸ್ಮಿನ್ ಸಕ್ಥ್ನಿ ಭವತಿ ॥ ಏತೇನೇತರಸಕ್ಥಿ ಬಾಹೂಚ ವ್ಯಾಖ್ಯಾತೌ ॥
(ಸುಶ್ರುತ ಶಾರೀರ॥ ಅ ೫ ಸೂ. ೩೭)

ಶಾಖಾಗಳಲ್ಲಿರುವ ಪೇಶಿಗಳನ್ನು ವಿವರಿಸುತ್ತಾರೆ:- ಪಾದದ ಒಂದೊಂದು ಬೆರಳುಗಳಲ್ಲಿ [೩] ಪೇಶಿಗಳಿರುತ್ತವೆ. ಒಟ್ಟು ಒಂದು ಪಾದದ ಬೆರಳುಗಳಲ್ಲಿ ಕೂಡಿ [೧೫] ಪೇಶಿಗಳಿರುತ್ತವೆ. **ಪ್ರಪದ** (ಪಾದಾಗ್ರ, ಪಾದದ ಆದಿಭಾಗದಲ್ಲಿ) [೧೦] ಪೇಶಿಗಳು. **ಪಾದೋರ್ಧ್ವಂ ಕೂರ್ಚ** (ಪಾದದ ಮೇಲ್ಗಡೆ ಕೂರ್ಚ) ಪ್ರದೇಶದಲ್ಲಿ [೧೦] ಪೇಶಿಗಳು. **ಗುಲ್ಫ, ತಲ** (ಪಾದಪಾರ್ಶ್ವ ಗಂಟು, ಮತ್ತು ಪಾದದ ಕೆಳಭಾಗ) ಇವೆರಡು ಸ್ಥಾನಗಳಲ್ಲಿ ಕೂಡಿ [೧೦] ಪೇಶಿಗಳು ಇರುತ್ತವೆ **ಗುಲ್ಫಜಾನ್ವಂತರ** (ಪಾದದ ಗಂಟಿನಿಂದ ಮೊಣಕಾಲ ಸಂಧಿ ವರೆಗಿನ ಭಾಗ) ಅರ್ಥಾತ್ ಮೊಣಕಾಲಿನ ಪ್ರದೇಶದಲ್ಲಿ [೨೦] ಪೇಶಿಗಳು **ಜಾನು** (ಮೊಣಕಾಲ ಮೇಲಿನ ಸಂಧಿ) ಸ್ಥಾನದಲ್ಲಿ [೫] ಪೇಶಿಗಳಿರುತ್ತವೆ. **ಊರು** (ತೊಡೆ) ಪ್ರದೇಶದಲ್ಲಿ [೨೦] ಪೇಶಿಗಳು. **ವಂಕ್ಷಣ** (ತೊಡೆ ಎಲುಬಿನ ಸಂಧಿ) ಭಾಗದಲ್ಲಿ [೧೦] ಪೇಶಿಗಳಿರುತ್ತವೆ ಒಟ್ಟು ಒಂದು ಕಾಲಿನಲ್ಲಿ [೧೦೦] ಪೇಶಿಗಳಿರುತ್ತವೆ ಒಟ್ಟು ಶಾಖಾಗಳಲ್ಲಿ ಕೂಡಿ [೪೦೦] ಪೇಶಿಗಳಾಗುತ್ತವೆ

ಪಾದಾಂಗುಲಿ [೧೫], ಪ್ರಪದ [೧೦], ಪಾದೋರ್ಧ್ವಂ ಕೂರ್ಚ [೧೦], ಗುಲ್ಫ, ತಲ [೧೦], ಗುಲ್ಫಜಾನ್ವಂತರ [೨೦], ಜಾನು [೫], ಊರು [೨೦], ವಂಕ್ಷಣ [೧೦], ಈ ಸ್ಥಾನಗಳೆಲ್ಲವುಗಳಲ್ಲಿಯೂ ಒಟ್ಟು ಕೂಡಿ [೧೦೦] ಪೇಶಿಗಳಿರುತ್ತವೆ. ಇದು ಒಂದು ಕಾಲಿನಲ್ಲಿಯ ಪೇಶೀ ಸಂಖ್ಯೆಯಾಗಿರುತ್ತದೆ. ಎರಡೂ ಕೈಕಾಲುಗಳಲ್ಲಿ ಕೂಡಿ [೪೦೦] ಪೇಶಿಗಳು ಇರುತ್ತವೆ.

ಕೋಷ್ಠಪ್ರದೇಶದಲ್ಲಿಯ ಪೇಶಿಗಳು

ತಿಸ್ರಃ ಪಾಯೌ, ಏಕಾಮೇಢ್ರೇ, ಸೇವನ್ಯಾಂಚಾಪರಾ, ದ್ವೇ ವೃಷಣಯೋಃ, ಸ್ಫಿಚೋಃ ಪಂಚಪಂಚ, ದ್ವೇಬಸ್ತಿಸಿರಸಿ, ಪಂಚೋದರೇ, ನಾಭ್ಯಾಮೇಕಾ, ಪೃಷ್ಠೋರ್ಧ್ವಸನ್ನಿವಿಷ್ಟಾಃ ಪಂಚಪಂಚದೀರ್ಘಾಃ, ಷಟ್ ಪಾರ್ಶ್ವಯೋಃ, ದಶವಕ್ಷಸಿ, ಅಕ್ಷ್ನಕಾಂಸೌ ಪ್ರತಿಸಮಂತಾತ್ ಸಪ್ತ, ದ್ವೇಹೃದಯಾಮಾಶಯಯೋಃ, ಷಟ್ ಯಕೃತ್ಸ್ಲಿಹೋಂಡುಕೇಷು; ॥
(ಸುಶ್ರುತ॥ ಶಾರೀರ॥ ಅ. ೫ ಸೂ. ೩೭)

ಕೋಷ್ಠಸ್ಥಾನಗಳಲ್ಲಿಯ ಪ್ರತ್ಯೇಕ ಪೇಶೀಸಂಖ್ಯೆ ವಿವರಣೆಯು

ಪಾಯು (ಮಲ ನಿರ್ಗಮನ ಪ್ರದೇಶ, ಗುದ) ಭಾಗದಲ್ಲಿ [೩] ಪೇಶಿಗಳಿರುತ್ತವೆ. **ಮೇಢ್ರ** (ಪುರುಷ ಜನನೇಂದ್ರಿಯ) ಸ್ಥಾನದಲ್ಲಿ [೧] ಪೇಶಿಯು. **ಸೇವನೀ** (ಜನನೇಂದ್ರಿಯ ಕೆಳಭಾಗದಲ್ಲಿ ಹೊಂದಿಕೊಂಡ ಹೊಲಿಗೆ) ಭಾಗದಲ್ಲಿ [೧] ಪೇಶಿಯು ಇರುತ್ತದೆ. **ವೃಷಣ** (ಅಂಡಕೋಶ) ಪ್ರದೇಶದಲ್ಲಿ [೨] ಪೇಶಿಗಳು. **ಸ್ಫಿಚ್** (ಕಟಿಪ್ರದೇಶ, ಮಾಂಸಪಿಂಡಗಳು) ಈ ಪ್ರದೇಶಗಳಲ್ಲಿ [೧೦] ಪೇಶಿಗಳಿರುತ್ತವೆ. **ಬಸ್ತಿಸಿರಃ** (ಬಸ್ತಿಯ ತಲೆ ಭಾಗ) ಸ್ಥಾನದಲ್ಲಿ [೨] ಪೇಶಿಗಳು. **ಉದರ** (ಹೊಟ್ಟೆ) ಪ್ರದೇಶದಲ್ಲಿ [೫] ಪೇಶಿಗಳು **ನಾಭಿ** (ಹೊಕ್ಕಳು) ಸ್ಥಾನದಲ್ಲಿ [೧] ಪೇಶಿಯು. **ಪೃಷ್ಠೋರ್ಧ್ವ** (ಬೆನ್ನಿನ ಮೇಲ್ಗಡೆ) ಭಾಗದಲ್ಲಿ ಉದ್ದವಾಗಿರುವ [೧೦] ಪೇಶಿಗಳಿರುತ್ತವೆ **ಪಾರ್ಶ್ವ** (ಎಡಬಲ ಪಕ್ಕಗಳು) ಈ ಸ್ಥಾನಗಳಲ್ಲಿ [೬] ಪೇಶಿಗಳಿರುತ್ತವೆ. **ವಕ್ಷಃ** (ಎದೆ) ಪ್ರದೇಶದಲ್ಲಿ [೧೦] ಪೇಶಿಗಳಿರುತ್ತವೆ. **ಅಕ್ಷ್ನಕ** (ಭುಜ ಸಂಧಿಗಳು), **ಅಂಸ** (ಭುಜ, ಹೆಗಲುಗಳು), ಇವೆರಡರ ಸುತ್ತಲಿನ ಪ್ರದೇಶಗಳಲ್ಲಿ [೭] ಪೇಶಿಗಳಿರುತ್ತವೆ **ಹೃದಯ** ಮತ್ತು **ಆಮಾಶಯ**ಗಳಲ್ಲಿ [೨] ಪೇಶಿಗಳು **ಯಕೃತ್, ಪ್ಲೀಹ, ಉಂಡುಕ**ಗಳಲ್ಲಿ [೬] ಪೇಶಿಗಳು ಇರುತ್ತವೆ. ಒಟ್ಟು ಕೋಷ್ಠ ಪ್ರದೇಶದಲ್ಲಿ [೬೬] ಪೇಶಿಗಳಿರುತ್ತವೆ.

ಪಾಯು (೩), ಮೇಢ್ರ (೧), ಸೇವನೀ (೧), ವೃಷಣ (೨), ಸ್ಫಿಚ್ (೧೦), ಬಸ್ತಿಶಿರಃ (೨), ಉದರ (೫), ನಾಭೀ (೧), ಪೃಷ್ಠೋರ್ಧ್ವ (೧೦), ಪಾರ್ಶ್ವ (೬), ವಕ್ಷಃ (೧೦), ಅಕ್ಷ್ನಕಾಂಸೌ (೭), ಹೃದಯ, ಆಮಾಶಯ (೨), ಯಕೃತ್, ಪ್ಲೀಹ, ಉಂಡುಕ (೬), ಈ ಮೊದಲಾದ ಸ್ಥಾನಗಳನ್ನು ಕೂಡಿ ಕೋಷ್ಠದಲ್ಲಿ ಒಟ್ಟು [೬೬] ಪೇಶಿಗಳಿರುತ್ತವೆ.

ಕುತ್ತಿಗೆಯ ಮೇಲ್ಗಡೇ ಪೇಶಿಗಳು

ಗ್ರೀವಾಯಾಂಚತಸ್ರಃ, ಅಷ್ಟೌಹನ್ವೋಃ, ಏಕೈಕಾಕಾಕಲಗಲಯೋಃ, ದ್ವೇತಾಲುನಿ, ಏಕಾಜಿಹ್ವಾಯಾಂ, ದ್ವೇಓಷ್ಠ್ಯಯೋಃ, ದ್ವೇನಾಸಾಯಾಂ, ದ್ವೇನೇತ್ರಯೋಃ, ಗಂಡಯೋಶ್ಚತಸ್ರಃ, ಕರ್ಣಯೋರ್ದ್ವೇ, ಚತಸ್ರೋಲಲಾಟೇ, ಏಕಾಸಿರಸೀತಿ॥ ಏವಮೇತಾನಿಪಂಚಪೇಶೀಶತಾನಿ॥

ಕುತ್ತಿಗೆಯಿಂದಾರಂಭಿಸಿ ಮೇಲ್ಗಡೆಯ ಪ್ರದೇಶಗಳಲ್ಲಿರುವ ಪೇಶಿಗಳ ವಿವರಣೆಂ ಃ.

ಗ್ರೀವಾ (ಕುತ್ತಿಗೆ) ಸ್ಥಾನದಲ್ಲಿ [೪] ಪೇಶಿಗಳು **ಹನು** (ಕಪೋಲಗಳ ಕೆಳಗಡೆ) ಪ್ರದೇಶಗಳಲ್ಲಿ [೮] ಪೇಶಿಗಳಿರುತ್ತವೆ. **ಗಲ** (ಕಂಠಪ್ರದೇಶ), **ಕಾಕಲ** (ಗಲಮಣಿ, ಕಂಠನಾಲದಲ್ಲಿಯ ಗಂಟು) ಇವೆರಡು ಪ್ರದೇಶಗಳಲ್ಲಿ [೨] ಪೇಶಿಗಳಿರುತ್ತವೆ **ತಾಲು** ಪ್ರದೇಶದಲ್ಲಿ [೨] ಪೇಶಿಗಳು. **ಜಿಹ್ವಾ** ಸ್ಥಾನದಲ್ಲಿ [೧] ಪೇಶಿಯು **ಓಷ್ಠ** (ತುಟಿಗಳು) ಈ ಪ್ರದೇಶಗಳಲ್ಲಿ [೨] ಪೇಶಿಗಳಿರುತ್ತವೆ. **ನಾಸಾ**(ಮೂಗು) ಈ ಸ್ಥಾನದಲ್ಲಿ[೨] ಪೇಶಿಗಳು **ನೇತ್ರ** (ಕಣ್ಣುಗಳು) ಈ ಸ್ಥಾನಗಳಲ್ಲಿ [೨] ಪೇಶಿಗಳಿರುತ್ತವೆ **ಗಂಡ** (ಕಪೋಲಗಳು) ಎರಡು ಕಪೋಲ ಸ್ಥಾನಗಳಲ್ಲಿ [೪] ಪೇಶಿಗಳಿರುತ್ತವೆ. **ಕರ್ಣ** (ಕಿವಿ) ಪ್ರದೇಶಗಳಲ್ಲಿ [೨] ಪೇಶಿಗಳಿರುತ್ತವೆ. **ಲಲಾಟ** (ಹಣೆ) ಭಾಗದಲ್ಲಿ [೪] ಪೇಶಿಗಳಿರುತ್ತವೆ. **ಶಿರಃ** (ತಲೆ) ಪ್ರದೇಶದಲ್ಲಿ [೧] ಪೇಶಿಯು ಇರುತ್ತದೆ. ಒಟ್ಟು ಕುತ್ತಿಗೆಯಿಂದ ಮೇಲ್ಭಾಗಗಳಲ್ಲಿ [೩೪] ಪೇಶಿಗಳು ಇರುತ್ತವೆ.

ಗ್ರೀವಾ (೪), **ಹನು** (೮), **ಕಾಕಲ, ಗಲ** (೨), **ತಾಲು** (೨), **ಜಿಹ್ವಾ** (೧), **ಓಷ್ಠ** (೨), **ನಾಸಾ** (೨), **ನೇತ್ರ** (೨), **ಕಪೋಲ** (೪), **ಕರ್ಣ** (೨), **ಲಲಾಟ** (೪), **ಶಿರಃ** (೧), ಇವುಗಳಲ್ಲಿರುವ ಒಟ್ಟು ಪೇಶಿಗಳು ಕೂಡಿ ಗ್ರೀವೋರ್ಧ್ವ ಪ್ರದೇಶದಲ್ಲಿ (೩೪) ಪೇಶಿಗಳಿರುತ್ತವೆ. ಹೀಗೆ ದೇಹದಲ್ಲಿಯ (೫೦೦) ಪೇಶಿಗಳ ವಿವರಣೆಯು ಯಥಾಸ್ಥಾನಾತ್ಮಕವಾಗಿ ಮಾಡಲ್ಪಟ್ಟಿರುತ್ತದೆ

ಸ್ತ್ರೀಯರಿಗೆ ವಿಶೇಷ (೨೦) ಪೇಶಿಗಳು ಹೆಚ್ಚಿಗೇ ಇರುತ್ತವೆ ಸ್ತ್ರೀ ದೇಹದಲ್ಲಿ (೫೨೦) ಪೇಶಿಗಳಿರುತ್ತವೆಂದು ತಿಳಿಯಬೇಕು.

ಸ್ತ್ರೀಣಾಂತುವಿಂಶತಿರಧಿಕಾ॥ ದಶತಾಸಾಂ ಸ್ತನಯೋರೇಕೈಕ ಸ್ಮಿನ್ಪಂಚಪಂಚೇತಿ, ಯೌವನೇತಾಸಾಂ ಪರಿವೃದ್ಧಿಃ; ಅಪತ್ಯಪಥೇಚತಸ್ರಃ:— ತಾಸಾಂ ಪ್ರಸೃತೇಅಭ್ಯಂತರತೋದ್ವೇ, ಮುಖಾಶ್ರಿತೇ ಬಾಹ್ಯೇಚವೃತ್ತೇದ್ವೇ, ಗರ್ಭಛಿದ್ರಸಂಶ್ರಿತಾ ಸ್ತಿಸ್ರಃ, ಶುಕ್ರಾರ್ತವಪ್ರವೇಶಿನ್ಯಸ್ತಿಸ್ರಏವ॥ ಪಿತ್ತಪಕ್ವಾಶಯಯೋರ್ಮಧ್ಯೇಗರ್ಭಶಯ್ಯಾ, ಯತ್ರಗರ್ಭಸ್ತಿಷ್ಠತಿ ॥

(ಸುಶ್ರುತ॥ ಶಾರೀರ॥ ಅ ೫ ಸೂ ೪೯)

ಸ್ತ್ರೀ ದೇಹದಲ್ಲಿರುವ (೨೦) ಅಧಿಕ ಪೇಶಿಗಳ ಸ್ಥಾನಾದಿಗಳ ವಿವರಣೆಯು. **ಸ್ತನ** (ಮೊಲೆ) ಒಂದರಲ್ಲಿ ಐದರಂತೆ ಎರಡರಲ್ಲಿಯೂ ಕೂಡಿ (೧೦) ಪೇಶಿಗಳಿರುತ್ತವೆ. ಯೌವನ ಕಾಲದಲ್ಲಿ ಸ್ತನಗಳಲ್ಲಿಯ ಪೇಶಿಗಳು ವೃದ್ಧಿ ಹೊಂದುತ್ತವೆ. **ಅಪತ್ಯಪಥ** (ಯೋನಿ ಮಾರ್ಗ) ಪ್ರದೇಶಗಳಲ್ಲಿ (೪) ಪೇಶಿಗಳಿರುತ್ತವೆ, ಅವುಗಳ ಪ್ರತ್ಯೇಕ ವಿವರ:- ಯೋನಿಯ ಒಳ ಭಾಗದಲ್ಲಿ ವಿಸ್ತಾರ ಹೊಂದಿದ ಪೇಶಿಗಳು (೨) ಇರುತ್ತವೆ. ಇವುಗಳಿಗೆ ಮೂತ್ರ ಸ್ರೋತಸ್ಸುಗಳೆಂದು ಹೇಳುತ್ತಾರೆ. ಯೋನಿ ಮುಖದಲ್ಲಿ ಹೊರಗೆ ವರ್ತುಲವಾದ (೨) ಪೇಶಿಗಳಿರುತ್ತವೆ. ಹೀಗೆ ಅಪತ್ಯಪಥದಲ್ಲಿ ಹೇಳಿದ ಪೇಶಿಗಳ

ರುವ ಸ್ಥಾನವಾಗಿರುತ್ತವೆ ಗರ್ಭಾಶಯ ರಂಧ್ರದಲ್ಲಿ **ಆವರ್ತ** (ಮುರಿಗೆ) ರೂಪದಿಂದ (೩) ಇರುತ್ತವೆ ಶುಕ್ರಾರ್ತವಗಳನ್ನು **ಪ್ರವೇಶ** ಮಾಡುವ (೩) ಪೇಶಿಗಳಿರುತ್ತವೆ. ಒಟ್ಟು ಸ್ತ್ರೀ ದೇಹದಲ್ಲಿ (೨೦) ಪೇಶಿಗಳು ಅಧಿಕವಾಗಿರುತ್ತವೆ. ಯೋನಿದ್ವಾರದ ಮೂರನೇ ಆವರ್ತ (ಮುರಿಗೆ) ಸ್ಥಾನದಲ್ಲಿ ಗರ್ಭಾಶಯವು ಅಂಟಿಕೊಂಡಿರುತ್ತದೆ ಪಿತ್ತಾಶಯ ಪಕ್ವಾಶಯ ಮಧ್ಯ ಪ್ರದೇಶದಲ್ಲಿ ಗರ್ಭಾಶಯವಿರುತ್ತದೆ. **ಪ್ರತ್ಯಕ್ಷ ಶಾರೀರ ಮತವು** ಬಸ್ತಿ ಪಕ್ವಾಶಯ ಮಧ್ಯೇ ಗರ್ಭಾಶಯವಿರುತ್ತದೆಂದು ಹೇಳಿದ್ದಾರೆ. ಗರ್ಭಾಶಯವೆಂದರೆ ಗರ್ಭೋತ್ಪತ್ತಿಯಾಗಿ ಬೆಳೆಯುವ ಸ್ಥಾನವು .

ಸ್ತನಗಳಲ್ಲಿ (೧೦), **ಅಪತ್ಯಪಥ** (೪), **ಗರ್ಭಛಿದ್ರ** (೩), **ಶುಕ್ರಾರ್ತವ ಪ್ರವೇಶಿಕಾ** (೩), ಈ ಮೊದಲಾದ ಸ್ಥಾನಗಳಲ್ಲಿ ಕೂಡಿ (೨೦) ಸ್ತ್ರೀಯರಿಗೆ ಹೆಚ್ಚು ಪೇಶಿಗಳು ಇರುತ್ತವೆ.

ಪುಂಸಾಂಪೇಶ್ಯಃಪುರಸ್ತಾದ್ಯಾಃ ಪ್ರೋಕ್ತಾಲಕ್ಷ್ಮಣಮುಷ್ಕಜಾಃ॥
ಸ್ತ್ರೀಣಾಮಾವೃತ್ಯತಿಷ್ಠಂತಿಫಲಮುಂತರ್ಗರ್ತಂಹಿತಾಃ॥

(ಸುಶ್ರುತ॥ ಶಾರೀರ॥ ಅ ೫ ಶ್ಲೋ ೪೧)

ಈಗ ಹೇಳಿದ ಪುರುಷರ "**ಲಕ್ಷಣ**"(ಶಿಶ್ನ), **ಮುಷ್ಕ** (ಅಂಡಕೋಶ), ಸ್ಥಾನಗಳಲ್ಲಿರತಕ್ಕ ಪೇಶಿಗಳು ಸ್ತ್ರೀಯರ ಅಂತರ್ಗತ ಗರ್ಭಾಶಯವನ್ನು ಆವರಿಸಿಕೊಂಡಿರುತ್ತವೆ. ಅರ್ಥಾತ್ ಪುರಪರ ಸ್ಥಾನ ವಿಶೇಷಗಳಲ್ಲಿರುವ (೩) ಪೇಶಿಗಳು ಸ್ತ್ರೀಯರ ಗರ್ಭಾಶಯವನ್ನು (ಫಲ) ಆವರಿಸಿಕೊಂಡಿರುತ್ತವೆ. **ತಂತ್ರಾಂತರಮತವು** ಪುರುಷರಲ್ಲಿರುವ ಶಿಶ್ನ ಅಂಡಕೋಶಗಳು ಸ್ತ್ರೀಯರಲ್ಲಿ ಇಲ್ಲದಿರುವದರಿಂದ, ಗರ್ಭಾಶಯವನ್ನಾವರಿಸಿಕೊಂಡು ಆ ಸ್ಥಾನದಲ್ಲಿರುತ್ತವೆಂದು ಹೇಳಿದ್ದಾರೆ. ಸುಶ್ರುತಾಚಾರ್ಯರು ಇದನ್ನು ಸಮ್ಮತಿಸಿ ಗ್ರಹಿಸಿದ್ದಾರೆ.

ಭೋಜ ಮತದಲ್ಲಿ ಸ್ತ್ರೀಯರಿಗೆ **ಲಕ್ಷಣ** (ಶಿಶ್ನ), **ಮುಷ್ಕ** (ಅಂಡಕೊಶ), ಸ್ಥಾನಗಳಲ್ಲಿರುವ (೩) ಪೇಶಿಗಳು ಇರುವದಿಲ್ಲೆಂದು ಹೇಳಿದ್ದಾರೆ.

(೫೮) ಮರ್ಮ ವಿವರಣೆಯು

ದೇಹದ ಯಾವ ಸ್ಥಳದಲ್ಲಿ ಆಘಾತಾದಿಗಳು ಸಂಭವಿಸಿದರೆ ಸದ್ಯೋ ಮರಣ ಅಥವಾ ತೀವ್ರವಾದ ಅಸಹ್ಯ ವೇದನೆ ಊನತ್ವ ಮೊದಲಾದವು ಗಳುಂಟಾಗುತ್ತವೆಯೋ ಆ ಸ್ಥಾನಗಳಿಗೆ "**ಮರ್ಮ**" ವೆಂದು ಹೆಸರು. **ಮಾಂಸ, ಸಿರಾ, ಸ್ನಾಯು, ಅಸ್ಥಿ, ಸಂಧಿ** ಇವುಗಳಲ್ಲಿ ಮರ್ಮಸ್ಥಾನವಿರು ತ್ತವೆ. ಆದ್ದರಿಂದ ಮಾಂಸಾದಿಗಳ ಹೆಸರಿನಿಂದಲೇ ಆವಾವ ಮರ್ಮಗಳನ್ನು ಹೇಳಿದ್ದಾರೆ. ವಿಶೇಷವಾಗಿ ಪ್ರಾಣಿಗಳ ಪ್ರಾಣವು ಮರ್ಮಗಳಲ್ಲಿರುತ್ತವೆ ಆದ್ದರಿಂದ ಮರ್ಮಾಘಾತವು ಅತ್ಯಂತ ಘಾತಕವಾದದ್ದಿರುತ್ತದೆ. ಇನ್ನು ಶಸ್ತ್ರ ಚಿಕಿತ್ಸಕರಾದ ವೈದ್ಯರೂ ಕೂಡ ಮರ್ಮಾದಿಗಳನ್ನು ಬಿಟ್ಟು ಶಸ್ತ್ರಕರ್ಮ ಮೊದಲಾದವುಗಳನ್ನು ಮಾಡಬೇಕು. ಯಾಕೆಂದರೆ ಮರ್ಮಸಹಿತ ಶಸ್ತ್ರ ದಿಂದ ಹಾನಿ ಸಂಭವಿಸುತ್ತದೆ ಶಸ್ತ್ರ ಪಂಡಿತರಾದ "**ಸುಶ್ರುತಾಚಾರ್ಯರು ಶಸ್ತ್ರ ಕರ್ಮದಲ್ಲಿ**" ಹೀಗೆ ಹೇಳಿದ್ದಾರೆ. "**ಮರ್ಮ ಸಿರಾ ಸ್ನಾಯು ಸಂಧ್ಯಸ್ಥಿ ಧನುನೀಃ ಪರಿಹರನ್**" ಮರ್ಮಾದಿಗಳನ್ನು ಬಿಟ್ಟು ಶಸ್ತ್ರಕರ್ಮ ಮಾಡಬೇಕೆಂದು ವಿವರಿಸಿದ್ದಾರೆ. ಆಶುಕಾರಿ (ಸದ್ಯದಲ್ಲಿಯೇ ಪರಿಣಾಮ ವನ್ನುಂಟು ಮಾಡುವದು) ಇರುವದರಿಂದ ಮರ್ಮಾದಿಗಳ ವಿಷಯದಲ್ಲಿ ಅತ್ಯಂತ ಜಾಗ್ರತೆ ವಹಿಸಬೇಕಾಗುತ್ತದೆ. ಶಾಸ್ತ್ರಕಾರರು ಮರ್ಮಾದಿಗಳನ್ನು ಕುರಿತು ಮೇಲಿಂದ ಮೇಲೆ ಎಚ್ಚರಿಕ ಕೊಟ್ಟು ಆವಾವ ಸಂದರ್ಭಗಳಲ್ಲಿ ಪರಿ ಣಾಮವನ್ನು ಸಹ ವಿವರಿಸಿದ್ದಾರೆ. "**ಮಾರಯಂತೀತಿ, ಮರ್ಮಾಣಿ**" ಮನುಷ್ಯನನ್ನು ಕೊಲ್ಲುತ್ತವೆಯಾದ್ದರಿಂದ ಮರ್ಮಗಳು. ಹೀಗೆ ಮರ್ಮ ಶಬ್ದ ವ್ಯಾಖ್ಯೆಯನ್ನು ಮಾಡಿದರೆ ನಾಶಮಾಡತಕ್ಕವುಗಳಷ್ಟೇ ಮರ್ಮವೆಂದು ಗ್ರಹೀತವಾಗಿ, ಊನತ್ವ ಅಥವಾ ತೀವ್ರ ನೋವನ್ನುಂಟು ಮಾಡುವಂಥವು ಗಳು ಮರ್ಮವಲ್ಲೆಂದು ಆಕ್ಷೇಪ ಬರುತ್ತದೆ ಮರ್ಮವೆಂದು ಗ್ರಹೀತವಾದ ವುಗಳಿಲ್ಲದರಲ್ಲಿಯೂ ವಿಶೇಷ ಜೀವನ ಸ್ಥಿತಿಯು ಅವಲಂಬಿಸಿರುವದರಿಂದ, ಅಧಿಕಾಘಾತವುಂಟಾದರೆ ಮರಣ ಸಂಭವಿಸುತ್ತದೆ. ಅಥವಾ ಕುಕ್ಕರ ವೈಕಲ್ಯಕರ ಮರ್ಮಗಳಲ್ಲಿ ಆಘಾತದಿಂದ, ಪೂರ್ವೋಕ್ತ ಆಗ್ನಿಷೋಮಾದಿ ಪ್ರಾಣಗಳಲ್ಲಿ (ಪ್ರಾಣದಷ್ಟೇ ಮುಖ್ಯವಾದವುಗಳಲ್ಲಿ) ಯಾವದಾದರೊಂದರ

ನಾಶ ಸಂಭವಿಸುವದರಿಂದ "**ಮರ್ಮ**" ವೆಂದು ಗ್ರಹಿಸುವದು ಯೋಗ್ಯವಾಗಿರುತ್ತದೆ. ಆ ಸ್ಥಾನಗಳಲ್ಲಿರುವ ಅಗ್ನಿಸೋಮಾದಿ ಪ್ರಾಣದಲ್ಲಿಯು ಯಾವದಾದರೊಂದರ ನಾಶ ಸಂಭವದಿಂದಲೇ ಊನತ್ವಾದಿಗಳುಂಟಾಗುತ್ತವೆ ಆ ಸ್ಥಾನಾಶ್ರಿತ ಸತ್ವ (ಶಕ್ತಿ) ನಾಶವಾಗಿದೆಂಬುದೇ ಸ್ಪಷ್ಟಾಭಿಪ್ರಾಯವು. ಧಮನೀ ಸ್ರೋತಸ್ಸುಗಳನ್ನು ಹೇಳಿಲ್ಲವಾದ್ದರಿಂದ ಅವುಗಳು ಗೃಹಿತವಲ್ಲೆಂದು ಅನಿಸುತ್ತದೆ ಆದರೂ "**ಸ್ರೋತೋವಿದ್ಧಂತು ಪ್ರತ್ಯಾಖ್ಯೇಯ ಉಪಚರೇತ್**" (ಶಾ ಅ. ೯) ಎಂದು ವಿವರಿಸಿರುವದರಿಂದ ಮರ್ಮವೆಂದು ಗ್ರಹಿಸದಂತಾಯಿತು. ಹೀಗೆ ವಿಕಲ್ಪದಿಂದ ದ್ವಿವಿಧಮತವಿದೆಯೆಂದು ತಿಳಿಯಬೇಕು. ಇಲ್ಲವೇ ಮಾಂಸದ ಹೊರತಾಗಿ ಧಮನೀ ಸ್ರೋತಸ್ಸುಗಳು ಭಿನ್ನವಾಗಿರುವದಿಲ್ಲವಾದ್ದರಿಂದ, ಮಾಂಸ **ಮರ್ಮ** ಗ್ರಹಣದಿಂದಲೇ ಇವುಗಳು ಉಕ್ತವಾಗಿರುತ್ತವೆಂದು ಪ್ರತಿಪಾದಿಸಿದ್ದಾರೆ ಆದ್ದರಿಂದ ಅನುಕ್ತ ಮಾಂಸ ಮರ್ಮವಿಭಾಗವಾದ ಧಮನೀ ಸ್ರೋತಸ್ಸುಗಳೂ ಮರ್ಮವೆಂದು ತಿಳಿಯಬೇಕು. ಮರ್ಮವೆಂದು ಧಮನೀ ಸ್ರೋತಸ್ಸುಗಳನ್ನು ಗ್ರಹಿಸುವದು ಯೋಗ್ಯವೆಂದು ವ್ಯಾಖ್ಯಾಕಾರರ ಅಭಿಪ್ರಾಯವಾಗಿರುತ್ತದೆ ಇವೆಲ್ಲ ಕಾರಣದಿಂದ ದೇಹದಲ್ಲಿ ಮರ್ಮಗಳು ಮಹತ್ವವಾಗಿರುವದರಿಂದ ಅವುಗಳ ವಿವರಣೆಯನ್ನು ಮಾಡುತ್ತಾರೆ. ದೇಹದಲ್ಲಿ ಮಾಂಸಾದಿ ಮರ್ಮಗಳು ಕೂಡಿ (೧೦೭) ಮರ್ಮಗಳಿರುತ್ತವೆ.

ವಿಶೇಷ ಸೂಚನೆ

ಮರ್ಮಗಳನ್ನು ಅನೇಕರೀತಿಯಿಂದ ವಿಭಾಗಿಸಿದ್ದಾರೆ. ಇಲ್ಲಿ ಮೊದಲೇ ಅವುಗಳ ಸ್ಥಾನಗಳನ್ನು ವಿವರಿಸುತ್ತದೆ. ದೇಹ ವಿಭಾಗದಲ್ಲಿ ಹೇಳಿದ (೧೦೭) ಮರ್ಮಗಳೇ, ಉಳಿದ ವಿಭಾಗ ಮಾಡಿ ಹೇಳಿದವುಗಳಲ್ಲಿಯೂ ಅವೇ ಇರುತ್ತವೆ **ವಿಭಾಗಗಳ ವಿವರಣೆಯು:**— (೧) ಮಾಂಸಾದಿ ಮರ್ಮಗಳು (೫) ಇರುತ್ತವೆ. (೨) ಕಾಲು ಮೊದಲಾದ ಸ್ಥಾನ ವಿಭಾಗಗಳಲ್ಲಿಯ ಮರ್ಮಗಳು. (೩) ಸದ್ಯಃ ಪ್ರಾಣಹರಾದಿ ಮರ್ಮಗಳು (೫) ವಿಧವಾದವುಗಳಿರುತ್ತವೆ. ಇವು ಮುಖ್ಯವಾದ ವಿಭಾಗಗಳಾಗಿರುತ್ತವೆ. ಇನ್ನು ಆಗ್ನೇ

ಯಾದಿ ಸ್ಥಾನಾಶ್ರಿತ ಗುಣಗಳಿಂದ ವಿಭಾಗವನ್ನೂ ಮಾಂಸಾದಿಗಳ ಪರಸ್ಪರ ಸಂನ್ನಿಧಾನ ಅಧಿಕ ನ್ಯೂನತೆಗಳಿಂದ ವಿಭಾಗವನ್ನೂ ಮತ್ತು ಮರ್ಮಗಳ ಸಮೀಪದಲ್ಲಿಯ ಆಘಾತ ಮರ್ಮಗಳಲ್ಲಿಯೇ ಆಘಾತವಾದದ್ದರ ಪರಿಣಾಮಾದಿಗಳನ್ನು ಸಹ ವಿಶದೀಕರಿಸುತ್ತಾರೆ. ಬಹಳೇವಿಸ್ತಾರವೂ ಕ್ಲಿಷ್ಟವಾದದ್ದೂ ಇರುವದರಿಂದ ವಿಶೇಷ ಲಕ್ಷ ಕೊಟ್ಟರೇನೇ ಮರ್ಮ ವಿಷಯಗಳಲ್ಲಿ ಜ್ಞಾನ ವಾಗುವಂತಿದೆ.

ಮರ್ಮಗಳಲ್ಲಿಯ ಭೇದಗಳು (೫),

ಸಪ್ತೋತ್ತರಂ ಮರ್ಮಶತಂ॥ ತಾನಿಮರ್ಮಾಣಿಪಂಚಾತ್ಮಕಾನಿಭವಂತಿ; ತದ್ಯಥಾ.- ಮಾಂಸಮರ್ಮಾಣಿ, ಸಿರಾಮರ್ಮಾಣಿ, ಸ್ನಾಯುಮರ್ಮಾಣಿ, ಅಸ್ಥಿಮರ್ಮಾಣಿಸಂಧಿಮರ್ಮಾಣಿ ಚೇತಿ॥ ನಹಿಲುಮಾಂಸಸಿರಾಸ್ನಾಯ್ವಸ್ಥಿಸಂಧಿವ್ಯತಿರೇಕೇಣಾನ್ಯಾನಿಮರ್ಮಾಣಿಭವಂತಿ, ಯಸ್ಮಾನ್ನೋಪಲಭ್ಯಂತೆ॥

(ಸುಶ್ರುತ॥ ಶಾರೀರ॥ ೫ ೬ ಸೂ ೩)

ಶರೀರದಲ್ಲಿ (೧೦೭) ಮರ್ಮಗಳು ಇರುತ್ತವೆ ಮರ್ಮಗಳು ಐದು ಪ್ರಕಾರವಾದವುಗಳಿರುತ್ತವೆ. (೧) **ಮಾಂಸಮರ್ಮ** (೨) **ಸಿರಾಮರ್ಮ** (೩) **ಸ್ನಾಯುಮರ್ಮ** (೪) **ಅಸ್ಥಿಮರ್ಮ** (೫) **ಸಂಧಿಮರ್ಮ** ಇವುಗಳ ಹೊರತಾಗಿ ಅನ್ಯ ಮರ್ಮಗಳು ಉಪಲಭ್ಯವಿರುವದಿಲ್ಲವಾದ್ದರಿಂದ, ಮಾಂಸಾದಿಗಳಷ್ಟೇಮರ್ಮಗಳಾಗಿರುತ್ತವೆ. ಇನ್ನುಳಿದ ಸ್ರೋತೋ ಧಮನಿಗಳು ಮಾಂಸವ್ಯತಿರೇಕವಾಗಿಲ್ಲವಾದ್ದರಿಂದ, ಮಾಂಸಮರ್ಮಗಳಲ್ಲಿಯೇ ಅಂತರ್ಭಾವವಾಗುತ್ತವೆ.

ಮಾಂಸಾದಿ ಮರ್ಮಸಂಖ್ಯೆಯು

ತತ್ರೈಕಾದಶಮಾಂಸಮರ್ಮಾಣಿ, ಏಕಚತ್ವಾರಿಂಶತ್ ಸಿರಾಮರ್ಮಾಣಿ, ಸಪ್ತವಿಂಶತಿಃ ಸ್ನಾಯುಮರ್ಮಾಣಿ, ಅಷ್ಟಾವಸ್ಥಿಮರ್ಮಾಣಿ, ವಿಂಶತಿಃ ಸಂಧಿಮರ್ಮಾಣಿಚೇತಿ॥ ತದೇತತ್ ಸಪ್ತೋತ್ತರಂ ಮರ್ಮಶತಂ ॥

ಮಾಂಸಾದಿ ಮರ್ಮಗಳ ಪ್ರತ್ಯೇಕವಾದ ಸಂಖ್ಯೆಗಳನ್ನು ಸ್ಥೂಲ ರೀತಿಯಿಂದ ಹೇಳುತ್ತಾರೆ. (೧) ಮಾಂಸಮರ್ಮಗಳು (೧೧) ಇರುತ್ತವೆ. (೨) ಸಿರಾಮರ್ಮಗಳು (೪೧) ಇರುತ್ತವೆ. (೩) ಸ್ನಾಯುಮರ್ಮಗಳು (೨೭) ಇರುತ್ತವೆ. (೪) ಅಸ್ಥಿಮರ್ಮಗಳು (೮) ಇರುತ್ತವೆ (೫) ಸಂಧಿಮರ್ಮಗಳು (೨೦) ಇರುತ್ತವೆ ಒಟ್ಟು ಎಲ್ಲ ಮರ್ಮಗಳು ಕೂಡಿ (೧೦೭) ಇರುತ್ತವೆ.

ದೇಹ ವಿಭಾಗದಲ್ಲಿಯ ಮರ್ಮಗಳು

ತೇಷಾಮೇಕಾದಶೈಕಸ್ಮಿನ್ ಸಕ್ಥ್ನಿ ಭವಂತಿ, ಏತೇನೇತರಸಕ್ಥಿ ಬಾಹೂಚ ವ್ಯಾಖ್ಯಾತೌ॥ ಉದರೋರಸೋದ್ವಾದಶ, ಚತುರ್ದಶ, ಪೃಷ್ಠೆ॥ ಗ್ರೀವಾಂ ಪ್ರತ್ಯೂರ್ಧ್ವಂ ಸಪ್ತತ್ರಿಂಶತ್ ॥
(ಸುಶ್ರುತ॥ ಶಾರೀರ॥ ೮ ೬ ಸೂ ೫)

ಶಾಖಾಮರ್ಮಗಳು (೪೪)

ಒಂದು ಕಾಲಿನಲ್ಲಿ (೧೧) ಮರ್ಮಗಳಿರುತ್ತವೆ ಇದರಂತೆ **ಎರಡೂ** ಕೈಕಾಲುಗಳಲ್ಲಿ ಕೂಡಿ ಒಟ್ಟು (೪೪) ಮರ್ಮಗಳಾಗುತ್ತವೆ.

ಕೋಷ್ಠಮರ್ಮಗಳು [೨೬]

ಉದರ (ಹೊಟ್ಟೆ), ಉರಃ (ಎದೆ), ಈ ಭಾಗಗಳಲ್ಲಿ (೧೨) ಮರ್ಮಗಳಿರುತ್ತವೆ. **ಪೃಷ್ಠ** (ಬೆನ್ನು) ಭಾಗದಲ್ಲಿ ಮರ್ಮಗಳು (೧೪) ಇರುತ್ತವೆ. ಒಟ್ಟು ಕೋಷ್ಠ ಪ್ರದೇಶಗಳಲ್ಲಿ (೨೬) ಮರ್ಮಗಳಿರುತ್ತವೆ.

ಗ್ರೀವೋರ್ಧ್ವಮರ್ಮ (೩೭)

ಕುತ್ತಿಗೆಯಿಂದಾರಂಭಿಸಿ ಮೇಲ್ಭಾಗಗಳಲ್ಲಿ (೩೭) ಮರ್ಮಗಳಿರುತ್ತವೆ ಇವುಗಳಿಗೆ ಗ್ರೀವೋರ್ಧ್ವಮರ್ಮಗಳೆಂದು ಹೆಸರು

ಒಟ್ಟು ಎಲ್ಲಾ ಭಾಗಗಳಲ್ಲಿ ಕೂಡಿ ದೇಹದಲ್ಲಿ (೧೦೭) ಮರ್ಮಗಳಿರುತ್ತವೆ. **ಶಾಖಾ** (೪೪), **ಕೋಷ್ಠ** (೨೬), **ಗ್ರೀವೋರ್ಧ್ವ** (೩೭), ಈ

ಮೊದಲಾದ ಭಾಗಗಳಲ್ಲಿ ಕೂಡಿ (೧೦೭) ಮರ್ಮಗಳು ಶರೀರದಲ್ಲಿರುತ್ತವೆ. ಇದು ಆವಾವ ಭಾಗಗಳಲ್ಲಿಯು ಸ್ಥೂಲವಾದ ಸಂಖ್ಯಾ ನಿರ್ದೇಶವಾಗಿರುತ್ತದೆ

ಸಕ್ಥಿಮರ್ಮಗಳು [೧೧]

ತತ್ರಸಕ್ಥಿಮರ್ಮಾಣಿ:— ಕ್ಷಿಪ್ರತಲಹೃದಯಕೂರ್ಚಕೂರ್ಚ ಶಿರೋ ಗುಲ್ಫೇಂದ್ರಬಸ್ತಿ ಜಾನ್ವಾಣ್ಯುರ್ವೀಲೋಹಿತಾಕ್ಷಾಣಿ ವಿಟಪಂಚೇತಿ ॥ ಏತೇನೇತರಸಕ್ಥಿವ್ಯಾಖ್ಯಾತಂ ॥

(ಸಶ್ರುತ॥ ಶಾರೀರ॥ ಅ ೬ ಸೂ ೬)

[೧] ಕ್ಷಿಪ್ರ, [೨] ತಲಹೃದಯ, [೩] ಕೂರ್ಚ, [೪] ಕೂರ್ಚ ಶಿರ, [೫] ಗುಲ್ಫ, [೬] ಇಂದ್ರಬಸ್ತಿ, [೭] ಜಾನು, [೮] ಆಣೀ, [೯] ಉರ್ವೀ, [೧೦] ಲೋಹಿತಾಕ್ಷ, [೧೧] ವಿಟಪ, ಇವು ಸಕ್ಥಿ (ಕಾಲಿನ) ಮರ್ಮಗಳಾಗಿರುತ್ತವೆ. ಒಂದು ಕಾಲಿನ ಪ್ರದೇಶದಲ್ಲಿ (೧೧) ಮರ್ಮಗಳಿರುತ್ತವೆ. ಕಾಲಿನಲ್ಲಿರುವ ಮರ್ಮಗಳ ಸ್ಥಾನ ವಿವರಣೆಯು:—

೧ **ಕ್ಷಿಪ್ರ** (ಪಾದಾಂಗುಷ್ಠ ಅದರ ಹತ್ತಿರ ಬೆರಳು ಇವುಗಳ ಮಧ್ಯದಲ್ಲಿ, "ಹೆಬ್ಬೆರಳು ಮತ್ತು ಸಮೀಪದ ಬೆರಳುಗಳ ಅಂತರದಲ್ಲಿರುವ ಪ್ರದೇಶ"ದಲ್ಲಿ),

೨ **ತಲಹೃದಯ** (ಪಾದದ ನಡುವಿನ ಬೆರಳ ಕೆಳಗೆ ಸರಳರೇಖೆಯಿಂದ ಅಂಗಾಲಿನ ಮಧ್ಯದಲ್ಲಿ),

೩ **ಕೂರ್ಚ** (ಕ್ಷಿಪ್ರಮರ್ಮದ ಮೇಲ್ಗಡೆ ಎಡಬಲಗಳಲ್ಲಿ, "ಮತಾಂತರ":- ಕ್ಷಿಪ್ರಮರ್ಮದ ಮೇಲ್ಗಡೆಯಲ್ಲಿ, ಮೇಲಿನ ಮತ್ತು ಕೆಳಅಂಗಾಲಿನ ಪ್ರದೇಶಗಳಲ್ಲಿ),

೪ **ಕೂರ್ಚಶಿರ** (ಪಾದ ಸಂಧಿ ಗಂಟುಗಳ ಕೆಳಗೆ ಎಡಬಲ ಭಾಗಗಳಲ್ಲಿ, "ಮತಾಂತರ":— ಪಾದದ ಹಿಮ್ಮಡ ಮತ್ತು ಮುಂಭಾಗಗಳಲ್ಲಿ),

೫ **ಗುಲ್ಫ** (ಪಾದ ಮತ್ತು ಮೊಣಕಾಲುಗಳು ಕೂಡಿದ ಸಂಧಿ, ಪಾದದ ಮೇಲಿನ ಸಂಧಿ ಗಂಟುಗಳಿರುವಲ್ಲಿ),

೬ **ಇಂದ್ರಬಸ್ತಿ** (ಹಿಮ್ಮಡದಿಂದ(ಪಾಷ್ಣಿ)ಮೇಲೆ ಮೊಣಕಾಲಮಧ್ಯದಲ್ಲಿ),

೭ **ಜಾನು** (ಮೊಣಕಾಲು ತೊಡೆಗಳು ಕೂಡಿದ ಸಂಧಿ, ಮೊಣಕಾಲ ಮೇಲಿನ ಸಂಧಿ),

೮ **ಆಣೀ** (ಜಾನುಮರ್ಮದ ಮೇಲ್ಗಡೆ ಎಡಬಲ ಪಾರ್ಶ್ವಗಳಲ್ಲಿ. "ಮತಾಂತರ·— ಜಾನುಫಿನ ಮೇಲ್ಗಡೆ ಎದುರು ಮತ್ತು ಹಿಂದಿನ ಭಾಗಗಳಲ್ಲಿ),

೯ **ಉರ್ವೀ** (ತೊಡೆಯ ಮಧ್ಯ ಪ್ರದೇಶದಲ್ಲಿ),

೧೦ **ಲೋಹಿತಾಕ್ಷ** (ಉರ್ವೀ ಮರ್ಮದ ಮೇಲ್ಗಡೇ ತೊಡೆ ಅಸ್ಥಿಸಂಧಿಗಳ ಕೆಳಭಾಗಗಳಲ್ಲಿ),

೧೧ **ವಿಟಪ** (ತೊಡೆಗಳ ಅಸ್ಥಿಸಂಧಿಗಳಿಂದ ಎರಡೂ ಕಡೆ ಅಂಡದ ವರೆಗಿನ ಪ್ರದೇಶಗಳಲ್ಲಿ),

ಈ ಮೊದಲಾದ ಸ್ಥಾನಗಳಲ್ಲಿ ಕ್ಷಿಪ್ರಾದಿ ಸಕ್ಥಿ ಮರ್ಮಗಳಿರುತ್ತವೆ ಎರಡೂ ಕಾಲುಗಳಲ್ಲಿ ಕೂಡಿ ಒಟ್ಟು (೨೨) ಮರ್ಮಗಳಾಗುತ್ತವೆ ಇವು ಕಾಲುಗಳಲ್ಲಿಯ ಮರ್ಮ ಮತ್ತು ಅವುಗಳ ಸ್ಥಾನಗಳಾಗಿರುತ್ತವೆ.

ಹೊಟ್ಟೆ ಮತ್ತು ಎದೆ ಪ್ರದೇಶ ಮರ್ಮಗಳು (೧೨)

ಉದರೋರಸೋಸ್ತು, ಗುದಬಸ್ತಿನಾಭಿ ಹೃದಯೆಸ್ತನಮೂಲ ಸ್ತನರೋಹಿತಾಪಲಾಪಾನ್ಯಪಸ್ತಂಭೌಚೇತಿ ॥

(ಸುಶ್ರುತ॥ ಶಾರೀರ॥ ಅ ೬ ಸೂ ೬)

ಹೊಟ್ಟೆ ಮತ್ತು ಎದೆ ಪ್ರದೇಶಗಳಲ್ಲಿಯ ಮರ್ಮಗಳು (೧೨) ಇರುತ್ತವೆ. (೧) **ಗುದ**, (೨) **ಬಸ್ತಿ**, (೩) **ನಾಭಿ**, (೪) **ಹೃದಯ**, (೫)

ಸ್ತನಮೂಲ, (೬) ಸ್ತನರೋಹಿತ, (೭)ಅಪಲಾಪ, (೮) ಅಪಸ್ತಂಭ, ಇವು ಉದರ ಮತ್ತು ಎದೇ ಪ್ರದೇಶಗಳಲ್ಲಿರುತ್ತವೆ ಸ್ತನಮೂಲದಿಂದಾರಂಭಿಸಿ ಪ್ರತಿಯೊಂದು ಮರ್ಮಗಳು ಎರಡು ಇರುತ್ತವೆ. ಆದ್ದರಿಂದ ಉದರ ಉರಸ್ಸುಗಳ ಭಾಗದಲ್ಲಿ (೧೨) ಮರ್ಮಗಳಾಗುತ್ತವೆ.

೧ **ಗುದ** (ಆಧೋವಾಯು ವಲಗಳನ್ನು ಹೊರಗೆ ಹಾಕುವ ಸ್ಫೂಲಾಂತ್ರ ಬದ್ಧವಾದ ದ್ವಾರ ಪ್ರದೇಶ, ಮಲ ನಿರ್ಗಮನ ದ್ವಾರವು),

೨ **ಬಸ್ತಿ** (ಕಟಿಪ್ರದೇಶದಲ್ಲಿ ಎದುರಿಗೆ ಕೆಳಭಾಗದಲ್ಲಿ, ಇದಕ್ಕೆ ಮೂತ್ರಾಶಯವೆಂಬ ಹೆಸರು),

೩ **ನಾಭಿ** (ಹೊಕ್ಕಳು),

೪ **ಹೃದಯ** (ಎದೆಯಲ್ಲಿ ಸ್ತನಗಳ ಮಧ್ಯ ಪ್ರದೇಶದಲ್ಲಿ, ಆಮಾಶಯ ದ್ವಾರದ ಹತ್ತಿರದಲ್ಲಿರುತ್ತದೆ),

೫ **ಸ್ತನಮೂಲ** (ಎರಡೂ ಸ್ತನಗಳ ಕೆಳಗೆ ಎರಡಂಗುಲ ಪ್ರದೇಶಗಳಲ್ಲಿ),

೬ **ಸ್ತನರೋಹಿತ** (ಸ್ತನಗಳ ಮೇಲ್ಭಾಗದಲ್ಲಿ ಎರಡಂಗುಲಪ್ರದೇಶಗಳಲ್ಲಿ),

೭ **ಅಪಲಾಪ** (ಎಡಬಲ ರಟ್ಟೀ ಸಂಧಿಗಳ ಕೆಳಗೆ ಪಾರ್ಶ್ವಗಳ ಮೇಲ್ಭಾಗಗಳಲ್ಲಿ, ಬಗಲುಗಳ ಆದಿಯ ಪಾರ್ಶ್ವ ಭಾಗಗಳಲ್ಲಿ),

೮ **ಅಪಸ್ತಂಭ** (ಎದೆಯ ಎಡಬಲಭಾಗಗಳಲ್ಲಿರುವ ವಾತವಹಾನಾಡಿಗಳು, "ಮತಾಂತರ":–ಎದೆಯ ಎರಡೂ ಪಾರ್ಶ್ವ (ಪಕ್ಕ)ಗಳಲ್ಲಿಯ ವಾತವಹನಾಡಿಗಳು),

ಈ ಮೊದಲಾದ ಸ್ಥಾನಗಳಲ್ಲಿ ಗುದ ಮುಂತಾದ ಮರ್ಮಗಳಿರುತ್ತವೆ. ಇವು ಉದರ ಎದೆಗಳಲ್ಲಿರುವ ಮರ್ಮ ಮತ್ತು ಅವುಗಳ ಸ್ಥಾನಗಳು

ಬೆನ್ನಿನಲ್ಲಿ ಮರ್ಮಗಳು (೧೪)

ಪೃಷ್ಠಮರ್ಮಾಣಿತು, ಕಟೀಕ ತರುಣ ಕುಕುಂದರ ನಿತಂಬ ಪಾರ್ಶ್ವಸಂಧಿಬೃಹತೀ ಅಂಸಫಲಕಾನ್ಯಂಸೌ ಚೇತಿ ॥
(ಸುಶ್ರುತ॥ ಶಾರೀರ॥ ಅ ೬ ಸೂ. ೬)

೧ ಕಟೀಕ, ೨ ತರುಣ, ೩ ಕುಕುಂದರ, ೪ ನಿತಂಬ, ೫ ಪಾರ್ಶ್ವಸಂಧಿ, ೬ ಬೃಹತೀ, ೭ ಅಂಸಫಲಕ, ೮ ಅಂಸ, ಇವು ಬೆನ್ನು [ಪೃಷ್ಠ] ಪ್ರದೇಶಗಳಲ್ಲಿಯ ಮರ್ಮಗಳು. ಕುಕುಂದರದಿಂದ ಪ್ರತಿಯೊಂದು ಮರ್ಮಗಳು ಎರಡರಂತೆ ಇರುವದರಿಂದ ಬೆನ್ನಿನ ಪ್ರದೇಶಗಳಲ್ಲಿ [೧೪] ಮರ್ಮಗಳಾಗುತ್ತವೆ

೧-೨ **ಕಟೀಕ** ಮತ್ತು **ತರುಣ** [ಕಶೇರುಕಾಸ್ಥಿ ಕೂಡುವ ಸ್ಥಳದಲ್ಲಿ ಟೊಂಕದ ಎರಡೂ ಪಾರ್ಶ್ವಗಳಲ್ಲಿ, ಕಟಿಯ ಮೇಲ್ಭಾಗದಲ್ಲಿ **ಎಡಬಲ** ತ್ರಿಕಾಸ್ಥಿಗಳಲ್ಲಿ],

೩ **ಕುಕುಂದರ** [ಪೃಷ್ಠ ವಂಶದ ಎರಡೂ ಕಡೆ ಪಾರ್ಶ್ವಗಳಲ್ಲಿ ಜಘನ ಬಹಿರ್ಭಾಗದಲ್ಲಿ, "ಮತಾಂತರ":- ಟೊಂಕದ ಎಡಬಲಗಳಲ್ಲಿ ಹಿಂದಿನ ಮೇಲ್ಭಾಗಗಳಲ್ಲಿ, "ಗಯೀಮತ" ಪಾರ್ಶ್ವಗಳಲ್ಲಿ [ತಿಕದ] ಜಘನದ ಅಧೋ ಭಾಗ ತಗ್ಗು ಪ್ರದೇಶಗಳಲ್ಲಿ, "ವಿವೇಚನೆ":— ಬೆನ್ನು ಹುರಿಯ **ಎಡಬಲ** ಭಾಗಗಳಲ್ಲಿ ಟೊಂಕದ ಅಸ್ಥಿಸಂಧಿಗಳಿರುತ್ತವೆ. ಆ ಸ್ಥಳಕ್ಕೆ ಕುಕುಂದರವೆನ್ನುತ್ತಾರೆ],

೪ **ನಿತಂಬ** [ಕಟಿ ಸಂಧಾನ ತ್ರಿಕಾಸ್ಥಿಗಳ ಮೇಲ್ಭಾಗದಲ್ಲಿ ಮಲಾಶಯಕ್ಕೆ ಆಚ್ಛಾದಕವಾಗಿ **ಎಡ ಬಲ** ಪಾರ್ಶ್ವಗಳಲ್ಲಿ ಪ್ರತಿಬದ್ಧವಾದ ಅಸ್ಥಿಫಲಕಗಳು, "ಸ್ಪಷ್ಟಾರ್ಥ":— ಟೊಂಕದ ಪೃಷ್ಠಾಸ್ಥಿದಂಡಕ್ಕೆ **ಎಡಬಲ** ಪಾರ್ಶ್ವಗಳಲ್ಲಿ ಹೊಂದಿಕೊಂಡು ಮಲಾಶಯಾದಿಗಳನ್ನು ಆಚ್ಛಾದಿಸುವ ಸ್ವಲ್ಪ ವರ್ತುಲಾಕಾರವುಳ್ಳ **ಅಸ್ಥಿಫಲಕಗಳು,** ಇವುಗಳ ಮಧ್ಯದಲ್ಲಿ ಪೃಷ್ಠಾಸ್ಥಿದಂಡವು [ಬೆನ್ನುಹುರಿ] ಪ್ರತಿಬದ್ಧವಾಗಿರುತ್ತದೆ],

೫ **ಪಾರ್ಶ್ವಸಂಧಿ** [ಪಕ್ಕಡಿ, ಎಡಬಲ ಪಾರ್ಶ್ವಗಳಲ್ಲಿ ಅಸ್ಥಿಫಲಕವುಳ್ಳ ಸಂಧಿಗಳು, "ಕನ್ನಡದಲ್ಲಿ" ಇದಕ್ಕೆ ಪಕ್ಕಡಿ, ಪಾರ್ಶ್ವ, ಪಕ್ಕೆಲಬುಗಳೆಂದು ಹೇಳುತ್ತಾರೆ],

೬ **ಬೃಹತೀ** [ಸ್ತನ ಮೂಲಗಳ ಸರಳರೇಖೆಯಿಂದ ಸರಿಯಾಗಿ ಹಿಂಬದಿಯ ಎಡಬಲ ಪಾರ್ಶ್ವಗಳಲ್ಲಿ],

೭ **ಅಂಸಫಲಕ** [ಬೆನ್ನಿನ ಮೇಲ್ಗಡೆ ಪೃಷ್ಠ ವಂಶದ ಎರಡೂ ಕಡೆಗಳಲ್ಲಿ, "ಕನ್ನಡದಲ್ಲಿ" ಇದಕ್ಕೆ ಭುಜಾಸ್ಥಿ, ಭುಜ ಪ್ರದೇಶದಲ್ಲಿ ಕೆಳಗಡೆ ಇರುವ ಅಸ್ಥಿಫಲಕಗಳು, ಹೆಗಲಿನ ಎಲುಬಿನ ಹಲಿಗೆಗಳೆಂದು ಅನ್ನುತ್ತಾರೆ],

೮ **ಅಂಸ** [ಎರಡುರಟ್ಟೆಗಳ ಆದಿಯ ಅಡ್ಡೆಲಬುಗಳು, ಬಾಹುಗಳಿರಡು ಕುತ್ತಿಗೆ ಇವುಗಳು ಕೂಡಿದ ಸ್ಥಳಕ್ಕೆ ತ್ರಿಕವೆಂಬ ಹೆಸರು. ಇಲ್ಲಿ ಬದ್ದವಾದ ಬಾಹು ಮೂಲಗಳಲ್ಲಿಯ ಅಡ್ಡೆಲುಬುಗಳು],

ಈ ಮೊದಲಾದ ಸ್ಥಾನಗಳಲ್ಲಿ, ಕಟೀಕ ತರುಣ ಮುಂತಾದ ಪೃಷ್ಠ ಮರ್ಮಗಳಿರುತ್ತವೆ.

ಬಾಹುಮರ್ಮಗಳು (೨೨)

ಬಾಹುಮರ್ಮಾಣಿತು, ಶಿಪ್ರತಲಹೃದಯಕೂರ್ಚಕೂರ್ಚ ಶಿರೋಮಣಿಬಂಧ ಇಂದ್ರಬಸ್ತಿ ಕೂರ್ಪರಾಣ್ಯುರ್ವೀಲೋಹಿತಾಕ್ಷಾಣಿಕಕ್ಷಧರಂಚೇತಿ॥ ಏತೇನೇತರೋಬಾಹುರ್ವ್ಯಾಖ್ಯಾತಃ॥

(ಸುಶ್ರುತ॥ ಶಾರೀರ॥ ಅ ೬ ಸೂ ೬)

ಬಾಹು (ತೋಳು, ರಟ್ಟೆ) ಮರ್ಮಗಳು (೧೧) ಇರುತ್ತವೆ. (೧) ಶಿಪ್ರ, (೨) ತಲಹೃದಯ, (೩) ಕೂರ್ಚ, (೪) ಕೂರ್ಚಶಿರ, (೫) ಮಣಿಬಂಧ, (೬) ಇಂದ್ರಬಸ್ತಿ, (೭) ಕೂರ್ಪರ, (೮) ಆಣೀ, (೯) ಉರ್ವೀ, (೧೦) ಲೋಹಿತಾಕ್ಷ, (೧೧) ಕಕ್ಷಧರ, ಇವುಗಳು

ಬಾಹು ಮರ್ಮಗಳಾಗಿರುತ್ತವೆ. ಇದರಂತೆ ಎರಡೂ ಬಾಹುಗಳಲ್ಲಿ ಕೂಡಿ (೨೨) ಮರ್ಮಗಳಿರುತ್ತವೆ.

ಇಲ್ಲಿ ಬಾಹು ಮರ್ಮಗಳಲ್ಲಿ, ಸಕ್ಥಿ ಮರ್ಮಗಳಲ್ಲಿ ಹೇಳಿದಂತೇ ಸ್ಥಾನಗಳನ್ನು ಹೋಲಿಸಿಕೊಂಡು ತಿಳಿಯಬೇಕು:— **ಸಕ್ಥಿ ಮರ್ಮಗಳಲ್ಲಿ** (೧) **ಗುಲ್ಫ**, (೨) **ಜಾನು**, (೩) **ವಿಟಪಗಳು** ಇರುತ್ತವೆ. ಇವುಗಳ ಬದಲಾಗಿ ಬಾಹುಗಳಲ್ಲಿರುವ ಮರ್ಮಗಳ ಹೆಸರುಗಳು ಇಂತಿರುತ್ತವೆ **ಬಾಹು ಸ್ಥಾನಮರ್ಮಗಳಲ್ಲಿ** (೧) **ಮಣಿಬಂಧ**, (೨) **ಕೂರ್ಪರ**, (೩) **ಕಕ್ಷಧರ**, ಇವುಗಳು ಇರುತ್ತವೆಯೆಂದು ತಿಳಿಯಬೇಕು "ವಿಟಪ" ಮರ್ಮವು ತೊಡೆ ಅಂಡಕೋಶಗಳ ಮಧ್ಯದಲ್ಲಿರುವಂತೇ, ಇಲ್ಲಿ "**ಕಕ್ಷಧರ**" ಮರ್ಮವು ಎದೆ ಬಗಲುಗಳ ನಡುವೆ ಇರುತ್ತದೆಂದು ತಿಳಿಯಬೇಕು. ಈ ಮೊದಲಾದ ಸ್ಥಾನಗಳಲ್ಲಿ ಶಿಪ್ರ ಮುಂತಾದ ಬಾಹುಮರ್ಮಗಳಿರುತ್ತವೆ.

ಜತ್ರೂರ್ಧ್ವಮರ್ಮಗಳು (೩೭)

ಜತ್ರುಣಊರ್ಧ್ವಂ, ಚತಸ್ರೋಧಮನ್ಯೋಽಷ್ಟೌಮಾತೃಕಾ
ದ್ವೇಕೃಕಾಟಿಕೇದ್ವೇವಿಧುರೇದ್ವೇಫಣೇ ದ್ವಾವಪಾಂಗೌದ್ವಾವಾ
ವರ್ತೌ ದ್ವಾವುತ್ ಕ್ಷೇಪೌದ್ವೌಶಂಖಾವೇಕಾಸ್ಥಪನೀ ಪಂಚಸೀ
ಮಂತಾಶ್ಚತ್ವಾರಿಶೃಂಗಾಟಕಾನ್ಯೇಕೋಽಧಿಪತಿರಿತಿ ॥

(ಸುಶ್ರುತ॥ ಶಾರೀರ॥ ಅ ೬ ಸೂ ೬)

ಬಾಹುಸಂಧಿಗಳ (ಜತ್ರು) ಮೇಲ್ಗಡೆಯಲ್ಲಿರುವ ಮರ್ಮಗಳು (೩೭) ಇರುತ್ತವೆ. **[೪] ಧಮನೀಗಳು, [೮] ಮಾತೃಕಾಗಳು, [೨] ಕೃಕಾಟಿಕೆ, [೨] ವಿಧುರೇ, [೨] ಫಣೇ, [೨] ಅಪಾಂಗ, [೨] ಆವರ್ತ [೨] ಉತ್‌ಕ್ಷೇಪ, (೨) ಶಂಖ, (೧) ಸ್ಥಪನೀ, (೫) ಸೀಮಂತ, (೪) ಶೃಂಗಾಟಕ, (೧) ಅಧಿಪತಿ**, ಒಟ್ಟು ಜತ್ರೂರ್ಧ್ವಭಾಗಗಳಲ್ಲಿ (೩೭) ಮರ್ಮಗಳಿರುತ್ತವೆ.

೪ **ಧಮನಿಗಳು,** (ಕಂಠನಾಳದ ಎರಡೂ ಕಡೆ "ನೀಲ" ಮತ್ತು "ಮನ್ಯ" ಗಳೆಂಬ ಪ್ರತಿಯೊಂದು ಎರಡೆರಡರಂತೇ ಧಮನಿಗಳಿದ್ದು ಕತ್ತರಿಯಂತೇ ಹೋಗಿರುತ್ತವೆ),

೮ **ಮಾತೃಕಾ,** (ಕುತ್ತಿಗೆ ಎರಡೂ ಪಾರ್ಶ್ವಗಳಲ್ಲಿ ನಾಲ್ಕುನಾಲ್ಕರಂತೆ ಸಿರಗಳಿರುತ್ತವೆ),

೨ **ಕೃಕಾಟಿಕೆ,** (ತಲೆ ಮತ್ತು ಕುತ್ತಿಗೆಗಳ ಸಂಧಾನ ಸ್ಥಾನದಲ್ಲಿ),

೨ **ವಿಧುರೆ,** (ಕಿವಿಗಳ ಹಿಂದೆ ಕೆಳಗಡೇ ಭಾಗಗಳಲ್ಲಿ),

೨ **ಫಣೇ,** (ಮೂಗಿನ ರಂಧ್ರಗಳ ಆದಿಯ ಒಳಭಾಗಗಳಲ್ಲಿ),

೨ **ಅಪಾಂಗ,** (ಎರಡೂ ಹುಬ್ಬುಗಳ ತುದಿಯಲ್ಲಿ ಕೆಳಗೆ ಕಣ್ಣುಗಳ ಹೊರ ಭಾಗಗಳಲ್ಲಿ),

೨ **ಆವರ್ತ,** (ಹುಬ್ಬುಗಳ ಮೇಲ್ಭಾಗದಲ್ಲಿರುವ ಸ್ವಲ್ಪ ತಗ್ಗಾದ ಪ್ರದೇಶಗಳಲ್ಲಿ),

೨ **ಶಂಖ,** (ಹುಬ್ಬುಗಳ ಕೊನೇ ಭಾಗಗಳ ಮೇಲೆ ಕಿವಿ ಹಣೆಗಳ ಮಧ್ಯ ಭಾಗಗಳಲ್ಲಿ, ಇದಕ್ಕೆ ಮೆಲಕು ಎಂದು ಅನ್ನುತ್ತಾರೆ),

೨ **ಉತ್ಕ್ಷೇಪ,** (ಶಂಖ ಮರ್ಮಗಳ ಮೇಲ್ಭಾಗ ಕೇಶಾಂತ್ಯ ಪ್ರದೇಶ ಗಳಲ್ಲಿ),

೧ **ಸ್ಥಪನೀ,** (ಎರಡೂ ಹುಬ್ಬುಗಳು ಕೂಡಿದ ಮಧ್ಯಭಾಗದಲ್ಲಿ),

೫ **ಸೀವಂತ,** (ತಲೇ ಪರಟೆಗಳಲ್ಲಿ ಪರಸ್ಪರ ಎಲುಬುಗಳು ಕೂಡಿದ [೫] ಸಂಧಿಗಳು),

೪ **ಶೃಂಗಾಟಕ** (ಮೂಗು ಕಿವಿ ಕಣ್ಣು ನಾಲಗೆಗಳನ್ನು ಪೋಷಿಸುವ ಸಿರಗಳು ಒಟ್ಟುಗೂಡಿದ ಸ್ಥಳದಲ್ಲಿ, ಅವಾವ ಮೂಗು ಮೊದಲಾದ ಸಿರಗಳನ್ನು ಪ್ರತ್ಯೇಕ ಗ್ರಹಿಸಿದ್ದಾರೆ),

೧ **ಅಧಿಪತಿ** (ತಲೆಯ ಒಳಗಡೆ ಮೇಲ್ಭಾಗದಲ್ಲಿ ಸಿರಾ ಸಂಧಿಗಳು ಒಂದೆಡೆಯಾಗುವ ಸ್ಥಳದಲ್ಲಿ, "ವಿಶೇಷ" ಇದರ ಮೇಲ್ಭಾಗ ತಲೆಯಲ್ಲಿ ಕೂದಲ ಸುಳಿ ಇರುತ್ತದೆ "ಕನ್ನಡದಲ್ಲಿ" ನೆತ್ತಿಯೆಂದು ಅನ್ನುತ್ತಾರೆ),

ಈ ಮೊದಲಾದ ಸ್ಥಳಗಳಲ್ಲಿ ಧನುಸ್ಸೀ ಮುಂತಾದ ಜತ್ರೂರ್ಧ್ವ ಮರ್ಮಗಳಿರುತ್ತವೆ. **ಸಕ್ಥಿಮರ್ಮ** [೨೨], **ಹೊಟ್ಟೆ ಎದೆಗಳ ಮರ್ಮ** [೧೨], **ಬೆನ್ನಿನ ಮರ್ಮ** [೧೪], **ಬಾಹು ಮರ್ಮ** [೨೨], **ಜತ್ರೂರ್ಧ್ವ ಮರ್ಮ** [೩೭], ಈ ಮೊದಲಾದ ಪ್ರದೇಶಗಳಲ್ಲಿಯ ಒಟ್ಟು ಮರ್ಮಗಳು ಕೂಡಿ [೧೦೭] ಇರುತ್ತವೆ. ಇವು ಸ್ಥೂಲ ರೀತಿಯ ಮರ್ಮಗಳ ವಿಭಾಗ ಸ್ಥಳಗಳು. ಮುಂದೆ ಪ್ರತ್ಯೇಕ ಮರ್ಮಗಳ ಪ್ರಮಾಣಾವಧಿ ಮತ್ತು ಅಲ್ಲಿ ಸಂಭವಿಸುವ ಆಘಾತ ಪರಿಣಾಮಗಳನ್ನೂ ಹೇಳುತ್ತಾರೆ.

ಮಾಂಸಮರ್ಮಗಳು (೧೧)

ತತ್ರತಲಹೃದಯೇಂದ್ರ ಬಸ್ತಿಗುದ ಸ್ತನರೋಹಿತಾನಿ ಮಾಂಸ ಮರ್ಮಾಣಿ ॥ (ಸು.ಶ್ರುತ॥ ಶಾರೀರ॥ ಅ ೬ ಸೂ ೭)

೪ ತಲಹೃದಯ, ೪ ಇಂದ್ರಬಸ್ತಿ, ೧ ಗುದ, ೨ ಸ್ತನರೋಹಿತ, ಒಟ್ಟು ಮಾಂಸ ಮರ್ಮಗಳು (೧೧) ಇರುತ್ತವೆ.

ಸೂಚನೆ.— ಎಲ್ಲ ಮರ್ಮಗಳ ಸ್ಥಳಗಳನ್ನು ಇದೇ ಹಿಂದೆ ವಿವರಿಸಿ ಹೇಳಿದ್ದರಿಂದ, ಈಗ ಪುನಃ ವಿವರಣೆಯನ್ನು ಮಾಡಿರುವದಿಲ್ಲ. ದೇಹದಲ್ಲಿರುವ (೧೦೭) ಮರ್ಮಗಳ ಸ್ಥಾನ ನಿರ್ದೇಶಗಳು ಕ್ರಮಶಃ ಮುಗಿದಿರುತ್ತವೆ. ಅಲ್ಲಿ ಹೇಳಿದ ಮರ್ಮಗಳನ್ನೇ ಮಾಂಸಾದಿ ವಿಭಾಗಗಳಿಂದಲೂ, ಸದ್ಯಃ ಪ್ರಾಣಹರಾದಿ ಭೇದಗಳಿಂದಲೂ ವಿವರಿಸುತ್ತಾರೆ. ಆದ್ದರಿಂದ ಮರ್ಮಾದಿಗಳ ಸ್ಥಾನ ವಿವರಣೆಯಲ್ಲಿ ಚನ್ನಾಗಿ ಪರಿಚಯವು ದೊರೆಯುತ್ತದೆ.

ಸಿರಾಮರ್ಮಗಳು [೪೧]

ನೀಲಧಮನೀ ಮಾತೃಕಾಶೃಂಗಾಟಕಾsಪಾಂಗಸ್ಥಪನೀಫಣಸ್ತ

ನಮೂಲಾಪಲಾಪಾಪಸ್ತಂಭ ಹೃದಯನಾಭಿಪಾರ್ಶ್ವಸಂಧಿಬೃ
ಹತೀಲೋಹಿತಾಕ್ಷೋರ್ವ್ಯಃ ಸಿರಾಮರ್ಮಾಣಿ ॥

(ಸುಶ್ರುತ॥ ಶಾರೀರ॥ ಅ ೬ ಸೂ ೭)

(೪) ನೀಲಧಮನೀ, (೮) ಮಾತೃಕಾ, (೪) ಶೃಂಗಾಟಕ, (೨) ಅಪಾಂಗ, (೧) ಸ್ಥಪನೀ, (೨) ಫಣೀ, (೨) ಸ್ತನಮೂಲ, (೨) ಅಪಸ್ತಂಭ, (೨) ಅಪಲಾಪ, (೧) ಹೃದಯ, (೧) ನಾಭಿ, (೨) ಪಾರ್ಶ್ವಸಂಧಿ, (೨) ಬೃಹತೀ, (೪) ಲೋಹಿತಾಕ್ಷ, (೪) ಉರ್ವೀ, ಇವುಗಳು ಸಿರಾಮರ್ಮಗಳು.ಒಟ್ಟು ಕೂಡಿ (೪೧) ಇರುತ್ತವೆ

ಸ್ನಾಯುಮರ್ಮಗಳು [೨೭]

ಆಣೀವಿಟಪಕಕ್ಷಧರ ಕೂರ್ಚಕೂರ್ಚಶಿರೋಬಸ್ತಿಕ್ಷಿಪ್ರಾಂಸವಿ
ಧುರೋತ್ಕ್ಷೇಪಾಃ ಸ್ನಾಯುಮರ್ಮಾಣೀ॥ (ಸು॥ಶಾ॥ ಸೂ೭)

(೪) ಆಣೀ, (೨) ವಿಟಪ, (೨) ಕಕ್ಷಧರ, (೪) ಕೂರ್ಚ, (೪) ಕೂರ್ಚಶಿರಃ, (೧) ಬಸ್ತಿ, (೪) ಕ್ಷಿಪ್ರ, (೨) ಅಂಸ, (೨) ವಿಧುರ, (೨) ಉತ್ಕ್ಷೇಪ, ಇವುಗಳು ಸ್ನಾಯು.ಮರ್ಮಗಳು ಒಟ್ಟು ಕೂಡಿ (೨೭) ಇರುತ್ತವೆ.

ಅಸ್ಥಿಮರ್ಮಗಳು (೮)

ಕಟೀಕತರುಣನಿತಂಬಾಂಸಫಲಕಶಂಖಾಸ್ಥ್ಯಸ್ಥಿಮರ್ಮಾಣಿ॥

(ಸು॥ ಶಾ॥ ಸೂ೭)

(೧) ಕಟೀಕ, (೧) ತರುಣ, (೨) ನಿತಂಬ, (೨) ಅಂಸಫಲಕ, (೨) ಶಂಖ, ಇವುಗಳು (೮) ಅಸ್ಥಿಮರ್ಮಗಳು.

ಸಂಧಿಮರ್ಮಗಳು [೨೦]

ಜಾನ್ವೂರ್ಪರಸೀವ್ನಮಂತಾಧಿಪತಿಗುಲ್ಫಮಣಿಬಂಧಕುಕುಂದ
ರಾವರ್ತಕೃಕಾಟಿಕಾಶ್ಚೇತಿಸಂಧಿಮರ್ಮಾಣಿ॥

(ಸುಶ್ರುತ॥ ಶಾರೀರ॥ ೬ ಸೂ ೭)

(೧) ಜಾನು, (೨) ಕೂರ್ಪರ, (೩) ಸೀವ್ನಮಂತ, (೧) ಅಧಿಪತಿ, (೨) ಗುಲ್ಫ, (೨) ಮಣಿಬಂಧ, (೨) ಕುಕುಂದರ, (೨) ಆವರ್ತ, (೨) ಕೃಕಾಟಿಕ, ಇವುಗಳು ಒಟ್ಟು (೨೦) ಸಂಧಿಮರ್ಮಗಳು ಇರುತ್ತವೆ.

ಸದ್ಯಃ ಪ್ರಾಣಹರಾದಿಮರ್ಮ ವಿಭಾಗಗಳು

ತಾನ್ಯೇತಾನಿಪಂಚವಿಕಲ್ಪಾನಿಭವಂತಿ; ತದ್ಯಥಾ:– ಸದ್ಯಃಪ್ರಾಣ
ಹರಾಣಿ, ಕಾಲಾಂತರಪ್ರಾಣಹರಾಣಿ, ವಿಶಲ್ಯಘ್ನಾನಿ, ವೈಕ
ಲ್ಯಕರಾಣಿ, ರುಜಾಕರಾಣಿಚೇತಿ, ॥ (ಸು॥ ಶಾ॥ ೬ ಸೂ ೪)

ಮರ್ಮಗಳು ಪ್ರಾಣಹಾರಕವಾದವುಗಳಿದ್ದರೂ, ಅವುಗಳಲ್ಲಿರುವ ಪ್ರಾಣಹಾರಕ ರುಜಾಕಾರಕಾದಿ ಭೇದಗಳಿಂದ ವಿವರಿಸುತ್ತಾರೆ. ಮರ್ಮಗಳಲ್ಲಿ ಸದ್ಯಃ ಪ್ರಾಣಹಾರಾದಿ ವಿಭಾಗಗಳಿಂದ (೫) ಪ್ರಕಾರ ಮರ್ಮಗಳಿರುತ್ತವೆ.

(೧) ಸದ್ಯಃಪ್ರಾಣಹರ, (೨) ಕಾಲಾಂತರಪ್ರಾಣಹರ, (೩) ವಿಶಲ್ಯಘ್ನ, (೪) ವೈಕಲ್ಯಕರ, (೫) ರುಜಾಕರ ಈ ಮೊದಲಾದ ಭೇದಗಳಿರುತ್ತವೆ.

ಮರ್ಮಾದಿಗಳಲ್ಲಿಪ್ರಾಣಹರಕಾರಣವು

ಮರ್ಮಾಣಿ ಮಾಂಸ ಸಿರಸ್ನಾಯ್ವಸ್ಥಿ ಸಂಧಿ ಸನ್ನಿಪಾತಾಃತೇಷು
ಸ್ವಭಾವತಏವ ವಿಶೇಷೇಣ ಪ್ರಾಣಾಸ್ತಿಷ್ಠಂತಿ; ತಸ್ಮಾತ್ಮರ್ಮ

ಸ್ವಭಿಹತಾಸ್ತಾಂ ಸ್ತಾನ್ ಭಾವನಾಪದ್ಯಂತೆ ॥
(ಸುಶ್ರುತ॥ ಶಾರೀರ॥ ಅ ೬ ಸೂ ೧೫)

ಮಾಂಸ ಸಿರ ಸ್ನಾಯು ಸಂಧಿ ಅಸ್ಥಿ ಇವುಗಳ ಕೂಡುವಿಕೆಗೆ ಮರ್ಮ ಗಳೆಂದು ಹೇಳುತ್ತಾರೆ ಸ್ವಾಭಾವಿಕವಾಗಿಯೇ ಇಂಥ ಕೂಡುವಿಕೆ ಸಂಧಿ ಮೊದಲಾದವುಗಳಲ್ಲಿ ಪ್ರಾಣಾಧಿಕ್ಯತೆ ಇರುತ್ತದೆ ಆದ್ದರಿಂದಲೇ ಮರ್ಮಾದಿ ಗಳಲ್ಲಿ ಆಘಾತವಾದರೆ ಹೆಚ್ಚು ಹಾನಿಕಾರಕವಾಗಿರುತ್ತದೆ. ಮಾಂಸಾದಿಗಳು ಎರಡರಿಂದ ಅದಕ್ಕೂ ಅಧಿಕವಾಗಿ ಅಥವಾ ಎಲ್ಲವುಗಳಿಂದಲೂ ಕೂಡಿದರೆ, ಸಾಮಾನ್ಯ ಹಾನಿ, ಹೆಚ್ಚು, ಸದ್ಯಃ ಪ್ರಾಣಹರ ಮುಂತಾದವುಗಳು ಉಂಟಾ ಗುತ್ತವೆ

ತತ್ರ ಸದ್ಯಃ ಪ್ರಾಣಹರಾಣ್ಯಾಗ್ನೇಯಾನಿ, ಅಗ್ನಿ ಗುಣೇಷ್ವಾ ಶುಕ್ಷೀಣೇಷು ಕ್ಷಪಯಂತಿ, ಕಾಲಂತರ ಪ್ರಾಣಹರಾಣಿಸೌಮ್ಯಾ ಗ್ನೇಯಾನಿ, ಅಗ್ನಿಗುಣೇಷ್ವಾಶುಕ್ಷೀಣೇಷು ಕ್ರಮೇಣಚ ಸೋ ಮಗುಣೇಷು ಕಾಲಾಂತರೇಣಕ್ಷಪಯಂತಿ; ವಿಶಲ್ಯ ಪ್ರಾಣಹ ರಾಣಿವಾಯವ್ಯಾನಿ ಶಲ್ಯ ಮುಖಾವರುದ್ಧೋ ಯಾವದಂತ ರ್ವಾಯುಸ್ತಿಷ್ಠತಿತಾವಜ್ಜೀವತಿ, ಉದ್ಧೃತಮಾತ್ರೇತುಶಲ್ಯೇ ಮರ್ಮಸ್ಥಾನಶ್ರಿತೋ ವಾಯುರ್ನಿಷ್ಕ್ರಾಮತಿ, ತಸ್ಮಾತ್ ಸಶಲ್ಯೋಜೀವತ್ಯುದ್ಧೃತಶಲ್ಯೋವಿಪ್ರಿಯತೆ (ಪಾಕಾತ್ ಪತಿತ ಶಲ್ಯೋವಾಜೀವತಿ); ವೈಕಲ್ಯಕರಾಣಿಸೌಮ್ಯಾನಿ, ಸೋನೋಹಿ ಸ್ಥಿರತ್ವಾಚ್ಚೈತ್ಯಾಚ್ಚ ಪ್ರಾಣಾವಲಂಬನಂಕರೋತಿ; ರುಜಾಕ ರಾಣ್ಯಗ್ನಿ ವಾಯು ಗುಣಭೂಯಿಷ್ಠಾನಿ, ವಿಶೇಷತಶ್ಚ ತೌರು ಜಾಕರೌ; ಪಾಂಚಭೌತಿಕೀಂ ರುಜಾಮಾಹುರೇಕೇ ॥

(ಸುಶ್ರುತ॥ ಶಾರೀರ॥ ಅ ೬ ಸೂ ೧೭)

(೧) "ಸದ್ಯಃ ಪ್ರಾಣಹರ" ಮರ್ಮಗಳು ಅಗ್ನಿ ಗುಣಾಧಿಕ್ಯವುಳ್ಳವು ಗಳಿರುತ್ತವೆ. ಅಗ್ನಿ ಗುಣ ಕ್ಷೀಣವಾಗಲು ಕೂಡಲೇ ನಾಶಮಾಡುತ್ತವೆ ಅಗ್ನಿ ಯಲ್ಲಿ ತೀವ್ರಪ್ರಕೋಪಗುಣವಿರುವದರಿಂದತತ್ಕಾಲಪ್ರಾಣಹರಣವಾಗುತ್ತದೆ.

(೨) ಸೌಮ್ಯಅಗ್ನಿಯ ಗುಣಗಳಿರಡುಕೂಡಿದ ಸಂಧಿಗಳು "**ಕಾಲಾಂ**
ತರ ಪ್ರಾಣಹರ" ಮರ್ಮಗಳಾಗಿರುತ್ತವೆ ಅಗ್ನಿ ಗುಣ ಕ್ಷೀಣವಾದನಂತರ
ಸೋಮಗುಣ ಕ್ಷೀಣವಾಗಿ ಕಾಲಾಂತರದಲ್ಲಿ ನಾಶಕಾರಕವಾಗುತ್ತವೆ

(೩) ವಾಯುವಿನ ಆಧಿಕ್ಯವುಳ್ಳ ಮರ್ಮಗಳು"**ವಿಶಲ್ಯ ಪ್ರಾಣಹರ**"
ಗಳಾಗಿರುತ್ತವೆ ನಟ್ಟಿರುವ ಬಾಣಗಳನ್ನು ತೆಗೆದರೆ ಕೂಡಲೇ ನಾಶವಾಡು
ತ್ತವೆ ಬಾಣಗಳ ಮುಖದಿಂದ ತಡೆಯಲ್ಪಟ್ಟ ಪ್ರಾಣವು, ಬಾಣದಿಂದ
ಉಡ್ಡಿಯಾಗಿ ಒಳಗೆ ತಡೆಯಲ್ಪಟ್ಟಿರುವ ವರೆಗೆ ನಿಲ್ಲುತ್ತದೆ ಬಾಣವನ್ನು ತೆಗೆದ
ಕೂಡಲೇ ಪ್ರಾಣವು ಹಾರಿಹೋಗುತ್ತದೆ ಆದ್ದರಿಂದ ಬಾಣ ಅಲ್ಲಿಯೆ
ಇದ್ದರೆ ಪ್ರಾಣವು ಇರುತ್ತದೆ ಬಾಣವನ್ನು ಕಿತ್ತು ತೆಗದಾಕ್ಷಣವೇ ಪ್ರಾಣವು
ಹೋಗುತ್ತದೆ ಬಾಣ ನಟ್ಟ ಸ್ಥಳದಲ್ಲಿ ವ್ರಣಸಾಕವಾಗಿ ನಟ್ಟ ಬಾಣವು
ತನ್ನಿಂದ ತಾನೇ ಬಿದ್ದರೆ ಬದುಕಲೂಬಹುದು. ಬಾಣಗಳನ್ನು ಕಿತ್ತುತೆಗೆದ
ಕೂಡಲೇ ಪ್ರಾಣ ಹೋಗುವದರಿಂದ "**ವಿಶಲ್ಯಘ್ನಾನಿ, "ವಿಶಲ್ಯಪ್ರಾಣ**
ಹರಾಣಿ" ಮೊದಲಾದ ಹೆಸರಿನಿಂದಲೇ ವಿವರಿಸಿದ್ದಾರೆ.

(೪) ಸೌಮ್ಯಗುಣ ಅಧಿಕವುಳ್ಳ ಮರ್ಮವು "**ವೈಕಲ್ಯಕರವು**"(ಊನತೆ
ಯನ್ನುಂಟು ಮಾಡುವಂಥಾದ್ದು) ಆಗಿರುತ್ತದೆ. ಸೌಮ್ಯಗುಣವು ಸ್ಥಿರವೂ
ಶೈತ್ಯ ವಿಶಿಷ್ಟವೂ ಇರುವದರಿಂದ ಪ್ರಾಣವನ್ನು ಧಾರಣೇ ಮಾಡುತ್ತದೆ ಈ
ಮರ್ಮಗಳಲ್ಲಿ ಆಘಾತವುಂಟಾದರೆ ಊನತ್ವ ಬರುತ್ತದೆ. ಆದ್ದರಿಂದ ಇದಕ್ಕೆ
"**ವೈಕಲ್ಯಕರ**" ವೆಂದು ಹೇಳಿದ್ದಾರೆ

(೫) ಅಗ್ನಿ ವಾಯು ಗುಣ ಹೆಚ್ಚಿರುವ ಮರ್ಮಗಳು ನೋವನ್ನುಂಟು
ಮಾಡತಕ್ಕವುಗಳಾಗಿರುತ್ತವೆ. ವಿಶೇಷವಾಗಿ ರುಜಾಕರ ಮರ್ಮಗಳಲ್ಲಿ ಆಘಾ
ತವುಂಟಾದರೆ, ಅಧಿಕ ನೋವಾಗುತ್ತದೆ ಆದ್ದರಿಂದ "ರುಜಾಕರ"ವೆಂದು
ಹೇಳಿದ್ದಾರೆ.

"ಮತಾಂತರದಲ್ಲಿ"ನೋವಾಗುವದುಪಾಂಚಭೌತಿಕಸ್ಥಿತಿಯಾಗಿರುತ್ತದೆ
ಅರ್ಥಾತ್ ಪಂಚಭೂತಾತ್ಮಕ ದೇಹ ವಿಭಾಗಗಳಲ್ಲಿ ನೋವುಂಟಾಗುವದ
ರಿಂದ, ನೋವು ಪಂಚಭೂತಾತ್ಮಕ ಆಶ್ರಯ ಸ್ಥಾನಗಳಲ್ಲಾಗತಕ್ಕವುಗಳೆಂದು

ಕೆಲವರು ಅನ್ನುತ್ತಾರೆ. ನೋವನ್ನು ಸಹ ಆಶ್ರಯ ಹೆಸರಿನಿಂದ ಪಾಂಚಭೌತಿಕವೆಂದು ವಿವರಿಸಿದ್ದಾರೆ.

ಮರ್ಮ ವಿಷಯದಲ್ಲಿ ಮತಾಂತರ

ಕೇಚಿದಾಹುರ್ಮಾಂಸಾದೀನಾಂ ಪಂಚಾನಾಮಪಿ ಸಮುಸ್ಥಾನಾಂ ವಿವೃದ್ಧಾನಾಂ ಸಮುದಾಯಾತ್ ಸದ್ಯ ಪ್ರಾಣಹರಾಣಿ, ಏಕ ಹೀನಾನಾಮಲ್ಪಾನಾಂ ವಾ ಕಾಲಾಂತರಪ್ರಾಣಹರಾಣಿ, ದ್ವಿಹೀ ನಾನಾಂ ವಿಶಲ್ಯಪ್ರಾಣಹರಣಾನಿ, ತ್ರಿಹೀನಾನಾಂ ವೈಕಲ್ಯಕ ರಾಣಿ, ಏಕಸ್ಮಿನ್ನೇವ ರುಜಾಕರಾಣೀತಿ,॥ ನೈವಂ ಯತೋಽಸ್ಟಿ ಮರ್ಮಸ್ವಪ್ಯಭಿಹತೇಷು ಶೋಣಿತಾಗಮನಂ ಭವತಿ ॥
(ಸುಶ್ರುತ॥ ಶಾರೀರ॥ ಅ ೬ ಸೂ ೧೭)

ಸದ್ಯಃ ಪ್ರಾಣಹರಾದಿ ಮರ್ಮ ವಿಷಯದಲ್ಲಿ ಮತಾಂತರಗಳು:— ಮಾಂಸ ಸಿರಾ ಸ್ನಾಯು ಅಸ್ಥಿ ಸಂಧಿಗಳು ಒಂದೆಡೆಯಲ್ಲಿ ಕೂಡುವದರಿಂದ, ಅಧಿಕತೆಯುಳ್ಳ ಮರ್ಮವಾಗುತ್ತವೆ. ಮಾಂಸಾದಿಗಳು [೫] ಅತ್ಯಂತವಾಗಿ ಒಂದು ಬಿಡದೆ ಯಾವ ಮರ್ಮಗಳಲ್ಲಿ ಪರಸ್ಪರ ಸಂಧಿತವಾಗುತ್ತವೆಯೋ, ಅವುಗಳು ಸದ್ಯಃ ಪ್ರಾಣಹರಣಮಾಡುವ ಮರ್ಮಗಳೆಂದು ಕೆಲವರು ಹೇಳುತ್ತಾರೆ [೨] ಮಾಂಸಾದಿಗಳಲ್ಲಿ ಒಂದು ಕಡಿಮೆಯಾಗಿ ಅಥವಾ ಅಲ್ಪ ಸ್ಥಾನಾಶ್ರಯ ಮರ್ಮಗಳಾಗಿದ್ದರೆ, ಕಾಲಾಂತರ ಪ್ರಾಣಹರಣಮಾಡುತ್ತವೆ. [೩] ಮಾಂಸಾದಿಗಳಲ್ಲಿ ಎರಡು ಕಡಿಮೆಯಾಗಿ ಸಂಬಂಧಹೊಂದಿದ ಮರ್ಮಗಳು ವಿಶಲ್ಯ ಪ್ರಾಣಹರಣ (ಬಾಣವನ್ನು ಕಿತ್ತು ತೆಗೆದ ಕೂಡಲೇ ಪ್ರಾಣ ಹರಣವಾಗದು) ವಾಗಿರುತ್ತದೆಂದು ಹೇಳುತ್ತಾರೆ. [೪] ಮಾಂಸಾದಿಗಳಲ್ಲಿ ಮೂರು ಕಡಿಮೆಯಾಗಿ ಸಂಯುಕ್ತವಾದವುಗಳು ವೈಕಲ್ಯಕರ (ಊನತೆಯನುಂಟುಮಾಡತಕ್ಕವುಗಳು) ಆಗಿರುತ್ತವೆ. [೫] ಮಾಂಸಾದಿಗಳಲ್ಲಿಯ ಯಾವದಾದರೊಂದರಲ್ಲಿಯೇ ಮರ್ಮವಿದ್ದರೆ ಅದು ರುಜಾಕರಮರ್ಮವಾಗಿರುತ್ತದೆ ಹೀಗೆ ಮರ್ಮ ವಿಷಯದಲ್ಲಿ ಸದ್ಯಃ ಪ್ರಾಣಹರಾದಿಗಳನ್ನು ಕುರಿತು ಮತಂತರಾಭಿಪ್ರಾಯಗಳಿರುತ್ತವೆ. ಈ ಮತವು ಪ್ರಶಸ್ತವಾದದ್ದಲ್ಲವೆಂದು ನಿರಾಕರಿಸು

ತ್ತಾರೆ. ಕೇವಲ ಒಂದು ಎರಡು ಇತ್ಯಾದಿಯಾಗಿ ಮಾಂಸಾದಿಗಳು ವಿಭಾಗಿಸಲು ಬರುವದಿಲ್ಲ. ಯಾಕಂದರೆ ಅಸ್ಥಿ ಮರ್ಮಗಳಲ್ಲಿ ಹೊಡತಬಿದ್ದರೂ ರಕ್ತ ಬರುತ್ತದೆ. ಆದ್ದರಿಂದ ಪ್ರತ್ಯೇಕಿಸಲು ಬರುವದಿಲ್ಲವಾದ ಕಾರಣ ಪ್ರತ್ಯೇಕಿಸಿ ವಿಭಾಗಶಃ ನಿರ್ದೇಶವು ಪ್ರಶಸ್ತವಾಗಿರುವದಿಲ್ಲ ಇದರಂತೇ ನಿಷೇಧಮಾಡಿದ್ದರಿಂದ ಪೂರ್ವೋಕ್ತವಾದ ಮಾಂಸಾದಿಗಳ ಪ್ರತ್ಯೇಕಸಾನ್ನಿಧ್ಯಗಳಿಂದ ಮರ್ಮಗಳಾಗಿರುತ್ತವೆಂಬ ಪ್ರತಿಪಾದನೆಯು ನಿರಾಸವಾದಂತಾಗುತ್ತದೆ ಸುಶ್ರುತಾದಿ ಆಚಾರ್ಯರ ಮತದಂತೆ ಎಲ್ಲವುಗಳ ಸಾನ್ನಿಧ್ಯವು ಹೆಚ್ಚಿನ ಮರ್ಮವೆಂಬುವದು ಗ್ರಾಹ್ಯವಾಗಿರುತ್ತದೆ ಅನ್ಯ ಮತದಂತೆ ಪ್ರತ್ಯೇಕ ವಿಭಾಗ ಸಾಧ್ಯವಿಲ್ಲದ್ದರಿಂದ ಗ್ರಹಿಸಿರುವದಿಲ್ಲ ಯಾಕಂದರೆ ಪ್ರತ್ಯೇಕವೆಂದು ನಿಷ್ಕರ್ಷೆಯಾದಲ್ಲಿ ಅಸ್ಥಿ ಮರ್ಮಗಳಲ್ಲಿ ಆಘಾತವಾದರೆ ರಕ್ತ ಬರಬಾರದು ರಕ್ತ ಬರುವದರಿಂದ ಮಾಂಸಾದಿಗಳ ಸಾನ್ನಿಧ್ಯಅದೆಯೆಂದು ಸಿದ್ಧವಾಗುತ್ತದೆ ಹೀಗೆ ಮತ್ತೊಂದರ ಸಾನ್ನಿಧ್ಯವಿರುವದರಿಂದ ಪ್ರತ್ಯೇಕಿಸಲು ಬರುವಂತಿಲ್ಲವೆಂದು ನಿರ್ಣಯಿಸಿ, ಪ್ರತ್ಯೇಕತೆಯನ್ನು ಹೇಳುವ ಮತವನ್ನು ಗ್ರಹಿಸಿರುವದಿಲ್ಲ.

ಸಿರಾದಿಗಳ ವ್ಯಾಪಕತ್ವ

ಚತುರ್ವಿಧಾಯಾಸ್ತು ಸಿರಾಃ ಶರೀರೇ —
ಪ್ರಾಯೇಣತಾಮರ್ಮಸುಸನ್ನಿವಿಷ್ಟಾಃ ॥
ಸ್ನಾಯ್ವಸ್ಥಿ ಮಾಂಸಾನಿತಥೈವಸಂಧೀನ್ —
ಸಂತರ್ಪ್ಯ ದೇಹಂ ಪ್ರತಿಪಾಲಯಂತಿ ॥

(ಸುಶ್ರುತ॥ ಶಾರೀರ॥ ಅ. ೬ ಶ್ಲೋ ೧೮)

ಮರ್ಮಗಳಲ್ಲಿ ಸಿರಾ ಸ್ನಾಯು ಮೊದಲಾದವುಗಳು ಕೂಡಿಕೊಂಡಿರುತ್ತವೆನ್ನುವದನ್ನು ವಿಶದವಾಗಿ ವಿವರಿಸುತ್ತಾರೆ. ಶರೀರದಲ್ಲಿರುವ ನಾಲ್ಕು ವಿಧವಾದ [ವಾತ ಪಿತ್ತ ಕಫ ರಕ್ತ ವಾಹಿಗಳಾದ] ಸಿರಗಳು ಬಹುಶಃ ಮರ್ಮಗಳಲ್ಲಿಯುಕ್ತವಾದವುಗಳಾಗಿರುತ್ತವೆ. ಸಮಗ್ರ ದೇಹ ಸಂಚಾರಿ ಸಿರಗಳು ಸ್ನಾಯು ಅಸ್ಥಿ ಮಾಂಸ ಸಂಧಿಗಳನ್ನು ಪೋಷಿಸಿ ದೇಹವನ್ನು ರಕ್ಷಿಸುತ್ತವೆ. ಆದ್ದರಿಂ

ದಲೇ ಅಸ್ಥಿ ಸಂಧ್ಯಾದಿ ಮರ್ಮಗಳಲ್ಲಿ, ಹೊಡತ ಆಘಾತಾದಿಗಳಾದರೆ ರಕ್ತ ಬರುತ್ತದೆ.

ತತಃಕ್ಷತೇ ಮರ್ಮಣಿತಾಃ ಪ್ರವೃದ್ಧಃ —
ಸಮಂತತೋ ವಾಯುರಭಿಸ್ತೃಣೋತಿ ॥
ವಿವೃದ್ಧವಾನಸ್ತು ಸಮಾತರಿಶ್ವಾ —
ರುಜಃಸುತೀವ್ರಾಃ ಪ್ರತನೋತಿಕಾಯೇ ॥೧೯॥
ರುಜಾಭಿಭೂತಂ ತುತತಃ ಶರೀರಂ --
ಪ್ರಲೀಯತೇನಶ್ಯತಿಚಾಸ್ಯಸಂಜ್ಞಾ ॥
ಅತೋಹಿಶಲ್ಯಂ ಪರಿಹರ್ತುಮಿಚ್ಛನ್
ಮರ್ಮಾಣಿಯೈಸ್ತೈನ ಪರೀಕ್ಷ್ಯಕರ್ಷೇತ್ ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ. ೨೦)

ಸರ್ವದೇಹ ವ್ಯಾಪಿಯಾಗಿರುವದರಿಂದ ಸಿರಗಳು, ಮರ್ಮಗಳಲ್ಲಿ ಆಘಾತವುಂಟಾದರೆ ಪ್ರಕೋಪ ಹೊಂದಿದ ವಾಯುವಿನಿಂದ ಯುಕ್ತವಾಗುತ್ತವೆ. ನಂತರ ಸಿರಗಳ ಮುಖಾಂತರ ಪ್ರವೃದ್ಧ ವಾಯು ಸರ್ವಶರೀರವನ್ನೂ ವ್ಯಾಪಿಸುತ್ತದೆ. ಪ್ರಕೋಪ ಹೊಂದಿವೃದ್ಧಿಹೊಂದಿದ ವಾಯುವು, ಮರ್ಮಾಘಾತ ನೋವನ್ನು ತೀವ್ರವಾಗಿ ದೇಹದಲ್ಲಿ ಹರಡುವಂತೆ ಮಾಡುತ್ತದೆ ಅರ್ಥಾತ್ ಮರ್ಮದಲ್ಲಿ ಆಘಾತವಾದೊಡನೆ ವಾಯುವು ಪ್ರವೃದ್ಧವಾಗಿ ಸಿರಗಳ ಮುಖಾಂತರ ಸರ್ವದೇಹದಲ್ಲಿಯೂ ತೀವ್ರತರ ನೋವನ್ನುಂಟು ಮಾಡುತ್ತದೆ ವಸ್ತುತಃ ಸಂಧಿಮರ್ಮಾದಿಗಳಲ್ಲಿ ಸಮಗ್ರ ದೇಹ ವ್ಯಾಪಿಯಾಗಿರುವದರಿಂದ ಸಿರಗಳು ಇದ್ದೇಇರುತ್ತವೆ ಆಘಾತಾದಿಗಳಿಂದ ತೀವ್ರವೇದನೆಯನ್ನೂ ಹೊಂದುತ್ತವೆ. ಆದರೆ ಸಮಗ್ರ ದೇಹದಲ್ಲಿ ವೇದನೆಯು ವ್ಯಾಪಿಸಲು ವಾಯುವೇ ಕಾರಣವಾದ್ದರಿಂದ, ಸಿರಗಳಲ್ಲಿ ಯುಕ್ತವಾಗಿ ಸಂಚರಿಸುತ್ತ ದೆಂದು ಹೇಳಿದ್ದಾರೆ

ನೋವಿನಿಂದ ನಿರ್ವಿಣ್ಣವಾದ ದೇಹವು ನಾಶಹೊಂದುತ್ತದೆ. ಅಥವಾ ನೋವಾದ ಮರ್ಮಸ್ಥಳಗಳಲ್ಲಿಯ: ವೇದನೆಯಿಂದ ಸಂಜ್ಞಾ(ಚೇತನಾಧಾತು,

ಜೀವವು) ಬೇರ್ಪಟ್ಟಿದ್ದಾಗುತ್ತದೆ ಸಂಜ್ಞಾ (ಜೀತನೆ) ಭಿನ್ನವಾಗುವದೇ ಮರಣವು ಹೀಗೆ ಮರ್ಮಗಳಲ್ಲಿ ದೇಹದ ಉಳಿದ ಭಾಗಗಳಿಗಿಂತ ಹೆಚ್ಚು ಹಾನಿ ಮರಣಾದಿಗಳು ಸಂಭವಿಸುವದರಿಂದ, ಬಾಣಾದಿಗಳನ್ನು ಕಿತ್ತು ತೆಗೆಯುವವರು ಮರ್ಮಗಳನ್ನು ಪರೀಕ್ಷಿಸಿ ಕಾರ್ಯ ನಡೆಸಬೇಕು ಮರ್ಮಗಳಲ್ಲಿ ಆಘಾತವಾದರೆ ಮರಣಾದಿಗಳು ಸಂಭವಿಸುವದರಿಂದ, ಬಾಣಾದಿಗಳನ್ನು, ಮರ್ಮಸ್ಥಾನಕ್ಕೆ ಪೆಟ್ಟಾಗದಂತೆ ಅಥವಾ ಮರ್ಮವನ್ನು ಬಿಟ್ಟು ಎರಡನೇ ಕಡೆಗೆ ಹೊರಬರುವಂತೆ ಉಪಾಯಮಾಡಬೇಕೆಂದು ವಿವರಿಸಿದ್ದಾರೆ

ಸದ್ಯಃ ಪ್ರಾಣಹರಾದಿ ಮರ್ಮಗಳು

ತತ್ರ ಸದ್ಯಃಪ್ರಾಣಹರಾಣ್ಯೇಕೋನವಿಂಶತಿಃ, ಕಾಲಾಂತರ ಪ್ರಾಣಹರಾಣಿತ್ರಯಸ್ತ್ರಿಂಶತ್, ತ್ರೀಣಿ ವಿಶಲ್ಯಘ್ನಾನಿ, ಚತು ಶ್ಚತ್ವಾರಿಂಶದ್ವೈಕಲ್ಯಕರಾಣಿ, ಅಷ್ಟೌ ರುಜಾಕರಾಣೀತಿ ॥

(ಸುಶ್ರುತ॥ ಶಾರೀರ॥ ಅ. ೬ ಸೂ ೮)

(೧) ಸದ್ಯಃ ಪ್ರಾಣಹರಮರ್ಮಗಳು (೧೯) ಇರುತ್ತವೆ. (೨) ಕಾಲಾಂತರದಲ್ಲಿ ಪ್ರಾಣಹರಣ ಮಾಡತಕ್ಕವುಗಳು (೩೩) ಇರುತ್ತವೆ (೩) ವಿಶಲ್ಯಘ್ನ (ನಟ್ಟಿರುವ ಬಾಣಾದಿಗಳನ್ನು ಕಿತ್ತ ಕೂಡಲೇ ಪ್ರಾಣ ಹೋಗುವಂಥಾದ್ದು) ಈ ಮರ್ಮಗಳು (೩) ಇರುತ್ತವೆ (೪) ವೈಕಲ್ಯಕರ(ಊನತೆಯನ್ನುಂಟು ಮಾಡತಕ್ಕ) ಮರ್ಮಗಳು (೪೪) ಇರುತ್ತವೆ (೫) ರುಜಾಕರ (ನೋವನ್ನುಂಟು ಮಾಡುವಂಥ) ಮರ್ಮಗಳು (೮) ಇರುತ್ತವೆ. ಸದ್ಯಃ ಪ್ರಾಣಹರಾದಿ ಎಲ್ಲಾ ಮರ್ಮಗಳು ಕೂಡಿ ಒಟ್ಟು (೧೦೭) ಮರ್ಮಗಳಿರುತ್ತವೆ ಹಿಂದೆ ಶಾಖಾದಿ ವಿಭಾಗಗಳಲ್ಲಿ ಹೇಳಿದ ಮರ್ಮಗಳನ್ನೇ, ಸದ್ಯಃ ಪ್ರಾಣಹರಾದಿ ಕಾರ್ಯ ವಿಶೇಷಗಳಿಂದ ವಿವರಿಸಿದ್ದಾರೆ

ಸದ್ಯಃ ಪ್ರಾಣಹರ ಮರ್ಮ (೧೯)

ಶೃಂಗಾಟಕಾನ್ಯಧಿಪತಿಃ ಶಂಖೌ ಕಂಠಸಿರಾಗುದಂ ॥

ಹೃದಯಂ ಬಸ್ತಿನಾಭ್ಯೌಚಘ್ನಂತಿಸದ್ಯೋಹತಾನಿತು ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೯)

(೪) **ಶೃಂಗಾಟಕಗಳು,** (೧) **ಆಧಿಪತಿ,** (೨) **ಶಂಖನುರ್ಮಗಳು,** (೪) **ಕುತ್ತಿಗೆಯಲ್ಲಿಯ ಸಿರಾ ಮರ್ಮಗಳು "ಮಾತೃಕಾ" ಎಂಬ ಹೆಸರು** (೧) **ಗುದ,** (೧) **ಹೃದಯ.** (೧) **ಬಸ್ತಿ,** (೧) **ನಾಭಿ** ಇವೆಲ್ಲವುಗಳು ಕೂಡಿ ಒಟ್ಟು (೧೯) ಮರ್ಮಗಳಿರುತ್ತವೆ ಇವುಗಳಲ್ಲಿ ಹೊಡತ ಬಿದ್ದರೆ ಸದ್ಯದಲ್ಲಿಯೇ ಮರಣ ಸಂಭವಿಸುತ್ತದೆ ಸದ್ಯದಲ್ಲಿಯೆಂಗರೆ (೭) ದಿವಸಗಳ ಒಳಗೆಂದು ತಿಳಿಯಬೇಕು.

ಕಾಲಾಂತರ ಪ್ರಾಣಹರ ಮರ್ಮಗಳು (೩೩)

ವಕ್ಷೋಮರ್ಮಾಣಿ ಸೀಮಂತ ತಲಕ್ಷಿಪ್ರೇಂದಬಸ್ತಯಃ ॥
ಕಟೀಕತರುಣೇ ಸಂಧಿಪಾರ್ಶ್ವ ಜೌಬೃಹತೀಚಯಾ ॥೧೦॥
ನಿತಂಬಾವಿತಿ ಚೈತಾನಿಕಾಲಾಂತರಹರಾಣಿತು ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೧೧)

(೨) **ಸ್ತನಮೂಲ,** (೨) **ಸ್ತನರೋಹಿತ,** (೨) **ಅಪಲಾಪ,** (೨) (೨) ಅಪಸ್ತಂಭ, ಇವುಗಳು ವಕ್ಷೋಮರ್ಮಗಳು (೫) **ಸೀಮಂತ,** (೪) **ತಲಹೃದಯ,** (೪) **ಕ್ಷಿಪ್ರ,** (೪) ಇಂದ್ರಬಸ್ತಿ, (೧) **ಕಟಿಕ,** (೧) **ತರುಣ,** (೨) **ಪಾರ್ಶ್ವಸಂಧಿ,** (೨) **ಬೃಹತೀ,** (೨) **ನಿತಂಬ,** ಇವುಗಳೆಲ್ಲವುಗಳು ಕೂಡಿ ಒಟ್ಟು ಕಾಲಾಂತರ ಪ್ರಾಣಹರಮರ್ಮಗಳು (೩೩) ಇರುತ್ತವೆ.

ವಿಶಲ್ಯಘ್ನಮರ್ಮಗಳು (೩)

ಉತ್ಕ್ಷೇಪೌಸ್ಥಪನೀಚೈವವಿಶಲ್ಯಘ್ನಾನಿನಿರ್ದಿಶೇತ್ ॥

(ಸು॥ ಶಾ॥ ೧೧)

[೨] ಉತ್‌ಕ್ಷೇಪ, [೧] ಸ್ಥಪನೀ, ಇವುಗಳು [೩] ಮರ್ಮಗಳು ವಿಶಲ್ಯಘ್ನ ಮರ್ಮಗಳಾಗಿರುತ್ತವೆ. ಇಲ್ಲಿ ನಟ್ಟಿರುವ ಬಾಣವನ್ನು ಕಿತ್ತ ಕೂಡಲೇ ಮರಣವುಂಟಾಗುತ್ತದೆ.

ವೈಕಲ್ಯಕರ ಮರ್ಮಗಳು (೪೪)

ಲೋಹಿತಾಕ್ಷಾಣಿಜಾನೂರ್ವೀ ಕೂರ್ಚ ವಿಟಪ ಕೂರ್ಪರಾಃ॥
ಕುಕುಂದರೇ ಕಕ್ಷಧರೇ ವಿಧುರೇ ಸಕೃಕಾಟಿಕೇ ॥೧೨॥
ಅಂಸಾಂಸಫಲಕಾಪಾಂಗಾನೀಲೇಮನ್ಯೇಫಣೌತಥಾ ॥
ವೈಕಲ್ಯಕರಣಾನ್ಯಾಹುರಾವರ್ತೌದ್ವೌತಧೈವಚ ॥
[ಸುಶ್ರುತ॥ ಶಾರೀರ॥ ಅ ೬ ಶ್ಲೋ. ೧೩]

೪ ಲೋಹಿತಾಕ್ಷ, ೪ ಆಣೀ, ೨ ಜಾನು, ೪ ಉರ್ವೀ, ೪ ಕೂರ್ಚ, ೨ ವಿಟಪ, ೨ ಕೂರ್ಪರ, ೨ ಕುಕುಂದರ, ೨ ಕಕ್ಷಧರ, ೨ ವಿಧುರ, ೨ ಕೃಕಾಟಿಕಾ, ೨ ಅಂಸ, ೨ ಅಂಸಫಲಕ, ೨ ಅಪಾಂಗ, ೨ ನೀಲ, ೨ ಮನ್ಯ, ೨ ಫಣ, ೨ ಆವರ್ತ, ಇವುಗಳೆಲ್ಲವುಗಳು ಕೂಡಿ ಒಟ್ಟು (೪೪) ವೈಕಲ್ಯಕರಮರ್ಮಗಳಿರುತ್ತವೆ. ಇವುಗಳಲ್ಲಿ ಆಘಾತಗಳಾದರೆ ಊನತೆಯುಂಟಾಗುತ್ತದೆ.

ರುಜಾಕರಮರ್ಮಗಳು (೮)

ಗುಲ್ಫೌದ್ವೌಮಣಿಬಂಧೌದ್ವೌದ್ವೇದ್ವೇ ಕೂರ್ಚಶಿರಾಂಸಿಚ ॥
ರುಜಾಕರಾಣಿ ಜಾನಿಯಾದಷ್ಟಾವೇತಾನಿ ಬುದ್ಧಿಮಾನ್ ॥
(ಸುಶ್ರುತ॥ ಶಾರೀರ॥ ಅ ೬ ಶ್ಲೋ ೧೪)

(೨) ಗುಲ್ಫ, (೨) ಮಣಿಬಂಧ, (೪) ಕೂರ್ಚಶಿರ, ಇವುಗಳು (೮) ಮರ್ಮಗಳು ರುಜಾಕರಗಳಾಗಿರುತ್ತವೆ ಇವುಗಳಲ್ಲಿ ಆಘಾತವಾದರೆ ತೀವ್ರವಾದ ನೋವುಂಟಾಗುತ್ತದೆ. ಸದ್ಯಃ ಪ್ರಾಣಹರಾದಿ ಎಲ್ಲ ಮರ್ಮಗಳು ಕೂಡಿ ಒಟ್ಟು (೧೦೭) ಮರ್ಮಗಳಿರುತ್ತವೆ.

ಆಘಾತ ವಿಶೇಷಗಳು

ಕ್ಷಿಪ್ರಾಣೆವಿದ್ಧಮಾತ್ರಾಣಿಘ್ನಂತಿ ಕಾಲಾಂತರೇಣಚ ॥

(ಸುಶ್ರುತ॥ ಶಾರೀರ॥ ೧೫)

ಸದ್ಯಃ ಪ್ರಾಣಹರ ಮರ್ಮಗಳ ಸಮೀಪದಲ್ಲಿ ಸಾಮಾನ್ಯ ಹೊಡತ ಬಿದ್ದರೆ, ಕಾಲಾಂತರದಲ್ಲಿ ಪ್ರಾಣಹರಣವಾಗುತ್ತದೆ ಬಹಳ ತೀವ್ರ ಹೊಡತ ಬಿದ್ದರೆ ಮರ್ಮಸ್ಥಾನಗಳಲ್ಲಿಯೇ ಆದರೆ, ತತ್‌ಕ್ಷಣ ಪ್ರಾಣಹರಣವು ಸದ್ಯೋ ಹತ ಮರ್ಮಗಳಲ್ಲಿ ಸಂಭವಿಸುತ್ತದೆ ಮರ್ಮಗಳ ಸಮೀಪದಲ್ಲಿ ಸಾಮಾನ್ಯ ಹೊಡತ ಬಿದ್ದರೆ ಸದ್ಯಃ ಪ್ರಾಣಹರ ಮರ್ಮಗಳಲ್ಲಿಯೇ ಆದರೂ ಕೂಡ, ತೀವ್ರವಲ್ಲದ್ದರಿಂದ ಕಾಲಾಂತರದಲ್ಲಿ ಪ್ರಾಣಹರಣವಾಗುತ್ತದೆ ಇದರಂತೇ ಕಾಲಾಂತರ ಪ್ರಾಣಹರ ಮರ್ಮಗಳಲ್ಲಿ ಆ ಸ್ಥಾನಗಳಲ್ಲಿಯೇ ತೀವ್ರ ಹೊಡತ ಬಿದ್ದರೆ ಸದ್ಯದಲ್ಲಿಯೇ ಪ್ರಾಣಹರಣವಾಗುತ್ತದೆ.

ಸದ್ಯಃ ಪ್ರಾಣಹರಮಂತೇವಿದ್ಧಂ ಕಾಲಾಂತರೇಣಮಾರಯತಿ, ಕಾಲಾಂತರಪ್ರಾಣಹರಮಂತೇವಿದ್ಧಂ ವೈಕಲ್ಯಮಾಪಾದಯತಿ ವಿಶಲ್ಯಘ್ನಂ ವೈಕಲ್ಯಕರಂಚಭವತಿ, ವೈಕಲ್ಯಕರಂ ಕಾಲಾಂತರೇಣ ಕ್ಲೇಶಯತಿರುಜಾಂಚಕರೋತಿ, ರುಜಾಕರಮತೀವ್ರನೇದನಂ ಭವತಿ ॥ (ಸುಶ್ರುತ॥ ಶಾರೀರ॥ ೮ ೬ ಸೂ ೨೨)

(೧) **ಸದ್ಯಃ ಪ್ರಾಣಹರ ಮರ್ಮಗಳ** ಸಮೀಪದಲ್ಲಿ ಸಾಮಾನ್ಯ ಹೊಡತ ಬಿದ್ದರೆ ಕಾಲಾಂತರದಲ್ಲಿ ಪ್ರಾಣಹರಣವಾಗುತ್ತದೆ. ಮರ್ಮಗಳಲ್ಲಿಯೇ ಆಘಾತವಾಗುವದಕ್ಕೆ **"ಮಧ್ಯೇವಿದ್ಧ"** ವೆಂದು ಹೇಳುತ್ತಾರೆ. ಮರ್ಮಗಳ ಸಮೀಪ ಸ್ಥಾನದಲ್ಲಿ ಹೊಡತ ಬಿದ್ದರೆ **"ಅಂತೇವಿದ್ಧ"** ಎಂದೆನ್ನುತ್ತಾರೆ. ತೀವ್ರವಾದ ಆಘಾತ ಹೊಡತಾದಿಗಳು ಮತ್ತು ಸಾಮಾನ್ಯವಾದ ಆಘಾತಾದಿಗಳು ಇವುಗಳಿಂದ ಸಹ ಪರಿಣಾಮದಲ್ಲಿ ಹೆಚ್ಚು ಕಡಿಮೆ ಆಗುತ್ತದೆ ಆದರೆ ಸದ್ಯಃ ಪ್ರಾಣಹರಮರ್ಮಗಳಲ್ಲಿ ಮಾತ್ರ ಪ್ರಾಣಹರಣವಾಗಿಯೇ ತೀರುತ್ತದೆ. ತೀವ್ರಾಘಾತದಿಂದ ಸದ್ಯಃಪ್ರಾಣಹರಣೆಯೂ ಸಮೀಪದಲ್ಲಿ ಸಾಮಾನ್ಯ

ಹೊಡತದಿಂದ ಕಾಲಾಂತರ ಪ್ರಾಣಹರಣೆಯೂ ಸಂಭವಿಸುತ್ತದೆ. ಆದ್ದರಿಂದ ಸದ್ಯಃಪ್ರಾಣಹರಗಳೆಂದು ಹೇಳಿರುವ ಮರ್ಮಗಳಲ್ಲಿ ಆಘಾತಗಳಿಂದ ಪ್ರಾಣಹರಣ ನಿಶ್ಚಯವಾಗಿ ಆಗುತ್ತದೆಂದು ಸುಶ್ರುತಮತಾಭಿಪ್ರಾಯವಿರುತ್ತದೆ ಅರ್ಥಾತ್ ಪ್ರತ್ಯಕ್ಷ ಮರ್ಮಸ್ಥಾನಗಳ ಮಧ್ಯದಲ್ಲಿಯೇ ಅಲ್ಲದೆ ಸಮೀಪದಲ್ಲಿ, ಸಾಮಾನ್ಯತಃ ಅಘಾತವಾದರೆ ತಮ್ಮಕ್ಕಿಂತ ಕಡಿಮೇ ಹಾನಿಕರ ಮುಂದಿನ ಮರ್ಮದಂತೇ ಪರಿಣಾಮವಾಗುತ್ತದೆ. ಪ್ರತಿಯೊಂದು ಮರ್ಮಗಳಲ್ಲಿಯೂ ಇದರಂತೇ ತಿಳಿಯಬೇಕು. ಮತ್ತು ಮರ್ಮ ಸ್ಥಾನಗಳಲ್ಲಿಯೇ ಬಹು ತೀವ್ರ ಭಯಂಕರ ಆಘಾತವಾದರೆ ತನಗಿಂತ ಹೆಚ್ಚಿನದಾದ ಮರ್ಮಾಘಾತಗಳಂತೇ ಪರಿಣಾಮವಾಗುತ್ತದೆ. ಉದಾ:— ಕಾಲಾಂತರ ಪ್ರಾಣಹರ ಮರ್ಮಗಳಲ್ಲಿ ಬಹು ತೀವ್ರ ಆಘಾತವು ಮರ್ಮ ಮಧ್ಯದಲ್ಲಿಯೇ ಸಂಭವಿಸಿದರೆ ಸದ್ಯಃ ಪ್ರಾಣಹರಣೆಯಾಗುತ್ತದೆ

(೨) **ಕಾಲಾಂತರ ಪ್ರಾಣಹರಮರ್ಮಗಳ ಸಮೀಪದಲ್ಲಿ ಹೊಡತ** ಸಂಭವಿಸಿದರೆ ವೈಕಲ್ಯ (ಊನತ್ವ) ವನ್ನುಂಟು ಮಾಡುತ್ತದೆ. ಮರ್ಮ ಸ್ಥಾನದಲ್ಲಿಯೇ ತೀವ್ರ ಭಯಂಕರವಾದ ಹೊಡತ ಸಂಭವಿಸಿದರೆ, ಸದ್ಯಃ ಪ್ರಾಣಹರಣೆಯಾಗುತ್ತದೆ. ಇಲ್ಲಿ ಮುಂದಿನದೆಂದರೆ ವಿಶಲ್ಯಘ್ನ ಮರ್ಮವಾಗಿರುತ್ತದೆ. ಅದರ ಪರಿಣಾಮವನ್ನು ವೈಕಲ್ಯಕರವನ್ನೇಕೆ ಹೇಳಿದರೆಂಬ ಆಕ್ಷೇಪ ಬರುತ್ತದೆ. ಬಾಣಗಳನ್ನು ಕಿತ್ತೊಡನೆಯೇ ಪ್ರಾಣ ಹೋಗುವದರಿಂದ ಅದರಂತೇ "ವಿಶಲ್ಯಘ್ನ" ವೆಂದು ಸಂಜ್ಞೆಯನ್ನಿಟ್ಟಿದ್ದಾರೆ. ಆದ್ದರಿಂದ ವಿಶಲ್ಯಘ್ನ ಮರ್ಮಗಳ ಸ್ಥಿತಿ ಪ್ರತ್ಯೇಕವಿರುವದರಿಂದ, ಇಸ್ನಾವ ಮರ್ಮಗಳಲ್ಲಿಯೂ ಆ ರೀತಿಯು ಸಂಭವಿಸುವದಿಲ್ಲ. ಆದಕ್ಕಾಗಿಯೇ ಲಕ್ಷಣ ಮಾಡಿ ಭಿನ್ನವಾಗಿ ಹೇಳಿದ್ದಾರೆ. ಹೀಗಿರುವದರಿಂದ ಇನ್ನಾವ ಮುಂದಿನ ಮರ್ಮಗಳಿಗೂ ಹಿಂದೆ ಹೇಳಿದವುಗಳಿಗೂ ಇವುಗಳ ಸಂಬಂಧವಿರುವದಿಲ್ಲ. ಆದರೆ ವಿಶಲ್ಯಘ್ನ ಮರ್ಮಗಳ ಸಮೀಪದಲ್ಲಿ ಆಘಾತ ಸಂಭವಿಸಿದರೆ ವಿಶಲ್ಯಘ್ನವಾಗದೇ, ವೈಕಲ್ಯಕರವಾಗುತ್ತದೆ.

(೩) **ವಿಶಲ್ಯಘ್ನ ಮರ್ಮಗಳ** ಅಂತೇ ವಿದ್ಧ (ಸಮೀಪದಲ್ಲಿ ಆಘಾತವಾದರೆ) ಪ್ರಸಂಗದಲ್ಲಿ ಊನತ್ವವುಂಟಾಗುತ್ತದೆ. ಮಧ್ಯದಲ್ಲಿ ತೀವ್ರ ಬಾಣನಟ್ಟರಂತೂ ಬಾಣ ತೆಗೆದ ಕೂಡಲೇ ಮರಣವೆಂದು ಹೇಳಿಯೇ ಇರುತ್ತದೆ.

(೪) **ವೈಕಲ್ಯಕರ ಮರ್ಮಗಳ** ಸಮೀಪದಲ್ಲಿ ಆಘಾತವಾದರೆ ಕಾಲಾಂತರದಲ್ಲಿ ಕಷ್ಟಪಡಿಸುತ್ತದೆ, ಮತ್ತೂ ನೋವನ್ನುಂಟು ಮಾಡುತ್ತದೆ ವೈಕಲ್ಯಕರ ಮರ್ಮ ಮಧ್ಯದಲ್ಲಿ ತೀವ್ರವಾದ ದೊಡ್ಡ ಹೊಡತ ಬಿದ್ದರೆ ಕಾಲಾಂತರ ಪ್ರಾಣಹರಣ ಮಾಡುತ್ತದೆ.

(೫) **ರುಜಾಕರ ಮರ್ಮಗಳ** ಸಮೀಪದಲ್ಲಿ ಆಘಾತವಾದರೆ ಅಷ್ಟು ತೀವ್ರ ವೇದನೆಯಾಗುವದಿಲ್ಲ ಮರ್ಮ ಮಧ್ಯದಲ್ಲಿ ತೀವ್ರ ಭಯಂಕರ ಹೊಡತ ಬಿದ್ದರೆ ಊನತ್ವವನ್ನುಂಟು ಮಾಡುತ್ತದೆ

ಹೀಗೆ ಮರ್ಮಗಳ ಮಧ್ಯದಲ್ಲಿ (ಸಾಕ್ಷಾತ್ ಮರ್ಮಸ್ಥಾನದಲ್ಲಿಯೇ) ತೀವ್ರಆಘಾತವಾದರೆ, ಮತ್ತು ಮರ್ಮಗಳ ಸಮೀಪದಲ್ಲಿ ಆಘಾತ ಸಾಮಾನ್ಯ ರೀತಿಯಿಂದ ಆಗಿದ್ದರ ಪರಿಣಾಮಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ ಇದ ರಿಂದ ಮರ್ಮಸ್ಥಾನ ಮತ್ತು ಸಮೀಪಆಘಾತಗಳತೀವ್ರತೆ ಮತ್ತು ಸಾಮಾನ್ಯತೆ ಇವುಗಳನ್ನು ಲಕ್ಷಿಸಿ ಪರಿಣಾಮವನ್ನು ತಿಳಿಯುವಂತೇ ಹೇಳಿರುತ್ತಾರೆ ಸದ್ಯಃ ಪ್ರಾಣಹರಾದಿ ಮರ್ಮಗಳ ಅವಧಿಗಳನ್ನು ಹೇಳುತ್ತಾರೆ

ತತ್ರಸದ್ಯಃ ಪ್ರಾಣಹರಾಣಿ ಸಪ್ತರಾತ್ರಾಭ್ಯಂತರಾತ್ ಮಾರ ಯಂತಿ, ಕಾಲಾಂತರ ಪ್ರಾಣಹರಣಾನಿಪಕ್ವಾತ್ಮಾಸಾದ್ವಾ, ತೇಷ್ವಪಿತುಕ್ಷಿಪ್ರಾಣಿಕದಾಚಿದಾಶುಮಾರಯಂತಿ, ವಿಶಲ್ಯಪ್ರಾ ಣಹರಾಣಿ ವೈಕಲ್ಯಕರಾಣಿ ಚ ಕದಾಚಿದತ್ಯಭಿಹತಾನಿಮಾ ರಯಂತಿ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೩)

(೧) ಸದ್ಯಃ ಪ್ರಾಣಹರ ಮರ್ಮಗಳು (೭) ದಿನಗಳ ಒಳಗೆ ಕೊಲ್ಲುತ್ತವೆ. ಸದ್ಯಃ ಪ್ರಾಣಹರ ಮರ್ಮಗಳಲ್ಲೆಯೇ ಆಘಾತವಾದರೆ ಏಳು ದಿನ ಗಳ ಅವಧಿಯಲ್ಲಿ ಸಾಯುತ್ತಾನೆ. ಸದ್ಯಃ ಪ್ರಾಣಹರವೆಂದರೆ ಆಗಿಂದಾಗ ಸಾಯುವ ಮರ್ಮವೆಂದು ಅರ್ಥವಾಗುತ್ತದೆ. ಅದನ್ನು ಬಿಟ್ಟು ಏಳು ದಿನ ಗಳ ಅಂತರ ಅವಧಿಯನ್ನು ಹೇಳಿದರೆ ಸದ್ಯಃಪ್ರಾಣಹರಣ ಹೇಗಾಗುತ್ತದೆಂದು ಆಕ್ಷೇಪ ಬರುತ್ತದೆ. ತೀವ್ರ ಹೊಡತವಿದ್ದರೆ ಅವಧಿಗಿಂತ ಪೂರ್ವದಲ್ಲಿಯೂ

ಮರಣ ಸಂಭವಿಸಬಹುದು ಆದ್ದರಿಂದ ಸಪ್ತರಾತ್ರಿಯೊಳಗೆ ಎಂದು ಹೇಳಿದ್ದಾರೆ ಇಲ್ಲಿ "ಸದ್ಯಃ" ಎನ್ನುವದರ ಅವಧಿಯು ಸಪ್ತರಾತ್ರಿಯ ಒಳಗೆ ಎಂದು ಮಾಡಿದ್ದಾರೆ.

(೨) ಕಾಲಾಂತರ ಪ್ರಾಣಹರಣ ಮರ್ಮಗಳು ಪಕ್ಷ (೧೫) ದಿನಗಳು, ಅಥವಾ ಮಾಸ (೩೦ಗಳು), ಈ ಅವಧಿಗಳಲ್ಲಿ ನಾಶ ಮಾಡುತ್ತವೆ ತೀವ್ರಆಘಾತವಾದಲ್ಲಿ ಸದ್ಯಃ ಪ್ರಾಣಹರ ಮರ್ಮಗಳಅವಧಿಯಂತೆಯೇ ತಿಳಿಯುಕೊಳ್ಳಬೇಕು. ಕಾಲಾಂತರ ಪ್ರಾಣಹರಣ ಮರ್ಮಗಲ್ಲಿಯೂ ಕೂಡ ಅತ್ಯಾಘಾತವಾದರೆ ಸದ್ಯಃ ಪ್ರಾಣಹರವಾಗುತ್ತದೆ

(೩) ವಿಶಲ್ಯ ಪ್ರಾಣಹರ ಮರ್ಮಗಳಲ್ಲಿ ತೀವ್ರ ಆಘಾತವಾದರೆ ಕೊಲ್ಲುತ್ತದೆ ಅರ್ಥಾತ್ ಇಲ್ಲಿ ಹೀಗೆ ಅಭಿಪ್ರಾಯವಿರುತ್ತದೆ ಬಾಣವನ್ನು ಕೆತ್ತಿದ ಕೂಡಲೇ ಪ್ರಾಣ ಹೋಗುವ ಮರ್ಮವೆಂದು ಹೇಳಿ, ಪುನಃ ತೀವ್ರಾಘಾತದಿಂದ ಪ್ರಾಣಹಾರಕವೆಂದರೆ ಬಾಣಗಳನ್ನು ತೆಗೆಯದೇ ಇದ್ದರೂ ಪ್ರಾಣಹರಣವಾಗುತ್ತದೆಂದು ತಿಳಿಯಬೇಕು.

(೪) ವೈಕಲ್ಯಕರಮರ್ಮಗಳಲ್ಲಿ ಅತ್ಯಾಘಾತವಾದರೆ ಮರಣ ಸಂಭವಿಸುತ್ತದೆ. ಪ್ರಾಣಹರಣೆಯು ಕಾಲಾಂತರ ಮರ್ಮದಲ್ಲಿ ಹೇಳಿದ ಪ್ರಕಾರ ಪಕ್ಷ ಅಥವಾ ಮಾಸದ ಒಳಗೆ ಸಂಭವಿಸುತ್ತದೆಯೆಂದು ತಿಳಿಯಬೇಕು

(೫) ರುಜಾಕರ ಮರ್ಮಗಳಲ್ಲಿ ಅತ್ಯಾಘಾತವುಂಟಾದರೆ ಊನತ್ವವನ್ನುಂಟು ಮಾಡುತ್ತವೆ. ಇವುಗಳ ವಿವರಣೆಯಿಂದ ಸದ್ಯಃ ಪ್ರಾಣಹರ ಕಾಲಾಂತರ ಪ್ರಾಣಹರ ಮರ್ಮಾಘಾತಗಳಲ್ಲಿಯ ಅವಧಿಗಳು, ವಿಶಲ್ಯಘ್ನ ವೈಕಲ್ಯಕರ ರುಜಾಕರ ಮೊದಲಾದ ವರ್ಮಗಳಲ್ಲಿ ತೀವ್ರಾಘಾತದಿಂದಾಗುವ ಪರಿಣಾಮಗಳೂ, ಕ್ರಮಶಃ ಅಧಿಕ ಪ್ರಮಾಣವೆಂದು ಬೋಧವಾಗುತ್ತವೆ

ಮರ್ಮಗಳ ಪರಿಮಿತಿಯು

ಯಾವಯಾವ ಮರ್ಮ ಪ್ರದೇಶಗಳಲ್ಲಿ ಎಷ್ಟು ಅಂಗುಲ ಸ್ಥಾನವು, ಮರ್ಮ ಗ್ರಹೀತವಾಗಿರುತ್ತವೆನ್ನುವದನ್ನು ಹೇಳುತ್ತಾರೆ. ಆ ಪ್ರಮಾಣೋಕ್ತ

ಸ್ಥಾನಗಳು ಶಸ್ತ್ರಕ್ರಿಯಾದಿಗಳಲ್ಲಿ ವರ್ಜ್ಯವಾಗಿರುತ್ತವೆ. ಮತ್ತು ಮರ್ಮ ಸ್ಥಾನಗಳಲ್ಲಿ ಆ ಪರಿಮಾಣ ಅವಧಿಯಲ್ಲಿ ಆಘಾತವಾದರೆ ಪ್ರಾಣಹರಣಾದಿಗಳನ್ನುಂಟು ಮಾಡುತ್ತವೆಂದು ತಿಳಿಯಬೇಕು.

ಉರ್ವ್ಯಃ ಸಿರಾಂಸಿ ವಿಟಪೇಚಸಕಕ್ಷ ಪಾರ್ಶ್ವೇ ॥ ಏಕೈಕ ಮುಂಗುಲಮಿತಂ ಸ್ತನ ಪೂರ್ವಮೂಲಂ ॥ ವಿಧ್ಯಂಗುಲ ದ್ವಯಮಿತಂ ಮಣಿಬಂಧಗುಲ್ಫಂ ॥ ತ್ರೀಣ್ಯೇವಜಾನುಸಪರಂ ಸಹ ಕೂರ್ಪರಾಭ್ಯಾಂ ॥ (ಸುಶ್ರುತ॥ ಶಾರೀರ॥ ೮ ೬ ಶ್ಲೋ ೨೮)

ಅಂಗುಲ ಪರಿಮಾಣಮರ್ಮಗಳು

(೪) **ಉರ್ವಿ**ೀ ಮರ್ಮಗಳು, (೪) **ಕೂರ್ಚಶಿರ,** (೨) **ವಿಟಪ,** (೨) **ಕಕ್ಷಧರ,** ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಮರ್ಮ ಪ್ರಮಾಣವು **"ಒಂದು ಅಂಗುಲ"** ಸ್ಥಳವೆಂದು ತಿಳಿಯಬೇಕು. ಉರ್ವಿ ಮೊದಲುಗೊಂಡು (೧೨) ಮರ್ಮಗಳು ಒಂದಂಗುಲ ಪರಿಮಾಣ ಅವಧಿಯುಳ್ಳವುಗಳೆಂದು ತಿಳಿಯಬೇಕು

ಎರಡಂಗುಲಾವಧಿ ಮರ್ಮಗಳು

(೨) **ಸ್ತನಪೂರ್ವಮೂಲ** (ಇಲ್ಲಿ ಸ್ತನ ಮೂಲ ಸಂಜ್ಞೆಯುಳ್ಳ ಮರ್ಮಗಳು), (೨) **ಮಣಿಬಂಧ,** (೨) **ಗುಲ್ಫ,** ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಮರ್ಮಸ್ಥಲ ಪ್ರಮಾಣವು **"ಎರಡಂಗುಲ"** ವೆಂದು ತಿಳಿಯಬೇಕು. ಸ್ತನಪೂರ್ವಮೂಲ ಮರ್ಮ ಮೊದಲುಗೊಂಡು (೬) ಮರ್ಮಗಳು ಎರಡಂಗುಲಾವಧಿ ಮರ್ಮಗಳಾಗಿರುತ್ತವೆ. **"ಸ್ತನಮೂಲದಲ್ಲಿ"** ಮರ್ಮ ಸಂಖ್ಯೆಯನ್ನು (೨) ಗ್ರಹಿಸಿದ್ದಾರೆ.

ಮೂರಂಗುಲಾವಧಿ ಮರ್ಮಗಳು

(೨) **ಜಾನು,** (೨) **ಕೂರ್ಪರ** ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಮರ್ಮಸ್ಥಲ ಪ್ರಮಾಣವು **"ಮೂರಂಗುಲ"** ಪ್ರಮಾಣವಿರುತ್ತದೆ. ಜಾನು ಮೊದಲುಗೊಂಡು (೪)ಮರ್ಮಗಳು ಮೂರಂಗುಲಾವಧಿ ಮರ್ಮಗಳಾಗಿರುತ್ತವೆ.

ಹೃದ್ಬಸ್ತಿಕೂರ್ಚಗುದನಾಭಿ ವದಂತಿ ಮೂರ್ಧ್ನಿ ॥
ಚತ್ವಾರಿ ಪಂಚ ಚಗಲೇ ದಶಯಾನಿಚದ್ವೇ ॥
ತಾನಿಸ್ವಪಾಣಿತಲಕುಂಚಿತಸಂಮಿತಾನಿ ॥
ಶೇಷಾಣ್ಯನೇಹಿ ಪರಿವಿಸ್ತರತೋಽಗುಲಾರ್ಧಂ ॥
(ಸುಶ್ರುತ॥ ಶಾರೀರ॥ ೮ ೬ ಶ್ಲೋ ೨೯)

ನಾಲ್ಕಂಗುಲ ಪ್ರಮಾಣ ಮರ್ಮಗಳು

(೧) ಹೃದಯ, (೧) ಬಸ್ತಿ, (೧) ಗುದ, (೧) ನಾಭಿ, (೪) ಕೂರ್ಚ, (೪) ಶೃಂಗಾಟಕ, (೫) ಸೀಮಂತ, (೮) ಮಾತೃಕಾ, (೨) ಮನ್ಯೇ, (೨) ನೀಲೇ, ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಮರ್ಮಸ್ಥಳ ಪ್ರಮಾಣವು "ನಾಲ್ಕಂಗುಲ" ಪ್ರಮಾಣವಾಗಿರುತ್ತದೆ ಹೃದಯ ಮೊದಲುಗೊಂಡು (೨೯) ಮರ್ಮಗಳು ನಾಲ್ಕಂಗುಲಾವಧಿ ಮರ್ಮಗಳಾಗಿರುತ್ತವೆ. 'ಪಾಣಿತಲಕುಂಚಿತ" ವೆಂದರೆ ಮುಷ್ಟಿಯಾಗಿರುತ್ತದೆ ಅದರ(ಮುಷ್ಟಿಯ) ಪ್ರಮಾಣವು ನಾಲ್ಕಂಗುಲವಾಗಿರುತ್ತದೆ.

(೧) ಒಂದಂಗುಲಾವಧಿ ಮರ್ಮಗಳು (೧೨) ಇರುತ್ತವೆ. (೨) ಎರಡಂಗುಲ ಪ್ರಮಾಣ (೬) ಮರ್ಮಗಳು. (೩) ಮೂರಂಗುಲ ಸಂಮಿತವಾದ ೪) ಮರ್ಮಗಳು. (೪) ನಾಲ್ಕಂಗುಲದಷ್ಟು ಸ್ಥಾನ ಪರಿಮಾಣವುಳ್ಳ ಮರ್ಮಗಳು (೨೯) ಇರುತ್ತವೆ. ಒಟ್ಟು ಒಂದಂಗುಲ ಮೊದಲುಗೊಂಡು ಸ್ಥಾನ ಪರಿಮಿತಿಯನ್ನು ಹೇಳಿದ ಮರ್ಮಗಳು (೫೧) ಇರುತ್ತವೆ.

ಅರ್ಧಾಂಗುಲ ಪರಿಮಾಣ ಮರ್ಮಗಳು

ಇಲ್ಲಿ ಸ್ಥಾನ ಪ್ರಮಾಣಾವಧಿಯನ್ನು ಹೇಳಿದ ಮರ್ಮಗಳ ಹೊರತಾದ ಮರ್ಮಗಳು (೫೬) ಇರುತ್ತವೆ. ಅವುಗಳು "ಅರ್ಧಾಂಗುಲ" ಪ್ರಮಾಣ ಸ್ಥಾನಾವಧಿಯುಳ್ಳ ಮರ್ಮಗಳೆಂದು ತಿಳಿಯಬೇಕು ಹೀಗೆ ದೇಹದಲ್ಲಿರುವ (೧೦೭) ಮರ್ಮಗಳಿಗೂ ಸ್ಥಾನದ ಪರಿಮಾಣವನ್ನು ಅಂಗುಲಿ ಪರಿಮಿತಿಯಿಂದ ವಿವರಿಸಿದ್ದಾರೆ ಆಘಾತಾದಿಗಳು ಸಂಭವಿಸಿದಾಗ ಮರ್ಮದಲ್ಲಿಯೋ ಅಥವಾ

ಸಮೀಪದಲ್ಲಿಯೋ ಎನ್ನುವ ಜ್ಞಾನ ಇದರಿಂದುಂಟಾಗುತ್ತದೆ. ಮತ್ತು ಶಸ್ತ್ರ ಕರ್ಮಾದಿಗಳಲ್ಲಿಯೂ ಶಲ್ಯಾಪನಯನದಲ್ಲಿಯೂ ಮರ್ಮಸ್ಥಾನವನ್ನು ಬಿಟ್ಟು, ಕ್ರಿಯಾನೆರವೇರಿಸಲು ಅನುಕೂಲವಾಗುತ್ತದೆ

ತಂತ್ರಾಂತರ ಮತ ಅಂಗುಲಾದಿ ಪ್ರಮಾಣಗಳನ್ನು ಹೇಳಿ ಉಳಿದ (೫೬) ಮರ್ಮಗಳನ್ನು "ಚತುರಂಗುಲ" ಪ್ರಮಾಣ ಸ್ಥಾನವಳ್ಳವುಗಳೆಂದು ಹೇಳುತ್ತಾರೆ.

ಸುಶ್ರುತ ಮತ ಈ ಮರ್ಮಗಳ ಸ್ಥಾನಪ್ರಮಾಣವು "ಅರ್ಧಾಂಗುಲ" ಇರುತ್ತದೆ. ಶಲ್ಯತಂತ್ರವಿರುವದರಿಂದ ಸುಶ್ರುತಾಭಿಪ್ರಾಯದಂತೆ ಟೀಕಾಕಾರರು, ಉಳಿದ ಮರ್ಮಗಳನ್ನು ಅರ್ಧಾಂಗುಲ ಪರಿಮಾಣವನ್ನೇ ಅನುಸರಿಸಿ, ಸುಶ್ರುತ ಮತದಂತೇ ವ್ಯಾಖ್ಯಾನ ಮಾಡಿದ್ದಾರೆ ಮತ್ತು ಆವಾವ ಮರ್ಮ ನಿರ್ದೇಶಗಳಲ್ಲಿ ಅರ್ಧಾಂಗುಲ ಪ್ರಮಾಣವನ್ನೇ ಸೂಚಿಸಿದ್ದಾರೆ

ಮರ್ಮಸ್ಥಾನ ಪ್ರಮಾಣದ ಪ್ರಯೋಜನವು

ಏತತ್ ಪ್ರಮಾಣಮಭಿವೀಕ್ಷ್ಯವದಂತಿತಜ್ಞಾಃ ॥
ಶಸ್ತ್ರೇಣಕರ್ಮಕರಣಂ ಪರಿಹೃತ್ಯಕಾರ್ಯಂ ॥
ಸಾಶ್ವಾಭಿಘಾತಿತಮಪೀಹನಿಹಂತಿಮರ್ಮ ॥
ತಸ್ಮಾದ್ವಿಮರ್ಮಸದನಂ ಪರಿವರ್ಜನೀಯಮ್ ॥
(ಸುಶ್ರುತ॥ ಶಾರೀರ॥ ೮ ೬ ಶ್ಲೋ ೩೦)

ಮರ್ಮಗಳಲ್ಲಿ ಹೇಳಿದ ಆವಾವ ಅಂಗುಲಿಮಿತ ಸ್ಥಾನಗಳನ್ನು ಚನ್ನಾಗಿ ತಿಳಿದುಕೊಂಡು, ಶಸ್ತ್ರಕರ್ಮ ವಿಧಾನವನ್ನು ಮರ್ಮಸ್ಥಾನಗಳನ್ನು ಬಿಟ್ಟು ಯೋಜಿಸಬೇಕು ಮರ್ಮವು ಪಕ್ಕದಲ್ಲಿ (ಸಮೀಪ) ಆಘಾತಹೊಂದಿದರೂ ಸಹ ನಾಶಮಾಡುತ್ತದೆ. ಅರ್ಥಾತ್ ಮರ್ಮಸ್ಥಾನ ಪರಿಮಿತ ಭಾಗದಲ್ಲಿ (ಸಮೀಪದಲ್ಲಿ), ಶಸ್ತ್ರಾದಿ ಅಪಘಾತಗಳಿಂದ, ಮರ್ಮಹತ ಪರಿಣಾಮವಾಗುತ್ತದೆಂಬಭಿಪ್ರಾಯವು. ಆದ್ದರಿಂದ ಪೂರ್ವೋಕ್ತಮರ್ಮಗಳ ಮಾಪನ ಪರಿಮಾಣಗಳನ್ನು ಚನ್ನಾಗಿ ತಿಳಿದು, ಮರ್ಮಸ್ಥಾನ ಸೀಮಾನಿರ್ಧಾರ ಮಾಡಿ

ಕೊಳ್ಳಬೇಕು. ಹೀಗೆ ಚನ್ನಾಗಿ ಮರ್ಮವಿಷಯ ಪರಿಚಯಮಾಡಿಕೊಳ್ಳುವ ದರಿಂದ, ಮರ್ಮಗಳಿಗೆ ಆಘಾತವಾಗದಂತೇ ಶಸ್ತ್ರಕರ್ಮಾದಿಗಳನ್ನು ಸಿರಾ ವ್ಯಧನ ಶಲ್ಯಾಪನಯನಗಳನ್ನೂ ಮರ್ಮಹತ ನಿರ್ಣಯವನ್ನೂ ಮಾಡಲಿಕ್ಕೆ ಸುಲಭವಾಗುವದು. ಹೀಗೆ "ತಜ್ಞ ವೈದ್ಯರು" ಮರ್ಮ ವಿಷಯದಲ್ಲಿ ವಿಶೇಷ ಜ್ಞಾನದಿಂದ ಕರ್ತವ್ಯ ಮಾಡಬೇಕೆಂದು ಹೇಳುತ್ತಾರೆ.

ಛಿನ್ನೇಷು ಪಾಣಿಚರಣೇಷು ಸಿರಾನರಾಣಾಂ ॥
ಸಂಕೋಚಮೀಯುರಸೃಗಲ್ಪಮತೋನಿರೇತಿ ॥
ಪ್ರಾಪ್ಯಾಮಿತ ವ್ಯಸನಮುಗ್ರಮತೋಮನುಷ್ಯಾಃ ॥
ಸಂಛಿನ್ನಶಾಖತರುವನ್ನಿಧನಂನಯಾಂತಿ ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೩೧)

ಕೈಕಾಲುಗಳನ್ನು ಕಡಿದರೆ ಮನುಷ್ಯನ ಸಿರಗಳು ಸಂಕೋಚ ಹೊಂದಿ ರಕ್ತವು ಸ್ವಲ್ಪ ಹೋಗುತ್ತದೆ. ಇಷ್ಟು ಕರೋರ ಮತ್ತು ಅತಿಶಯವಾದ ನೋವನ್ನು ಹೊಂದಿಯೂ, ಟೊಂಗೆಗಳನ್ನು ಕತ್ತರಿಸಿದ ಮರದಂತೇ ನಾಶವನ್ನು ಹೊಂದುವದಿಲ್ಲ. ಅರ್ಥಾತ್ ದೇಹದ ಅಂಗವಾದ ಕೈಕಾಲುಗಳನ್ನು ಕತ್ತರಿಸಿದರೂ ಮನುಷ್ಯನು ಬದುಕುತ್ತಾನೆ. ಆದರೆ ಅವಯವಗಳ ಅಂಗ ಭೂತವಾದ ಮರ್ಮಗಳಲ್ಲಿ ಛೇದಭೇದ ಆಘಾತಾದಿಗಳು ಸಂಭವಿಸಿದರೆ, ಮನುಷ್ಯನು ಜೀವಿಸುವದಿಲ್ಲೆಂದು ವಿಶೇಷ ಮಹತ್ವ ತೋರಿಸಲು ಹೀಗೆ ವಿವರಿಸಿದ್ದಾರೆ.

ಕ್ಷಿಪ್ತೇಷುತತ್ರ ಸತಲೇಷುಹತೇಷುರಕ್ತಂ ॥
ಗಚ್ಛತ್ಯತೀವ ಪವನಶ್ಚರುಜಂಕರೋತಿ ॥
ಏವಂ ವಿನಾಶಮುಪಯಾಂತಿ ಹಿತತ್ರವಿದ್ಧಾಃ ॥
ವೃಕ್ಷಾ ಇವಾಯುಧನಿಪಾತನಕೃತ್ತಮೂಲಾಃ ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೩೨)

ಮನುಷ್ಯನು **ಕ್ಷಿಪ್ರ ಮತ್ತು ತಲೆಹೃದಯ** ಮರ್ಮಗಳಲ್ಲಿ ತೀವ್ರವಾದ ಛೇದನ ಭೇದನ ಆಘಾತಾದಿಗಳನ್ನು ಹೊಂದಿದರೆ, ಬಹಳ ರಕ್ತಸ್ರಾವವಾಗುತ್ತದೆ. ವಾಯುವು ಸಹ ಪ್ರಕೋಪ ಹೊಂದಿ ನೋವನ್ನುಂಟು ಮಾಡುತ್ತದೆ. ಹೀಗೆ ಮರ್ಮಗಳಲ್ಲಿಯ ಆಘಾತಗಳಿಂದ ಬಹಳ ರಕ್ತ ಹೋಗಿ ಮತ್ತು ವಾಯು ಪ್ರಕೋಪಹೊಂದಿ ಅತೀವ ವೇದನೆಯು ಉತ್ಪನ್ನವಾಗುವದರಿಂದಲೂ, ಆಯುಧಗಳ ನಿಪಾತನದಿಂದ ಬೇರನ್ನು ಕತ್ತರಿಸಿದ ವೃಕ್ಷಗಳಂತೆ ಮನುಷ್ಯರು ನಾಶವನ್ನು ಹೊಂದುತ್ತಾರೆ ಮರ್ಮಗಳಲ್ಲಿ ತೀವ್ರ ಹೊಡತ ಕಡತಗಳು (ವಿದ್ಧ) ವಾದರೆ ಮರಣವನ್ನು ಹೊಂದುತ್ತಾರಾದ್ದರಿಂದ, ಇಂಥ ಜರ್ಜರಿತ ಮರ್ಮಗಳನ್ನು ಕತ್ತರಿಸಿ ಬೇರ್ಪಡಿಸಿದರೆ ಬದುಕುತ್ತಾರೆ. ಅರ್ಥಾತ್ ಮರ್ಮಾಘಾತ ತೀವ್ರತೆಯಿಂದ ಸಾಯುವರನ್ನು ಬದುಕಿಸುವ ಉಪಾಯವೆಂದರೆ, ಮರ್ಮದ ಅವಧಿಯನಂತರ ಭಾಗದಲ್ಲಿ ಛೇದ ಮಾಡಿ ಮರ್ಮವನ್ನು ಬೇರ್ಪಡಿಸಬೇಕು ಹೀಗೆ ಮಾಡಿದರೆ ಮರ್ಮವೇ ಹೋಗಿ ಬಿಡುವದರಿಂದ, ಅದರಿಂದಾಗುವ ನಾಶವು ಸಂಭವಿಸುವದಿಲ್ಲೆಂದು **ಸುಶ್ರುತಮುನಿ**ವಾಗಿರುತ್ತದೆ.

ತಸ್ಮಾತ್ತಯೋರಭಿಹತಸ್ಯತು ಪಾಣಿಪಾದಂ ॥
ಛೇತ್ತವ್ಯಮಾಶುಮಣಿ ಬಂಧನಗುಲ್ಫದೇಶೇ ॥
(ಸುಶ್ರುತ॥ ಶಾರೀರ॥ ೮ ೬ ಶ್ಲೋ ೩೩)

ಈ ಪೂರ್ವೋಕ್ತವಾಗಿ ವಿವರಿಸಿದಂತೇ ಕ್ಷಿಪ್ರ ಮತ್ತು ತಲಹೃದಯಗಳಲ್ಲಿ ತೀವ್ರಾಘಾತವಾದರೆ, ಅಂಗೈ ಮತ್ತು ಅಂಗಾಲುಗಳನ್ನು ಮಣಿಬಂಧ ಗುಲ್ಫ ಪ್ರದೇಶಗಳಲ್ಲಿ ಕೂಡಲೇ ಛೇದಿಸಬೇಕು ಇದರಿಂದ ಮರ್ಮವೇ ಬೇರ್ಪಟ್ಟು ಅದರಿಂದ ಸಂಭವಿಸುವ ನಾಶವು (ಮರಣವು) ಆಗುವದಿಲ್ಲ ಮರ್ಮ ಸ್ಥಳವನ್ನು ಕತ್ತರಿಸಿ ತೆಗೆದು ಬಿಡುವದರಿಂದ ಬದುಕುತ್ತಾನೆಂಬ ಅಭಿಪ್ರಾಯವು.

ಮರ್ಮಗಳ ಅಳತೆಯು ಪ್ರಯೋಜನವನ್ನು ನಿರೂಪಿಸಿ, ಮರ್ಮಸ್ಥಾನ ವಿಷಯ ನಿರ್ದೇಶವನ್ನು ಕುರಿತು ಹೇಳುತ್ತಾರೆ

ಮರ್ಮಾಣಿಶಲ್ಯವಿಷಯಾರ್ಥಮುದಾಹರಂತಿ ॥
ಯಸ್ಮಾಚ್ಚ ಮರ್ಮಸು ಹತಾನ ಭವಂತಿ ಸದ್ಯಃ ॥೩೩॥
ಜೀವಂತಿತತ್ರಯದಿ ವೈದ್ಯ ಗುಣೇನಕೇಚಿತ್ ॥
ತೇಸ್ಯಾಪ್ನುವಂತಿ ವಿಕಲತ್ವಮಸಂಶಯಂಹಿ ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೩೪)

ಮರ್ಮವನ್ನು ಕುರಿತು ವಿವರಣೆಯಲ್ಲಿ ಹೀಗೆ ವಿವೇಚಿಸಿದ್ದಾರೆ:— ಮರ್ಮಗಳನ್ನು ತಿಳಿದುಕೊಳ್ಳುವದು ಶಲ್ಯ ವಿಷಯದಲ್ಲಿ (ಶಸ್ತ್ರ ಕ್ರಿಯಾದಿಗಳು, ಶಲ್ಯಾಹರಣ) ಅರ್ಥಕೆಲಸವಾದಂತೆಯೇ ಆಗಿರುತ್ತದೆ. ಇನ್ನೊಂದರ್ಥವೇನಂದರೆ, ಶಲ್ಯಾದಿಗಳಿಂದಲೇ ಬಹುಶಃ ಮರ್ಮಗಳಲ್ಲಿ ಆಘಾತವಾಗಿ ಮರಣ ಸಂಭವಿಸುವದರಿಂದ, ಶಲ್ಯಮೊದಲಾದವುಗಳನ್ನು (ಶಸ್ತ್ರಾದಿಗಳನ್ನು) ಉದ್ದೇಶಿಸಿಯೇ ಮರ್ಮವೆಂದು ಹೇಳಿದ್ದಾರೆ. ಆದ್ದರಿಂದ ಮರ್ಮಗಳು ಪ್ರಾಣಹಾರಕವಾಗಲಿಕ್ಕೆ ಶಲ್ಯಾದಿಗಳೇ ಅರ್ಥ ಕಾರಣವಾಗಿರುತ್ತವೆ "**ಶಲ್ಯಂ ನಾಮ ಸರ್ವ ಶರೀರಾಬಾಧಕರಂ ಶಲ್ಯಂ**"ಸಮಗ್ರ ದೇಹದಲ್ಲಿ ವೇದನೆಯನ್ನುಂಟು ಮಾಡುವದು ಶಲ್ಯವು ದೇಹದ ಮರ್ಮಾದಿಭಾಗಗಳಲ್ಲಿ ಉಂಟಾದ ವ್ರಣ ಮೊದಲಾದವುಗಳೂ ಸಂಪೂರ್ಣ ದೇಹದಲ್ಲಿ ವೇದನೆಯನ್ನುಂಟು ಮಾಡುವದರಿಂದ ಶಲ್ಯವಾಗಿರುತ್ತವೆ ದೇಹದಲ್ಲಿ ಸಂಭವಿಸಿರುವದುಶಾರೀರ ಶಲ್ಯವೆಂದೂ, ಬಾಣ ಶಸ್ತ್ರಾದಿಗಳಿಂದುತ್ಪನ್ನವಾದದ್ದು ಆಗಂತುಕ ಶಲ್ಯವೆಂದೂ ತಿಳಿಯಬೇಕು. ಮರ್ಮಗಳಲ್ಲಿ ಆಹತವಾದವನು ಆಘಾತ ಸೌಮ್ಯತೆಯಿಂದ ಸದ್ಯನಲ್ಲಿ ಮರಣ ಹೊಂದದಿರಲಿಕ್ಕೆ ಕಾರಣವಾಗಿರುತ್ತದೆ. ಶಸ್ತ್ರಾಘಾತಗಳು ಸವಿಶೇಷದಲ್ಲಿ ಅಥವಾ ಸಾಮಾನ್ಯವಾಗಿ ಹೊಡತ ಬಿದ್ದರೆ ಸದ್ಯದಲ್ಲಿ ಮರಣ ಹೊಂದುವದಿಲ್ಲವಾದ್ದರಿಂದ, ಮರ್ಮಗಳು ಶಲ್ಯವನ್ನೇ ಅನುಸರಿಸವದು. ಅದಕ್ಕಾಗಿಯೇ "**ಮರ್ಮಾಣಿ ಶಲ್ಯವಿಷಯಾರ್ಥಂ**" ಎಂದು ವಿವರಿಸಿದ್ದಾರೆ. ಇನ್ನು ಯೋಗ್ಯ ವೈದ್ಯನು ಚನ್ನಾಗಿ ಚಿಕಿತ್ಸೆಯನ್ನು ಮಾಡಿದರೆ ವೈದ್ಯನ ಚಿಕಿತ್ಸಾಗುಣದಿಂದ, ಕೆಲವರು ಗುಣ ಹೊಂದಿದರೂ ಊನತ್ವವುಳ್ಳವರಾಗುತ್ತಾರೆ. ಇದು ನಿಶ್ಚಯವಾದವಿಷಯವಾಗಿರುತ್ತದೆ.

ವಿವರಣೆ

ಮರ್ಮಗಳು ಪ್ರಾಣಹಾರಕಗಳಾಗಿದ್ದರೂ ಮರ್ಮಗಳಲ್ಲಿ ಹೊಡತ ಬಿದ್ದವನು ಸದ್ಯಃ ಮರಣವನ್ನು ಯಾಕೆ ಹೊಂದುವದಿಲ್ಲವೆಂದರೆ, ಶಲ್ಯಾದಿಗಳ ಆಘಾತ ವಿಷಯದಲ್ಲಿಯ ಅಲ್ಪತೆಯೇ (ಸೌಮ್ಯತೆಯೇ) ಕಾರಣವಾಗಿರುತ್ತದೆ. ಹೀಗೆ ಮರ್ಮಗಳು ಶಲ್ಯವನ್ನೇ ಅವಲಂಬಿಸಿ ಸದ್ಯೋ ಮರಣಾದಿಗಳನ್ನುಂಟು ಮಾಡುತ್ತವೆಯಾದ್ದರಿಂದ "**ಮರ್ಮಾಣಿ ಶಲ್ಯ ವಿಷಯಾರ್ದಂ**" ಮರ್ಮಗಳು ಅರ್ಧದಷ್ಟು ಶಲ್ಯಾದಿಗಳನ್ನವಲಂಬಿಸಿಯೇ ಇರುತ್ತವೆಂದು ಹೇಳಿದ್ದಾರೆ

ಸಂಭಿನ್ನ ಜರ್ಜರಿತಕೋಷ್ಠ ಶಿರಃ ಕಪಾಲಾ ॥
ಜೀವಂತಿ ಶಸ್ತ್ರನಿಹತೈಶ್ಚ ಶರೀರದೇಶೈಃ ॥
ಛಿನ್ನೈಶ್ಚ ಸಕ್ಥಿ ಭುಜಪಾದಕರೈರಶೇಷೈಃ ॥
ಯೇಷಾಂನ ಮರ್ಮಸುಕೃತಾವಿವಿಧಾ ಪ್ರಹಾರಾಃ ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೩೪)

ದೇಹದ ಮರ್ಮವಲ್ಲದ ಪ್ರದೇಶಗಳಲ್ಲಿ ವಿವಿಧ ಆಘಾತಗಳಾದರೂ ಮರಣ ಸಂಭವಿಸುವದಿಲ್ಲೆಂದು ಹೇಳುತ್ತಾರೆ. ಚನ್ನಾಗಿ ಹೊಡತ ಬಿದ್ದು ಕೋಷ್ಠವು ಮತ್ತು ತಲೆಯ ಕಪೋಲಗಳು ಜರ್ಜರಿತವಾದರೂ ಸಹ, ಸಕ್ಥಿ ಭುಜ ಪಾದ ಕೈ ನೊದಲಾದವುಗಳ ಸಂಪೂರ್ಣ ಛೇದವುಂಟಾದರೂ ಮರ್ಮರಹಿತ ಪ್ರದೇಶಗಳಲ್ಲಾದರೆ ಮನುಷ್ಯನು ನಾಶ ಹೊಂದುವದಿಲ್ಲ. ಮರ್ಮವಲ್ಲದ ದೇಹ ಪ್ರದೇಶಗಳಲ್ಲಿ ಬಹಳೇ ಆಘಾತ ಸಂಭವಿಸಿದರೂ ಬದುಕುತ್ತಾರೆಂಬ ಅಭಿಪ್ರಾಯವಾಗಿರುತ್ತದೆ.

ಸೋಮವಮಾರುತ ತೇಜಾಂಸಿರಜಃ ಸತ್ವ ತಮಾಂಸಿಚ ॥
ಮರ್ಮ ಸುಪ್ರಾಯೆಶಃ ಪುಂಸಾಂಭೂತಾತ್ಮಾ ಚಾವತಿಷ್ಠತೆ ॥
ಮರ್ಮ ಸ್ವಭಿಹತಾಸ್ತಸ್ಮಾತ್ನ ಜೀವಂತಿ ಶರೀರಿಣಃ ॥

ಸುಶ್ರುತ॥ ಶಾರೀರ॥ ಅ ೬ ಶ್ಲೋ ೩೫)

ಸೋಮ (ಶ್ಲೇಷ್ಮ), ಮಾರುತ (ವಾಯು), ತೇಜಃ (ಪಿತ್ತ), ಇವುಗಳು ಮತ್ತು ಸತ್ವ ರಜಸ್ತಮೋ ಗುಣಗಳು ವಿಶೇಷವಾಗಿ ಮರ್ಮಗಳಲ್ಲಿರುತ್ತವೆ. ಇವುಗಳಂತೆ ಜೀವನು (ಭೂತಾತ್ಮನು) ಸಹ ಮರ್ಮಸ್ಥಾನಗಳಲ್ಲಿ ವಿಶೇಷವಾಗಿರುತ್ತಾನೆ. ಹೀಗಿರುವದರಿಂದ ಮರ್ಮಗಳಲ್ಲಿ ಆಘಾತ ಹೊಡತ ಬಿದ್ದರೆ, ಪ್ರಾಣಿಗಳು ಜೀವಿಸುವದಿಲ್ಲವು

ಮರ್ಮಾಘಾತ ಲಕ್ಷಣ

ಇಂದ್ರಿಯಾರ್ಥೇಷ್ವಸಂಪ್ರಾಪ್ತಿರ್ಮನೋ ಬುದ್ಧಿವಿಪರ್ಯಯಃ ॥
ರುಜಶ್ಚ ವಿವಿಧಾಸ್ತೀವ್ರಾ ಭವಂತ್ಯಾಶುಹರೇಹತೇ ॥
ಹತೇಕಾಲಾಂತರಪ್ರಾಣೇತು ಧ್ರುವಂಧಾತುಕ್ಷಯೋ ನೃಣಾಂ ॥
ತತೋಧಾತುಕ್ಷಯಾಜ್ಜಂತುರ್ವೇದನಾಭಿಶ್ಚ ನಶ್ಯತಿ ॥
ಹತೇ ವೈಕಲ್ಯ ಜನನೇ ಕೇವಲಂ ವೈದ್ಯ ನೈಪುಣಾತ್ ॥೩೮॥

ಸದ್ಯಃಪ್ರಾಣಹರ ಮರ್ಮಗಳಲ್ಲಿ ಹೊಡತ ಬಿದ್ದರೆ, ಇಂದ್ರಿಯವಿಷಯ ಗ್ರಹಣ ಮಾಡಲು ಸಮರ್ಥವಾಗದಿರುವದು, ಮನಸ್ಸು, ಮತ್ತು ಬುದ್ಧಿಗಳು ವಿಪರೀತವಾಗೋಣ, ಮೊದಲಾದವುಗಳು ಸಂಭವಿಸುತ್ತವೆ. ವಿವಿಧವಾದ ತೀವ್ರವಾದ ವೇದನೆಗಳುಂಟಾಗುತ್ತವೆ. ಇವುಗಳು ಸದ್ಯಃ ಪ್ರಾಣಹರ ಮರ್ಮಗಳಲ್ಲಿ ಆಘಾತವಾಗಿದ್ದರ ಲಕ್ಷಣವಾಗಿರುತ್ತವೆ. ಕಾಲಾಂತರ ಪ್ರಾಣಹರ ಮರ್ಮಗಳಲ್ಲಿ ಆಘಾತವಾದರೆ ನಿಶ್ಚಯವಾಗಿ ಧಾತು ಕ್ಷಯವಾಗುತ್ತದೆ. ಧಾತು ಕ್ಷಯದಿಂದಲೂ ವೇದನೆಯಿಂದಲೂ ಆಘಾತ ಹೊಂದಿದವನು ನಾಶವಾಗುತ್ತಾನೆ. ವೈಕಲ್ಯವನ್ನುಂಟುಮಾಡುವ ಮರ್ಮಗಳಲ್ಲಿ ಆಘಾತವಾದರೆ ಕೇವಲ ವೈದ್ಯನ ಚಿಕಿತ್ಸಾ ಜಾಣತನದಿಂದ ಗುಣವಾಗುವದಾದರೂ ವಿಕಲತೆ (ಊನತ್ವ) ಉಂಟಾಗುತ್ತದೆ.

ಶರೀರಂ ಕ್ರಿಯಯಾಯುಕ್ತಂ ವಿಕಲತ್ವಮವಾಪ್ನುಯಾತ್ ॥
ವಿಶಲ್ಯಘ್ನೇತು ವಿಜ್ಞೇಯಂ ಪೂರ್ವೋಕ್ತಂಯಚ್ಚ ಕಾರಣಂ ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೩೯)

ರುಜಾಕರಾಣಿ ಮರ್ಮಾಣಿಕ್ಷತಾನಿ ವಿವಿಧಾರುಜಃ ॥
ಕುರ್ವಂತ್ಯಂತೇಚ ವೈಕಲ್ಯಂ ಕುವೈದ್ಯವಶಗೋಯದಿ ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೪೦)

ಯೋಗ್ಯ ಕ್ರಿಯೆಯನ್ನು ಜಾಣ ವೈದ್ಯನು ನಿರ್ವಹಿಸಿದರೆ ಮರಣವಾಗದೇ ವಿಕಲತೆಯುಂಟಾಗುತ್ತದೆಂದು ಹಿಂದೆ ವಿವರಿಸಿದ್ದಾಗಿದೆ ಪೂರ್ವೋಕ್ತ ಕಾರಣದಿಂದ ಅಂದರೆ "**ವಿಶಲ್ಯಘ್ನಾ ಪ್ರಾಣಹರ**" ಮರ್ಮದ ಸಮೀಪದಲ್ಲಿ ಆಘಾತವಾದರೆ ವಿಕಲತೆಯುಂಟಾಗುತ್ತದೆಂದು ಹೇಳಿದ್ದಾರೆ. ರುಜಾಕರ ಮರ್ಮಗಳಲ್ಲಿ ಆಘಾತವಾದರೆ ವಿವಿಧವಾದ ತೀವ್ರ ನೋವುಂಟಾಗುತ್ತದೆ ಚನ್ನಾಗಿ ಅರಿಯದ ಅರ್ಧಮರ್ಧ ಕುವೈದ್ಯನು ಚಿಕಿತ್ಸೆಯನ್ನು ನಡೆಸಿದರೆ ರುಜಾಕರ ಮರ್ಮದಲ್ಲಿಯ ಆಘಾತವು ವಿಕಲತೆಯನ್ನುಂಟು ಮಾಡುತ್ತದೆ ಇದರಂತೇ ಮುಂದಿನವು ಸಹ ಕುವೈದ್ಯನ ಚಿಕಿತ್ಸೆಯಿಂದ ಹೆಚ್ಚೆಚ್ಚು ಆಘಾತವುಳ್ಳವುಗಳಂತೇ ಪರಿಣಾಮವನ್ನುಂಟು ಮಾಡುತ್ತವೆ

ಛೇದಭೇದಾಭಿ ಘಾತೇಭ್ಯೋ ದಹನಾದ್ದಾರಣಾದಪಿ ॥
ಉಪಘಾತಂವಿಜಾನೀಯಾತ್ ಮರ್ಮಣಾಂತುಲ್ಯಲಕ್ಷಣಂ॥

(ಸುಶ್ರುತ॥ ಶಾರೀರ॥ ಅ ೬ ಶ್ಲೋ ೪೧)

ಮರ್ಮಗಳ ಸಮೀಪ ಭಾಗಗಳಲ್ಲಿಯೂ ಸಹ **ಛೇದ** (ಕಡಿಯೋಣ, ಕತ್ತರಿಸುವದು), **ಭೇದ** (ಒಡೆಯುವದು ಅಥವಾ ಚುಚ್ಚುವದು), **ದಹನ** (ಸುಡುನದು ಅಥವಾ ಕ್ಷಾರಾಗ್ನಿ ಕರ್ಮಗಳು), **ದಾರಣ** (ಸೀಳುವದು), ಮೊದಲಾದವುಗಳಾದರೆ ಮರ್ಮಹತ ಲಕ್ಷಣದಂತೆಯೇ ಆಘಾತಲಕ್ಷಣವನ್ನು ತಿಳಿಯಬೇಕು ಅದು ಹೇಗಂದರೆ ಸಮೀಪಹತ ನಿಯಮಗಳನ್ನು ಹಿಂದೆ ವಿವರಿಸಿರುತ್ತದೆ. ಅ ದ ರಂ ತೇ ತಿಳಿಯಬೇಕೆಂಬಭಿಪ್ರಾಯವಾಗಿರುತ್ತದೆ. ಉಪಘಾತವೆಂದರೆ ಮರ್ಮ ಸಮೀಪವಲ್ಲಾದ ಆಘಾತಗಳೆಂದು ತಿಳಿಯಬೇಕು.

ಮರ್ಮಾಭಿಘಾತಸ್ತು ನಕಶ್ಚಿದಸ್ತಿ ॥ ಯೋಽಲ್ಪಾತ್ಯಯೋವಾऽ
ಪಿನಿರತ್ಯಯೋವಾ ॥ ಪ್ರಾಯೇಣ ಮರ್ಮಸ್ವಭಿತಾಡಿತಾಸ್ತು ॥
ವೈಕಲ್ಯಮೃಚ್ಛತ್ಯಥವಾಮ್ರಿಯಂತೇ ॥
(ಸುಶ್ರುತ॥ ಶಾರೀರ॥ ಅ ೬ ಶ್ಲೋ ೪೨)

ಯಾವದೇ ಒಂದು ಮರ್ಮದಲ್ಲಿಯ ಆಘಾತವು "ಸ್ವಲ್ಪ" ವೇದನೆ ಯುಳ್ಳದ್ದು ಅಥವಾ "ವೇದನಾ ರಹಿತವಾಗಿರುವದು" ಇರುವದಿಲ್ಲವೆಂದು ವಿವರಿಸುತ್ತಾರೆ. ವಿಶೇಷವಾಗಿ ಮರ್ಮಗಳಲ್ಲಿ ಆಘಾತ ಹೊಂದಿದವರು ವಿಕ ಲತ್ವವನ್ನು (ಊನತೆ) ಹೊಂದುತ್ತಾರೆ ಇಲ್ಲವೇ ಮರಣವನ್ನು ಹೊಂದು ತ್ತಾರೆ. ವಿಕಲತೆ ಮರಣಗಳು ಸಂಭವಿಸುವದರಿಂದ, ಮರ್ಮಾಘಾತವು ಅಲ್ಪ ದುಃಖ ಅಥವಾ ದುಃಖ ರಹಿತವಾದದ್ದು ಇರುವದಿಲ್ಲೆಂದು ಅಭಿಪ್ರಾಯ ವಾಗಿರುತ್ತದೆ. ಇದರಿಂದ ಮರ್ಮಾಘಾತವು ಮಹತ್ವವುಳ್ಳ ಚಿಕಿತ್ಸಾ ವಿಷಯವಾದ್ದರಿಂದ, ಚಿಕಿತ್ಸಕರಾದ ವೈದ್ಯರು ಬಹಳೇ ಯತ್ನಪರವಾಗಿರ ಬೇಕೆಂದು ಹೀಗೆ ಹೇಳಿದ್ದಾರೆ

ಮರ್ಮಾಣ್ಯಧಿಷ್ಠಾಯಹಿಯೇ ವಿಕಾರಾಃ ॥
ಮೂರ್ಚ್ಛಂತಿಕಾಯೇ ವಿವಿಧಾ ನರಾಣಾಂ ॥
ಪ್ರಾಯೇಣತೇಕೃಚ್ಛ್ರತಮಾ ಭವಂತಿ ॥
ನರಸ್ಯಯತ್ನೈರಪಿ ಸಾಧ್ಯಮಾನಾಃ ॥
(ಸುಶ್ರುತ॥ ಶಾರೀರ॥ ಅ ೬ ಶ್ಲೋ ೪೩)

ಮರ್ಮಗಳಲ್ಲಿಯ ಶಸ್ತ್ರಾದಿ ಆಘಾತಗಳು ಮತ್ತು ವ್ರಣವಿದ್ರಧಿ ಮೊದ ಲಾದವುಗಳು, ಮರ್ಮಗಳನ್ನು ಆಶ್ರಯಿಸಿಕೊಂಡು ದೇಹದಲ್ಲಿ ವ್ಯಾಪಿಸಿ ತೀವ್ರ ಪರಿಣಾಮಗಳನ್ನುಂಟು ಮಾಡುತ್ತವೆ. ಆಘಾತಗಳನ್ನು ಎರಡು ವಿಧ ವಾಗಿ ವಿವರಣೆಯನ್ನು ಮಾಡಿದ್ದಾರೆ. (೧) ಶಸ್ತ್ರಾದಿಗಳಿಂದಾದ ಮರ್ಮಾ ಘಾತವು ಆಗಂತುವಾಗಿದ್ದು ಅಭಿಘಾತ ನಿಮಿತ್ತದಿಂದ ಆಗಿರುತ್ತದೆ. ಇದಕ್ಕೆ ಬಹಿರಾಘಾತಜನ್ಯವೆಂದೂ ಹೇಳುತ್ತಾರೆ. ಸಾಧನವಾದ ಶಸ್ತ್ರ ಬಾಣಾದಿ ಗಳು "ಬಾಹ್ಯಶಲ್ಯ" ವಾಗಿರುತ್ತವೆ (೨) ಶರೀರ ಮರ್ಮ ಪ್ರದೇಶಗಳ

ಲ್ಲುತ್ಪನ್ನವಾದ ವ್ರಣಾದಿಗಳು ಊನತ್ವ ಮರಣಗಳನ್ನುಂಟು ಮಾಡುತ್ತವೆ ಯಾದ್ದರಿಂದ **"ಶರೀರ ಶಲ್ಯ"** ವೆಂದು ಹೇಳಿದ್ದಾರೆ

ಈ ಎರಡೂ ವಿಧವಾದ ಶಲ್ಯಗಳು ಸಾಕ್ಷಾತ್ ಮರ್ಮಗಳಲ್ಲಿಯೇ ಅಥವಾ ಮರ್ಮ ಸಮೀಪ ಪ್ರದೇಶಗಳಲ್ಲಿ, ಸಂಭವಿಸಿ ದೇಹವನ್ನು ತೀವ್ರ ದುಃಖಕ್ಕೀಡು ಮಾಡುತ್ತವೆ ಇಲ್ಲಿ ಮರಣವನ್ನುಂಟು ಮಾಡುವದರಿಂದಲೇ ಮರ್ಮವೆಂದು ಹೇಳಿರುವದರಿಂದ, ಮರಣವನ್ನು ಅಥವಾ ತತ್ಸದೃಶವಾದ ಇಂದ್ರಿಯವಧಾದಿಗಳನ್ನು (ವಿಕಲತ್ವ) ಉಂಟು ಮಾಡ ತ್ತವೆಂದು ತಿಳಿಯ ಬೇಕು. ಮರ್ಮವನ್ನು ಆಶ್ರಯಿಸಿರುವ ಆಘಾತಾದಿಗಳಿಂದುಂಟಾದ ವಿಕಾರ ಗಳು ಸಮಗ್ರ ದೇಹದಲ್ಲಿಯೂ ಪಸರಿಸಿ ಅತಿ ತೀವ್ರ ವೇದನೆಯನ್ನುಂಟು ಮಾಡುತ್ತವೆ. ಇದರಿಂದ ಮರ್ಮಾಘಾತವನ್ನು ಹೊಂದಿದವನು ವಿನಾಶ ವನ್ನು ಹೊಂದುತ್ತಾನೆ. ಬಹಳ ಪ್ರಯತ್ನಗಳಿಂದ ಚಿಕಿತ್ಸೆಯನ್ನುಮಾಡಿದರೂ ಸಹ ಮರ್ಮಾಘಾತಗಳು ಅತ್ಯಂತಕಷ್ಟ ಸಾಧ್ಯವಾದವುಗಳಾಗಿರುತ್ತವೆ. ಹೀಗಿರು ವದರಿಂದ ಮರ್ಮಗಳವಿಷಯದಲ್ಲಿ ಚನ್ನಾಗಿ ತಜ್ಞರಾದ ವೈದ್ಯರೇ ಪ್ರಯತ್ನ ಪೂರ್ವಕವಾಗಿ ಚಿಕಿತ್ಸೆಯನ್ನು ಮಾಡಬೇಕೆಂಬ ಅಭಿಪ್ರಾಯವಾಗಿರುತ್ತದೆ

ಮರ್ಮವಿಷಯದಲ್ಲಿ ವಿಶೇಷ

ಮಾಂಸ, ಸಿರಾ, ಸ್ನಾಯು, ಅಸ್ಥಿ, ಸಂಧಿ, ಮೊದಲಾದ ಮರ್ಮ ಗಳು ಪ್ರತಿಯೊಂದು ಮರ್ಮಗಳು ಎಷ್ಟೆಂಬುವದನ್ನು ವಿಭಾಗಶಃ ಸಂಖ್ಯಾ ನಿರ್ದೇಶಾತ್ಮಕವಾಗಿ ವಿವರಣೆಯು ಅಗತ್ಯವಿರುವದರಿಂದ, ಮರ್ಮಗಳ ಹೆಸ ರನ್ನು ಹೇಳಿದ ನಂತರ ಅವು ಎಷ್ಟಿರುತ್ತವೆಂದು ತಿಳಿಸಲು ಸಂಖ್ಯಾ ನಿರ್ದೇಶ ಮಾಡಲಾಗುತ್ತದೆ. ಇದರಿಂದ ಅಭ್ಯಾಸಿಗಳಿಗೆ ಸುಗಮವಾಗಿ ಬೋಧ ವಾಗುತ್ತದೆ.

ಮಾಂಸ ಮರ್ಮಗಳು (೧೧)

ಚತ್ವಾರಿ ತಲಹೃದಯಾನಿ (೪), ಚತ್ವಾರಿ ಇಂದ್ರ ಬಸ್ತೀನಿ (೪), ಗುದಮೇಕಂ (೧), ದ್ವೇಸ್ತನರೋಹಿತೇ (೨), ಒಟ್ಟು ಮಾಂಸ ಮರ್ಮಗಳು (೧೧) ಇರುತ್ತವೆ

ಸಿರಾಮರ್ಮಗಳು (೪೧)

ಚತಸ್ರೋಧಮನ್ಯಃ (ದ್ವೇನೀಲೇದ್ವೇಮನ್ಯೇ) (೪), ಆಷ್ಠೌ ಮೂತ್ರವಾಹಿನ್ಯಃ(೮), ಚತ್ವಾರಿ ಶೃಂಗಾಟಕಾನಿ (೪), ದ್ವೇಅಪಾಂಗೇ(೨), ಏಕಾಸ್ಥಪನೀ (೧), ದ್ವೇಫಣೇ (೨), ದ್ವೇಸ್ತನಮೂಲೇ (೨), ದ್ವೌ ಅಪಸ್ತಂಭೌ (೨), ದ್ವೌ ಅಪಲಾಪೌ (೨), ಏಕಂ ಹೃದಯಂ (೧), ಏತಾನಾಭಿಃ (೧), ದ್ವೌಪಾರ್ಶ್ವಸಂಧೀ (೨), ದ್ವೇಬೃಹತ್ಯೌ (೨), ಚತ್ವಾರಿ ಲೋಹಿತಾಕ್ಷಾಣಿ (೪), ಚತಸ್ರ ಉರ್ವ್ಯಃ (೪), ಒಟ್ಟು ಸಿರಾ ಮರ್ಮಗಳು (೪೧) ಇರುತ್ತವೆ

ಸ್ನಾಯು ಮರ್ಮಗಳು (೨೭)

ಚತಸ್ರಅಣ್ಯಃ [೪], ದ್ವೌವಿಟಪೌ [೨], ದ್ವೌಕಕ್ಷಧರೌ [೨], ಚತ್ವಾರಃ ಕೂರ್ಚಾಃ [೪], ಚತ್ವಾರಿ ಕೂರ್ಚ ಶಿರಾಂಸಿ[೪], ಏಕೋ ಬಸ್ತಿಃ [೧], ಚತ್ವಾರಿಕ್ಷ್ಮಾಣಿ [೪], ದ್ವೌಆಂಸೌ [೨], ದ್ವೇವಿಧುರೇ [೨], ದ್ವೌಉತ್ಕ್ಷೇಪೌ [೨], ಒಟ್ಟು ಸ್ನಾಯು ಮರ್ಮಗಳು [೨೭] ಇರುತ್ತವೆ

ಅಸ್ಥಿ ಮರ್ಮಗಳು (೮)

ದ್ವೇಕಟೀಕತರುಣೇ (೨), ದ್ವೌನಿತಂಬೌ (೨), ದ್ವೇಅಂಸ ಫಲಕೇ (೨), ದ್ವೌಶಂಖೌ(೨), ಒಟ್ಟು ಅಸ್ಥಿಮರ್ಮಗಳು (೮) ಇರುತ್ತವೆ

ಸಂಧಿ ಮರ್ಮಗಳು (೨೦)

ದ್ವೇಜಾನುನೀ (೨), ದ್ವೌಕೂರ್ಪರೌ (೨), ಪಂಚಸೀಮಂತಾಃ (೫), ಏಕೋ ಅಧಿಪತಿಃ (೧), ದ್ವೌಗುಲ್ಫೌ (೨), ದ್ವೌಮಣಿಬಂಧೌ (೨), ದ್ವೇಕುಕುಂದರೇ (೨), ದ್ವೌಆವರ್ತೌ (೨), ದ್ವೇಕೃಕಾಟಿಕೇ (೨), ಒಟ್ಟು ಸಂಧಿ ಮರ್ಮಗಳು (೨೦) ಇರುತ್ತವೆ. ಮಾಂಸಾದಿ ಎಲ್ಲ ಮರ್ಮಗಳು ಕೂಡಿ ದೇಹದಲ್ಲಿ ಒಟ್ಟು ಮರ್ಮಗಳು (೧೦೭) ಇರುತ್ತವೆ

ಇವೇ ಮರ್ಮಗಳನ್ನು ದೇಹದಲ್ಲಿಯಸಕ್ಥಿ ಮೊದಲಾವವುಗಳಿಂದಲೂ, ಮಾಂಸ ಮರ್ಮಾದಿ ವಿಭಾಗಗಳಿಂದಲೂ, ಸದ್ಯಃ ಪ್ರಾಣಹರ ವಿಭಾಗಗಳಿಂದಲೂ, ಪ್ರತ್ಯೇಕವಾಗಿ ವಿವರಿಸಿದ್ದಾರೆ. ಒಂದು ವಿಭಾಗದಲ್ಲಿ ಚನ್ನಾಗಿ ಅಭ್ಯಾಸ ಮಾಡಿದರೆ ಉಳಿದವುಗಳು ಸುಲಭವಾಗಿ ತಿಳಿಯುತ್ತವೆ.

ಮರ್ಮಗಳವಿಸ್ತಾರವರ್ಣನೆಯು

(೧) ಸಕ್ಥಿ ಮರ್ಮಗಳು

ತತ್ರಪಾದಸ್ಯಾಂಗುಷ್ಠಾಂಗುಲ್ಯೋರ್ಮಧ್ಯೇಕ್ಷಿಪ್ರಂನಾಮಮರ್ಮ ತತ್ರವಿದ್ಧಸ್ಯಾಕ್ಷೇಪಕೇಣ ಮರಣಂ ॥

(ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಕ್ಷಿಪ್ರಮರ್ಮಗಳು

ಸ್ಥಾನ.— ಪಾದಾಂಗುಷ್ಠ ಅದರ ಹತ್ತಿರುನಬೆರಳು ಇವುಗಳ ಮಧ್ಯದಲ್ಲಿ "**ಕ್ಷಿಪ್ರ**" ವೆಂಬ ಹೆಸರಿನ ಮರ್ಮವಿರುತ್ತದೆ. ಇದು ಸ್ನಾಯು ಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ ಪ್ರಾಣಹರವಾಗಿರುತ್ತದೆ. ಇಲ್ಲಿ ಆಘಾತವುಂಟಾದರೆ ಆಕ್ಷೇಪಕವೆಂಬ ತೀವ್ರವಾದ ವಾಯು ಪ್ರಕೋಪ ವ್ಯಾಧಿಯಿಂದ ಮನುಷ್ಯನು ಮರಣ ಹೊಂದುತ್ತಾನೆ

ತಲಹೃದಯ

ಮಧ್ಯಮಾಂಗುಲೀ ಮನುಪೂರ್ವೇಣ ಮಧ್ಯೇಪಾದತಲಸ್ಯತಲ ಹೃದಯಮುನಾಮ, ತತ್ರ ರುಜಾಭಿರ್ಮರಣಂ ॥

(ಸುಶ್ರುತ॥ ಶಾರೀರ॥ ಅ ೬ ಸೂತ್ರ ೨೪)

ಸ್ಥಾನ:— ಪಾದದ ನಡುವಿನ ಬೆರಳ ಕೆಳಗೆ ಸರಳ ರೇಖೆಯಿಂದ ಆಂಗಾಲಿನ ಮಧ್ಯದಲ್ಲಿ "**ತಲಹೃದಯ**" ವೆಂಬ ಮರ್ಮವಿರುತ್ತದೆ ಇದು

ಮಾಂಸಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ ಪ್ರಾಣಹರವಾಗಿರುತ್ತದೆ. ಇಲ್ಲಿ ಆಘಾತವುಂಟಾದರೆ ತೀವ್ರ ವೇದನೆಗಳಿಂದ ಮರಣ ಸಂಭವಿಸುತ್ತದೆ

ಕೂರ್ಚಮರ್ಮ

ಕ್ಷಿಪ್ರಸ್ಯೋಪರಿಷ್ಟಾದುಭಯತಃ ಕೂರ್ಚೋಽನಾಮ, ತತ್ರ ಪಾದಸ್ಯ ಭ್ರಮಣವೇಪನೇ ಭವತಃ ॥
(ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ.- ಕ್ಷಿಪ್ರಮರ್ಮದ ಮೇಲ್ಗಡೆ ಎಡಬಲಗಳಲ್ಲಿ ಅಥವಾ ಮೇಲಿನ ಮತ್ತು ಕೆಳ ಅಂಗಾಲಿನ ಪ್ರದೇಶಗಳಲ್ಲಿ, "ಕೂರ್ಚ" ವೆಂಬ ಹೆಸರಿನ ಮರ್ಮ ವಿರುತ್ತದೆ ಇದು ಸ್ನಾಯು ಮರ್ಮ, ನಾಲ್ಕಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತದೆ. ಇಲ್ಲಿ ಆಘಾತ ಸಂಭವದಿಂದ ವಾದ ಸೊಟ್ಟಾಗ್ವು ಅಥವಾ ನಡುಗುವಿಕೆಯುಂಟಾಗುವದು.

ಕೂರ್ಚಶಿರಃ

ಗುಲ್ಫಸಂಧೇರಧಃ ಉಭಯತಃ ಕೂರ್ಚಶಿರಃ, ತತ್ರರುಜಾ ಶೋಫೌ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ,— ಪಾದ ಸಂಧಿ ಗಂಟುಗಳ ಕೆಳಗೆ ಎಡಬಲ ಭಾಗಗಳಲ್ಲಿ, "ಕೂರ್ಚಶಿರಃ" ಎಂಬ ಹೆಸರಿನ ಮರ್ಮವಿರುತ್ತದೆ. ಇದು ಸ್ನಾಯುಮರ್ಮ, ಒಂದಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತದೆ. ಇಲ್ಲಿ ಆಘಾತವಾಗುವದರಿಂದ ತೀವ್ರ ವೇದನೆ ಮತ್ತು ಬಾಯುವಿಕೆಗಳುಂಟಾಗುತ್ತವೆ.

ಗುಲ್ಫ ಮರ್ಮ

ಪಾದಜಂಘಯೋಃ ಸಂಧಾನೇ ಗುಲ್ಫಃ, ತತ್ರರುಜಃ ಸ್ತಬ್ಧ ಪಾದತಾ ಖಂಜತಾವಾ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ:— ಪಾದ ಮತ್ತು ಮೊಣಕಾಲುಗಳು ಕೂಡಿದ ಸಂಧಿ ಭಾಗಗಳಲ್ಲಿ "**ಗುಲ್ಫ**" ಎಂಬ ಮರ್ಮವಿರುತ್ತದೆ. ಇದು ಸಂಧಿ ಮರ್ಮ, ಎರಡಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತದೆ. ಇಲ್ಲಿ ಹೊಡತ ಬೀಳುವದರಿಂದ ತೀವ್ರ ವೇದನೆ ಪಾದಸ್ತಬ್ಧವಾಗೋಣ ಅಥವಾ ಸೊಟ್ಟ ಕುಂಟ ಊನತೆಯುಳ್ಳದ್ದಾಗುತ್ತದೆ.

ಇಂದ್ರ ಬಸ್ತಿ

ಪಾಷ್ಣ್ಣಿಂ ಪ್ರತಿಜಂಘಾಮಧ್ಯೇ ಇಂದ್ರಬಸ್ತಿಃ, ತತ್ರಶೋಣಿತ ಕ್ಷಯೇಣ ಮರಣಂ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ:— ಹಿಮ್ಮಡದಿಂದ (ಪಾಷ್ಣ್ಣಿ) ಮೇಲೆ ಮೊಣಕಾಲ ಮಧ್ಯದಲ್ಲಿ, ಪಾಷ್ಣ್ಣಿಯಿಂದ ನಂತರ (೧೩) ಅಂಗುಲದಲ್ಲಿ ಇರುತ್ತದೆಂದು ಕೆಲವರ ಮತವಿರುತ್ತದೆ. "ಇಂದ್ರಬಸ್ತಿ" ಯೆಂಬ ಹೆಸರಿನ ಮರ್ಮವಾಗಿರುತ್ತದೆ ಇದು ಮಾಂಸಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ ಪ್ರಾಣಹರ ಮರ್ಮವಾಗಿರುತ್ತದೆ. ಇಲ್ಲಿ ಕಡತ ಆಘಾತಾದಿಗಳು ಸಂಭವಿಸಿದರೆ ರಕ್ತ ಕ್ಷಯದಿಂದ ಮರಣ ಸಂಭವಿಸುತ್ತದೆ.

ಜಾನುಮರ್ಮ

ಜಂಘೋರ್ವೋಃ ಸಂಧಾನೇಜಾನು, ತತ್ರಖುಂಜತಾ ॥
(ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ:— ಮೊಣಕಾಲು ತೊಡೆಗಳು ಕೂಡಿದ ಸಂಧಿ ಪ್ರದೇಶಗಳಲ್ಲಿ ಮೊಣಕಾಲ ಮೇಲಿನ ಸಂಧಿಯಲ್ಲಿ, "**ಜಾನು**" ಎಂಬ ಹೆಸರಿನ ಮರ್ಮವಿರುತ್ತದೆ. ಇದು ಸಂಧಿ ಮರ್ಮ, ಮೂರಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತದೆ ಇಲ್ಲಿ ಆಘಾತ ಕಡತ ಸಂಭವಿಸಿದರೆ ಕಾಲುಕುಂಟಾಗುತ್ತದೆ.

ಆಣೀ ಮರ್ಮ

ಜಾನುನ ಊರ್ಧ್ವಮುಭಯತಸ್ತ್ರ್ಯಂಗುಲಮಾಣೀ, ತತ್ರ

ಶೋಫಾಭಿವೃದ್ಧಿಃ ಸ್ತಬ್ಧಸಕ್ಥಿತಾಚ ॥
(ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ:— ಜಾನು ಮರ್ಮದ ಮೇಲ್ಗಡೇ ಮೂರಂಗುಲ ಪ್ರದೇಶಗಳ ಎಡಬಲ ಪಾರ್ಶ್ವಗಳಲ್ಲಿ, **ಮತಾಂತರ** ಜಾನುವಿನ ಮೇಲ್ಗಡೇ ಮೂರಂಗುಲ ಪ್ರದೇಶ ಎದುರಿನ ಮತ್ತು ಹಿಂದಿನ ಭಾಗಗಳಲ್ಲಿ,"**ಆಣೀ**" ಎಂಬ ಹೆಸರಿನ ಮರ್ಮ ವಿರುತ್ತದೆ ಇದು ಸ್ನಾಯು ಮರ್ಮ, ಅರ್ಧಾಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತದೆ. ಈ ಪ್ರದೇಶಗಳಲ್ಲಿ ಆಘಾತವಾದರೆ ಬಾಯುವಿನ ಕೆಲಸ ಅಭಿವೃದ್ಧಿಯೂ ಸಕ್ಥಿಸ್ತಬ್ಧತೆಯೂ ಉಂಟಾಗುತ್ತದೆ

ಉರ್ವೀಮರ್ಮ

ಊರುಮಧ್ಯೇ ಉರ್ವೀ, ತತ್ರಶೋಣಿತಕ್ಷಯಾತ್ ಸಕ್ಥಿ ಶೋಷಃ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ:— ತೊಡೆಯ ಮಧ್ಯ ಪ್ರದೇಶದಲ್ಲಿ, "**ಉರ್ವೀ**" ಎಂಬ ಹೆಸರಿನ ಮರ್ಮವಿರುತ್ತದೆ ಇದು ಸಿರಾ ಮರ್ಮ, ಒಂದಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತದೆ.

ಲೋಹಿತಾಕ್ಷ

ಉರ್ವ್ಯಾ ಊರ್ಧ್ವಮಧೋ ವಂಕ್ಷಣಸಂಧೇಃ ಊರುಮೂಲೇ ಲೋಹಿತಾಕ್ಷಂ, ತತ್ರಲೋಹಿತಕ್ಷಯೇಣಮರಣಂ ಪಕ್ಷಾಘಾತೋವಾ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ:— ಉರ್ವೀ ಮರ್ಮದ ಮೇಲ್ಗಡೇ ತೊಡೆ ಅಸ್ಥಿ ಸಂಧಿಗಳ ಕೆಳಭಾಗಗಳಲ್ಲಿ, "**ಲೋಹಿತಾಕ್ಷ**" ವೆಂಬ ಮರ್ಮವಿರುತ್ತದೆ ಇದು ಸಿರಾ ಮರ್ಮ, ಅರ್ಧಾಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತದೆ. ಇಲ್ಲಿ ಆಘಾತವುಂಟಾದರೆ ರಕ್ತ ಕ್ಷಯದಿಂದ ಮರಣ ಸಂಭವಿಸುತ್ತದೆ ಪಕ್ಷಾಘಾತ (ಒಂದು ಪಾರ್ಶ್ವ ನಿಶ್ಚೇಷ್ಟಿತವಾಗೋಣ), ಸಂಭವಿಸುತ್ತದೆ.

ವಿಟಪಮರ್ಮ

ವಂಕ್ಷಣವೃಷಣಯೋರಂತರೇ ವಿಟಪಂ, ತತ್ರಷಾಂಢ್ಯಮುಲ್ಪ ಶುಕ್ರತಾವಾಭವತಿ, ಏವಮೇತಾನ್ಯೇಕಾದಶ ಸಕ್ಥಿ ಮರ್ಮಾಣಿ ವ್ಯಾಖ್ಯಾತಾನಿ ॥ ಏತೇನೇತರ ಸಕ್ಥಿ ಬಾಹೂಚ ವ್ಯಾಖ್ಯಾತೌ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಸ್ಥಾನ.— ತೊಡೆಗಳ ಅಸ್ಥಿ ಸಂಧಿಗಳಿಂದ ಎರಡೂ ಕಡೆ ಅಂಡದವರೆಗಿನ ಪ್ರದೇಶಗಳಲ್ಲಿ, **"ವಿಟಪ"** ವೆಂಬ ಮರ್ಮವಿರುತ್ತದೆ. ಇದು ಸ್ಥಾಯು ಮರ್ಮ, ಒಂದಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತದೆ ಇಲ್ಲಿ ಆಘಾತದಿಂದ ಷಂಡತ್ವ ಅಥವಾ ಸ್ವಲ್ಪಶುಕ್ರೋತ್ಪಾದನೆಯಾಗುತ್ತದೆ ಹೀಗೆ (೧೧) ಸಕ್ಥಿ ಮರ್ಮಗಳನ್ನು ವಿವರಿಸಿದ್ದಾರೆ. ಇವರಂತೇ ಮತ್ತೊಂದು ಕಾಲು ಬಾಹುಗಳಲ್ಲಿಯು ಮರ್ಮಗಳನ್ನು ತಿಳಿಯಬೇಕು. ಒಟ್ಟು ಕೃಕಾಲ ಶಾಖಾಪ್ರದೇಶಗಳಲ್ಲಿ ಕೂಡಿ (೪೪) ಮರ್ಮಗಳಿರುತ್ತವೆ.

ಸಕ್ಥಿ ಬಾಹು ಮರ್ಮಗಳಲ್ಲಿ ವಿಶೇಷ

ವಿಶೇಷತಸ್ತ್ವಯಾನಿ ಸಕ್ಥ್ನಿ ಗುಲ್ಫ ಜಾನು ವಿಟಪಾನಿ, ತಾನಿ ಬಾಹೌ ಮಣಿಬಂಧಕೂರ್ಪರ ಕಕ್ಷ್ಯಧರಾಣಿ; ಯಥಾವಂಕ್ಷಣ ವೃಷಣಯೋರಂತರೇ ವಿಟಪಮೇವಂ ವಕ್ಷಃ ಕಕ್ಷ್ಯಯೋರ್ಮ ಧ್ಯೇಕಕ್ಷ್ಯಧರಂ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೪)

ವಿಶೇಷವಾಗಿ ಕಾಲಿನಲ್ಲಿಸಕ್ಥಿ, ಜಾನು,ವಿಟಪ,ಮರ್ಮಗಳಿರುತ್ತವೆ ಅವೇ ಬಾಹುವಿನಲ್ಲಿ **ಮಣಿಬಂಧ, ಕೂರ್ಪರ, ಕಕ್ಷ್ಯಧರ,** ಮರ್ಮಗಳಾಗಿರುತ್ತವೆ ಕಾಲಿನಲ್ಲಿ ವಂಕ್ಷಣ ವೃಷಣಗಳ ಮಧ್ಯದಲ್ಲಿ **"ವಿಟಪ"** ವಿರುತ್ತದೆಯೋ, ಅದರಂತೇ ಬಾಹುವಿನಲ್ಲಿ ಎದೆಬಗಲುಗಳಮಧ್ಯದಲ್ಲಿ**"ಕಕ್ಷ್ಯಧರ"** ಮರ್ಮವಿರುತ್ತದೆ.

ಬಾಹು ಮರ್ಮಾಘಾತಪರಿಣಾಮವು

ತಸ್ಮಿನ್‌ವಿದ್ಧೇತ ಏವೋಪದ್ರವಾಃ;ವಿಶೇಷತಸ್ತು ಮಣಿಬಂಧೇ

ಕುಂಠತಾ, ಕೂರ್ಪರಾಮ್ಯೇ ಕುಣಿಃ, ಕಕ್ಷ್ಯಧರೇ ಪಕ್ಷಾಘಾತಃ॥ ಏವಮೇತಾನಿ ಚತುಶ್ಚತ್ವಾರಿಂಶತ್ ಚ್ಛಾಖಾಸು ಮರ್ಮಾಣಿ ವ್ಯಾಖ್ಯಾತಾನಿ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೪)

ಬಾಹುಮರ್ಮಗಳಲ್ಲಿ ಆಘಾತ ಸಂಭವಿಸಿದರೆ ಸಕ್ಥಿಮರ್ಮದಂತೆಯೇ ಪರಿಣಾಮವಾಗುತ್ತವೆ. ಆದರೆ ಬಾಹು ಮರ್ಮಗಳಲ್ಲಿ ಸಂಭವಿಸುವ ಆಘಾತ ಪರಿಣಾಮ ವಿಶೇಷಗಳನ್ನು ಹೇಳುತ್ತಾರೆ. ಮಣಿ ಬಂಧದಲ್ಲಿ ಆಘಾತದಿಂದ ಕೃಶಸ್ನಾಯುವಾಗುತ್ತದೆ "ಕುಂಠತಾನಾಮು ಕರಸ್ಯಾಕರ್ಮಣ್ಯತ್ವಂ" ಕೂರ್ಪರದಲ್ಲಿ ಆಘಾತದಿಂದ ಬಾಹುಸಂಧ್ಯಪ್ರದೇಶವು ಕೃಶವಾಗುತ್ತದೆ. "ಕುಣಿರ್ನಾಮು ಸಂಕುಚಿತ ಬಾಹುಮಧ್ಯಃ" ಕಕ್ಷ್ಯಧರದಲ್ಲಿ ಆಘಾತದಿಂದ ಪಕ್ಷಾಘಾತ (ಪಾರ್ಶ್ವವಧೇ, ಅರ್ಧಾಂಗವಾಯು) ಸಂಭವಿಸುತ್ತದೆ ಹೀಗೆ ಬಾಹುಮರ್ಮಗಳಲ್ಲಿಯ ಆಘಾತ ಪರಿಣಾಮ ವಿಶೇಷಗಳನ್ನು ವಿವರಣೇ ಮಾಡಿರುತ್ತಾರೆ. ಶಾಖಾಗಳಲ್ಲಿ (೪೪) ಮರ್ಮಗಳನ್ನು ಅವಾವ ಸ್ಥಾನ, ಸ್ವರೂಪ, ಸ್ಥಿತಿ, ಪ್ರಮಾಣ, ಆಘಾತಾದಿ ಪರಿಣಾಮ ಸಹಿತವಾಗಿ ವಿಶದವಾಗಿ ನಿರ್ದೇಶಿಸಿದ್ದಾರೆ.

(೨) ಉದರ ಮತ್ತು ವಕ್ಷೋಮರ್ಮಗಳು

ಗುದಮರ್ಮ

ತತ್ರವಾತವರ್ಚೋನಿರಸನಂ ಸ್ಥೂಲಾಂತ್ರ ಪ್ರತಿಬದ್ಧಂ ಗುದಂ ನಾಮಮರ್ಮ, ತತ್ರಸದ್ಯೋಮರಣಂ ॥

ಸುಶ್ರುತ॥ ಶಾರೀರ॥ ಅ ೬ ಸೂ ೨೫)

ಸ್ಥಾನ:—ವಾಯು ಮತ್ತು ಮಲವನ್ನು ಹೊರಗೆಹಾಕುವ ಸ್ಥೂಲಾಂತ್ರದಲ್ಲಿ ಅಂಟಿಕೊಂಡಿರುವ "ಗುದ" ವೆಂಬ ಮರ್ಮವಿರುತ್ತದೆ. ಇದು ಮಾಂಸ ಮರ್ಮ, ನಾಲ್ಕಂಗುಲ ಪ್ರಮಾಣ, ಸದ್ಯಃ ಪ್ರಾಣಹರವಾಗಿರುತ್ತದೆ.

ಬಸ್ತಿಮರ್ಮ

ಅಲ್ಪಮಾಂಸ ಶೋಣಿತೋಽಭ್ಯಂತರತಃ ಕಟ್ಯಾಂ ಮೂತ್ರಾಶಯೋ ಬಸ್ತಿಃ, ತತ್ರಾಪಿಸದ್ಯೋ ಮರಣ ಮುಶ್ಮರೀ ವ್ರಣಾದೃತೇ, ತತ್ರಾಽಪ್ಯುಭಯತೋ ಭಿನ್ನೇ ನಜೀವತಿ, ಏಕತೋ ಭಿನ್ನೇ ಮೂತ್ರಸ್ರಾವೀವ್ರಣೋ ಭವತಿ, ಸತುಯತ್ನೇನೋ ಪಕ್ರಾಂತೋರೋಹತಿ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೫)

ಸ್ಥಾನ:— ಕಟಿ ಪ್ರದೇಶದ ಒಳಭಾಗದಲ್ಲಿ ಸ್ವಲ್ಪ ಮಾಂಸ ರಕ್ತವುಳ್ಳ ಆಶಯವಾಗಿರುತ್ತದೆ. ಇದು ಮೂತ್ರಾಶಯವು "ಬಸ್ತಿ" ಎಂಬ ಹೆಸರಿನ ಮರ್ಮವಾಗಿರುತ್ತದೆ. ಇದು ಸ್ನಾಯು ಮರ್ಮ, ಚತುರಂಗುಲ ಪ್ರಮಾಣ, ಸದ್ಯಃ ಪ್ರಾಣಹರವಾಗಿರುತ್ತದೆ.

ವಿಶೇಷ

ಅಶ್ಮರೀವ್ರಣದ ಹೊರತಾದ ಆಘಾತದಲ್ಲಿ ಸದ್ಯೋಮರಣ ಸಂಭವಿಸುತ್ತದೆ. ಬಸ್ತಿಯಲ್ಲಿ ಅಶ್ಮರೀವ್ರಣದಿಂದ ಎರಡೂ ಕಡೆ ರಂಧ್ರವಾಗಿ ಮೂತ್ರ ಸ್ರವಿಸುತ್ತಿದ್ದರೆ ಜೀವಿಸುವದಿಲ್ಲ. ಒಂದು ಕಡೆ ಭೇದವಾದರೆ ಮೂತ್ರವನ್ನು ಸ್ರವಿಸುವ ವ್ರಣವು ಉಂಟಾಗುತ್ತದೆ. ಅದು ಪ್ರಯತ್ನಪೂರ್ವಕವಾಗಿ ಚಿಕಿತ್ಸೆಯನ್ನು ಮಾಡಿದರೆ ಗುಣವಾಗುತ್ತದೆ.

ನಾಭಿಮರ್ಮ

ಪಕ್ವಾಮಾಶಯಯೋರ್ಮಧ್ಯೇ ಸಿರಾ ಪ್ರಭವಾ ನಾಭಿಃ, ತತ್ರಾಽಪಿಸದ್ಯೋಮರಣಂ ॥ (ಸು॥ ಶಾ॥ ಅ ೬ ಸೂ ೨೫)

ಸ್ಥಾನ:— ಪಕ್ವಾಶಯ ಆಮಾಶಯಗಳ ಮಧ್ಯದಲ್ಲಿ ಸಿರಾಗಳ ಮೂಲ ಉತ್ಪತ್ತಿಗೆ ಕಾರಣವಾದದ್ದು "ನಾಭಿ" ಎಂಬ ಮರ್ಮ (ಹೊಕ್ಕಳು) ಆಗಿರುತ್ತದೆ. ಇದು ಸಿರಾಮರ್ಮ, ನಾಲ್ಕಂಗುಲ ಪ್ರಮಾಣ, ಇಲ್ಲಿ ಆಘಾತ ಸಂಭವಿಸಿದರೆ ಸದ್ಯೋಮರಣವಾಗುತ್ತದೆ.

ಹೃದಯ ಮರ್ಮ

ಸ್ತನಯೋರ್ಮಧ್ಯಮಧಿಷ್ಠಾಯೋರಸ್ಯಾಮಾಶಯ ದ್ವಾರಂ ಸತ್ವರಜಸ್ತಮಸಾಮಧಿಷ್ಠಾನಂ ಹೃದಯಂ, ತತ್ರಾಪಿಸದ್ಯ ಏವ ಮರಣಂ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೫)

ಸ್ಥಾನ:— ಎದೆಯಲ್ಲಿ ಸ್ತನಗಳ ಮಧ್ಯಪ್ರದೇಶದಲ್ಲಿ ಆಮಾಶಯದ್ವಾರ ಸಮೀಪದಲ್ಲಿ, "ಹೃದಯ" ವೆಂಬ ಮರ್ಮವಿರುತ್ತದೆ. ಸತ್ವರಜಸ್ತಮೋ ಗುಣಗಳಿಗೆ ಆಶ್ರಯ ಸ್ಥಾನವಾಗಿರುತ್ತದೆ. ಇದು ಸಿರಾಮರ್ಮ, ಸಾಲ್ಯಂಗುಲ ಪ್ರಮಾಣ, ಇಲ್ಲಿ ಆಘಾತವಾದರೆ ಸದ್ಯೋ ಮರಣ ಸಂಭವಿಸುತ್ತದೆ.

ಸ್ತನಮೂಲಮರ್ಮ

ಸ್ತನಯೋರಧಸ್ತಾದ್ದ್ವ್ಯಂಗುಲಮುಭಯತಃ ಸ್ತನಮೂಲೇ ತತ್ರಕಫಪೂರ್ಣಕೋಷ್ಠತಯಾ (ಕಾಸಶ್ವಾಸಾಭ್ಯಾಂ) ವಿಮ್ರಿಯತೇ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೫)

ಸ್ಥಾನ:— ಎರಡೂ ಸ್ತನಗಳ ಕೆಳಗೆ ಎರಡಂಗುಲ ಪ್ರದೇಶಗಳಲ್ಲಿ "ಸ್ತನಮೂಲ" ವೆಂಬ ಮರ್ಮವಿರುತ್ತವೆ. ಇವು ಸಿರಾಮರ್ಮ, ಎರಡಂಗುಲ ಪ್ರಮಾಣ, ಕಾಲಾಂತರ ಪ್ರಾಣಹರ ಮರ್ಮವಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ಕಫದಿಂದ ತುಂಬಿದ ಕೋಷ್ಠ ಪ್ರದೇಶವಿರುವದರಿಂದ, ಕೆಮ್ಮು ಉಬ್ಬಸಗಳುತ್ಪನ್ನವಾಗಿ ಸಾಯುತ್ತಾನೆ.

ಸ್ತನರೋಹಿತ

ಸ್ತನಚೂಚುಕಯೋರೂರ್ಧ್ವಂದ್ವ್ಯಂಗುಲಮುಭಯತಃ ಸ್ತನರೋಹಿತೌ, ತತ್ರಲೋಹಿತ ಪೂರ್ಣ ಕೋಷ್ಠತಯಾಕಾಸಶ್ವಾಭ್ಯಾಂಚವಿಮ್ರಿಯತೆ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೫)

ಸ್ಥಾನ:— ಎಡಬಲ ಸ್ತನಗಳ ಮೇಲ್ಭಾಗದಲ್ಲಿ ಎರಡಂಗುಲ ಪ್ರದೇಶಗಳಲ್ಲಿ, "**ಸ್ತನರೋಹಿತ**" ವೆಂಬ ಮರ್ಮವಿರುತ್ತವೆ. ಇವು ಮಾಂಸಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ ಪ್ರಾಣಹಾರಕ ಮರ್ಮವಾಗಿರುತ್ತವೆ ಇಲ್ಲಿ ಆಘಾತ ಸಂಭವಿಸಿದರೆ ರಕ್ತದಿಂದ ತುಂಬಿದ ಕೋಷ್ಠ ಪ್ರದೇಶವಿರುವದರಿಂದ, ಕಾಸಶ್ವಾಸಗಳಿಂದ ಮರಣಹೊಂದುತ್ತಾನೆ **ವೃದ್ಧವಾಗ್ಭಟ** ಮತದಂತೆ ಸದ್ಯೋಮರಣಕಾರಕ ಮರ್ಮವೆಂದು ಹೇಳುತ್ತಾರೆ

ಅಪಲಾಪಮರ್ಮ

ಅಂಸಕೂಟಯೋರಧಸ್ತಾತ್ ಪಾರ್ಶ್ವೋಪರಿಭಾಗಯೋರಪಲಾಪೌನಾಮ, ತತ್ರರಕ್ತೇನಪೂಯಭಾವಂಗತೇನಮರಣಂ ॥

(ಸು॥ ಶಾ॥ ಅ ೬ ಸೂ ೨೫)

ಸ್ಥಾನ:— ಎಡಬಲ ರಟ್ಟೀ ಸಂಧಿಗಳ ಕೆಳಗೆ ಪಾರ್ಶ್ವಗಳ ಮೇಲ್ಭಾಗಗಳಲ್ಲಿ, ಬಗಲುಗಳ ಆದಿಯ ಪಾರ್ಶ್ವ ಭಾಗಗಳಲ್ಲಿ, "**ಅಪಲಾಪ**" ವೆಂಬ ಮರ್ಮಗಳಿರುತ್ತವೆ. ಇವು ಸಿರಾಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ ಪ್ರಾಣಹರ ಮರ್ಮವಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ರಕ್ತವು ಕೀವಿನ (ರಸಿಗೆ) ಸ್ವರೂಪ ಹೊಂದುತ್ತದೆ. ಆದ್ದರಿಂದ ರಕ್ತವು ಪೂಯಭಾವ ಹೊಂದಲು ಮರಣವು ಸಂಭವಿಸುತ್ತದೆ.

ಅಪಸ್ತಂಭಮರ್ಮ

ಉಭಯತ್ರೋರಸೋನಾಡ್ಯೌ ವಾತವಹೇsಪಸ್ತಂಭೌನಾಮ, ತತ್ರವಾತಪೂರ್ಣಕೋಷ್ಠತಯಾಕಾಸಶ್ವಾಸಾಭ್ಯಾಂಚಮರಣಂ॥ ಏವಮೇತಾನ್ಯುದರೋರಸೋದ್ವಾದಶ ಮರ್ಮಾಣೆವ್ಯಾಖ್ಯಾತಾನಿ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೫)

ಸ್ಥಾನ:— ಎದೆಯ ಎಡಬಲ ಭಾಗಗಳಲ್ಲಿರುವ ವಾತವಹಾನಾಡಿಗಳು, **ಮತಾಂತರ** ಎದೆಯ ಎರಡೂ **ಪಾರ್ಶ್ವ** (ಪಕ್ಕೆ)ಗಳಲ್ಲಿಯ ವಾತವಹಾನಾಡಿಗಳು, ಇವುಗಳಿಗೆ "**ಅಪಸ್ತಂಭ**" ಮರ್ಮವೆಂದನ್ನುತ್ತಾರೆ. ಇವು ಸಿರಾ ಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ **ಪ್ರಾಣಹರ**ವಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ವಾತಪೂರ್ಣ ಕೋಷ್ಠವಿರುವದರಿಂದ, ಶ್ವಾಸ ಕಾಸಗಳಿಂದ ಮರಣ ಪ್ರಾಪ್ತವಾಗುತ್ತದೆ. ಹೀಗೆ ಹೊಟ್ಟೆ ಎದೆ (ಉದರೋರಸೋಃ) ಭಾಗಗಳಲ್ಲಿಯ (೧೨) ಮರ್ಮಗಳು ವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತವೆ.

(೩) ಪೃಷ್ಠ ಮರ್ಮಗಳು

ಕಟೀಕತರುಣ ಮರ್ಮಗಳು

ತತ್ರಪೃಷ್ಠವಂಶಮುಭಯತಃ ಪ್ರತಿಶ್ರೋಣಿಕಾಂಡಮುಸ್ಥಿನೀಕಟೀಕತರುಣೇ, ತತ್ರಶೋಣಿತಕ್ಷಯಾತ್ ಸಾಂಡುರ್ವಿವರ್ಣೋಹೀನರೂಪಶ್ಚವ್ರಿಯತೆ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೬)

ಸ್ಥಾನ.— ಪೃಷ್ಠವಂಶದ ಎರಡೂ ಕಡೆ ಕಟಿಅಸ್ಥಿ ಸಂಧಿಗಳಲ್ಲಿ. **ಮತಾಂತರ** ಕಟಿಯ ಮೇಲ್ಭಾಗದಲ್ಲಿ ಎಡಬಲ ಶ್ರೀಕಾಸ್ಥಿಗಳಲ್ಲಿ "**ಕಟೀಕ ಮತ್ತು ತರುಣ**" ಎಂಬ ಹೆಸರಿನ ಮರ್ಮಗಳಿರುತ್ತವೆ. ಇವು ಅಸ್ಥಿಮರ್ಮ, ಅರ್ಧಾಂಗುಲಪ್ರಮಾಣ, ಕಾಲಾಂತರ **ಪ್ರಾಣಹಾರಕ** ಮರ್ಮಗಳಾಗಿರುತ್ತವೆ ಇಲ್ಲಿ ಆಘಾತವಾದರೆ ರಕ್ತಕ್ಷೀಣತೆಯಿಂದ ಬೆಳ್ಳಗಾಗಿ ಅಥವಾ ವರ್ಣ ಹೀನತೆ ಇಲ್ಲವೇ ವಿಕಾರವರ್ಣವುಂಟಾಗಿ ಮರಣಹೊಂದುತ್ತಾನೆ.

ಕುಕುಂದರ ಮರ್ಮ

ಪಾರ್ಶ್ವಯೋರ್ಜಘನ ಬಹಿರ್ಭಾಗೇ ಪೃಷ್ಠವಂಶಮುಭಯತಃ ಕುಕುಂದರೇ, ತತ್ರಸ್ಪರ್ಶಾಜ್ಞಾನಮುಧಃ ಕಾಯೇಚೇಷ್ಟೋಪಘಾತಶ್ಚ ॥ (ಸು॥ ಶಾ॥ ಅ. ೬ ಸೂ. ೨೬)

ಸ್ಥಾನ:— ಪೃಷ್ಠ ವಂಶದ ಎರಡೂ ಕಡೆ ಪಾರ್ಶ್ವಗಳಲ್ಲಿ ಜಘನ ಬಹಿ ಭಾರ್ಗದಲ್ಲಿ, "ಮತಾಂತರ" ಟೊಂಕದ ಎಡಬಲಗಳಲ್ಲಿ ಹಿಂದಿನ ಮೇಲ್ಭಾಗ ದಲ್ಲಿ, "ಕುಕ್ಕಂದರ"ವೆಂಬ ಮರ್ಮವಿರುತ್ತವೆ. ಇವು ಸಂಧಿ ಮರ್ಮ, ಆರ್ಧಾಂ ಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತವೆ. ಇಲ್ಲಿ ಆಘಾತವಾದರೆ ಸ್ಪರ್ಶಜ್ಞಾನ ಇಲ್ಲದಂತೇ ಆಗುತ್ತದೆ ನುತ್ತು ಕೆಳಭಾಗ ಶರೀರವು ಕ್ರಿಯಾ ಶೂನ್ಯ (ಜೇಷ್ಟೋಪಘಾತ) ವಾದದ್ದಾಗುತ್ತದೆ

ನಿತಂಬ ಮರ್ಮ

ಶ್ರೋಣಿಕಾಂಡಯೋರುಪರ್ಯಾಶಯಾಚ್ಛಾದನೌಪಾರ್ಶ್ವಾಂ ತರಪ್ರತಿಬದ್ಧೌನಿತಂಬೌ, ತತ್ರಾಽಘಃ ಕಾಯಶೋಷೋದೌರ್ಬ ಲ್ಯಾಚ್ಚ ಮರಣಂ ॥

(ಸುಶ್ರುತ॥ ಶಾರೀರ॥ ಅ ೬ ಸೂ. ೨೬)

ಸ್ಥಾನ:— ಕಟಿಸಂಧಾನ ತ್ರಿಕಾಸ್ಥಿಗಳ ಮೇಲ್ಭಾಗದಲ್ಲಿ ಮಲಾಶಯಕ್ಕೆ ಆಚ್ಛಾದಕವಾಗಿ ಎಡಬಲ ಪಾರ್ಶ್ವಗಳಲ್ಲಿ ಪ್ರತಿಬದ್ಧವಾದ ಅಸ್ಥಿಫಲಕ ಭಾಗ ಗಳಲ್ಲಿ, "ನಿತಂಬ"ವೆಂಬ ಹೆಸರಿನ ಮರ್ಮವಿರುತ್ತವೆ. ಇವು ಅಸ್ಥಿ ಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ ಪ್ರಾಣಹರ ಮರ್ಮಗಳಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ಕೆಳಭಾಗ ಶರೀರವು ಕೃಶವಾಗೋಣ (ಶೋಷ) ದುರ್ಬಲತೆಗಳಿಂದ ಮರಣ ಸಂಭವಿಸುತ್ತದೆ

ಪಾರ್ಶ್ವಸಂಧಿಮರ್ಮ

ಅಧಃ ಪಾರ್ಶ್ವಾಂತರ ಪ್ರತಿಬದ್ಧೌ ಜಘನ ಪಾರ್ಶ್ವ ಮಧ್ಯಯೋ ಸ್ತಿರ್ಯಗೂರ್ಧ್ವಂಚ ಜಘನಾತ್ ಪಾರ್ಶ್ವಸಂಧೀ, ತತ್ರಲೋಹಿತ ಪೂರ್ಣ ಕೋಷ್ಠತಯಾಮ್ರಿಯತೆ ॥

(ಸು॥ ಶಾ॥ ಅ. ೬ ಸೂ ೨೬)

ಸ್ಥಾನ:— ಎಡಬಲ ಪಾರ್ಶ್ವಗಳಲ್ಲಿ ಅಸ್ಥಿಫಲಕವುಳ್ಳ ಸಂಧಿಗಳು, "ಕನ್ನಡದಲ್ಲಿ" ಇದಕ್ಕೆ ಪಕ್ಕಡಿ, ಪಾರ್ಶ್ವ, ಪಕ್ಕೆಲಬುಗಳೆಂದು ಹೇಳುತ್ತಾರೆ. ಇಲ್ಲಿ "ಪಾರ್ಶ್ವಸಂಧಿ" ಎಂಬ ಹೆಸರಿನ ಮರ್ಮವಿರುತ್ತವೆ ಇವು ಸಿರಾಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ ಪ್ರಾಣಹರ ಮರ್ಮವಾಗಿರುತ್ತವೆ. ಇಲ್ಲಿ ಆಘಾತಬಿದ್ದರೆ ರಕ್ತಪೂರ್ಣ ಕೋಷ್ಯವಿರುವದರಿಂದ ಮರಣ ಸಂಭವಿಸುತ್ತದೆ

ಬೃಹತೀಮರ್ಮ

ಸ್ತನಮೂಲಾದ್ಬೃಜೂಭಯತಃ ಪೃಷ್ಠವಂಶಸ್ಯಬೃಹತೀ, ತತ್ರ ಶೋಣಿತಾತಿಪ್ರವೃತ್ತಿನಿಮಿತ್ತೈರುಪದ್ರವೈರ್ಮಿಯತೆ ॥

(ಸುಶ್ರುತ॥ ಶಾರೀರ॥ ಅ. ೬ ಸೂ. ೨೬)

ಸ್ಥಾನ: — ಸ್ತನಮೂಲಗಳ ಸರಳ ರೇಖೆಯಿಂದ ಸರಿಯಾಗಿ ಹಿಂಬದಿಯ ಎಡಬಲ ಪಾರ್ಶ್ವಗಳಲ್ಲಿ, "ಬೃಹತೀ" ಎಂಬ ಹೆಸರಿನ ಮರ್ಮವಿರುತ್ತವೆ. ಇವು ಸಿರಾಮರ್ಮ, ಅರ್ಧಾಂಗುಲ ಪ್ರಮಾಣ, ಕಾಲಾಂತರ ಪ್ರಾಣಹರ ಮರ್ಮವಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ರಕ್ತ ಒಹಳ ಹೋಗುವದರಿಂದ ಸಂಭವಿಸುವ ಉಪದ್ರವಗಳಿಂದ ಮರಣವಾಗುತ್ತದೆ

ಅಂಸಫಲಕ

ಪೃಷ್ಠೋಪರಿ ಪೃಷ್ಠವಂಶಮುಭಯತಸ್ತ್ರಿಕಸಂಬದ್ಧೇ ಅಂಸಫಲಕೇ, ತತ್ರಬಾಹ್ವೋಃ ಸ್ವಾಪಶೋಷೌ ॥

(ಸುಶ್ರುತ॥ ಶಾರೀರ॥ ಅ. ೬ ಸೂ. ೨೬)

ಸ್ಥಾನ:— ಬೆನ್ನಿನ ಮೇಲ್ಗಡೆ ಪೃಷ್ಠವಂಶದ ಎರಡೂ ಕಡೆಗಳಲ್ಲಿ, "ಕನ್ನಡದಲ್ಲಿ" ಹೆಗಲೆಲುಬುಗಳು, ಭುಜ ಪ್ರದೇಶಗಳಲ್ಲಿ ಕೆಳಗಡೆ ಇರುವ ಅಸ್ಥಿಫಲಕಗಳು, ಈ ಭಾಗಗಳಲ್ಲಿ "ಅಂಸಫಲಕ"ವೆಂಬ ಹೆಸರಿನ ಮರ್ಮವಿರುತ್ತವೆ. ಇವು ಅಸ್ಥಿ ಮರ್ಮ, ಅರ್ಧಾಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿ

ರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ಬಾಹುಗಳ ಕ್ಷೀಣತೆ (ಶೋಷ) ನಿಶ್ಚೇಷ್ಟತೆ (ಸ್ವಾಪ) ಇವುಗಳುಂಟಾಗುತ್ತವೆ

ಅಂಸಮರ್ಮ

ಬಾಹುಮೂರ್ಧಗ್ರೀವಾಮಧ್ಯೇsಂಸಪೀಠಸ್ಕಂಧ ಬಂಧನಾವಂಸೌ, ತತ್ರಸ್ತಬ್ಧಬಾಹುತಾ ಏವಮೇತಾನಿ ಚತುರ್ದಶ ಪೃಷ್ಠ ಮರ್ಮಾಣಿ ವ್ಯಾಖ್ಯಾತಾನಿ॥

(ಸುಶ್ರುತ॥ ಶಾರೀರ॥ ಅ. ೬ ಸೂ. ೨೬)

ಸ್ಥಾನ:— ಎರಡು ರಟ್ಟಿಗಳ ಆದಿಯ ಅಡ್ಡೆಲಬುಗಳು, ಬಾಹು ಮೂಲಗಳಲ್ಲಿಯ ಅಡ್ಡೆಲುಬುಗಳು, ಈ ಸ್ಥಾನಗಳಲ್ಲಿ **"ಅಂಸ"**ವೆಂಬ ಮರ್ಮ ವಿರುತ್ತವೆ ಇವು ಸ್ನಾಯುಮರ್ಮ, ಅರ್ಧಾಂಗುಲ ಪ್ರಮಾಣ, ವೈಕಲ್ಯ ಕರ ವರ್ಮವಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ಬಾಹುಸ್ತಬ್ಧತಾ (ನಿಶ್ಚೇಷ್ಟತೆ) ಉಂಟಾಗುತ್ತದೆ. ಹೀಗೆ (೧೪) ಪೃಷ್ಠಮರ್ಮಗಳು ವಿವರಿಸಲ್ಪಟ್ಟಿರುತ್ತವೆ.

(೪) ಜತ್ರೂರ್ಧ್ವಮರ್ಮಗಳು

ಧಮನೀಮರ್ಮ

ತತ್ರಕಂಠನಾಡೀಮುಭಯತಶ್ಚತಸ್ರೋಧಮನ್ಯೋರ್ದ್ವೇನೀಲೇ ದ್ವೇಚಮನ್ಯವ್ಯತ್ಯಾಸೇನ, ತತ್ರಮೂಕತಾಸ್ವರವೈಕ್ಲವ್ಯಮರಸ ಗ್ರಾಹಿತಾಚ ॥ (ಸುಶ್ರುತ॥ ಶಾರೀರ॥ ಅ ೬ ಸೂ ೨೬)

ಸ್ಥಾನ:— ಕಂಠನಾಳದ ಎರಡೂ ಕಡೆ **"ನೀಲ"** ಮತ್ತು **"ಮನ್ಯ"** ಗಳೆಂಬ ಪ್ರತಿಯೊಂದು ಎರಡೆರಡರಂತೆ [೪] ಧಮನಿಗಳಿದ್ದು, ಕತ್ತರಿಯ ಹಾಗೆ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ವ್ಯತ್ಯಾಸವಾಗಿ ಹೋಗಿರುತ್ತವೆ. ಇವುಗಳು **"ಧಮನೀ"** ಎಂಬ ಹೆಸರಿನ ಮರ್ಮಗಳಾಗಿರುತ್ತವೆ.

ಇವು ಸಿರಾ ಮರ್ಮ, ನಾಲ್ಕಂಗುಲ ಪ್ರಮಾಣ, ವೈಕಲ್ಯಕರ ಮರ್ಮಗಳಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ಮೂಕತೆ ಸ್ವರವಿಕೃತಿ ಮತ್ತು ರಸಾಜ್ಞಾನ ಅಥವಾ ರಸಗ್ರಹಣ ಶೂನ್ಯತೆಗಳೂ ಉಂಟಾಗುತ್ತವೆ.

ಮಾತೃಕಾಮರ್ಮ

ಗ್ರೀವಾಯಾಮುಭಯತಶ್ಚತಸ್ರಶ್ಚತಸ್ರಃ ಸಿರಾಮಾತೃಕಾಃ, ತತ್ರಸದ್ಯೋಮರಣಂ ॥ (ಸು॥ ಶಾ॥ ಅ ೬ ಸೂ ೨೭)

ಸ್ಥಾನ:— ಕುತ್ತಿಗೆಯ ಎರಡೂ ಪಾರ್ಶ್ವಗಳಲ್ಲಿ ಪ್ರತಿಯೊಂದರಲ್ಲಿ ನಾಲ್ಕರಂತೇ (೮) ಸಿರಗಳಿರುತ್ತವೆ. ಇವುಗಳಿಗೆ "ಮಾತೃಕಾ" ಎಂದು ಹೇಳುತ್ತಾರೆ. ಇವು ಸಿರಾಮರ್ಮ, ನಾಲ್ಕಂಗುಲ ಪ್ರಮಾಣ, ಸದ್ಯೋ ಮರಣವನ್ನುಂಟು ಮಾಡುವ ಮರ್ಮಗಳಾಗಿರುತ್ತವೆ.

ಕೃಕಾಟಿಕಾಮರ್ಮ

ಶಿರೋಗ್ರೀವಯೋಃ ಸಂಧಾನೇಕೃಕಾಟಿಕೇ, ತತ್ರಚಲಮೂರ್ಧತಾ ॥ (ಸು॥ ಶಾ॥ ಅ ೬ ಸೂ ೨೭)

ಸ್ಥಾನ:— ತಲೆ ಮತ್ತು ಕುತ್ತಿಗೆಗಳ ಸಂಧಾನ ಭಾಗದಲ್ಲಿ "ಕೃಕಾಟಿಕಾ" ಎಂಬ ಮರ್ಮವಿರುತ್ತವೆ. ಇವು ಸಂಧಿಮರ್ಮ, ಅರ್ಧಾಂಗುಲ ಪ್ರಮಾಣ, ವೈಕಲ್ಯಕರಮರ್ಮವಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ತಲೆ ನಡಗೋಣ (ಚಲಮೂರ್ಧತಾ) ಉಂಟಾಗುತ್ತದೆ.

ವಿಧುರಮರ್ಮ

ಕರ್ಣಪೃಷ್ಠತೋಽಧಃ ಸಂಶ್ರಿತೇವಿಧುರೇ, ತತ್ರಬಾಧಿರ್ಯಂ ॥

(ಸು॥ ಶಾ॥ ಅ ೬ ಸೂ ೨೭)

ಸ್ಥಾನ:— ಕಿವಿಗಳ ಹಿಂದೆ ಕೆಳಗಡೇ ಭಾಗಗಳಲ್ಲಿ "ವಿಧುರ" ವೆಂಬ ಮರ್ಮವಿರುತ್ತವೆ. ಇವು ಸ್ನಾಯುಮರ್ಮ, ಅರ್ಧಾಂಗುಲ ಪ್ರಮಾಣ, ವೈಕಲ್ಯಕರಮರ್ಮವಾಗಿರುತ್ತವೆ. ಇಲ್ಲಿ ಆಘಾತವಾದರೆ ಕಿವಿಗಳುಕಿವುಡಾಗುತ್ತವೆ

ಫಣೇ

ಘ್ರಾಣಮಾರ್ಗಮುಭಯತಃ ಸ್ರೋತೋಮಾರ್ಗಪ್ರತಿಬದ್ಧೇಽಭ್ಯಂತರತಃ ಫಣೇ, ತತ್ರಗಂಧಾಜ್ಞಾನಂ ॥
(ಸುಶ್ರುತ॥ ಶಾರೀರ॥ ಅ ೬ ಸೂ ೨೭)

ಸ್ಥಾನ:— ಮೂಗಿನ ರಂಧ್ರಗಳ ಆದಿಯ ಒಳಭಾಗಗಳಲ್ಲಿ, "ಫಣೇ" ಎಂಬ ಮರ್ಮಗಳಿರುತ್ತವೆ. ಇವು ಸಿರಾಮರ್ಮ, ಅರ್ಧಾಂಗುಲ ಪ್ರಮಾಣ. ವೈಕಲ್ಯಕರಮರ್ಮವಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ಗಂಧ ಗ್ರಹಣ ಮತ್ತು ಜ್ಞಾನವಾಗುವದಿಲ್ಲ.

ಅಪಾಂಗಮರ್ಮ

ಭ್ರೂಪುಚ್ಛಾಂತಯೋರಧೋಽಕ್ಷ್ಣೋರ್ಬಾಹ್ಯತೋಽಪಾಂಗೌ, ತತ್ರಾಂಧ್ಯಂ ದೃಷ್ಟ್ಯುಪಘಾತೋವಾ ॥
(ಸುಶ್ರುತ॥ ಶಾರೀರ॥ ಅ ೬ ಸೂ)

ಸ್ಥಾನ:— ಎರಡೂ ಹುಬ್ಬುಗಳ ತುದಿಯಲ್ಲಿ ಕೆಳಗೆ ಕಣ್ಣುಗಳ ಹೊರ ಭಾಗಗಳಲ್ಲಿ "ಅಪಾಂಗ" ವೆಂಬ ಮರ್ಮವಿರುತ್ತವೆ. ಇವು ಸಿರಾಮರ್ಮ, ಅರ್ಧಾಂಗುಲ ಪ್ರಮಾಣ, ವೈಕಲ್ಯಕರಮರ್ಮವಾಗಿರುತ್ತವೆ. ಇಲ್ಲಿ ಆಘಾತ ಸಂಭವಿಸಿದರೆ ಕಣ್ಣು ಕುರುಡಾಗುತ್ತವೆ. ಅಥವಾ ದೃಷ್ಟಿಗೆ ಆಘಾತ ವಾಗುತ್ತದೆ.

ಆವರ್ತಮರ್ಮ

ಭ್ರುವೋರುಪರಿನಿಮ್ನಯೋರಾವರ್ತೌನಾಮ, ತತ್ರಾಸ್ಯಾಂಧ್ಯಂ ದೃಷ್ಟ್ಯುಪಘಾತೋವಾ ॥ (ಸು॥ ಶಾ॥ ಅ ೬ ಸೂ. ೨೭)

ಸ್ಥಾನ.— ಹುಬ್ಬುಗಳ ಮೇಲ್ಭಾಗದಲ್ಲಿರುವ ಸ್ವಲ್ಪ ತಗ್ಗಾದ ಪ್ರದೇಶಗಳಲ್ಲಿ, "ಅವರ್ತ"ವೆಂಬ ಹೆಸರಿನ ಮರ್ಮವಿರುತ್ತವೆ ಇವು ಸಂಧಿ ಮರ್ಮ, ಅರ್ಧಾಂಗುಲ ಪ್ರಮಾಣ, ವೈಕಲ್ಯಕರ ಮರ್ಮವಾಗಿರುತ್ತವೆ ಇಲ್ಲಿ ಆಘಾತವಾದರೆ ಕಣ್ಣು ಕುರುಡಾಗುತ್ತವೆ ಅಥವಾ ದೃಷ್ಟಿಗೆ ಆಘಾತವಾಗುತ್ತದೆ.

ಶಂಖಮರ್ಮ

ಭ್ರುವೋರಂತಯೋರುಪರಿ ಕರ್ಣಲಲಾಟಯೋರರ್ಧ್ವೇಶಂಖೌ,
ತತ್ರಸದ್ಯೋ ಮರಣಂ ॥ (ಸು.ಶ್ರುತ॥ ಶಾರೀರ॥ ಅ. ೬ ಸೂ. ೨೭)

ಸ್ಥಾನ:— ಹುಬ್ಬುಗಳ ಕೊನೇ ಭಾಗಗಳ ಮೇಲೆ ಕಿವಿ ಹಣೆಗಳ ಮಧ್ಯ ಭಾಗಗಳಲ್ಲಿ, ಇದಕ್ಕೆ ಮೆಲಕು ಅನ್ನುತ್ತಾರೆ. ಈ ಪ್ರದೇಶಗಳಲ್ಲಿ "ಶಂಖ"ವೆಂಬ ಹೆಸರಿನ ಮರ್ಮವಿರುತ್ತವೆ ಇವು ಅಸ್ಥಿ ಮರ್ಮ, ಅರ್ಧಾಂಗುಲ ಪ್ರಮಾಣ, ಇಲ್ಲಿ ಆಘಾತ ಹೊಡೆತಗಳಿಂದ ಸದ್ಯೋ ಮರಣ ಸಂಭವಿಸುತ್ತದೆ.

ಉತ್‌ಕ್ಷೇಪ ಮರ್ಮ

ಶಂಖಯೋರುಪರಿಕೇಶಾಂತ ಉತ್‌ಕ್ಷೇಪೌ, ತತ್ರಸಶಲ್ಯೋಜೀ
ವೇತ್ ಪಾಕಾತ್ ಪತಿತಶಲ್ಯೋವಾನೋದ್ಧೃತಶಲ್ಯಃ॥
(ಸು.ಶ್ರುತ॥ ಶಾರೀರ॥ ಅ ೬ ಸೂ. ೨೭)

ಸ್ಥಾನ.— ಶಂಖ ಮರ್ಮಗಳ ಮೇಲ್ಭಾಗ ಕೇಶಾಂತ್ಯ ಪ್ರದೇಶಗಳಲ್ಲಿ, "ಉತ್‌ಕ್ಷೇಪ"ವೆಂಬ ಹೆಸರಿನ ಮರ್ಮವಿರುತ್ತವೆ. ಇವು ಸ್ನಾಯು ಮರ್ಮ, ಅರ್ಧಾಂಗುಲ ಪ್ರಮಾಣ, ವಿಶಲ್ಯಪ್ರಾಣಹರ ಮರ್ಮವಾಗಿರುತ್ತವೆ. ಇಲ್ಲಿ ನಟ್ಟಿರುವ ಬಾಣಗಳನ್ನು ಕೆತ್ತೊಡನೆಯೇ ಮರಣ ಸಂಭವಿಸುತ್ತದೆ. ಯಾಕಂದರೆ ಬಾಣಾದಿಗಳ ಮುಖದಿಂದ ತಡೆದು ಅಡ್ಡಿಯಾಗಿ ಪ್ರಾಣವು ನಿಂತಿರುತ್ತದೆ, ಆದ್ದರಿಂದ ಬಾಣವನ್ನು ಕೆತ್ತೊಡನೆಯೇ ಪ್ರಾಣವುಹಾರಿಹೋಗುತ್ತದೆ. ಹೀಗಿರುವದರಿಂದ ಈ ಮರ್ಮಗಳಿಗೆ "ವಿಶಲ್ಯಘ್ನ"ವೆಂದು ಹೇಳಿದ್ದಾರೆ. ಬಾಣವು ನಟ್ಟಿರುವ ಸ್ಥಳದಲ್ಲಿಯೇ ಇರುವವರೆಗೆ ಜೀವವಿರುತ್ತದೆ. ವ್ರಣಪಾಕ

ದಿಂದ ಕೀವಾಗಿ ರಸಿಗೆಯ ಸಂಗಡ ಬಾಣವು ತನ್ನಿಂದ ತಾನೇ ಹೊರಬಿದ್ದರೆ ಬದುಕುತ್ತಾನೆ ಬಾಣವನ್ನು ಕಿತ್ತರೆಬದುಕುವದಿಲ್ಲ. ಪ್ರಾಣವು ಹಾರಿಹೋಗುತ್ತದೆ. ಬಾಣ ಶಸ್ತ್ರಾದಿಗಳ ಆಘಾತವನ್ನು (ಚುಚ್ಚುವಿಕೆಯನ್ನು) ಕುರಿತು ವಿಶಲ್ಯಘ್ನ ಮರ್ಮವನ್ನು ಹೇಳಿದ್ದಾರೆ. ಇನ್ನು ಬಾಣಾದಿಗಳು ನಟ್ಟದೆ (ಪ್ರವೇಶಿಸದೆ) ಹೊಡೆತ ಬಡೆತಸಂಭವಿಸಿದರೆ, ವಿಶಲ್ಯಘ್ನ ಮರ್ಮಗಳು ವೈಕಲ್ಯಕರವಾಗುತ್ತವೆ.

ಸ್ಥಪನೀಮರ್ಮ

ಭ್ರುವೋರ್ಮಧ್ಯೇಸ್ಥಪನೀ, ತತ್ರೋತ್ಕ್ಷೇಪವತ್ ॥

(ಸುಶ್ರುತ॥ ಶಾರೀರ॥ ಅ ೬ ಸೂ ೨೭)

ಸ್ಥಾನ:—ಎರಡೂಹುಬ್ಬಗಳು ಕೂಡಿದ ಮಧ್ಯಭಾಗದಲ್ಲಿ, "ಸ್ಥಪನೀ" ಎಂಬ ಮರ್ಮವಿರುತ್ತದೆ. ಇದು ಸಿರಾಮರ್ಮ, ಅರ್ಧಾಂಗುಲಪ್ರಮಾಣ, ವಿಶಲ್ಯ ಪ್ರಾಣಹರ ಮರ್ಮವಾಗಿರುತ್ತದೆ. ಇಲ್ಲಿ ಬಾಣಾದಿಗಳು ನಟ್ಟರೆ ಅಥವಾ ಆಘಾತ ಸಂಭವಿಸಿದರೆ ಉತ್ಕ್ಷೇಪ ಮರ್ಮದಂತೆಯೇ ಪರಿಣಾಮವಾಗುತ್ತದೆಯೆಂದು ತಿಳಿಯಬೇಕು.

ಸೀಮಂತ ಮರ್ಮ

ಪಂಚಸಂಧಯಃ ಸಿರಸಿವಿಭಕ್ತಾಃ ಸೀಮಂತಾನಾಮ, ತತ್ರೋನ್ಮಾದಭಯಚಿತ್ತನಾಶೈರ್ಮರಣಂ॥

(ಸುಶ್ರುತ॥ ಶಾರೀರ॥ ಅ ೬ ಸೂ ೨೭)

ಸ್ಥಾನ:— ತಲೇಪರಟೆಗಳಲ್ಲಿ ಪರಸ್ಪರ ಎಲಬುಗಳು ಕೂಡಿದ (೫) ಸಂಧಿಗಳು ಇರುತ್ತವೆ. ಇವುಗಳಿಗೆ "ಸೀಮಂತ" ಮರ್ಮವೆಂದು ಹೇಳುತ್ತಾರೆ. ಇವು ಸಂಧಿಮರ್ಮ, ನಾಲ್ಕಂಗುಲ ಪ್ರಮಾಣ, ಕಾಲಾಂತರಪ್ರಾಣಹಾರಕ ಮರ್ಮವಾಗಿರುತ್ತವೆ ಇಲ್ಲಿ ಆಘಾತವಾದರೆ ಹುಚ್ಚು ಹಿಡಿಯೋಣ

(ಉನ್ಮಾದ), ಭಯ, ಮನೋವಿನಾಶ ಮೊದಲಾದವುಗಳಿಂದ ಮರಣ ಹೊಂದುತ್ತಾನೆ

ಶೃಂಗಾಟಕಮರ್ಮ

ಘ್ರಾಣಶ್ರೋತ್ರಾಕ್ಷಿಜಿಹ್ವಾಸಂತರ್ಪಣೇನಾಂ ಸಿರಾಣಾಂಮಧ್ಯೇ ಸಿರಾಸನ್ನಿಪಾತಃ ಶೃಂಗಾಟಕಾನಿ, ತಾನಿಚತ್ವಾರಿ ಮರ್ಮಾಣಿ, ತತ್ರಾಪಿಸದ್ಯೋ ಮರಣಂ ॥ (ಸು॥ ಶಾ॥ ೮ ೬ ಸೂ ೨೭)

ಸ್ಥಾನ:— ಮೂಗು, ಕಿವಿ, ಕಣ್ಣು, ನಾಲಿಗೆಗಳನ್ನು ಪೋಷಿಸುವ ಸಿರಗಳು ಒಟ್ಟುಗೂಡಿದ ಸ್ಥಳದಲ್ಲಿ, "ಶೃಂಗಾಟಕ" ಮರ್ಮವೆಂದು ಹೇಳುತ್ತಾರೆ ಘ್ರಾಣಶ್ರೋತ್ರಾಽಕ್ಷಿ ಜಿಹ್ವಾಗಳಲ್ಲಿ ಪ್ರತ್ಯೇಕ ಒಂದೊಂದರಂತೆ ಒಟ್ಟು (೪) ಮರ್ಮಗಳಿರುತ್ತವೆ. ಇವು ಸಿರಾಮರ್ಮ, ನಾಲ್ಕಂಗುಲ ಪ್ರಮಾಣ, ಸದ್ಯಃ ಪ್ರಾಣಹರ ಮರ್ಮವಾಗಿರುತ್ತವೆ

ಅಧಿಪತಿಮರ್ಮ

ಮಸ್ತಕಾಭ್ಯಂತರೋಪರಿಷ್ಟಾತ್ ಸಿರಾಸಂಧಿಸನ್ನಿಪಾತೋರೋಮಾವರ್ತೋಽಧಿಪತಿಃ, ತತ್ರಾಪಿ ಸದ್ಯ ಏವ ॥ ಏವಮೇತಾನಿ ಸಪ್ತತ್ರಿಂಶದೂರ್ಧ್ವಜತ್ರುಗತಾನಿ ಮರ್ಮಾಣಿ ವ್ಯಾಖ್ಯಾತಾನಿ॥

(ಸುಶ್ರುತ॥ ಶಾರೀರ॥ ೮ ೬ ಸೂ ೨೭)

ಸ್ಥಾನ:— ತಲೆಯ ಒಳಗಡೆ ಮೇಲ್ಭಾಗದಲ್ಲಿ ಸಿರಾಸಂಧಿಗಳುಒಂದೆಡೆಯಾಗುವ ಸ್ಥಳದಲ್ಲಿ, ವಿಶೇಷ:— ಇದರ ಮೇಲ್ಭಾಗ ತಲೆಯಲ್ಲಿ ಕೂದಲ ಸುಳಿಇರುತ್ತದೆ ಕನ್ನಡದಲ್ಲಿ ನೆತ್ತಿಯೆಂದು ಅನ್ನುತ್ತಾರೆ. ಈ ಪೂರ್ವೋಕ್ತ ಸ್ಥಾನದಲ್ಲಿ "ಅಧಿಪತಿ" ಯೆಂಬ ಹೆಸರಿನ ಮರ್ಮವಿರುತ್ತದೆ ಇದು ಸಂಧಿ ಮರ್ಮ, ಅರ್ಧಾಂಗುಲ ಪ್ರಮಾಣ, ಸದ್ಯೋ ಮರಣ ಮರ್ಮವಾಗಿರುತ್ತದೆ. ಹೀಗೆ ಜತ್ರೂರ್ಧ್ವವಾದ (೩೭) ಮರ್ಮಗಳು ವಿವರಿಸಲ್ಪಟ್ಟಿರುತ್ತವೆ.

ಶಾಖಾಮರ್ಮ (೪೪), ಉದರೋರಸೋಃ (೧೨), ಪೃಷ್ಠ ಮರ್ಮ (೧೪), ಜತ್ರೂರ್ಧ್ವಮರ್ಮ (೩೭), ಈ ಪ್ರದೇಶಗಳಲ್ಲಿರುವ ಮರ್ಮಗಳು ಒಟ್ಟು ಕೂಡಿ (೧೦೭) ಮರ್ಮಗಳಿರುತ್ತವೆ

(೫೯) ಸಿರಾ ವಿವರಣೆಯು

ದೇಹದ ತುಂಬ ಸಿರಾಗಳು ಜಾಳಿಗೆಯಂತೆ ಪಸರಿಸಿರುತ್ತವೆ ಸಿರಾ ಗಳು ನಾಭಿಯಿಂದ ಹೊರಟು ಸಮಗ್ರ ದೇಹದಲ್ಲಿಯೂ ವ್ಯಾಪಿಸಿಕೊಂಡಿರು ತ್ತವೆ. ಶರೀರದಲ್ಲಿ ವಾತ ಪಿತ್ತ ಕಫ ಮತ್ತು ರಕ್ತಗಳನ್ನು ಎಲ್ಲ ಭಾಗಗಳಿಗೆ ಸಿರಾಗಳು ಒಯ್ದು ಮುಟ್ಟಿಸುತ್ತವೆ. ಅರ್ಥಾತ್ ವಾತಾದಿಗಳು ಸಿರಾಮಾರ್ಗ ವಾಗಿ ದೇಹದ ಪ್ರತಿಯೊಂದು ಭಾಗಗಳಲ್ಲಿ ಸಂಚರಿಸುತ್ತವೆಂಬಭಿಪ್ರಾಯವು ಶಸ್ತ್ರಕ್ರಿಯಾ ಆಘಾತಾದಿಗಳಲ್ಲಿ ಮತ್ತು ರಕ್ತ ಮೋಕ್ಷಣ ಕ್ರಮದಲ್ಲಿ ಸಿರಾ ಜ್ಞಾನವು ಅವಶ್ಯವಾದದ್ದಾಗಿರುತ್ತದೆ ಆದ್ದರಿಂದ ಸಿರಾ ವಿಷಯಕ ವಿವರಣೆ ಯನ್ನು ಮಾಡುತ್ತಾರೆ ಎಲ್ಲ ಭಾಗಗಳಲ್ಲಿ ಕೂಡಿ ದೇಹದಲ್ಲಿ (೭೦೦) ಸಿರಾ ಗಳು ಇರುತ್ತವೆ ಹೇಗೆ ಕಾಲುವೆಗಳು ನೀರನ್ನು ಒಯ್ಯುವದರಿಂದ ಹೊಲ ವನ್ನು ಬೆಳಸುತ್ತವೆಯೋ, ಸಣ್ಣ ಕಾಲುವೆ (ಹರಿ) ಮೊದಲಾದವುಗಳಿಂದ ಉಪವನವು ಪೋಷಣೆಯನ್ನು ಹೊಂದುತ್ತದೆಯೋ, ಹಾಗೆಯೇ ಸಿರಾಗಳು ದೇಹವನ್ನು ಪೋಷಿಸಿ ಬೆಳೆಸುತ್ತವೆ. ಶರೀರದಲ್ಲಿ ದೊಡ್ಡ ಸಿರಗಳಿಂದಾ ರಂಭಿಸಿ ಗಿಡದ ಎಲೆಗಳಲ್ಲಿರುವ ಸೂಕ್ಷ್ಮನರಗಳು ಅಥವಾ ಕೂದಲಿನ ಪ್ರಮಾ ಣದ ವರೆಗೆ; ಪರಮ ಸೂಕ್ಷ್ಮವಾದ ಸಿರಗಳಿರುತ್ತವೆ.

ಸಪ್ತ ಸಿರಾಶತಾನಿ ಭವಂತಿ, ಯಾಭಿರಿದಂ ಶರೀರಮಾರಾಮ ಇವಜಲಹಾರಿಣೀಭಿಃ ಕೇದಾರ ಇವ ಕುಲ್ಯಾಭಿರುಪಸ್ನೆಹ್ಯತೇ ಸುಗೃಹ್ಯತೇ ಚಾಕುಂಚನ ಪ್ರಸಾರಣಾದಿಭಿರ್ವಿಶೇಷೈರ್ದ್ರುಮಃ, ಪತ್ರಸೇವನ್ವೀನಾಮಿತಾಸಾಂಪ್ರತಾನಾಃ, ತಾಸಾಂನಾಭಿರ್ಮೂ ಲಂ, ತತಶ್ಚಪ್ರಸರತ್ಯೂರ್ಧ್ವಮಧಸ್ತಿರ್ಯಕ್ಚ ॥

(ಸುಶ್ರುತ॥ ಶಾರೀರ॥ ಅ ೭ ಸೂ ೩)

ದೇಹದಲ್ಲಿ ಸಿರಾಗಳು (೭೦೦) ಇರುತ್ತವೆ ಯಾವದರಿಂದ ಶರೀರವು ನೀರಿನ ಸಣ್ಣ ಹರಿಗಳಿಂದ ಉದ್ಯಾನದಂತೆ ಅಥವಾ ಕಾಲುವೆಗಳಿಂದ ಹೊಲ ದಂತೆ, ಪೋಷಣೆಯನ್ನು ಹೊಂದುತ್ತದೆಯೋ ಅವುಗಳಿಗೆ "ಸಿರಾ" ಎಂದು ಹೇಳುತ್ತಾರೆ. ಸಿರಗಳು ಆಕುಂಚನ ಪ್ರಸಾರಣಾದಿ ಕ್ರಿಯೆಗಳಿಂದ, ಶರೀರ ದಲ್ಲಿ ರಕ್ತಾದಿಗಳನ್ನು ಎಲ್ಲ ಕಡೆಗೆ ಪಸರಿಸುವಂತೆ ಮಾಡುತ್ತವೆ. ಸಿರಗಳ ಮುಖಾಂತರ ದೇಹದಲ್ಲಿ ಸಂಚರಿಸುವ ರಕ್ತಾದಿಗಳಿಂದ, ದೇಹವು ಅಭಿವೃದ್ಧಿ ಹೊಂದಿ ಪೋಷಿತವಾಗುತ್ತದೆ. ಮರದ ಎಲೆಗಳಲ್ಲಿರುವ ಸಿರಗಳ ಜಾಳಿಗೆ ಯಷ್ಟು ಸೂಕ್ಷ್ಮವಾಗಿಯೂ, ವ್ಯಾಪಕವಾಗಿಯೂ, ದೇಹವನ್ನು ಸಿರಗಳು ವ್ಯಾಪಿಸಿಕೊಂಡಿರುತ್ತವೆ ಸಿರಗಳ ಮೂಲವು ನಾಭಿಯಾಗಿರುತ್ತದೆ. ನಾಭಿ ಯಿಂದಲೇ ಸಿರಗಳು ಹೊರಟು ಸಮಗ್ರದೇಹವನ್ನು ಪಸರಿಸಿಕೊಂಡಿರುತ್ತವೆ. ದೇಹದ ಮೇಲ್ಭಾಗ ಕೆಳಗೆ ಎಡಬಲ ಪಾರ್ಶ್ವಗಳಲ್ಲಿ ಸಮಗ್ರ ವ್ಯಾಪಿಸಿರುವ ಸಿರಗಳು, ನಾಭಿಯಿಂದಲೇಹೊರಟಿರುತ್ತವೆ ಆದ್ದರಿಂದ ಸಿರಗಳಿಗೆ ನಾಭಿಯೇ ಮೂಲವೆಂದು ಹೇಳುತ್ತಾರೆ

ಯಾವತ್ಯಸ್ತು ಸಿರಾಃಕಾಯೇಸಂಭವಂತಿಶರೀರಿಣಾಂ ॥
ನಾಭ್ಯಾಂ ಸರ್ವಾನಿಬದ್ಧಾಸ್ತಾಃ ಪ್ರತನ್ವಂತಿಸಮಂತತಃ ॥೪॥
ನಾಭಿಸ್ಥಾಃ ಪ್ರಾಣಿನಾಂ ಪ್ರಾಣಾಃ ಪ್ರಾಣಾನ್ನಾಭಿರ್ವ್ಯಪಾಶ್ರಿತಾ
ಸಿರಾಭಿರಾವೃತಾನಾಭಿಶ್ಚಕ್ರನಾಭಿರಿವಾರಕೈಃ ॥

ಮನುಷ್ಯನ ದೇಹದಲ್ಲಿ ಎಷ್ಟು ಸಿರಗಳಿರುತ್ತವೆಯೋ ಅವು ನಾಭಿಯಲ್ಲಿ ನಿಬದ್ಧವಾಗಿ ಎಲ್ಲ ಕಡೆಗೆ ಸುತ್ತಲೂ ಪಸರಿಸುತ್ತವೆ. ಪ್ರಾಣಿಗಳ ಪ್ರಾಣವು ನಾಭಿಯನ್ನಾಶ್ರಯಿಸಿಕೊಂಡಿರುತ್ತವೆ. ಪ್ರಾಣಗಳನ್ನು ನಾಭಿಯು ಆಶ್ರಯಿಸಿ ಇರುತ್ತದೆ. ಪ್ರಾಣವು ಹೃದಯದಲ್ಲಿರುತ್ತದೆಂದು ಹೇಳಿದ್ದಾರೆ. ಪುನಃ ಈಗ ನಾಭಿಯಲ್ಲೆಂದು ಪ್ರತಿಪಾದಿಸುತ್ತಾರೆ. ಇದರಿಂದ ಸ್ಥಾನ ವಿಷಯದಲ್ಲಿ ಹೀಗೇಕೆಂದು ಆಕ್ಷೇಪಬರುತ್ತದೆ. ಹೃದಯಾದಿಗಳಲ್ಲಿ ಪ್ರಾಣಸ್ಥಾನವಾದ್ದರಿಂದ ಹೇಗೆ ಮಹತ್ವವಿರುವದೋ, ಅದರಂತೆ ನಾಭಿಯಲ್ಲಿರುವ ಸಿರಗಳನ್ನಾಶ್ರಯಿಸಿ ಪ್ರಾಣವು ಸಂಚರಿಸುವದರಿಂದ ಪ್ರಾಣಾಧಾರಕ ಸ್ಥಾನಗಳಷ್ಟೇಮುಖ್ಯವೆಂದು

ಅಭಿಪ್ರಾಯವಾಗಿರುತ್ತದೆ, ಇಲ್ಲಿ ಸಿರಾ ವಿಷಯ ಪ್ರತಿಪಾದನೆ ಇರುವದರಿಂದ ನಾಭಿ ಸ್ಥಾನಗಳಲ್ಲಿಯ ಸಿರಗಳನ್ನಾಶ್ರಯಿಸಿ ಪ್ರಾಣವಿರುತ್ತದೆಂದು ತಿಳಿಯಬೇಕು. ಸಿರಗಳು ಪ್ರಾಣಗಳಿಗೆ ಆಶ್ರಯವಾಗಿ ಧಾರಣೆಯನ್ನು ಮಾಡುವದರಿಂದ ಸಿರಗಳ ಮಹತ್ವವನ್ನು ಸೂಚಿಸಲು ಹೀಗೆ ಹೇಳಿದ್ದಾರೆ. ರಥಚಕ್ರದ ನಾಭಿಯು ಸುತ್ತಲಿನ ಭಾಗಗಳಿಂದ (ಹಲ್ಲುಗಳಿಂದ) ಆವೃತವಾಗಿದೆಯೋ, ಅದರಂತೆ ಸಿರಗಳಿಂದ ನಾಭಿಯು ಸುತ್ತಲೂ ವ್ಯಾಪಿಸಲ್ಪಟ್ಟಿರುತ್ತದೆ.

ಸಿರಾವಿಭಾಗ ವರ್ಣನೆ

ತಾಸಾಂ ಮೂಲ ಸಿರಾಶ್ಚತ್ವಾರಿಂಶತ್; ತಾಸಾಂ ವಾತವಾಹಿನ್ಯೋದಶ, ಪಿತ್ತವಾಹಿನ್ಯೋದಶ, ಕಫವಾಹಿನ್ಯೋದಶ, ದಶ ರಕ್ತವಾಹಿನ್ಯಃ ॥ ತಾಸಾಂತುವಾತವಾಹಿನೀನಾಂ ವಾತಸ್ಥಾನ ಗತಾನಾಂ ಪಂಚ ಸಪ್ತತಿಶತಂಭವತಿ, ತಾವತ್ಯ ಏವಪಿತ್ತವಾಹಿನ್ಯಃ ಪಿತ್ತ ಸ್ಥಾನೇ, ಕಫವಾಹಿನ್ಯಶ್ಚ ಕಫಸ್ಥಾನೇ, ರಕ್ತವಾಹಿನ್ಯಶ್ಚಯಕೃತ್ ಪ್ಲೀಹ್ನೋಃ॥ ಏವಮೇತಾನಿ ಸಪ್ತಶಿರಾಶತಾನಿ॥

(ಸುಶ್ರುತ॥ ಶಾರೀರ॥ ಅ ೬ ಸೂ ೬)

ನಾಭಿಯಿಂದ ಸಿರಗಳು ಹೊರಟಿರುತ್ತವೆಂದು ಹಿಂದೆ ಹೇಳಿರುತ್ತದೆ ದೇಹದಲ್ಲಿ ಬಹು ವಿಸ್ತಾರವಾಗಿ ಎಲ್ಲ ಕಡೆಯಲ್ಲೆ ಜಾಳಿಗೆಯಂತೆ ಪಸರಿಸಿರುವ ಸಿರಗಳಲ್ಲಿ, ಮುಖ್ಯ ವ ಮೂಲ ಸಿರಗಳೆಂದರೆ (೪೦) ಇರುತ್ತವೆ. (೧) **ವಾತ ವಾಹಿನೀಸಿರಗಳು,** (೨) **ಪಿತ್ತವಾಹಿನೀಸಿರಗಳು,** (೩) **ಕಫವಾಹಿನೀ ಸಿರಗಳು,** (೪) **ರಕ್ತ ವಾಹಿನೀ ಸಿರಗಳು,** ಇವು ಪ್ರತಿಯೊಂದು ಸಿರಗಳು ಹತ್ತರಂತೇ ಒಟ್ಟು (೪೦) ಸಿರಗಳಾಗುತ್ತವೆ

ವಾತವಾಹಿನೀ ಸಿರಗಳು ವಾತ ಸ್ಥಾನಗಳಲ್ಲಿ ಹೋದ ನಂತರ ವಿಸ್ತಾರವಾಗಿ (೧೭೫) ಆಗುತ್ತವೆ. ಇದರಂತೇ **ಪಿತ್ತ ಕಫ ರಕ್ತ ಸ್ಥಾನಗಳಲ್ಲಿ,** ಆವಾವ ಸಿರಗಳು ಹೋದ ನಂತರ ವಿಸ್ತಾರವಾಗಿ ಪ್ರತಿಯೊಂದೂ

(೧೭೫) ಸಂಖ್ಯೆಯುಳ್ಳವುಗಳಾಗುತ್ತವೆ ವಾತ ಪಿತ್ತ ಕಫ ರಕ್ತ ವಾಹಿನೀ ಸಿರಗಳ ವಿಸ್ತಾರವಾಗಿ ಪಸರಿಸಿದ ಅಂಕೆಗಳನ್ನೂ ಕೂಡಿಸಿದರೆ (೭೦೦) ಪ್ರತ್ಯೇಕ ಸಿರಗಳಾಗುತ್ತವೆ ವಾತವಾಹಿನ್ಯಾದಿ ಪ್ರತಿಯೊಂದು ಸಿರಗಳು ಮೂಲದಲ್ಲಿ (೧೦) ಇದ್ದು, ನಂತರ ತಮ್ಮ ಸ್ಥಾನಗಳಲ್ಲಿ ವಿಸ್ತಾರವಾಗಿ ವ್ಯಾಪಿಸಿದ್ದರಿಂದ (೧೭೫) ಆಗುತ್ತವೆಂದು ತಿಳಿಯಬೇಕು ಹೀಗೆ ವಿಸ್ತಾರವಾಗಿ ವ್ಯಾಪಿಸಿರುವ ಎಲ್ಲ ಸಿರಗಳ ಸಂಖ್ಯೆಗಳನ್ನು ಕೂಡಿಸಲು ಪೂರ್ವೋಕ್ತ ದೇಹದಲ್ಲಿಯ ಸಿರಗಳಾಗುತ್ತವೆ.

೧ **ವಾತವಾಹಿ ಸಿರಗಳ ಸ್ಥಾನ** ಪಕ್ವಾಶಯ ಗುದ ಭಾಗಗಳಲ್ಲಿ ಮತ್ತು ನಾಭಿ, ಹೃದಯ, ಕಂಠ, ಶಿರ, ಶ್ರವಣೇಶಗಳಲ್ಲಿ, ಸಮಗ್ರ ಶರೀರದಲ್ಲಿ, ಇವು (೫) ವಾಯುವಿನ ಸ್ಥಾನಗಳಾಗಿರುತ್ತವೆ ಮೊದಲು ಹೇಳಿರುವ ಸ್ಥಾನಗಳು ಮುಖ್ಯವಾಗಿ ವಾಯುವಿನ ಸ್ಥಾನವೆಂದು ಹೇಳಲ್ಪಟ್ಟಿರುತ್ತವೆ ವಾತವಾಹಿ ಸಿರಗಳು ತಮ್ಮ ಸ್ಥಾನಗಳಲ್ಲಿ ವಿಸ್ತಾರವಾಗಿ ಪಸರಿಸುತ್ತವೆ ಇದರಂತೆ ಮುಂದಿನ ಎಲ್ಲವುಗಳೂ ತಮ್ಮಸ್ಥಾನಗಳಲ್ಲಿ ಪಸರಿಸುತ್ತವೆಂದು ತಿಳಿಯಬೇಕು.

೨ **ಪಿತ್ತವಾಹಿ ಸಿರಗಳ ಸ್ಥಾನ** ಪಕ್ವಾಶಯ ಆಮಾಶಯಗಳ ಮಧ್ಯಭಾಗದಲ್ಲಿ ಪಿತ್ತದ ಮುಖ್ಯ ಸ್ಥಾನವಿರುತ್ತದೆ. ಯಕೃತ್ ಪ್ಲೀಹೆಗಳಲ್ಲಿ, ಹೃದಯ, ದೃಷ್ಟಿ, ತ್ವಚಾ, ಇವುಗಳು ಪಿತ್ತಕ್ಕೆ ಆಶ್ರಯ ಸ್ಥಾನವಾಗಿರುತ್ತವೆ. ರಕ್ತಕ್ಕೆ ಯಕೃತ್ ಪ್ಲೀಹೆಗಳು ಆಶ್ರಯವೆಂದೂ, ಪಿತ್ತಕ್ಕೂ ಅವುಗಳೇ ಆಶ್ರಯವೆಂಬುದಾಗಿಯೂ, ಸುಶ್ರುತದಲ್ಲಿ ಹೇಳಲ್ಪಟ್ಟಿರುತ್ತವೆ. ರಕ್ತವಾಹಿ ಸಿರಗಳು ಅಲ್ಲಿ ಪಸರಿಸಿ ಅಲ್ಲಿಯೇ ರಕ್ತವಾಗಿ ಪರಿಣಮಿಸುವದರಿಂದ ಹೀಗೆ ಹೇಳಿದ್ದಾರೆಂದು ಹಿಂದೆ ವಿವರಿಸಿರುತ್ತದೆ ಆದ್ದರಿಂದ ಪಿತ್ತವಾಹಿ ಸಿರಗಳ ಸ್ಥಾನವೆಂದು ಹೇಳಲು ಅಡ್ಡಿಯಿಲ್ಲ. ಸುಶ್ರುತದಲ್ಲಿ ರಕ್ತವಾಹಿ ಸಿರಗಳಿಗೆ ಯಕೃತ್ ಪ್ಲೀಹ ಮೂಲವೆಂದು ಹೇಳುವದು ತಪ್ಪೆಂದು ತಿಳಿಯಬಾರದು. ರಸವು ಅಲ್ಲಿಯೇ ರಕ್ತವಾಗುವದರಿಂದ ಹೀಗೆ ಹೇಳಿದ್ದಾರೆ.

೩ **ಕಫವಾಹಿ ಸಿರಗಳ ಸ್ಥಾನ** ಆಮಾಶಯ ಎದೆಗಳಲ್ಲಿ, ಶಿರಸ್ಸು, ಕಂಠ, ಜಿಹ್ವಾಮೂಲ, ಸಂಧಿಗಳು, ಇವುಗಳಲ್ಲಿ ಕಫಕ್ಕೆ ಆಶ್ರಯ ಸ್ಥಾನಗಳಿರುತ್ತವೆ. ಕಫವಾಹಿ ಸಿರಗಳು ಇವುಗಳಲ್ಲಿ ವಿಶೇಷ ವ್ಯಾಪಿಸಿರುತ್ತವೆ.

(೪) **ರಕ್ತವಾಹಿ ಸಿರಗಳ ಸ್ಥಾನ** ಯಕೃತ್ ಪ್ಲೀಹೆಗಳಲ್ಲಿ ಮತ್ತು ರಕ್ತಾಶಯಗಳಲ್ಲಿ ಮುಖ್ಯ ಸ್ಥಾನವಾಗಿರುತ್ತವೆ. ಸಮಗ್ರ ದೇಹದಲ್ಲಿ ಕೂದಲಿನ ಎಳೆಗಳ ಪ್ರಮಾಣ ಪರ್ಯಂತ ರಕ್ತವಾಹಿ ಸಿರಗಳು ವ್ಯಾಪಿಸಿರುತ್ತವೆ ಕೂದಲುಗಳಷ್ಟು ಸೂಕ್ಷ್ಮವಾದ ರಕ್ತವಾಹೀ ಸಿರಗಳಿರುತ್ತವೆಂಬಭಿಪ್ರಾಯವು. ವಾತ ಪಿತ್ತ ಕಫ ರಕ್ತಗಳನ್ನು ಒಯ್ಯುವ ಸಿರಗಳು ಸ್ವ ಸ್ವಾನ ವಿಶೇಷಗಳಲ್ಲಿ ವಿಸ್ತಾರವಾಗಿ ದೇಹದಲ್ಲಿ (೭೦೦) ಸಿರಗಳಾಗಿರುತ್ತವೆ.

ಸಕ್ಥಿಗತ ಸಿರಗಳು

ತತ್ರವಾತವಾಹಿನ್ಯಃ ಸಿರಾ ಏಕಸ್ಮಿನ್ ಸಕ್ಥ್ನಿ ಪಂಚವಿಂಶತಿಃ;
ಏತೇನೇತರ ಸಕ್ಥಿ ಬಾಹೂಚ ವ್ಯಾಖ್ಯಾತೌ ॥

(ಸುಶ್ರುತ॥ ಶಾರೀರ॥ ಅ ೭ ಸೂ ೭)

ವಾತವಾಹಿನೀ ಸಿರಗಳು ಒಂದು ಕಾಲಿನಲ್ಲಿ (೨೫) ಇರುತ್ತವೆ. ಇದರಂತೆ ಎರಡೂ ಕಾಲು ಕೈಗಳಲ್ಲಿ ಕೂಡಿ (೧೦೦) ಸಿರಗಳಾಗುತ್ತವೆ. ಕೇವಲ ವಾತವಾಹೀ ಸಿರಗಳ ಶಾಖಾಪ್ರದೇಶಗಳಲ್ಲಿಯ ಸಂಖ್ಯೆಯಾಗಿರುತ್ತದೆ. ವಾತ ಪಿತ್ತ ಕಫ ರಕ್ತವಾಹೀ ಸಿರಗಳೆಲ್ಲವೂ ಕೂಡಿ ಶಾಖಾದಲ್ಲಿ (೪೦೦) ಇರುತ್ತವೆ.

ಕೋಷ್ಠದಲ್ಲಿಯ ಸಿರಗಳು

ವಿಶೇಷತಸ್ತು ಕೋಷ್ಠೇಚತುಸ್ತ್ರಿಂಶತ್; ತಾಸಾಂಗುದಮೇಢ್ರಾ
ಶ್ರಿತಾಃ ಶೋಣ್ಯಾಮುಷ್ಕೌ, ದ್ವೇ ದ್ವೇ ಪಾರ್ಶ್ವಯೋಃ, ಷಟ್
ಪೃಷ್ಠೇ, ತಾವತ್ಯ ಏವೋದರೇ, ದಶವಕ್ಷಸಿ ॥

(ಸು॥ ಶಾ॥ ಅ ೭ ಸೂ ೭)

ಕೋಷ್ಠಪ್ರದೇಶದಲ್ಲಿಯ (೩೪) ಸಿರಗಳ ವಿವರಣೆಯು. **ಗುದ, ಮೇಢ್ರ** (ಶಿಶ್ನ), **ಶ್ರೋಣಿ** (ಟೊಂಕ), ಇವುಗಳಲ್ಲಿ ಒಟ್ಟು (೮) ಸಿರಗಳಿರುತ್ತವೆ. **ಪಾರ್ಶ್ವ** (ಎಡಬಲ ಪಕ್ಕಗಳು), ಇವುಗಳಲ್ಲಿ ಎರಡೆರಡರಂತೆ ಒಟ್ಟು (೪) ಸಿರಗಳು. **ಪೃಷ್ಠ** (ಬೆನ್ನು) ಭಾಗಗಳಲ್ಲಿ (೬) ಸಿರಗಳಿರುತ್ತವೆ.

ಉದರ (ಹೊಟ್ಟೆ) ಪ್ರದೇಶದಲ್ಲಿ (೬) ಸಿರಗಳು **ವಕ್ಷಸ್ಸು** (ಎದೆ) ಸ್ಥಾನದಲ್ಲಿ ಸಿರಗಳು (೧೦) ಇರುತ್ತವೆ.

ಗುದಾದಿಭಾಗ (೮), **ಪಾರ್ಶ್ವ** (೪), **ಪೃಷ್ಠ** (೬), **ಉದರ**(೬), **ವಕ್ಷಸ್ಸು** (೧೦), ಮೊದಲಾದ ಭಾಗಗಳಲ್ಲಿರುವ ಒಟ್ಟು ಸಿರಗಳು (೩೪) ಇರುತ್ತವೆ ಇದು ಕೇವಲ ವಾತವಾಹೀ ಸಿರಗಳ ಸಂಖ್ಯೆಯಾಗಿರುತ್ತದೆ. ವಾತ ಪಿತ್ತ ಕಫ ರಕ್ತವಾಹೀ ಸಿರಗಳೆಲ್ಲ ಕೂಡಿ ಒಟ್ಟು ಕೋಷ್ಠ ಭಾಗದಲ್ಲಿ (೧೩೬) ಸಿರಗಳು ಇರುತ್ತವೆ.

ಜತ್ರೂರ್ಧ್ವ ಸಿರಗಳು

ಏಕಚತ್ವಾರಿಂಶತ್ ಜತ್ರುಣಊರ್ಧ್ವಂ; ತಾಸಾಂಚತುರ್ದಶ ಗ್ರೀವಾಯಾಂ, ಕರ್ಣಯೋಶ್ಚತಸ್ರಃ,ನವಜಿಹ್ವಾಯಾಂ,ಷಣ್ ನಾಸಿಕಾಯಾಂ, ಅಷ್ಟೌನೇತ್ರಯೋಃ ॥ ಏವಮೇತತ್ ಪಂಚ ಸಪ್ತತಿಶತಂ ವಾತವಾಹೀನಾಂ ಸಿರಾಣಾಂ ವ್ಯಾಖ್ಯಾತಂ ಭವತಿ ಏಷಏವ ವಿಭಾಗಃ ಶೇಷಾಣಾಮಪಿ ॥

ಜತ್ರೂರ್ಧ್ವ ಭಾಗಗಳಲ್ಲಿ (೪೧) ಸಿರಾಗಳಿರುತ್ತವೆ. ಗ್ರೀವಾ(ಕುತ್ತಿಗೆ) ಸ್ಥಾನದಲ್ಲಿ (೧೪) ಸಿರಗಳಿರುತ್ತವೆ. **ಕರ್ಣ** (ಕಿವಿ) ಪ್ರದೇಶಗಳಲ್ಲಿ (೪) ಸಿರಗಳಿರುತ್ತವೆ. **ಜಿಹ್ವಾ** (ನಾಲಿಗೆ) ಭಾಗದಲ್ಲಿ (೯) ಸಿರಗಳು. **ನಾಸಿಕಾ** (ಮೂಗು) ಈ ಸ್ಥಾನದಲ್ಲಿ (೬) ಸಿರಗಳಿರುತ್ತವೆ. **ನೇತ್ರ** (ಕಣ್ಣುಗಳು) ಈ ಸ್ಥಾನಗಳಲ್ಲಿ (೮) ಸಿರಗಳಿರುತ್ತವೆ.

ಗ್ರೀವಾ (೧೪), **ಕರ್ಣ** (೪), **ಜಿಹ್ವಾ** (೯), **ನಾಸಿಕಾ** (೬), **ನೇತ್ರ** (೮), ಈ ಮೊದಲಾದ ಭಾಗಗಳಲ್ಲಿ ಕೂಡಿ ಒಟ್ಟು (೪೧) ವಾತವಾಹಿ ಸಿರಗಳು ಜತ್ರೂರ್ಧ್ವದಲ್ಲಿರುತ್ತವೆ. ಇವುಗಳಷ್ಟೇ ಉಳಿದ ಪ್ರತಿಯೊಂದರ ಸಂಖ್ಯೆಯೂ ಇರುತ್ತದೆ. ಆದರೆ ಪಿತ್ತವಹಾದಿ ಸಿರಗಳು **ಕಣ್ಣುಗಳಲ್ಲಿ** (೧೦), **ಕಿವಿಗಳಲ್ಲಿ** (೨), ಇರುತ್ತವೆ. ಒಟ್ಟು ಕೇವಲ ವಾತವಾಹಿ ಸಿರ

ಗಳಷ್ಟೇ ಕೂಡಿ ದೇಹದಲ್ಲಿ (೧೭೫) ಇರುತ್ತವೆ. ಉಳಿದ ಪಿತ್ತವಾಹಿನ್ಯಾದಿ ಸಿರಗಳಾದರೂ ಇದರಷ್ಟೇ ಇರುತ್ತವೆ. ಜತ್ರೂರ್ಧ್ವ ಕೆಲ ಪ್ರದೇಶಗಳಲ್ಲಿ ಹೆಚ್ಚು ಕಡಿಮೆ ಇರುತ್ತವೆ. ಅವುಗಳನ್ನು ಕ್ರಮಶಃ ವಿವರಿಸುತ್ತಾರೆ ವಾತಾದಿ ಎಲ್ಲ ಸಿರಗಳು ಕೂಡಿ ಜತ್ರೂರ್ಧ್ವ ಭಾಗಗಳಲ್ಲಿ (೧೬೪) ಇರುತ್ತವೆ.

ವಿಶೇಷ

ವಿಶೇಷತಸ್ತು ಪಿತ್ತವಾಹಿನ್ಯೋ ನೇತ್ರಯೋರ್ದಶ, ಕರ್ಣಯೋರ್ದ್ವೇ; ಏವಂ ರಕ್ತವಹಾಃ ಕಫವಹಾಶ್ಚ ॥ ಏವಮೇತಾನಿ ಸಪ್ತ ಸಿರಾಶತಾನಿ ಸನಿಭಾಗಾನಿವ್ಯಾಖ್ಯಾತಾನಿ ॥

(ಸುಶ್ರುತ॥ ಶಾರೀರ॥ ಅ ೭ ಸೂ ೭)

ಪಿತ್ತ ಕಫರಕ್ತವಹಾಸಿರಗಳು ನೇತ್ರ ಕರ್ಣಗಳಲ್ಲಿ ಭಿನ್ನವಾಗಿರುತ್ತವೆ ವಿಶೇಷವಾಗಿ ಪಿತ್ತವಾಹಿ ಸಿರಗಳು ಕಣ್ಣುಗಳಲ್ಲಿ (೧೦) ಇರುತ್ತವೆ. ಕಿವಿಗಳಲ್ಲಿ (೨) ಸಿರಗಳಿರುತ್ತವೆ. ಇದರಂತೇ ಕಫರಕ್ತವಹಾ ಸಿರಗಳೂ ಇರುತ್ತವೆಂದು ತಿಳಿಯಬೇಕು. ದೇಹದಲ್ಲಿ ಎಲ್ಲ ಭಾಗಗಳಲ್ಲಿಯೂ ವಾತವಾಹಿಸಿರಗಳಂತೆಯೇ ಉಳಿದವುಗಳಿರುತ್ತವೆ. ಆದರೆ ಜತ್ರೂರ್ಧ್ವದಲ್ಲಿ ಕಣ್ಣು ಕಿವಿ ಭಾಗಗಳಲ್ಲಿ ಪಿತ್ತ ಕಫರಕ್ತವಹಾಸಿರಗಳು ಭಿನ್ನವಿರುವದರಿಂದ ವಿವರಿಸಿದ್ದಾರೆ. ಹೀಗೆ ದೇಹದಲ್ಲಿ (೭೦೦) ಸಿರಗಳನ್ನು ಆವಾವ ವಿಭಾಗಗಳಲ್ಲಿ ಪ್ರತ್ಯೇಕವಾಗಿ ವಿವರಿಸಿದ್ದಾರೆ.

(೧) ವಾತವಹಾಸಿರಗಳ ಕಾರ್ಯವು

ಕ್ರಿಯಾಣಾಮುಪ್ರತೀಘಾತಮುನ್ಮೋಹಂಬುದ್ಧಿಕರ್ಮಣಾಂ ॥
ಕರೋತ್ಯನ್ಯಾನ್ಗುಣಾಂಶ್ಚಾಪಿ·ಸ್ವಾಃ ಸಿರಾಃ ಪವನಶ್ಚರನ್ ॥
ಯದಾತುಕುಪಿತೋವಾಯುಃ ಸ್ವಾಸಿರಾಃ ಪ್ರತಿಪದ್ಯತೆ ॥
ತದಾಸ್ಯವಿವಿಧಾರೋಗಾಜಾಯಂತೇ ವಾತಸಂಭವಾಃ ॥

(ಸುಶ್ರುತ॥ ಶಾರೀರ॥ ಅ ೭ ಶ್ಲೋ ೯)

ವಾಯುವು ತನ್ನ ಸ್ಥಾನಗಳಲ್ಲಿರುವ ಸಿರಗಳಲ್ಲಿ ಸಂಚರಿಸತಕ್ಕದ್ದಾಗಿ ಸಮಸ್ಥಿತಿಯಲ್ಲಿದ್ದು, ದೇಹದಲ್ಲಿ ಯಾವ ಕ್ರಿಯೆಗಳೂ ತಡೆಯಾಗದಂತೇ ಅಥವಾ ದೇಹವು ಸರಿಯಾಗಿರುವದರಿಂದ ಯಾವ ಕೆಲಸಗಳಲ್ಲಿಯೂ ಅಡ್ಡಿಯಾಗದಂತೆಯೂ, ಬುದ್ಧಿಕಾರ್ಯಾದಿಗಳಲ್ಲಿ ಕೂಡ ಸಮರ್ಥವಾದ ಭ್ರಮರಹಿತ ನಿಶ್ಚಯಾತ್ಮಕ ಬುದ್ಧಿಯನ್ನುಂಟು ಮಾಡುತ್ತದೆ. ದೇಹನಿರ್ವಹಣೆಯನ್ನು ಸಮರ್ಪಕವಾಗಿಯೂ ಮತ್ತು ಬುದ್ಧಿಯನ್ನು ಸಹಯೋಗ್ಯ ಸ್ಥಿತಿಯಲ್ಲಿರುವಂತೆಯೂ, ಸಮವಾಗಿರುವ ವಾಯುವು ನಿರ್ವಹಿಸುತ್ತದೆ. ಇನ್ನೂ ಅನೇಕ ಗುಣಗಳನ್ನುಂಟು ಮಾಡುವಂಥದುಸಹ ಆಗಿರುತ್ತದೆ ವಾಯುವು ಪ್ರಕೋಪ ಹೊಂದಿ ತನ್ನ ಸ್ಥಾನದ ಸಿರಗಳಲ್ಲಿ ಸಂಚರಿಸುತ್ತ, ವಿವಿಧವಾದ ವಾತದಿಂದುತ್ಪನ್ನವಾಗುವ ರೋಗಗಳನ್ನುಂಟು ಮಾಡುತ್ತದೆ.

(೨) ಪಿತ್ತವಹಸಿರಗಳ ಕಾರ್ಯವು

ಭ್ರಾಜಿಷ್ಣುತಾಮುನ್ನರುಚಿಮುಗ್ನಿದೀಪ್ತಿಮುರೋಗತಾಮ್ ॥
ಸಂಸರ್ಪತ್ಸ್ವಾಃ ಸಿರಾಃ ಪಿತ್ತಂಕುರ್ಯಾಚ್ಚಾನ್ಯಾನ್ ಗುಣಾನಪಿ॥
ಯದಾಪ್ರಕುಪಿತಂ ಪಿತ್ತಂ ಸೇವತೇಸ್ವವಹಾಃ ಸಿರಾಃ॥
ತದಾಸ್ಯವಿವಿಧಾರೋಗಾಜಾಯಂತೇ ಪಿತ್ತಸಂಭವಾಃ॥

(ಸುಶ್ರುತ॥ ಶಾರೀರ॥ ಅ ೭ ಶ್ಲೋ ೧೧)

ಪಿತ್ತವು ತನ್ನ ಸ್ಥಾನದಲ್ಲಿಯ ಸಿರಗಳಲ್ಲಿ ಸಂಚರಿಸತಕ್ಕದ್ದಾಗಿ ಸಮಸ್ಥಿತಿಯಲ್ಲಿದ್ದು, ದೇಹದಲ್ಲಿ ಕಾಂತಿಯನ್ನೂ ಅನ್ನ ರುಚಿಯನ್ನೂ (ಅನ್ನಾಪೇಕ್ಷೆ), ಜಠರಾಗ್ನಿ ಪ್ರದೀಪವಾಗುವಂತೆಯೂ ಮಾಡುತ್ತದೆ. ರೋಗ ರಹಿತ ನಿರೋಗ ಸ್ಥಿತಿಯನ್ನುಂಟು ಮಾಡುತ್ತದೆ. ಸಮಸ್ಥಿತಿಯಲ್ಲಿ ಸ್ವಸಿರಗಳಲ್ಲಿ ಸಂಚರಿಸುವ ಪಿತ್ತವು ಇನ್ನೂ ಅನೇಕ ಗುಣಗಳನ್ನುಂಟು ಮಾಡುತ್ತದೆ. ಪಿತ್ತವು ಪ್ರಕೋಪ ಹೊಂದಿ ತನ್ನ ಸ್ಥಾನದಲ್ಲಿ ಸಂಚರಿಸುತ್ತ ದೇಹದಲ್ಲಿ ನಾನಾತರವಾದ ಪಿತ್ತಜ ರೋಗಗಳನ್ನುಂಟು ಮಾಡುತ್ತದೆ

(೩) ಕಫವಾಹಿಸಿರಗಳ ಕಾರ್ಯವು

ಸ್ನೇಹಮುಂಗೇಷುಸಂಧಿನಾಂ ಸ್ಥೈರ್ಯಂ ಬಲಮುದೀರ್ಣತಾಂ॥
ಕರೋತ್ಯನ್ಯಾನ್‌ಗುಣಾಂಶ್ಚಾಪಿಬಲಾಸಃ ಸ್ವಾಃ ಸಿರಾಶ್ಚರನ್॥
ಯದಾತುಕುಪಿತಃ ಶ್ಲೇಷ್ಮಾಸ್ವಾಃ ಸಿರಾಃ ಪ್ರತಿಪದ್ಯತೇ॥
ತದ್ಯಾಸ್ಯವಿವಿಧಾರೋಗಾಜಾಯಂತೇ ಶ್ಲೇಷ್ಮಸಂಭವಾಃ॥
(ಸುಶ್ರುತ॥ ಶಾರೀರ॥ ೪ ೭ ಶ್ಲೋ ೧೩)

ಕಫವು ಸಮಸ್ಥಿತಿಯಲ್ಲಿದ್ದು ತನ್ನ ಸ್ಥಾನಗಳಲ್ಲಿರುವ ಸಿರಗಳಲ್ಲಿ ಸಂಚರಿಸುತ್ತಾ, ಅವಯವಗಳಲ್ಲಿ ಸ್ನಿಗ್ಧತೆಯನ್ನೂ ಸಂಧಿಗಳಲ್ಲಿ ಸ್ಥೈರ್ಯವನ್ನೂ ಬಲದ ಹೆಚ್ಚಳಿಕೆಯನ್ನೂ ಉಂಟುಮಾಡುತ್ತದೆ ಸಮಸ್ಥಿತಿಯಲ್ಲಿ ಸ್ವಸ್ಥಾನ ಸಿರಗಳಲ್ಲಿ ಸಂಚರಿಸುವ ಕಫವು ಇನ್ನೂ ಅನೇಕ ವಿಶೇಷ ಗುಣಗಳನ್ನುಂಟು ಮಾಡುತ್ತದೆ. ಪ್ರಕೋಪವನ್ನು ಹೊಂದಿದ ಕಫವು ಸಿರಗಳ ಮುಖಾಂತರ ದೇಹದಲ್ಲಿ ಸಂಚರಿಸುತ್ತ ವಿವಿಧವಾದ ಶ್ಲೇಷ್ಮಜ ರೋಗಗಳನ್ನುಂಟು ಮಾಡುತ್ತದೆ.

(೪) ರಕ್ತವಾಹಿಸಿರಗಳ ಕಾರ್ಯವು

ಧಾತೂನಾಂ ಪೂರಣಂ ವರ್ಣಂ ಸ್ಪರ್ಶಜ್ಞಾನಮಸಂಶಯಮ್॥
ಸ್ವಾಃ ಸಿರಾಃ ಸಂಚರದ್ರಕ್ತಂಕುರ್ಯಾಚ್ಚಾನ್ಯಾನ್‌ಗುಣಾನಪಿ॥
ಯದಾತುಕುಪಿತಂ ರಕ್ತಂ ಸೇವತೇಸ್ವವಹಾಃ ಸಿರಾಃ॥
ತದಾಸ್ಯವಿವಿಧಾರೋಗಾಜಾಯಂತೇ ರಕ್ತಸಂಭವಾಃ॥
(ಸುಶ್ರುತ॥ ಶಾರೀರ॥ ೪ ೭ ಶ್ಲೋ ೧೫)

ರಕ್ತವು ಸಮ ಸ್ಥಿತಿಯಲ್ಲಿದ್ದು ತನ್ನ ಸ್ಥಾನಗಳಲ್ಲಿರುವ ಸಿರಗಳಲ್ಲಿ ಸಂಚರಿಸುತ್ತಾ, ಶರೀರ ಧಾತುಗಳ ಹೆಚ್ಚುವಿಕೆಯನ್ನೂವರ್ಣಕಾಂತಿಗಳನ್ನೂ ಸ್ಪರ್ಶಜ್ಞಾನವನ್ನೂ ಮಾಡುತ್ತದೆ. ಯೋಗ್ಯ ಸ್ಥಿತಿಯಲ್ಲಿರುವ ರಕ್ತವು ಇನ್ನೂ ಅನೇಕ ಗುಣಗಳನ್ನುಂಟುಮಾಡುತ್ತದೆ ಪ್ರಕೋಪಹೊಂದಿದ ರಕ್ತವು ಸ್ವಸಿರಗಳಲ್ಲಿ ಸಂಚರಿಸಿ ವಿವಿಧವಾದ ರಕ್ತಜ ರೋಗಗಳನ್ನುತ್ಪನ್ನಮಾಡುತ್ತದೆ.

ಸರ್ವ ವಹಾ ಸಿರಗಳು

ನಹಿವಾತಂ ಸಿರಾಃ ಕಾಶ್ಚಿನ್ನಪಿತ್ತಂ ಕೇವಲಂ ತಥಾ ॥
ಶ್ಲೇಷ್ಮಾಣಂ ವಾ ವಹಂತ್ಯೇತಾಅತಃ ಸರ್ವವಹಾಃ ಸ್ಮೃತಾಃ ॥

(ಸುಶ್ರುತ॥ ಶಾರೀರ॥ ಅ. ೭ ಶ್ಲೋ ೧೬)

ಸಿರಗಳು ಕೇವಲ ವಾತವನ್ನೇ ವಹನಮಾಡುವದಿಲ್ಲ. ಇದರಂತೇ ಕೇವಲ ಪಿತ್ತ ಕಫ ರಕ್ತಗಳನ್ನೇ ಪ್ರತ್ಯೇಕ ವಹಸ.ವ ಸಿರಗಳಿರುವದಿಲ್ಲ ಆದ್ದರಿಂದ ಸಿರಗಳು ಸರ್ವ ವಹಾ ಎಂದು ಹೇಳಲ್ಪಡುತ್ತವೆ ಆರ್ಥಾತ್ ಸಮಗ್ರ ದೇಹದಲ್ಲಿ ಪ್ರತಿಯೊಂದು ಭಾಗಗಳಲ್ಲಿ ಎಲ್ಲಿಯೂ ಬಿಡದೇ ವಾತ ಪಿತ್ತ ಕಫ ರಕ್ತಗಳು ವ್ಯಾಪಿಸಿಕೊಂಡಿರುವದರಿಂದ, ಸಿರಾ ಮಾರ್ಗವಾಗಿಯೇ ದೇಹದಲ್ಲಿ ಸಂಚರಿಸಬೇಕಾಗಿರುತ್ತದೆಯಾದ್ದರಿಂದ ಸಿರಗಳಲ್ಲಿಯೇ ಎಲ್ಲವುಗಳೂ ಚಲಿಸುತ್ತವೆ ಹೀಗೆ ವಾತಾದಿಗಳೆಲ್ಲವೂ ಸಿರಾ ಮಾರ್ಗವಾಗಿಯೇ ಸಂಚಾರ ಮಾಡುವದರಿಂದ ಸಿರಗಳು "ಸರ್ವವಹಾ" ಎಲ್ಲವುಗಳನ್ನು ಒಯ್ಯುವಂಥವುಗಳೆಂದು ಹೇಳಿದ್ದಾರೆ. ಇಲ್ಲಿ ಸಮಗ್ರ ದೇಹದಲ್ಲಿ ಪ್ರತಿಯೊಂದರ ವ್ಯಾಪಕತ್ವದಿಂದ ಹೀಗೆ ವಿವರಿಸಿದ್ದಾರೆ. ವಿಭಾಗಶಃ ವಾತಾದಿ ಸ್ಥಾನಗಳಲ್ಲಿ ಆವಾವ ಸಿರಗಳ ವಿಶೇಷ ಸ್ಥಿತಿಗಳನ್ನು ಹೇಳಿರುವದು, ಆಶ್ರಯ ಸ್ಥಾನ ಸ್ಥಿತಿಗಳನ್ನು ಬೋಧಿಸಲು ವಿವರಿಸಿದ್ದಾರೆ ಇದರಿಂದ ವಿರೋಧ ಸಂಭವಿಸುವದಿಲ್ಲ. ಯಾಕಂದರೆ ಸಮಗ್ರ ದೇಹದಲ್ಲಿ ವಾತಾದಿಗಳು ವ್ಯಾಪಕವಾಗಿರುವದರಿಂದ "ಸರ್ವವಹಾ" ಎಂದೂ, ಆಶ್ರಯ ಸ್ಥಾನ ಮತ್ತು ಸ್ಥಿತಿ ವಿಭಾಗಗಳಿಂದ "ವಾತವಹಾ" ಮೊದಲಾದ ಭೇದಗಳು ಸಮಂಜಸವಾಗಿರುತ್ತವೆ. ಪೂರ್ವದಲ್ಲಿ ವಾತವಹಾದಿ ಸಿರಗಳೆಂದು ಭೇದಮಾಡಿದ್ದಕ್ಕೆ ಇದು ವಿರೋಧವಾಗಿರುವದಿಲ್ಲವೆಂದು ತಿಳಿಯಬೇಕು. ಇದು ದೇಹದಲ್ಲಿ ವಾತಾದಿ ದೋಷಗಳು ಸಮ ಸ್ಥಿತಿಯಲ್ಲಿದ್ದಾಗಿನ "ಸರ್ವವಹಾ" ಸಿರಗಳ ವಿವರಣೆಯೆಂದು ತಿಳಿಯಬೇಕು. ಇದರಿಂದ. ರೋಗೋತ್ಪತ್ತಿಯಾಗದೇ ಆರೋಗ್ಯವಿರುತ್ತದೆ ದೋಷಗಳು ಪ್ರಕೋಪಹೊಂದಿ ಸಮಗ್ರದೇಹದ ಸರ್ವ ಸಿರಗಳಲ್ಲಿಯೂ ಸಂಚರಿಸುತ್ತವೆ. ಪ್ರಕೋಪಹೊಂದಿ ಸಂಚರಿಸುವ ದೋಷಮಾರ್ಗವಾದ ಸಿರಗಳಿಗೂ, "ಸರ್ವ

ವಹಾಃ" ಎಂದು ಹೇಳಿದ್ದಾರೆ. ಪ್ರಕೋಪಹೊಂದಿದಾಗ ರೋಗೋತ್ಪತ್ತಿಯಾಗುತ್ತದೆ, ಇಲ್ಲವೇ ಆರೋಗ್ಯವಿರುವದಿಲ್ಲ ಇಲ್ಲವೇ ಸಮ ಸ್ಥಿತಿ ಪ್ರಕೋಪ ಹೊಂದಿದ ದೋಷವಹನವಾಡುವ, ಎರಡೂ ವಿಧ ಸಿರಗಳಿಗೂ "ಸರ್ವ ವಹಾಃ ಎಂದು ಹೇಳುತ್ತಾರೆ ಇವುಗಳಲ್ಲಿಯ ಪರಿಣಾಮಗಳಿಂದಲೇ ಹಿಂದೆ ವಿವರಿಸಿದಂತೆ ಭೇದಗಳನ್ನು ತಿಳಿಯಬೇಕು.

ಪ್ರದುಷ್ಟಾನಾಂಹಿ ದೋಷಾಣಾಂ ಮೂರ್ಚ್ಛಿತಾನಾಂ ಪ್ರಧಾವತಾಂ ॥
ಧ್ರುವಮುನ್ಮಾರ್ಗಗಮನಮತಃ ಸರ್ವವಹಾಃ ಸ್ಮೃತಾಃ ॥

(ಸುಶ್ರುತ॥ ಶಾರೀರ॥ ೮ ೭ ಶ್ಲೋ ೧೭)

ದೋಷಗಳು ಪ್ರಕೋಪಹೊಂದಿ ಪರಸ್ಪರ ವಿಲಿತವಾಗಿ ಎಲ್ಲ ಕಡೆಗೂ ಸಂಚರಿಸುತ್ತವೆ. ಇಂಥ ಪ್ರಕುಪಿತ ದೋಷಮಾರ್ಗವಾದ ಸಿರಗಳು "ಸರ್ವ ವಹಾ" ಎಂದು ಹೇಳಲ್ಪಡುತ್ತವೆ ಅಥವಾ ಕೆಲವು ಸ್ಥಾನ ಆಶ್ರಯಗಳಲ್ಲಿ ವಿಶೇಷ ಸ್ಥಿತಿಯುಳ್ಳ ವಾತಾದಿಗಳು, ಎಲ್ಲ ಕಡೆಗಳಲ್ಲಿಯೂ ಅತಿಕ್ರಮಿಸಿ ಚಲಿಸುವದರಿಂದಲೂ ಹೀಗೆ ಹೇಳಿದ್ದಾರೆ.

ವಾತವಹಾದಿ ಸಿರಾಗಳ ವರ್ಣವು

ತತ್ರಾರುಣಾ ವಾತವಹಾಃ ಪೂರ್ಯಂತೇ ವಾಯುನಾ ಸಿರಾಃ॥
ಪಿತ್ತಾದುಷ್ಣಾಶ್ಚನೀಲಾಶ್ಚ, ಶೀತಾಗೌರ್ಯಃ ಸ್ಥಿರಾಃ ಕಫಾತ್॥
ಅಸೃಗ್ವಹಾಸ್ತುರೋಹಿಣ್ಯಃ ಸಿರಾನಾತ್ಯುಷ್ಣಸೀತಲಾಃ ॥

(ಸುಶ್ರುತ॥ ಶಾರೀರ॥ ಅ. ೭ ಶ್ಲೋ. ೧೮)

೧ ವಾಯುವಿನಿಂದ ತುಂಬಲ್ಪಡುತ್ತಿರುವ ವಾತವಹಾ ಸಿರಗಳು, ನಸುಗೆಂಪು [ಅರುಣ] ವರ್ಣವುಳ್ಳವುಗಳಾಗಿರುತ್ತವೆ. ಅರ್ಥಾತ್ ವಾತವಹಾ ಸಿರಗಳ ಬಣ್ಣವು ಅರುಣ [ಸ್ವಲ್ಪ ಕೆಂಪುಳ್ಳದ್ದು] ಇರುತ್ತದೆ.

೨ ಪಿತ್ತವಾಹೀ ಸಿರಗಳು ನೀಲವರ್ಣವುಳ್ಳವುಗಳೂ ಬಿಸಿಯುಳ್ಳವುಗಳೂ ಇರುತ್ತವೆ

೩ ಕಫವಹಾ ಸಿರಗಳು ಶ್ವೇತವರ್ಣಯುಕ್ತವೂ ಶೀತವುಳ್ಳವೂ ಜಡ [ಮುಂದ, ಸಾವಕಾಶ ಚಲನ] ವಾದವೂ ಇರುತ್ತವೆ,

೪ ರಕ್ತವಾಹೀ ಸಿರಗಳು ಸಮಶೀತೋಷ್ಣವುಳ್ಳವು "ರೋಹಿಣೀ" ಎಂಬ ಹೆಸರುಳ್ಳವೂ ಇರುತ್ತವೆ

ಅವ್ಯಧ್ಯ ಸಿರಗಳು

ದೇಹದಲ್ಲಿ ಯಾವ ಸಿರಗಳನ್ನು ವ್ಯಧನ ಮಾಡುವದರಿಂದ ದೋಷ ಪ್ರಕೋಪವಾಗುವದೋ ಮತ್ತು ಸಿರಾ ಮರ್ಮ ಮೊದಲಾದವುಗಳಲ್ಲಿ ತೀವ್ರ ಹಾನಿ ಸಂಭವಿಸುತ್ತದೆಯೋ ಅಂಥವುಗಳು ವ್ಯಧನ ಮಾಡದಿರುವ ಸಿರಗಳು (ಅವ್ಯಧ್ಯ) ಆಗಿರುತ್ತವೆ ಇವುಗಳಲ್ಲಿ ಶಸ್ತ್ರ ಕರ್ಮಗಳನ್ನು ಸಹ ಮಾಡ ಕೂಡದಾದ್ದರಿಂದ, "ಅಶಸ್ತ್ರಕೃತ್ಯಾಃ" ಎಂದು ಹೇಳದ್ದಾರೆ. ಅವ್ಯಧ್ಯ (ಅಶಸ್ತ್ರಕೃತ್ಯ) ಸಿರಗಳಲ್ಲಿ ವ್ಯಧನ ಶಸ್ತ್ರಕರ್ಮಗಳನ್ನು ಮಾಡಿದರೆ ಅದರಿಂದ, ವೈಕಲ್ಯ (ಊನತೆ) ಮರಣಗಳು ಸಹ ಉಂಟಾಗುತ್ತವೆ.

ಅತಊರ್ಧ್ವಂ ಪ್ರವಕ್ಷ್ಯಾಮಿ ನವಿದ್ಧೇದ್ಯಾಃಸಿರಾಭಿಷಕ್ ॥
ವೈಕಲ್ಯಂಮರಣಂ ಚಾಪಿವ್ಯಧಾತ್ತಾಸಾಂ ಧ್ರುವಂಭವೇತ್ ॥

(ಸುಶ್ರುತ॥ ಶಾರೀರ॥ ಅ ೭ ಶ್ಲೋ ೧೯)

ವೈದ್ಯನು ಯಾವಸಿರಗಳನ್ನು ವ್ಯಧನಮಾಡಬಾರದೆಂಬುವದನ್ನು ಹೇಳುತ್ತೇನೆ. ಇಂಥ ಅವ್ಯಧ್ಯ ಸಿರಗಳ ವ್ಯಧನದಿಂದ ವೈಕಲ್ಯ ಅಥವಾ ಮರಣವು ಸಹ ನಿಶ್ಚಯವಾಗಿ ಸಂಭವಿಸುತ್ತವೆ. ಆದ್ದರಿಂದ ಅವ್ಯಧ್ಯಸಿರಗಳಲ್ಲಿ ವ್ಯಧನ ಶಸ್ತ್ರಕರ್ಮ ಮೊದಲಾದವುಗಳನ್ನು ಮಾಡಬಾರದು

ಸಿರಾಶತಾನಿಚತ್ವಾರಿವಿದ್ಯಾಚ್ಛಾಖಾಸುಬುದ್ಧಿಮಾನ್ ॥
ಷಟ್ ತ್ರಿವಂಶಚ್ಚತಂಕೋಷ್ಠೇಚತುಃ ಷಷ್ಠಂಚನೂರ್ಧನಿ॥

(ಸುಶ್ರುತ॥ ಶಾರೀರ॥ ಅ ೭ ಶ್ಲೋ ೨೦)

(೧) **ಶಾಖಾ** ಪ್ರದೇಶಗಳಲ್ಲಿ (೪೦೦) ಸಿರಗಳಿರುತ್ತವೆ. (೨) **ಕೋಷ್ಠ** ದಲ್ಲಿ (೧೩೬) ಸಿರಗಳಿರುತ್ತವೆ. (೩) **ಮೂರ್ಧಾ**ಪ್ರದೇಶಗಳಲ್ಲಿ (೧೬೪) ಸಿರಗಳಿರುತ್ತವೆ. ಸಿರಾವ್ಯಧನ ಶಸ್ತ್ರಕರ್ಮಗಳನ್ನು ಮಾಡುವ ಬುದ್ಧಿವಂತನಾದ ವೈದ್ಯನು ಇವುಗಳನ್ನು ತಿಳಿದಿರಲೇಬೇಕಾಗುತ್ತದೆ.

ವಿಭಾಗಶಃ ಅವ್ಯಧ್ಯಸಿರಗಳು

ಶಾಖಾಸುಷೋಡಶಸಿರಾಃ ಕೋಷ್ಠೇದ್ವಾತ್ರಿಂಶದೇವತು ॥
ಪಂಚಾಶಜ್ಜತ್ರುಣಶ್ಚೋರ್ಧ್ವಮವ್ಯಧ್ಯಾಃ ಪರಿಕೀರ್ತಿತಾಃ ॥

(ಸುಶ್ರುತ॥ ಶಾರೀರ॥ ಅ ೭ ಶ್ಲೋ ೨೧)

ಅವ್ಯಧ್ಯ ಸಿರಗಳ ವಿವರಣೆಯು:— (೧) **ಶಾಖಾ**ಪ್ರದೇಶಗಳಲ್ಲಿ (೧೬) ಸಿರಗಳು. (೨) **ಕೋಷ್ಠ** ಭಾಗಗಳಲ್ಲಿ (೩೨) ಸಿರಗಳಿರುತ್ತವೆ. (೩) **ಜತ್ರೂರ್ಧ್ವ**ದಲ್ಲಿ (೫೦) ಸಿರಗಳು ಇರುತ್ತವೆ. ಇವು ಪ್ರತಿಯೊಂದು ಭಾಗಗಳಲ್ಲಿರುವ ಅವ್ಯಧ್ಯಸಿರಗಳಾಗಿರುತ್ತವೆ. ಒಟ್ಟು ಕೂಡಿ ದೇಹದಲ್ಲಿ (೯೪) ಅವ್ಯಧ್ಯಸಿರಗಳಿರುತ್ತವೆಂದು ತಿಳಿಯಬೇಕು.

ಸಿರಾಶತಾನಾಂ ಸಪ್ತಾನಾಂ ಶರೀರೇಷುಶರೀರಿಣಾಂ ॥
ಅಶಸ್ತ್ರಕೃತ್ಯಾನವತಿಸ್ತಥಾಷ್ಟೌಚವಿನಿರ್ದಿಶೇತ್ ॥

(ಸುಶ್ರುತ॥ ಶಾರೀರ ಅ ೭ ಶ್ಲೋ ೨೨)

ಮನುಷ್ಯರ ದೇಹದಲ್ಲಿ (೭೦೦) ಸಿರಗಳು ಇರುತ್ತವೆ. **ಅ**ವುಗಳಲ್ಲಿ (೯೪) ಅವ್ಯಧ್ಯ (ಅಶಸ್ತ್ರಕೃತ್ಯ) ಸಿರಗಳಿರುತ್ತವೆ.

ಶಾಖಾಗತ ಅವ್ಯಧ್ಯ ಸಿರಗಳು

ತತ್ರಸಿರಾಶತಮೇಕಸ್ಮಿನ್ ಸಕ್ಥ್ನಿಭವತಿ; ತಾಸಾಂಜಾಲಧರಾ ತ್ವೇಕಾ, ತಿಸ್ರಶ್ಚಾಂಭ್ಯಂತರಾಃ:- ತತ್ರಉರ್ವೀಸಂಜ್ಞೇದ್ವೇ, ಲೋಹಿತಾಕ್ಷಸಂಜ್ಞಾಚೈಕಾ, ತಾಸ್ವವ್ಯಧ್ಯಾಃ; ಏತೇನೇತರ ಸಕ್ಥಿಬಾಹೂಚವ್ಯಾಖ್ಯಾತೌ ॥ ಏವಮುಶಸ್ತ್ರಕೃತ್ಯಾಃ ಷೋಡಶ ಶಾಖಾಸು ॥ (ಸುಶ್ರುತ॥ ಶಾರೀರ॥ ಅ ೭ ಸೂ ೨೨)

ಒಂದು ಕಾಲಿನಲ್ಲಿ (೧೦೦) ಸಿರಗಳಿರುತ್ತವೆ ಅವುಗಳಲ್ಲಿ ಅವ್ಯಧ್ಯ ಸಿರಗಳು ಇಂತಿರುತ್ತವೆ. ಜಾಲಧರಾ (ಮಾಂಸಸಿರಾ ಸ್ನಾಯು ಅಸ್ಥಿಗಳ ಜಾಲವನ್ನು ಧಾರಣೇ ಮಾಡುವಂಥಾದ್ದು) (೧), ಒಳಭಾಗದಲ್ಲಿ (೩) ಸಿರಗಳಿರುತ್ತವೆ ಅವುಗಳಲ್ಲಿ:- ಉರ್ವೀಸಂಜ್ಞೇ (ಉರ್ವೀ ಎಂಬ ಹೆಸರುಳ್ಳ ಮರ್ಮಸ್ಥಾನ ಸಿರಗಳು) (೨), ಲೋಹಿತಾಕ್ಷ (ಲೋಹಿತಾಕ್ಷಮರ್ಮ ಸ್ಥಾನದಲ್ಲಿ ಸಿರಾ) (೧), ಹೀಗೆ ಆವಾವ ಸ್ಥಾನಗಳಲ್ಲಿ ಕೂಡಿ ಒಳಭಾಗದಲ್ಲಿ (೩) ಸಿರಗಳಿರುತ್ತವೆ ಒಳಭಾಗದಲ್ಲಿರುವ ಇವುಗಳು (೩), ಜಾಲಧರಾ (೧), ಒಟ್ಟು ಒಂದು ಕಾಲಿನಲ್ಲಿ (೪) ಅವ್ಯಧ್ಯಸಿರಗಳಿರುತ್ತವೆ

ಇದರಂತೆ ಎರಡೂ ಕಾಲು ಕೈಗಳಲ್ಲಿ ಕೂಡಿ ಶಾಖಾ ಪ್ರದೇಶಗಳಲ್ಲಿ (೧೬) ಅವ್ಯಧ್ಯಸಿರಗಳಿರುತ್ತವೆ ಅವ್ಯಧ್ಯಸಿರಗಳಿಗೆ "**ಅಶಸ್ತ್ರಕೃತ್ಯಾ**"ಎಂತಲೂ ಹೇಳುತ್ತಾರೆ

ಶ್ರೋಣಿ (ಕಟಿ) ಯಲ್ಲಿಯ ಅವ್ಯಧ್ಯ ಸಿರಗಳು

ದ್ವಾತ್ರಿಂಶತ್ ಶ್ರೋಣ್ಯಾಂ, ತಾಸಾಮುಷ್ಟಾವಶಸ್ತ್ರಕೃತ್ಯಾಃ,- ದ್ವೇದ್ವೇವಿಟಪಯೋಃ ಕಟೀಕ ತರುಣಯೋಶ್ಚ ॥

(ಸುಶ್ರುತ॥ ಶಾರೀರ॥ ಅ ೭ ಸೂ ೨೨)

ಕಟಿಪ್ರದೇಶದಲ್ಲಿ (೩೨) ಸಿರಗಳಿರುತ್ತವೆ. ಅವುಗಳಲ್ಲಿ (೮) ಅವ್ಯಧ್ಯಸಿರಗಳಾಗಿರುತ್ತವೆ. **ವಿಟಪ** (ವಿಟಪ ಸಂಜ್ಞೆಯುಳ್ಳ ಎರಡು ಮರ್ಮಗಳು) ಇವು

ಗಳಲ್ಲಿಪ್ರತಿಯೊಂದರಲ್ಲಿ ಎರಡರಂತೇ (೪) ಸಿರಗಳು. ಕಟೀಕತರುಣ (ಇವ ಎರಡು ಮರ್ಮಗಳು) ಪ್ರತಿಯೊಂದರಲ್ಲಿ ಎರಡರಂತೇ ಇವುಗಳಲ್ಲಿ (೪) ಸಿರ ಗಳು ಅವ್ಯಧ್ಯವಾಗಿರುತ್ತವೆ ಒಟ್ಟು ಶ್ರೋಣಿ ಪ್ರದೇಶಗಳಲ್ಲಿ (೮) ಅಶಸ್ತ್ರ ಕೃತ್ಯ ಸಿರಗಳಿರುತ್ತವೆ.

ಪಾರ್ಶ್ವಗತ ಅವ್ಯಧ್ಯಗಳು

ಅಷ್ಟಾವಷ್ಟಾವೇಕೈಕಸ್ಮಿನ್ಪಾರ್ಶ್ವೇ, ತಾಸಾಮೇಕೈಕಾಮೂರ್ಧ್ವ ಗಾಂಪರಿಹರೇತ್ ಪಾರ್ಶ್ವಸಂಧಿಗತೇಚದ್ವೇ ॥

[ಸು॥ ಶಾ॥ ಅ ೭ ಸೂ ೨೨]

ಎಡಬಲ ಪಕ್ಕ (ಪಾರ್ಶ್ವ) ಗಳಲ್ಲಿ ಎಂಟೆಂಟರಂತೆ ಒಟ್ಟು (೧೬) ಸಿರಗಳಿರುತ್ತವೆ. ಇವುಗಳಲ್ಲಿ ಮೇಲ್ಗಡೆಗೆ ಹೋದ ಪ್ರತಿಯೊಂದು ಪಾರ್ಶ್ವದಲ್ಲಿ ಒಂದೊಂದರಂತೆ ಒಟ್ಟು (೨) ಸಿರಗಳು ಅವ್ಯಧ್ಯವಾಗಿರುತ್ತವೆ. ಈ ಸಿರಗಳು "ಪಾರ್ಶ್ವಸಂಧಿ" ಮರ್ಮಗಳಲ್ಲಿ ಹೋಗಿರುವದರಿಂದ ಆ ಸಂಜ್ಞೆಯುಳ್ಳವುಗಳಾಗಿರುತ್ತವೆ. ಹೀಗೆ ಪಾರ್ಶ್ವ ಭಾಗಗಳಲ್ಲಿ (೨) ಸಿರಗಳು ಅವ್ಯಧ್ಯವಾಗಿರುತ್ತವೆ.

ಪೃಷ್ಠದಲ್ಲಿಯ ಅವ್ಯಧ್ಯಸಿರಗಳು

ಚತಸ್ರೋವಿಂಶತಿಶ್ಚ ಪೃಷ್ಠೇ ಪೃಷ್ಠವಂಶಮುಭಯತಃ, ತಾಸಾ ಮೂರ್ಧ್ವಗಾಮಿನ್ಯೌ ದ್ವೇದ್ವೇ ಪರಿಹರೇತ್ ಬೃಹತೀ ಸಿರೇ ॥

[ಸು॥ ಶಾ॥ ಅ ೭ ಸೂ ೨೨]

ಪೃಷ್ಠ (ಬೆನ್ನು) ಪ್ರದೇಶಗಳಲ್ಲಿ ಬೆನ್ನು ಹುರಿಯ ಎರಡೂ ಕಡೆಗಳಲ್ಲಿ ಕೂಡಿ (೨೪) ಸಿರಗಳಿರುತ್ತವೆ. ಮೇಲ್ಗಡೆಗೆ ಹೋದ ಎರಡೂ ಪಾರ್ಶ್ವಗಳಲ್ಲಿ ಬೃಹತೀಸಿರೇ (ಇವೆರಡು ಮರ್ಮಗಳು) ಇವುಗಳಲ್ಲಿ ಪ್ರತಿಯೊಂದರಲ್ಲಿ ಎರಡರಂತೆ (೪) ಅವ್ಯಧ್ಯ ಸಿರಗಳಿರುತ್ತವೆ. ಇವುಗಳು ದೊಡ್ಡದಾದ ಸಿರಗಳಿರುವದರಿಂದಲೂ "ಬೃಹತೀಸಿರೇ" ಎಂದು ಹೇಳಿದ್ದಾರೆ.

ಹೊಟ್ಟೇ ಪ್ರದೇಶದಲ್ಲಿ ಅವ್ಯಧ್ಯಗಳು

ತಾವತ್ಯಏವೋದರೇ (೨೪), ತಾಸಾಂ ಮೇಢ್ರೋಪರಿರೋಮು
ರಾಜೀನಮುಭಯತೋ ದ್ವೇದ್ವೇ ಪರಿಹರೇತ್ ॥

(ಸುಶ್ರುತ॥ ಶಾರೀರ॥ ಅ ೭ ಸೂ ೨೨)

ಉದರ (ಹೊಟ್ಟೆ) ಪ್ರದೇಶಗಳಲ್ಲಿ (೨೪) ಸಿರಗಳಿರುತ್ತವೆ ಅವುಗಳಲ್ಲಿ ಶಿಶ್ನದ (ಲಿಂಗ) ಮೇಲ್ಗಡೆ ರೋಮರಾಜಿಯ (ಕೂದಲಿನ ಗೆರೆ) ಎರಡೂ ಕಡೆಗಳಲ್ಲಿ ಎರಡೆರಡರಂತೆ (೪) ಸಿರಗಳು ಅವ್ಯಧ್ಯವಾಗಿರುತ್ತವೆ

ಎದೆಯ ಸ್ಥಾನದಲ್ಲಿ ಅವ್ಯಧ್ಯ ಸಿರಗಳು

ಚತ್ವಾರಿಂಶದ್ವಕ್ಷಸಿ, ತಾಸಾಂಚತುರ್ದಶ ಅಶಸ್ತ್ರಕೃತ್ಯಾಃ :—
ಹೃದಯೇ ದ್ವೇ, ದ್ವೇದ್ವೇಸ್ತನಮೂಲೇ, ಸ್ತನರೋಹಿತಾಪ
ಲಾಪಸ್ತಂಭೇಷೂಭಯತೋಽಷ್ಟೌ ॥ ಏವಂದ್ವಾತ್ರಿಂಶದಶಸ್ತ್ರ
ಕೃತ್ಯಾಃ, ಪೃಷ್ಠೋದರೋರಃಸು ಭವಂತಿ ॥

(ಸುಶ್ರುತ॥ ಶಾರೀರ॥ ಅ ೭ ಸೂ ೨೨)

ಎದೆ ಭಾಗಗಳಲ್ಲಿ (ವಕ್ಷಸಿ) ವ್ಯಾಪಿಸಿರುವ ಸಿರಗಳು (೪೦) ಇರುತ್ತವೆ ಅವುಗಳಲ್ಲಿ (೧೪)ಸಿರಗಳು ಅವ್ಯಧ್ಯವಾಗಿರುತ್ತವೆ. ಕೆಳಗೆ ಅವುಗಳ ವಿವರಣೆ:— ಹೃದಯದಲ್ಲಿ (೨), ಸ್ತನಮೂಲಗಳಲ್ಲಿ ಎರಡೂ ಕಡೆ ಒಟ್ಟು (೪), ಸ್ತನರೋಹಿತ (ಎರಡೂ ಕಡೆ ಎರಡೆರಡರಂತೆ) ಮರ್ಮಗಳಲ್ಲಿ ಒಟ್ಟು (೪) ಸಿರಗಳು. ಅಪಲಾಪ, ಅಪಸ್ತಂಭ ಇವುಗಳಲ್ಲಿ ಪ್ರತಿಯೊಂದರ ಎರಡೂ ಪಕ್ಕಗಳಲ್ಲಿ ಒಂದೊಂದರಂತೆ, ಎರಡೂ ಮರ್ಮಗಳಲ್ಲಿಯ ಸಿರಗಳು (೪) ಇರುತ್ತವೆ. ಒಟ್ಟು ಎದೆಯಲ್ಲಿ (೧೪) ಅವ್ಯಧ್ಯ ಸಿರಗಳಿರುತ್ತವೆ.

ಶ್ರೋಣಿ (೮), ಪಾರ್ಶ್ವ (೨), ಪೃಷ್ಠ (೪), ಉದರ (೪), ವಕ್ಷಸಿ (೧೪), ಈ ಮೊದಲಾದ ಸ್ಥಾನಗಳಲ್ಲಿ ಕೂಡಿ (೩೨) ಸಿರಗಳು

ಅವ್ಯಧ್ಯ (ಅಶಸ್ತ್ರಕೃತ್ಯ) ವಾಗಿರುತ್ತವೆ. ಇವುಗಳು "ಪೃಷ್ಠೋದರ ಉರಃ ಸ್ಥಾನ" ಸಿರಗಳಾಗಿರುತ್ತವೆ

ಜತ್ರೂರ್ಧ್ವ ಅವ್ಯಧ್ಯಸಿರಗಳು

ಚತುಃ ಷಷ್ಠಂ ಸಿರಾಶತಂಜತ್ರುಣಊರ್ಧ್ವಂಭವತಿ; ತತ್ರಷಟ್ ಪಂಚಾಶತ್ ಶಿರೋಧರಾಯಾಂ, ತಾಸಾಮುಷ್ಣೀಚತಸ್ರಶ್ಚ ಮರ್ಮಸಂಜ್ಞಾಃ ಪರಿಹರೇತ್, ದ್ವೇಕೃಕಾಟಿಕಯೋಃ, ದ್ವೇವಿಧುರಯೋಃ, ಏನಂಗ್ರೀವಾಯಾಂ ಶೋಡಶಅವ್ಯಧ್ಯಾಃ ॥

(ಸುಶ್ರುತ॥ ಶಾರೀರ॥ ಅ ೬ ಸೂ ೨೨)

ಜತ್ರೂರ್ಧ್ವ ಪ್ರದೇಶಗಳಲ್ಲಿ (೧೬೪) ಸಿರಗಳಿರುತ್ತವೆ. ಅವುಗಳಲ್ಲಿ ಕುತ್ತಿಗೆಯ ಪ್ರದೇಶದಲ್ಲಿ (೫೬) ಸಿರಗಳಿರುತ್ತವೆ. ಅವುಗಳಲ್ಲಿ (೧೬) ಅವ್ಯಧ್ಯ ಸಿರಗಳು ಇರುತ್ತವೆ. (೮) ಮೂತೃಕಾಃ (ಮರ್ಮಗಳು), (೪) ನೀಲ, ಮನ್ಯ (ಮರ್ಮಗಳು), (೨) ಕೃಕಾಟಿಕೇ (ಮರ್ಮಸ್ಥಾನ), (೨)ವಿಧುರೇ (ಮರ್ಮಸ್ಥಾನ) ಈ ಮೊದಲಾದ ಸ್ಥಾನಗಳಲ್ಲಿರುವ ಮರ್ಮಗಳು ಅವ್ಯಧ್ಯವಾಗಿರುತ್ತವೆ. "ಕುತ್ತಿಗೆಯಲ್ಲಿ" ಒಟ್ಟು ಸಿರಗಳು (೧೬) ಅವ್ಯಧ್ಯವಾಗಿರುತ್ತವೆ.

ಹನುಸ್ಥಾನದ ಅವ್ಯಧ್ಯಸಿರಗಳು

ಹನ್ವೋರುಭಯತೋಷ್ಟಾವಷ್ಟೌ, ತಾಸಾಂತುಸಂಧಿಧಮನ್ಯೌ ದ್ವೇದ್ವೇ ಪರಿಹರೇತ್ ॥ (ಸುಶ್ರುತ॥ ಶಾರೀರ॥ ೨೨)

ಹನು (ಕಪೋಲಗಳ ಕೆಳಭಾಗಗಳು) ಈ ಪ್ರದೇಶಗಳಲ್ಲಿ ಎರಡೂ ಕಡೆಗಳಲ್ಲಿ ಎಂಟೆಂಟರಂತೆ (೧೬) ಸಿರಗಳಿರುತ್ತವೆ ಅವುಗಳಲ್ಲಿ ಹನುಸಂಧಿ (ಮರ್ಮಗಳು) ಈ ಸ್ಥಾನಗಳಲ್ಲಿ ಎರಡೂ ಕಡೆ ಎರಡೆರಡರಂತೆ (೪) ಧಮನೀಗಳು ಅಶಸ್ತ್ರಕೃತ್ಯಗಳಾಗಿರುತ್ತವೆ.

ನಾಲಿಗೇಸ್ಥಾನದಲ್ಲಿ ಅವ್ಯಧ್ಯ ಸಿರಗಳು

ಷಟ್‌ತ್ರಿಂಶತ್ ಜಿಹ್ವಾಯಾಂ, ತಾಸಾಮುಧಃಷೋಡಶ, ಅಶಸ್ತ್ರ ಕೃತ್ಯಾಃರಸವಹೇದ್ವೇ, ವಾಗ್ವಹೇಚದ್ವೇ ॥ (ಸು॥ ಶಾ॥ ೨೨)

ನಾಲಿಗೇ ಪ್ರದೇಶಗಳಲ್ಲಿ (೩೬) ಸಿರಗಳಿರುತ್ತವೆ ಅವುಗಳಲ್ಲಿ **ನಾಲಿಗೆಯ ಕೆಳಭಾಗದಲ್ಲಿ** (೧೬) ಸಿರಗಳು ಇರುತ್ತವೆ **ರಸವಹೇ** (ರಸವನ್ನು ಒಯ್ಯುವಂಥವುಗಳು) ಸಿರಗಳು (೨) ಇರುತ್ತವೆ **ವಾಗ್ವಹೇ** (ಶಬ್ದ ಉಂಟು ಮಾಡುವ) ಸಿರಗಳು (೨) ಇರುತ್ತವೆ ಒಟ್ಟು ಜಿಹ್ವಾ ಕೆಳಭಾಗದಲ್ಲಿ (೪) ಸಿರಗಳು ಅ್ಯವಧ್ಯವಾಗಿರುತ್ತವೆ.

ನಾಸಿಕಾಸ್ಥಾನದಲ್ಲಿ ಅವ್ಯಧ್ಯಸಿರಗಳು

ದ್ವಿದ್ವ್ಯಾದಶನಾಸಾಯಾಂ, ತಾಸಾಮೌಪನಾಸಿಕ್ಯಶ್ಚತಸ್ರಃ ಪರಿಹರೇತ್, ತಾಸಾನೇವಚತಾಲುನ್ಯೇಕಾಂಮೃದಾವುದ್ದೇಶೇ (ಘೋಣಾಸಮೀಪೇ) ॥ [ಸು॥ ಶಾ ೨೨]

ನಾಸಿಕಾ ಸ್ಥಾನಗಳಲ್ಲಿ (೨೪) ಸಿರಗಳು ಇರುತ್ತವೆ ಅವುಗಳಲ್ಲಿ ಮೂಗಿಗೆ ಹೊಂದಿಕೊಂಡಿರುವ (ಔಪನಾಸಿಕ್ಯಃ) ಅಥವಾ ಸಮೀಪದಲ್ಲಿಯು (೪) ಸಿರಗಳು ಅವ್ಯಧ್ಯವಾಗಿರುತ್ತವೆ. ಇದರಂತೇ ತಾಲುವಿನ (ಅಂಗಳದ) ಮೃದು ಪ್ರದೇಶದಲ್ಲಿ, ಅಥವಾ ನಾಸಿಕಾ ಸಮೀಪದಲ್ಲಿ (೧) ಸಿರವು ಅಶಸ್ತ್ರ ಕೃತ್ಯವಾಗಿರುತ್ತದೆ ಒಟ್ಟು ನಾಸಾ ಸ್ಥಾನದಲ್ಲಿ (೫) ಅಶಸ್ತ್ರಕೃತ್ಯ ಸಿರಗಳು ಇರುತ್ತವೆ.

ನೇತ್ರಗಳಲ್ಲಿ ಅವ್ಯಧ್ಯ ಸಿರಗಳು

ಅಷ್ಟತ್ರಿಂಶದುಭಯೆ ನೇತ್ರಯೋಃ, ತಾಸಾಮೇಕೈಕಾಮುಸಾಂಗಯೋಃ ಪರಿಹರೇತ್ ॥ (ಸುಶ್ರುತ॥ ಶಾರೀರ॥ ೨೨)

ಎರಡೂ ಕಣ್ಣುಗಳಲ್ಲಿ ಕೂಡಿ (೩೮) ಸಿರಗಳಿರುತ್ತವೆ. ಅವುಗಳಲ್ಲಿ ಅಪಾಂಗ (ಎರಡು ಮರ್ಮಗಳು) ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಒಂದೊಂದರಂತೆ (೨) ಸಿರಗಳು ಅವ್ಯಧ್ಯವಾಗಿರುತ್ತವೆ

ಕಿವಿಗಳಲ್ಲಿಯು ಅವ್ಯಧ್ಯ ಸಿರಗಳು

ಕರ್ಣಯೋರ್ದಶ, ತಾಸಾಂ ಶಬ್ದವಾಹಿನೀಮೇಕೈಕಾಂ ಪರಿಹರೇತ್ ॥ (ಸುಶ್ರುತ॥ ಶಾರೀರ॥ ಅ ೭ ಸೂ. ೨೨)

ಎರಡೂ ಕಿವಿಗಳಲ್ಲಿ ಕೂಡಿ (೧೦) ಸಿರಗಳಿರುತ್ತವೆ. ಅವುಗಳಲ್ಲಿ ಪ್ರತಿಯೊಂದು ಕಿವಿಯಲ್ಲಿ ಒಂದೊಂದರಂತೇ ಶಬ್ದವಾಹಿನೀ ಸಿರಗಳು (೨) ಅವ್ಯಧ್ಯವಾಗಿರುತ್ತವೆ.

ಹಣೇ ಸ್ಥಾನದಲ್ಲಿ ಅವ್ಯಧ್ಯ ಸಿರಗಳು

ನಾಸಾ ನೇತ್ರಗತಾಸ್ತು ಲಲಾಟೇ ಷಷ್ಠಿಃ, ತಾಸಾಂ ಕೇಶಾಂತಾನುಗತಾಃ ಚ ತಸ್ರಃ, ಆವರ್ತಯೋರೇಕೈಕಾ, ಸ್ಥಪನ್ಯಾಂ ಚೈಕಾಪರಿಹರ್ತವ್ಯಾ ॥ (ಸುಶ್ರುತ॥ ಶಾರೀರ॥ ಅ ೭ ಸೂ ೨೨)

ಮೂಗು ಮತ್ತು ಕಣ್ಣುಗಳ ಸ್ಥಾನವನ್ನು ಕುರಿತು ಬಂದ ಸಿರಗಳು ಹಣೆಯಲ್ಲಿ (ಲಲಾಟ) ಒಟ್ಟುಕೂಡಿ (೬೦) ಇರುತ್ತವೆ. ಅವುಗಳಲ್ಲಿ ಕೇಶಾಂತದ ವರೆಗೆ ಬಂದಿರುವ (೪) ಸಿರಗಳು "ಆವರ್ತ" (ಎರಡು ಮರ್ಮ ಸ್ಥಳಗಳು) ಇವುಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದರಂತೆ (೨) ಸಿರಗಳು "ಸ್ಥಪನೀ" (ಮರ್ಮವು) ಸ್ಥಾನದಲ್ಲಿ (೧) ಸಿರವು ಒಟ್ಟು ಲಲಾಟ (ಹಣೆ) ಪ್ರದೇಶಗಳಲ್ಲಿ (ಅವ್ಯಧ್ಯ) ೭ ಸಿರಗಳು ಇರುತ್ತವೆ.

ಶಂಖ ಮರ್ಮಗಳಲ್ಲಿ ಅವ್ಯಧ್ಯ ಸಿರಗಳು

ಶಂಖಯೋರ್ದಶ, ತಾಸಾಂ ಶಂಖಸಂಧಿಗತಾಮೇಕೈಕಾಂ ಪರಿಹರೇತ್ ॥ (ಸುಶ್ರುತ॥ ಶಾರೀರ॥ ಅ. ೭ ಸೂ. ೨೨)

ಶಂಖವೆಂಬ ಎರಡೂ ಮರ್ಮಗಳಲ್ಲಿ (೧೦) ಸಿರಗಳಿರುತ್ತವೆ. ಅವುಗಳಲ್ಲಿ "ಶಂಖಸಂಧಿಗಳಲ್ಲಿ" ಬಂದಿರುವ ಪ್ರತಿಯೊಂದರಲ್ಲಿಯೂ ಒಂದೊಂದರಂತೆ (೨) ಸಿರಗಳು ಅವ್ಯಧ್ಯವಾಗಿರುತ್ತವೆ.

ತಲೆಯಲ್ಲಿಯ ಅವ್ಯಧ್ಯ ಸಿರಗಳು

ದ್ವಾದಶಮೂರ್ಧ್ನಿ, ತಾಸಾಮುತ್ಕ್ಷೇಪಯೋರ್ದ್ವೇ ಪರಿಹ ಹರೇತ್, ಸೀಮಂತೇಷ್ವೇಕೈಕಾಂ ಏಕಾಮಧಿಪತಾವಿತಿ ॥ ಏವ ಮಶಸ್ತ್ರಕೃತ್ಯಾಃ ಪಂಚಾಶತ್ ಜತ್ರುಣ ಊರ್ಧ್ವಮಿತಿ ॥

(ಸುಶ್ರುತ॥ ಶಾರೀರ॥ ಅ ೬ ಸೂ. ೨೨)

ತಲೆಯ ಪ್ರದೇಶಗಳಲ್ಲಿ (೧೨) ಸಿರಗಳಿರುತ್ತವೆ ಅವುಗಳಲ್ಲಿ "ಉತ್ ಕ್ಷೇಪ" (ಎರಡು ಮರ್ಮಗಳು) ಇವುಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದರಂತೆ (೨) ಸಿರಗಳು ಅವ್ಯಧ್ಯವಾಗಿರುತ್ತವೆ "ಸೀಮಂತ" (ಮರ್ಮಗಳು ೫) ಇವು ಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದರಂತೆ (೫) ಸಿರಗಳು. "ಅಧಿಪತಿ" (ಮರ್ಮವು) ಇದರಲ್ಲಿ (೧) ಸಿರವು. ಒಟ್ಟು ತಲೆಯ ಪ್ರದೇಶಗಳಲ್ಲಿ (೮) ಸಿರ ಗಳು ಅಶಸ್ತ್ರಕೃತ್ಯಗಳಾಗಿರುತ್ತವೆ. ಒಟ್ಟು ಎಲ್ಲಾ ವಿಭಾಗಗಳಲ್ಲಿ ಕೂಡಿ ಜತ್ರೂರ್ಧ್ವದಲ್ಲಿ (೫೦) ಅವ್ಯಧ್ಯ ಸಿರಗಳಿರುತ್ತವೆ.

ಶಿರೋಧರಾ (೧೬), ಹನು (೪), ಜಿಹ್ವಾ (೪), ನಾಸಿಕಾ (೫), ನೇತ್ರ (೨), ಕರ್ಣ (೨), ಲಲಾಟ (೭), ಶಂಖ (೨), ಮೂರ್ಧ (೮), ಈ ಮೊದಲಾದ ಸ್ಥಾನಗಳಲ್ಲಿ ಒಟ್ಟು ಕೂಡಿ ಜತ್ರೂರ್ಧ್ವದಲ್ಲಿ (೫೦) ಸಿರಗಳು ಅವ್ಯಧ್ಯವಾಗಿರುತ್ತವೆ. ಅವ್ಯಧ್ಯ ಸಿರಗಳನ್ನು ಬಿಟ್ಟು ವ್ಯಧನರಕ್ತಮೋಕ್ಷಣಾದಿ ಕ್ರಿಯೆಗಳನ್ನೂ ಶಸ್ತ್ರಕರ್ಮವನ್ನೂ ಮಾಡಬೇಕು.

ಸಿರಗಳ ಉಗಮಸ್ಥಾನವು

ವ್ಯಾಪ್ನುವಂತ್ಯಭಿತೋದೇಹಂ ನಾಭಿತಃ ಪ್ರಸೃತಾಃ ಸಿರಾಃ ॥

ಪ್ರಶಾನಾಃ ಪದ್ಮಿನೀಕಂದಾದ್ಬಿಸಾದೀನಾಂ ಯಥಾಜಲಂ ॥
(ಸುಶ್ರುತ॥ ಶಾರೀರ॥ ಅ ೭ ಶ್ಲೋ ೨೩)

ಕಮಲಗಡ್ಡೆಯಿಂದ ಹೊರಟ ಸಿರಗಳು (ದೇಟು, ಬೇರು ಮೊದಲಾದವು) ನೀರನ್ನು ವ್ಯಾಪಿಸುತ್ತವೆಯೋ, ಅದರಂತೇ ನಾಭಿಯಿಂದ ಹೊರಟ ಸಿರಗಳು ಎಲ್ಲ ಕಡೆಗೂ ದೇಹದಲ್ಲಿ ವ್ಯಾಪಿಸುತ್ತವೆ ಅರ್ಥಾತ್ ದೇಹದಲ್ಲಿಯ ವಾತಪಿತ್ತ ಕಫ ರಕ್ತವಾಹೀ ಸಿರಗಳಿಗೆ ನಾಭಿಯೇ ಮೂಲವಾಗಿರುತ್ತದೆಂಬ ಅರ್ಥವು. ನಾಭಿಯಿಂದ ಹೊರಟು ಮುಂದೆ ವಿಸ್ತಾರವಾಗುತ್ತಾ ಗುತ್ತ ಸಮಗ್ರ ದೇಹವನ್ನೂ ವ್ಯಾಪಿಸುತ್ತವೆ. ಕೂದಲಿನಷ್ಟುಸಹ ಸೂಕ್ಷ್ಮವಾಗಿ ಆವಾವ ಭಾಗಗಳಲ್ಲಿ ವಾತಾದಿಗಳಿಗೆ ಸಂಚಾರ ಮಾರ್ಗವಾಗಿರುತ್ತವೆ.

ಅವ್ಯಧ್ಯಸಿರಗಳ ವ್ಯಧನದಿಂದಾಗುವ ಹಾನಿಯು

ಸ್ಪಂದಿನ್ಯೋಜಾಲಧಾರಿಣ್ಯೋಯೌಶ್ಚಮರ್ಮಸಮಾಶ್ರಿತಾಃ॥
ಅವ್ಯಧ್ಯಾಸ್ತಾವಿಜಾನೀಯಾತ್ ಸ್ನಾಯುಸಂಧಿಗತಾಶ್ಚಯಾಃ॥
ವೈಕಲ್ಯಂ ಮರಣಂಚಾಪಿ ವ್ಯಧಾದಾಸಾಂಧೃವಂಭವೇತ್॥
(ಸುಶ್ರುತ॥ ಶಾರೀರ॥ ಅ ೭ ಶ್ಲೋ ೨೫)

ವಿಶೇಷವಾಗಿ ಸ್ಪಂದನೇ ಹೊಂದತಕ್ಕವುಗಳಾದ, ಜಾಲಧಾರಕವಾಗಿರುವ ಮರ್ಮಗಳನ್ನು ಆಶ್ರಯಿಸಿರುವ, ಸ್ನಾಯು ಮತ್ತು ಸಂಧಿಗಳಲ್ಲಿರುವ, ಸಿರಗಳು ಅವ್ಯಧ್ಯ (ಅಶಸ್ತ್ರಕೃತ್ಯ) ಗಳೆಂದು ತಿಳಿಯಬೇಕು. ಅವ್ಯಧ್ಯ ಸಿರಗಳಲ್ಲಿ ಶಸ್ತ್ರ ಕರ್ಮವನ್ನೂ ವ್ಯಧನಾದಿಗಳನ್ನೂ ಮಾಡಬಾರದು. ಒಂದು ವೇಳೆ ಮಾಡಿದರೆ ವೈಕಲ್ಯ (ಊನತ್ವ) ಅಥವಾ ಮರಣವು ಸಹ ನಿಶ್ಚಯವಾಗಿ ಸಂಭವಿಸುತ್ತದೆ.

(೬೦) ಧಮನೀ ವಿವರಣೆಯು

ಸಿರಾ ವಿವರಣೆಯ ನಂತರದಲ್ಲಿ ಸಿರಾ ಧಮನೀ ಸ್ರೋತಸ್ಸುಗಳು ಸದೃಶವಾಗಿರುವದರಿಂದ, ವಿಭಾಗಶಃ ತಿಳಿಯಲು ಸುಲಭವಾಗಲು ಧಮನೀ

ವಿವರಣೆಯು" ಅವಶ್ಯವಾದದ್ದಿರತ್ತದೆ. 'ಚರಕದಲ್ಲಿ" ಸ್ರೋತೋವಿಮಾನಾ ಧ್ಯಾಯದಲ್ಲಿ ಸಿರಾ ಧಮನೀ ಸ್ರೋತಸ್ಸುಗಳನ್ನು ವಿಭಾಗಮಾಡದೇ "ಸ್ರೋತ ಸ್ಸೂಂದರಲ್ಲಿಯೇ" ಅಂತರ್ಭಾವಮಾಡಿ ಹೇಳಿದ್ದಾರೆ ಅವುಗಳ ಸ್ಥಾನ ಕ್ರಿಯಾದಿಗಳನ್ನು ಮಾತ್ರ ವಿಭಾಗಿಸಿ ಹೇಳಿದ್ದಾರೆ. "ಸುಶ್ರುತದಲ್ಲಿ" ಸ್ಥಾನ ಕ್ರಿಯಾ ಆಕೃತಿ ಮೊದಲಾದವುಗಳಿಂದ ವಿಭಾಗಿಸಿ ಸಿರಾ ಧಮನೀ ಸ್ರೋತ ಸ್ಸುಗಳನ್ನು ಭಿನ್ನವಾಗಿ ಹೇಳಿದ್ದಾರೆ ಧಮನೀ ಶಬ್ದ ನಿರೂಪಣೆಯು:— **ಧ್ಮಾನಾದನಿಲಪೂರಣಾತ್ ಧಮನ್ಯಃ** ಧಮನಿಯ ಒಳಗಡೇ ಪೊಳ್ಳು ಭಾಗ ದಲ್ಲಿ ವಿಶೇಷವಾಗಿ ವಾಯು ಸಂಚಾರ ಮಾಡುವದರಿಂದ, ರಸ ಪ್ರಾಣಗಳನ್ನು ಶರೀರದಲ್ಲಿ ಸಮಗ್ರವಾಗಿ ಸಂಚರಿಸುವಂತೇ ಮಾಡುತ್ತದೆ ಈ ಕಾರಣದಿಂದ ಧಮನೀಗಳು ವಾಯುಪೂರಿತವಾಗುವದರಿಂದ. "ಧಮನೀ" ಎಂದು ಹೇಳಿ ದ್ದಾರೆ ದೇಹದಲ್ಲಿ (೨೪) ಧಮನಿಗಳಿರುತ್ತವೆ

ಚತುರ್ವಿಂಶತಿರ್ಧಮನ್ಯೋನಾಭಿಪ್ರಭವಾಅಭಿಹಿತಾಃ ॥ ತತ್ರ ಕೇಚಿದಾಹುಃ:— ಸಿರಾ ಧಮನೀ ಸ್ರೋತಸಾಮವಿಭಾಗಃ, ಸಿರಾ ವಿಕಾರಾಏವಹಿ ಧಮನ್ಯಃ ಸ್ರೋತಾಂಸಿ ಚೇತಿ॥ ತತ್ತುನ ಸಮ್ಯಕ್, ಅನ್ಯಾಏವಹಿ ಧಮನ್ಯಃ ಸ್ರೋತಾಂಸಿಚ ಸಿರಾಭ್ಯಃ; ಕಸ್ಮಾತ್ ? ವ್ಯಂಜನಾನ್ಯತ್ವಾತ್, ಮೂಲಸನ್ನಿಯಮಾತ್, ಕರ್ಮ ವೈಶೇಷ್ಯಾತ್, ಆಗಮಾಚ್ಚ; ಕೇವಲಂತು ಪರಸ್ಪರ ಸನ್ನಿಕರ್ಷಾತ್ ಸದೃಶಾಗಮಕರ್ಮತ್ವಾತ್ ಸೌಕ್ಷ್ಮ್ಯಾಚ್ಚವಿಭಕ್ತ ಕರ್ಮಣಾಮುಪ್ಯವಿಭಾಗಇವಕರ್ಮಸು ಭವತಿ ॥

(ಸುಶ್ರುತ॥ ಶಾರೀರ॥ ಅ ೯ ಸೂ ೩)

ದೇಹದಲ್ಲಿ ನಾಭಿಯಿಂದುತ್ಪನ್ನವಾದ (ಹೊರಟ) ಧಮನಿಗಳು (೨೪) ಇರುತ್ತವೆಂದು ಹೇಳಲ್ಪಟ್ಟಿರುತ್ತವೆ ಕೆಲವರು ಸಿರಾ ಧಮನಿ ಸ್ರೋತಸ್ಸು ಗಳು ಬೇರೆ ಬೇರೆ ಅಲ್ಲವೆಂದು ಹೇಳುತ್ತಾರೆ ಅರ್ಥಾತ್ ಸಿರಾದಿಗಳಲ್ಲಿ ಭೇದವಿರುವದಿಲ್ಲವೆಂಬುವದೇ ಅವರ ಅಭಿಪ್ರಾಯವಾಗಿರುತ್ತದೆ ಆದರೆ ಈ ಮತವು ಸುಶ್ರುತರಿಗೆ ಸಂಮ್ಮತವಾದದ್ದೂ ಸಮಂಜಸವಾದದ್ದೂ ಆಗಿರುವ

ದಿಲ್ಲ. ಯಾಕಂದರೆ ವಾತವಹಾದಿ ಸಿರಗಳ ವರ್ಣವು ಭಿನ್ನವಾಗಿರುವದರಿಂದಲೂ, ಲಕ್ಷಣ ಭೇದವಿರುವದರಿಂದಲೂ ಬೇರೆ ಬೇರೆಯಾಗಿಯೇ ಇರುತ್ತವೆ. **ಮೂಲಸಿರಾಶ್ಚತ್ವಾರಿಂಶತ್** ಎಂದು ಮೂಲ ಸಿರಗಳ ನಿಯಮನ ಮಾಡಿರುವದರಿಂದಲೂ **ಸಿರಗಳು** ವಾತ ಪಿತ್ತಾದಿಗಳನ್ನೂ, **ಧಮನಿಗಳು** ಶಬ್ದ ರೂಪಾದಿಗಳನ್ನೂ, **ಸ್ರೋತಸ್ಸುಗಳು** ಅನ್ನ ನೀರುಗಳನ್ನೂ, ವಹಿಸೆ ಮಾಡುವದರಿಂದ ಕರ್ಮ ಭಿನ್ನತೆಯಿಂದಲೂ, ಭೇದವು ಸ್ಪಷ್ಟವಾದದ್ದೇ ಇರುತ್ತದೆ. ಆಗಮವೆಂದರೆ ಆಯುರ್ವೇದವು ಇಲ್ಲಿ **ಸಿರಾಧಮನ್ಯೋಯೋಗ ವಹಾನಿ ಸ್ರೋತಾಂಸಿ** ಎಂದು ಹೇಳಿರುವದರಿಂದಲೂ ಸಿರಾದಿಗಳು ಭಿನ್ನವಾಗಿರುತ್ತವೆಂದು ಸಹೇತುಕ ನಿರ್ದೇಶ ಮಾಡಿದ್ದಾರೆ. **ಸಿರಾ ಧಮನೀ ಸ್ರೋತಸ್ಸುಗಳು** ಕೇವಲ ಪರಸ್ಪರವಾಗಿ ಹೊಂದಿಕೊಂಡಿರುವದರಿಂದಲೂ ಸದೃಶಾಗಮ ಕರ್ಮಗಳಿಂದಲೂ ಅತಿ ಸೂಕ್ಷ್ಮವಾಗಿರುವದರಿಂದಲೂ ಭಿನ್ನ ಕರ್ಮ ಸ್ವರೂಪ ವರ್ಣ ಸ್ಥಾನಾದಿಗಳಿದ್ದರೂ ಸಹ, ಭಿನ್ನವಿಲ್ಲದಂತೇ ತೋರುತ್ತವೆ. ಅರ್ಥಾತ್ ದೇಹದ ಕರ್ಮಗಳಲ್ಲಿ ಸಿರಾ ಧಮನ್ಯಾದಿಗಳು ಅತ್ಯಂತ ಸಂಬಂಧಿತವಾಗಿರುವದರಿಂದ ಭೇದವಿಲ್ಲದಂತೆಯೇ ಅನಿಸುತ್ತವೆ ಉಡಾ:- ಹುಲ್ಲಿನ ಹಗ್ಗಕ್ಕೆ ಬೆಂಕಿಹತ್ತಿಕೊಂಡರೆ ಹಗ್ಗದ ವಿಭಾಗವಾದ ಪ್ರತಿಯೊಂದುಹುಲ್ಲಿನಲ್ಲಿ ಬೆಂಕಿಯು ಪ್ರತ್ಯೇಕವಾಗಿದ್ದರೂ, ಒಂದೇ ಎಂದು ತೋರುತ್ತದೆ. ಯಾಕಂದರೆ ಎಲ್ಲ ಹುಲ್ಲುಗಳ ಅತ್ಯಂತ ಸಂಬಂಧವೇ ಇದಕ್ಕೆ ಕಾರಣವಾಗಿರುತ್ತದೆ. ಇದರಂತೆ ದೇಹದಲ್ಲಿಯ ಸಿರಾಧಮನೀ ಸ್ರೋತಸ್ಸುಗಳು ಭಿನ್ನವಾಗಿದ್ದರೂ, ಒಂದೇ ಎಂದು ಅನಿಸುತ್ತವೆ.

ಧಮನೀ ಪ್ರಸರಣ

ತಾಸಾಂತುಖಲುನಾಭಿಪ್ರಭವಾಣಾಂಧಮನೀನಾಮೂರ್ಧ್ವಗಾ ದಶ, ದಶಚಾಧೋಗಾಮಿನ್ಯಃ, ಚತಸ್ರಸ್ತಿರ್ಯಗ್ಗಾಃ ॥

(ಸುಶ್ರುತ॥ ಶಾರೀರ॥ ಅ ೯ ಸೂ ೪)

ನಾಭಿಯಿಂದ ಹೊರಟಿರುವ ಧಮನಿಗಳಲ್ಲಿ **ಊರ್ಧ್ವಗಾಮೀ** (೧೦) ಧಮನಿಗಳಿರುತ್ತವೆ. **ಅಧೋಗಾಮೀ** (೧೦) ಧಮನಿಗಳು. **ಅಡ್ಡವಾಗಿ**

ಎಡಬಲಗಳಲ್ಲಿ ಸಂಚರಿಸುವ (೪) ಧಮನೀಗಳಿರುತ್ತವೆ. ಒಟ್ಟು ಎಲ್ಲ ಭಾಗಗಳಲ್ಲಿಯು ಧಮನಿಗಳು (೨೪) ಇರುತ್ತವೆ. **ಊರ್ಧ್ವಗಾ** (೧೦), **ಅಧೋಗಾ** (೧೦), **ತಿರ್ಯಗ್ಗಾ** (೪), ಎಲ್ಲಾ ಪ್ರದೇಶಗಳಲ್ಲಿ ಕೂಡಿ ಒಟ್ಟು (೨೪) ಧಮನಿಗಳು ಇರುತ್ತವೆ.

ಊರ್ಧ್ವಗಧಮನೀ ವಿವರಣೆ

ಊರ್ಧ್ವಗಾಃ ಶಬ್ದಸ್ಪರ್ಶರೂಪರಸಗಂಧಪ್ರಶ್ವಾಸೋಚ್ಛ್ವಾಸ ಜೃಂಭಿತಕ್ಷ್ವೇಡ್ಹಸಿತಕಥಿತರುದಿತಾದೀನ್ ವಿಶೇಷಾನಭಿವ ಹಂತ್ಯಃ ಶರೀರಂ ಧಾರಯಂತಿ ॥ (ಸು॥ ಶಾ॥ ೪ ೯ ಸೂ ೫)

ಊರ್ಧ್ವಗಧಮನಿಗಳು ಶಬ್ದ ಸ್ಪರ್ಶ ರೂಪ ರಸಗಂಧಗಳನ್ನು ಒಯ್ಯುವಂಥವೂ, ಪ್ರಶ್ವಾಸ ಉಚ್ಛ್ವಾಸ ಜೃಂಭಿತಹಸಿತಭಾಷಿತರುದಿತ ಮೊದಲಾದವುಗಳನ್ನು ವಹಿಸುವಂಥವೂ ಆಗಿರುತ್ತವೆ ಈ ಮೊದಲಾದ ಕರ್ಮಕಾರಿಗಳಾಗಿ ಶರೀರಧಾರಣೆಯನ್ನು ಮಾಡುತ್ತವೆ. **ಪ್ರಶ್ವಾಸೋ೭ಂತಃ ಪ್ರವಿಶನ್ವಾಯುಃ** ಒಳಗೆ ಪ್ರವೇಶ ಮಾಡುತ್ತಿರುವ ವಾಯುವಿಗೆ **ಪ್ರಶ್ವಾಸ** ವೆಂಬ ಹೆಸರು "**ಉಚ್ಛ್ವಾಸ ಊರ್ಧ್ವಮುತ್ತಿಷ್ಠದ್ವಾಯುಃ**" ಮೇಲೆ ಸಂಚರಿಸುವ ಅಥವಾ ಬಹಿಸ್ಸಂಚಾರವುಳ್ಳವಾಯುವಿಗೆ **ಉಚ್ಛ್ವಾಸ**ವೆಂಬ ಹೆಸರು. "**ಜೃಂಭಾದಯೋಘೋಷಭಾಷಯೋರ್ವಿಶೇಷಃ**" ಜೃಂಭಾ ಮೊದಲಾದವು ಘೋಷಭಾಷೆಗಳಲ್ಲಿಯ ಪ್ರಭೇದಗಳಾಗಿರುತ್ತವೆ. **ರುದಿತ**ವೆಂದರೆ ಕಣ್ಣೀರನ್ನು ಹರಿಸುವ ಕಾರ್ಯವಾಗಿರುತ್ತದೆ. ಈ ಮೊದಲಾದವುಗಳನ್ನು ಊರ್ಧ್ವ ಪ್ರದೇಶಗಾಮಿಯಾದ ಧಮನಿಗಳು ಕಾರ್ಯರೂಪದಿಂದ ವಹಿಸುತ್ತವೆ ಊರ್ಧ್ವಗವಾದ ಧಮನಿಗಳು ಆವಾವ ಕರ್ಮಗಳಿಂದ ದೇಹವನ್ನು ಧಾರಣೆ ಮಾಡುತ್ತವೆ.

ತಾಸ್ತು ಹೃದಯಪ್ರಸನ್ನಾಸ್ತ್ರಿಧಾಜಾಯಂತೆ, ತಾಸ್ತ್ರಿಂಶತ್ ॥ ತಾಸಾಂತುವಾತಪಿತ್ತಕಫಶೋಣಿತರಸಾನ್ ದ್ವೇ ದ್ವೇವಹತ ಸ್ತ್ರಾದಶ, ಶಬ್ದರೂಪರಸಗಂಧಾನಷ್ಟಾಭಿರ್ಗೃಹ್ಣೀತೆ, ದ್ವಾಭ್ಯಾಂ

ಭಾಷತೇ, ದ್ವಾಭ್ಯಾಂಘೋಷಂ ಕರೋತಿ, ದ್ವಾಭ್ಯಾಂಸ್ಪಷತಿ, ದ್ವಾಭ್ಯಾಂಸ್ರುತಿಬುಧ್ಯತೆ, ದ್ವೇಚಾಶು ವಾಹಿನ್ಯೌ, ದ್ವೇಸ್ತನ್ಯಂ ಸ್ತ್ರಿಯಾನಹತಃ ಸ್ತನಸಂಶ್ರಿತೆ, ತೇಏವಶುಕ್ರಂ ನರಸ್ಯಸ್ತನಾ ಭ್ಯಾಮುಭಿನಹತಃ, ತಾಸ್ತ್ವೇತಾಸ್ತ್ರಿಂಶತ್ ಸವಿಭಾಗಾವ್ಯಾಖ್ಯಾತಾಃ ॥ (ಸು॥ ಶಾ॥ ಅ ೯ ಸೂ ೫)

ಊರ್ಧ್ವಗಾಮೀ ಧಮನಿಗಳು ಹೃದಯ ಸ್ಥಾನಕ್ಕೆ ಹೋದನಂತರ ಮೂರು ವಿಭಾಗವಾಗುತ್ತವೆ. ಮೇಲ್ಮಡೆಗೆ ಹೋದ (೧೦) ಧಮನೀಗಳು ಮೂರು ವಿಭಾಗವಾಗಲು (೩೦) ಆಗುತ್ತವೆ ಇವುಗಳ ಸ್ಥಾನ ಕಾರ್ಯಾದಿಗಳನ್ನು ವಿವರಿಸುತ್ತಾರೆ.

ಅವುಗಳಲ್ಲಿ:— **ವಾತಪಿತ್ತ ಕಫರಕ್ತ ರಸಗಳನ್ನು** ಒಯ್ಯುವ ಧಮನೀಗಳು ಪ್ರತಿಯೊಂದೂ ಎರಡೆರಡಂತೆ (೧೦) ಇರುತ್ತವೆ **ಶಬ್ದರೂಪ ರಸಗಂಧಗಳನ್ನು** ಗ್ರಹಣಮಾಡುವ ಧಮನಿಗಳು (೮) ಇರುತ್ತವೆ **ಮಾತಾಡುವ ಕೆಲಸ ಮಾಡುವ** ಧಮನಿಗಳು (೨) ಇರುತ್ತವೆ. **ಅವ್ಯಕ್ತ ಶಬ್ದವನ್ನುಂಟು ಮಾಡುವ** ಧಮನಿಗಳು (೨) ಇರುತ್ತವೆ. **ನಿದ್ರೆಯನ್ನುಂಟು ಮಾಡುವ** ಧಮನಿಗಳು (೨), **ಎಚ್ಚರವನ್ನುಂಟುಮಾಡುವ** ಧಮನಿಗಳು (೨) ಇರುತ್ತವೆ **ಕಣ್ಣೀರನ್ನು ಪ್ರವಹಿಸುವ** ಧಮನೀಗಳು (೨) ಇರುತ್ತವೆ. **ಸ್ತನ್ಯವಾಹೀ** ಧಮನಿಗಳು ಸ್ತ್ರೀಯರ ಸ್ತನಗಳನ್ನಾಶ್ರಯಿಸಿ ಇರುವಂಥವುಗಳು (೨) ಇರುತ್ತವೆ. ಅವೇ ಧಮನಿಗಳು (೨) ಪುರುಷರಿಗೆ ಸ್ತನ ಪ್ರದೇಶಗಳಿಂದ **ಶುಕ್ರವನ್ನು ವಹಿಸುವಂಥವು** ಆಗಿರುತ್ತವೆ ಹೀಗೆ ಊರ್ಧ್ವ ಭಾಗಗತವಾದ (೩೦) ಧಮನಿಗಳು ವಿಭಾಗಶಃ ವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತವೆ.

ವಾತ ಪಿತ್ತ ಕಫ ಶೋಣಿತ ರಸವಾಹೀ(೧೦), ಶಬ್ದ ರೂಪರಸ ಗಂಧಗ್ರಾಹೀ (೮), ಭಾಷಣಕಾರೀ (೨), ಅವ್ಯಕ್ತ ಶಬ್ದ (ಘೋಷ) ಕಾರೀ (೨), ಸ್ವಪ್ನಕಾರೀ (೨), ಪ್ರಬೋಧಕಾರೀ (೨), ಅಶ್ರುವಾಹೀ (೨), ಸ್ತನ್ಯವಾಹೀ ಅವೇ ಪುರುಷಶುಕ್ರವಾಹೀ (೨), ಇವೆಲ್ಲ ಒಟ್ಟು

ಧಮನಿಗಳು ಕೂಡಿ [೩೦] ಇರುತ್ತವೆ ದೇಹದ ಊರ್ಧ್ವ ಭಾಗಗಳಲ್ಲಿರುವ ಧಮನಿಗಳು ಇಂತಿರುತ್ತವೆ ಧಮನಿಗಳು ಹೊರಗಿನ ಶಬ್ದಾದಿಗಳನ್ನು ಗ್ರಹಣ ಮಾಡನದು ಮತ್ತು ಭಾಷಣಾದಿ ಶಬ್ದಗಳನ್ನುಂಟು ಮಾಡುವದು, ಹೀಗೆ ಗ್ರಹಣೋತ್ಪಾದನಗಳೆರಡನ್ನೂ ಮಾಡುತ್ತವೆಂದು ತಿಳಿಯಬೇಕು

ಏತಾಭಿರೂರ್ಧ್ವಂನಾಭೇರುದರಪಾರ್ಶ್ವಪೃಷ್ಠೋರಃಸ್ಕಂಧ ಗ್ರೀವಾಬಾಹವೋಧಾರ್ಯಂತೇಯಾಪ್ಯಂತೇಚ ॥

(ಸುಶ್ರುತ॥ ಶಾರೀರ॥ ಅ ೯ ಸೂ ೫)

ಇವುಗಳಿಂದ ನಾಭಿಯ ಮೇಲ್ಗಡೇ ಭಾಗಗಳಲ್ಲಿರುವ, "ಉದರ" (ಹೊಟ್ಟೆ), "ಪಾರ್ಶ್ವ" (ಪಕ್ಕ), "ಪೃಷ್ಠ" (ಬೆನ್ನು), "ಉರಃ" (ಎದೆ), "ಸ್ಕಂಧ" (ಭುಜ), "ಗ್ರೀವಾ" (ಕುತ್ತಿಗೆ), "ಬಾಹು" (ರಟ್ಟೆ, ತೋಳು), ಇವುಗಳು ಧಾರಣೇ ಮಾಡಲ್ಪಟ್ಟವುಗಳಾಗಿ ರಕ್ಷಿಸಲ್ಪಡುತ್ತವೆ.

ಊರ್ಧ್ವಂಗಮಾಸ್ತು ಕುರ್ವಂತಿಕರ್ಮಾಣ್ಯೇತಾನಿಸರ್ವಶಃ ॥

ನಾಭಿಯಿಂದ ಮೇಲ್ಗಡೆಗೆ ಪಸರಿಸಿದ "ಧಮನಿಗಳು" ಈ ಪೂರ್ವೋಕ್ತ ಕರ್ಮಗಳನ್ನು ಮಾಡುತ್ತವೆ. ಧಮನಿಗಳಿಂದ ರೂಪಾದಿಗ್ರಹಣವಾಗುವ ಕಾಲದಲ್ಲಿ, ರಜೋಗುಣಯೋಗದಿಂದ ಆತ್ಮ ಪ್ರಯತ್ನಪ್ರಬೋಧಿತ ಮನೋಯುಕ್ತವಾಗಿ ಕಾರ್ಯ ಮಾಡುತ್ತವೆ. ಅರ್ಥಾತ್ ಮನೋಯುಕ್ತವಾಗಿ ಧಮನಿಗಳು ವಿಷಯ ಸ್ವೀಕಾರ ಅಥವಾ ಶಬ್ದಾದಿ ಕರ್ಮಗಳನ್ನು ವಹಿಸುತ್ತವೆಂದಭಿಪ್ರಾಯವಾಗಿರುತ್ತದೆ ಮನಸ್ಸು ಅಣುರೂಪವುಳ್ಳದ್ದಾಗಿಯೂ ಒಂದೇ ಇರುತ್ತಿರುವದಾಗಿಯೂ ಇರುವದರಿಂದ, ಒಂದೇ ಸಮಯದಲ್ಲಿ ಸರ್ವ ಧಮನಿಗಳು ತಮ್ಮ ವಿಷಯಗಳನ್ನು ಗ್ರಹಿಸಲಾರವು. ಅರ್ಥಾತ್ ವಿಷಯ ಗ್ರಹಣ ಮತ್ತು ಶಬ್ದೋಚ್ಚಾರಾದಿಕರ್ಮಗಳಲ್ಲಿ, ಮನೋಯೋಗ ಅವಶ್ಯವಾದ್ದರಿಂದಲೂ ಸರ್ವದರಲ್ಲಿ ಒಂದೇಆದ ಮನಸ್ಸಿನ ಏಕಕಾಲ ಪ್ರವೃತ್ತಿ ಅಸಂಭವವಾದ್ದರಿಂದಲೂ ಮನೋಯುಕ್ತವಾದ ಒಂದೇ ವಿಷಯ ಗ್ರಹಣ ಅಥವಾ

ಕರ್ಮಗಳನ್ನು ಮಾಡುತ್ತವೆ. ಎಲ್ಲಾ ಧಮನಿಗಳು ಒಮ್ಮೆಲೇ ಕರ್ತವ್ಯಕಾರಿ ಗಳಾಗುವದಿಲ್ಲೆಂಬುವದೇ ಇದರ ಅಭಿಪ್ರಾಯವಾಗಿರುತ್ತದೆ.

ಅಧೋಗಾಮೀ ಧಮನಿಗಳು

ಅಧೋಗವಾಸ್ತ್ವವಕ್ಷ್ಯಾಮಿಕರ್ಮಚಾಸಾಂ ಯಥಾಯಥಂ ॥ ಅಧೋಗವಾಸ್ತು ವಾತವಮೂತ್ರಪುರೀಷಶುಕ್ರಾರ್ತವಾದೀನ್ಯ ಧೋವಹಂತಿ॥ತಾಸ್ತು ಪಿತ್ತಾಶಯಮಭಿಪ್ರಪನ್ನಾಸ್ತತ್ರಸ್ಥಮೇ ವಾನ್ನಪಾನರಸಂ ವಿಪಕ್ವಮೌಷ್ಣ್ಯಾದ್ವಿವೇಚಯಂತ್ಯೋಕಸಿವ ಹಂತ್ಯಃ ಶರೀರಂ ತರ್ಪಯಂತಿ, ಆರ್ಪಯಂತಿಚೋರ್ಧ್ವಗಾ ನಾಂತಿರ್ಯಗ್ಗಾಣಾಂಚ,ರಸಸ್ಥಾನಂಚಾಭಿಪೂರಯಂತಿ, ಮೂತ್ರಪುರೀಷಸ್ವೇದಾಂಶ್ಚವಿವೇಚಯಂತಿ ॥

(ಸುಶ್ರುತ॥ ಶಾರೀರ॥ ೮ ೯ ಸೂ ೭)

ಸುಶ್ರುತಾದಿ ಶಿಷ್ಯರಿಗೆ ಧನ್ವಂತರಿಯು ಉಪದೇಶವು ಇಂತಿರುತ್ತದೆ:— ಅಧೋಗಾಮಿಯಾದ ಧಮನಿಗಳು ಹೇಗೆ ದೇಹದಲ್ಲಿ ಪಸರಿಸುತ್ತವೆ ಎಂಬುವ ದನ್ನೂ ಅವುಗಳ ಕರ್ಮವನ್ನೂ ಹೇಳುತ್ತಾರೆ

"ಅಧೋಗಾಮೀ ಧಮನಿಗಳು" **ವಾತ** (ವಾಯು), **ಮೂತ್ರ** (ಆಹಾರ ಮತ್ತು ದ್ರವಗಳಲ್ಲಿಯ ಮಲಿನ ಜಲ ಭಾಗ), **ಪುರೀಷ** (ಆಹಾರದ ಕಿಟ್ಟ ಭಾಗ), **ಶುಕ್ರ** (ಪುರುಷನ ಸಪ್ತಮ ಧಾತು ಪ್ರಜೋತ್ಪಾದಕ), **ಆರ್ತವ** (ರತಿಕಾಲಸ್ರಾವಿ ಮತ್ತು ಮಾಸಿಕ ರಜಸ್ಸು), ಇವುಗಳನ್ನು ಅಧೋಭಾಗದಲ್ಲಿ ಸಂಚಾರಮಾಡಿಸುತ್ತವೆ. ಪಿತ್ತಾಶಯ ಸ್ಥಾನದಲ್ಲಿ ಹೋದ ಧಮನಿಗಳು ಉಷ್ಣತೆಯಿಂದ ವಿಪಕ್ವವಾದ ಅಲ್ಲಿರುವ ಅನ್ನಪಾನ ರಸಗಳನ್ನು ವಿಭಾಗಿಸುತ್ತವೆ **ವಿವೇಚಯಂತಿ** ಅಂದರೆ ಚನ್ನಾಗಿ ಅನ್ನಪಾನ ರಸಗಳು ಪಕ್ವವಾದ ಮೇಲೆ, ಅಗ್ನಿಯಿಂದ ಬೇರ್ಪಡಿಸಿ ಗ್ರಹಿಸುತ್ತವೆಂಬಭಿಪ್ರಾಯವು. ಹೀಗೆ ಅನ್ನ ರಸವನ್ನು ಗ್ರಹಿಸಿ ಅದನ್ನು ಧಮನೀ ಮುಖಾಂತರವಾಗಿ ಸಂಚರಿಸುತ್ತಾ ಶರೀರವನ್ನು ತೃಪ್ತಿಪಡಿಸುತ್ತವೆ **"ಊರ್ಧ್ವಗಾಮಿ"** ಮತ್ತು

'ತಿರ್ಯಗ್ಗಾಮಿ ಧಮನಿಗಳಲ್ಲಿ" ರಸವು ಹೋಗುವಂತೇ ಮಾಡುತ್ತವೆ ಊರ್ಧ್ವಗ ಧಮನಿಗಳ ಮುಖಾಂತರವಾಗಿ ರಸ ಸ್ಥಾನದಲ್ಲಿ ರಸವು ಹೋಗಿ ತುಂಬುವಂತೆ ಮಾಡುತ್ತವೆ ಇಲ್ಲಿ ರಸ ಸ್ಥಾನವು "ಹೃದಯ"ವಾಗಿರುತ್ತದೆ. ಅಧೋಗಾಮೀ ಧಮನಿಗಳು ಹೃದಯ ಪ್ರದೇಶದಲ್ಲಿ ಸಂಚಾರಮಾಡುವದಿಲ್ಲ ವಾದ್ದರಿಂದ, ರಸವನ್ನ ರಸಸ್ಥಾನವಾದಹೃದಯದಲ್ಲಿ ಹೇಗೆತುಂಬಿಸುತ್ತವೆಂಬ ಆಕ್ಷೇಪ ಒರುತ್ತದೆ. ಅಧೋಗಾಮೀ ಧಮನಿಗಳಿಂದ ರಸವನ್ನು ಗ್ರಹಿಸಿ, ಊರ್ಧ್ವಗಾಮೀ ಧಮನಿಗಳು ರಸ ಸ್ಥಾನದಲ್ಲಿ ಅದನ್ನು ಒಯ್ದು ತುಂಬಿಸುತ್ತ ವೆಂದು ತಿಳಿಯಬೇಕು. ಮೂತ್ರ ಮಲ ಬೆವರು ಇವುಗಳನ್ನು ಬೇರ್ಪಡಿಸು ತ್ತವೆ. ಇವು ಪಿತ್ತ ಸ್ಥಾನಗತ ಧಮನಿಗಳ ಕಾರ್ಯವಾಗಿರುತ್ತವೆ

ಅಮ ಪಕ್ವಾಶಯಾಂತರೇಚ ತ್ರಿಧಾಜಾಯಂತೇತಾಸ್ತ್ರಿಂಶತ್; ತಾಸಾಂತು ವಾತ ಪಿತ್ತ ಕಫ ಶೋಣಿತರಸಾನ್ದ್ವೇದ್ವೇವಹತ ಸ್ತಾದಶ, ದ್ವೇ ಅನ್ನವಾಹಿನ್ಯಾವಂತ್ರಾಶ್ರಿತೇ, ತೋಯವ ಹೇದ್ವೇ, ಮೂತ್ರಬಸ್ತಿಮಭಿಪ್ರಪನ್ನೇ ಮೂತ್ರ ವಹೇದ್ವೇ, ಶುಕ್ರವಹೇದ್ವೇ ಶುಕ್ರಸ್ರಾದುರ್ಭಾವಾಯದ್ವೇ, ವಿಸರ್ಗಾಯ, ತೇಷವರಕ್ತಮಭಿವಹತೋವಿಸೃಜತಶ್ಚ ನಾಭೀಣಾಮಾರ್ತವ ಸಂಜ್ಞಂ, ದ್ವೇವರ್ಚೋನಿರಸನ್ಯೌ ಸ್ಥೂಲಾಂತ್ರ ಪ್ರತಿಬದ್ಧೇ, ಅಷ್ಟಾವನ್ಯಾಸ್ತಿರ್ಯಗ್ಗಾಮಿನೀನಾಂ ಧಮನೀನಾಂ ಸ್ವೇದಮು ರ್ಪಯಂತಿ; ತಾಸ್ತ್ವೇತಾಸ್ತ್ರಿಂಶತ್ ಸವಿಭಾಗಾ ವ್ಯಾಖ್ಯಾತಾಃ॥

(ಸ.ಶ್ರುತ॥ ಶಾರೀರ॥ ಅ. ೯ ಸೂ ೭)

"ಅಧೋಗಾಮೀ ಧಮನಿಗಳು" ಅಮ ಮತ್ತು ಪಕ್ವಾಶಯಗಳ ಮಧ್ಯ ಪ್ರದೇಶದಲ್ಲಿ, ಮೂರು ವಿಭಾಗವುಳ್ಳವುಗಳಾಗುತ್ತವೆ. ಅಧೋ ಭಾಗದಲ್ಲಿ (೧೦) ಧಮನಿಗಳು, ಮೂರು ವಿಭಾಗವಾಗಿ ಅಂದರೆ (೩೦) ಇರುತ್ತವೆಂದು ತಿಳಿಯಬೇಕು. ಮೇಲೆ ಅಮಾಶಯಸ್ಥಾನಗಳಲ್ಲಿ ಅಧೋಗಾಮೀ ಧಮನಿಗಳು ಹೋಗುವದಿಲ್ಲವಾದ್ದರಿಂದಲೂ ನಾಭಿಯಿಂದಾರಂಭಿಸಿ ಸ್ತನಪರ್ಯಂತವಾದ ಭಾಗಕ್ಕೆ ಅಮಾಶಯವೆಂದು ಹೇಳುವದರಿಂದಲೂ, ಅಮ ಪಕ್ವಾಶಯಾಂತರ

ವೆಂದರೆ ನಾಭಿಯ ಮೇಲ್ಗಡೆಯಿಂದಾರಂಭಿಸಿ ಹಕ್ವಾಶಯದ ವರೆಗಿನ ಪ್ರದೇಶಗಳೆಂದು ತಿಳಿಯಬೇಕು. ಯಾಕಂದರೆ ಪಿತ್ತ ಸ್ಥಾನಗತ ಧಮನಿಗಳ ಕಾರ್ಯಗಳನ್ನು ಹಿಂದೆ ವಿವರಿಸಿರುವದರಿಂದ, ಈಗ ಹೇಳುತ್ತಿರುವದು ಪಿತ್ತ ಸ್ಥಾನಗಳ ಕೆಳಗೆ ಹಕ್ವಾಶಯದ ವರೆಗಿನ ಪ್ರದೇಶಗಳೆಂದು ತಿಳಿಯಬೇಕು. ಅಧೋಭಾಗಗತ ಧಮನಿಗಳು (೧೦), ಆಮಾಶಯ ಮತ್ತು ಹಕ್ವಾಶಯಗಳ ಮಧ್ಯ ಸ್ಥಾನಗಳಲ್ಲಿ ಬಂದೊಡನೆ ಮೂರು ವಿಭಾಗವಾಗಿ (೩೦) ಆಗುತ್ತವೆ ಇವುಗಳ ಸ್ಥಾನ ಕಾರ್ಯಗಳನ್ನು ವಿವರಿಸುತ್ತಾರೆ

ಅವುಗಳಲ್ಲಿ:— "**ವಾತ ಪಿತ್ತ ಕಫ ರಕ್ತ ರಸಗಳನ್ನು**" ಒಯ್ಯುವ ಧಮನಿಗಳು ಪ್ರತಿಯೊಂದು ಎರಡೆರಡರಂತೆ (೧೦) ಇರುತ್ತವೆ ಕರುಳನ್ನು ಆಶ್ರಯಿಸಿರುವ **ಅನ್ನವಾಹೀ ಧಮನಿಗಳು** (೨) ಇರುತ್ತವೆ **ಜಲವಾಹೀ ಧಮನಿಗಳು** (೨) ಇರುತ್ತವೆ. ಬಸ್ತಿ ಸ್ಥಾನದಲ್ಲಿ ಬಂದು ಕೂಡಿಕೊಂಡಿರುವ **ಮೂತ್ರವಾಹೀ ಧಮನಿಗಳು** (೨) ಇರುತ್ತವೆ. ಶುಕ್ರಪ್ರಾದುರ್ಭಾವಕ್ಕಾಗಿ **ಶುಕ್ರವಾಹೀ ಧಮನಿಗಳು** (೨) ಇರುತ್ತವೆ **ಶುಕ್ರ ವಿಸರ್ಜನೆಗಾಗಿ** (೨) ಧಮನಿಗಳಿರುತ್ತವೆ. [ಈ ಶುಕ್ರವಿಸರ್ಜನೇಮಾಡುವ ಧಮನಿಗಳೇ ಸ್ತ್ರೀಯರ ಆರ್ತವ ಸಂಜ್ಞೆಯುಳ್ಳ ರಕ್ತವನ್ನು ಒಯ್ಯುವಂಥವು [ಪ್ರಾದುರ್ಭಾವ] ಮತ್ತು ವಿಸರ್ಜನೇ ಮಾಡುವವೂ ಆಗಿರುತ್ತವೆ] **ಸ್ಥೂಲಾಂತ್ರಬದ್ಧವಾದ** (೨) ಧಮನಿಗಳು ಮಲವನ್ನು ಹೊರಗೆಹಾಕುತ್ತವೆ. ತಿರ್ಯಗ್ಗಾಮೀ ಧಮನಿಗಳಿಗೆ **ಸ್ವೇದವನ್ನು** ಒಯ್ದು **ಮುಟ್ಟಿಸುವ** ಧಮನಿಗಳು (೮) ಇರುತ್ತವೆ ಹೀಗೆ ಅಧೋಭಾಗಗತವಾದ (೩೦) ಧಮನಿಗಳು ವಿಭಾಗಶಃ ವಿವರಿಸಲ್ಪಟ್ಟಿರುತ್ತವೆ

ವಾತಾದಿವಾಹೀ ಧಮನಿಗಳು [೧೦], ಅನ್ನವಾಹೀ [೨], ತೋಯವಾಹೀ [೨], ಮೂತ್ರವಹೇ [೨], ಶುಕ್ರವಹೇ [೨], ಶುಕ್ರ ವಿಸರ್ಜಿನೀ [೨], (ಸ್ತ್ರೀಯರಿಗೆ ಆರ್ತವಪ್ರಾದುರ್ಭಾವ ಮತ್ತುಗಿವಿಸರ್ಜನೆಗಾಗಿ ಈ ಧಮನಿಗಳಿರುತ್ತವೆ.) **ವರ್ಚೋನಿರಸನ ಧಮನೀ [೨], ಸ್ವೇದವಾಹೀ ಧಮನಿಗಳು (೮), ಈ** ಮೊದಲಾದ ಕಾರ್ಯಕಾರಿಯಾದ ಅಧೋಭಾಗಗತ ಧಮನೀಗಳು ಒಟ್ಟು ಕೂಡಿ [೩೦] ಇರುತ್ತವೆ.

ಪಿತಾಭಿರಧೋನಾಭೇಃ ಪಕ್ವಾಶಯಕಟೀಮೂತ್ರ ಪುರೀಷಗು
ದಬಸ್ತಿಮೇಢ್ರಸಕ್ಥೀನಿಧಾರ್ಯಂತೇಯಾಶ್ಯಂತೇಚ ॥
ಅಧೋಗಮಾಸ್ತು ಕುರ್ವಂತಿಕರ್ಮಾಣ್ಯೇತಾನಿಸರ್ವಶಃ ॥
(ಸುಶ್ರುತ॥ ಶಾರೀರ॥ ಅ ೯ ಸೂ ೭)

ಅಧೋಗಾಮಿಯಾದ ಧಮನಿಗಳಿಂದ ನಾಭಿಯ ಕೆಳ ಪ್ರದೇಶದಲ್ಲಿ ರುವ ಪಕ್ವಾಶಯ [ಮಲಾಶಯ], ಕಟಿ [ಟೊಂಕ], ಮೂತ್ರ ಮತ್ತು ಮಲಗಳು ಒಯ್ಯಲ್ಪಡುತ್ತವೆ. ಗುದ, ಬಸ್ತಿ, ಮೇಢ್ರ [ಶಿಶ್ನ], ಸಕ್ಥಿ [ಕಾಲು]," ಇವುಗಳು ಧಾರಣೇ ಮಾಡಲ್ಪಡುತ್ತವೆ ಮತ್ತು ರಕ್ಷಿಸಿಪೋಷಿತ ವಾಗುತ್ತವೆ. ಅಧೋಭಾಗಗಾಮಿಯಾದ ಧಮನಿಗಳು ಈ ಮೊದಲಾದ ಕಾರ್ಯವನ್ನು ಮಾಡುತ್ತವೆ

ತಿರ್ಯಗ್ಗತ ಧಮನಿಗಳು

ತಿರ್ಯಗ್ಗಾಃ ಸಂಪ್ರವಕ್ಷ್ಯಾಮಿಕರ್ಮಚಾಸಾಂಯಥಾಯಥಮ್॥
(ಸು॥ ಶಾ॥ ಅ ೯ ಶ್ಲೋ ೮)

ತಿರ್ಯಗ್ಗಾಣಾಂತು ಚತಸೃಣಾಂಧಮನೀನಾಮೇಕೈಕಾಶತಧಾ
ಸಹಸ್ರಧಾಚೋತ್ತರೋತ್ತರಂ ವಿಭಜ್ಯಂತೆ, ತಾಸ್ತ್ವಸಂಖ್ಯೇ
ಯಾಃ, ತಾಭಿರಿದಂಶರೀರಂಗವಾಕ್ಷಿತಂ ವಿಬದ್ಧಮಾತತಂಚ ॥
[ಸುಶ್ರುತ॥ ಶಾರೀರ॥ ಅ ೯ ಸೂ ೯]

ದೇಹದ ಎಡಬಲ ಪಾರ್ಶ್ವಗಳಲ್ಲಿ ಅಡ್ಡವಾಗಿ [ತಿರ್ಯಕ್] ಪಸರಿಸಿದ, ಧಮನಿಗಳ ಕಾರ್ಯವನ್ನು ಹೇಳುತ್ತಾರೆ. ತಿರ್ಯಗ್ಗಾಮಿಯಾದ [೪] ಧಮನಿಗಳು ಒಂದೊಂದು ನೂರಾರು ಅಥವಾ ಸಾವಿರಾರು ವಿಭಾಗವಾಗಿ ಉತ್ತರೋತ್ತರ ಹೆಚ್ಚಾಗಿ ವಿಭಾಗ ಹೊಂದುತ್ತವೆ. ಅವುಗಳು ಅಸಂಖ್ಯವಾದ ವುಗಳಾಗಿರುತ್ತವೆ. ಹೀಗೆ ಅಸಂಖ್ಯಾತವಾಗಿ ಪಸರಿಸಿದ ಧಮನಿಗಳಿಂದ ಶರೀರವು, ಜಾಳಿಗೆ ನೇಯ್ದಂತೇ ಕಾಣುತ್ತದೆ. ಮತ್ತು ಸುತ್ತಲೂ ದೇಹಕ್ಕೆ ಧಮನೀಗಳು ಜಾಳಿಗೆಗಳನ್ನು ಸುತ್ತಿದಂತೇ, ವ್ಯಾಪಿಸಿಕೊಂಡಿರುತ್ತವೆ

ತಾಸಾಂಮುಖಾನಿರೋಮಕೂಪಪ್ರತಿಬದ್ಧಾನಿ, ಯೈಃ ಸ್ವೇದ ಮುಭಿವಹಂತಿರಸಂಚಾಭಿತರ್ಪಯಂತ್ಯಂತರ್ಬಹಿಶ್ಚ, ತೈರೇವ ಚಾಭ್ಯಂಗಪರಿಷೇಕಾವಗಾಹಾಲೇಪನವೀರ್ಯಾಣ್ಯಂತಃ ಶರೀರಮಭಿಪ್ರತಿಪದ್ಯಂತೇತ್ವಚಿವಿಪಕ್ವಾನಿ, ತೈರೇವಚಸ್ಪರ್ಶಸುಖ ಮಸುಖಂವಾಗೃಹ್ಣೀತೇ, ತಾಸ್ತ್ವೇತಾಶ್ಚತಸ್ರೋಧಮನ್ಯಃ ಸರ್ವಾಂಗಗತಾಃ ಸವಿಭಾಗಾವ್ಯಾಖ್ಯಾತಾಃ ॥

[ಸುಶ್ರುತ॥ ಶಾರೀರ॥ ೪ ೯ ಸೂ ೯]

ಧಮನಿಗಳ ಸೂಕ್ಷ್ಮವಾದ ಅಸಂಖ್ಯಾತ ವಿಭಾಗಗಳು ರೋಮ ಕೂಪಗಳಲ್ಲಿ ಅಂಟಿಕೊಂಡಿರುತ್ತವೆ. ಧಮನೀ ಮುಖಗಳು ರೋಮರಂಧ್ರ ಪ್ರತಿಬದ್ಧವಾಗಿರುತ್ತವೆಂಬಭಿಪ್ರಾಯವು ಕೂದಲಿನೋಪಾದಿಯಲ್ಲಿ ಅತಿಸೂಕ್ಷ್ಮವಾಗಿ ಪಸರಿಸಿದ ರೋಮರಂಧ್ರ ಮುಖವುಳ್ಳ ಧಮನಿಗಳು, ದೇಹದಲ್ಲಿಯ ಬೆವರನ್ನು ಒಯ್ದು ಹೊರಗೆ ಹಾಕುತ್ತವೆ ಮತ್ತು ಪೋಷಕವಾದ **ರಸ ವನ್ನು** ಸಮಗ್ರ ಶರೀರದಲ್ಲಿಯೂ ಒಯ್ಯುವಂಧವುಗಳಾಗಿ, ದೇಹದ ಒಳ ಭಾಗವನ್ನೂ ಬಾಹ್ಯವಾದ ಚರ್ಮ ಪ್ರದೇಶಗಳನ್ನೂ **ಪೋಷಿಸುತ್ತವೆ** ಈ ಧಮನಿಗಳಿಂದಲೇ ಅಭ್ಯಂಗ ಮೊದಲಾದವುಗಳ ಸತ್ವವು, ಬಹಿರ್ಭೂತರೋಮರಂಧ್ರ ನಿಬದ್ಧವಾದ ಮುಖಗಳಿಂದ ಶರೀರದ ಒಳಭಾಗಗಳಲ್ಲಿ ಒಯ್ಯಲ್ಪಡುತ್ತವೆ. **ಅಭ್ಯಂಗ** (ತೈಲಾದಿಗಳನ್ನು ಹಚ್ಚಿಕೊಂಡು ಮಾಡುವ ಸ್ನಾನ), **ಪರಿಷೇಕ** (ಔಷಧ ದ್ರವ್ಯಗಳ ಕಷಾಯವನ್ನು ಧಾರಾಕಾರವಾಗಿ ಸುರುವುತ್ತಿರೋಣ), **ಅವಗಾಹ** [ತೈಲಾದಿಗಳಿಂದ ಯುಕ್ತವಾದ ಜಲದ್ರೋಣಿಯಲ್ಲಿ ಕುಳಿತಿರುವದು], **ಆಲೇಪನ** [ಔಷಧರಾಡಿ ಅಥವಾ ತೈಲಾದಿಗಳನ್ನು ಹಚ್ಚುವದು], ಇವುಗಳ ಸತ್ವವು ಚರ್ಮಗತ ಅಗ್ನಿಯಿಂದ ಪಕ್ವವಾದ ನಂತರ, ಧಮನಿಗಳು ದೇಹದ ಒಳಭಾಗಕ್ಕೆ ಒಯ್ದು ಮುಟ್ಟಿಸುತ್ತವೆ. ಬಹಿರ್ಭಾಗದ ಚರ್ಮಗಳಲ್ಲಿ ವ್ಯಾಪಿಸಿದ ಸೂಕ್ಷ್ಮ ಧಮನಿಗಳಿಂದಲೇ ಸ್ಪರ್ಶಜ್ಞಾನ ಮತ್ತು ಸುಖಸ್ಪರ್ಶ ದುಃಖಸ್ಪರ್ಶಗಳ ಬೋಧವಾಗುತ್ತದೆ. ಹೀಗೆ ತಿರ್ಯಗ್ಗತವಾದ [೪] ಧಮನಿಗಳು ಅಸಂಖ್ಯಾತವಾಗಿ ಸರ್ವಾಂಗಗಳಲ್ಲಿಯೂ ವ್ಯಾಪಿಸಿರುವ ವಿಭಾಗಗಳನ್ನೂ ಅವುಗಳ ಕಾರ್ಯಗಳನ್ನೂ ಸಹಿತವಾಗಿ ವಿವರಿಸರುತ್ತದೆ.

ಊರ್ಧ್ವಗಾ ಧಮನಿಗಳು [೧೦] ಇರುತ್ತವೆ. ಅವು ವಿಭಾಗಹೊಂದಿದ [೩೦] ಧಮನಿಗಳನ್ನು ಸ್ಥಾನ ಕಾರ್ಯಾದಿಗಳನ್ನು ಸಹಿತವಾಗಿ ನಿರ್ದೇಶಿಸಿದ್ದಾರೆ

ಇದರಂತೆ [೧೦] **ಅಧೋಗಾಮಿ ಧಮನಿಗಳು** [೩೦] ಆಗಿರುತ್ತವೆ.

ತಿರ್ಯಗ್ಗತ ಧಮನಿಗಳು ೪ ಇರುತ್ತವೆ ಇವುಗಳ ವಿಭಾಗಗಳು ಅಸಂಖ್ಯವಾದವುಗಳು.

ಒಟ್ಟು ಧಮನಿಗಳು ಮುಖ್ಯವಾಗಿ [೨೪] ಇರುತ್ತವೆ ವಿಭಾಗಶಃ [೬೪] ಅಥವಾ ತಿರ್ಯಗ್ಗತವಾದವುಗಳು ಬಹಳೇ ಇರುವದರಿಂದ ಅಸಂಖ್ಯಾತ ವೆಂದೂ ಹೇಳಿದ್ದಾರೆ.

ಯಥಾಸ್ವಭಾವತಃಖಾನಿ ಮೃಣಾಲೇಷುಬಿಸೇಷುಚ ॥
ಧಮನೀನಾಂತಥಾಖಾನಿರಸೋಯೈರುಪಚೀಯತೆ ॥

[ಸು॥ ಶಾ॥ ೪ ೯ ಶ್ಲೋ ೧೦]

ಹೇಗೆ **ಮೃಣಾಲ** [ಕಮಲಮೂಲ], **ಬಿಸ** [ಕಮಲದ ದೇಟು], ಇವುಗಳಲ್ಲಿ ಸ್ವಾಭಾವಿಕವಾಗಿ ರಂಧ್ರಗಳಿರುತ್ತವೆಯೋ, ಆದರಂತೇ ಧಮನಿಗಳಲ್ಲಿಯೂ ರಂಧ್ರಗಳಿರುತ್ತವೆ. ಧಮನಿಗಳ ರಂಧ್ರಮುಖಾಂತರವಾಗಿಯೇ ರಸವು ದೇಹದಲ್ಲಿ ಪಸರಸಲ್ಪಡುತ್ತದೆ. **ಮೃಣಾಲ, ಬಿಸಗಳು** ಕಮಲದ ದೇಟೆಂದು ಕಾವ್ಯಾದಿಗಳಲ್ಲಿ ವಿವರಿಸಲ್ಪಟ್ಟಿರುತ್ತವೆ. ಅಮರದಲ್ಲಿ ಕಮಲಾದಿಗಳ ಮೂಲದ ಹೆಸರಾಗಿರುತ್ತವೆ ಇಲ್ಲಿ ಇವೆರಡನ್ನೂ ಗ್ರಹಣ ಮಾಡಿರುವದರಿಂದ ಸಂದರ್ಭಾನುರೋಧವಾಗಿ **ಕಮಲಮೂಲ** ಮತ್ತು **ಕಮಲ ದೇಟು** ಎಂದು ವಿಶದೀಕರಿಸಲಾಗಿದೆ.

ಧಮನೀ ಮಹತ್ವವು

ಪಂಚಾಭಿಭೂತಾಸ್ತ್ವಥ ಪಂಚಕೃತ್ವಃ ॥

ಪಂಚೇಂದ್ರಿಯಂ ಪಂಚಸುಭಾವಯಂತಿ ॥
ಪಂಚೇಂದ್ರಿಯಿಂ ಪಂಚಸುಭಾವಯಿತ್ವಾ ॥
ಪಂಚತ್ವಮಾಯಾಂತಿ ವಿನಾಶಕಾಲೇ ॥

(ಸುಶ್ರುತ॥ ಶಾರೀರ॥ ಅ. ೯ ಶ್ಲೋ. ೧೧)

ಈ ಶ್ಲೋಕವು ಧಮನೀ ವಿಷಯದಲ್ಲಿ ಬಹಳೇ ಮಹತ್ವವಿರುವದರಿಂದಲೂ. ಜೀವನ ಕ್ರಿಯಾ ವಿಶೇಷ ಮತ್ತು ಜ್ಞಾನಾದಿಗಳು ಧಮನಿಯನ್ನು ನುಸರಿಸಿಯೇ ದೇಹದಲ್ಲಿ ನಡೆಯುವದರಿಂದಲೂ, ಸುಗಮತೆಗಾಗಿ ಮೂಲ ಶ್ಲೋಕ ಶಬ್ದಗಳನ್ನೇ ಇಟ್ಟು ವ್ಯಾಖ್ಯಾನಮಾಡಲ್ಪಡುತ್ತದೆ ಬೇರೆ ಬೇರೇ ಆಚಾರ್ಯರು ಮತ್ತು ಭಿನ್ನ ಭಿನ್ನ ರೀತಿಯಿಂದ ಇನ್ನೂ ಅನೇಕರು ಅರ್ಥ ಮಾಡುತ್ತಾರೆ. ಒಟ್ಟು ಸಾಮಾನ್ಯತಃ ಎಂಟು ಅರ್ಥಗಳಾಗುತ್ತವೆ. ಇಲ್ಲಿ ಮುಖ್ಯವಾದ ಒಂದೇ ಅರ್ಥವು ವಿವರಿಸಲ್ಪಡುತ್ತದೆ. ವಿಶೇಷ ಅವಲೋಕನೇ ಬೇಕಾದವರು ಸುಶ್ರುತವನ್ನು ನೋಡಿರಿ "ಪಂಚಾಭಿಭೂತಾಃ" ಧಮನಿಗಳು ಪಂಚಭೂತಗಳಿಂದ ಉತ್ಪನ್ನವಾದಂಧವುಗಳು, ಅಥವಾ ಶಬ್ದ ಸ್ಪರ್ಶ ರೂಪ ರಸ ಗಂಧಗಳಿಂದ ವ್ಯಾಪ್ತವಾದವುಗಳು, ಇಲ್ಲವೇ ಆಕಾಶವಾಯು ಅಗ್ನಿ ಜಲ ಭೂಮಿ ಇವುಗಳಿಂದ ವ್ಯಾಪಿಸಲ್ಪಟ್ಟವುಗಳು "ಪಂಚೇಂದ್ರಿಯಂ" ಐದು ಇಂದ್ರಿಯಗಳಿಂದ ವಿಷಯ ಸ್ವೀಕಾರ ಮಾಡುವ ಕರ್ಮ ಪುರುಷನನ್ನು "ಪಂಚಸು" ಶ್ರೋತ್ರಾದಿ ಪಂಚ ಇಂದ್ರಿಯ ಸ್ಥಾನಗಳಲ್ಲಿ, "ಪಂಚಕೃತ್ವಃ" ಐದು ಸರತಿ, "ಭಾವಯಂತಿ" ಯೋಜಿಸುತ್ತವೆ "ಪಂಚೇಂದ್ರಿಯಂ" ಶ್ರೋತ್ರಾದೀಂದ್ರಿಯ ಪಂಚಕವನ್ನು, ಊರ್ಧಾತ್ ಶ್ರೋತ್ರಜಕ್ಷುರ್ಜಿಹ್ವಾ ಘ್ರಾಣಸ್ಪರ್ಶೇಂದ್ರಿಯಗಳಲ್ಲಿಯ ಸೂಕ್ಷ್ಮವಾದಇಂದ್ರಿಯಸ್ವರೂಪಗಳನ್ನು "ಪಂಚಸು" ಆಕಾಶಾದಿಪಂಚಮಹಾಭೂತಗಳಲ್ಲಿ, "ಭಾವಯಿತ್ವಾ" ಸಂಯೋಗವನ್ನು ಮಾಡಿ "ವಿನಾಶಕಾಲೇ" ಮರಣಸಮಯದಲ್ಲಿ, "ಪಂಚತ್ವಂ" ವಿನಾಶವನ್ನು ಅಥವಾ ಪಂಚಭೂತಗಳ ಪೃಥಕ್ ಪೃಥಕ್ ಸ್ಥಿತಿಯನ್ನು, "ಆಯಾಂತಿ" ಹೊಂದುತ್ತವೆ.

ಅಭಿಪ್ರಾಯವು

ಪಂಚಭೂತಗಳಿಂದುತ್ಪನ್ನವಾಗಿರುವ ಅಥವಾ **ಶಬ್ದ ಸ್ಪರ್ಶ ರೂಪ ರಸ ಗಂಧಗಳಿಂದ ವ್ಯಾಪ್ತವಾದ,** ಇಲ್ಲವೇ ಆಕಾಶ ವಾಯು ಅಗ್ನಿ ಜಲ ಭೂಮಿಗಳಿಂದ ವ್ಯಾಪಿಸಲ್ಪಟ್ಟ ಧಮನೀಗಳು, ಪಂಚೇಂದ್ರಿಯ ಗಳಿಂದವಿಷಯ ಸ್ವೀಕಾರ ಮಾಡುವ ಕರ್ಮ ಪುರುಷನನ್ನು [ಇನ್ನುಕೆಲವರು ಪಂಚೇಂದ್ರಿಯ ಗ್ರಹಣದಿಂದ ಕರ್ಮೇಂದ್ರಿಯಗಳನ್ನೂ ಗ್ರಹಿಸುತ್ತಾರೆ], ಶ್ರೋತ್ರಾದಿ ಪಂಚೇಂದ್ರಿಯಗಳಲ್ಲಿ, ಐದುಸಲ, ಯೋಜಿಸುತ್ತವೆ. ಆರ್ಥಾತ್ ರೂಪಾದಿ ವಿಷಯಗಳ ಗ್ರಹಣಮಾಡಬೇಕಿದ್ದರೆ ಚಕ್ಷುರಾದಿಗಳಲ್ಲಿ ಆತ್ಮನ ಅಧಿಷ್ಠಾನವಿರಬೇಕಾಗುತ್ತದೆಂಬಭಿಪ್ರಾಯವಾಗಿರುತ್ತದೆ. ಶ್ರೋತ್ರಾದೀಂದ್ರಿ ಯಗಳ ಸೂಕ್ಷ್ಮವಾದ ಸ್ವರೂಪವನ್ನು, ಆಕಾಶಾದಿ ಪಂಚಭೂತಗಳಲ್ಲಿ ಪಂಯೋಗಮಾಡಿ, ವಿನಾಶ ಕಾಲದಲ್ಲಿ, ವಿನಾಶವನ್ನು ಅಥವಾ ಪಂಚಭೂತ ಗಳ ಪೃಥಕ್ ಪೃಥಕ್ ಸ್ಥಿತಿಯನ್ನು ಹೊಂದುತ್ತವೆ. ಇಲ್ಲಿ **ಜ್ಞಾನೇಂದ್ರಿಯ ಕರ್ಮೇಂದ್ರಿಯ ಪಂಚಕಗಳನ್ನು** ವಿವರಿಸಿ ಮನಸ್ಸನ್ನು ಹೇಳದೇ ಇರುವದ ರಿಂದ ನಾಶ ಕಾಲದಲ್ಲಿ ಮನಸ್ಸು ಇಂದ್ರಿಯವಾಗಿದ್ದರೂ ನಾಶವಾಗುವದಿ ಲ್ಲೆಂದು ಸೂಚಿಸಲು ಹೀಗೆ ಹೇಳಿದ್ದಾರೆ. ಆದ್ದರಿಂದ ವಿಷಯ ಸ್ವೀಕಾರದಲ್ಲಿ ಇಂದ್ರಿಯಾಧಿಷ್ಠಿತವಾಗಿ ಮನಸ್ಸಿರುತ್ತದೆಂದು ತಿಳಿಯಬೇಕು. ನಾಶಕಾಲದಲ್ಲಿ ಸಂಸ್ಕಾರ ಗೃಹೀತತ್ವ ಧರ್ಮಮನೋವಿಹಿತವಿರುವದರಿಂದ ಮನೋನಾಶವಿ ಲ್ಲದ್ದರಿಂದ ಗ್ರಹಿಸಿಲ್ಲವೆಂದಭಿಪ್ರಾಯವು. ಇದರಿಂದ ಸ್ಥೂಲಭೂತ ಇಂದ್ರಿಯ ಗಳಿಗಿಂತ ಭಿನ್ನವಾದ್ದರಿಂದ **ಅತೀಂದ್ರಯವೆಂದೂ, ಸರ್ವೇಂದ್ರಿಯಾಧಿ ಷ್ಠಾನದಿಂದ ಅಣು ಸ್ವರೂಪವುಳ್ಳದ್ದೆಂದೂ,** ಸಂಸ್ಕಾರ ಗೃಹೀತತ್ವದಿಂದ **ಅಲೌಕಿಕವೆಂದೂ** ಸುಖ ದುಃಖಾದಿಗಳನ್ನು ಸ್ಥೂಲಭೂತೇಂದ್ರಿಯಗಳಿಗೆ ಅಗ್ರಾಹ್ಯವಾಗಿರುವಂಥವುಗಳನ್ನು ಗ್ರಹಿಸುವದರಿಂದ, ಸ್ಥೂಲಭೂತೇಂದ್ರಿಯ ಗಳಿಗಿಂತಲೂ ಸ್ವತಂತ್ರವೆಂದೂ **ಮನಸ್ಸನ್ನು** ವಿವರಿಸಿದಂತಾಗುತ್ತದೆ.

(೬೧) ಸ್ರೋತೋ ವಿವರಣೆಯು

ದೇಹದಲ್ಲಿ ಅಂತರ್ಮುಖವಾದ **ಸ್ರೋತಸ್ಸುಗಳು** [೨೨] ಇರುತ್ತವೆಂದು ಹೇಳಿದ್ದಾರೆ ಪ್ರಾಣೋದಕಾದಿಗಳು ಸ್ರೋತೋ ಮುಖಗಳಿಂದ ದೇಹದಲ್ಲಿ ಸಂಚಾರ ಮಾಡುತ್ತವೆ "ಚರಕದಲ್ಲಿ" ಸಿರಾಧಮನೀ ಸ್ರೋತಸ್ಸುಗಳನ್ನು ವಿಭಾಗ ಮಾಡದೇ, ಸ್ರೋತೋವಿಮಾನಾಧ್ಯಾಯದಲ್ಲಿ ಹೇಳಿದ್ದಾರೆ ಇಲ್ಲಿ ಶಲ್ಯತಂತ್ರವಾದ **ಸುಶ್ರುತದಲ್ಲಿ** ಸ್ರೋತೋವಿದ್ಧ ವಿಕಾರ ವಿಶೇಷಗಳನ್ನು ವಿವರಿಸಲು ವಿವರಣೆಯನ್ನು ಮಾಡುತ್ತಾರೆ

ಅತಊರ್ಧ್ವಂಸ್ರೋತಸಾಂಮೂಲವಿದ್ಧಲಕ್ಷಣಮುಪದೇ ಕ್ಷ್ಯಾಮಃ ॥ ತಾನಿತುಪ್ರಾಣಾನ್ನೋದಕರಸರಕ್ತಮಾಂಸಮೇ ದೋಮೂತ್ರಪುರೀಷಶುಕ್ರಾರ್ತವವಹಾನಿ, ಯೇಷ್ವಧಿಕಾರಃ ಏಕೇಷಾಂಬಹೂನಿ; ಏತೇಷಾಂವಿಶೇಷಾಬಹವಃ ॥

[ಸುಶ್ರುತ॥ ಶಾರೀರ॥ ೪ ೯ ಸೂ ೧೨]

ಸ್ರೋತಸ್ಸುಗಳ ಮೂಲದಲ್ಲಿ ವಿದ್ಧ [ಬಾಣಶಸ್ತ್ರಾದಿಗಳಿಘಾತ] ಸಂಭವಿಸಿದರೆ, ಸಾಧ್ಯಾಸಾಧ್ಯ ಲಕ್ಷಣವನ್ನು ಹೇಳುತ್ತಾರೆ "ಸ್ರೋತಸ್ಸುಗಳು" ಪ್ರಾಣ ಅನ್ನಜಲ ರಸರಕ್ತಮಾಂಸ ಮೇದಸ್ಸು ಮೂತ್ರಮಲ ಶುಕ್ರ ಆರ್ತವಗಳನ್ನು, ದೇಹದಲ್ಲಿ ವಹನಮಾಡುತ್ತವೆ. ದೇಹದಲ್ಲಿ ಸ್ರೋತಸ್ಸುಗಳು ಅಸಂಖ್ಯಾತ ಬಹುಸೂಕ್ಷ್ಮವಾಗಿ ಪಸರಿಸಿರುವದರಿಂದ, ಸಂಪೂರ್ಣ ದೇಹಚಾರಿಯಾದ ಸರ್ವಸ್ರೋತಸ್ಸುಗಳಲ್ಲಿಯ ವಿದ್ಧಲಕ್ಷಣವು; ಜ್ಞಾನವಾಗಲಿಕ್ಕೆ ಮೂಲವಿದ್ಧ ಲಕ್ಷಣವನ್ನು ಹೇಳುತ್ತಾರೆ ಅರ್ಥಾತ್ ಯಾವ ಸ್ಥಾನದಲ್ಲಿ ವಿದ್ಧವಾಗಿದ್ದರ ಲಕ್ಷಣದಿಂದ ಸಾಧ್ಯಾಸಾಧ್ಯ ಸ್ಥಿತಿಯು ಬೋಧವಾಗುತ್ತದೆಯೋ, ಅಂಥವುಗಳನ್ನು ಹೇಳುತ್ತಾರೆ. ಅವುಗಳನ್ನಾಶ್ರಯಿಸಿಯೇ ವಿವರಣೆ ಇರುವದರಿಂದ "ಯೇಷ್ವಧಿಕಾರಃ" ಎಂದು ಹೇಳಿದ್ದಾರೆ. "**ಶಲ್ಯ ಶಾಸ್ತ್ರದಲ್ಲಿ**" ಮಾತ್ರವೇ ಮೂಲ ವಿದ್ಧ ಲಕ್ಷಣದಿಂದ ಸಾಧ್ಯಾಸಾಧ್ಯ ಸ್ಥಿತಿಯು ಜ್ಞಾನವಾಗುವದರಿಂದಲೂ, ಕಾಯ ಚಿಕಿತ್ಸಾ ಕಾರ್ಯದಲ್ಲಿ

ವೇದನಾ ವಿಶೇಷ ಲಕ್ಷಣವು ಸ್ರೋತಸ್ಸು ವ್ಯಾಪಕವಾದ್ದರಿಂದ ಸರ್ವ ದೇಹದಲ್ಲಿಯೂ ವ್ಯಾಪಿಸಿರುತ್ತದೆ ಆದ್ದರಿಂದ ವಿಭಾಗಿಸಿ ಹೇಳಲು ಬರುವಂತಿಲ್ಲ. "ಶಲ್ಯತಂತ್ರದಲ್ಲಿ" ಸ್ರೋತಸ್ಸುಗಳಲ್ಲಿ ಆವಾವ ನಿಯತ ಸ್ಥಾನ [ಪ್ರದೇಶ] ವಿದ್ಧವಾಗಿರುವದರಿಂದಲೂ ವೇದನಾ ವಿಶೇಷ ನಿರ್ಧಾರ ಲಕ್ಷಣಗಳಿಂದಲೂ ಸಾಧ್ಯಾಸಾಧ್ಯ ಸ್ಥಿತಿಗಳನ್ನು ಹೇಳಬೇಕು. ಕಾಯಚಿಕಿತ್ಸಾದಲ್ಲಿ ಸ್ರೋತೋದುಷ್ಟಿ ಲಕ್ಷಣವನ್ನು ಗ್ರಹಿಸಬೇಕು ಸಮಗ್ರ ದೇಹವನ್ನು ವ್ಯಾಪಿಸಿದ ಸ್ರೋತಸ್ಸುಗಳಲ್ಲಿ ಅತಿ ಸೂಕ್ಷ್ಮವಾದ ವೇದನಾ ವಿಶೇಷಗಳಿಂದ ಸಾಧ್ಯಾಸಾಧ್ಯ ಸ್ಥಿತಿಯ ಜ್ಞಾನವಾಗುವದಿಲ್ಲವಾದ್ದರಿಂದ, ಕಾಯ ಚಿಕಿತ್ಸೆಯಲ್ಲಿ ಸ್ರೋತಸ್ಸುಗಳ ಸ್ಥಾನಾಶ್ರಯ ವೇದನಾದಿಗಳ ವಿವರಣೆಗಳನ್ನು ಮಾಡಿರುವದಿಲ್ಲ "ಯೇಷ್ವಧಿಕಾರಃ" ಎಂದು ಹೇಳಿರುವದರಿಂದ ಶಲ್ಯ ತಂತ್ರಾದಿಗಳಲ್ಲಿಯೇ ಮೂಲ ವಿದ್ಧ ನಿರ್ದಿಷ್ಟವಾದ ಸ್ರೋತಸ್ಸುಗಳಲ್ಲಿ ಮಾತ್ರ ಸಾಧ್ಯಾಸಾಧ್ಯ ನಿರ್ಣಯವಿರುತ್ತದೆಂದೂ, ಅನ್ಯತ್ರ ಇರುವದಿಲ್ಲೆಂದೂ ತಿಳಿಯಬೇಕು. ಕಾಯ ಚಿಕಿತ್ಸಾದಿಗಳಲ್ಲಿ ವಿಭಾಗಿಸಲು ಬರುವದಿಲ್ಲೆಂಬುವದೇ ಮುಖ್ಯಾಭಿಪ್ರಾಯವಾಗಿರುತ್ತದೆ ಒಂದೊಂದು. ಸ್ರೋತಸ್ಸುಗಳು ಸ್ಥಾನವೇದನಾದಿಗಳಿಂದ ವಿದ್ಧ ಲಕ್ಷಣವು ಬಹು ವಿಧವಾಗಿರುತ್ತವೆ. "ಏಕೇಷಾಂಬಹೂನಿ" ಕೆಲವರ ಮತಗಳು ಭಿನ್ನವಿರುವದರಿಂದ ಬಹುಪ್ರಕಾರವಾಗಿ ಎಂದು ವಿವರಿಸಿದ್ದಾರೆ. ಹೀಗೆ ಒಂದೊಂದುಸ್ರೋತಸ್ಸುಗಳಲ್ಲಿ ವಿದ್ಧವಾದ ಲಕ್ಷಣಗಳು ಅನೇಕವಿರುವದರಿಂದ ಎಲ್ಲಸ್ರೋತಸ್ಸುಗಳ ವಿವರಣೆಯು ಬಹಳವಾದದ್ದಾಗಿರುತ್ತದೆ

[೧] ಪ್ರಾಣವಾಹಿ ಸ್ರೋತಸ್ಸುಗಳು

ತತ್ರಪ್ರಾಣವಹೇದ್ವೇ, ತಯೋರ್ಮೂಲಂ ಹೃದಯಂ ರಸವಾಹಿನ್ಯಶ್ಚ ಧಮನ್ಯಃ, ತತ್ರವಿದ್ಧಸ್ಯಾಕ್ರೋಶನವಿನಮನಮೋಹನ ಭ್ರಮಣವೇಪನಾನಿ ಮರಣಂವಾ ಭವತಿ ॥

ಪ್ರಾಣವಾಹೀ ಸ್ರೋತಸ್ಸುಗಳು [೨] ಇರುತ್ತವೆ. ಅವುಗಳ ಮತ್ತು ರಸವಾಹಿನೀ ಧಮನೀಗಳ ಮೂಲವು ಹೃದಯವಾಗಿರುತ್ತದೆ. ಹೃದಯ ಸ್ಥಾನಗಳಲ್ಲಿಯ ಸ್ರೋತಸ್ಸು ಮತ್ತು ಧಮನೀಗಳಲ್ಲಿ ಆಘಾತ [ವಿದ್ಧ]ವಾದಲ್ಲಿ

ಆಕ್ರೋಶನ [ಅಳುವಿಕೆ], **ವಿನಮನ** [ವಿಶೇಷವಾಗಿ ಬಗ್ಗೋಣ], **ಮೋಹನ** [ಅಜ್ಞಾನವುಂಟಾಗೋಣ], **ಭ್ರಮಣ** [ತಲೆ ತಿರುಗೋಣ, ಹುಚ್ಚು], **ವೇಪನ** [ನಡಗುವಿಕೆ], **ಮರಣ,** ಮೊದಲಾದವುಗಳುಂಟಾಗುತ್ತವೆ

[೨] ಅನ್ನವಾಹಿ ಸ್ರೋತಸ್ಸುಗಳು

ಅನ್ನವಹೇದ್ವೇ, ತಯೋರ್ಮೂಲಮಾಮಾಶಯೋಽನ್ನವಾಹಿನ್ಯಶ್ಚ ಧಮನ್ಯಃ, ತತ್ರಪಿಡ್ಧಸ್ಯಾಧ್ಮಾನಂ ಶೂಲೋಽನ್ನದ್ವೇಷಃ ಛರ್ದಿಃ ಪಿಪಾಸಾಽಂಧ್ಯಂ ಮರಣಂಚ ॥

(ಸುಶ್ರುತ॥ ಶಾರೀರ॥ ಅ. ೯ ಸೂ ೧೨)

"ಅನ್ನವಾಹೀ ಸ್ರೋತಸ್ಸುಗಳು" (೨) ಇರುತ್ತವೆ ಅವುಗಳ ಮೂಲವು ಆಮಾಶಯ ಮತ್ತು ಅನ್ನವಾಹೀ ಧಮನಿಗಳಾಗಿರುತ್ತವೆ. ಇಲ್ಲಿ ಆಘಾತ (ವಿದ್ದ) ವಾದರೆ, "ಆಧ್ಮಾನ" (ಹೊಟ್ಟೆಯುಬ್ಬೋಣ), "ಶೂಲೆ" "ಅನ್ನ ದ್ವೇಷ, ಛರ್ದಿ(ವಾಂತಿ), ಪಿಪಾಸಾ(ನೀರಡಿಕೆ), ಅಂಧ್ಯಂ (ದೃಷ್ಟ್ಯಪಘಾತ), ಮರಣಗಳು" ಉಂಟಾಗುತ್ತವೆ.

[೩] ಉದಕವಾಹಿ ಸ್ರೋತಸ್ಸುಗಳು

ಉದಕವಹೇದ್ವೇ, ತಯೋರ್ಮೂಲಂತಾಲುಕ್ಲೋಮಚ, ತತ್ರವಿದ್ಧಸ್ಯ ಪಿಪಾಸಾ ಸದ್ಯೋಮರಣಂಚ ॥

(ಸುಶ್ರುತ॥ ಶಾರೀರ॥ ಅ ೯ ಸೂ ೧೨)

ಉದಕವಾಹೀ ಸ್ರೋತಸ್ಸುಗಳು (೨) ಇರುತ್ತವೆ ಅವುಗಳ ಮೂಲವು ತಾಲು ಮತ್ತು ಕ್ಲೋಮಗಳಾಗುತ್ತವೆ. ಅಲ್ಲಿ ವಿದ್ಧವಾದರೆ **ಪಿಪಾಸಾ** (ನೀರಡಿಕೆ), ಸದ್ಯೋಮರಣಗಳುಂಟಾಗುತ್ತವೆ.

[೪] ರಸವಾಹಿ ಸ್ರೋತಸ್ಸುಗಳು

ರಸವಹೇದ್ವೇ, ತಯೋರ್ಮೂಲಂ ಹೃದಯಂ ರಸವಾಹಿನ್ಯಶ್ಚ ಧಮನ್ಯಃ, ತತ್ರವಿದ್ಧಸ್ಯಶೋಷಃಪ್ರಾಣವಹವಿದ್ಧವಚ್ಚಮರಣಂ ತಲ್ಲಿಂಗಾನಿಚ ॥ (ಸು॥ ಶಾ॥ ಅ ೯ ಸೂ ೧೨)

ರಸವಾಹಿ ಸ್ರೋತಸ್ಸುಗಳು (೨) ಇರುತ್ತವೆ. ಅವುಗಳ ಮೂಲವು ಹೃದಯ ಮತ್ತು ರಸವಾಹೀ ಧಮನಿಗಳಾಗಿರುತ್ತವೆ ಇಲ್ಲಿ ವಿದ್ಧವಾದರೆ ಶೋಷ (ಕ್ಷಯ, ಅಥವಾ ಕ್ಷೀಣತೆ), ಉಂಟಾಗುತ್ತದೆ ಪ್ರಾಣವಾಹಿ ಸ್ರೋತಸ್ಸುಗಳಲ್ಲಿ ವಿದ್ಧವಾದಂತೇ ಮರಣ ಲಕ್ಷಣಗಳು ಸಂಭವಿಸುತ್ತವೆ

[೫] ರಕ್ತವಾಹೀ ಸ್ರೋತಸ್ಸುಗಳು

ರಕ್ತವಹೇದ್ವೇ, ತಯೋರ್ಮೂಲಂ ಯಕೃತ್‌ಪ್ಲೀಹಾನೌರಕ್ತವಾಹಿನ್ಯಶ್ಚ ಧಮನ್ಯಃ, ತತ್ರವಿದ್ಧಸ್ಯಶ್ಯಾವಾಂಗತಾಜ್ವರೋದಾಹಃ ಪಾಂಡುತಾಶೋಣಿತಾಗಮನಂ ರಕ್ತನೇತ್ರತಾಚ ॥

(ಸುಶ್ರುತ॥ ಶಾರೀರ॥ ಅ. ೯ ಸೂ ೧೨)

ರಕ್ತವಾಹಿಸ್ರೋತಸ್ಸುಗಳು (೨) ಇರುತ್ತವೆ. ಅವುಗಳ ಮೂಲವು ಯಕೃತ್ ಮತ್ತು ಪ್ಲೀಹ ರಕ್ತವಾಹೀ ಧಮನೀಗಳಾಗಿರುತ್ತವೆ. ಶ್ಯಾವಾಂಗತಾ(ಅಂಗಗಳು ಬೂದೀ ವರ್ಣವಾಗೋಣ), ಜ್ವರ, ದಾಹ, ಪಾಂಡುತಾ ರಕ್ತ ಹೊರಬೀಳೋಣ, ಕಣ್ಣು ಕೆಂಪಾಗುವಿಕೆ, ಇವುಗಳುಂಟಾಗುತ್ತವೆ.

[೬] ಮಾಂಸವಾಹೀ ಸ್ರೋತಸ್ಸುಗಳು

ಮಾಂಸವಹೇದ್ವೇ, ತಯೋರ್ಮೂಲಂ ಸ್ನಾಯುಶ್ಚರ್ಮ ರಕ್ತವಹಾಶ್ಚ ಧಮನ್ಯಃ, ತತ್ರವಿದ್ಧಸ್ಯಶ್ವಯಥುರ್ಮಾಂಸಶೋಷಃ ಸಿರಾಗ್ರಂಥಯೋ ಮರಣಂಚ ॥ (ಸು॥ ಶಾ॥ ಅ ೯ ಸೂ ೧೨)

ಮಾಂಸವಾಹೀ ಸ್ರೋತಸ್ಸುಗಳು (೨) ಇರುತ್ತವೆ ಅವುಗಳ ಮೂಲವು ಸ್ನಾಯು ಮತ್ತು ತ್ವಚೆ ರಕ್ತವಾಹೀ ಧಮನಿಗಳಾಗಿರುತ್ತವೆ ಇಲ್ಲಿ ವಿದ್ಧವಾದರೆ **ಶ್ವಯಥು** (ಬಾವು), **ಮಾಂಸಶೋಷ** (ಮಾಂಸಕ್ಷೀಣತೆ ಹುತ್ತು ಒಣಗೋಣ), **ಸಿರಾಗ್ರಂಥಿ** (ಸಿರಗಳಲ್ಲಿಯ ಗಂಟು), ಮರಣ ಗಳುಂಟಾಗುತ್ತವೆ

[೭] ಮೇದೋವಹ ಸ್ರೋತಸ್ಸುಗಳು

ಮೇದೋವಹೇದ್ವೇ, ತಯೋರ್ಮೂಲಂ ಕಟೀವೃಕ್ಕೌ ಚ, ತತ್ರ ವಿದ್ಧಸ್ಯ ಸ್ವೇದಾಗಮನಂ ಸ್ನಿಗ್ಧಾಂಗತಾ ತಾಲುಶೋಷಃ ಸ್ಥೂಲ ಶೋಷಿತಾ ಪಿಪಾಸಾಚ ॥ (ಸು॥ ಶಾ॥ ಅ ೯ ಸೂ ೧೨)

ಮೇದೋವಾಹೀ ಧಮನಿಗಳು (೨) ಇರುತ್ತವೆ. ಅವುಗಳ ಮೂಲವು ಕಟೀ ಮತ್ತು ವೃಕ್ಕಗಳಾಗಿರುತ್ತವೆ. ಅಲ್ಲಿ ವೇಧವಾದರೆ **ಸ್ವೇದಾಗಮನ** (ಬೆವರುಬರೋಣ), **ಸ್ನಿಗ್ಧಾಂಗತಾ** (ವೈಯಲ್ಲಿ ನವೆಯಾಗುವಿಕೆ), **ತಾಲುಶೋಷ** (ಅಂಗಳವು ಒಣಗೋಣ), **ಸ್ಥೂಲಶೋಷಿತಾ** (ದಪ್ಪವಾದ ಬಾವು ಬರೋಣ), **ಪಿಪಾಸಾ** (ನೀರಡಿಕೆಯಾಗೋಣ), ಮೊದಲಾದವು ಗಳುಂಟಾಗುತ್ತವೆ.

[೮] ಮೂತ್ರವಹ ಸ್ರೋತಸ್ಸುಗಳು

ಮೂತ್ರವಹೇದ್ವೇ, ತಯೋರ್ಮೂಲಂ ಬಸ್ತಿರ್ಮೇಢ್ರಂಚ, ತತ್ರವಿದ್ಧಸ್ಯಾನದ್ಧ ಬಸ್ತಿತಾ ಮೂತ್ರನಿರೋಧಃ ಸ್ತಬ್ಧಮೇಢ್ರತಾಚ ॥ (ಸುಶ್ರುತ॥ ಶಾರೀರ॥ ಅ ೯ ಸೂ ೧೨)

ಮೂತ್ರವಾಹೀ ಧಮನಿಗಳು (೨) ಇರುತ್ತವೆ. ಅವುಗಳ ಮೂಲವು **ಬಸ್ತಿ** ಮತ್ತು ಮೇಢ್ರಗಳಾಗಿರುತ್ತವೆ. ಇಲ್ಲಿ ವಿದ್ಧವಾದರೆ **ಆನದ್ಧ ಬಸ್ತಿತಾ** (ಬಸ್ತಿಯು ಬಂದಾಗುವಿಕೆ), **ಮೂತ್ರನಿರೋಧ** (ಮೂತ್ರವು

ತಡೆಯೋಣ), **ಸ್ತಬ್ಧಮೇಢ್ರತಾ** (ಶಿಶ್ನವು ಸ್ತಬ್ಧವಾಗೋಣ), ಮೊದಲಾದವುಗಳುಂಟಾಗುತ್ತವೆ

[೯] ಪುರೀಷವಹಸ್ರೋತಸ್ಸುಗಳು

ಪುರೀಷವಹೇದ್ವೇ, ತಯೋರ್ಮೂಲಂಪಕ್ವಾಶಯೋಗುದಂಚ
ತತ್ರವಿದ್ಧಸ್ಯಾನಾಹೋದುರ್ಗಂಧತಾಗ್ರಥಿತಾಂತ್ರತಾಚ ॥

(ಸು॥ ಶಾ॥ ಅ ೯ ಸೂ ೧೨)

ಪುರೀಷವಾಹೀ ಸ್ರೋತಸ್ಸುಗಳು (೨) ಇರುತ್ತವೆ. ಅವುಗಳ ಮೂಲವು ಮಲಾಶಯ ಮತ್ತು ಗುದಗಳಾಗಿರುತ್ತವೆ ಅಲ್ಲಿ ವೇಧವಾದರೆ **ಆನಾಹ** (ಮಲಬದ್ಧತೆ), **ದುರ್ಗಂಧತಾ** (ಬಾಯಲ್ಲಿ ದುರ್ಗಂಧ ಶ್ವಾಸ ಬರೋಣ), **ಗ್ರಥಿತಾಂತ್ರಿತಾ** (ಕರಳುಗಂಟಾಗೋಣ), ಮೊದಲಾದ **ವಿಕಾರ**ಗಳುಂಟಾಗುತ್ತವೆ.

ಶುಕ್ರವಾಹೀ ಸ್ರೋತಸ್ಸುಗಳು

ಶುಕ್ರವಹೇದ್ವೇ, ತಯೋರ್ಮೂಲಂ ಸ್ತನೌವೃಷಣೌಚ, ತತ್ರ
ವಿದ್ಧಸ್ಯಕ್ಲೀಬತಾಚಿರಾತ್‌ಪ್ರಸೇಕೋರಕ್ತಶುಕ್ರತಾಚ ॥

(ಸು॥ ಶಾ॥ ಅ ೯ ಸೂ ೧೨)

ಶುಕ್ರವಾಹಿ ಸ್ರೋತಸ್ಸುಗಳು (೨) ಇರುತ್ತವೆ ಅವುಗಳಮೂಲವು ಸ್ತನ ಪ್ರದೇಶ ಮತ್ತು ವೃಷಣಗಳಾಗಿರುತ್ತವೆ. ಅಲ್ಲಿ ವೇಧವಾದರೆ **ಕ್ಲೀಬತಾ** (ನಪುಂಸಕತ್ವ), **ಚಿರಾತ್ ಪ್ರಸೇಕ** (ಬಹಳ ಹೊತ್ತಿನ ಮೇಲೆ ಶುಕ್ರ ಪ್ರಚ್ಯುತಿ), **ರಕ್ತಶುಕ್ರತಾ** (ರಕ್ತದಿಂದ ಕೂಡಿದ ಶುಕ್ರವಾಗೋಣ), ಮೊದಲಾದವುಗಳುಂಟಾಗುತ್ತವೆ

(೧೧) ಆರ್ತವವಾಹೀ ಸ್ರೋತಸ್ಸುಗಳು

ಆರ್ತವವಹೇದ್ವೇ, ತಯೋರ್ಮೂಲಂ ಗರ್ಭಾಶಯಆರ್ತವಾ ಹಿನ್ಯಶ್ಚ ಧಮನ್ಯಃ, ತತ್ರವಿಧ್ದಾಯಾನಂಧ್ಯಾತ್ವಂ ಮೈಥುನಾಸಹಿಷ್ಣುತ್ವಮಾರ್ತವನಾಶಶ್ಚ ॥ (ಸು॥ ಶಾ॥ ೪ ಸೂ ೧೨)

ಆರ್ತವವಾಹಿ ಸ್ರೋತಸ್ಸುಗಳು (೨) ಇರುತ್ತವೆ ಅವುಗಳ ಮೂಲವು ಗರ್ಭಾಶಯ ಮತ್ತು ಆರ್ತವವಾಹೀ ಧಮನಿಗಳಾಗಿರುತ್ತವೆ ಇಲ್ಲಿ **ವೇಧವಾದವಳಿಗೆ ವಂಧ್ಯಾತ್ವ** (ಬಂಜೆತನ), **ಮೈಥುನಾಸಹಿಷ್ಣುತಾ** (ಸುರತ ಸಹಸಿಯಿಲ್ಲದಿರೋಣ), **ಆರ್ತವನಾಶ** (ರತಿಕಾಲದಲ್ಲಿಯು ಸ್ರಾವ ಮತ್ತು ಮಾಸಿಕ ರಜಸ್ಸುಬಂದಾಗೋಣ), ಮೊದಲಾದವುಗಳುಂಟಾಗುತ್ತವೆ.

ಸೇವನೀಛೇದಲಕ್ಷಣ

ಸೇವನೀಛೇದಾದ್ರುಜಾಪ್ರಾದುರ್ಭಾವಃ; ಬಸ್ತಿಗುದವಿಧ್ದಲಕ್ಷಣಂ ಪ್ರಾಗುಕ್ತಮಿತಿ ॥ (ಸುಶ್ರುತ॥ ಶಾರೀರ॥ ೪ ಸೂ ೧೨)

ಸೇವನೀಗಳಲ್ಲಿ ಛೇದಸಂಭವಿಸಿದರೆ ನೋವು ವೇದನೆಗಳುಂಟಾಗುತ್ತವೆ **ಬಸ್ತಿ ಮತ್ತು ಗುದಗಳಲ್ಲಿ** ವೇಧವಾದದ್ದರ ಲಕ್ಷಣವು ಹಿಂದೆ ಹೇಳಿರಲ್ಪಟ್ಟಿರುತ್ತದೆ

ಸ್ರೋತೋವಿದ್ಧಕ್ರಮ

ಸ್ರೋತೋವಿದ್ಧಂತುಪ್ರತ್ಯಾಖ್ಯೇಯೋಪಚರೇತ್, ಉದ್ಧೃತ ಶಲ್ಯಂತುಕೃತವಿಧಾನೇನೋಪಚರೇತ್ ॥
(ಸುಶ್ರುತ॥ ಶಾರೀರ॥ ೪ ಸೂ ೧೨)

ಸ್ರೋತಸ್ಸುಗಳಲ್ಲಿ ಬಾಣ ಶಸ್ತ್ರಾದಿಗಳಿಂದವಿದ್ಧವಾದರೆ ಅಸಾಧ್ಯವೆಂದು ತಿಳಿಸಿ ಚಿಕಿತ್ಸೆಯನ್ನುಮಾಡಬೇಕು ಇಲ್ಲಿ ಒಂದುಉಕ್ಷೇಪಬರುತ್ತದೇನೆಂದರೆ:- ಅಸಾಧ್ಯವಾದ ಸ್ಥಿತಿಗೆ **ವಾಗ್ಭಟ ಮುತದಂತೇ** ಅನುಪಕ್ರಮವೆಂದು ಹೇಳಿರು

ವದರಿಂದ ಚಿಕಿತ್ಸೆಮಾಡಬಾರದಂಧಾದ್ದು ಎಂಬ ಅರ್ಥವೂ ಸಹ ಆಗುತ್ತದೆ. ದೇಹದಲ್ಲಿಯ ಪರಮಸೂಕ್ಷ್ಮ ಸ್ಥಿತಿಯು ತಿಳಿಯುವದು ಬಹಳೇ ಕಠಿಣವಿರು ವದರಿಂದ ಸಾಮಾನ್ಯತಃ ಅಸಾಧ್ಯವಿದ್ದರೂ ಒಮ್ಮೊಮ್ಮೆ ಬದುಕುವ ಸಂಭವ ವಿರುವದರಿಂದಲೂ ಚಿಕಿತ್ಸೆಯನ್ನು ಬಿಡಬಾರದು. ಆದರೆ ವೈದ್ಯರಿಗೆ ಅಪವಾದ ಬರಬಾರದೆಂದೂ ಪ್ರತ್ಯಾಖ್ಯೇಯ ಚಿಕಿತ್ಸೆಯಲ್ಲಿ ಸ್ಪಷ್ಟಪಡಿಸಿ ಆರಂಭಿಸ ಬೇಕು. ವೈದ್ಯ ನೈಪುಣ್ಯಾವಶ್ಯಕತೆಯಿಂದಲೇ ಕ್ವಚಿತ್ ಕಾರ್ಯಸಿದ್ಧಿಯೆಂದೂ ಧ್ವನಿತವಾಗುತ್ತದೆ **ಸುಶ್ರುತಾಚಾರ್ಯರು** ಅನುಪಕ್ರಮವೆಂದು ಹೇಳಿದ **ಪ್ರತ್ಯಾಖ್ಯೇಯ** ನಿಶ್ಚಿತವಲ್ಲವೆಂದು ಹೇಳಿ ಉಪಚಾರ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದಲೇ ಹಿಂದೆ ಮರ್ಮ ವಿವರಣೆಯಲ್ಲಿ ಕಾಲಾಂತರ ಪ್ರಾಣಹರಾದಿ ಮರ್ಮಾಘಾತವಾದರೆ ವೈದ್ಯನ ನೈಪುಣ್ಯದಿಂದ ಪ್ರಾಣಹರ ಣವಾಗದೇ ಊನತ್ವವುಂಟಾಗುತ್ತದೆಂದು ಹೇಳಿದ್ದಾರೆ. ವಿಶೇಷತಃ ಚಿಕಿತ್ಸೆ ಯಲ್ಲಿ ವೈದ್ಯನು ಲಕ್ಷ್ಯಕೊಡಲೆಂದೂ ವೈದ್ಯನಮೇಲೆ ಪರಿಣಾಮ ವಿಷಯದಲ್ಲಿ ಅಪವಾದ ಬರಬಾರದೆಂದೂ ಎರಡೊಂದು ದೃಷ್ಟಿಯಿಂದ "ಪ್ರತ್ಯಾಖ್ಯೇಯ" ವೆಂದೂ ಹೇಳಿದ್ದಾರೆಯೇ ವಿನಾ ಚಿಕಿತ್ಸೆ ಮಾಡತಕ್ಕದ್ದಲ್ಲವೆಂದು (ಅನುಪ ಕ್ರಮ) ಸುಶ್ರುತ ಮತವಿರುವದಿಲ್ಲ ಇದೇ ಅನುಪಕ್ರಮದ ಯೋಗ್ಯವಾದ ಅರ್ಥವಾಗುತ್ತದೆಯೇ ವಿನಾ, ಚಿಕಿತ್ಸಾ ಮಾಡಬಾರದೆಂಬ ಮತವು ಸಯು ಕ್ತಿಕವೂ ಮಾನವತೆಯುಳ್ಳದ್ದೂ ಇರಲಾರದು.

ಸ್ರೋತೋ ವಿಷಯದಲ್ಲಿ ವಿಶೇಷ

(೧) ಪ್ರಾಣ, (೨) ಅನ್ನ, (೩) ಉದಕ, (೪) ರಸ, (೫) ರಕ್ತ, (೬) ಮಾಂಸ, (೭) ಮೇದಸ್ಸು, (೮) ಮೂತ್ರ, (೯) ಮಲ, (೧೦) ಶುಕ್ರ, (೧೧) ಆರ್ತವ, ಇವುಗಳನ್ನು ಒಯ್ಯುವ ಸ್ರೋತಸ್ಸುಗಳು ಪ್ರತಿ ಯೊಂದೂ ಎರಡೆರಡರಂತೆ ಒಟ್ಟು ದೇಹದಲ್ಲಿ (೨೨) ಅಂತರ್ಮುಖ ಸ್ರೋತ ಸ್ಸುಗಳಿರುತ್ತವೆ ಇವುಗಳ ಮೂಲಗಳಲ್ಲಿ ವಿದ್ಧವಾದ ಲಕ್ಷಣಗಳಿಂದ ಸಾಧ್ಯಾ ಸಾಧ್ಯ ಸ್ಥಿತಿ ತಿಳಿಯುವದರಿಂದಲೂ ಇವಷ್ಟನ್ನೇ ಗ್ರಹಣಮಾಡಿದ್ದಾರೆ. ಸಾಮಾನ್ಯವಾಗಿ "ಅಸ್ಥಿಮಜ್ಜಾಸ್ವೇದೋವಹಸ್ರೋತಸ್ಸುಗಳು" ಇದ್ದರೂ

ಮೂಲವಿದ್ದ ಲಕ್ಷಣದಿಂದ ಗೋಚರಿಸಿಲ್ಲವೆಂದು ಗ್ರಹಿಸಿಲ್ಲ. ಅಸ್ಥಿ ಸ್ವೇದವಾಹಿ ಸ್ರೋತಸ್ಸುಗಳಿಗೆ ಮೇದಸ್ಸೇ ಮೂಲವಾಗಿರುತ್ತದೆ. ಆದ್ದರಿಂದ ಅಸ್ಥಿಯು ಕೂಡ ಸ್ಥೂಲರೂಪ ಮತ್ತು ಸೂಕ್ಷ್ಮ (ದ್ರವರೂಪ), ಉಳ್ಳದ್ದಿರುತ್ತದಂದು ಸಿದ್ಧವಾಗುತ್ತದೆ. ಮಜ್ಜಾವಾಹಿ ಸ್ರೋತಸ್ಸುಗಳಿಗೆ ಅಸ್ಥಿಗಳೇ ಮೂಲವಾಗಿರುತ್ತವೆ ಅಸ್ಥಿವಾಹಿನ್ಯಾದಿ ಸ್ರೋತಸ್ಸುಗಳು ಸಮಗ್ರ ದೇಹವನ್ನು ವ್ಯಾಪಿಸಿರುವದರಿಂದ ಅಸಂಖ್ಯಾತವಾಗಿರುತ್ತವೆ. ಆದ್ದರಿಂದ ನಿರ್ದಿಷ್ಟ ಗಣನೆ ಮತ್ತು ಮೂಲವಿದ್ದ ಲಕ್ಷಣಗಳಲ್ಲಿ ನಿಯತವಿಲ್ಲದ್ದರಿಂದ ಗ್ರಹಿಸಿರುವದಿಲ್ಲ. ಅನ್ಯತ್ರ ಶಾಸ್ತ್ರದ ದೃಷ್ಟಿಯಿಂದ ಇದ್ದೇ ಇರುತ್ತವೆಂದು ತಿಳಿಯಬೇಕು

ವಾಗ್ಭಟ ಮತದಂತೇ ದೇಹದಲ್ಲಿ ಅಂತರ್ಮುಖ ಸ್ರೋತಸ್ಸುಗಳು (೧೩) ಇರುತ್ತವೆಂದು ಹೇಳಿದ್ದಾರೆ

ಚರಕ ಮತದಲ್ಲಿ ಸ್ರೋತಸ್ಸುಗಳಲ್ಲಿಯೇ ಸಿರಾ ಧಮನೀಗಳನ್ನು ಅಂತರ್ಭಾವಮಾಡಿ ಹೇಳಿರುತ್ತಾರೆ. ಅರ್ಥಾತ್ ದೇಹದಲ್ಲಿಯ ಅಂತರ್ಮುಖ ಬಹಿರ್ಮುಖ ಸ್ಥೂಲ ಸೂಕ್ಷ್ಮವಾದ ರಸಾದಿ ಸ್ವೇದಪರ್ಯಂತವಾದ ಧಾತ್ವಾದಿವಾಹಿ ಸರ್ವ ವಿಭಾಗಗಳನ್ನು ಅಭಿನ್ನತೆಯಿಂದಲೇ ಹೇಳಿದ್ದಾರೆ. ಇಂಥ ಸ್ರೋತಸ್ಸುಗಳು ಅಸಂಖ್ಯಾತವಾಗಿರುತ್ತವೆಂದು ಹೇಳಿದ್ದಾರೆ.

ಹಿಂದೆ ಸ್ಥೂಲವಾಗಿ ಹೇಳಿದ ದೇಹದ ಪ್ರತಿಯೊಂದು ವಿಭಾಗಗಳೂ ಅಸ್ಥಿಯಿಂದಾರಂಭಿಸಿ ಸ್ರೋತಸ್ಸಿನ ಪರ್ಯಂತವಾಗಿ "**ಶಲ್ಯ ಶಾಸ್ತ್ರವಾದ ಸುಶ್ರುತ ತಂತ್ರಾನುರೋಧವಾಗಿ**" ಸ್ಥಾನ ಆಶ್ರಯ ಸ್ವರೂಪ ಕ್ರಿಯಾ ಸಂಖ್ಯಾದಿಗಳು ಬಹು ವಿಸ್ತಾರವಾಗಿಯೂ ವಿಶೇಷ ಪ್ರಯೋಜನವುಳ್ಳದ್ದಾಗಿಯೂ ವಿವರಿಸಲ್ಪಟ್ಟಿವೆ. ಅನ್ಯತಂತ್ರಗಳಲ್ಲಿಯ ಮತವನ್ನು ಸಾಮಾನ್ಯತಃ ದಿಗ್ದರ್ಶನಮಾಡಲಾಗಿದೆ **ಭಗವಾನ್ ಧನ್ವಂತರಿಯ** ಪ್ರಸಾದದಿಂದ ಆರಂಭಿಸಿದ ಕೃತಿಯು ಸುಗಮವಾಗಿ ಪೂರ್ಣವಾಗಿರುತ್ತದೆ.

ನಿರೂಪಣಾಮು

ಪೂಜ್ಯೈರ್ವೈದ್ಯಗುರುಶ್ರೇಷ್ಠೈಃ ಹಲಸೀಕರನಾಮಭಿಃ ॥
ವೆ ನಾ ಜೋಶೀತುತಚ್ಛಿಷ್ಯೋಲೇಖಕರ್ಮಣಿಪ್ರೇರಿತಃ ॥
ಆರ್ಷಗ್ರಂಥಾಸುರೋಧೇನಶಾರೀರಪರಿವಿಸ್ತರಂ ॥
ಧನ್ವಂತರಿಪ್ರಸಾದಾದ್ಧಿಯಥಾಮತಿಪ್ರದರ್ಶಿತಂ ॥೧॥

ಕೃತಿಪೂರ್ಣತಾಸಮಯಃ

ಅಷ್ಟಾದಶಶತೇವರ್ಷೇಷಟ್‌ಸಪ್ತತಿಸಮನ್ವಿತೇ ॥
ಧನ್ವಂತರಿಜಯಂತ್ಯಾಂಚ ಪರಿಪೂರ್ಣಾಽಭವತ್ಕೃತಿಃ ॥೨॥

ಓಂ ಶಾಂತಿಃ ಶಾಂತಿಃ ಶಾಂತಿಃ

ಸಂಪೂರ್ಣಂ